ಹುಬ್ಬಳ್ಳಿ ಶನಿವಾರ, 7 ಮಾರ್ಚ್ 2026 ಸಂಪುಟ 15, ಸಂಚಿಕೆ 348, ಪುಟಗಳು 16 hosadigantha.com
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ RNI No.KARKAN/2011/64413
₹5


ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ
ಲೋಕಹಿತಂ ಮಮ ಕರಣೀಯಂ

ಸಿಎಂ ಸಿದ್ದರಾಮಯ್ಯ 17ನೇ ಬಜೆಟ್ ಮಂಡಿಸುವ ಮೂಲಕ ದಾಖಲೆ ನಿರ್ಮಿಸಿದ್ದಾರೆ. ಇದರಲ್ಲಿ 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ನಿಷೇಧ, 56,432 ಹುದ್ದೆಗಳ ಭರ್ತಿ, 800 ಕರ್ನಾಟಕ ಪಬ್ಲಿಕ್ ಶಾಲೆಗಳ ಸ್ಥಾಪನೆ, 40 ಪದವಿ ಕಾಲೇಜುಗಳ ಅಭಿವೃದ್ಧಿ ಸೇರಿದಂತೆ ಹಲವು ಘೋಷಣೆಗಳಿವೆ. ಬಡವರು, ರೈತರು ಹಾಗೂ ಮಧ್ಯಮ ವರ್ಗದ ಬದುಕು ಸುಧಾರಿಸುವ ಪ್ರಮುಖಾಂಶಗಳಿವೆ. 3 ಗಂಟೆ 31 ನಿಮಿಷ ಸುದೀರ್ಘ ಬಜೆಟ್ ಭಾಷಣ ಮಾಡುವ ಮೂಲಕ ಸಿದ್ದರಾಮಯ್ಯ ಮತ್ತೊಂದು ದಾಖಲೆ ಮಾಡಿದ್ದಾರೆ.

ದಾಖಲೆ ಗ್ಯಾರಂಟಿ

ಸಿದ್ದರಾಮಯ್ಯರ 17ನೇ ಆಯವ್ಯಯದ 17 ಪ್ರಮುಖ ಹೆಜ್ಜೆಗಳು





ಬಜೆಟ್ ಒಟ್ಟು ಗಾತ್ರ	**4,48,004** ಕೋಟಿ ರೂ.
ವಿತ್ತೀಯ ಕೊರತೆ	**97,449** ಕೋಟಿ ರೂ.
ರಾಜಸ್ವ ಕೊರತೆ	**22,957** ಕೋಟಿ ರೂ.
ಸಾಲ, ಹೊಣೆಗಾರಿಕೆ	**1,32,000** ಕೋಟಿ ರೂ.

ಪಂಚ ಗ್ಯಾರಂಟಿ ಯೋಜನೆಗಳು

ಗೃಹ ಲಕ್ಷ್ಮಿ	28,608 ಕೋಟಿ ರೂ.
ಗೃಹ ಜ್ಯೋತಿ	10,578 ಕೋಟಿ ರೂ.
ಅನ್ನ ಭಾಗ್ಯ	6,200 ಕೋಟಿ ರೂ.
ಶಕ್ತಿ	5,300 ಕೋಟಿ ರೂ.
ಯುವನಿಧಿ	600 ಕೋಟಿ ರೂ.
ಒಟ್ಟು	51,286 ಕೋಟಿ ರೂ.

1 ಕರ್ನಾಟಕದ 11ಜಿ ಅಭಿವೃದ್ಧಿ ಮಾದರಿ

ಕರ್ನಾಟಕದ್ದೇ ಆದ ಸಶಕ್ತ ಹಾಗೂ ಸುಸ್ಥಿರ ಅಭಿವೃದ್ಧಿ ಮಾದರಿಗಳನ್ನು ರೂಪಿಸಲಾಗಿದೆ. ಅವುಗಳನ್ನು 11ಜಿ ಮಾದರಿ ಆರ್ಥಿಕತೆಗಳೆಂದು ವ್ಯಾಖ್ಯಾನಿಸಲಾಗುತ್ತಿದೆ. ಈ ಆರ್ಥಿಕತೆ ಪ್ರಮೇಯಗಳನ್ನು ಆಧಾರವಾಗಿಟ್ಟುಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ನಾಡಿನ ಅಭಿವೃದ್ಧಿ ರಥವನ್ನು ಮುನ್ನಡೆಸುತ್ತಿರುವುದಾಗಿ ಉಲ್ಲೇಖಿಸಿದ್ದಾರೆ. ಈ ಪ್ರಮೇಯಗಳ ಆಧಾರದಲ್ಲೇ 2026-27ನೇ ಸಾಲಿನ ಆಯವ್ಯಯವನ್ನು ಮಂಡಿಸಿದ್ದಾರೆ.

1. ಗ್ಯಾರಂಟಿ ಎಕಾನಮಿ: ಕಲ್ಯಾಣ ಹಾಗೂ ಲಿಂಗ ಸಮಾನತೆಯ ಹಾದಿಯತ್ತ ಕರ್ನಾಟಕ
2. ಗುಡ್ ಪಬ್ಲಿಕ್ ಎಜುಕೇಶನ್: ಸರ್ವರ ಏಳಿಗೆ ಬಯಸುವ ಸಮರ್ಥ ಸಾರ್ವಜನಿಕ ಶಿಕ್ಷಣ
3. ಗುಡ್ ಹೆಲ್ತ್ ಟು ಆಲ್: ಸಮಗ್ರ ಆರೋಗ್ಯ, ಸದೃಢ ಕರ್ನಾಟಕ
4. ಗ್ರಾಸ್ ರೂಟ್ ಎಕಾನಮಿ: ಕೃಷಿ, ಗ್ರಾಮೀಣಾಭಿವೃದ್ಧಿ, ಕಲ್ಯಾಣ ಕಾರ್ಯಕ್ರಮಗಳು
5. ಗುಡ್ ಗವರ್ನೆನ್ಸ್: ಜನಸ್ನೇಹಿ ಆಡಳಿತ
6. ಗಿಗ್ ಎಕಾನಮಿ: ಕಾರ್ಮಿಕ ಕಲ್ಯಾಣ ಕಾರ್ಯಕ್ರಮಗಳು
7. ಜಿಯೋಗ್ರಾಫಿಕಲ್ ಈಕ್ವಾಲಿಟಿ: ಪ್ರಾದೇಶಿಕ ಅಸಮಾನತೆಯ ನಿವಾರಣೆ
8. ಗ್ಲೋಬಲ್ ಟ್ರೇಡ್ ಎಕಾನಮಿ: ವ್ಯಾಪಾರ ಮತ್ತು ಕೈಗಾರಿಕಾಭಿವೃದ್ಧಿ
9. ಗ್ಲೋಬ್ ಟ್ರೋಟಿಂಗ್ ಎಕಾನಮಿ: ಪ್ರವಾಸೋದ್ಯಮ ಆರ್ಥಿಕತೆ
10. ಗ್ರೀನ್ ಎಕಾನಮಿ: ಹಸಿರು ಇಂಧನ ಸೇರಿ ಪರಿಸರ ಪೂರಕ ಆರ್ಥಿಕ ಚಟುವಟಿಕೆ
11. ಗ್ರೋಯಿಂಗ್ ಅರ್ಬನ್ ಎಕಾನಮಿ: ನಗರ ಕೇಂದ್ರಿತ ಸುಸ್ಥಿರ ಆರ್ಥಿಕತೆ

2 ಮಹಾತ್ಮ ಗಾಂಧಿಯ ಸ್ಮರಣೆ

ಮಹಾತ್ಮ ಗಾಂಧಿ ಅವರ ಹೆಸರನ್ನು ಚಿರಸ್ಥಾಯಿಗೊಳಿಸಲು ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳನ್ನು ಮಹಾತ್ಮ ಗಾಂಧಿ ಗ್ರಾಮ ಪಂಚಾಯತ್ ಎಂದು ನಾಮಕರಣ ಮಾಡಲಾಗುತ್ತದೆ. ಗಾಂಧೀಜಿ ವಿಚಾರಧಾರೆಗಳನ್ನು ಯುವಜನರಿಗೆ ತಿಳಿಸಲು ಮತ್ತು ಜಿಲ್ಲಾ ಗಾಂಧಿ ಭವನಗಳನ್ನು ಪುನಶ್ಚೇತನಗೊಳಿಸಲು ಮಹಾತ್ಮ ಗಾಂಧಿ ಜನ ಶಿಕ್ಷಣ ಕೇಂದ್ರ ಯೋಜನೆ ರೂಪಿಸಲಾಗುತ್ತದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಮನರೇಗಾ) ಮರುಸ್ಥಾಪನೆಗೆ ಆಗ್ರಹಿಸಲಾಗಿದೆ.

3 ಆಡಳಿತ ಸುಧಾರಣೆಗೆ ಒತ್ತು

ಇ-ಆಡಳಿತ ಇಲಾಖೆಯಲ್ಲಿ ದತ್ತಾಂಶ ವಿಶ್ಲೇಷಣಾ ಕೋಶವನ್ನು 1 ಕೋಟಿ ರೂ. ವೆಚ್ಚದಲ್ಲಿ ಸ್ಥಾಪಿಸಲಾಗುತ್ತದೆ. ಖಜಾನೆ ಇಲಾಖೆಯು ಎಲ್ಲಾ ಬಿಲ್ಲುಗಳನ್ನು ಕಾಗದರಹಿತ ಮಾಡುವ ಯೋಜನೆ ಇದೆ. ಹೊಸದಾಗಿ ಸರ್ಕಾರಿ ಸೇವೆಗೆ ಸೇರಿದ ನೌಕರರ ವೇತನ ಪ್ರಕ್ರಿಯೆ ಸಮಯವನ್ನು ಒಂದು ವಾರದೊಳಗೆ ತ್ವರಿತಗೊಳಿಸಲಾಗುತ್ತಿದೆ.

4 ಮಾದಕವಸ್ತು ಮತ್ತು ವ್ಯಸನ ಮುಕ್ತಿ

ಕರ್ನಾಟಕವನ್ನು ಮಾದಕವಸ್ತು ಮುಕ್ತ ರಾಜ್ಯವನ್ನಾಗಿಸಲು ಝೀರೋ ಟಾಲೆರೆನ್ಸ್ ಟು ಡ್ರಗ್ಸ್ ಧ್ಯೇಯದೊಂದಿಗೆ ಮಾದಕ ದ್ರವ್ಯ ವಿರೋಧಿ ಕಾರ್ಯಪಡೆಗೆ ಬಲ. ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಮಾದಕ ದ್ರವ್ಯ ವ್ಯಸನ ಮುಕ್ತ ಕೇಂದ್ರ ಸ್ಥಾಪನೆ. ಮಾದಕ ವ್ಯಸನಕ್ಕೆ ಒಳಗಾದ 18 ವರ್ಷದೊಳಗಿನ ಮಕ್ಕಳಿಗಾಗಿ ಮಾದಕ ವ್ಯಸನಿಗಳ ಪುನರ್ವಸತಿ ಕೇಂದ್ರ.

5 ಎಐ ತಂತ್ರಜ್ಞಾನಾಧರಿತ ಸಮಗ್ರ ಅಭಿವೃದ್ಧಿ

ಬೆಂಗಳೂರು ರೋಬೋಟಿಕ್ಸ್ ಮತ್ತು ಎಐ ಇನ್ನೋವೇಶನ್ ಝೋನ್ ಎಂಬ ರೋಬೋಟಿಕ್ಸ್ ಮತ್ತು ಎಐ ಕ್ಯಾಂಪಸ್ ಸ್ಥಾಪನೆ. ರಾಯಚೂರು ಐಐಐಟಿಯಲ್ಲಿ ಎಐ ಶ್ರೇಷ್ಠತಾ ಕೇಂದ್ರ ಮತ್ತು ಬೆಂಗಳೂರು ಐಐಎಸ್‌ಸಿಯಲ್ಲಿ ಎಐ ಉತ್ಕೃಷ್ಟತಾ ಕೇಂದ್ರ ಸ್ಥಾಪನೆ. ಎಐ ಮೂಲಕ ಕಾಗದರಹಿತ ನೋಂದಣಿಗೆ ಕಾವೇರಿ 3.0 ವ್ಯವಸ್ಥೆ ಅಭಿವೃದ್ಧಿ

6 ಕೃಷಿಗೆ ಉತ್ತೇಜನ

ಕೃಷಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಮೂರು ಹೊಸ ಯೋಜನೆಗಳನ್ನು ಪರಿಚಯಿಸಲಾಗುತ್ತಿದೆ. ಗ್ರಾಮೀಣ ರೈತರಿಗೆ ಸ್ಥಿರ ಮತ್ತು ಹೆಚ್ಚುವರಿ ಆದಾಯದ ಮೂಲಗಳ ಸೃಜನೆಗೆ ಮುಖ್ಯಮಂತ್ರಿ ಕೃಷಿ ವಿಸ್ತಾರ ಯೋಜನೆ; ಮಣ್ಣಿನ ಸಾವಯವ ಇಂಗಾಲ ಹಾಗೂ ಅದರ ಭೌತಿಕ, ರಾಸಾಯನಿಕ ಮತ್ತು ಜೈವಿಕ ಗುಣಮಟ್ಟ ಹೆಚ್ಚಳಕ್ಕೆ ಹೆಚ್ಚಿಸಲು ವಸುಧಾಮೃತ ಕಾರ್ಯಕ್ರಮ ಹಾಗೂ ಸುರಕ್ಷಿತ ನಿರ್ವಹಣಾ ಕ್ರಮಗಳ ಶಿಫಾರಸುಗಳನ್ನು ರೈತರಿಗೆ ಸಕಾಲದಲ್ಲಿ ಒದಗಿಸಲು ಸಸ್ಯ ಸಂಜೀವಿನಿ ಯೋಜನೆ ಘೋಷಿಸಲಾಗಿದೆ.

ರಾಜ್ಯ ಬಜೆಟ್ 2026-27 • ವಿಶೇಷ ಪುಟಗಳು ೯,೭,೫,೧೦

7 ಪಶು ಸಂಗೋಪನೆ, ಮೀನುಗಾರಿಕೆ

ಜಾನುವಾರುಗಳ ಸಂತಾನೋತ್ಪತ್ತಿ ಸಮಸ್ಯೆಗಳನ್ನು ನಿವಾರಿಸಲು ರಾಜ್ಯದ 1,00- ಗ್ರಾಮ ಪಂಚಾಯತ್‌ಗಳಲ್ಲಿ 5 ಕೋಟಿ ರೂ.ಗಳನ್ನು ವೆಚ್ಚದಲ್ಲಿ ಫಲಧಾರೆ ಶಿಬಿರಗಳನ್ನು ಏರ್ಪಡಿಸಲಾಗುತ್ತದೆ. ಮಂಗಳೂರು ಮೀನುಗಾರಿಕೆ ಮಹಾವಿದ್ಯಾಲಯದಲ್ಲಿ ಉತ್ಕೃಷ್ಟತಾ ಕೇಂದ್ರ ಸ್ಥಾಪನೆ.

8 ಶಿಕ್ಷಣಕ್ಕೆ ಆದ್ಯತೆ

800 ಹೊಸ ಕರ್ನಾಟಕ ಪಬ್ಲಿಕ್ ಶಾಲೆಗಳ ಪ್ರಾರಂಭ. ಶಾಲಾ ಕಾಲೇಜುಗಳಲ್ಲಿ ಖಾಲಿಯಿರುವ 15,000 ಬೋಧಕ ಹುದ್ದೆಗಳ ಭರ್ತಿ. 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳ ಬಳಕೆ ನಿಷೇಧ. ವಿದ್ಯಾರ್ಥಿಗಳ ಮೇಲಿನ ಸಾಮಾಜಿಕ ದೌರ್ಜನ್ಯ ತಡೆಗೆ ರೋಹಿತ್ ವೇಮುಲ ಕಾಯ್ದೆ ಜಾರಿ.

9 ಆರೋಗ್ಯವೇ ಭಾಗ್ಯ

ಇಲಾಖೆಯಲ್ಲಿ ಖಾಲಿಯಿರುವ 2,500 ಹುದ್ದೆಗಳ ಭರ್ತಿ. ಪುತ್ತೂರು, ಬಾಗಲಕೋಟೆ, ವಿಜಯಪುರ, ಕೋಲಾರದಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆ. ಕಾರವಾರ, ಯಾದಗಿರಿಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ಸ್ಥಾಪನೆಗೆ ತಲಾ 100 ಕೋಟಿ ರೂ. ಮೀಸಲು. ಮುನಿರಾಬಾದ್-ಟಿ.ಬಿ. ಡ್ಯಾಂನಲ್ಲಿ ಕ್ಯಾನ್ಸರ್ ಆಸ್ಪತ್ರೆ ಸ್ಥಾಪನೆ.

10 ಮಹಿಳಾ ಸಬಲೀಕರಣ

ಉದ್ಯೋಗಸ್ಥ ಮಹಿಳೆಯರಿಗೆ ಬೆಂಗಳೂರು, ಮೈಸೂರು, ಹುಬ್ಬಳ್ಳಿ-ಧಾರವಾಡ, ಮಂಗಳೂರು, ಬೆಳಗಾವಿ ಮತ್ತು ಕಲಬುರಗಿಗಳಲ್ಲಿ 10 ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳ ಪ್ರಾರಂಭ. ಗರ್ಭಿಣಿ ಮತ್ತು ಬಾಣಂತಿಯರಿಗೆ ಅಂಗನವಾಡಿ ಕೇಂದ್ರಗಳಲ್ಲಿ ಮಧ್ಯಾಹ್ನ ಬಿಸಿಯೂಟ ನೀಡುವ ಮಾತೃಪೂರ್ಣ ಯೋಜನೆ ಮರು ಸ್ಥಾಪನೆ.

ಕರ್ನಾಟಕದಲ್ಲಿ ಅತಿ ಹೆಚ್ಚು ಬಾರಿ ಬಜೆಟ್ ಮಂಡಿಸಿದ ನಾಯಕ ಸಿದ್ದರಾಮಯ್ಯ

■ ರಾಜ್ಯದಲ್ಲಿ ರಾಮಕೃಷ್ಣ ಹೆಗಡೆ ಅವರು 13 ಬಾರಿ ಬಜೆಟ್ ಮಂಡಿಸಿ, 2ನೇ ಸ್ಥಾನ

ರಾಷ್ಟ್ರಮಟ್ಟದಲ್ಲಿ ಅತ್ಯಧಿಕ ಬಜೆಟ್ ಮಂಡಿಸಿದ 2ನೇ ನಾಯಕ ಸಿದ್ದರಾಮಯ್ಯ

■ 18 ಬಾರಿ ಬಜೆಟ್ ಮಂಡಿಸಿದ ವಜುಭಾಯಿ ವಾಲಾ ರಾಷ್ಟ್ರಮಟ್ಟದಲ್ಲಿ ನಂ.1

11 ಹೊಸ ವಸತಿ ಶಾಲೆ ಪ್ರಾರಂಭ

ಸಮಾಜ ಕಲ್ಯಾಣ, ಪರಿಶಿಷ್ಟ ವರ್ಗಗಳ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳಲ್ಲಿ 46 ಹೊಸ ವಸತಿ ಶಾಲೆಗಳ ಪ್ರಾರಂಭ. ಡಾ. ಬಿ.ಆರ್. ಅಂಬೇಡ್ಕರ್ ಹೆಸರಿನಲ್ಲಿ ನಾಲ್ಕು ಕ್ರೈಸ್ ವಸತಿ ಶಾಲೆಗಳು, ಶಿಶುನಾಳ ಶರೀಫರ ಹೆಸರಿನಲ್ಲಿ 35 ವಸತಿ ಶಾಲೆಗಳು, ಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ ನಾಲ್ಕು ವಿಶೇಷ ವಸತಿ ಶಾಲೆಗಳ ಪ್ರಾರಂಭ.

12 ನಿಗಮ, ಆಯೋಗ ಸ್ಥಾಪನೆ

ಕರ್ನಾಟಕ ಆದಿವಾಸಿ ಅಭಿವೃದ್ಧಿ ನಿಗಮ ಮತ್ತು ಪರಿಶಿಷ್ಟ ಪಂಗಡಗಳ ಆಯೋಗ ಸ್ಥಾಪನೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ನಿಗಮಗಳಿಗೆ 1,500 ಕೋಟಿ ರೂ. ಅನುದಾನ. ಈ ನಿಗಮಗಳಿಂದ 2021ರ ಮಾ.31ರ ಅಂತ್ಯದವರೆಗೆ ಪಡೆದ ಸಾಲದ ಅಸಲು ಪಾವತಿಸುವವರಿಗೆ ಬಡ್ಡಿ ಮನ್ನಾ ಮಾಡಿ ಒಂದಾವರ್ತಿ ತೀರುವಳಿ ಯೋಜನೆ ಜಾರಿ.

13 ಪ್ರಾದೇಶಿಕ ಅಸಮತೋಲನ ನಿವಾರಣೆ

ಪ್ರಾದೇಶಿಕ ಅಸಮತೋಲನ ನಿವಾರಣೆಗೆ 4,291 ಕೋಟಿ ರೂ. ಮೀಸಲು. ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ 5000 ಕೋಟಿ ರೂ.ಗಳ ಕ್ರಿಯಾ ಯೋಜನೆ. ಮಂಡಳಿಯ ವಿವೇಚನಾ ಮತ್ತು ಮ್ಯಾಕ್ರೋ ಅನುದಾನದಲ್ಲಿ ಶೇ.40ರಷ್ಟು ಆರೋಗ್ಯ, ಶಿಕ್ಷಣ ಮತ್ತು ಅಪೌಷ್ಟಿಕತೆ ನಿವಾರಣೆ ಕಾರ್ಯಕ್ರಮಗಳಿಗೆ ಮೀಸಲು.

14 ರಾಜಧಾನಿಗೆ ರಾಜವೈಭೋಗ

ಬೆಂಗಳೂರು ಮೂಲಸೌಕರ್ಯ ಅಭಿವೃದ್ಧಿಗೆ 7,000 ಕೋಟಿ ರೂ. ಅನುದಾನ. ನಗರದ 450 ಕಿ.ಮೀ. ರಸ್ತೆಗೆ 3000 ಕೋಟಿ ರೂ. ಮೊತ್ತದಲ್ಲಿ ವೈಟ್ ಟಾಪಿಂಗ್. ಹೆಬ್ಬಾಳ ಜಂಕ್ಷನ್‌ನಿಂದ ಮೇಕ್ರಿ ಸರ್ಕಲ್‌ವರೆಗೆ 2,250 ಕೋಟಿ ರೂ. ವೆಚ್ಚದಲ್ಲಿ ಸುರಂಗ ಮಾರ್ಗ ಮತ್ತು ಮೇಲು ಸೇತುವೆ ನಿರ್ಮಾಣ.

15 ಸಿಎಂ ಸೌರ ಕೃಷಿ ಯೋಜನೆ

ವಿದ್ಯುಚ್ಛಕ್ತಿ ಬಿಲ್ಲುಗಳ ಪಾವತಿಯಲ್ಲಿ ಗ್ರಾಮ ಪಂಚಾಯತ್‌ಗಳನ್ನು ಸ್ವಯಂ ಸುಸ್ಥಿರಗೊಳಿಸಲು ಹಾಗೂ ಅವಶ್ಯವಿರುವ ವಾರ್ಷಿಕ ಅಂದಾಜು 4000 ಮೆಗಾ ವ್ಯಾಟ್ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಅನಂತ ಯೋಜನೆ ಘೋಷಣೆ. ಕುಸುಮ್-ಸಿ ಮಾದರಿಯಲ್ಲಿ ಅಂದಾಜು 10,500 ಕೋಟಿ ರೂ. ವೆಚ್ಚದಲ್ಲಿ 3000 ಮೆ.ವ್ಯಾ. ಕ್ಷಮತೆಯ ಸೌರ ವಿದ್ಯುತ್ ಸ್ಥಾವರಗಳ ಮುಖ್ಯಮಂತ್ರಿ ಸೌರ ಕೃಷಿ ಯೋಜನೆ ಜಾರಿ.

16 ಹುದ್ದೆ ಭರ್ತಿಗೆ ಕ್ರಮ

ಈ ವರ್ಷ 56,432 ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಗೆ ಚಾಲನೆ. ಶಾಲಾ-ಕಾಲೇಜುಗಳಲ್ಲಿ 15,000 ಬೋಧಕ ಹುದ್ದೆಗಳು, ವಿಶ್ವವಿದ್ಯಾಲಯಗಳಲ್ಲಿ 1,000 ಬೋಧಕ ಹುದ್ದೆಗಳು, ಆರೋಗ್ಯ ಇಲಾಖೆಯಲ್ಲಿ 2,500, ಅರಣ್ಯ ಇಲಾಖೆಯ 2,000 ಹುದ್ದೆಗಳ ಭರ್ತಿ.

17 ಮದ್ಯ ಬೆಲೆ ಮುಕ್ತ

ಹೊಸ ನೀತಿಯಲ್ಲಿ ಸರ್ಕಾರದಿಂದ ಮದ್ಯದ ಬೆಲೆ ನಿರ್ಧಾರವಾಗುವುದನ್ನು ಮುಕ್ತಗೊಳಿಸಲಾಗುತ್ತದೆ. ದರ ನಿಗದಿ ಸ್ಲ್ಯಾಬ್‌ಗಳನ್ನು ತರ್ಕಬದ್ಧಗೊಳಿಸುವ ಸಲುವಾಗಿ ಈಗಿರುವ 16 ಸ್ಲ್ಯಾಬ್‌ಗಳನ್ನು 8ಕ್ಕೆ ಇಳಿಕೆ.



17ನೇ ಬಜೆಟ್ ಮೂಲಕ ಸಿಎಂ ಸಿದ್ದರಾಮಯ್ಯ ಅವರು ನಾಡಿನ ಜನತೆಗೆ ಚೊಂಬು ನೀಡಿದ್ದಾರೆ. ಕಳೆದ 3 ಬಜೆಟ್ ನೋಡಿದರೆ, ಹಿಂದಿನ ಬಜೆಟ್‌ನಲ್ಲಿ 1 ಲಕ್ಷ 16 ಸಾವಿರ ಕೋಟಿ ರೂ. ಸಾಲ ಮಾಡಿದ್ದರು. ಈ ಬಾರಿ 1 ಲಕ್ಷ 32 ಸಾವಿರ ಕೋಟಿ ರೂ. ಸಾಲ ಮಾಡಿದ್ದಾರೆ. ಕಳೆದ 3 ವರ್ಷಗಳಲ್ಲಿ 4 ಲಕ್ಷ 39 ಸಾವಿರ ಕೋಟಿ ರೂ. ಸಾಲ ಮಾಡಿದ್ದೇ ಸಿದ್ದರಾಮಯ್ಯನವರ ದಾಖಲೆ.
■ **ಬಿ.ವೈ.ವಿಜಯೇಂದ್ರ,** ಬಿಜೆಪಿ ರಾಜ್ಯಾಧ್ಯಕ್ಷ

ವಿತ್ತೀಯ ಶಿಸ್ತನ್ನು ಹಾಳು ಮಾಡಿಲ್ಲ. ವಿತ್ತೀಯ ಕೊರತೆ 2026-27ನೇ ಸಾಲಿನಲ್ಲೂ ಶೇ.2.95 ರಷ್ಟಿರಲಿದೆ. ರಾಜ್ಯದ ಜಿಎಸ್‌ಡಿಪಿ ಈ ವರ್ಷ 33,05,500 ಕೋಟಿ ರೂ. ಗಳಷ್ಟಿರಲಿದೆ ಎಂದು ಅಂದಾಜಿಸಲಾಗಿದೆ. ಒಟ್ಟು ಹೊಣೆಗಾರಿಕೆಗಳು ಜಿಎಸ್‌ಡಿಪಿಯ ಶೇ.24.94 ರಷ್ಟಿರಲಿದೆ. ಆರ್ಥಿಕ ಹೊಣೆಗಾರಿಕೆ ಅಧಿನಿಯಮದ ಮಾನದಂಡದಂತೆ ವಿತ್ತೀಯ ಶಿಸ್ತನ್ನು ಕಾಪಾಡಿಕೊಂಡಿದ್ದೇವೆ.
■ **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಇರಾನ್ ಜತೆ ಸಂಧಾನದ ಸಮಯ ಮೀರಿದೆ: ಡೊನಾಲ್ಡ್ ಟ್ರಂಪ್

ಒಪ್ಪಂದ ಮಾತಿಲ್ಲ, ಶರಣಾಗಿ

ವಾಷಿಂಗ್ಟನ್: ಇರಾನ್‌ನೊಂದಿಗೆ ಒಪ್ಪಂದ ಮಾಡಿಕೊಳ್ಳಲು ಸಮಯ ಮೀರಿ ಹೋಗಿದೆ. ಇರಾನ್ ಬೇಷರತ್ ಶರಣಾಗಬೇಕು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶುಕ್ರವಾರ ಪ್ರತಿಜ್ಞೆಗೈದಿದ್ದಾರೆ.

ಒಪ್ಪಂದ ಮಾಡಿಕೊಳ್ಳೋಣವೇ ಎಂದು ಇರಾನ್ ನನ್ನ ಬಳಿ ಕೇಳಿತು. ಒಪ್ಪಂದ ಮಾಡಿಕೊಳ್ಳಲು ನೀವು ತಡವಾಗಿ ಕೇಳಿದ್ದೀರಿ. ಇನ್ನು ಒಪ್ಪಂದ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಿದ್ದೇನೆ. ಬೇಷರತ್ ಶರಣಾಗಲು ಇರಾನ್ ಒಪ್ಪಿದರೆ ಮಾತ್ರ ಒಪ್ಪಂದ. ಇಲ್ಲದಿದ್ದರೆ ಇರಾನ್ ಜತೆ ಒಪ್ಪಂದ ಮಾಡಿಕೊಳ್ಳುವುದಿಲ್ಲ. ಇರಾನ್ ಶರಣಾದರೆ ಅದರ ಆರ್ಥಿಕತೆಯ ಪುನರುತ್ಥಾನದ ಮೂಲಕ ಶ್ರೇಷ್ಠ ಇರಾನ್ ಕಟ್ಟಲು(ಮೇಕ್ ಇರಾನ್ ಗ್ರೇಟ್ ಅಗೇನ್) ನೆರವಾಗುವುದಾಗಿ ಟ್ರಂಪ್ ಇರಾನ್ ಜನರಿಗೆ ಭರವಸೆ ನೀಡಿದ್ದಾರೆ.



ಮಧ್ಯಪ್ರಾಚ್ಯ ಯುದ್ಧದ 7ನೇ ದಿನವಾದ ಶುಕ್ರವಾರವೂ ಇರಾನ್ ಮೇಲಿನ ದಾಳಿ ತೀವ್ರತೆ ಹೆಚ್ಚಿಸಿದ ಇಸ್ರೇಲ್, ಟೆಹ್ರಾನ್ ಮತ್ತು ಇಸ್ಫಹಾನ್ ನಗರಗಳ ಮೂಲಸೌಕರ್ಯ ವ್ಯವಸ್ಥೆಯನ್ನೇ ಗುರಿಯಿಟ್ಟು ದಾಳಿ ನಡೆಸಿದೆ. ಪುಟ ೭

- ಟೆಹ್ರಾನ್, ಇಸ್ಫಹಾನ್ ನಗರಗಳ ಮೇಲೆ ಇಸ್ರೇಲ್ ದಾಳಿ
- ಡ್ರೋನ್ ದಾಳಿ ಸಾಮರ್ಥ್ಯದ ಇರಾನ್ ಯುದ್ಧನೌಕೆಗಳಿಗೆ ಹಾನಿ




ಮಧ್ಯಪ್ರಾಚ್ಯ ಯುದ್ಧಕ್ಕೆ ಕಾರಣ ಹೇಳಿದ ಆರೆಸ್ಸೆಸ್ ಸರಸಂಘಚಾಲಕ ಭಾಗ್ವತ್

ಏಕಾತ್ಮತಾ ತತ್ವದರ್ಶನದಲ್ಲಿ ವಿಶ್ವ ವಿಫಲ

ಜೈಸಲ್ಮೇರ್: ದೈವಿಕತೆಗೆ ಹಲವು ರೂಪಗಳಿವೆ. ಆದರೆ ನಮ್ಮೆಲ್ಲರಲ್ಲೂ ಇರುವ ಈ ಏಕಾತ್ಮತಾ ತತ್ವವನ್ನು ಕಾಣುವಲ್ಲಿ ಜಗತ್ತು ವಿಫಲವಾಗುತ್ತಿರುವುದೇ ಇಂದು ಕಾಣುತ್ತಿರುವ ವಿಶ್ವ ಯುದ್ಧಗಳು ಮತ್ತು ಸಂಘರ್ಷಗಳು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ.ಮೋಹನ್ ಭಾಗ್ವತ್ ಶುಕ್ರವಾರ ಹೇಳಿದ್ದಾರೆ. ಅವರು ಜೈಸಲ್ಮೇರ್‌ನಲ್ಲಿ ಜೈನ ಸಮುದಾಯದ ಚಾದರ್ ಮಹೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ನಡೆದ ಧರ್ಮಸಭಾ ಉದ್ದೇಶಿಸಿ ಮಾತನಾಡಿದರು. ಈ ಏಕತ್ವದ ಸತ್ಯವನ್ನು ಕಡೆಗಣಿಸುತ್ತಿರುವುದರಿಂದಾಗಿ ಯುದ್ಧ-ಸಂಘರ್ಷಗಳು ಮುಂದುವರಿಯುತ್ತಿವೆ ಎಂದರು.

ಜನರು ವಿಭಿನ್ನವಾಗಿ ಕಾಣಬಹುದು. ಆದರೆ ಎಲ್ಲರೂ ಒಂದೇ. ಒಂದನೇ ಮಹಾಯುದ್ಧದ ಬಳಿಕ ಭವಿಷ್ಯದ ಯುದ್ಧಗಳನ್ನು ತಡೆಯುವುದಕ್ಕಾಗಿ ಲೀಗ್ ಆಫ್ ನೇಷನ್ಸ್ ಸ್ಥಾಪಿಸಲಾಯಿತು. ಆದರೆ, ಅದು ವಿಫಲವಾಗಿದೆ.



ಈ ಏಕತ್ವದ ದರ್ಶನ ಮಾಡಿಕೊಳ್ಳಲು ವಿಫಲವಾದ ಕಾರಣ 2ನೇ ವಿಶ್ವಯುದ್ಧವೂ ನಡೆಯಿತು. ಅದಾದ ಬಳಿಕ ವಿಶ್ವಸಂಸ್ಥೆಯನ್ನು ಸ್ಥಾಪಿಸಲಾಯಿತು. ಆದರೂ ಸಂಘರ್ಷಗಳು ಇನ್ನೂ ಜಗತ್ತಿನಾದ್ಯಂತ ಮುಂದುವರಿದಿವೆ ಎಂದು ಹೇಳಿದರು.

ಈ ಸಂದರ್ಭದಲ್ಲೇ ಭಾರತೀಯ ಚಿಂತನೆ ಮಹತ್ವ ಪಡೆಯುತ್ತದೆ. ಸಂಪೂರ್ಣ ಸತ್ಯವು ಖಂಡಿತವಾಗಿಯೂ ಒಂದೇ. ಅದು ಶಾಶ್ವತ ಮತ್ತು ಸಾರ್ವತ್ರಿಕವಾದುದು. ದೈವಿಕತೆಯು ಅನೇಕ ರೂಪಗಳಲ್ಲಿ ಕಾಣುವುದನ್ನು ಆಯ್ಕೆ ಮಾಡಿಕೊಂಡ ಕಾರಣ ಈ ವೈವಿಧ್ಯತೆಗಳು ಅಸ್ತಿತ್ವದಲ್ಲಿವೆ. ಆದರೆ ನಾವು ಈ ವೈವಿಧ್ಯತೆಯಲ್ಲಿ ಸಾಗುವಾಗ ಏಕತ್ವವನ್ನು ಕಾಣುವ ದೃಷ್ಟಿ ಬೆಳೆಸಿಕೊಳ್ಳಬೇಕಿದೆ. ವಿವಿಧತೆಯಲ್ಲಿ ಏಕತೆಯನ್ನು ಕಾಣುವ ಸಾಮರ್ಥ್ಯ ಭಾರತಕ್ಕೆ ಇರುವುದರಿಂದಲೇ ಭಾರತ ಎಲ್ಲ ಸಂಕಷ್ಟ, ಬಿಕ್ಕಟ್ಟು, ಸವಾಲುಗಳ ಹೊರತಾಗಿಯೂ ಉಳಿದುಕೊಂಡಿದೆ ಎಂದು ಅವರು ವಿವರಿಸಿದರು. ಪುಟ ೦೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,85,000**(2,85,000) ಅಪರಂಜಿ ಚಿನ್ನ: **1,61,130**(1,62,880) ಆಭರಣ ಚಿನ್ನ: **1,47,700**(1,49,300) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ **78,918**(1,097↓) ಎನ್‌ಎಸ್‌ಇ **24,450**(315↓) $1 = ₹91.61

ಬಜೆಟ್ ಮಾತು



ಸಾಲದ ಶೂಲಕ್ಕೆ ರಾಜ್ಯವನ್ನು ತೆಗೆದುಕೊಂಡು ಹೋಗುವ ಬಜೆಟ್ ಇದಾಗಿದೆ. ಇದರಿಂದ ರಾಜ್ಯದ ಹಣಕಾಸಿನ ಮೇಲೆ ದೂರಗಾಮಿ ಬಹಳ ದೊಡ್ಡ ಪರಿಣಾಮ ಬೀರಲಿದೆ. 1.32 ಲಕ್ಷ ಕೋಟಿ ಸಾಲ ಮಾಡಿ ಸುಮಾರು 25 ಸಾವಿರ ಕೋಟಿ ರೂ. ಹೊಸ ತೆರಿಗೆ ಹಾಕಿ 32 ಸಾವಿರ ಕೋಟಿ ರೂ. ಕೊರತೆ ಬಜೆಟ್ ಮಂಡನೆ ಮಾಡಿದ್ದಾರೆ.

■ **ಬಸವರಾಜ ಬೊಮ್ಮಾಯಿ**, ಸಂಸದ

ಯಾವ ಇಲಾಖೆಗೆ ಎಷ್ಟು ಅನುದಾನ

ಶಿಕ್ಷಣ	ಇಂಧನ	ಕೃಷಿ
47,224 ಕೋಟಿ ರೂ.	29,947 ಕೋಟಿ ರೂ.	8,373 ಕೋಟಿ ರೂ.

■ ಮನೆ ನಿರ್ಮಾಣಕ್ಕೆ ಸಹಾಯ ಧನ ಏರಿಕೆ



ವಿವಿಧ ವಸತಿ ಯೋಜನೆಗಳಡಿ ಪ್ರಸಕ್ತ ಸಾಲಿನಲ್ಲಿ ಮೂರು ಲಕ್ಷ ಮನೆಗಳನ್ನು ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ. ಹಿಂದಿನ ಸರ್ಕಾರವು ಅನುದಾನ ನೀಡದೇ ಮಂಜೂರಾತಿ ನೀಡಿರುವ 4.90 ಲಕ್ಷ ಮನೆಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಸಿದ್ದರಾಮಯ್ಯ ಬಜೆಟ್‌ನಲ್ಲಿ ಭರವಸೆ ನೀಡಿದ್ದಾರೆ. ಸರ್ವರಿಗೂ ಸೂರು ಕಲ್ಪಿಸುವ ಉದ್ದೇಶದಿಂದ ರಾಜ್ಯದ ವಿವಿಧ ವಸತಿ ಯೋಜನೆಗಳಡಿ ಬಿಎಲ್‌ಸಿ ಆಧಾರಿತ 1 ಲಕ್ಷ ಮನೆಗಳ ಹೊಸ ಗುರಿಯನ್ನು ಮಂಜೂರು ಮಾಡಲಾಗುವುದು. ಸದರಿ ಗುರಿಯಡಿ ಆಯ್ಕೆಯಾಗುವ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ನೀಡುವ ಸಹಾಯಧನವನ್ನು 1.20 ಲಕ್ಷ ರೂ.ಗಳಿಂದ 2 ಲಕ್ಷ ರೂ.ಗಳಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ 2 ಲಕ್ಷ ರೂ.ಗಳಿಂದ 3 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗುವುದೆಂದು ಘೋಷಣೆ ಮಾಡಲಾಗಿದೆ. ಕೆ.ಎಚ್.ಬಿ. ವತಿಯಿಂದ ನಮ್ಮ ಮನೆ ಯೋಜನೆಯಡಿಯಲ್ಲಿ ಮುಂದಿನ 2 ವರ್ಷಗಳಲ್ಲಿ 50 ಸಾವಿರ ನಿವೇಶನಗಳನ್ನು ರಿಯಾಯಿತಿ ದರದಲ್ಲಿ ವಿತರಿಸಲು ಉದ್ದೇಶಿಸಲಾಗಿದೆ .



ಹೊಸ ದಿಗಂತ

09 ಶನಿವಾರ, 7 ಮಾರ್ಚ್ 2026

ಹುಬ್ಬಳ್ಳಿ



40 ಲಕ್ಷ ರೈತರಿಗೆ 468 ಕೋಟಿ ಮೊತ್ತದಲ್ಲಿ ಬಿತ್ತನೆ ಬೀಜಗಳಿಗೆ ಸಹಾಯಧನ

ಕೃಷಿ ಕ್ಷೇತ್ರಕ್ಕೆ ಎಐ ಸ್ಪರ್ಶ

2,825 ಕೋಟಿ ವೆಚ್ಚದಲ್ಲಿ 7 ಲಕ್ಷ ರೈತರಿಗೆ ಹನಿ ನೀರಾವರಿ ಘಟಕ ಸ್ಥಾಪನೆ

ಈ ಬಾರಿಯ ಬಜೆಟ್‌ನಲ್ಲಿ ಕೃಷಿಗೆ ಹೆಚ್ಚಿನ ಮಹತ್ವ ನೀಡಲಾಗಿದ್ದು, ಸಾಂಪ್ರದಾಯಿಕತೆಯ ಜತೆಗೆ ಆಧುನಿಕತೆಗೂ ಮೊರೆಹೋಗಲಾಗಿದೆ. ಎಐ ತಂತ್ರಜ್ಞಾನವನ್ನು ಬಳಸಿಕೊಳ್ಳುವ ಚಿಂತನೆ ನಡೆದಿದೆ. 2,825 ಕೋಟಿ ವೆಚ್ಚದಲ್ಲಿ 7 ಲಕ್ಷ ರೈತರಿಗೆ ಹನಿ ನೀರಾವರಿ ಘಟಕ ಸ್ಥಾಪನೆ ಹಾಗೂ 3.41 ಲಕ್ಷ ರೈತರಿಗೆ ಕೃಷಿ ಯಂತ್ರೋಪಕರಣಗಳ ವಿತರಣೆ ಮಾಡಲಾಗುತ್ತದೆ. 363 ಕೋಟಿ ರೂ. ಮೊತ್ತದಲ್ಲಿ 32,138 ಕೃಷಿ ಹೊಂಡಗಳ ನಿರ್ಮಾಣ. 51 ಲಕ್ಷ ರೈತರಿಗೆ 6,213 ಕೋಟಿ ಬೆಳೆ ವಿಮೆ ಪರಿಹಾರ ನೀಡಲು ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದೆ. 36 ಲಕ್ಷ ನೀರಾವರಿ ಪಂಪ್‌ಸೆಟ್‌ಗಳಿಗೆ 48 ಸಾವಿರ ಕೋಟಿ ರೂ.ಉಚಿತ ವಿದ್ಯುತ್ ಸಹಾಯಧನ. 83ಲಕ್ಷ ರೂ. ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ 70 ಸಾವಿರ ಕೋಟಿ ರೂ. ಕೃಷಿ ಸಾಲ ವಿತರಣೆ ಮಾಡಲು ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದೆ. 2026-27ನೇ ಸಾಲಿನ ಆಯವ್ಯಯದಲ್ಲಿ 40 ಲಕ್ಷ ರೈತರಿಗೆ 468 ಕೋಟಿ ರೂ. ಮೊತ್ತದಲ್ಲಿ ಬಿತ್ತನೆ ಬೀಜಗಳಿಗೆ ಸಹಾಯಧನ ವಿತರಣೆ ಮಾಡುವುದಾಗಿ ಘೋಷಿಸಿದೆ.

ರೈತ ಕರೆ ಕೇಂದ್ರವನ್ನು ಎಐ ತಂತ್ರಜ್ಞಾನದಿಂದ ಉನ್ನತೀಕರಣ: ನೂತನ ದ್ವಿದಳಧಾನ್ಯ ತಳಿಗಳ ಬಿತ್ತನೆ ಬೀಜಗಳ ಬಳಕೆಯನ್ನು ರೈತರಲ್ಲಿ ಪ್ರೇರೇಪಿಸಲು ನೀಡುತ್ತಿರುವಸಹಾಯಧನವನ್ನು ಹೆಚ್ಚಿಸಲಾಗುವುದು. ರೈತರಿಗೆ ಒಂದೇ ಸೂರಿನಡಿ ಹವಾಮಾನ, ಮಾರುಕಟ್ಟೆ, ಕೃಷಿ ತಾಂತ್ರಿಕತೆ ಮತ್ತು ಇಲಾಖಾ ಮಾಹಿತಿ ಒದಗಿಸಲು ಕೃಷಿ ಇಲಾಖೆಯ ರೈತ ಕರೆ ಕೇಂದ್ರವನ್ನು ಎಐ ತಂತ್ರಜ್ಞಾನದಿಂದ ಉನ್ನತೀಕರಿಸಲಾಗುವುದು.



- 363 ಕೋಟಿ ರೂ. ಮೊತ್ತದಲ್ಲಿ 32,138 ಕೃಷಿ ಹೊಂಡಗಳ ನಿರ್ಮಾಣ
- 51 ಲಕ್ಷ ರೈತರಿಗೆ 6,213 ಕೋಟಿ ಬೆಳೆ ವಿಮೆ ಪರಿಹಾರ
- 36 ಲಕ್ಷ ನೀರಾವರಿ ಪಂಪ್‌ಸೆಟ್‌ಗಳಿಗೆ 48 ಸಾವಿರ ಕೋಟಿ ರೂ. ಉಚಿತ ವಿದ್ಯುತ್ ಸಹಾಯಧನ
- 83 ಲಕ್ಷ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ 70 ಸಾವಿರ ಕೋಟಿ ರೂ. ಕೃಷಿ ಸಾಲ ವಿತರಣೆ
- ಮುಂದಿನ ಮೂರು ವರ್ಷಗಳಲ್ಲಿ ಸಸ್ಯ ಸಂಜೀವಿನಿ ಯೋಜನೆ ಅನುಷ್ಠಾನ

ರಾಜ್ಯ ಮಟ್ಟದ ಸಲಹಾ ಸಮಿತಿ

ರೈತರಿಗೆ ಬಿತ್ತನೆ ಬೀಜಗಳು, ಕೀಟನಾಶಕಗಳು, ರಸಗೊಬ್ಬರಗಳು ಹಾಗೂ ಕೃಷಿ ಯಂತ್ರೋಪಕರಣಗಳು ಒಂದೇ ಸೂರಿನಡಿ ದೊರಕಿಸಲು ಪ್ರಾಯೋಗಿಕವಾಗಿ ಕೋಲಾರ ಜಿಲ್ಲೆಯ ಪ್ರತಿ ತಾಲೂಕಿನಲ್ಲಿ ಎಂಎಸ್‌ಐಎಲ್ ವತಿಯಿಂದ ರೈತ ಮಾಲ್‌ಗಳನ್ನು ಸ್ಥಾಪಿಸಲಾಗುವುದು. ಕೃಷಿ ಪರಿಕರಗಳನ್ನು ಮಾರುಕಟ್ಟೆ ದರಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯಮಟ್ಟದ ಸಲಹಾ ಸಮಿತಿಯನ್ನು ರಚಿಸಲಾಗುವುದು.

ವಸುಧಾಮೃತ ಕಾರ್ಯಕ್ರಮ ಜಾರಿ

ಗ್ರಾಮೀಣ ರೈತರಿಗೆ ಸ್ಥಿರ ಮತ್ತು ಹೆಚ್ಚುವರಿ ಆದಾಯದ ಮೂಲಗಳನ್ನು ಸೃಜಿಸುವ ಉದ್ದೇಶದಿಂದ ಮುಖ್ಯಮಂತ್ರಿ ಕೃಷಿ ವಿಸ್ತಾರ ಯೋಜನೆಯನ್ನು ಮುಂದಿನ 3 ವರ್ಷಗಳಲ್ಲಿ 100 ಕೋಟಿ ರೂ. ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುವುದು. ಬೆಳೆಗಳಲ್ಲಿ ಕೀಟ ಹಾಗೂ ರೋಗಗಳನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಹಚ್ಚಿ, ನಿಯಂತ್ರಿಸಲು ಸಸ್ಯ ಸಂಜೀವಿನಿ ಯೋಜನೆಯನ್ನು ಮುಂದಿನ 3 ವರ್ಷಗಳಲ್ಲಿ ಅನುಷ್ಠಾನಗೊಳಿಸಲಾಗುವುದು.

ಅಧಿಕೃತ ಸಾವಯವ ಪ್ರಮಾಣೀಕರಣ ವ್ಯವಸ್ಥೆ ಜಾರಿ

ರೈತರ ಸಮಯ ಹಾಗೂ ಶ್ರಮ ತಗ್ಗಿಸುವುದರೊಂದಿಗೆ ಉತ್ಪಾದನಾ ವೆಚ್ಚವನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಅತ್ಯಾಧುನಿಕ ನಿಖರ ಬಿತ್ತನೆ ಮತ್ತು ನಾಟಿ ಯಂತ್ರಗಳನ್ನು ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯಡಿ ಸೇರ್ಪಡೆಗೊಳಿಸಲಾಗುವುದು. ಸಣ್ಣ, ಅತೀ ಸಣ್ಣ ರೈತರಿಗೆ ಸ್ಥಳೀಯವಾಗಿ ಅಗತ್ಯವಿರುವ ಎತ್ತು ಚಾಲಿತ ಹಾಗೂ ಕೈಚಾಲಿತ ಉಪಕರಣಗಳನ್ನು ಕೃಷಿ ಯಾಂತ್ರೀಕರಣ ಯೋಜನೆಯಡಿ ಒದಗಿಸಲಾಗುವುದು.

ಮಿನಿ ಬಜೆಟ್

ಸಿಎಂ ಕೆಕೆವೈ-2.0 ಜಾರಿ



ಪಂಚ ಗ್ಯಾರಂಟಿ ಯೋಜನೆಯಲ್ಲಿ ಒಂದಾದ ಯುವನಿಧಿ ಯೋಜನೆಯಡಿ ಇಲ್ಲಿಯವರೆಗೆ ಒಟ್ಟು 3,08,267 ಅರ್ಹ ಫಲಾನುಭವಿಗಳಿಗೆ 913 ಕೋಟಿ ರೂ. ಮೊತ್ತದ ನಿರುದ್ಯೋಗ ಭತ್ಯೆಯನ್ನು ನೇರ ನಗದು ವರ್ಗಾವಣೆ ಮೂಲಕ ಪಾವತಿಸಲಾಗಿದೆ.ಇಲಾಖೆಯ ವಿವಿಧ ಯೋಜನೆ ಹಾಗೂ ಸಂಸ್ಥೆಗಳಡಿ ಒಟ್ಟಾರೆ 80,086 ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ. ಯುವಕ, ಯುವತಿಯರ ಉದ್ಯೋಗಾರ್ಹತೆ ಮತ್ತು ಉದ್ಯಮಶೀಲತೆಯನ್ನು ಇನ್ನಷ್ಟು ಉತ್ತೇಜಿಸಲು ಸಿಎಂಕೆಕೆವೈ-2.0 ಜಾರಿಗೊಳಿಸಲಾಗಿದೆ ಎಂದು ಬಜೆಟ್‌ನಲ್ಲಿ ತಿಳಿಸಲಾಗಿದೆ.

ಕ್ಲಸ್ಟರ್‌ಗಳ ಉನ್ನತೀಕರಣ




ರಾಜ್ಯದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು, ಕೆಜಿಟಿಟಿಐಗಳು, ಕೆಎಸ್‌ಡಿಎ ಮತ್ತು ಜಿಟಿಎಸ್‌ಗಳ ಮೂಲಭೂತ ಸೌಕರ್ಯ ಮತ್ತು ತರಬೇತಿ ಗುಣಮಟ್ಟವನ್ನು ಹೆಚ್ಚಿಸಲು ಎಡಿಬಿ ಸಹಭಾಗಿತ್ವದಲ್ಲಿ ಒಟ್ಟು 1,386 ಕೋಟಿ ರೂ.ಗಳ 5 ವರ್ಷಗಳ ಅವಧಿಯ ಕೆ-ಕ್ವೆಷ್ಟನ್ ಯೋಜನೆಯನ್ನು ಜಾರಿಗೊಳಿಸಲಾಗುವುದು. ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಕೇಂದ್ರ ಸರ್ಕಾರವು ಘೋಷಣೆ ಮಾಡಿರುವ ಪಿಎಂ-ಸೇತು ಯೋಜನೆಯಡಿ ಕೇಂದ್ರ, ರಾಜ್ಯ ಮತ್ತು ಉದ್ದಿಮೆಗಳ ಸಹಭಾಗಿತ್ವದಲ್ಲಿ ಹಬ್ ಸ್ಪೋಕ್ ಮಾದರಿಯಲ್ಲಿ ಕ್ಲಸ್ಟರ್‌ಗಳನ್ನಾಗಿ ಉನ್ನತೀಕರಿಸಲಾಗುವುದು.

ಬೋಧನಾ ಶುಲ್ಕ ವಿನಾಯಿತಿ




ಐಟಿಐ ಕಲಿತ ವಿದ್ಯಾರ್ಥಿನಿಯರಿಗೆ ಉದ್ಯಮಗಳಲ್ಲಿ ವಿಪುಲವಾದ ಉದ್ಯೋಗಾವಕಾಶಗಳಿದ್ದು, ಆದ್ದರಿಂದ ಹೆಣ್ಣುಮಕ್ಕಳ ಪ್ರವೇಶ ಹೆಚ್ಚಿಸಲು ಮಹಿಳಾ ತರಬೇತಿದಾರರಿಗೆ 1,200 ರೂ.ಗಳ ವಾರ್ಷಿಕ ಬೋಧನಾ ಶುಲ್ಕ ವಿನಾಯಿತಿ ನೀಡಲಾಗುವುದು. ಉನ್ನತ ವ್ಯಾಸಂಗ ಅಥವಾ ಉತ್ತಮ ಉದ್ಯೋಗ ಪಡೆದುಕೊಳ್ಳುವ ಅವಕಾಶ ಕಲ್ಪಿಸಲು ಪದವಿ ಪೂರ್ವ ಪ್ರಮಾಣ ಪತ್ರವನ್ನು ನೀಡಲಾಗುವುದು. ಕೊಪ್ಪಳದ ಜಿಟಿಟಿಸಿ-ಎಂಎಸ್‌ಡಿಸಿಯಲ್ಲಿ ಖಾಸಗಿ ಸಂಸ್ಥೆಯ ಸಹಯೋಗ ದೊಂದಿಗೆ ಎಂಜನಿಯರಿಂಗ್ ತಂತ್ರಜ್ಞಾನ ಕೇಂದ್ರವನ್ನು ಕೆಕೆಆರ್‌ಡಿಬಿಯ 10 ಕೋಟಿ ರೂ.ಗಳ ಅನುದಾನದೊಂದಿಗೆ ಒಟ್ಟಾರೆ 20 ಕೋಟಿ ರೂ.ಗಳ ವೆಚ್ಚದಲ್ಲಿ ಸ್ಥಾಪನೆ ಮಾಡಲಾಗುವುದು.

ಎಐ ಘಟಕ ಸ್ಥಾಪನೆ



ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರ ಅಡಿಯಲ್ಲಿ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಜೊತೆಗೂಡಿ ಕರ್ನಾಟಕ ಕೌಶಲ್ಯ ಬುದ್ಧಿಮತ್ತೆ ಮತ್ತು ಕಾರ್ಯತಂತ್ರ ಘಟಕವನ್ನು ಸ್ಥಾಪಿಸಲಾಗುವುದು. ಆಯ್ದ ದೇಶಗಳು ಮತ್ತು ಸಂಸ್ಥೆಗಳೊಂದಿಗೆ ಪಾಲುದಾರಿಕೆಯ ಮೂಲಕ ಜಾಗತಿಕ ಕೌಶಲ್ಯ ಮೈತ್ರಿಕೂಟಗಳನ್ನು ಆರಂಭಿಸಲಾಗುವುದು.ಬಹು ವೇದಿಕೆಗಳ ಮೂಲಕ ಪ್ರಸ್ತುತ ನೀಡಲಾಗುತ್ತಿರುವ ಎಲ್ಲಾ ಕೌಶಲ್ಯ ಅಭಿವೃದ್ಧಿ ಯೋಜನೆಗಳು ಮತ್ತು ಸೇವೆಗಳನ್ನು ಸಂಯೋಜಿಸಿ ಏಕೀಕೃತ ಕೌಶಲ್ಯ ಅಭಿವೃದ್ಧಿ ಪೋರ್ಟಲ್‌ನ್ನು ಎರಡು ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು ಎಂದು ತಿಳಿಸಲಾಗಿದೆ.

ಜಮೆ-ರೂಪಾಯಿ ಎಷ್ಟು ಭಾಗ ಯಾವುದರಿಂದ (ಪೈಸೆ)



ಮೀನುಗಾರಿಕೆ ಸಲಕರಣೆ ಕಿಟ್ ದರ 10 ರಿಂದ 20 ಸಾವಿರ ರೂ.ಗೆ ಏರಿಕೆ



ಸರ್ಕಾರವು ಮೀನುಗಾರಿಕೆ ಚಟುವಟಿಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ಈ ಬಾರಿ ಬಜೆಟ್‌ನಲ್ಲಿ ಮೀನುಗಾರರಿಗೆ ಉಚಿತವಾಗಿ ನೀಡುವ ಮೀನುಗಾರಿಕೆ ಸಲಕರಣೆ ಕಿಟ್ ಮೌಲ್ಯದ ದರವನ್ನು 10 ಸಾವಿರ ರೂ.ಗಳಿಂದ 20 ಸಾವಿರಕ್ಕೆ ಹೆಚ್ಚಿಸುದಾಗಿ ಘೋಷಿಸಿದೆ. ಜೈವಿಕ ತಂತ್ರಜ್ಞಾನದ ಉದ್ಯಮಗಳು, ನವೀನ ತಂತ್ರಜ್ಞಾನದ ಅಭಿವೃದ್ಧಿ ಮತ್ತು ಸಮುದ್ರ ಕೃಷಿಯನ್ನು ಪ್ರೋತ್ಸಾಹಿಸಲು ಮಂಗಳೂರು ಮೀನುಗಾರಿಕಾ ಮಹಾವಿದ್ಯಾಲಯದಲ್ಲಿ ಶ್ರೇಷ್ಠತೆಯ ಕೇಂದ್ರ (Centre of Excellence) ಸ್ಥಾಪಿಸಲಾಗುತ್ತದೆ. ರಾಜ್ಯದಲ್ಲಿ ಮೀನುಗಾರಿಕೆ ಕೊಂಡಿ ರಸ್ತೆಗಳ ನಿರ್ವಹಣೆಗಾಗಿ 20 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಮೀನುಗಾರಿಕೆಯಲ್ಲಿ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ನದಿ, ಕೆರೆ, ಕೃಷಿ ಹೊಂಡ ಹಾಗೂ ಜಲಾಶಯಗಳಲ್ಲಿ ಮೀನು ಉತ್ಪಾದನೆ ಹೆಚ್ಚಿಸಲು ಮೀನುಗಾರರಿಗೆ ತರಬೇತಿ ನೀಡಲಾಗುವುದು.

ಮತ್ಸ್ಯದರ್ಶಿನಿ, ಮೀನು ಮಾರುಕಟ್ಟೆ ಸ್ಥಾಪನೆ

ಮೀನು ಆಹಾರದ ಸೇವನೆಯನ್ನು ಉತ್ತೇಜಿಸುವ ಹಾಗೂ ಸಾರ್ವಜನಿಕರಿಗೆ ಸ್ವಚ್ಛ ಮತ್ತು ಗುಣಮಟ್ಟದ ಮೀನು ಉತ್ಪನ್ನಗಳು ಲಭ್ಯವಾಗಿಸಲು ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ ಮತ್ತು ಚಿಕ್ಕಮಗಳೂರಿನಲ್ಲಿ ಮತ್ಸ್ಯ ದರ್ಶಿನಿಗಳನ್ನು ಸ್ಥಾಪಿಸಲಾಗುತ್ತದೆ. ಮೀನು ಮಾರಾಟ ಮಾಡಲು ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಸುಸಜ್ಜಿತ ಮೀನು ಮಾರುಕಟ್ಟೆಯನ್ನು ನಿರ್ಮಿಸಲಾಗುವುದು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ದಾಖಲೆಯ 17ನೇ ಬಜೆಟ್ ಮಂಡನೆಗೂ ಮುನ್ನ ಮಾಧ್ಯಮಗಳಿಗೆ ಆಯವ್ಯಯದ ಕೆಂಪು ಬಹಿ ಖಾತಾ ಪ್ರದರ್ಶಿಸಿದರು.

ಬಜೆಟ್ ಮಾತು



ಇದೊಂದು ಸಮತೋಲಿತ ಬಜೆಟ್ ಆಗಿದ್ದು, ಎಲ್ಲಾ ವರ್ಗದ ಜನರ ಶ್ರೇಯೋಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಸರ್ವರನ್ನು ಒಳಗೊಂಡ ಚಾರಿತ್ರಿಕ ಆಯವ್ಯಯ ರೂಪಿಸಲಾಗಿದೆ.

■ **ಚೆಲುವರಾಯಸ್ವಾಮಿ**, ಕೃಷಿ ಸಚಿವ

ಸೋರಿಕೆ ತಡೆಗಟ್ಟಲು ಡಿಜಿಟಲ್ ಟ್ರ್ಯಾಕಿಂಗ್, ಡಿಜಿಟಲ್ ಲಾಕ್ ವ್ಯವಸ್ಥೆ, ದರ ನಿಗದಿಯ ಸ್ಲ್ಯಾಬ್‌ಗಳನ್ನು ತರ್ಕಬದ್ಧಗೊಳಿಸಲು 16 ರಿಂದ 8ಕ್ಕೆ ಇಳಿಸುವುದಾಗಿ ತಿಳಿಸಿದ್ದಾರೆ.

■ **ಆರ್.ಬಿ.ತಿಮ್ಮಾಪೂರ್**, ಅಬಕಾರಿ ಸಚಿವ

ಅಂತರ್ಜಲ ವೃದ್ಧಿ ಹಾಗೂ ಕೆರೆಗಳ ಮರುಪೂರಣಕ್ಕೆ ಬಜೆಟ್‌ನಲ್ಲಿ ಸಿಂಹಪಾಲು ನೀಡಲಾಗಿದೆ. ಏತ ನೀರಾವರಿ, ಚೆಕ್ ಡ್ಯಾಂ, ಕೆರೆಗಳ ಪುನಶ್ಚೇತನದ ಕಾಮಗಾರಿಗಳಿಗೆ 1,793 ಕೋಟಿ ರೂ. ಮೀಸಲು.

■ **ಎನ್.ಎಸ್.ಬೋಸರಾಜು**, ಸಚಿವ

ರಾಜ್ಯ ಸರ್ಕಾರ ಮಂಡಿಸಿರುವ ಬಜೆಟ್ ಅಭಿವೃದ್ಧಿ ಶೂನ್ಯವಾಗಿದ್ದು, ಕೇವಲ ಮತಬ್ಯಾಂಕ್ ರಾಜಕಾರಣಕ್ಕಾಗಿ ಕರ್ನಾಟಕದ ಭವಿಷ್ಯವನ್ನು ಸಾಲದ ಸುಳಿಗೆ ತಳ್ಳಲಾಗಿದೆ.

■ **ಧನಂಜಯ ಸರ್ಜಿ**, ವಿಧಾನ ಪರಿಷತ್ ಸದಸ್ಯ

ಡಾ.ಜಿ.ಎಸ್. ಶಿವರುದ್ರಪ್ಪ ಅವರ ಶತಮಾನೋತ್ಸವದ ಅಂಗವಾಗಿ ಕಾರ್ಯಕ್ರಮ ಆಯೋಜನೆ, ಬೆಳವಾಡಿ ಮಲ್ಲಮ್ಮ ಮತ್ತು ಸಂತ ಶಿಶುನಾಳ ಶರೀಫರ ಹೆಸರಿನಲ್ಲಿ ಪ್ರತಿಷ್ಠಾನ ಸ್ಥಾಪಿಸಲುವ ಉದ್ದೇಶ ಶ್ಲಾಘನೀಯ.

■ **ಶಿವರಾಜ್ ತಂಗಡಗಿ**, ಸಚಿವ

ವಿವಿಗಳಲ್ಲಿ ಕೌಶಲ ತರಬೇತಿ ನೀಡಲು ಡಿಪ್ಲೊಮಾ ಕೋರ್ಸ್

ವಸ್ತುಪ್ರದರ್ಶನಕ್ಕೆ ₹10 ಕೋಟಿ



- ಸಮಗ್ರ ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆ ರೂಪಿಸಲು ಆದ್ಯತೆ
- ಜಾಯ್ ರೈಡ್ ಚಟುವಟಿಕೆಗೆ ಪ್ರೋತ್ಸಾಹ

ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಸಮಗ್ರ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ಹತ್ತು ಕೋಟಿ ರೂ.ಗಳನ್ನು ಒದಗಿಸಲಾಗುವುದು.

ರಾಜ್ಯಕ್ಕೆ ಆಗಮಿಸುವ ಎಲ್ಲಾ ಪ್ರವಾಸಿಗಳಿಗೆ ಸುಮಧುರ, ಸಕಾರಾತ್ಮಕ ಅನುಭವವನ್ನು ನೀಡುವ ಸಲುವಾಗಿ ಟ್ಯಾಕ್ಸಿ ಚಾಲಕರು, ಆಟೋ ಚಾಲಕರು ಹಾಗೂ ಭದ್ರತಾ ಪೊಲೀಸ್ ಸಿಬ್ಬಂದಿಗೆ ಮೃದು ಕೌಶಲ ತರಬೇತಿ ನೀಡುವುದರ ಮೂಲಕ ವೃತ್ತಿಪರತೆಯನ್ನು ವೃದ್ಧಿಗೊಳಿಸಲು ಒಂದು ಕೋಟಿ ರೂ. ಒದಗಿಸಲಾಗುವುದು. ಪ್ರವಾಸ ಮಾರ್ಗದರ್ಶಕರಿಗೆ ಆಯ್ದ ವಿಶ್ವವಿದ್ಯಾಲಯಗಳಲ್ಲಿ ಕೌಶಲ ತರಬೇತಿ ನೀಡಲು ಡಿಪ್ಲೊಮಾ ಕೋರ್ಸ್ ಪ್ರಾರಂಭಿಸಲಾಗುವುದು. ಇದರೊಂದಿಗೆ ಗದಗ-ಕಪ್ಪತಗುಡ್ಡ-ಲಕ್ಕುಂಡಿ ಪ್ರವಾಸೋದ್ಯಮ ಸರ್ಕ್ಯೂಟ್ ಅಭಿವೃದ್ಧಿಪಡಿಸಲಾಗುವುದು.

ಮುಳ್ಳಯ್ಯನಗಿರಿ- ಸೀತಾಳಯ್ಯನಗಿರಿಯಿಂದ ಕೈಮರದವರೆಗೆ ರೋಪ್-ವೇ: ಮುಳ್ಳಯ್ಯನಗಿರಿ-ಸೀತಾಳಯ್ಯನಗಿರಿಯಿಂದ ಕೈಮರದವರೆಗೆ ಪಿಪಿಪಿ ಮಾದರಿಯಲ್ಲಿ ರೋಪ್-ವೇ ನಿರ್ಮಿಸಲಾಗುವುದು.

ರಾಜ್ಯದ ಸಂರಕ್ಷಿತ 844 ಸ್ಮಾರಕಗಳ ಹಾಗೂ 1,000 ಅಸುರಕ್ಷಿತ ಸ್ಮಾರಕಗಳ ರಕ್ಷಣೆ ಮಾಡಲು 1,000 ಸ್ಮಾರಕ ಮಿತ್ರರನ್ನು ಗುರುತಿಸಿ ತರಬೇತಿ ನೀಡಲಾಗುವುದು. ಅವರಿಗೆ ಇಲಾಖೆಯ ಮಾನ್ಯತಾ ಪಟ್ಟಿಯಲ್ಲಿ ಸೇರ್ಪಡೆ ಮಾಡಲು ಕ್ರಮವಹಿಸಲಾಗುವುದು.

ಅಂಜನಾದ್ರಿ ಬೆಟ್ಟವನ್ನು ವಿಶ್ವಪ್ರಸಿದ್ಧ ಪ್ರವಾಸಿತಾಣವನ್ನಾಗಿ ಅಭಿವೃದ್ಧಿಪಡಿಸಲು 100 ಕೋಟಿ ರೂ.ವೆಚ್ಚದಲ್ಲಿ ರೂಪಿಸಿದೆ. ಕೇಂದ್ರ ಸರ್ಕಾರದಿಂದ ಅರಣ್ಯ ಮತ್ತು ಪರಿಸರ ತೀರುವಳಿ ಹಾಗೂ ಯುನೆಸ್ಕೋ ಸಹಮತಿ ಪಡೆದು ಕಾಮಗಾರಿಗಳನ್ನು ಆದ್ಯತೆಯ ಮೇರೆಗೆ ಪೂರ್ಣಗೊಳಿಸಲಾಗುವುದು.

ಹೈನುಗಾರಿಕೆ ಪ್ರೋತ್ಸಾಹಿಸಲು ಶೇಕಡಾ 25ರಷ್ಟು ಸಹಾಯಧನ

ಪಶುವೈದ್ಯ ಸಂಸ್ಥೆಗೆ 100 ಕಟ್ಟಡ



- ಪಶು ಆಸ್ಪತ್ರೆಗಳಲ್ಲಿ ಜಾನುವಾರುಗಳ ಸಿ.ಟಿ. ಸ್ಕ್ಯಾನಿಂಗ್ ಕೇಂದ್ರ ಸ್ಥಾಪನೆ
- ಫಲಧಾರೆ ಶಿಬಿರಗಳಿಗೆ 5 ಕೋಟಿ ರೂ.

ನಬಾರ್ಡ್ ಸಹಯೋಗದೊಂದಿಗೆ 2026-27ನೇ ಸಾಲಿನಲ್ಲಿ ಪಶುವೈದ್ಯ ಸಂಸ್ಥೆಗಳಿಗೆ 100 ನೂತನ ಕಟ್ಟಡಗಳನ್ನು ನಿರ್ಮಿಸುವುದಾಗಿ ಸರ್ಕಾರ ಘೋಷಿಸಿದೆ.

ಬೆಳಗಾವಿ ಮತ್ತು ಕಲಬುರಗಿ ವಿಭಾಗಗಳಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆಯನ್ನು ಪ್ರೋತ್ಸಾಹಿಸಲು ಆಯ್ದ 10 ಸಾವಿರ ಫಲಾನುಭವಿಗಳಿಗೆ ಶೇ.25 ರಷ್ಟು ಸಹಾಯಧನದಲ್ಲಿ ಕುರಿ/ಮೇಕೆ ಘಟಕಗಳನ್ನು ಸ್ಥಾಪಿಸುವ ಯೋಜನೆಯನ್ನು ರೂಪಿಸಿದೆ. ಹೈನುಗಾರಿಕೆಯನ್ನು ಪ್ರೋತ್ಸಾಹಿಸಲು ಆಯ್ದ 10,000 ಫಲಾನುಭವಿಗಳಿಗೆ ಶೇ.25ರಷ್ಟು ಸಹಾಯಧನದಲ್ಲಿ ಹಸು/ಎಮ್ಮೆ ಖರೀದಿಸಲು ಪ್ರೋತ್ಸಾಹಧನ ನೀಡುತ್ತಿದ್ದು, ಪ್ರಸಕ್ತ ಸಾಲಿನಲ್ಲಿ ಈ ಯೋಜನೆಗಳಿಗೆ ಒಟ್ಟು 40 ಕೋಟಿ ರೂ. ಅನುದಾನವನ್ನು ಮೀಸಲಿರಿಸಲಾಗುತ್ತದೆ.

ಪ್ರಸಕ್ತ ಸಾಲಿನಲ್ಲಿ 15 ತಾಲೂಕು ಪಶು ಆಸ್ಪತ್ರೆಗಳನ್ನು 10 ಕೋಟಿ ರೂ. ವೆಚ್ಚದಲ್ಲಿ ಪಾಲಿಕ್ಲಿನಿಕ್‌ಗಳನ್ನಾಗಿ ಮೇಲ್ದರ್ಜೆಗೇರಿಸಲಾಗುವುದು. ಸ್ಥಳೀಯ ಮೇಕೆ ತಳಿಗಳ ಉನ್ನತೀಕರಣಕ್ಕಾಗಿ ಮೈಸೂರಿನಲ್ಲಿ ಬೋಯರ್ ಮೇಕೆ ತಳಿ ಸಂವರ್ಧನಾ ಕೇಂದ್ರವನ್ನು ಸ್ಥಾಪಿಸಲಾಗುವುದು. ಪಶುವೈದ್ಯರು ಮತ್ತು ಪಶುವೈದ್ಯಕೀಯ ವಿದ್ಯಾರ್ಥಿಗಳಿಗೆ, ಬೆಂಗಳೂರು ಹಾಗೂ ಬೀದರ್‌ನಲ್ಲಿ ಶ್ವಾನ ಸಂತಾನ ನಿಯಂತ್ರಣ ತರಬೇತಿ ಕೇಂದ್ರವನ್ನು ಸ್ಥಾಪಿಸಲಾಗುವುದು.

5 ಕೋಟಿ ರೂ. ವೆಚ್ಚದಲ್ಲಿ ಫಲಧಾರೆ ಶಿಬಿರ: ಜಾನುವಾರುಗಳ ಸಂತಾನೋತ್ಪತ್ತಿ ಸಮಸ್ಯೆಗಳನ್ನು ನಿವಾರಿಸಲು ವರ್ಷಕ್ಕೊಂದು ಕರು ಎಂಬ ಘೋಷವಾಕ್ಯದೊಂದಿಗೆ ರಾಜ್ಯದ 1,000 ಗ್ರಾಮ ಪಂಚಾಯಿತಿಗಳಲ್ಲಿ ಫಲಧಾರೆ ಶಿಬಿರಗಳನ್ನು 5 ಕೋಟಿ ರೂ. ವೆಚ್ಚದಲ್ಲಿ ಏರ್ಪಡಿಸಲಾಗುವುದು. ಪಶುಗಳಲ್ಲಿನ ರೋಗಗಳನ್ನು ನಿಖರವಾಗಿ ಪತ್ತೆ ಹಚ್ಚಲು ರಾಜ್ಯದಲ್ಲಿ ಪ್ರಪ್ರಥಮವಾಗಿ ಬೆಂಗಳೂರು ಹಾಗೂ ಬೀದರ್‌ನ ಪಶುವೈದ್ಯಕೀಯ ಮಹಾವಿದ್ಯಾಲಯದ ಪಶು ಆಸ್ಪತ್ರೆಗಳಲ್ಲಿ ಜಾನುವಾರುಗಳ ಸಿ.ಟಿ. ಸ್ಕ್ಯಾನಿಂಗ್ ಕೇಂದ್ರಗಳನ್ನು ಸ್ಥಾಪಿಸಲಾಗುವುದು.



ಯಾವ ಇಲಾಖೆಗೆ ಎಷ್ಟು ಅನುದಾನ

ಕೆರೆ ಪುನಃಶ್ಚೇತನ	ಭದ್ರಾ ಮೇಲ್ದಂಡೆ	ಸೌರ ವಿದ್ಯುತ್
1,793 ಕೋಟಿ ರೂ.	11,343 ಕೋಟಿ ರೂ.	10,500 ಕೋಟಿ ರೂ.

■ ಉಡುತೊರೆಹಳ್ಳ ಯೋಜನೆಗೆ 490 ಕೋಟಿ ರೂ.



ಚಾಮರಾಜನಗರದ ಹನೂರು ತಾಲೂಕಿನಲ್ಲಿ ಅಂತರ್ಜಲ ಹೆಚ್ಚಿಸಿ ಕುಡಿಯುವ ನೀರು ಹಾಗೂ 12 ಸಾವಿರ ಎಕರೆ ಬಾಧಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಒದಗಿಸಲು ಉಡುತೊರೆಹಳ್ಳ ಯೋಜನೆಯನ್ನು 490 ಕೋಟಿ ರೂ. ಮೊತ್ತದಲ್ಲಿ ಕೈಗೆತ್ತಿಕೊಳ್ಳಲು ತಿಳಿಸಲಾಗಿದೆ.

ಹೆಬ್ಬಾಳ-ನಾಗವಾರ ಕಣಿವೆಯ ಮೂರನೇ ಹಂತದಲ್ಲಿ ಶಿಡ್ಲಘಟ್ಟದ ಅಮಾನಿ ಕೆರೆಯಿಂದ ಶಿಡ್ಲಘಟ್ಟ ತಾಲ್ಲೂಕಿನ 45 ಕೆರೆಗಳಿಗೆ ಮತ್ತು ಚಿಂತಾಮಣಿ ತಾಲೂಕಿನ 119 ಕೆರೆಗಳೂ ಸೇರಿ ಒಟ್ಟಾರೆ 164 ಕೆರೆಗಳಿಗೆ 237 ಕೋಟಿ ರೂ. ಅಂದಾಜು ಮೊತ್ತದಲ್ಲಿ ನೀರು ತುಂಬಿಸುವ ಯೋಜನೆ ಹಾಗೂ ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆ ಮತ್ತು ನಂದಗುಡಿ ಹೋಬಳಿಗಳ 59 ಕೆರೆಗಳಿಗೆ ಎಚ್.ಎನ್ ವ್ಯಾಲಿ ಯೋಜನೆಯಿಂದ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಏತ ನೀರಾವರಿ ಮೂಲಕ ತುಂಬಿಸುವ ಕಾಮಗಾರಿಯನ್ನು 140 ಕೋಟಿ ರೂ. ಅಂದಾಜು ಮೊತ್ತದಲ್ಲಿ ಅನುಷ್ಠಾನಕ್ಕೆ ಬಜೆಟ್‌ನಲ್ಲಿ ನಿರ್ಧರಿಸಲಾಗಿದೆ.

ಬಜೆಟ್ ಮಾತು



ಸಾಲ ಮಾಡುತ್ತಿದ್ದೀರಿ, ಸರಿ. ಅದನ್ನು ಏನಕ್ಕೆ ಬಳಕೆ ಮಾಡುತ್ತಿದ್ದೀರಿ? ಸಾಲಕ್ಕೆ ತಕ್ಕಂತೆ ಬಂಡವಾಳ ವೆಚ್ಚವೂ ಆಗಬೇಕಲ್ಲವೇ? ದುರಂತವೆಂದರೆ, ಬಂಡವಾಳ ವೆಚ್ಚ ಎಲ್ಲಿದೆಯೋ ಕಳೆದ ಮೂರು ವರ್ಷಗಳಿಂದ ಅಲ್ಲೇ ಇದೆ. ಇವರು ಸಾಲ ಮಾಡಿ ಮೋಜು ಮಾಡುತ್ತಿದ್ದಾರೆ. ಅನುತ್ಪಾದಕ ವೆಚ್ಚಕ್ಕೆ ಹಣ ಪೋಲಾಗುತ್ತಿದೆ.

■ **ಎಚ್.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವ

ಹೊಸ ದಿಗಂತ
ಶನಿವಾರ, 7 ಮಾರ್ಚ್ 2026
ಹುಬ್ಬಳ್ಳಿ



75 ನೀರಾವರಿ ಕಾಮಗಾರಿಗಳ ಅನುಷ್ಠಾನಕ್ಕೆ ಎಂಟು ಸಾವಿರ ಕೋಟಿ ರೂ.

ಅಂತರ್ಜಲ ವೃದ್ಧಿಗೆ ಆದ್ಯತೆ

ಕರೆ ತುಂಬುವ ಮತ್ತು ನೀರಾವರಿಗೆ ಸೌಲಭ್ಯ ಕಲ್ಪಿಸಲಾಗಿದ್ದು, ಕೃಷ್ಣಾ, ಕಾವೇರಿ, ಗೋದಾವರಿ ಹಾಗೂ ಇತರೆ ನದಿ ಕಣಿವೆಗಳಲ್ಲಿ ಒಟ್ಟಾರೆ 8,045 ಕೋಟಿ ರೂ. ಮೊತ್ತದ 75 ನೀರಾವರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ನಿರ್ಧರಿಸಲಾಗಿದೆ.

2025-26ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಏತ ನೀರಾವರಿ, ಚೆಕ್ ಡ್ಯಾಂ, ಕೆರೆಗಳ ಪುನಃಶ್ಚೇತನ ಅಭಿವೃದ್ಧಿ ಮುಂತಾದ 112 ಕಾಮಗಾರಿಗಳನ್ನು 1,793 ಕೋಟಿ ರೂ. ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಅನುಮೋದಿಸಿದೆ. ಜಲಸಂಪನ್ಮೂಲ ಇಲಾಖೆ ವ್ಯಾಪ್ತಿಯ ನಾಲ್ಕು ನಿಗಮಗಳಲ್ಲಿ ಪೂರ್ಣಗೊಳ್ಳುವ ಹಂತದಲ್ಲಿನ 12 ನೀರಾವರಿ ಯೋಜನೆಗಳು, 22 ಕೆರೆ ತುಂಬುವ ಯೋಜನೆಗಳು ಮತ್ತು ಮೂರು ಆಧುನೀಕರಣ ಯೋಜನೆಗಳನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸಿ 1.16 ಲಕ್ಷ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಘೋಷಿಸಲಾಗಿದೆ.

ರಾಜ್ಯದ ಕಾಡಾ ಪ್ರಾಧಿಕಾರದಲ್ಲಿ ಹತ್ತಿಕುಣಿ ಹಾಗೂ ತುಂಗಭದ್ರಾ, ಎಡದಂಡೆ ಶಾಖಾ ಕಾಲುವೆ ವ್ಯಾಪ್ತಿಯಲ್ಲಿ ಬರುವ 4,745 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶದಲ್ಲಿ ನೀರಿನ ಬಳಕೆಯ ದಕ್ಷತೆಯನ್ನು ಹೆಚ್ಚಿಸುವ ಉದ್ದೇಶದಿಂದ ಪ್ರಷರ್ ಪೈಪ್ ನೆಟ್‌ವರ್ಕ್ ಪದ್ಧತಿಯನ್ನು ಅಳವಡಿಸಿ ನೀರಾವರಿ ವ್ಯವಸ್ಥೆಯನ್ನು ಆಧುನೀಕರಿಸುವುದಾಗಿ ಬಜೆಟ್‌ನಲ್ಲಿ ತಿಳಿಸಲಾಗಿದೆ.

ನೀರಾವರಿ ಯೋಜನೆ ಕಾಮಗಾರಿಗಳಿಗೆ ಆದ್ಯತೆ: ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳ ಕಾಮಗಾರಿಗಳಿಗೆ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದ್ದು, 2ನೇ ಹಂತದ ಎತ್ತಿನಹೊಳೆ ಪೂರ್ಣಗೊಳಿಸುವುದು, ಭದ್ರಾ ಮೇಲ್ದಂಡೆ ಯೋಜನೆಗೆ ವೇಗ ಮತ್ತು ಕೃಷ್ಣಾ ಮೇಲ್ದಂಡೆ 3ನೇ ಹಂತದ ಯೋಜನೆ ಭೂ ಸ್ವಾಧೀನ ಪ್ರಕ್ರಿಯೆ ಕೈಗೊಳ್ಳುವುದಾಗಿ ಸರ್ಕಾರ ಹೇಳಿದೆ.

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ 2ನೇ ಹಂತದಲ್ಲಿ ಬಾಕಿ ಇರುವ 18.73 ಕಿ.ಮೀ ಉದ್ದದ ಕಾಲುವೆ ಕಾಮಗಾರಿಗಳನ್ನು ಶೀಘ್ರವೇ ಪೂರ್ಣಗೊಳಿ, ಹೆಚ್ಚುವರಿಯಾಗಿ ನೀರನ್ನು ಸಂಗ್ರಹಿಸಿ ಸದ್ಬಳಕೆ ಮಾಡಿಕೊಳ್ಳಲು ಕೊರಟಗೆರೆ ತಾಲ್ಲೂಕಿನ ವಡೇರಹಳ್ಳಿ ಸಮೀಪ 1.2 ಟಿಎಂಸಿ ಸಾಮರ್ಥ್ಯದ ಸಮತೋಲನಾ ಜಲಾಶಯ ನಿರ್ಮಾಣ ಮಾಡುವುದು.

ಭದ್ರಾ ಮೇಲ್ದಂಡೆ ಯೋಜನೆಗೆ 11,343 ಕೋಟಿ ರೂ.ಗಳ ವೆಚ್ಚ ಭರಿಸಲಾಗಿದೆ. ಸುಮಾರು 6 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಅಜ್ಜಂಪುರ ತಾಲ್ಲೂಕಿನ ಅಬ್ಬಿನಹೊಳಲು ಗ್ರಾಮದ ಭೂ ಸಮಸ್ಯೆ ಬಗೆಹರಿಸಲಾಗಿದೆ. ಇದರಿಂದಾಗಿ 135 ಕಿ.ಮೀ ಉದ್ದದ ಚಿತ್ರದುರ್ಗ ಶಾಖಾ ಕಾಲುವೆ ಹಾಗೂ ಇದರಡಿ ಬರುವ ಫೀಡರ್ ಕಾಮಗಾರಿಗಳನ್ನು 2027ನೇ ಸಾಲಿನಲ್ಲಿ ಪೂರ್ಣಗೊಳಿಸಿ 157 ಕೆರೆಗಳನ್ನು ತುಂಬಿಸಲಾಗುವುದು ಎಂದು ಘೋಷಣೆ ಮಾಡಲಾಗಿದೆ. 3ನೇ ಹಂತದ ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಮಗಾರಿಯಿಂದ ಮುಳುಗಡೆಯಾಗುವ ಜಮೀನುಗಳು ಹಾಗೂ ನೀರಾವರಿ ಕಾಲುವೆ ಜಾಲಕ್ಕೆ ಅಗತ್ಯವಿರುವ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ರೈತರು ಮತ್ತು ಸಂತ್ರಸ್ತರ ಖುಷ್ಕಿ ಜಮೀನಿಗೆ ಪ್ರತಿ ಎಕರೆಗೆ 30 ಲಕ್ಷ ರೂ. ಹಾಗೂ ತರಿ ಜಮೀನಿಗೆ ಪ್ರತಿ ಎಕರೆಗೆ 40 ಲಕ್ಷ ರೂ. ನಿಗದಿಪಡಿಸಲಾಗಿದೆ. ಒಪ್ಪಂದದ ಐತೀರ್ಪುಗಳ ಮುಖಾಂತರ ಜಮೀನನ್ನು ಸ್ವಾಧೀನಪಡಿಸುವ ಪ್ರಕ್ರಿಯೆಯನ್ನು ಪ್ರಸಕ್ತ ವರ್ಷದಲ್ಲಿ ಪ್ರಾರಂಭಿಸಲು ನಿರ್ಧರಿಸಲಾಗಿದೆ.



- ಎಲ್ಲಾ ಜಿಲ್ಲೆಗಳ 112 ಕೆರೆ ಕಾಮಗಾರಿಗಳಿಗೆ 1,793 ಕೋಟಿ ರೂ.
- 1.16 ಲಕ್ಷ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ

- ಎತ್ತಿನಹೊಳೆ, ಭದ್ರಾ-ಕೃಷ್ಣಾ ಮೇಲ್ದಂಡೆ ಯೋಜನೆಗಳಿಗೆ ಒತ್ತು
- ಕೃಷ್ಣಾ, ಕಾವೇರಿ, ಗೋದಾವರಿ ನದಿ ಕಣಿವೆಗಳಲ್ಲಿ ನೀರಾವರಿ ಕಾಮಗಾರಿ
- ತುಂಗಭದ್ರಾಗೆ ಪರ್ಯಾಯ ಸಮತೋಲನಾ ಜಲಾಶಯ ನಿರ್ಮಾಣ
- ಕೇಂದ್ರದಿಂದ ಅರಣ್ಯ ತೀರುವಳಿ ದೊರೆತ ಕೂಡಲೇ ಮಹದಾಯಿ ಕಾಮಗಾರಿ ಪ್ರಾರಂಭ

650 ಕೋಟಿ ರೂ. ವೆಚ್ಚದಲ್ಲಿ 119 ಕೆರೆಗಳಿಗೆ ನೀರು

ಬೆಂಗಳೂರಿನ ವೃಷಭಾವತಿ ವ್ಯಾಲಿಯಿಂದ 2ನೇ ಹಂತದಲ್ಲಿ ಸಂಸ್ಕರಿಸಿದ 308 ಎಂಎಲ್‌ಡಿ ನೀರಿನಿಂದ 259 ಕೆರೆಗಳನ್ನು ತುಂಬಿಸುವ ಮೂಲ ಯೋಜನೆಯ ಪೈಕಿ ಗೋಪಾಲಪುರ ಕೆರೆಯಿಂದ ನೆಲಮಂಗಲ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ 119 ಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆಯನ್ನು 650 ಕೋಟಿ ರೂ.ಗಳಲ್ಲಿ ಕೈಗೆತ್ತಿಕೊಳ್ಳಲಾಗುವುದು.



ಈ ಬಜೆಟ್‌ನಲ್ಲಿ ಎಐ ತಂತ್ರಜ್ಞಾನದಿಂದ ರೈತ ಕರೆ ಕೇಂದ್ರ, ಉನ್ನತಿ, ಎಪಿಎಂಸಿಗಳ ಸಂಪೂರ್ಣ ಡಿಜಿಟಲೀಕರಣ ಯೋಜನೆಗಳು ಕೃಷಿಕರ ಬದುಕಿನ ಬದಲಾವಣೆಗೆ ಪೂರಕವಾಗಲಿವೆ.

■ **ಶಿವಾನಂದ ಪಾಟೀಲ,** ಸಚಿವ

ಕೃಷ್ಣಾ ಮೇಲ್ದಂಡೆ ಯೋಜನೆಗೆ ಅಗತ್ಯವಾದ ಭೂಸ್ವಾಧೀನಕ್ಕೆ ಮುಖ್ಯಮಂತ್ರಿಗಳು ಪ್ರತಿ ಎಕರೆ ಖುಷ್ಕಿ ಜಮೀನಿಗೆ 30 ಲಕ್ಷ ರೂ ಮತ್ತು ತರಿ ಜಮೀನಿಗೆ 40 ಲಕ್ಷ ರೂ. ನಿಗದಿ ಪಡಿಸಿರುವುದು ರೈತರಿಗೆ ಜಯ.

■ **ಎಂ.ಬಿ.ಪಾಟೀಲ್,** ಕೈಗಾರಿಕಾ ಸಚಿವ

56 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವ ತೀರ್ಮಾನ ಮಾಡಿದ್ದಾರೆ. ರೈತ ಸಮುದಾಯಕ್ಕೆ 30 ಸಾವಿರ ಕೋಟಿ ರೂ. ಸಾಲ ನೀಡುವ ತೀರ್ಮಾನ ಮಾಡಿದ್ದಾರೆ.

■ **ಡಾ.ಜಿ.ಪರಮೇಶ್ವರ್,** ಗೃಹ ಸಚಿವ

ಸಿಎಂ ಸೌರ ಕೃಷಿ ಯೋಜನೆ ಎಂಬ ಹೊಸ ಕಾರ್ಯಕ್ರಮವನ್ನು ಘೋಷಿಸುವ ಮೂಲಕ ಕೃಷಿ ಪಂಪ್ ಸೆಟ್‌ಗಳಿಗೆ ಹಗಲು ವೇಳೆ 7 ತಾಸು ವಿದ್ಯುತ್ ಪೂರೈಸುವ ಬದ್ಧತೆಯನ್ನು ಸಾಕಾರಗೊಳಿಸುತ್ತಿದ್ದಾರೆ.


■ **ಕೆ.ಜೆ.ಜಾರ್ಜ್,** ಇಂಧನ ಸಚಿವ

ಸಹಕಾರಿ ನೂಲಿನ ಗಿರಣಿಗಳನ್ನು ಪ್ರೋತ್ಸಾಹಿಸಲು ಪ್ರತಿ ಯೂನಿಟ್‌ಗೆ 3 ರೂ.ರಂತೆ ವಿದ್ಯುತ್ ಸಹಾಯಧನ ನೀಡಿಕೆ. 2026-27ನೇ ಸಾಲಿನಲ್ಲಿ 75 ಕೋಟಿ ರೂ.ಗಳ ಅನುದಾನ ಒದಗಿಸುವ ನಿರ್ಧಾರ ಸ್ವಾಗತಾರ್ಹ.

■ **ಬಿ.ಆರ್. ಗಣೇಶ್ ರಾವ್,** ಅಧ್ಯಕ್ಷರು, ಕಾಸಿಯಾ

ಕರಾವಳಿ ಪ್ರದೇಶಗಳಲ್ಲಿ ಸಂಪರ್ಕ ಸೇತುವೆಗಳ ನಿರ್ಮಾಣಕ್ಕೆ ಸಂಕಲ್ಪ

ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ಸಂಪರ್ಕ ರಹಿತ ಹಳ್ಳಿಗಳಿಗೆ ಮಳೆಗಾಲದಲ್ಲಿ ಜೀವನಾಡಿಯಾಗುವ ಸಣ್ಣ ಸೇತುವೆಗಳ (ಕಾಲುಸಂಕ) ನಿರ್ಮಾಣಕ್ಕೆ ಸರ್ಕಾರ ಒತ್ತು ನೀಡಿದ್ದು, ಸುರಕ್ಷತಾ ದೃಷ್ಟಿಯಿಂದ 300 ಕಾಲುಸಂಕಗಳನ್ನು ನಿರ್ಮಿಸಲಿದೆ.



ಕಳೆದ ವರ್ಷದಲ್ಲಿ 216 ಸೇತುವೆಗಳ ನಿರ್ಮಾಣ, 288 ಸೇತುವೆ ದುರಸ್ತಿ ಹಾಗೂ 386 ಕಾಲುಸಂಕಗಳ ನಿರ್ಮಾಣ ಕಾಮಗಾರಿಗಳನ್ನು 2 ಸಾವಿರ ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೊಳ್ಳಲು ಅನುಮೋದಿಸಲಾಗಿದೆ. ಈ ಕಾರ್ಯಕ್ರಮವನ್ನು ಮುಂದುವರೆಸಿ ಸೇತುವೆಗಳ ನಿರ್ಮಾಣಕ್ಕಾಗಿ ಮುಂದಿನ ಎರಡು ವರ್ಷಗಳಲ್ಲಿ 2 ಸಾವಿರ ಕೋಟಿ ರೂ. ಮೊತ್ತವನ್ನು ಒದಗಿಸಲಾಗುತ್ತದೆ. ಜತೆಗೆ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಹಂತ -5 ಘಟ್ಟ-2 ರ ಅಡಿ 1,846 ಕಿ.ಮೀ. ಉದ್ದದ ರಸ್ತೆಯನ್ನು 5 ಸಾವಿರ ಕೋಟಿ ರೂ. ಮೊತ್ತದಲ್ಲಿ ಅಭಿವೃದ್ಧಿಪಡಿಸಲಾಗಲಿದೆ. ಹಾಗೂ ಪ್ರಸಕ್ತ ಸಾಲಿನ ಲೋಕೋಪಯೋಗಿ ಇಲಾಖೆಯ ವಿವಿಧ ಮುಂದುವರೆದ ಯೋಜನೆ ಅಡಿಯಲ್ಲಿ 2,200 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಗಳನ್ನು ಮತ್ತು 3,500 ಕಿ.ಮೀ. ಉದ್ದದ ಜಿಲ್ಲಾ ರಸ್ತೆಗಳನ್ನು 5,776 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತದೆ.


ಲೋಕೋಪಯೋಗಿ ಇಲಾಖೆಯ ಅಧೀನದ ಆಸ್ತಿ ದಾಖಲೆಗಳನ್ನು ಲ್ಯಾಂಡ್‌ಪ್ಲಾನ್ ಸರ್ವೇ ಮಾಡಿ, ಡಿಜಿಟೈಸೇಷನ್ ಹಾಗೂ ರೆಕಾರ್ಡ್ ರೂಂ ನಿರ್ಮಾಣವನ್ನು ಒಟ್ಟಾರೆ 5 ಕೋಟಿ ರೂ. ಮೊತ್ತದಲ್ಲಿ ಕೈಗೊಳ್ಳಲಾಗುತ್ತದೆ.

ಲೋಕಭವನದ ಆವರಣದಲ್ಲಿನ ಆಡಳಿತಾತ್ಮಕ ಬ್ಲಾಕ್, ಒಳಾಂಗಣ ಕ್ರೀಡಾಂಗಣ ಹಾಗೂ ಅಧಿಕಾರಿಗಳ ವಸತಿ ಗೃಹಗಳನ್ನು 27 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಿಸಲು ಸರ್ಕಾರ ಉದ್ದೇಶಿಸಿದೆ.



ಬಜೆಟ್ ಮಂಡನೆಗೂ ಮುನ್ನ ಆರ್ಥಿಕ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್, ಕಾರ್ಯದರ್ಶಿಗಳಾದ ಪಿ.ಸಿ. ಜಾಫರ್, ಎಂ.ಟಿ. ರೇಜು ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬಜೆಟ್ ಪ್ರತಿಯನ್ನೊಳಗೊಂಡ ಕೆಂಪು ಬಹಿ ಖಾತಾ ಅನ್ನು ಹಸ್ತಾಂತರಿಸಿದರು.

ವೆಚ್ಚ ಯಾವ ಯಾವ ಭಾಗ ಎಷ್ಟೆಷ್ಟು (ಪೈಸೆಗಳಲ್ಲಿ)




ಮಿನಿ ಬಜೆಟ್

ಮೇಕೆದಾಟು, ಮಹದಾಯಿ ಯೋಜನೆಗೆ ವಿಶೇಷ ಒತ್ತು



ಕರ್ನಾಟಕದ ಬಹು ನಿರೀಕ್ಷಿತ ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ, ತಮಿಳುನಾಡು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಕೆಯಾಗಿರುವ ತಕರಾರು ಅರ್ಜಿಗಳು ವಜಾಗೊಂಡಿರುವುದರಿಂದ ಈ ತೀರ್ಪಿನ ಹಿನ್ನೆಲೆಯಲ್ಲಿ, ಯೋಜನೆಯ ಪರಿಷ್ಕೃತ ವಿಸ್ತೃತ ಯೋಜನಾ ವರದಿಯನ್ನು ಶೀಘ್ರವೇ ಸಿದ್ಧಪಡಿಸಿ ಅನುಮೋದನೆಗೆ ಹಾಗೂ ಅರಣ್ಯ ಪ್ರದೇಶದ ಬಳಕೆಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. ಮಹದಾಯಿ ಕಣಿವೆಯ ಕಳಸಾ-ಬಂಡೂರಿ ನಾಲಾ ಯೋಜನೆಗೆ ಕೇಂದ್ರ ಸರ್ಕಾರದಿಂದ ಅರಣ್ಯ ತೀರುವಳಿ ದೊರೆತ ಕೂಡಲೇ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಸಮತೋಲನಾ ಜಲಾಶಯ




ತುಂಗಭದ್ರಾ ಅಣೆಕಟ್ಟಿನ ಶಿಥಿಲಗೊಂಡಿರುವ 33 ಗೇಟ್ ಬದಲಾಯಿಸಿ ಹೊಸ ಗೇಟ್ ಅಳವಡಿಕೆಯನ್ನು ಮುಂಗಾರು ಪೂರ್ವದಲ್ಲಿ ಪೂರ್ಣಗೊಳಿಸಲಾಗುವುದು. ಈ ಹಿನ್ನೆಲೆಯಲ್ಲಿ ತುಂಗಭದ್ರಾ ಜಲಾಶಯದಲ್ಲಿ ಹೂಳಿನ ಶೇಖರಣೆಯಿಂದ ನೀರಿನ ಸಂಗ್ರಹಣಾ ಸಾಮರ್ಥ್ಯದ ಕೊರತೆಯನ್ನು ನೀಗಿಸಲು ಕೊಪ್ಪಳ ಜಿಲ್ಲೆಯ ನವಲಿ ಬಳಿ ಸಮತೋಲನಾ ಜಲಾಶಯ ನಿರ್ಮಾಣ ಸೇರಿದಂತೆ ಇತರೆ ಪರ್ಯಾಯ ಮಾರ್ಗೋಪಾಯಗಳ ಕುರಿತು ಈಗಾಗಲೇ ಚಿಂತಿಸಲಾಗಿದೆ.

ನೋಂದಣಿ ಮುದ್ರಾಂಕ ಇಲಾಖೆಗೆ 29 ಸಾವಿರ ಕೋಟಿ



ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ 2025-26 ಸಾಲಿನಲ್ಲಿ ಫೆಬ್ರವರಿ ತಿಂಗಳ ಅಂತ್ಯದವರೆಗೆ ನೋಂದಣಿ ಮತ್ತು ಮುದ್ರಾಂಕ ಶುಲ್ಕದಿಂದ ಒಟ್ಟು 22,629 ಕೋಟಿ ರೂ. ರಾಜಸ್ವ ಸ್ವೀಕೃತವಾಗಿದ್ದು, ಕಳೆದ ಸಾಲಿಗೆ ಹೋಲಿಸಿದರೆ ಶೇ.12.3ರಷ್ಟು ಬೆಳವಣಿಗೆಯಾಗಿದೆ. ಇನ್ನು 2026-27ನೇ ಸಾಲಿಗೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ 29,000 ಕೋಟಿ ರೂ.ಗಳ ರಾಜಸ್ವ ಗುರಿಯನ್ನು ನಿಗದಿಪಡಿಸಿದೆ.

15,500 ಕೋಟಿ ರೂ. ತೆರಿಗೆ ಸಂಗ್ರಹ ಗುರಿ



ಜನವರಿ ತಿಂಗಳ ಅಂತ್ಯದವರೆಗೆ ದ್ವಿಚಕ್ರ ವಾಹನಗಳ ಮಾರಾಟವು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ.13, ಕಾರುಗಳ ಮಾರಾಟದಲ್ಲಿ ಶೇ.4 ರಷ್ಟು ಹೆಚ್ಚಳವಾಗಿದೆ. 2025-26ನೇ ಸಾಲಿನಲ್ಲಿ ಫೆಬ್ರವರಿ ತಿಂಗಳ ಅಂತ್ಯದವರೆಗೆ ಮೋಟಾರು ವಾಹನ ತೆರಿಗೆಯಿಂದ ಒಟ್ಟು 11,630 ಕೋಟಿ ರೂ.ರಾಜಸ್ವ ಸ್ವೀಕೃತವಾಗಿದ್ದು, ಪ್ರಸಕ್ತ ಸಾಲಿನಲ್ಲಿ ಸಾರಿಗೆ ಇಲಾಖೆಗೆ 15,500 ಕೋಟಿ ರೂ. ತೆರಿಗೆ ಸಂಗ್ರಹ ಗುರಿ ನಿಗದಿಪಡಿಸಲಾಗಿದೆ.

ಅನ್ನಭಾಗ್ಯ ಯೋಜನೆ: 4.54 ಕೋಟಿ ಫಲಾನುಭವಿಗಳು

ಪಡಿತರ ಜತೆಗೆ ಇಂದಿರಾ ಕಿಟ್

ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ಅನ್ನಭಾಗ್ಯ ಯೋಜನೆಯಡಿ ರಾಜ್ಯದ ಬಡವರ ಹಸಿವು ನೀಗಿಸುವ ಉದ್ದೇಶದಿಂದ ಪ್ರಸ್ತುತ ನೀಡಲಾಗುತ್ತಿರುವ ಹೆಚ್ಚುವರಿ ಐದು ಕೆಜಿ ಅಕ್ಕಿಯ ಬದಲಾಗಿ ಪ್ರತಿ ಮಾಹೆ ಪೌಷ್ಟಿಕಾಂಶವುಳ್ಳ ತೊಗರಿಬೇಳೆ, ಸಕ್ಕರೆ, ಉಪ್ಪು ಮತ್ತು ಅಡುಗೆ ಎಣ್ಣೆ ಒಳಗೊಂಡ ಇಂದಿರಾ ಆಹಾರ ಕಿಟ್ ವಿತರಿಸಲು ನಿರ್ಧರಿಸಲಾಗಿದೆ. ಇದಕ್ಕಾಗಿ 2026-27ನೇ ಸಾಲಿನಲ್ಲಿ 6,200 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ ಎಂದು ಸಿದ್ದರಾಮಯ್ಯ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ.

ಅನ್ನಭಾಗ್ಯ ಯೋಜನೆಯಡಿ 4.54 ಕೋಟಿ ಫಲಾನುಭವಿಗಳಿಗೆ ಪ್ರತಿ ಮಾಹೆ ಐದು ಕೆ.ಜಿ ಹೆಚ್ಚುವರಿ ಅಕ್ಕಿಯನ್ನು ಯಶಸ್ವಿಯಾಗಿ ವಿತರಿಸಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಗಾಗಿ 17,167 ಕೋಟಿ ರೂ. ವೆಚ್ಚ ಮಾಡಲಾಗಿದೆ ಎಂದು ಸಿಎಂ ತಿಳಿಸಿದ್ದಾರೆ.

ಎಐ ಆಧಾರಿತ ಸ್ಮಾರ್ಟ್ ಅನ್ನವಾಣಿ : ಆಹಾರ ಧಾನ್ಯಗಳ ವಿತರಣೆಗಾಗಿ ನೀಡಲಾಗುವ ಚಿಲ್ಲರೆ ಹಾಗೂ ಸಗಟು ಲಾಭಾಂಶದ ಪಾವತಿಯಲ್ಲಿ ವಿಳಂಬವನ್ನು ನಿವಾರಿಸಲು ಎಫ್‌ಐಎಸ್‌ಟಿ ಅಪ್ಲಿಕೇಷನ್ ಮೂಲಕ ಲಾಭಾಂಶವನ್ನು ನೇರವಾಗಿ ಪಾವತಿಸಲಾಗುವುದು. ಪ್ರಸ್ತುತ ಜಾರಿಯಲ್ಲಿರುವ ಇಲಾಖೆಯ ಸಹಾಯವಾಣಿ-1967 ವ್ಯವಸ್ಥೆಯನ್ನು ಸ್ವಯಂ ಚಾಲಿತ ದೂರು ಕೇಂದ್ರ, ಧ್ವನಿ ಚಾಟ್‌ಬಾಟ್ ಮತ್ತು ಲೈವ್ ಕರೆ ವರ್ಗಾವಣೆ ವ್ಯವಸ್ಥೆಗಳನ್ನು ಒಳಗೊಂಡ ಎಐ ಆಧಾರಿತ ಸ್ಮಾರ್ಟ್ ಅನ್ನವಾಣಿಯನ್ನಾಗಿ ಪರಿವರ್ತಿಸಲಾಗುವುದು ಎಂದು ಘೋಷಣೆ ಮಾಡಲಾಗಿದೆ.



ಆಹಾರ ಭದ್ರತೆ ವಿಸ್ತರಣೆ

ದಾಸೋಹ ಯೋಜನೆಯಡಿ ಈಗಾಗಲೇ ರಾಜ್ಯಾದ್ಯಂತ **274** ಕಲ್ಯಾಣ ಸಂಸ್ಥೆಗಳ **32,059** ಫಲಾನುಭವಿಗಳಿಗೆ **14** ಕೋಟಿ ರೂ. ವೆಚ್ಚದಲ್ಲಿ ಆಹಾರ ಭದ್ರತೆಯನ್ನು ಒದಗಿಸಲಾಗುತ್ತಿದೆ. ಪ್ರಸಕ್ತ ವರ್ಷದಲ್ಲಿ **34** ಹೊಸ ಕಲ್ಯಾಣ ಸಂಸ್ಥೆಗಳಲ್ಲಿ ಇರುವ **6,701** ಫಲಾನುಭವಿಗಳಿಗೂ ವಿಸ್ತರಿಸಲಾಗುವುದೆಂದು ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದೆ. ಆ ಮೂಲಕ ಆಹಾರ ಭದ್ರತೆಯನ್ನು ವಿಸ್ತರಣೆ ಮಾಡಲಾಗಿದೆ ಎಂದು ಬಜೆಟ್‌ಲ್ಲಿ ತಿಳಿಸಲಾಗಿದೆ.

50 ಹೊಸ ವಿದ್ಯಾರ್ಥಿನಿಲಯ ಸ್ಥಾಪನೆಗೆ ತಲಾ 5 ಕೋಟಿ ರೂ

ವಿದ್ಯಾರ್ಥಿ ಶೈಕ್ಷಣಿಕ ಪ್ರಗತಿಗೆ ಒತ್ತು

ರಾಜ್ಯದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಮತ್ತು ಸಮುದಾಯಗಳ ಆರ್ಥಿಕ ಸಬಲೀಕರಣಕ್ಕೆ ಸರ್ಕಾರ ಮಹತ್ವದ ಕೊಡುಗೆ ನೀಡಿದೆ. ಬೆಂಗಳೂರು, ಮೈಸೂರು ಸೇರಿದಂತೆ ಪ್ರಮುಖ ಜಿಲ್ಲೆಗಳಲ್ಲಿ ಮೂಲಭೂತ ಸೌಕರ್ಯಗಳ ವಿಸ್ತರಣೆಗೆ ಕೋಟ್ಯಂತರ ರೂಪಾಯಿ ಅನುದಾನ ಘೋಷಿಸಲಾಗಿದೆ.

ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ ಸೇರಿದಂತೆ 9 ಜಿಲ್ಲೆಗಳಲ್ಲಿ 150 ಸಂಖ್ಯಾಬಲದ 50 ಹೊಸ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗುವುದು. ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಹಾಸ್ಟೆಲ್‌ಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ತಲಾ 5 ಕೋಟಿ ರೂ.ಗಳಂತೆ ಒಟ್ಟು 50 ಕಟ್ಟಡಗಳನ್ನು ನಿರ್ಮಿಸಲು ನಿರ್ಧರಿಸಲಾಗಿದೆ.

ಸಮುದಾಯಗಳ ಅಭಿವೃದ್ಧಿ: ಮಡಿವಾಳ ಸಮಾಜದವರಿಗಾಗಿ 75 ಲಕ್ಷ ರೂ. ವೆಚ್ಚದಲ್ಲಿ ಆಧುನಿಕ ಲಾಂಡ್ರಿ ಘಟಕಗಳು ಮತ್ತು ಸವಿತಾ ಸಮಾಜದವರಿಗೆ ಸಲೂನ್ ತೆರೆಯಲು ಶೇ.4 ರಷ್ಟು ದರದಲ್ಲಿ 10 ಲಕ್ಷ ರೂ.ಗಳ ವರೆಗೆ ಸಾಲ ಸೌಲಭ್ಯ ನೀಡಲಾಗುವುದು. ಕುಂಬಾರ, ತಿಗಳ, ಕೊಡವ, ಗಾಣಿಗ, ಉಪ್ಪಾರ ಸಮುದಾಯದ ಜನರ ಆರ್ಥಿಕ ಏಳಿಗೆಗಾಗಿ ನೆರವು ನೀಡಲು ಪ್ರತ್ಯೇಕ ನಿಗಮಗಳನ್ನು ಸ್ಥಾಪಿಸಲಾಗಿದೆ.

ಮೂಲಭೂತ ಸೌಕರ್ಯದ ಹಂಚಿಕೆ: ವಿದ್ಯಾರ್ಥಿನಿಲಯಗಳ ದುರಸ್ತಿಗೆ 50 ಕೋಟಿ ರೂ. ಹೊಸ ಹಾಸ್ಟೆಲ್ ಕಟ್ಟಡಗಳಿಗೆ 250 ಕೋಟಿ ರೂ. (ತಲಾ 5 ಕೋಟಿಯಂತೆ 50 ಕಟ್ಟಡ) ಹಾಸ್ಟೆಲ್ ಮೂಲಸೌಕರ್ಯಕ್ಕೆ 30 ಕೋಟಿ ರೂ. ಹೊಸ ಲಾಂಡ್ರಿ ಘಟಕಗಳಿಗೆ 75 ಲಕ್ಷ ರೂ. (ತಲಾ ಒಂದು ಘಟಕಕ್ಕೆ)



- 250 ಇಂಜಿನಿಯರಿಂಗ್ ಪದವೀಧರರಿಗೆ ಎಐ ತರಬೇತಿ ಪಡೆಯಲು ತಲಾ 2 ಲಕ್ಷ ರೂ. ಸಾಲ
- 2021ರ ವರೆಗಿನ ಸಾಲದ ಅಸಲು ಪಾವತಿಸುವವರಿಗೆ ಒಟಿಎಸ್ ಅಡಿ ಬಡ್ಡಿ ಮನ್ನಾ.
- ಪ್ರವರ್ಗ-1ರ 46 ಅಲೆಮಾರಿ ಸಮುದಾಯದ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಶಿಕ್ಷಣದಲ್ಲಿ ಎಸ್‌ಸಿ/ಎಸ್‌ಟಿ ಮಾದರಿಯ ಸೌಲಭ್ಯ.

2026-2027 ರಾಜ್ಯ ಬಜೆಟ್ ನಾವು ಕಂಡಂತೆ



ಸಿಎಂ ಸಿದ್ದರಾಮಯ್ಯ ಅವರು ಮಂಡಿಸಿದ ದಾಖಲೆಯ ರಾಜ್ಯ ಬಜೆಟ್ ಕರ್ನಾಟಕವನ್ನು ದೀರ್ಘಕಾಲದ ಸಾಲದ ಸುಳಿಗೆ ದೂಡಲಿದ್ದು, ಕಳೆದ 3 ವರ್ಷಗಳಿಂದ ಸತತವಾಗಿ ಏರುತ್ತಿರುವ ಸಾಲದ ಪ್ರಮಾಣದಿಂದ ಆತಂಕ ಸೃಷ್ಟಿಯಾಗಿದೆ. ರಾಜ್ಯ ಬಜೆಟ್ ಮಂಡನೆ ಕುರಿತು ಅಭಿಪ್ರಾಯ ವ್ಯಕ್ತಪಡಿಸಿರುವ ಅವರು, ಪ್ರಸಕ್ತ ಆರ್ಥಿಕ ವರ್ಷದಲ್ಲಿ ರಾಜ್ಯದ ಒಟ್ಟು ಸಾಲ 8.24 ಲಕ್ಷ ಕೋಟಿಗೆ ತಲುಪಿದ್ದು, ಈ ಬಾರಿ ಮತ್ತೆ 1.32 ಲಕ್ಷ ಕೋ. ರೂ. ಸಾಲದ ಘೋಷಣೆ ಮಾಡಲಾಗಿದೆ. ಕಳೆದ 3 ವರ್ಷಗಳಿಂದ ಸಾಲದ ಪ್ರಮಾಣ ಗಣನೀಯ ಏರಿಕೆ ಕಂಡಿದ್ದು, ರಾಜ್ಯದ ಅಭಿವೃದ್ಧಿಯನ್ನು ಸಂಪೂರ್ಣ ಬದಿಗೊತ್ತಿ ಕೇವಲ ಸಾಲದ ಹೊರೆ ಹೆಚ್ಚಿಸುತ್ತಿದೆ.

■ ಡಾ. ಕ್ರಾಂತಿಕಿರಣ, ಬಿಜೆಪಿ ಮುಖಂಡ



ಸಿಎಂ ಸಿದ್ದರಾಮಯ್ಯನವರು ಮಂಡಿಸಿರುವ ಬಜೆಟ್ ವಿಶೇಷವಾಗಿ ಈ ಬಾರಿ ವಿದ್ಯಾರ್ಥಿಗಳ ವಸತಿ ನಿಲಯ, ಗ್ರಂಥಾಲಯ, ಕಾಲೇಜುಗಳ ಸ್ಥಾಪನೆಗೆ ಒತ್ತು ನೀಡಲಾಗಿದೆ. ಜೊತೆಗೆ ಸ್ಪರ್ಧಾ ಪರೀಕ್ಷೆಗಳಿಗೆ ಸಿದ್ಧತೆ ನಡೆಸುವ ವಿದ್ಯಾರ್ಥಿಗಳಿಗೆ ಡಿಜಿಟಲ್ ಗ್ರಂಥಾಲಯ ಕೊಡುಗೆ ನೀಡಿರುವುದು. ಮುಖ್ಯಮಂತ್ರಿಗಳ ಶಿಕ್ಷಣ ಕಾಳಜಿ ಎದ್ದು ಕಾಣುತ್ತದೆ. ಇದರ ಜೊತಗೂಡಿ ಕೃಷಿ, ಗ್ರಾಮೀಣ ಜನರು, ನೀರಾವರಿ, ಕೈಗಾರಿಕೆಗಳಿಗೆ ಉತ್ತೇಜನ ನೀಡಿದ್ದು, ಸರ್ವರ ಸಬಲೀಕರಣದ ಬಜೆಟ್ ಆಗಿದೆ.

■ ರಾಜಶೇಖರ ಮೆಣಸಿನಕಾಯಿ. ಕಾಂಗ್ರೆಸ್ ಮುಖಂಡ




ಸಿಎಂ ಸಿದ್ದರಾಮಯ್ಯ ಅವರು ಜನಪರವಾದ ಹಾಗೂ ರಾಜ್ಯ ಅಭಿವೃದ್ಧಿ ಬಜೆಟ್ ಮಂಡಿಸಿದ್ದಾರೆ. ರಾಜ್ಯದ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಕೋನವಾಗಿದೆ. ಹುಬ್ಬಳ್ಳಿ ಧಾರವಾಡ ನಗರದಲ್ಲಿಯುವ ನಿರುದ್ಯೋಗಿಗಳ ಉದ್ಯೋಗ ಕುರಿತಂತೆ ಕೌಶಲ್ಯ ತರಬೇತಿ ಅಕಾಡೆಮಿ ಸ್ಥಾಪನೆ ನಿರುದ್ಯೋಗಿಗಳಿಗೆ ಆಶಾದಾಯಕವಾಗಲಿದೆ. ಹುಬ್ಬಳ್ಳಿಯಲ್ಲಿ ಬೃಹತ್ ವಾಣಿಜ್ಯ ಸಂಕೀರ್ಣ ನಿರ್ಮಿಸುವುದಾಗಿ ಹೇಳಿದ್ದಾರೆ. ಶಾಲಾ ಕಾಲೇಜುಗಳಲ್ಲಿ ದೌರ್ಜನ್ಯ ತಡೆಯವಲ್ಲಿ ವೇಮುಲಾ ಕಾಯ್ದೆ ಜಾರಿ, ಧಾರವಾಡ ನಗರದಲ್ಲಿ 4 ವಿದ್ಯಾರ್ಥಿ ಕ್ಯಾಂಟಿನ ಸ್ಥಾಪನೆ ಮಾಡುವುದಾಗಿ ಘೋಷಿಸಿದ್ದು, ಸಂತಸದ ಸಂಗತಿ.

■ ಪ್ರೇಮನಾಥ್ ಚಿಕ್ಕತುಂಬಳ. ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ



ರಾಜ್ಯ ಸರ್ಕಾರ ಮಂಡಿಸಿ ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ನೀಡಿರುವ ಅನುದಾನ ಅತ್ಯಂತ ನಿರಾಶದಾಯಕವಾಗಿದೆ. ಶಿಕ್ಷಣ ಕ್ಷೇತ್ರಕ್ಕೆ ಸಮರ್ಪಕವಾಗಿ ಅನುದಾನ ನೀಡದೆ ಸರ್ಕಾರ ನಿರ್ಲಕ್ಷ್ಯ ತೋರಿದೆ. ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಸುಮಾರು 10% ಮಾತ್ರ ಅನುದಾನ ನೀಡಲಾಗಿದೆ ಇದು ಇತರ ರಾಜ್ಯಗಳ ಸರಾಸರಿ ಶಿಕ್ಷಣ ವೆಚ್ಚಕ್ಕಿಂತ ಕಡಿಮೆ ಎಂದು ವಿವಿಧ ಅಧ್ಯಯನಗಳು ಸೂಚಿಸುತ್ತವೆ. ಶಿಕ್ಷಣ ವ್ಯವಸ್ಥೆಯ ಬಲವರ್ಧನೆಗಾಗಿ ಹೆಚ್ಚಿನ ಹೂಡಿಕೆ ಅಗತ್ಯವಿರುವ ಸಂದರ್ಭದಲ್ಲಿ ಸರ್ಕಾರದ ಈ ಕ್ರಮ ವಿದ್ಯಾರ್ಥಿಗಳ ಭವಿಷ್ಯಕ್ಕೆ ಹಾನಿಕಾರಕವಾಗಿದೆ. ರಾಜ್ಯದಲ್ಲಿ ಶಿಕ್ಷಣದ ಗುಣಮಟ್ಟ ಕುಸಿತದ ಸಮಸ್ಯೆ ಎದುರಿಸುತ್ತಿವೆ. ಇಂತಹ ಸಂದರ್ಭದಲ್ಲಿ ಸರ್ಕಾರ ಶಿಕ್ಷಣ ಕ್ಷೇತ್ರಕ್ಕೆ ಸಮರ್ಪಕ ಪ್ರಮಾಣದ ಹಣ ನೀಡದೆ ಬೇರೆ ಕ್ಷೇತ್ರಗಳಿಗೆ ಹೆಚ್ಚಿನ ಅನುದಾನ ನೀಡಿರುವುದು ಅಖಿಲಭಾರತ ವಿದ್ಯಾರ್ಥಿ ಪರಿಷತ್ ಖಂಡಿಸುತ್ತದೆ.

■ ದರ್ಶನ್ ಹೆಗಡೆ, ರಾಜ್ಯ ಕಾರ್ಯದರ್ಶಿ ಎಬಿವಿಪಿ ಕರ್ನಾಟಕ ಉತ್ತರ ಪ್ರಾಂತ



ಸಿಎಂ ಸಿದ್ದರಾಮಯ್ಯ ಅವರು ಮಂಡಿಸಿದ 2026-27ನೇ ಸಾಲಿ ಬಜೆಟ್ ರೈತರು ಸೇರಿದಂತೆ ಎಲ್ಲಾ ಸಮುದಾಯಗಳಿಗೂ ಪೂರಕವಾಗಿದ್ದು, ಮುಖ್ಯಮಂತ್ರಿ ಸೌರ ಕೃಷಿ ಯೋಜನೆ ಎಂಬ ಹೊಸ ಕಾರ್ಯಕ್ರಮದ ಮೂಲಕ ರೈತರ ಕೃಷಿ ಪಂಪ್ ಸೆಟ್‌ಗಳಿಗೆ ಹಗಲು ವೇಳೆ 7 ತಾಸು ವಿದ್ಯುತ್ ಪೂರೈಸುವ ಬದ್ಧತೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಮುಂದಾಗಿದ್ದಾರೆ. ಶಿಕ್ಷಣ, ಆರೋಗ್ಯ, ಕೃಷಿ, ಕೈಗಾರಿಕೆ ಸೇರಿದಂತೆ ಎಲ್ಲ ಕ್ಷೇತ್ರಗಳಿಗೂ ಒತ್ತು ನೀಡಿದ್ದಾರೆ. ಇದೊಂದು ಮುಂದಾಲೋಚನೆ ಹಾಗೂ ಅಭಿವೃದ್ಧಿಗೆ ಪೂರಕ ಬಜೆಟ್ ಆಗಿದೆ.

■ ಸೈಯದ್ ಅಜೀಮ್‌ಪೀರ್ ಎಸ್. ಖಾದ್ರಿ. ಹೆಸ್ಕಾಂ ಅಧ್ಯಕ್ಷ



ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಮಹತ್ವದ ಆದ್ಯತೆ ನೀಡಿದೆ. ಶಾಲಾ ಶಿಕ್ಷಣದ ಅಭಿವೃದ್ಧಿಗೆ ಒತ್ತು ನೀಡಲಾಗಿದ್ದು, ಸುಮಾರು 800 ಹೊಸ ಕರ್ನಾಟಕ ಪಬ್ಲಿಕ್ ಶಾಲೆಗಳ ಆರಂಭ, ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಶಿಕ್ಷಕರ ಖಾಲಿ ಹುದ್ದೆಗಳ ಭರ್ತಿಮಾಡಿರುವುದಾಗಿ ತಿಳಿಸಿದ್ದು, ಶ್ಲಾಘನೀಯ. ಉನ್ನತ ಶಿಕ್ಷಣದ ಉತ್ತೇಜನಕ್ಕೂ ಸರ್ಕಾರ ವಿಶೇಷ ಗಮನ ಹರಿಸಿದ್ದು, ಪದವಿ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳ ಅಭಿವೃದ್ಧಿ, ವಿಶ್ವವಿದ್ಯಾಲಯಗಳಲ್ಲಿ ಬೋಧಕ ಹುದ್ದೆಗಳ ಭರ್ತಿ, ಹೊಸ ಕೋರ್ಸ್‌ಗಳ ಪ್ರಾರಂಭ ಹಾಗೂ ವಿದ್ಯಾರ್ಥಿವೇತನದ ವ್ಯವಸ್ಥೆ ಮಾಡುವ ಮೂಲಕ ಹೆಚ್ಚಿನ ಶಿಕ್ಷಣಾವಕಾಶಗಳನ್ನು ಸೃಷ್ಟಿಸಲು ಪ್ರಯತ್ನಿಸಲಾಗಿದೆ. 204 ತಾಲೂಕು ಸಂಪನ್ಮೂಲ ಕೇಂದ್ರಗಳಲ್ಲಿ ಮಾನಸಿಕ ಆರೋಗ್ಯ ಸಲಹೆಗಾರರನ್ನು ನೇಮಿಸುವ ನಿರ್ಧಾರವು ಸಹ ಸಮಯೋಚಿತ ಮತ್ತು ಅಗತ್ಯವಾದ ಕ್ರಮವಾಗಿದೆ.

■ ಡಾ. ದುಂಡಪ್ಪ ಬಡಲಕ್ಕನವರ. ಪ್ರಾಧ್ಯಾಪಕ.



ಹುಬ್ಬಳ್ಳಿ: ಕೇಂದ್ರ ಸರ್ಕಾರ ಜನೌಷಧಿ ಕುರಿತು ನಗರದ ಕೆಎಂಸಿಆರ್‌ಐ ಆಸ್ಪತ್ರೆ ಸಹಯೋಗದಲ್ಲಿ ಜಾಗೃತಿ ನಡಿಗೆ ನಡೆಯಿತು.

ವಿದ್ಯಾರ್ಥಿಗಳಿಗೆ ಪ್ರಜಾಪ್ರಭುತ್ವದ ಅರಿವು ಇರಲಿ

◆**ಹುಬ್ಬಳ್ಳಿ:** ವಿದ್ಯಾರ್ಥಿಗಳಿಗೆ ಪ್ರಜಾಪ್ರಭುತ್ವದ ಬಗ್ಗೆ ಅರಿವು ಇರಬೇಕು. ದೃಢ ನಿರ್ಧಾರ ಕೈಗೊಳ್ಳುವ ಭಾವನೆ ಕರಗತ ಮಾಡಿಕೊಳ್ಳಬೇಕು ಎಂದು ಕೆಎಲ್‌ಇ ಶಿಕ್ಷಣ ಮಹಾವಿದ್ಯಾಲಯದ ವಿಶ್ರಾಂತ ಪ್ರಾಚಾರ್ಯ ಡಾ.ಲಿಂಗರಾಜ ಮುಳ್ಳಳ್ಳಿ ತಿಳಿಸಿದರು.

ಇಲ್ಲಿಯ ಕೆಎಲ್‌ಇ ವಿವಿ ಆವರಣದಲ್ಲಿರುವ ದೇಶಪಾಂಡೆ ಫೌಂಡೇಶನ್ ಸಭಾಭವನದಲ್ಲಿ ಕೆಎಲ್‌ಇ ಬಿಸಿಎ ಕಾಲೇಜ್ ವತಿಯಿಂದ ಆಯೋಜಿಸಿದ್ದ ಕಲಾಕೃತಿ 2026 ಸಮಾರೋಪ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಶಿಕ್ಷಣ ಎಂದರೆ ಪರಿಸ್ಥಿತಿಗೆ ಹೊಂದಿಕೊಳ್ಳುವುದಾಗಿದೆ. ಯಾರು ಎದುರಾಗು ಪರಿಸ್ಥಿತಿಗೆ ಹೊಂದಿಕೊಳ್ಳುತ್ತಾರೋ ಅವರು ಜೀವನದಲ್ಲಿ ಏನಾದರೂ ಸಾಧಿಸುತ್ತಾರೆ. ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಪ್ರತಿಭೆಗೆ ಪ್ರೋತ್ಸಾಹಿಸುವ ವೇದಿಕೆಗಳಾಗಿವೆ. ಇದರಿಂದ ಜಾಣ್ಮೆ, ಕೌಶಲ್ಯ, ಜಾಗೃತಿ ಮನೋಭಾವ ಹಾಗೂ ಸ್ಪರ್ಧಾತ್ಮಕ ಮನೋಭಾವ ಹೆಚ್ಚಿಸಿಕೊಳ್ಳಲು ಸಾಧ್ಯವಾಗಲಿದೆ ಎಂದರು. ಅಧ್ಯಕ್ಷತೆ ವಹಿಸಿದ ಕೆಎಲ್‌ಇ ಬಿಸಿಎ ಪಿ.ಸಿ ಜಾಬಿನ ಮಹಾವಿದ್ಯಾಲಯದ ಪ್ರಾಚಾರ್ಯ ಸಿದ್ದಲಿಂಗಪ್ಪ ಕಡಕೋಳ ಮಾತನಾಡಿ, ಸ್ಪರ್ಧಾತ್ಮಕ ಯುಗದಲ್ಲಿ ತಂತ್ರಜ್ಞಾನದ ಪ್ರಭಾವ ಬಹಳ ಇದೆ. ಆದ್ದರಿಂದ ವಿದ್ಯಾರ್ಥಿಗಳು ಜಾಗತಿಕ ಮಟ್ಟದಲ್ಲಿ ತಂತ್ರಜ್ಞಾನದಲ್ಲಿ ಗುರುತಿಸಿಕೊಳ್ಳಬೇಕು ಎಂದು ಹೇಳಿದರು. ಪ್ರೊ. ಕೃಪಾಶ್ವಿನಿ , ಸಂಪದಾ ಕುಲಕರ್ಣಿ, ವಾರುಣಿ ಪಾಟೀಲ, ರವಿಕಿರಣ ಬಡಿಗೇರ, ಪೂಜಾ ಪತ್ತಾರ, ಶ್ರೀರಕ್ಷಾ, ಸೋನಿಯಾ, ಅಭಯ ಆರ್., ಅನನ್ಯಾ ಇನಾಮದಾರ ಇದ್ದರು.



ಹುಬ್ಬಳ್ಳಿ: ಇಲ್ಲಿಯ ಕೆಎಲ್‌ಇ ವಿವಿ ಆವರಣದಲ್ಲಿರುವ ದೇಶಪಾಂಡೆ ಫೌಂಡೇಶನ್ ಸಭಾಭವನದಲ್ಲಿ ಕೆಎಲ್‌ಇ ಬಿಸಿಎ ಕಾಲೇಜ್ ವತಿಯಿಂದ ಆಯೋಜಿಸಿದ್ದ ಕಲಾಕೃತಿ 2026 ಸಮಾರೋಪ ಕಾರ್ಯಕ್ರಮ ನಡೆಯಿತು. ಪ್ರೊ. ಕೃಪಾಶ್ವಿನಿ , ಸಂಪದಾ ಕುಲಕರ್ಣಿ, ವಾರುಣಿ ಪಾಟೀಲ, ರವಿಕಿರಣ ಬಡಿಗೇರ, ಪೂಜಾ ಪತ್ತಾರ, ಶ್ರೀರಕ್ಷಾ, ಸೋನಿಯಾ, ಅಭಯ ಆರ್., ಅನನ್ಯಾ ಇನಾಮದಾರ ಇದ್ದರು.

ಜನರ ಮೂಗಿಗೆ ತುಪ್ಪ ಲೇಪನ | ಬಜೆಟ್ ಬಗ್ಗೆ ಪರ–ವಿರೋಧ

ಬಜೆಟ್‌ನಲ್ಲಿ ವಿದ್ಯಾಕಾಶಿ ನಿರೀಕ್ಷೆಗಳು ಹುಸಿ

▶ ಮಹಾಂತೇಶ ಕಣವಿ

◆**ಧಾರವಾಡ:** ಕರ್ನಾಟಕ ಇತಿಹಾಸದಲ್ಲಿ 2026–27ನೇ ಸಾಲಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಮಂಡಿಸಿದ ಒಟ್ಟು ರೂ.4.48 ಲಕ್ಷ ಕೋಟಿ ರೂ. 17ನೇ ಬಜೆಟ್ ರಾಜ್ಯ ಹಾಗೂ ವಿದ್ಯಾಕಾಶಿ ಧಾರವಾಡ ಜಿಲ್ಲೆಯ ಜನರ ನಿರೀಕ್ಷೆಗಳನ್ನು ಹಸಿಗೊಳಿಸಿದೆ!

ಉತ್ತರ ಕರ್ನಾಟಕದ ಹೆಬ್ಬಾಗಿಲು, ವಿದ್ಯಾಕಾಶಿ ಧಾರವಾಡ ಜಿಲ್ಲೆಗೆ ಈವರೆಗೂ ಘೋಷಿಸಿದ ಯೋಜನೆಗಳು ನಿರೀಕ್ಷಿತ ಮಟ್ಟದಲ್ಲಿ ಈಡೇರದ ಅಸಮಾಧಾನದ ಮಧ್ಯೆ ಮಂಡಿಸಿದ ಬಜೆಟ್, ಸಾರ್ವಜನಿಕರ ಭರವಸೆಗೆ ನಿರಾಸೆ ಕಾರ್ಮೋಡ ಕವಿದಿದೆ. ಬೆಣ್ಣೆಹಳ್ಳ ಮತ್ತು ತುಪ್ಪರಿಹಳ್ಳಿ ನೀರವಾರಿ ಯೋಜನೆ ಜೊತೆ ಡಾ. ಪರಮಶಿವಯ್ಯ ಯೋಜನೆ ಅನುಷ್ಠಾನ ಎದುರು ನೋಡುತ್ತಿದ್ದ ಜಿಲ್ಲೆಯ ಜನರ ಕನಸಿಗೆ ಬಜೆಟ್ ತಣ್ಣೀರು ಎರೆಚಿದೆ. ಈ ಬಜೆಟ್‌ನಲ್ಲೂ ಕೂಡ ಸರ್ಕಾರ ಜನರ ಮೂಗಿಗೆ ತುಪ್ಪ ಸವರಿದೆ.



ಜಿಲ್ಲಾ ಆಸ್ಪತ್ರೆ ನೂತನ ಕಟ್ಟಡ ನಿರ್ಮಾಣಕ್ಕೆ 5 ಎಕರೆ ಜಾಗೆ ಹಾಗೂ ರೂ.1000 ಕೋಟಿ ಅನುದಾನ ಮೀಸಲು ಹಾಗೂ ಧಾರವಾಡ ಪಾಲಿಕೆ ಘೋಷಣೆ ಜೊತೆಗೆ ರೂ.100 ಕೋಟಿ ಅನುದಾನ ಮೀಸಲಿಡುವ ಮಹಾನಗರ ಜನತೆ ನಿರೀಕ್ಷೆಯೂ ಹುಸಿಯಾಗಿವೆ.

ಹುಬ್ಬಳ್ಳಿ ಪಾಲಿಕೆಗೆ ವಿಶೇಷ ಪ್ಯಾಕೇಜ್, ಅಣ್ಣಿಗೇರಿ, ಅಳ್ನಾವರ ಮತ್ತು ಹುಬ್ಬಳ್ಳಿ ಗ್ರಾಮೀಣ ತಾಲೂಕಿಗೆ ಹೆಚ್ಚು ಅನುದಾನ, ಪಂ.ಗಂಗೂಬಾಯಿ ಹಾನಗಲ್, ಪಂ. ಡಾ.ಮಲ್ಲಿಕಾರ್ಜುನ ಮನಸೂರ ಮನೆಗಳ ಮ್ಯೂಸಿಯಂ ನಿರೀಕ್ಷೆ ಕೂಡ ಬಜೆಟ್ ನಿರಾಸೆಗೊಳಿಸಿದೆ. ಬೆಣ್ಣೆಹಳ್ಳಿ-ತುಪ್ಪರಿಹಳ್ಳಕ್ಕೆ ಚೆಕ್ ಡ್ಯಾಮ್, ಧಾರವಾಡ ಮಾನಸಿಕ ಆರೋಗ್ಯ-ನರವಿಜ್ಞಾನ ಸಂಸ್ಥೆಗೆ (ಡಿಮಾನ್ಸ್) ಒಂದಿಷ್ಟು ಸೌಲಭ್ಯ, ರಿಂಗ್ ರೋಡ್, ಹೊಸ ಪಿಯು-ಪದವಿ ಕಾಲೇಜು, ವಸತಿ ನಿಲಯ ನಿರೀಕ್ಷೆಗಳು ಕೂಡ ಬಜೆಟ್‌ನಲ್ಲಿ ಈಡೇರಿಲ್ಲ.

ಆಂತರಿಕ ಉತ್ಪನ ಹೆಚಿಸುವಲ್ಲಿ ಮಾನವ ಸಂಪನ್ಮೂಲ ಸದ್ಬಳಕೆ ನೀರಿಕ್ಷೆ ಇತ್ತು. ಆದರೆ, ಬಜೆಟ್‌ನಲ್ಲಿ ಇವ್ಯಾವದಕ್ಕೂ ಮುಖ್ಯಮಂತ್ರಿ ಆಸ್ಪದ ನೀಡದ ಆರೋಪ ಸಾರ್ವಜನಿಕ ವಲಯ, ವಿಪಕ್ಷಗಳಿಂದ ಕೇಳಿ ಬರುತ್ತಿವೆ. ಜನರ ನಿರೀಕ್ಷೆಗೆ ಫಲ ಸಿಕ್ಕಿಲ್ಲ, ಹೊಸ ಯೋಜನೆ ಘೋಷಿಸದೆ, ಆರ್ಥಿಕ ಹೊರೆ ತಪ್ಪಿಸುವ ಜೊತೆಗೆ ಅನಾವೃಷ್ಟಿ ಹೊಡೆತಕ್ಕೆ ನಲುಗಿದ ಆರ್ಥಿಕ ವಲಯಕ್ಕೆ ಚೈತನ್ಯವೂ ತುಂಬಿಲ್ಲ, ಜಿಲ್ಲೆ ಜನತೆ ಬಜೆಟ್ ಮೇಲೆ ಬಹಳ ನಿರೀಕ್ಷೆ ಹೊಂದಿದ್ದು, ಪರ ಹಾಗೂ ವಿರೋಧಕ್ಕೆ ಚರ್ಚೆಗೆ ಗ್ರಾಸವಾಗಿದೆ.

ರಾಜ್ಯ ಬಜೆಟ್‌ನಲ್ಲಿ ಜಿಲ್ಲೆಗೆ ನೀಡಿದ್ದೇನು?

◆**ಧಾರವಾಡ:** ಶೈಕ್ಷಣಿಕ, ಕೈಗಾರಿಕೆ ಹಾಗೂ ಕೃಷಿ ವಲಯದಲ್ಲಿ ತನ್ನದಾದ ಛಾಪು ಮೂಡಿಸಿದ ಧಾರವಾಡ ಜಿಲ್ಲೆಗೆ ಪ್ರಸಕ್ತ ಸಾಲಿನ 2026–27ರ ರಾಜ್ಯದ ಬಜೆಟ್‌ನಲ್ಲಿ ಅಲ್ಪ ಮಟ್ಟಿಗೆ ಕೊಡುಗೆ ನೀಡಿದೆ.

ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ಹುಬ್ಬಳ್ಳಿ ಕಾಟನ್ ಮಾರ್ಕೆಟ್‌ನಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣ, ಮಹದಾಯಿ, ಕಳಸಾ-ಬಂಡೂರಿ ಕಾಮಗಾರಿ ಪ್ರಾರಂಭದ ಭರವಸೆ ನೀಡಲಾಗಿದೆ. ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳ ಅನುಕೂಲಕ್ಕಾಗಿ ಧಾರವಾಡದಲ್ಲಿ ರೂ.5 ಕೋಟಿ ವೆಚ್ಚದಲ್ಲಿ ಡಿಜಿಟಲ್ ಗ್ರಂಥಾಲಯ, 150 ಸಂಖ್ಯಾಬಲದ ಮೆಟ್ರಿಕ್ ನಂತರದ ವಸತಿ ನಿಲಯ ಸ್ಥಾಪನೆ ಘೋಷಿಸಿದೆ.

ಕಟ್ಟಡ-ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳ ವೃತ್ತ ಬುನಾದಿ ಹಾಗೂ ಉನ್ನತ ಕೌಶಲ್ಯದ ತರಬೇತಿ ನೀಡಲು ರೂ.200 ಕೋಟಿ ವೆಚ್ಚದಲ್ಲಿ ಕೌಶಲ್ಯ ತರಬೇತಿ ಅಕ್ಯಾಡೆಮಿ ಸ್ಥಾಪನೆ ಭರವಸೆ ನೀಡಿದೆ.

ಕೋಟಿ ವೆಚ್ಚದ ಹುಬ್ಬಳ್ಳಿಯ ಜದೇವ ಹೃದ್ರೋಗ ಪ್ರಾದೇಶಿಕ ಕೇಂದ್ರ ಕಟ್ಟಡ ಇದೇ ವರ್ಷದಲ್ಲಿ ಲೋಕಾರ್ಪಣೆ, ಹುಬ್ಬಳ್ಳಿಯಲ್ಲಿ ಪ್ಯಾರಾ ಮೆಡಿಕಲ್ ಕೋರ್ಸ್‌ಗಳನ್ನೂ ಪ್ರಾರಂಭಿಸುವುದಾಗಿ ಘೋಷಿಸಲಾಗಿದೆ. ಹು-ಧಾ ಪೂರ್ವ, ಕಲಘಟಗಿ ತಾಲೂಕು ಕೆರೆಗಳಿಗೆ ನೀರು ತುಂಬಿಸುವ, ಹೊಸ ಕೆರೆ ನಿರ್ಮಾಣ ಹಾಗೂ ಕಾಗದ ರಹಿತ ನ್ಯಾಯಾಂಗ ವ್ಯವಸ್ಥೆಗೆ ಇ-ಕೋರ್ಟ್ ಸ್ಥಾಪಿಸುವುದಾಗಿಯೂ ಭರವಸೆ ನೀಡಿದೆ. ಅಲ್ಲದೇ, ಅಡ್ವೋಕೇಟ್ ಜನರಲ್ ಕಚೇರಿಗೆ ಗ್ರಂಥಾಲಯ, ವಿ.ಸಿ.ಸೌಲಭ್ಯ ಜತೆಗೆ ಮೂಲ ಸೌಕರ್ಯ, ಉನ್ನೀಕರಣಕ್ಕೆ ರೂ.5 ಕೋಟಿ, ಧಾರವಾಡದ ನಾಲ್ಕು ಕಡೆಗೆ ಇಂದಿರಾ ಕ್ಯಾಂಟಿನ್ ಸ್ಥಾಪನೆಗೆ ಒತ್ತು ನೀಡಿದೆ.

ಧಾರವಾಡ ಡಿಮಾನ್ಸ್ ಸಂಸ್ಥೆಯಲ್ಲಿ ಮಾದಕ ವ್ಯಸನಿಗಳ ಪುನರ್ವಸತಿ ಕೇಂದ್ರ ಸ್ಥಾಪನೆ, ಎಸ್ಸಿ-ಎಸ್ಟಿ ಉದ್ಯೋಗಸ್ಥ ಮಹಿಳೆಯರಿಗೆ ರೂ.50 ಸಂಖ್ಯಾಬಲದ ವಸತಿ ನಿಲಯ ಸ್ಥಾಪನಗೆ ಆದ್ಯತೆ ನೀಡಲಾಗಿದೆ.

ಸಂಘಕ್ಕೆ 200 ಕೋಟಿ ರೂ.

ಕರ್ನಾಟಕ ಏಕೀಕರಣದಲ್ಲಿ ಮುಂದಾಳತ್ವ ವಹಿಸಿರುವ ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ವಿವಿಧ ಚಟುವಟಿಕೆಗಳಿಗೆ ರೂ.2 ಕೋಟಿ ಅನುದಾನ ಒದಗಿಸುವ ಭರವಸೆ ನೀಡಿದೆ.

ಕೈಗಾರಿಕೆಗೆ 200 ಕೋಟಿ ರೂ.

ಧಾರವಾಡ ಕೈಗಾರಿಕಾ ನೋಟ್‌ಗೆ ಸಂಬಂಧಿಸಿದಂತೆ 1,000 ಎಕರೆ ಭೂಸ್ವಾಧೀನ ಮಾಡಲು 600 ಕೋಟಿ ಅನುದಾನ ಒದಗಿಸುವ ಭರವಸೆ ನೀಡಿದ್ದು, ಇದಕ್ಕೆ ಪ್ರಸಕ್ತ ಸಾಲಿನಲ್ಲಿ ರೂ.200 ಕೋಟಿ ಅನುದಾನ ಮೀಸಲಿಟ್ಟಿದೆ.

ಜನತೆಗೆ ಯಾವುದೇ ಪ್ರಯೋಜನವಿಲ್ಲ: ಶಾಸಕ



◆**ಹುಬ್ಬಳ್ಳಿ:** ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ ಸರ್ಕಾರದಿಂದ ಬರಬೇಕಿದ್ದ ಬಾಕಿ 200 ಕೋಟಿ ರೂ. ಘೋಷಿಸಿಲ್ಲ, ನಗರದ ಕೆಎಂಸಿಆರ್‌ಐ ಆಸ್ಪತ್ರೆಯಲ್ಲಿ ಪ್ರಾದೇಶಿಕ ಕ್ಯಾನ್ಸರ್ ಸೆಂಟರ್ ಸ್ಥಾಪನೆಗೆ ಆದ್ಯತೆ ನೀಡಿಲ್ಲ ಎಂದು ಶಾಸಕ ಮಹೇಶ ಟೆಂಗಿನಕಾಯಿ ಬೇಸರ ವ್ಯಕ್ತಪಡಿಸಿದ್ದಾರೆ.

ಬಜೆಟ್ ಕುರಿತು ಶುಕ್ರವಾರ ಪ್ರಕಟಣೆ ಮೂಲಕ ಪ್ರತಿಕ್ರಿಯಿಸಿ ಅವರು, ಹುಬ್ಬಳ್ಳಿಯಲ್ಲಿ ನೂತನವಾಗಿ ನಿರ್ಮಾಣಗೊಳ್ಳುತ್ತಿರುವ ಜಯದೇವ ಆಸ್ಪತ್ರೆಗೆ ಯಾವುದೇ ಅನುದಾನ ಘೋಷಣೆ ಇಲ್ಲ, ಈ ಬಜೆಟ್‌ನಿಂದ ರಾಜ್ಯದ ಜನತೆಗೆ ಯಾವುದೇ ಪ್ರಯೋಜನವಿಲ್ಲ, ಜನರಿಗೆ ಮತ್ತಷ್ಟು ಹೊರೆ ಹಾಗೂ ರಾಜ್ಯದ ಜನರಿಗೆ ಸರ್ಕಾರ ಸಾಲದ ಹೊರೆ ಮಾಡಿದೆ ಎಂದು ತಿಳಿದ್ದಾರೆ.

ರಾಜ್ಯದ ಜನರಿಗೆ ಈ ಸರ್ಕಾರ ಚಿಪ್ಪು ನೀಡಿದೆ. ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ ಅದರ ಕುರಿತು ಯಾವ ಹೊಸ ಯೋಜನೆಗಳ ಪ್ರಸ್ತಾಪನೆ ಇಲ್ಲ, ಕೇವಲ ಅಲ್ಪಸಂಖ್ಯಾತರ ಒಲಯಕೆಯಲ್ಲಿ ಅನುದಾನ ನೀಡುವುದರಲ್ಲಿಯೂ ಅಲ್ಪಸಂಖ್ಯಾತರಿಗೆ ಮೊದಲ ಆದ್ಯತೆಯನ್ನು ನೀಡಲಾಗಿದೆ ಎಂದು ಕಿಡಿ ಕಾರಿದ್ದಾರೆ.

ಜನಪರ ಬಜೆಟ್; ಶಾಸಕ ಕುಲಕರ್ಣಿ



◆**ಧಾರವಾಡ:** ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ 2026–27ನೇ ಸಾಲಿನ ಬಜೆಟ್ ರಾಜ್ಯದ ಪಾಲಿಗೆ ಬಹಳ ಆಶಾದಾಯಕ ಬಜೆಟ್ ಆಗಿದೆ ಎಂದು ಶಾಸಕ ವಿನಯ ಕುಲಕರ್ಣಿ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿದ ಅವರು, 4.5 ಲಕ್ಷ ಕೋಟಿ ಬಜೆಟ್ ರಾಜ್ಯದ ಆರ್ಥಿಕ ಸ್ಥಿರತಗೆ ಸಾಕ್ಷಿಯಾಗಿದೆ. ಗ್ಯಾರಂಟಿ ಯೋಜನೆಗೆ ಅಗತ್ಯ ಅನುದಾನ ಮೀಸಲಟ್ಟಿದೆ ಎಂದು ಹೇಳಿದ್ದಾರೆ.

ಇದು ಅಂಕಿ-ಅಂಶಗಳ ಬಜೆಟ್ ಅಲ್ಲ, ಶಿಕ್ಷಣ, ಕೃಷಿ ಹೀಗೆ ಜನರ ಬದುಕು ಹಸನು ಮಾಡುವ ಬಜೆಟ್ ಆಗಿದ್ದು, ಬಡ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಗೆ ರೂ.50 ಸಾವಿರ ಸಹಾಯಧನ ಸ್ವಾಗತಿಸಿದ್ದಾರೆ.

ಉತ್ತರ ಕರ್ನಾಟಕದ ಹಿತರಕ್ಷಣೆಗೆ ಒತ್ತು ನೀಡಿದೆ. ನೀರಾವರಿ ಯೋಜನೆಗಳಿಗೆ ಪ್ರಾಮುಖ್ಯತೆ ನೀಡಿದೆ. ಬಡವರು, ರೈತರು, ಮಹಿಳೆಯರನ್ನು ಗಮನಿಸಿ ಬಜೆಟ್ ಮಂಡಿಸಿದ್ದಾಗಿ ಮುಖ್ಯಮಂತ್ರಿಗಳಿಗೆ ಅಭಿನಂದಿಸಿದ್ದಾರೆ.

ಸಂಪೂರ್ಣ ಹುಸಿಯಾದ ಬಜೆಟ್: ಪಾಟೀಲ

◆**ಕುಂದಗೋಳ:** ಸಿಎಂ ಸಿದ್ದರಾಮಯ್ಯ ಅವರ 17ನೇ ಬಜೆಟ್ ಮೇಲೆ ಸಾಕಷ್ಟು ನಿರೀಕ್ಷೆಗಳಿದ್ದವೂ ಆದರೆ ಅವರು ಶುಕ್ರವಾರ ಮಂಡಿಸಿ ಬಜೆಟ್ ಸಂಪೂರ್ಣ ಹುಸಿಯಾಗಿದೆ ಎಂದು ಶಾಸಕ ಎಂ.ಆರ್. ಪಾಟೀಲ ಆರೋಪಿಸಿದ್ದಾರೆ.

ಕುಸಿಯುತ್ತಿರುವ ಕೃಷಿಬೆಳೆಗಳ ಧಾರಣೆ ನಿಯಂತ್ರಿಸಿ ರೈತರನ್ನು ಸಂಕಷ್ಟದಿಂದ ಪಾರು ಮಾಡಲು ಯಾವುದೇ ಹೊಸ ಕ್ರಮಗಳನ್ನು ಕೈಗೊಂಡಿರುವುದಿಲ್ಲ, ಬೆಸಿಗೆಯ ಬರಗಾಲ ಸಮಸ್ಯೆಯನ್ನು ತೀವ್ರವಾಗಿ ಎದುರಿಸುವ ಉತ್ತರ ಕರ್ನಾಟಕ ಭಾಗದ ಪ್ರದೇಶಗಳಿಗೆ ಕೆರೆ ಅಭಿವೃದ್ಧಿ, ಸಣ್ಣ ನೀರಾವರಿ ಮತ್ತು ಕುಡಿಯುವ ನೀರಗೆ ಆದ್ಯತೆ ನೀಡದಿರುವುದು ವಿಷಾದನೀಯ.

ಮುಂದಾಲೋಚನೆಯಿಲ್ಲದೆ ಘೋಷಿಸಿದ ಗ್ಯಾರಂಟಿ ಯೋಜನೆಗಳಿಂದಾಗಿ ಸರ್ಕಾರದ ಬೊಕ್ಕಸ ಬರಿದಾಗಿದ್ದು, ರಾಜ್ಯದ ಜನರ ತಲೆಯ ಮೇಲೆ ಸಾಲದ ಹೊರೆ ಹೇರಲಾಗಿದೆ. ನರೇಗಾ ಯೋಜನೆ ಬದಲಾಗಿ ಕೇಂದ್ರದ ವಿಬಿ-ಜಿ-ರಾಮ್ ಜಿ ಯೋಜನೆಯು ಕ್ರಾಂತಿಕಾರಿ ಬದಲಾವಣೆ ಪ್ರಯತ್ನಿಸುತ್ತಿದ್ದರೆ, ಕೇಂದ್ರ ಸರ್ಕಾರದ ವಿರುದ್ಧ ಬಜೆಟ್‌ನಲ್ಲಿ ರಾಜಕೀಯ ಪ್ರೇರಿತ ತಮ್ಮ ನಿಲುವನ್ನು ಪ್ರತಿಪಾದಿಸಿ ಕೇಂದ್ರದ ಜೊತೆ ಸಂಘರ್ಷಕ್ಕಿಳಿದರೆ ರಾಜ್ಯದ ಜನರಿಗೆ ಮತ್ತು ಕಾರ್ಮಿಕರಿಗೆ, ಕೂಲಿಕಾರರಿಗೆ ತೊಂದರೆ ಎಂಬ ಕನಿಷ್ಠ ಜ್ಞಾನವೂ ಸರ್ಕಾರಕ್ಕಿಲ್ಲ ಎಂದಿದ್ದಾರೆ.

ನವ ಕರ್ನಾಟಕದ ನಿರ್ಮಾಣಕ್ಕೆ ಮುನ್ನುಡಿ




◆**ಹುಬ್ಬಳ್ಳಿ:** ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿರುವ 2026–27ನೇ ಸಾಲಿನ ದಾಖಲೆಯ 17ನೇಬಜೆಟ್ 'ಸರ್ವರಸಬಲೀಕರಣ, ಅವಕಾಶಗಳ ಅನಾವರಣ, ನವ ಕರ್ನಾಟಕದ ನಿರ್ಮಾಣ'ದ ಮುನ್ನುಡಿಯಾಗಿದೆ ಎಂದು ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ರಜತ್ ಉಳ್ಳಾಗಡ್ಡಿಮಠ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆಗೆ ತಿಳಿಸಿದ ಅವರು, ಇದೊಂದು ಅತ್ಯಂತ ಜನಸ್ನೇಹಿ, ರೈತಪರ, ಮಹಿಳಾ ಪರ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯ ಬಜೆಟ್ ಆಗಿದೆ. ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಬಜೆಟ್‌ನಲ್ಲಿ ಕೃಷಿ, ಕೈಗಾರಿಕೆ, ನೀರಾವರಿ ಸೇರಿ ಅನೇಕ ಜನಪರ ಕಾರ್ಯಕ್ರಮಗಳನ್ನು ಘೋಷಿಸಿದೆ. ಮುಖ್ಯವಾಗಿ

ಹುಬ್ಬಳ್ಳಿ-ಧಾರವಾಡಕ್ಕೆ ಉನ್ನತ ವ್ಯಾಸಾಂಗ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗಾಗಿ ಬರುವ ವಿದ್ಯಾರ್ಥಿಗಳಿಗಾಗಿ ಒಟ್ಟು 4 'ವಿದ್ಯಾರ್ಥಿ ಇಂದಿರಾ ಕ್ಯಾಂಟೀನ್' ಆರಂಭಿಸುವುದು ಅತ್ಯಂತ ಸ್ವಾಗತಾರ್ಹ. ಶೈಕ್ಷಣಿಕ ಅಭಿವೃದ್ಧಿಗೆ ಧಾರವಾಡದ ವಿದ್ಯಾವರ್ಧಕ ಸಂಘಕ್ಕೆ 2 ಕೋಟಿ ಅನುದಾನ, ಜಯದೇವ ಹೃದ್ರೋಗ ಆಸ್ಪತ್ರೆಗೆ ಅನುದಾನ, ಹಜ್ ಭವನ ನಿರ್ಮಾಣ ಹೀಗೆ ಹತ್ತು ಹಲವು ಕಾರ್ಯಕ್ರಮಗಳಿಗೆ ಹೆಚ್ಚಿನ ಆರ್ಥಿಕ ನೆರವು ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಹುದ್ದೆಗಳ ಭರ್ತಿಗೆ ಹೆಚ್ಚಿನ ಒತ್ತು: ಅಬ್ಬಯ್ಯ



◆**ಹುಬ್ಬಳ್ಳಿ:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ ಬಜೆಟ್‌ನಲ್ಲಿ ಆಯಾ ಇಲಾಖೆಗಳಲ್ಲಿ ಖಾಲಿ ಇರುವ ಸಾವಿರಾರು ಹುದ್ದೆಗಳನ್ನು ಭರ್ತಿ ಮಾಡಲು ಹೆಚ್ಚಿನ ಒತ್ತು ನೀಡಲಾಗಿದೆ. ಅಲ್ಲದೆ ಶಿಕ್ಷಣ, ಆರೋಗ್ಯ, ಕೈಗಾರಿಕಾ, ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಮುತುವರ್ಜಿ ವಹಿಸಲಾಗಿದೆ , ಒಟ್ಟಾರೆ ಸಮಗ್ರ ಅಭಿವೃದ್ಧಿಗೆ 11ಜಿ ಮಾದರಿ ಆರ್ಥಿಕತೆ ಘೋಷಣೆ ಮಾಡಲಾಗಿದೆ ಎಂದು ಸ್ಲಂ ಬೋರ್ಡ್ ಅಧ್ಯಕ್ಷ ಹಾಗೂ ಶಾಸಕ ಪ್ರಸಾದ ಅಬ್ಬಯ್ಯ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಶಿಕ್ಷಣ ಇಲಾಖೆಯಲ್ಲಿ 15000 ಶಿಕ್ಷಕರ ಭರ್ತಿ, ಆರೋಗ್ಯ ಇಲಾಖೆ, ಅರಣ್ಯ ಇಲಾಖೆ, ವಿಶ್ವವಿದ್ಯಾಲಯ, ಪೊಲೀಸ್ ಇಲಾಖೆ ಹೀಗೆ ಅನೇಕ ಇಲಾಖೆಯಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಘೋಷಣೆ ಮಾಡಲಾಗಿದೆ. ಇದಲ್ಲದೆ ಹುಬ್ಬಳ್ಳಿಗೆ ಹಜ್ ಭವನ, ಹುಬ್ಬಳ್ಳಿ ಧಾರವಾಡ ದಲ್ಲಿ ಎಸ್ ಸಿ ಎಸ್ ಟಿ ಮಹಿಳಾ ಉದ್ಯೋಗಿಗಳಿಗೆ ವಸತಿ ನಿಲಯ ನಿರ್ಮಾ9ಣ, ಧಾರವಾಡದಲ್ಲಿ ವಿದ್ಯಾರ್ಥಿ ಕ್ಯಾಂಟಿನ್, ಡಿಜಿಟಲ್ ಗ್ರಂಥಾಲಯ, ಜಯದೇವ ಹೃದ್ರೋಗ ಆಸ್ಪತ್ರೆ ಇದೇ ವರ್ಷ ಲೋಕಾರ್ಪಣೆಗೆ ಕ್ರಮ ವಹಿಸಲಾಗಿದೆ.

ಎಸ್‌ಸಿಪಿ/ ಟಿಎಸ್‌ಪಿ ಉಪಯೋಜನೆಗೆ 44632 ಕೋಟಿ ಮೀಸಲಿಡಲಾಗಿದೆ. ಮುಖ್ಯಮಂತ್ರಿ ಕೃಷಿ ವಿಸ್ತಾರ ನೂತನ ಯೋಜನೆ, 800 ಪಬ್ಲಿಕ್ ಸ್ಕೂಲ್ ಉನ್ನತಿ ಕಾರಣಕ್ಕೆ 3900 ಕೋಟಿ ಮೀಸಲಿಡಲಾಗಿದೆ ಹೀಗೆ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಯೋಜನೆಗಳನ್ನು ರೂಪಿಸಿ ಅನುಷ್ಠಾನ ಗೊಳಿಸುವ ನಮ್ಮ ಸಂಕಲ್ಪವನ್ನು ಈ ಆಯವ್ಯಯ ದೃಢಪಡಿಸುತ್ತದೆ. ಕೇಂದ್ರ ಸರ್ಕಾರದ ಅಸಹಕಾರದ ನಡುವೆಯೂ ಆಥಿ9ಕ ಬೆಳವಣಿಗೆಯೊಂದಿಗೆ ವಿತ್ತೀಯ ಶಿಸ್ತು ಪಾಲನೆಗೆ ನಮ್ಮ ಆಡಳಿತ ಮಾದರಿಯಾಗಿದೆ ಎಂದು ತಿಳಿಸಿದ್ದಾರೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಲಿತ ವಿರೋಧಿ, ಹಾಗೂ ಎಸ್ಸಿ-ಎಸ್ಟಿಗೆ ಮೀಸಲಿದ್ದ ರೂ.39 ಸಾವಿರ ಕೋಟಿ ನಿಧಿ ಕಳ್ಳತನ ಮಾಡಿದ್ದು, ನಿಧಿ ಚೋರ್ ಬಜೆಟ್ ಮಂಡಿಸಿದ್ದಾರೆ. ಈ ಬಜೆಟ್ ಆರ್ಥಿಕ ದಿವಾಳಿತನ ಎತ್ತಿ ತೋರಿಸುತ್ತದೆ.

■ -ಮೋಹನ ರಾಮದುರ್ಗ, ಬಿಜೆಪಿ ಮುಖಂಡ

ಜನರ ಸಮಸ್ಯೆಗಳಿಗೆ ಪರಿಹಾರವೇ ಇಲ್ಲ: ವೆಂಕಟೇಶ್ ಕಾಟವೆ



◆**ಹುಬ್ಬಳ್ಳಿ:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ 17ನೇ ಬಜೆಟ್‌ನಲ್ಲಿ ಮತ್ತೆ ಹಳೇ ರಾಗವನ್ನು ಹಾಡಿ ಕನ್ನಡಿಗರ ಕಿವಿಗೆ ಹೂವನ್ನು ಇಟ್ಟಿದ್ದಾರೆ. ಇತ್ತ ಅಲ್ಪಸಂಖ್ಯಾತರ ಓಲೈಕೆಗಾಗಿ ಮಾತ್ರ ಸಾವಿರಾರು ಕೋಟಿ ರೂಪಾಯಿಗಳ 'ಬರಪೂರ ಕೊಡುಗೆ' ನೀಡಿರುವುದು ಇವರ ಮತಬ್ಯಾಂಕ್ ರಾಜಕಾರಣವನ್ನು ಬೆತ್ತಲೆ ಮಾಡಿದೆ ಎಂದು ವಿಎಕೆ ಫೌಂಡೇಶನ್ ಸಂಸ್ಥಾಪಕ, ಬಿಜೆಪಿ ಯುವ ಮುಖಂಡ ವೆಂಕಟೇಶ್ ಕಾಟವೆ ಹೇಳಿದ್ದಾರೆ.

ಪತ್ರಿಕಾ ಪ್ರಕಟನೆ ಮೂಲಕ ತಿಳಿಸಿದ ಅವರು, ವಕ್ಫ್ ಮಂಡಳಿ ಮತ್ತು ನಿರ್ದಿಷ್ಟ ಸಮುದಾಯಕ್ಕೆ ಕೋಟ್ಯಂತರ ರೂಪಾಯಿ ಸುರಿಯುವ ಸರ್ಕಾರಕ್ಕೆ ರಾಜ್ಯದ ಸಾಮಾನ್ಯ ರೈತರು ಮತ್ತು ಮಧ್ಯಮ ವರ್ಗದವರ ಕಷ್ಟಗಳು ಬೇಕಾಗಿಲ್ಲ.

ಇದು ಕೇವಲ ಮತಬ್ಯಾಂಕ್ ರಾಜಕಾರಣಕ್ಕಾಗಿ ಮಾಡುತ್ತಿರುವ ವ್ಯವಸ್ಥಿತ ನಾಟಕ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ ಬಜೆಟ್ ಅಭಿವೃದ್ಧಿಯ ದಿಕ್ಸೂಚಿಯಾಗುವ ಬದಲು, ಕೇಂದ್ರ ಸರ್ಕಾರದ ವಿರುದ್ಧದ ದ್ವೇಷದ ಭಾಷಣದ ವೇದಿಕೆಯಾಗಿ ಮಾರ್ಪಟ್ಟಿದೆ.

ರಾಜ್ಯದ ಜನರ ತೆರಿಗೆ ಹಣದಲ್ಲಿ ಸಿದ್ಧವಾದ ಈ ಬಜೆಟ್ನಲ್ಲಿ ಜನ'ಸಾ'ಮಾ'ನ್ಯ'ರ' ಸ'ಮ'ಸ್ಯ'ಗ'ಳಿ'ಗೆ' ಪರಿಹಾರ ಹುಡುಕುವ ಬದಲು, ಅರ್ಧದಷ್ಟು ಸಮಯವನ್ನು ಕೇಂದ್ರವನ್ನು ಟೀಕಿಸುವುದಕ್ಕೇ ವ್ಯಯ ಮಾಡಿರುವುದು ಇವರ ಆಡಳಿತಾತ್ಮಕ ದಿವಾಳಿತನಕ್ಕೆ ಸಾಕ್ಷಿ. ಕೇಂದ್ರ ಸರ್ಕಾರ ಜಿಎಸ್ಟಿಯಲ್ಲಿ ಬದಲಾವಣೆಯ ತಂದು ಎಲ್ಲಾ ವರ್ಗದ ಜನತೆಗೆ ನಿರಾಳ ದಿನ ತಂದಿದ್ದರೆ, ಅದನ್ನು ಕೂಡ ಈ ಸರ್ಕಾರ ಟೀಕಿಸುವ ಮೂಲಕ ಮಧ್ಯಮ ವರ್ಗದ ತಮಗಿರುವ ದ್ವೇಷವನ್ನು ಬಿಚ್ಚಿಟ್ಟಿದ್ದಾರೆ. ಇದು ಬಜೆಟ್ ಅಲ್ಲ, ಬದಲಾಗಿ ಹಳೇ ಹಾಡನ್ನು ಹೊಸ ಕ್ಯಾಸೆಟ್‌ನಲ್ಲಿ ಹಾಡಿ ಜನರನ್ನು ಮರುಳು ಮಾಡುವ ಪ್ರಯತ್ನ.

ಈಬಜೆಟ್‌ಕನ್ನಡಿಗರನಿರೀಕ್ಷೆಗಳನ್ನು ಹಳ್ಳ ಹಿಡಿಸಿರುವ 'ನಿರಾಶಾದಾಯಕ ಬಜೆಟ್'. ಕಾಂಗ್ರೆಸ್ ಸರ್ಕಾರಕ್ಕೆ ಬರುವ ದಿನಗಳಲ್ಲಿ ಜನರೇ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ರಾಜ್ಯದ ಇತಿಹಾಸದಲ್ಲಿ ಸುದೀರ್ಘ ಅವಧಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯವನ್ನು ಸುದೀರ್ಘ ವರ್ಷಗಳವರೆಗೆ ಸಾಲದ ಸುಳಿಗೆ ಸಿಲುಕಿಸುವ ಬಜೆಟ್ ಮಂಡಿಸಿದ್ದಾರೆ. ರೂ.1.32 ಲಕ್ಷ ಸಾಲ ಘೋಷಣೆ ಮಾಡಿ, ರಾಜ್ಯಕ್ಕೆ ಸಂಕಟದ ಬಜೆಟ್ ಮಂಡಿಸಿದ್ದಾರೆ.

■ ಕರಿಯಪ್ಪ ಸುಣಗಾರ. ಬಿಜೆಪಿ ಯುವ ದುರೀಣ



ಜನರಿಗೆ ಹೊರೆ ಮಾಡದೆ ಬಜೆಟ್‌ನಲ್ಲಿ ಶಿಕ್ಷಣ, ಕೃಷಿ, ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಿದೆ. ಶಿಕ್ಷಣಕ್ಕೆ ರೂ.47,224 ಕೋಟಿ ನೀಡಿದೆ. ಅತಿಥಿ ಶಿಕ್ಷಕರು ಮತ್ತು ಉಪನ್ಯಾಸಕರಿಗೆ ರೂ.2 ಸಾವಿರ ಗೌರವಧನ ಸಹ ಹೆಚ್ಚಿಸಿದೆ. ಒಟ್ಟಾರೆ ಜನಸ್ನೇಹಿ ಬಜೆಟ್ ಮಂಡಿಸಿದ್ದಾರೆ.

■ ಬಸವರಾಜ ಗುರಿಕಾರ, ರಾಷ್ಟ್ರಾಧ್ಯಕ್ಷ.ಅಖಿಲ ಭಾರತ ಶಿಕ್ಷಕರ ಫೆಡರೇಷನ್.ನವದೆಹಲಿ



ಬಜೆಟ್‌ನಲ್ಲಿ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಸುಮಾರು 1000 ಬೋಧಕ ಹುದ್ದೆಗಳ ಭರ್ತಿ ಘೋಷಿಸಿದೆ. ಉನ್ನತ ಶಿಕ್ಷಣದ ಗುಣಮಟ್ಟ ಮತ್ತು ಸಂಶೋಧನೆಗೆ ಉತ್ತೇಜನ ನೀಡಲಿದೆ.

■ ಸಚಿನ್ ಕುರಾಡೆ, ಸಂಶೋಧನಾ ವಿದ್ಯಾರ್ಥಿ. ಅರ್ಥಶಾಸ್ತ್ರ ವಿಭಾಗ-ಕವಿವಿ




ಗ್ಯಾರಂಟಿ ಯೋಜನೆಗೆ ಬಂಡವಾಳ ಕ್ರೋಢಿಕರಿಸಿದ ಬಜೆಟ್ ಇದಾಗಿದೆ. ನಮ್ಮ ಧಾರವಾಡ ಜಿಲ್ಲೆಯ ನೀರಾವರಿ, ಕೈಗಾರಿಕಗೆ, ಆಸ್ಪತ್ರೆ ಹಾಗೂ ಕಟ್ಟಡ ಅಭಿವೃದ್ಧಿ ಆದ್ಯತೆ ನೀಡಿಲ್ಲ, ವಿವಿಧ ವಲಯಗಳ ನಿರೀಕ್ಷೆಗಳನ್ನು ಸಿದ್ದರಾಮಯ್ಯ ಬಜೆಟ್ ಹುಸಿಗೊಳಿಸಿದೆ.

■ ಉದಯ ಯಂಡಿಗೇರಿ, ವ್ಯಾಪರಸ್ಥರು




ಸಿದ್ದರಾಮಯ್ಯ ಅವರು ಮಂಡಿಸಿದ ಬಜೆಟ್ ರಾಜ್ಯದ ಜನರನ್ನು ಸಾಲದ ಕೂಪಕ್ಕೆ ನೂಕಿದ್ದು, ಗ್ಯಾರಂಟಿ ಯೋಜನೆಗೆ ಹಣ ಹೊಂದಿಸಲು ಆದ್ಯತೆ ನೀಡಿರುವ ಈ ಆಯವ್ಯಯವನ್ನು ಗಮನಿಸಿದರೆ ರಾಜ್ಯದ ಅಭಿವೃದ್ಧಿ ಕನಸು ಐವತ್ತು ವರ್ಷಕ್ಕೆ ಹಿಂದೆ ಹೋಗಿದೆ. ಜನರ ಹಿತವನ್ನು ಬಲಿ ಕೊಟ್ಟಿರುವ ಈ ಬಜೇಟ್ ಆರ್ಥಿಕ ವ್ಯವಸ್ಥೆಯನ್ನೇ ಬುಡಮೇಲು ಮಾಡುವಂತಹುದ್ದಾಗಿದೆ. ಬಜೆಟ್ ಮಂಡನೆಯ ದಾಖಲೆ ಮಾಡಲು ಹೋಗಿ ಹಳಿ ತಪ್ಪಿದಂತಾಗಿದೆ. ಜನರನ್ನು ಸುಲಿಗೆ ಮಾಡುವ ಬಜೆಟ್ ಇದಾಗಿದೆ

■ ನಾಗರಾಜ ಛಬ್ಬಿ. ವಿಧಾನ ಪರಿಷತ್ ಮಾಜಿ ಸದಸ್ಯ



ಬೆಂಗಳೂರು ನಗರಕ್ಕೆ ಮೂಲಸೌಕರ್ಯ, ಮೆಟ್ರೋ, ರಸ್ತೆ ನಿರ್ಮಾಣ ಹೀಗೆ ಅನೇಕ ಕಾಮಗಾರಿಗೆ ಸಾವಿರಾರು ಕೋಟಿ ಮೀಡಲಿದ್ದು, ಮುಖ್ಯಮಂತ್ರಿಗಳ ಬಜೆಟ್ ಬೆಂಗಳೂರು ಕೇಂದ್ರೀತವಾಗಿದ್ದು, ಕೃಷಿ ಅಭಿವೃದ್ಧಿ ಹಾಗೂ ರೈತರ ಕಲ್ಯಾಣಕ್ಕೆ ಆದ್ಯತೆ ನೀಡಿರುವುದು ಸಮಾಧಾನ ತಂದಿದೆ.

■ ಡಾ.ದುರ್ಗೇಶ ಪೂಜಾರ.ಸಹಾಯಕ ಪ್ರಾಧ್ಯಾಪಕ



ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ ಬಜೆಟ್ ಸಂಪೂರ್ಣ ಭರವಸೆಗಳೊಂದಿಗೆ ಕೂಡಿದೆ. ರಾಜ್ಯದ ಜನತೆಗೆ ಬೆಲೆ ಏರಿಕೆಯ ಭಾಗ್ಯ ಕಲ್ಪಿಸಿದ ಬಜೆಟ್ ಉತ್ತರ ಕರ್ನಾಟಕ ನಿರ್ಲಕ್ಷಿಸಿದ್ದು ಹೊಸ ಹೊಸ ಕೈಗಾರಿಕಾ ಘಟಕಗಳ ಸ್ಥಾಪನೆಗೆ ಒತ್ತು ಕೊಡುವುದೇ ಇರುವುದು ಹಾಗೂ ಈ ಭಾಗದ ಪ್ರಮುಖ ನೀರಾವರಿ ಯೋಜನೆಗಳಿಗೆ ಅನುದಾನ ನೀಡಿಲ್ಲ ಕೇವಲ ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸುವುದೇ ಸರ್ಕಾರದ ಸಾಧನೆಯಾಗಿದೆ ಅಭಿವೃದ್ಧಿಪರ ಚಿಂತನೆಗಳಿಲ್ಲದ ಬಜೆಟ್ ಇದಾಗಿದೆ.

■ ದೇವರಾಜ ಬ. ದಾಡಿಬಾವಿ. ಬಿಜೆಪಿ ಮುಖಂಡ



ಅಲ್ಪಸಂಖ್ಯಾತರಿಗೆ ರೂ.1000 ಕೋಟಿ ವೆಚ್ಚದಲ್ಲಿ ಶಾಲಾ ಉತ್ತೀಕರಣ. ಆದರೆ, ಹಿಂದೂಗಳ ದೇವಸ್ಥಾನದ ದುರಸ್ತಿಗೆ ಹಣವೇ ಇಲ್ಲ!? ಹುಬ್ಬಳ್ಳಿ-ಕಲಬುರ್ಗಿಯಲ್ಲಿ ಹಜ್ ಭವನ ಕಟ್ಟುವ ನಿಮಗೆ, ಹಿಂದೂ ಧಾರ್ಮಿಕ ಕೇಂದ್ರಗಳು ನೆನಪಿಗೆ ಬರಲಿಲ್ಲವೇ? ಅಲ್ಪಸಂಖ್ಯಾತ ನಿರುದ್ಯೋಗಿಗಳಿಗೆ ರೂ.3 ಲಕ್ಷ ಸಹಾಯಧನ, ಸಾಮಾನ್ಯರಿಗೆ ಭರವಸೆಯೇ ಹುತ್ತವೇ? ಬೆಲೆ ಏರಿಕೆ ನಿಯಂತ್ರಣ ಇಲ್ಲ ಏಕೆ? ಬೊಕ್ಕಸದ ಹಣ ನಿರ್ಧಿಷ್ಟ ಸಿದ್ದರಾಮಯ್ಯ ನಿರ್ಧಿಷ್ಟ ಸಮುದಾಯಕ್ಕೆ ಧಾರೆ ಎರೆದಿದ್ದಾರೆ. ಇದು ಅಭಿವೃದ್ಧಿಪರ ಬಜೆಟ್ ಅಲ್ಲ, ಅನ್ಯಾಯದ ಬಜೆಟ್ ಆಗಿದೆ.

■ ಪಿ.ಎಚ್.ನೀರಲಕೇರಿ, ಅಧ್ಯಕ್ಷರು.ಕರ್ನಾಟಕ ಥಿಂಕರ್ಸ್ ಫೋರಂ



ಸಿಎಂ ಸಿದ್ದರಾಮಯ್ಯ ಅವರು ಮಂಡಿಸಿದ ದಾಖಲೆಯ ಬಜೆಟ್ ಸಂಪೂರ್ಣ ಅಭಿವೃದ್ಧಿ ಶೂನ್ಯ ಹಾಗೂ ಸಾಲಕ್ಕೆ ಮಾನ್ಯ ಬಜೆಟ್ ನಂತಾಗಿದೆ. ಕಳೆದ ಮೂರು ವರ್ಷಗಳಿಂದ ಕಾಂಗ್ರೆಸ್ ಸರಕಾರ ರಾಜ್ಯವನ್ನು ಸಾಲದ ಸುಳಿಗೆ ಸಿಲುಕಿಸಿದೆ. ರಾಜ್ಯದ ಅಭಿವೃದ್ಧಿಯನ್ನು ಸಂಪೂರ್ಣ ಬದಿಗೊತ್ತಿ ಕೇವಲ ಸಾಲದ ಹೊರೆ ಹೆಚ್ಚಿಸುವ ಕೆಲಸ ಈ ಬಾರಿಯ ಬಜೆಟ್‌ನಲ್ಲಿಯೂ ಮುಂದುವರೆದಿದೆ.

■ ಅಮೃತ ದೇಸಾಯಿ. ಮಾಜಿ ಶಾಸಕ



ಯಾವ ಇಲಾಖೆಗೆ ಎಷ್ಟು ಅನುದಾನ

ಸಾರಿಗೆ	ಆರೋಗ್ಯ	ಕಂದಾಯ
23,100 ಕೋಟಿ ರೂ.	17,817 ಕೋಟಿ ರೂ.	19,843 ಕೋಟಿ ರೂ.

■ ಆರೋಗ್ಯ ಮೂಲಸೌಕರ್ಯ ವೃದ್ಧಿಗೆ ಒತ್ತು



ಶಾಲಾ ಕಾಲೇಜುಗಳ ಮಕ್ಕಳಿಗೆ ರಕ್ತಹೀನತೆಯ ಉಚಿತ ತಪಾಸಣೆ ಮತ್ತು ಆರೋಗ್ಯ ಇಲಾಖೆಯಲ್ಲಿನ ಮೂಲ ಸೌಕರ್ಯ ಅಭಿವೃದ್ಧಿಗಾಗಿ 900 ಕೋಟಿ ರೂ. ಹಾಗೂ ಪ್ರಸಕ್ತ ಸಾಲಿನಲ್ಲಿ ವೈದ್ಯಕೀಯ ಕಾಲೇಜುಗಳು, ಆಸ್ಪತ್ರೆಗಳು ಹಾಗೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ನಿರ್ಮಾಣ ಕಾಮಗಾರಿಗೆ 620 ಕೋಟಿ ರೂ. ಅನುದಾನ ಮತ್ತು ಉಪಕರಣಗಳ ಖರೀದಿಗಾಗಿ 220 ಕೋಟಿ ರೂ.ಗಳ ಅನುದಾನವನ್ನು ಸರ್ಕಾರ ಮೀಸಲಿರಿಸಿದೆ. ರಾಜ್ಯದಲ್ಲಿ ಬೇಡಿಕೆ ಇರುವ 50 ಕೇಂದ್ರಗಳಲ್ಲಿ 150 ಹಾಸಿಗೆ ಸಾಮರ್ಥ್ಯ ಹೆಚ್ಚಿಸುವ ಮೂಲಕ ವಾರ್ಷಿಕವಾಗಿ 1.35 ಲಕ್ಷ ಡಯಾಲಿಸಿಸ್ ಸೇವೆಗಳನ್ನು ಒದಗಿಸಲಾಗುತ್ತದೆ. ಇದಕ್ಕಾಗಿ 20 ಕೋಟಿ ರೂ. ಅನುದಾನವನ್ನು 400 ಕೋಟಿ ರೂ.ಗಳನ್ನು ಹೆಚ್ಚುವರಿ ಒದಗಿಸಿದೆ. ರಾಜ್ಯದ ಎಲ್ಲ ಜಿಲ್ಲಾ ಮತ್ತು ತಾಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಸಮಗ್ರ ಆಘಾತ ಆರೈಕೆ ಸೇವೆಗಳನ್ನು ಒದಗಿಸಲು ತುರ್ತು ಚಿಕಿತ್ಸಾ ವಿಭಾಗ, ಶಸ್ತ್ರಚಿಕಿತ್ಸಾ ಕೊಠಡಿ ಮತ್ತು ಐಸಿಯುಗಳಿಗೆ ವೈದ್ಯಕೀಯ ಉಪಕರಣ, ಸಾಧನಗಳನ್ನು ಹಂತ-ಹಂತವಾಗಿ ಪೂರೈಸುವ ಮೂಲಕ ಮೇಲ್ದರ್ಜೆಗೇರಿಸಲಾಗುವುದು.

ಬಜೆಟ್ ಮಾತು



ಶಿಕ್ಷಣ, ಆರೋಗ್ಯ, ಕೃಷಿ ಹಾಗೂ ಮೂಲಭೂತ ಸೌಕರ್ಯಗಳಿಗೆ ವಿಶೇಷ ಒತ್ತು ನೀಡುವುದರ ಜತೆ ನಮ್ಮ ಗ್ಯಾರಂಟಿ ಯೋಜನೆಗಳ ಮೂಲಕ ಪ್ರತಿ ಕನ್ನಡಿಗನ ಬಾಳಿನಲ್ಲಿ ಹೊಸ ಭರವಸೆ ಮೂಡಿಸಲು ನಮ್ಮ ಸರ್ಕಾರ ಬದ್ಧವಾಗಿದೆ. ಬಜೆಟ್‌ನಲ್ಲಿ ಎಲ್ಲ ಸಮುದಾಯದವರ ಪ್ರಗತಿಗೆ ಒತ್ತು ನೀಡಲಾಗಿದೆ.

■ **ಡಿ.ಕೆ. ಶಿವಕುಮಾರ್,** ಉಪಮುಖ್ಯಮಂತ್ರಿ



ಆರ್ಥಿಕವಾಗಿ ಹಿಂದುಳಿದ ಸಮುದಾಯಗಳ ಸಮಗ್ರ ಏಳಿಗೆಗೆ ಒತ್ತು

ಪರಿಶಿಷ್ಟರು, ಅಲ್ಪಸಂಖ್ಯಾತರಿಗೆ ಬಂಪರ್

ರಾಜ್ಯದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ಸಮುದಾಯಗಳ ಸಮಗ್ರ ಏಳಿಗೆ ಗಾಗಿ ಸರ್ಕಾರವು ಶಿಕ್ಷಣ, ಜೀವನೋಪಾಯ ಮತ್ತು ಮೂಲ ಸೌಕರ್ಯಕ್ಕೆ ಆದ್ಯತೆ ನೀಡಿ, ಕರ್ನಾಟಕ ಅನು ಸೂಚಿತ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆಯಲ್ಲಿ 44,632 ಕೋಟಿ ರೂ.ಗಳ ಅನುದಾನವನ್ನು ಮೀಸಲಿರಿಸಿದೆ. ಇದರಲ್ಲಿ ಪರಿಶಿಷ್ಟ ಜಾತಿ ಉಪಯೋಜನೆಗೆ 31,804 ಕೋಟಿ ರೂ. ಹಾಗೂ ಬುಡಕಟ್ಟು ಉಪಯೋಜನೆಗೆ 12,828 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿದೆ.

ಶಿಕ್ಷಣ ಕ್ಷೇತ್ರಕ್ಕೆ ಕಾಯಕಲ್ಪ, ಹೊಸ ವಸತಿ ಶಾಲೆಗಳು: ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಸರ್ಕಾರವು 40 ಹೊಸ ವಸತಿ ಶಾಲೆಗಳನ್ನು ಪ್ರಾರಂಭಿಸಲು ನಿರ್ಧರಿಸಿದೆ. ಅಲ್ಲದೆ, ಪ್ರತಿ ಜಿಲ್ಲೆಗೆ ತಲಾ ಒಂದು ಬಾಲಕ ಮತ್ತು ಬಾಲಕಿಯರಂತೆ ರಾಜ್ಯಾದ್ಯಂತ ಒಟ್ಟು 62 ಹೊಸ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಆರಂಭಿಸಲಾಗುತ್ತದೆ. ವಸತಿ ಶಾಲೆಗಳ ಸೌಲಭ್ಯಗಳನ್ನು ಮೇಲ್ದರ್ಜೆಗೇರಿಸಲು 50 ಕೋಟಿ ರೂ. ಹಾಗೂ ವಿದ್ಯಾರ್ಥಿನಿಲಯಗಳ ಪೀಠೋಪಕರಣಗಳಿಗಾಗಿ 25 ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದೆ. ವಿಶೇಷವಾಗಿ, ನೀಟ್, ಜೆಇಇ ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲು 4 ವಸತಿ ಶಾಲೆಗಳನ್ನು ಸೆಂಟರ್ ಆಫ್ ಎಕ್ಸಲೆನ್ಸ್ ಆಗಿ ಪರಿವರ್ತಿಸಲಾಗುವುದು. ಅಲೆಮಾರಿ, ಸೂಕ್ಷ್ಮ ಸಮುದಾಯಗಳ ಮಕ್ಕಳಿಗಾಗಿ ಪ್ರತಿ ಕಂದಾಯ ವಿಭಾಗದಲ್ಲಿ ತಲಾ ಒಂದರಂತೆ ವಿಶೇಷ ವಸತಿ ಶಾಲೆಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ.

ಮೂಲಸೌಕರ್ಯ ಮತ್ತು ಆಡಳಿತ ಸುಧಾರಣೆ: ಪರಿಶಿಷ್ಟ ಜಾತಿ ಮತ್ತು ಪಂಗಡದವರು ವಾಸಿಸುವ ಕಾಲೋನಿಗಳ ಅಭಿವೃದ್ಧಿಗೆ 1,332 ಕೋಟಿ ರೂ. ಹಾಗೂ ಅಲ್ಪಸಂಖ್ಯಾತರ ಕಾಲೋನಿಗಳಿಗೆ 1,635 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುವುದು. ವಿದ್ಯಾರ್ಥಿನಿಲಯಗಳಲ್ಲಿ ಗುಣಮಟ್ಟದ ಆಹಾರ ಖಾತ್ರಿಪಡಿಸಲು 50 ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳ ಮುಂದಾಳತ್ವದಲ್ಲೇ ಮೆಸ್ ಸಮಿತಿ ರಚಿಸುವ ಪ್ರಾಯೋಗಿಕ ಯೋಜನೆಯನ್ನು ಸರ್ಕಾರ ಘೋಷಿಸಿದೆ. ಉದ್ಯೋಗಸ್ಥ ಮಹಿಳೆಯರ ಅನುಕೂಲಕ್ಕಾಗಿ ಬೆಂಗಳೂರು, ಮೈಸೂರು, ಮಂಗಳೂರು ಸೇರಿದಂತೆ ಪ್ರಮುಖ ನಗರಗಳಲ್ಲಿ 10 ಹೊಸ ಮಹಿಳಾ ವಸತಿ ನಿಲಯಗಳನ್ನು ಸ್ಥಾಪಿಸಲಾಗುವುದು.

ಬೌದ್ಧ ಅಭಿವೃದ್ಧಿ ನಿಗಮ ಸ್ಥಾಪನೆ: ಸಮಾಜ ಕಲ್ಯಾಣ ಇಲಾಖೆಯಡಿ ಬೌದ್ಧ ಅಭಿವೃದ್ಧಿ ನಿಗಮವನ್ನು ಸ್ಥಾಪಿಸುವ ಮಹತ್ವದ ತೀರ್ಮಾನ ಕೈಗೊಳ್ಳಲಾಗಿದೆ. ವಿವಿಧ ಅಭಿವೃದ್ಧಿ ನಿಗಮಗಳಿಗೆ ಒಟ್ಟಾರೆಯಾಗಿ 1,500 ಕೋಟಿ ರೂ. ಅನುದಾನ ನೀಡಲಾಗಿದೆ. ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿಗಳ ವಿದ್ಯುದೀಕರಣಕ್ಕೆ ನೀಡುವ ಆರ್ಥಿಕ ನೆರವನ್ನು 75,000 ರೂ.ಗಳಿಂದ 1.50 ಲಕ್ಷ ರೂ.ಗಳಿಗೆ ದುಪ್ಪಟ್ಟುಗೊಳಿಸಲಾಗಿದೆ. ಸಮಾಜ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಇಲಾಖೆಗಳಲ್ಲಿ ಖಾಲಿ ಇರುವ 2,500 ಹುದ್ದೆಗಳನ್ನು ಭರ್ತಿ ಮಾಡುವ ಮೂಲಕ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಕಲ್ಪಿಸಲು ಸರ್ಕಾರ ಮುಂದಾಗಿದೆ.



- ಬೌದ್ಧ ಅಭಿವೃದ್ಧಿ ನಿಗಮ ಸ್ಥಾಪನೆ
- ಫಾಸ್ಟ್ ಫುಡ್ ಟ್ರಕ್ ಅಥವಾ ಮೊಬೈಲ್ ಕಿಚನ್ ಫುಡ್ ಕಿಯೋಸ್ಕ್ ಪ್ರಾರಂಭ
- ಸ್ವಾವಲಂಬನೆಗಾಗಿ 4 ಲಕ್ಷ ರೂ.ಗಳವರೆಗೆ ಸಹಾಯಧನ
- ಮಹರ್ಷಿ ವಾಲ್ಮೀಕಿ ಆಡಳಿತ ಸೌಧ ನಿರ್ಮಾಣ

ಡಾ.ಬಿ.ಆರ್.ಅಂಬೇಡ್ಕರ್ ಹೆಜ್ಜೆ ಗುರುತಿನ ಶಾಲೆಗಳು

ಡಾ. ಬಿ.ಆರ್.ಅಂಬೇಡ್ಕರ್ ಅವರು ಭೇಟಿ ನೀಡಿದ್ದ ಕಲಬುರಗಿ, ವಿಜಯಪುರ, ಬೆಳಗಾವಿ ಮತ್ತು ಕೋಲಾರ ಜಿಲ್ಲೆಗಳಲ್ಲಿ ಅವರ ನೆನಪಿನಲ್ಲಿ ಸಿಬಿಎಸ್‌ಇ ಪಠ್ಯಕ್ರಮದ ನಾಲ್ಕು ವಿಶೇಷ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗುವುದು. ಈ ಮೂಲಕ ಶೈಕ್ಷಣಿಕ ಗುಣಮಟ್ಟವನ್ನು ಜಾಗತಿಕ ಮಟ್ಟಕ್ಕೆ ಏರಿಸಲು ಸರ್ಕಾರ ಸಂಕಲ್ಪ ಮಾಡಿದೆ.

ಮಹರ್ಷಿ ವಾಲ್ಮೀಕಿ ಆಡಳಿತ ಸೌಧ ನಿರ್ಮಾಣ

ರಾಜ್ಯದ ಪರಿಶಿಷ್ಟ ಪಂಗಡಗಳ ಇಲಾಖೆ ಹಾಗೂ ಅದರ ಅಡಿಯಲ್ಲೇ ಬರುವ ವಿವಿಧ ನಿಗಮ ಮತ್ತು ಕಚೇರಿಗಳನ್ನು ಒಂದೇ ಸೂರಿನಡಿ ತರಲು ಸರ್ಕಾರ ನಿರ್ಧರಿಸಿದೆ. ಇದಕ್ಕಾಗಿ ಬೆಂಗಳೂರಿನ ಸುಮನಹಳ್ಳಿಯಲ್ಲಿ 50 ಕೋಟಿ ರೂ.ಗಳ ವೆಚ್ಚದಲ್ಲಿ ಮಹರ್ಷಿ ವಾಲ್ಮೀಕಿ ಆಡಳಿತ ಸೌಧ ಸಂಕೀರ್ಣವನ್ನು ನಿರ್ಮಿಸಲಾಗುವುದು ಎಂದು ಬಜೆಟ್‌ನಲ್ಲಿ ಘೋಷಿಸಲಾಗಿದೆ.

ಸ್ವಾವಲಂಬನೆಗಾಗಿ 4 ಲಕ್ಷ ರೂ.ಗಳವರೆಗೆ ಸಹಾಯಧನ

ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕ-ಯುವತಿಯರ ಆರ್ಥಿಕ ಸ್ವಾವಲಂಬನೆಗಾಗಿ ಸರ್ಕಾರವು ಹೊಸ ಉದ್ಯಮಶೀಲತಾ ಯೋಜನೆಯನ್ನು ಪ್ರಕಟಿಸಿದೆ. ನಿರುದ್ಯೋಗಿ ಯುವಜನರು ಫಾಸ್ಟ್ ಫುಡ್ ಟ್ರಕ್ ಅಥವಾ ಮೊಬೈಲ್ ಕಿಚನ್ ಫುಡ್ ಕಿಯೋಸ್ಕ್ ಪ್ರಾರಂಭಿಸಲು ವಿಶೇಷ ಉತ್ತೇಜನ ನೀಡಲಾಗುವುದು. ಈ ಯೋಜನೆಯಡಿ ಘಟಕ ವೆಚ್ಚದ ಶೇ. 75 ರಷ್ಟು ಅಥವಾ ಗರಿಷ್ಠ 4 ಲಕ್ಷ ರೂ.ಗಳವರೆಗೆ ಸಹಾಯಧನ ನೀಡಲು ನಿರ್ಧರಿಸಲಾಗಿದೆ.



ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಕೊಡುತ್ತೇವೆ ಎಂದು ಬೊಗಳೆ ಬಿಟ್ಟು ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ಕರ್ನಾಟಕದಲ್ಲಿ ಸರ್ವರಿಗೂ ತೆರಿಗೆ, ಸರ್ವರಿಗೂ ಸಾಲ ಎಂಬ ಸ್ಥಿತಿ ನಿರ್ಮಿಸಿದ್ದಾರೆ.

■ **ಆರ್.ಅಶೋಕ,** ಪ್ರತಿಪಕ್ಷ ನಾಯಕ

ನಗರಾಭಿವೃದ್ಧಿ ಇಲಾಖೆಗೆ ಈ ಬಾರಿಯೂ ಹೆಚ್ಚಿನ ಅನುದಾನ ನೀಡುವ ಮೂಲಕ ಸಿದ್ದರಾಮಯ್ಯನವರು ಗ್ರಾಮಾಂತರ ಪ್ರದೇಶಗಳ ಜೊತೆಗೆ ನಗರ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿಗೂ ಹೆಚ್ಚಿನ ಒತ್ತು ನೀಡಿದ್ದಾರೆ.

■ **ಬೈರತಿ ಸುರೇಶ್,** ಸಚಿವ

ಈ ಬಜೆಟ್ ಕರ್ನಾಟಕವನ್ನು ಸಮಾವೇಶಿತ ಮತ್ತು ಅತ್ಯಾಧುನಿಕ ವೈದ್ಯಕೀಯ ಸೇವೆಗಳ ಜಾಗತಿಕ ಕೇಂದ್ರಬಿಂದುವಾಗಿ ರೂಪಿಸುವತ್ತ ಪ್ರಗತಿಶೀಲ ದಾರಿಯನ್ನು ನಿರ್ಮಿಸುತ್ತದೆ.

■ **ಡಾ. ಶಫೀಕ್ ಎ. ಎಂ,** ಸಿಇಒ, ಟ್ರೈಲೈಫ್ ಆಸ್ಪತ್ರೆ

ಅಬಕಾರಿ, ಅದೇ ಸ್ಟ್ಯಾಂಪ್ ಡ್ಯೂಟಿ ಇದೆ. ಮೋಟಾರು ವಾಹನ ತೆರಿಗೆ ಇಲಾಖೆ, ಅಬಕಾರಿ ದರಗಳ ನಿಯಂತ್ರಣವನ್ನು ಉತ್ಪಾದಕರಿಗೆ ಕೊಡುವ ಮೂಲಕ, ಇಡೀ ವ್ಯವಸ್ಥೆಯ ನಾಶಕ್ಕೆ ಸರ್ಕಾರ ಅವಕಾಶ ಕಲ್ಪಿಸಿದೆ.

■ **ಮುರುಗೇಶ್ ನಿರಾಣಿ,** ಮಾಜಿ ಸಚಿವ

ವ್ಯಾಪಾರ ಮಾಡುವ ಸುಲಭ ಸುಧಾರಣೆಗಳ ಮೂಲಕ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ವಲಯವನ್ನು ಬಲಪಡಿಸುವ ಸರ್ಕಾರದ ಬದ್ಧತೆ ಶ್ಲಾಘನೀಯ.

■ **ಪ್ರಶಾಂತ್ ಗೋಖಲೆ,** ಬಿಸಿಐಸಿ ಅಧ್ಯಕ್ಷ

ಹುಲಿಕಲ್-ಕುದೂರು ಬಳಿ ಸಾಲುಮರದ ತಿಮ್ಮಕ್ಕ ಸ್ಮಾರಕ

ಮಾನವ-ವನ್ಯಪ್ರಾಣಿ ಸಂಘರ್ಷ ಕಡಿಮೆ ಮಾಡಲು ಕರ್ನಾಟಕ ಮಾನವ-ವನ್ಯಪ್ರಾಣಿ ಸಂಘರ್ಷ ನಿವಾರಣಾ ಕಾರ್ಯತಂತ್ರ ಯೋಜನೆಯನ್ನು ಅನುಷ್ಠಾನಗೊಳಿಸಲು ಮುಂದಿನ ಐದು ವರ್ಷದಲ್ಲಿ 1,500 ಕೋಟಿ ರೂ. ವೆಚ್ಚದಲ್ಲಿ ವಿವಿಧ ಕ್ರಮ ಕೈಗೊಳ್ಳಲಾಗುವುದು. ಇದಕ್ಕಾಗಿ ಪ್ರಸಕ್ತ ಸಾಲಿನಲ್ಲಿ 269 ಕೋಟಿ ರೂ. ಮೀಸಲಿರಿಸಲಾಗಿದೆ.



ರಾಷ್ಟ್ರೀಯ ಅರಣ್ಯ ನೀತಿಯಂತೆ ರಾಜ್ಯದ ಶೇ.10ಕ್ಕಿಂತ ಕಡಿಮೆ ಅರಣ್ಯ ಹೊದಿಕೆ ಹೊಂದಿರುವ ಜಿಲ್ಲೆಗಳ 75,000 ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯೀಕರಣ ಕಾರ್ಯ ಕೈಗೊಳ್ಳಲಾಗುವುದು. ಇದಕ್ಕಾಗಿ ಒಟ್ಟು 150 ಕೋಟಿ ರೂ. ಅನುದಾನ ಮೀಸಲಿರಿಸಲಾಗುವುದು. ಅರಣ್ಯ ಇಲಾಖೆಯಲ್ಲಿನ ವಿವಿಧ ವೃಂದಗಳಲ್ಲಿನ 2,000 ಹುದ್ದೆಗಳನ್ನು 2026-27ನೇ ಸಾಲಿನಲ್ಲಿ ಭರ್ತಿ ಮಾಡಲಾಗುವುದು.

ಮೈಸೂರು ಮೃಗಾಲಯ ಹಾಗೂ ಬನ್ನೇರುಘಟ್ಟ ಉದ್ಯಾನವನದ ಕಡೆಗೆ ಪ್ರವಾಸಿಗರನ್ನು ಆಕರ್ಷಿಸಲು ಹಾಗೂ ಪ್ರವಾಸಿಗರ ಅನುಕೂಲತೆಗಾಗಿ ಪಿಪಿಪಿ ಮಾದರಿಯಲ್ಲಿ ಪ್ರಕೃತಿ ನಿರೂಪಣಾ ಕೇಂದ್ರ ಸ್ಥಾಪನೆ ಮಾಡಲಾಗುವುದು. ವಾಯು ಗುಣಮಟ್ಟ ಮಾಪನ ವ್ಯವಸ್ಥೆ ಇನ್ನಷ್ಟು ಬಲಪಡಿಸಲು 15 ಹೊಸ ನಿರಂತರ ಪರಿವೇಕ್ಷಿಕ ವಾಯು ಗುಣಮಟ್ಟ ಮಾಪನ ಕೇಂದ್ರ ಸ್ಥಾಪಿಸಲಾಗುವುದು. ಪರಿಸರವಾದಿ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಇವರ ಸ್ಮರಣಾರ್ಥ ಹುಲಿಕಲ್-ಕುದೂರು ಹತ್ತಿರ ಸ್ಮಾರಕ ನಿರ್ಮಿಸಲಾಗುವುದು.


ಮಾನವ-ವನ್ಯ ಪ್ರಾಣಿ ಸಂಘರ್ಷ ನಿವಾರಣೆಯು ಅತೀ ಮುಖ್ಯವಾದ ಕಾರ್ಯವಾಗಿರುವುದರಿಂದ ಕಳೆದ ಮೂರು ವರ್ಷಗಳಲ್ಲಿ ಬೆಳೆ ಹಾನಿ, ಜಾನುವಾರು ನಷ್ಟ, ಹೊಸದಾಗಿ ಮೂರು ಆನೆ ಕಾರ್ಯಪಡೆ, ಒಂದು ಹೊಸ ಚಿರತೆ ಕಾರ್ಯಪಡೆಯ ರಚನೆ ಮುಂತಾದ ಉಪಕ್ರಮಗಳಿಗಾಗಿ 1,044 ಕೋಟಿ ರೂ.ವೆಚ್ಚ ಖರ್ಚು ಮಾಡಲಾಗಿದೆ.



ಬಜೆಟ್ ಮಂಡಿಸಲು ವಿಧಾನಸೌಧಕ್ಕೆ ತೆರಳುವ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಧ್ಯಮಗಳಿಗೆ ಬಜೆಟ್ ಪ್ರತಿಯನ್ನೊಳಗೊಂಡ ಕೆಂಪು ಬಹಿ ಖಾತಾ ಅನ್ನು ಪ್ರದರ್ಶಿಸಿದರು.

ರಾಜ್ಯದ ಸ್ವಂತ ತೆರಿಗೆ ರಾಜಸ್ವಗಳ ವಿವರಗಳು 2026-27 ಆಯವ್ಯಯ ಅಂದಾಜು

(ರೂ. ಕೋಟಿಗಳಲ್ಲಿ)



ಮಿನಿ ಬಜೆಟ್

ಆಸ್ಪತ್ರೆಗಳು ಮೇಲ್ದರ್ಜೆಗೆ



ವೈದ್ಯಕೀಯ ಶಿಕ್ಷಣ ಇಲಾಖೆಯ ಮೂಲಸೌಕರ್ಯವನ್ನು ಮತ್ತಷ್ಟು ಸದೃಢಗೊಳಿಸುವ ಸಲುವಾಗಿ ಕಾರವಾರದಲ್ಲಿ 198 ಕೋಟಿ ರೂ. ವೆಚ್ಚದ 450 ಹಾಸಿಗೆ ಸಾಮರ್ಥ್ಯದ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರಿನಲ್ಲಿ 10 ಕೋಟಿ ರೂ.ಗಳ ಟ್ರಾಮಾಕೇರ್ ಕೇಂದ್ರ ಮತ್ತು ಮೈಸೂರು ಹಾಗೂ ತುಮಕೂರಿನಲ್ಲಿ 92 ಕೋಟಿ ರೂ. ವೆಚ್ಚದ ಫೆರಿಫೆರಲ್ ಕ್ಯಾನ್ಸರ್ ಕೇಂದ್ರಗಳ ಕಾಮಗಾರಿಗಳನ್ನು ಪೂರ್ಣಗೊಳಿಸಿದೆ. ಜತೆಗೆ ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯನ್ನು 180 ಕೋಟಿ ರೂ. ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲಿದೆ.

ಅಮೃತ್ ನಗರೋತ್ಥಾನದಲ್ಲಿ 500 ಕೋಟಿ ಮೀಸಲು



ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ ಹಂತ-4 ರಡಿಯಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಪ್ರಸಕ್ತ ಸಾಲಿನಲ್ಲಿ 500 ಕೋಟಿ ರೂ.ಗಳನ್ನು ಬಜೆಟ್‌ನಲ್ಲಿ ಒದಗಿಸಲಾಗಿದೆ. ಹೊಸದಾಗಿ ಮೇಲ್ದರ್ಜೆಗೇರಿಸಲಾದ ರಾಯಚೂರು, ಬೀದರ್ ಮತ್ತು ಹಾಸನ ಮಹಾನಗರ ಪಾಲಿಕೆಗಳಿಗೆ ಮಹಾತ್ಮಾಗಾಂಧಿ ನಗರ ವಿಕಾಸ್ ಯೋಜನೆ 2.0ರಡಿ 2026-27ನೇ ಸಾಲಿನಲ್ಲಿ ತಲಾ 200 ಕೋಟಿ ರೂ.ಗಳನ್ನು ನೀಡಲಾಗಿದೆ.

ಇ-ಆಸ್ತಿ ತಂತ್ರಾಂಶ ಸಂಯೋಜನೆ



ನಗರ ಸ್ಥಳೀಯ ಸಂಸ್ಥೆಗಳಲ್ಲಿ ಏಕೀಕೃತ ಆಸ್ತಿ ತೆರಿಗೆ ತಂತ್ರಾಂಶದೊಂದಿಗೆ ಇ-ಆಸ್ತಿ ತಂತ್ರಾಂಶವನ್ನು ಸಂಯೋಜನೆಗೊಳಿಸಲಾಗುವುದು. ತೆರಿಗೆ ಬೇಡಿಕೆ ಮತ್ತು ಬಾಕಿ ವಿವರಗಳನ್ನು ಸ್ವಯಂ ಚಾಲಿತವಾಗಿ ಸೃಜಿಸುವ ಯುನಿಫೈಡ್ ಆಸ್ತಿ ತೆರಿಗೆ ವ್ಯವಸ್ಥೆಯನ್ನು ಜಾರಿಗೊಳಿಸಲಾಗುವುದು. ನಗರ ಸ್ಥಳೀಯ ಸಂಸ್ಥೆಗಳ ಸ್ಥಿರಾಸ್ತಿಗಳು ಹಾಗೂ ವಾಣಿಜ್ಯ ಸಂಕೀರ್ಣಗಳ ನಿರ್ವಹಣಾ ಪ್ರಕ್ರಿಯೆಯನ್ನು ಸರಳಗೊಳಿಸಲು ಹಾಗೂ ಏಕರೂಪದ ನೀತಿಯನ್ನು ಪಾಲಿಸಲು ಎಸ್ಟೇಟ್ ಮ್ಯಾನೇಜಮೆಂಟ್ ರೂಲ್-2026 ಜಾರಿಗೊಳಿಸಲಾಗುವುದು.

ವಿದ್ಯಾರ್ಥಿ ಇಂದಿರಾ ಕ್ಯಾಂಟೀನ್ ಆರಂಭ



ಉನ್ನತ ವ್ಯಾಸಂಗ, ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗಾಗಿ ಬರುವ ವಿದ್ಯಾರ್ಥಿಗಳಿಗಾಗಿ ಧಾರವಾಡದಲ್ಲಿ 4, ಬೆಂಗಳೂರಿನಲ್ಲಿ 2 ವಿದ್ಯಾರ್ಥಿ ಇಂದಿರಾ ಕ್ಯಾಂಟೀನ್‌ಗಳನ್ನು ಪ್ರಾರಂಭಿಸಲಾಗುವುದು. ಕಲಬುರಗಿ ನಗರಕ್ಕೆ 24/7 ಶಾಶ್ವತವಾಗಿ ಗುಣಮಟ್ಟದ ನೀರನ್ನು ಒದಗಿಸಲು ಅಂದಾಜು 1,863 ಕೋಟಿ ರೂ. ವೆಚ್ಚದ ಕಾಮಗಾರಿಗೆ ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಲಾಗುವುದು. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುತ್ತಿರುವ ವಿವಿಧ ಭಾಗಗಳಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿಗಾಗಿ 100 ಕೋಟಿ ರೂ. ಒದಗಿಸಲಾಗುವುದು ಎಂದು ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.


ಶೈಕ್ಷಣಿಕ ಅಗತ್ಯಗಳಿಗೆ ₹15,081 ಕೋಟಿ ಅನುದಾನ

ಶಿಕ್ಷಣ, ಸೌಕರ್ಯಕ್ಕೆ ವಿಶೇಷ ಒತ್ತು

ರಾಜ್ಯ ಸರ್ಕಾರವು 2026-27ನೇ ಸಾಲಿನ ಆಯವ್ಯಯದಲ್ಲಿ ಶಿಕ್ಷಣ, ವಸತಿ ಮತ್ತು ಸಾಮಾಜಿಕ ಸಬಲೀಕರಣಕ್ಕೆ ವಿಶೇಷ ಒತ್ತು ನೀಡಿದೆ.

ಶಿಕ್ಷಣ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಬಜೆಟ್‌ನಲ್ಲಿ ಸಿಂಹಪಾಲು ನೀಡಲಾಗಿದೆ. ರಾಜ್ಯದ ಸುಮಾರು 75 ಲಕ್ಷ ವಿದ್ಯಾರ್ಥಿಗಳಿಗೆ 2,676 ಕೋಟಿ ರೂ.ಗಳ ವಿದ್ಯಾರ್ಥಿ ವೇತನವನ್ನು ವಿತರಿಸಲಾಗಿದ್ದು, ಶೈಕ್ಷಣಿಕ ಸಾಲ ಮತ್ತು ಶುಲ್ಕ ಮರುಪಾವತಿ ಯೋಜನೆಗಳ ಮೂಲಕ ಲಕ್ಷಾಂತರ ವಿದ್ಯಾರ್ಥಿಗಳ ಹೊರೆ ಇಳಿಸಲಾಗಿದೆ. ರಾಜ್ಯದ 5,306 ವಿದ್ಯಾರ್ಥಿನಿಲಯಗಳು ಮತ್ತು 1,258 ವಸತಿ ಶಾಲೆಗಳ ಸುಧಾರಣೆ ಹಾಗೂ 13.30 ಲಕ್ಷ ಮಕ್ಕಳ ಶೈಕ್ಷಣಿಕ ಅಗತ್ಯಗಳಿಗಾಗಿ ಒಟ್ಟು 15,081 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.

ಮೂಲಸೌಕರ್ಯ ಮತ್ತು ವಸತಿ ಕ್ರಾಂತಿ: ಬಡಜನರು ವಾಸಿಸುವ ಕಾಲೋನಿಗಳ ಅಭಿವೃದ್ಧಿಗೆ ಸರ್ಕಾರ ಹೆಚ್ಚಿನ ಆದ್ಯತೆ ನೀಡಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು 1,332 ಕೋಟಿ ರೂ.ಗಳನ್ನು ವ್ಯಯಿಸಲಾಗಿದೆ. ಅಲ್ಪಸಂಖ್ಯಾತರ ಕಾಲೋನಿಗಳಲ್ಲಿ 3,662 ವಿವಿಧ ಕಾಮಗಾರಿಗಳಿಗಾಗಿ 1,635 ಕೋಟಿ ರೂ.ಗಳನ್ನು ಅನುಮೋದಿಸಲಾಗಿದೆ. ವಿಶೇಷವಾಗಿ, ಅರಣ್ಯದ ಅಂಚಿನಲ್ಲಿ ವಾಸಿಸುತ್ತಿರುವ 11 ಸಮುದಾಯಗಳ 6,257 ವಸತಿರಹಿತ ಕುಟುಂಬಗಳಿಗೆ ತಲಾ 4.50 ಲಕ್ಷ ರೂ.ಗಳ ವೆಚ್ಚದಲ್ಲಿ ಮನೆ ನಿರ್ಮಿಸಿಕೊಡುವ ಮಹತ್ವಾಕಾಂಕ್ಷೆಯ ಯೋಜನೆಯನ್ನು ಸರ್ಕಾರ ಕೈಗೆತ್ತಿಕೊಂಡಿದೆ.



- 75 ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ
- ವಸತಿರಹಿತ ಕುಟುಂಬಗಳಿಗೆ ತಲಾ 4.50 ಲಕ್ಷ ರೂ.ಗಳ ವೆಚ್ಚದಲ್ಲಿ ಮನೆ
- 1,650 ಕೋಟಿ ರೂ.ಗಳಲ್ಲಿ ಸಮುದಾಯ ಭವನಗಳ ನಿರ್ಮಾಣ

ಇದುವರೆಗೆ 684 ಕೋಟಿ ಟ್ರಿಪ್‌ಗಳಲ್ಲಿ ಪ್ರಯಾಣ ಸೌಲಭ್ಯ

ಶಕ್ತಿ ಯೋಜನೆಗೆ ₹5,300 ಕೋಟಿ

ಮಹಿಳೆಯರು ಬಸ್ಸಿನಲ್ಲಿ ಉಚಿತವಾಗಿ ಪ್ರಯಾಣ ಮಾಡುವ ಮೂಲಕ ಸ್ವಾವಲಂಬನೆ ಮತ್ತು ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾದ ಶಕ್ತಿ ಯೋಜನೆಗಾಗಿ ಸುಮಾರು ಪ್ರಸಕ್ತ ಸಾಲಿನಲ್ಲಿ 5,300 ಕೋಟಿ ರೂ. ಒದಗಿಸಲಾಗಿದೆ. ಶಕ್ತಿ ಯೋಜನೆಯಲ್ಲಿ ಉಚಿತವಾಗಿ ಪ್ರಯಾಣ ಮಾಡುತ್ತಿರುವ ಮಹಿಳೆಯರ ಸಂಖ್ಯೆ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ. ಇದುವರೆಗೆ 684 ಕೋಟಿ ಟ್ರಿಪ್‌ಗಳಲ್ಲಿ ಮಹಿಳೆಯರು ಪ್ರಯಾಣ ಸೌಲಭ್ಯ ಪಡೆದಿರುತ್ತಾರೆ.

10 ಕೋಟಿ ರೂ. ವೆಚ್ಚದಲ್ಲಿ ರೂಫ್ ಟಾಪ್ ಸೋಲಾರ್: ರಾಜ್ಯದಲ್ಲಿ ಸ್ವಂತ ಕಟ್ಟಡ ಹೊಂದಿರುವ 25 ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಡ್ರೈವಿಂಗ್ ಟ್ರ್ಯಾಕ್ ಆಟೋಮೇಟೆಡ್ ಟೆಸ್ಟಿಂಗ್ ಸ್ಟೇಷನ್ ಕಟ್ಟಡದ ಮೇಲ್ಛಾವಣಿಯಲ್ಲಿ 10 ಕೋಟಿ ರೂ. ವೆಚ್ಚದಲ್ಲಿ ರೂಫ್ ಟಾಪ್ ಸೋಲಾರ್ ಅಳವಡಿಸುವ ಯೋಜನೆ ಜಾರಿಗೊಳಿಸಲಾಗುವುದು.

ಬ್ಲಾಕ್‌ಸ್ಪಾಟ್ ಗುರುತಿಸುವ ತಂತ್ರಾಂಶ ಅಭಿವೃದ್ಧಿಗೆ 5 ಕೋಟಿ ರೂ.: ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಹೆಚ್ಚುತ್ತಿರುವ ಅಪಘಾತ ಸ್ಥಳಗಳನ್ನು ಬ್ಲಾಕ್‌ಸ್ಪಾಟ್ ಗುರುತಿಸಲು, ಅವುಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಐಐಟಿ ಮದ್ರಾಸ್ ಮತ್ತು ಎನ್‌ಐಸಿ ಸಹಯೋಗದೊಂದಿಗೆ 5 ಕೋಟಿ ರೂ. ವೆಚ್ಚದಲ್ಲಿ ಡ್ಯಾಶ್ ಬೋರ್ಡ್ ಒಳಗೊಂಡ ತಂತ್ರಾಂಶ ಅಭಿವೃದ್ಧಿಪಡಿಸಲಾಗುವುದು.

ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಕ್ಕೆ 12 ಕೋಟಿ ರೂ.: ಚಿಕ್ಕಮಗಳೂರು ಹಾಗೂ ತುಮಕೂರಿನಲ್ಲಿ 12 ಕೋಟಿ ರೂ.ವೆಚ್ಚದಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥ ನಿರ್ಮಿಸಲಾಗುವುದು.



ವೇತನ ಪರಿಷ್ಕರಣೆ

ಏ.1ರಿಂದ ಜಾರಿಗೆ ಬರುವಂತೆ ಸಾರಿಗೆ ನೌಕರರ ವೇತನವನ್ನು ಪರಿಷ್ಕರಿಸಲು ನಿಶ್ಚಯಿಸಿರುತ್ತದೆ. ಇದಕ್ಕಾಗಿ ವೇತನ ಬಾಕಿ 1,271 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಸಂಪಾದಕೀಯ

ರಾಜ್ಯ ಬಜೆಟ್ : ನಿಜ ಹೂರಣವೇನು?

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಾಖಲೆಯ 17ನೇ ಬಜೆಟ್ ಮಂಡಿಸಿದ್ದಾರೆ. 3ಗಂಟೆ 36ನಿಮಿಷಗಳ ಬಜೆಟ್ ಭಾಷಣದ ಮೂಲಕವೂ ಅವರು ದಾಖಲೆ ಮಾಡಿದ್ದಾರೆ. ಬಜೆಟ್‌ನಲ್ಲಿ ನಿರೀಕ್ಷೆಯಂತೆ ಗ್ಯಾರಂಟಿ ಯೋಜನೆಗಳ ಪೈಕಿ ಅನ್ನಭಾಗ್ಯ ಯೋಜನೆಗೆ 6,200ಕೋ.ರೂ., ಗೃಹಲಕ್ಷ್ಮೀ ಯೋಜನೆಗೆ 28,608ಕೋ.ರೂ., ಗೃಹಜ್ಯೋತಿ ಯೋಜನೆಗೆ 10,578ಕೋ.ರೂ.ಸ್ತ್ರೀಶಕ್ತಿ ಯೋಜನೆಗೆ 5,300ಕೋ.ರೂ.ಗಳನ್ನು ಮೀಸಲಿಡಲಾಗಿರುವುದಾಗಿ ಮುಖ್ಯಮಂತ್ರಿಯವರು ಪ್ರಕಟಿಸಿದ್ದಾರೆ.

ಬೆಂಗಳೂರು ಮಹಾನಗರವನ್ನು 5 ಭಾಗಗಳಾಗಿ ವಿಭಜನೆಗೊಳಿಸಿದ ಬಳಿಕ ಇದೀಗ ಬೆಂಗಳೂರು ಅಭಿವೃದ್ಧಿಗೆ 7 ಸಾವಿರ ಕೋ.ರೂ.ಗಳ ಅನುದಾನವನ್ನು ಮೀಸಲಿರಿಸಲಾಗಿದೆ. ಇದೇ ರೀತಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಯೋಜನೆಗೆ 3 ವರ್ಷಗಳಲ್ಲಿ 13000 ಕೋ.ರೂ.ಗಳ ಯೋಜನೆಯೊಂದನ್ನು ಪ್ರಕಟಿಸಲಾಗಿದೆ. ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಕೈಗಾರಿಕಾ ಬೆಳವಣಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕರಾವಳಿಗೆ 2 ಸೇರಿದಂತೆ ರಾಜ್ಯದಲ್ಲಿ 12 ಹೊಸ ಪೊಲೀಸ್ ಠಾಣೆಗಳ ನಿರ್ಮಾಣವನ್ನು ಪ್ರಕಟಿಸಲಾಗಿದೆ. ರಾಜ್ಯದಲ್ಲಿ ಕಾನೂನುಸುವ್ಯವಸ್ಥೆಯ ಪರಿಸ್ಥಿತಿ ಕುರಿತಂತೆ ಹೆಚ್ಚುತ್ತಿರುವ ಕಳವಳಗಳ ನಡುವೆ ಈ ಪ್ರಸ್ತಾವ ಬಂದಿದ್ದು,



ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ 8000ಹುದ್ದೆಗಳನ್ನು ಭರ್ತಿ ಮಾಡಲಾಗುವುದೆಂದೂ ಮುಖ್ಯಮಂತ್ರಿಯವರು ತಿಳಿಸಿದ್ದಾರೆ. ಒಟ್ಟಾರೆಯಾಗಿ ರಾಜ್ಯದ ವಿವಿಧ ಇಲಾಖೆ ಗಳಲ್ಲಿ ಖಾಲಿ ಇರುವ 56,432ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಬಜೆಟಿನಲ್ಲಿ ಗಮನ ಸೆಳೆದಿರುವ ಅಂಶವೆಂದರೆ, 16 ವಯಸ್ಸಿನ ಕೆಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳ ಬಳಕೆಯನ್ನು ನಿಷೇಧಿಸುವ ಅಂಶವನ್ನು ಪ್ರಸ್ತಾವಿಸಲಾಗಿದೆ. ಎಳೆಯ ಮಕ್ಕಳ ಮೇಲೆ ಜಾಲತಾಣಗಳು ಬೀರುತ್ತಿರುವ ಗಂಭೀರ ದುಷ್ಪರಿಣಾಮಗಳ ಬಗ್ಗೆ ಕಳವಳಗಳು ಹೆಚ್ಚುತ್ತಿರುವ ನಡುವೆಯೇ ಇಂತಹ ಕ್ರಮವೊಂದನ್ನು ಮುಖ್ಯಮಂತ್ರಿಯವರು ಘೋಷಿಸಿದ್ದು ಮೆಚ್ಚುಗೆಗೆ ಭಾಜನವಾಗಿದೆ. ಬಜೆಟ್‌ನ ಪರ–ವಿರುದ್ಧ ಪ್ರತಿಕ್ರಿಯೆಗಳು ವ್ಯಕ್ತವಾಗಿದ್ದು ಮದ್ಯದ ಮೇಲಿನ ತೆರಿಗೆ ಸ್ವರೂಪವನ್ನು ಬದಲಿಸಿ ಈ ಸಾಲಿನಲ್ಲಿ 45000 ಕೋ.ರೂ.ಗಳ ರಾಜಸ್ವ ಸಂಗ್ರಹಿಸುವ ಗುರಿಯನ್ನು ಸಿದ್ದರಾಮಯ್ಯ ಅವರು ಪ್ರಕಟಿಸಿದ್ದು, ಕಂದಾಯ ಇಲಾಖೆಗೆ 15500 ಕೋ.ರೂ., ನೋಂದಣಿ ಮುದ್ರಾಂಕದಿಂದ 29000ಕೋ.ರೂ., ಗಣಿ ಇಲಾಖೆಗೆ 11,000 ಕೋ.ರೂ., ವಾಣಿಜ್ಯ ಇಲಾಖೆಗೆ 12500 ಕೋ.ರೂ.ಗಳ ಸಂಗ್ರಹದ ಗುರಿ ನೀಡಿದ್ದಾರೆ. ಸ್ತ್ರೀಶಕ್ತಿ ಯೋಜನೆಗೆ ಮೀಸಲಿರಿಸಿದ ಮೊತ್ತ 5,300ಕೋ.ರೂ.ಗಳಾದರೆ, ಕೆಎಸ್ಆರ್ಟಿಸಿ ಸೇರಿದಂತೆ ಸಾರಿಗೆ ನಿಗಮಗಳಿಗೆ ಸರಕಾರ ಬಾಕಿ ಉಳಿಸಿಕೊಂಡಿರುವ ಮೊತ್ತ ಕೂಡ 5,313ಕೋ.ರೂ.ಗಳಾಗಿದೆ. ಇಲ್ಲಿ ಯೋಜನೆಯ ಕ್ರೆಡಿಟ್ ಕಾಂಗ್ರೆಸ್ ಸರಕಾರಕ್ಕಾದರೆ, ಹೊರೆ ಮಾತ್ರ ಸಾರಿಗೆ ನಿಗಮಕ್ಕೆ ಎಂಬ ಟೀಕೆ ವ್ಯಕ್ತವಾಗಿದೆ. ಗ್ಯಾರಂಟಿ ಯೋಜನೆಗಳಿಗೆ ನೀಡುವ ಮೊತ್ತವನ್ನು ಜನಸಾಮಾನ್ಯರ ಮೇಲೆ ನೋಂದಣಿ, ಅಬಕಾರಿ, ಇಂಧನ, ಕಂದಾಯ ಇಲಾಖೆಗಳ ಶುಲ್ಕಗಳಲ್ಲಿ ತೀವ್ರ ಏರಿಕೆಯ ಹೊರೆ ಹೊರಿಸುವ ಮೂಲಕ ಪಡೆಯಲಾಗುತ್ತಿದೆ ಎಂಬ ಟೀಕೆಗಳು ವ್ಯಕ್ತವಾಗಿವೆ. ಉರ್ದು ಶಾಲೆಗಳ ಅಭಿವೃದ್ಧಿಗೆ 400 ಕೋ.ರೂ., ಅಲ್ಪಸಂಖ್ಯಾತ ನಿರುದ್ಯೋಗಿಗಳಿಗೆ 3ಲ.ರೂ. ಸಹಾಯಧನ, 1000 ಕೋ.ರೂ. ವೆಚ್ಚದಲ್ಲಿ ಶಾಲಾ ಉನ್ನತೀಕರಣ, ಹಜ್ ಭವನ ನಿರ್ಮಾಣ ಮುಂತಾದ ಯೋಜನೆಗಳ ಮೂಲಕ ವೋಟ್‌ಬ್ಯಾಂಕ್ ರಾಜಕೀಯ ಮುಂದುವರಿಸಿರುವುದಾಗಿ ಟೀಕೆಗಳು ವ್ಯಕ್ತವಾಗಿವೆ. ಒಟ್ಟಾರೆಯಾಗಿ ಇದು '11ಜಿ 'ಬಜೆಟ್ ಎಂದು ಮುಖ್ಯಮಂತ್ರಿಯವರು ಹೇಳಿಕೊಂಡರೆ , ವಿಪಕ್ಷಗಳು '11ಲೈ'ಗಳ ಬಜೆಟ್ ಎಂದು ಟೀಕಿಸಿವೆ.

ಎಂದೂ ವ್ಯರ್ಥವಲ್ಲದವುಗಳು

ಭಕ್ತ್ಯಾ ಕೃತಾ ದೇವಪೂಜಾ ಕಷ್ಟೇನಾಪ್ಯರ್ಜಿತಂ ಧನಮ್ ।
ಶ್ರದ್ಧಯಾ ಚ ಕೃತಂ ಕರ್ಮ ಸಂವಿಭಾಗೋ ನ ವೈ ಮುಧಾ ॥ –ಸುವಚನಶತಕಂ

ಭಕ್ತಿಯಿಂದ ಮಾಡಿದ ದೇವರ ಪೂಜೆ, ಕಷ್ಟಪಟ್ಟು ಗಳಿಸಿದ ಹಣ, ಶ್ರದ್ಧೆಯಿಂದ ಮಾಡಿದ ಕೆಲಸ ಎಲ್ಲವನ್ನೂ ಎಲ್ಲರೊಡನೆ ಸಮವಾಗಿ ಹಂಚಿಕೊಳ್ಳುವುದು ಎಂದೂ ವ್ಯರ್ಥವಾಗುವುದಿಲ್ಲ – ಎಂಬುದು ಶ್ಲೋಕಾರ್ಥ.

ಮನುಷ್ಯನು ಮಾಡಿದ ಕೆಲವಷ್ಟು ಕಾರ್ಯಗಳು ಸಾರ್ಥಕವಾಗುತ್ತವೆ. ಹಲವಷ್ಟು ವ್ಯರ್ಥವಾಗುತ್ತವೆ. ಸಾರ್ಥಕವಾಗುವುದಕ್ಕೆ ವಿವೇಕಪೂರ್ಣವಾಗಿ ತೊಡಗಿಕೊಳ್ಳುವಿಕೆ, ನಿರಂತರ ಪರಿಶ್ರಮ, ಸರಿಯಾದ ಮಾರ್ಗದಲ್ಲಿ ಕ್ರಮಿಸುವಿಕೆ ಕಾರಣವಾದರೆ, ಗಡಿಬಿಡಿ,



ಯೋಚಿಸದೇ ಮುನ್ನುಗ್ಗುವುದು, ಆಲಸ್ಯ, ಆರಂಭಶೂರತ್ವ... ಇತ್ಯಾದಿಗಳು ವ್ಯರ್ಥವಾಗುವುದಕ್ಕೆ ಕಾರಣವೆನಿಸುತ್ತವೆ. ಆದ್ದರಿಂದಲೇ ಹೇಳುವುದು ಸರಿಯಾಗಿ ಯೋಚಿಸಿ ತೊಡಗಬೇಕು ಎಂಬುದಾಗಿ. ಭಗವಂತ ನಮಗೆ ಸಾಕಷ್ಟು ಅವಕಾಶವನ್ನಿತ್ತಿದ್ದಾನೆ. ವಿವೇಕವನ್ನೂ, ಬುದ್ಧಿಶಕ್ತಿಯನ್ನೂ ನೀಡಿದ್ದಾನೆ. ಇವುಗಳನ್ನೆಲ್ಲ ಅರಿತು ವ್ಯವಹರಿಸಬೇಕು. ಯಾವಾಗಲೂ ವ್ಯರ್ಥವಾಗದ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನಿಸಬೇಕು. ವ್ಯರ್ಥ ಕೆಲಸ ಯಾರಿಗೂ ಭೂಷಣವಲ್ಲ, ಶೋಭೆ ತರುವುದಿಲ್ಲ.

ಭಕ್ತಿ, ಶ್ರದ್ಧೆ, ಶ್ರಮ, ಸಮಾಲೋಚನೆಗಳಿಂದ ಕೈಗೊಂಡ ಕೆಲಸವೆಂದೂ ವ್ಯರ್ಥತೆಗೆ ಆನುವು ಮಾಡಿಕೊಡುವುದಿಲ್ಲ. ಇದನ್ನೇ ಕವಿಯು ಪ್ರಕೃತ ಶ್ಲೋಕದಲ್ಲಿ ನಿರೂಪಿಸುತ್ತಾನೆ. ದೇವರ ಮುಂದೆ ಮಾಡಿದ ಪ್ರಾರ್ಥನೆ, ಪೂಜೆ ಪ್ರಯೋಜನಕ್ಕೆ ಬರಲಿಲ್ಲವೆಂದು ಕೆಲಸ ಕೈಗೂಡದಾಗ ಹೇಳುತ್ತೇವೆ. ಈ ರೀತಿಯಲ್ಲಿ ಆಕ್ಷೇಪಿಸುವ ಮುನ್ನ ನಾವೆಷ್ಟು ಭಕ್ತಿಯಿಂದ ಪೂಜಿಸಿದ್ದೇವೆ ಎಂಬುದನ್ನು ಮರೆಯುತ್ತೇವೆ. ಮನಸ್ಸಿನ ತುಂಬ 'ಬೇಕು'ಗಳನ್ನೇ ತುಂಬಿಕೊಂಡು ದೇವರ ಪೂಜೆಗೆ ಮುಂದಾದರೆ ಭಕ್ತಿ ಬರುವುದೆಂತು? ನಮ್ಮದು ನಿಷ್ಕಾಮ ಭಕ್ತಿಯಾಗಿರಬೇಕೇ ವಿನಾ ಸಕಾಮ ಭಕ್ತಿಯಾಗಿರಬಾರದು. ಭಕ್ತಿಯಿಂದ ಮಾಡಿದ ಪ್ರಾರ್ಥನೆ, ಪೂಜೆಗಳು ನಿಷ್ಫಲವಲ್ಲ. ವ್ಯಕ್ತಿಗನುಗುಣವಾಗಿ ಭಗವಂತನೊಲಿಯುತ್ತಾನೆ.

ಪ್ರಹ್ಲಾದನಿಗೆ ಭಕ್ತಿಯಿಂದ ಕಯಾಲು ವಿಷ ಕೊಟ್ಟಾಗಲೂ ಅಮೃತವಾಯ್ತು. ಉಡುಪಿಯ ಕೃಷ್ಣ ತಿರುಗಲು ಕನಕನ ಭಕ್ತಿಯೇ ಕಾರಣ. ಭಕ್ತ ಕುಂಬಾರನಿಗೆ ಭಕ್ತಿಯೇ ಮುಖ್ಯವಾಗಿತ್ತು. ಕಣ್ಣಪ್ಪನ ಭಕ್ತಿಯ ಮುಂದೆ ಬೇರೆ ಭಕ್ತಿಯೇ ಇಲ್ಲ. ಇಂತಹ ನೂರಾರು ದೃಷ್ಟಾಂತಗಳನ್ನು ಗಮನಿಸಿದರೆ ಭಕ್ತಿಯಿಂದ ಮಾಡಿದ ಭಗವಂತನ ಪೂಜೆ ವ್ಯರ್ಥವಲ್ಲವೆಂದು ಋಜುವಾತಾಗುತ್ತದೆ. ಹಾಗಾಗಿ ಭಕ್ತಿಯಿಂದ ಭಗವದಾರ್ಚನೆಯಲ್ಲಿ ತೊಡಗಬೇಕು. ಭಕ್ತಿಯೆಂಬುದು ವ್ಯಾಪಾರವಾಗಬಾರದು. ತೋರಿಕೆಯೂ ಆಗಬಾರದು. ಆಗ ಭಕ್ತಿಯೆಂದೂ ವ್ಯರ್ಥವಾಗದು. ಕಷ್ಟಪಟ್ಟು ಗಳಿಸಿದ ಹಣವೆಂದೂ ವ್ಯರ್ಥವಾಗದು. ಅದು ಶ್ರಮದ ಬೆಲೆ. ಅದು ಸನ್ಮಾರ್ಗವನ್ನೇ ಕಂಡುಕೊಳ್ಳುತ್ತದೆ. ಯಾರಿಗೂ ಮೋಸ ಮಾಡದೆ ನಿರಂತರ ಶ್ರಮವಹಿಸಿದ ಗಳಿಕೆಯಾದಲ್ಲಿ ವ್ಯರ್ಥದ ಪ್ರಶ್ನೆಯೇ ಹುಟ್ಟುವುದಿಲ್ಲ.

ಶ್ರದ್ಧೆಯಿಂದ ಮಾಡಿದ ಕಾಯಕವೂ ವ್ಯರ್ಥವಲ್ಲ. ಎಲ್ಲಕ್ಕೂ ಶ್ರದ್ಧೆಯೇ ಮುಖ್ಯ. ಆದ್ದರಿಂದಲೇ ವೇದವು 'ಶ್ರದ್ಧಾಂ ಕಾಮಸ್ಯ ಮಾತರಮ್' ಶ್ರದ್ಧೆಯು ಬಯಕೆಯ ತಾಯಿ ಎಂದಿದೆ. ಶ್ರದ್ಧೆಯು ವ್ಯರ್ಥವಾಗುವುದಕ್ಕೆ ಬಿಡುವುದಿಲ್ಲ. ಮಾಡಿದ ಕೆಲಸ ಒಳಿತಿರಲಿ, ಕೆಡುಕಿರಲಿ ನಮ್ಮವರಲ್ಲಿ ಹಂಚಿಕೊಳ್ಳಬೇಕು. ಎಲ್ಲರೊಡನೆ ಹಂಚಿಕೊಳ್ಳುವುದು ಉತ್ತಮ. ಅರಿತವರು, ಅನುಭವಿಗಳು ಅನುಭವಪೂರ್ಣ ಮಾಹಿತಿಯನ್ನು ಹಂಚಿಕೊಳ್ಳುತ್ತಾರೆ. ಮಾರ್ಗದರ್ಶನ ಮಾಡುತ್ತಾರೆ. ಇಂತಹ ಸನ್ಮಾರ್ಗಾನುಸರಣೆ ನಮ್ಮದಾದರೆ ವ್ಯರ್ಥವೆಂಬ ಪದ ನಮ್ಮ ಬಳಿ ಸುಳಿಯುವುದಿಲ್ಲ.

ವಿಶುದ್ಧ ಚಕ್ರ ಮತ್ತು ಭಾಷೆಯ ಮಜಲುಗಳು

ಕೃತಕ ಬುದ್ಧಿಮತ್ತೆ ಏನೇನೋ ಮಾಡಬಹುದು. ಆದರೆ ಕೃತಕ ಬುದ್ಧಿಮತ್ತೆಗೆ ವಿಶುದ್ಧ ಚಕ್ರವಿಲ್ಲ, ಅದಕ್ಕಾಗಿಯೇ ನೀವು ವಿಭಿನ್ನ. ಅದಕ್ಕಿಂತಲೂ ನೀವು ಅದ್ಭುತ.



ಭಾಷೆಯು ನಿಮ್ಮ ಆಲೋಚನೆಗಳನ್ನು, ಭಾವನೆಗಳನ್ನು ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸಹಾಯ ಮಾಡುತ್ತದೆ ಎನ್ನುವುದು ನಿಮಗೆ ಗೊತ್ತು. ಆದರೆ ವಿಶುದ್ಧ ಚಕ್ರದ ಸಹಾಯದಿಂದಾಗಿ ಅವುಗಳಿಗೆಲ್ಲಾ ಒಂದು ಸೌಂದರ್ಯ ಉಂಟಾಗುತ್ತದೆ. ಆಗ ನಿಮ್ಮ ಮಾತುಗಳು ಎಲ್ಲರನ್ನು ಪ್ರಭಾವಿಸುತ್ತದೆ. ಅಷ್ಟೇ ಅಲ್ಲ ವಿಶುದ್ಧ ಚಕ್ರವು ಜಾಗೃತವಾಗಿದ್ದರೆ, ಅವರ ಆಲೋಚನೆಗಳ ದಿಕ್ಕನ್ನು ನಿಮ್ಮ ಮಾತೇ ರೂಪಿಸಲು ಸಹಾಯ ಮಾಡುತ್ತದೆ.

ಭಾಷೆಯಿಂದಾಗಿ ನಿಮ್ಮಲ್ಲಿ ಸೃಜನಶೀಲತೆ ಗೋಚರವಾಗುತ್ತದೆ. ಅಂತಹಾ ಸೃಜನಶೀಲತೆಯು ವಿಶುದ್ಧ ಚಕ್ರದಿಂದಾಗಿ ನೀವು ಆಡುವ ಪ್ರತಿಯೊಂದು ಪದಗಳನ್ನೂ ವಿಶೇಷವಾಗಿ ರೂಪಿಸುತ್ತದೆ. ಆಗ ನಿಮ್ಮ ಪದಗಳೆಲ್ಲಾ ಆಭರಣದೊಳಗಿನ ಮುತ್ತುಗಳಾಗುತ್ತವೆ. ನೀವು ಮಾತನಾಡುತ್ತಿರುವಾಗಲೇ ನಿಮ್ಮೊಳಗೊಂದು ವಿಶೇಷ ಪ್ರಕ್ರಿಯೆ ಉಂಟಾಗುತ್ತದೆ. ಅದರಿಂದಾಗಿ ನೀವು ಆ ಕ್ಷಣದಲ್ಲಿಯೇ ಹೊಸದೊಂದು ಆಲೋಚನೆಯನ್ನು ಹುಟ್ಟುಹಾಕುತ್ತೀರಿ. ಮತ್ತು ಅದನ್ನು ಆ ಸಭೆಯಲ್ಲಿಯೇ ಪ್ರಸ್ತುತಪಡಿಸುತ್ತೀರಿ. ಮತ್ತು ನೀವೊಂದು ಕ್ರಾಂತಿಗೆ ಕಾರಣವಾಗುತ್ತೀರಿ. ಮಾತನಾಡುವಾಗ ಹೊಸ ಪದಗಳ ಸೃಷ್ಟಿಯನ್ನೂ ಮಾಡುತ್ತೀರಿ. ಹೀಗೆ ನಿಮ್ಮ ಸೃಜನಶೀಲತೆ ಪರಾಕಾಷ್ಠೆಗೆ ತಲುಪುತ್ತದೆ. ನಿಮಗೆ ಯಾರೂ ಸರಿಸಾಟಿ ಇಲ್ಲದಂತೆ ನೀವು ಬೆಳೆಯುತ್ತೀರಿ. ಕೊನೆಗೆ ನಿಮಗೆ ನೀವೇ ಸವಾಲಾಗುತ್ತೀರಿ.

ನಿಮ್ಮ ಮಾತಿನಿಂದಾಗಿ ನಿಮ್ಮ ಸಂಬಂಧಗಳು ಹೆಚ್ಚುತ್ತಾ ಹೋಗುತ್ತವೆ. ಆಗ ನೀವು ತುಂಬಾ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಸಂಬಂಧಗಳು ಯಾವಾಗಲೂ ಒಂದು ಜವಾಬ್ದಾರಿ. ನೀವದನ್ನು ನಿರ್ವಹಿಸಲೇಬೇಕಾಗುತ್ತದೆ. ಇಲ್ಲದಿದ್ದರೆ ಅಪವಾದ ಗ್ಯಾರಂಟಿ. ಹೀಗಾಗಿ ನಿಮ್ಮ ಭಾಷೆ ಶುದ್ಧವಾಗಿರಬೇಕಾದ್ದು ಅಗತ್ಯ. ಅದು ಕೇವಲ ಶುದ್ಧ ಮಾತ್ರವಲ್ಲ, ವಿಶುದ್ಧವಾಗಿಯೂ ಇರಬೇಕಾಗುತ್ತದೆ. ಅಂದರೆ ವಿಶುದ್ಧ ಚಕ್ರದಲ್ಲಿ ಶುದ್ಧೀಕರಣ ಹೊಂದಿಯೇ ಬರಬೇಕಾಗುತ್ತದೆ. ಆಗ ಮಾತ್ರ ಅದಕ್ಕೆ ಮೌಲ್ಯ ಸಿಗುತ್ತದೆ. ನಿಮ್ಮ ಸಂಪರ್ಕ ಹೆಚ್ಚಲೂ ಭಾಷೆ ಕಾರಣವಾಗುತ್ತದೆ. ನಿಮಗೆ ಬೇರೆ ಬೇರೆ ಭಾಷೆ ಬಂದರೆ ನಿಮ್ಮ ಸಂಪರ್ಕ ವಿಸ್ತಾರವಾಗುತ್ತದೆ. ನಿಮಗೆ ಯಾರೊಂದಿಗೆ, ಎಲ್ಲಿ, ಯಾವಾಗ, ಹೇಗೆ ಏನು ಮಾತನ್ನು ಆಡಬೇಕೆಂದು ತಿಳಿದಿದ್ದರೆ, ನಿಮ್ಮ ಸಂಪರ್ಕ ಬಲವಾಗುತ್ತದೆ. ನಿಮ್ಮ ಮೇಲೆ ನಂಬಿಕೆ ಹೆಚ್ಚುತ್ತದೆ. ಮಾತುಗಳೆಲ್ಲಾ ಮಾಣಿಕ್ಯವಾಗುತ್ತದೆ. ಸಂಪರ್ಕ ಎನ್ನುವುದು ಕೇವಲ ವ್ಯಾವಹಾರಿಕವಲ್ಲ, ಅದೊಂದು ಜೀವನ ವಿಧಾನವಾಗಬೇಕು. ಆಗ ಅದಕ್ಕೆ ನೀವು ಸ್ವಲ್ಪ ಭಾವನೆಗಳನ್ನು ಸೇರಿಸಬೇಕಾಗುತ್ತದೆ, ಸ್ವಲ್ಪ ಬುದ್ಧಿವಂತಿಕೆಯನ್ನು ಜೋಡಿಸಬೇಕಾಗುತ್ತದೆ, ಸ್ವಲ್ಪ ಅಲಂಕಾರವನ್ನೂ ಮಾಡಬೇಕಾಗುತ್ತದೆ. ಇವೆಲ್ಲವೂ ಮಿಳಿತವಾಗಿ ಹೊಮ್ಮುವುದು ವಿಶುದ್ಧ ಚಕ್ರ ಜಾಗೃತವಾಗಿದ್ದರೆ ಮಾತ್ರ. ಇವುಗಳಲ್ಲಿ ಯಾವುದಾದರೂ ಹೆಚ್ಚು ಕಮ್ಮಿಯಾದರೂ ಸಮತೋಲನ ತಪ್ಪುತ್ತದೆ. ಹಾಗಾಗಿ ಸಂಪರ್ಕ ಎನ್ನುವುದು ಹಗ್ಗದ ಮೇಲಿನ ನಡಿಗೆ ಇದ್ದಂತೆ. ತುಂಬಾ ನಾಜೂಕು.

ಇದು ಮಾಹಿತಿ ಯುಗ ಮತ್ತು ಆರ್ಟಿಫಿಸಿಯಲ್ ಇಂಟೆಲಿಜೆನ್ಸ್ ಯುಗ. ಜ್ಞಾನ ಎನ್ನುವುದು ನಿಮ್ಮ ಅಂಗೈಯಲ್ಲಿದೆ. ಆದರೆ ಅದನ್ನು ಯಾರು ಬೇಕಾದರೂ ಹಾರಿಸಿಬಿಡುವ, ಏಮಾರಿಸಿಬಿಡುವ, ವಂಚಿಸುವ, ನಿಮ್ಮನ್ನು ದಿವಾಳಿ ಮಾಡುವ ಸಾಧ್ಯತೆಯೇ ಹೆಚ್ಚಿದೆ. ಜ್ಞಾನದಿಂದ ನೀವು ಹಣವನ್ನು ಗಳಿಸದಿರಬಹುದು, ಆದರೆ ಬದುಕುವ ದಾರಿಯಲ್ಲಿ ಧೈರ್ಯವಾಗಿ ಮುನ್ನಡೆಯುವ ಆತ್ಮವಿಶ್ವಾಸವನ್ನು ನೀಡುತ್ತದೆ. ಹಿಟ್ಲರ್ ಯಹೂದಿಗಳನ್ನು ದೇಶದಿಂದ ಹೊರಗಟ್ಟಿದಾಗ ಅವರು ತಮ್ಮ ಕೈಯಲ್ಲಿ ಪುಸ್ತಕಗಳನ್ನು ತೆಗೆದುಕೊಂಡು ಹೋದರಂತೆ!! ಬಟ್ಟೆ ಬರೆಯನ್ನಲ್ಲ, ಹಣದ ಟ್ರಂಕುಗಳನ್ನಲ್ಲ, ಹೆಂಡತಿ ಮಕ್ಕಳನ್ನಲ್ಲ ಅಥವಾ ಯಾವುದೇ ವಸ್ತುಗಳನ್ನಲ್ಲ ಬದಲಿಗೆ ಜ್ಞಾನಸ್ವರೂಪಿ ಸರಸ್ವತಿಯನ್ನು. ಈಗಲೂ ಜಗತ್ತು ಯಹೂದಿಗಳನ್ನು ಜೀನಿಯಸ್ ಎಂದೇ ಕರೆಯುವುದು. ಮಾಹಿತಿಗಳು ಅಂಗೈಯಲ್ಲಿರುವುದು ನಿಜ, ಆದರೆ ಅದನ್ನು ದೊರಕಿಸಿಕೊಳ್ಳಲು ಉಪಕರಣಗಳು ಬೇಕು, ಕ್ಷೇತ್ರ ಬೇಕು, ಮಾಧ್ಯಮ ಬೇಕು, ಕೊನೆಗೆ ವಿದ್ಯುತ್ ಸಹಾ ಬೇಕು. ಕೃತಕ ಬುದ್ಧಿಮತ್ತೆಗೂ ಸಹಾ ಪ್ರೋಗ್ರಾಮಿಂಗ್ ಇರಬೇಕು. ನೀವು ಹೇಳಿದ್ದನ್ನು ಅದ್ಭುತವಾಗಿ ಮಾಡಿ ತೋರಿಸುತ್ತದೆ ಎನ್ನುವುದು ಸತ್ಯವಾದರೂ ಅದಕ್ಕೂ ನೀವು ಬೇಕು. ಅದಕ್ಕೆ ವಿಶುದ್ಧ ಚಕ್ರವಿಲ್ಲ, ಅದಕ್ಕಾಗಿಯೇ ನೀವು ವಿಭಿನ್ನ. ಅದಕ್ಕಿಂತಲೂ ನೀವು ಅದ್ಭುತ. ಕೃತಕ ಬುದ್ಧಿಮತ್ತೆಯಲ್ಲ.

ನೀವು ವಿಶುದ್ಧವನ್ನು ಕೈವಶ ಮಾಡಿಕೊಂಡರೆ, ಇತರರ ಆಲೋಚನೆಗಳನ್ನು, ಭಾವನೆಗಳನ್ನು ಮಾತ್ರವಲ್ಲ, ಅವರ ನಡೆವಳಿಕೆಯನ್ನೂ ಬದಲಿಸಿಬಿಡಬಲ್ಲಿರಿ. ಬದಲಾಯಿಸುವುದು ನಿಮ್ಮ ಕೆಲಸವಲ್ಲ, ಆದರೆ ಅವರು ಬದಲಾಗುತ್ತಾರೆ ಎಂಬುದಕ್ಕೆ ನೀವು ಕಾರಣರಾಗಿರುತ್ತೀರಿ. ಬದಲಾವಣೆಯು ಅಥವಾ ನಿಮ್ಮ ಮಾತುಗಳು ತರ್ಕ ಮತ್ತು ವಾದಗಳನ್ನು ಅವಲಂಬಿಸಿರಬೇಕು. ಹಾಗೂ ಅದಕ್ಕೆ ನೀವು ಸಾಕ್ಷಿಯನ್ನು ಹೊಂದಿರಬೇಕು. ಆಗ ನಿಮ್ಮನ್ನು ಯಾರಿಂದಲೂ ಸೋಲಿಸಲು ಆಗದು. ಹಾಗೂ ಸೋಲು ಎನ್ನುವುದು ನಿಮ್ಮ ಮುಂದಿನ ಜೀವನದಲ್ಲಿ ನಿಮ್ಮನ್ನು ಕಾಡಿಸುವುದಿಲ್ಲ.

ಕೆಣಕುವಿಕೆ ಎನ್ನುವ ಒಂದು ವಿಧಾನವಿದೆ. ನೀವು ನಿಧಾನವಾಗಿ ವಿಷಯವನ್ನು ನಿಮ್ಮ ನೇರಕ್ಕೆ ಹೇಳುತ್ತಾ ಬರುತ್ತೀರಿ. ಎದುರಿನವರಿಗೆ ಕಿರಿಕಿರಿ ಆಗುತ್ತಿದ್ದರೂ ಅವರು ನಿಮ್ಮ ಮೇಲಿನ ಬಾಂಧವ್ಯದಿಂದ ಸುಮ್ಮನೆ ಇರುತ್ತಾರೆ. ಅಥವಾ ಕೆಲವು ವಿಷಯಗಳನ್ನು, ವೈಯಕ್ತಿಕ ಸಂಗತಿಗಳನ್ನು ಬೇಕೆಂದೇ ಅವರ ಎದುರು ಆಡುತ್ತೀರಿ. ಅವರ ತಪ್ಪುಗಳನ್ನು, ಕೆಲಸವನ್ನು ಮತ್ತೆ ಮತ್ತೆ ಎತ್ತಿ ಆಡುವುದು, ಹುಳುಕೇ ಇಲ್ಲದಿದ್ದರೂ ಮೊಸರಲ್ಲಿ ಕಲ್ಲನ್ನು ಹುಡುಕುವುದು. ಅದನ್ನೇ ಪಿರಿಪಿರಿ ಮಾಡುತ್ತಾ ಹೇಳುವುದು. ಹೀಗೆ ನಾನಾ ವಿಧಗಳಲ್ಲಿ ಎದುರಿನವರನ್ನು ಕೆಣಕುವವರು ಯಾವಾಗಲೂ ಇದ್ದಾರೆ. ಅವರನ್ನೆಲ್ಲಾ ನಿರ್ಲಕ್ಷಿಸಿ ನೀವು ಮುಂದೆ ಸಾಗಲು ವಿಶುದ್ಧ ಚಕ್ರದ ಸಹಾಯ ಬೇಕೇಬೇಕು.

ವಿಶುದ್ಧ ಚಕ್ರವು ನಿಮ್ಮ ಮನಸ್ಸನ್ನು ಆಳುತ್ತದೆ. ಸಕಾರಾತ್ಮಕವಾಗಿ ಅದು ವಿಷಯಗಳನ್ನು ಹಿಡಿತಕ್ಕೆ ತೆಗೆದುಕೊಳ್ಳುತ್ತದೆ. ಮತ್ತು ನಿಮ್ಮ ವರ್ತನೆಯ ಮೂಲಕ ಹೊರಹೊಮ್ಮಿಸುತ್ತದೆ. ಉದಾಹರಣೆಗೆ;

ಫ್ರೇಮಿಂಗ್ ಎಫೆಕ್ಟ್: ವಿಶುದ್ಧ ಚಕ್ರದ ಜಾಗೃತಿಯಿಂದಾಗಿ ಯಾವುದೇ ವಿಷಯವಿರಲಿ, ಕೆಲಸವಿರಲಿ, ಕಲಿಕೆ ಇರಲಿ, ಎಲ್ಲವೂ ಕೇಂದ್ರೀಕರಣವಾಗಿರುತ್ತದೆ. ನಿರ್ದಿಷ್ಟ ಗುರಿಯನ್ನು ಹೊಂದಿರುತ್ತದೆ. ಅದು ನಿಮ್ಮನ್ನು ಮತ್ತು ಎದುರಿನವರನ್ನು ಇಬ್ಬರನ್ನೂ ಏಕಕಾಲಕ್ಕೆ ಪ್ರಭಾವಿಸುತ್ತದೆ.

ಪ್ರತಿ ಪದವನ್ನು ಆಡುವಾಗಲೂ ಒಂದು ಹೊಸ ಅರ್ಥವನ್ನು ಹೊಮ್ಮಿಸುವ ಧ್ವನಿ ನಿಮ್ಮದಾಗಿರುತ್ತದೆ. ಆ ಧ್ವನಿಯು ಕಠೋರವಾಗಿರುವುದಿಲ್ಲ, ಮೃದುವಾಗಿಯು ಇರುವುದಿಲ್ಲ, ನಯವಾಗಿರುವುದಿಲ್ಲ, ಮಂದ್ರವಾಗಿಯೂ ಇರುವುದಿಲ್ಲ. ಅದನ್ನು ಮಾತಿನಿಂದ ವರ್ಣಿಸಲು ಆಗದು. ಆದರೆ ಅದು ತನ್ನದೇ ಆದ ಸ್ವಾಯುತ್ತತೆಯನ್ನು ಹೊಂದಿರುತ್ತದೆ. ಕೇಳುಗರನ್ನು ನೆನಪಿನ ಕಡಲಲ್ಲಿ ತೇಲಿಸುತ್ತದೆ. ಹಳೆಯದನ್ನು ಕಣ್ಣಂದೆ ತಂದು ನಿಲ್ಲಿಸುತ್ತದೆ. ನೀವು ಅದರೊಳಗೆ ತೇಲಿ ತೇಲಿ ಹೋಗುತ್ತೀರಿ. ಮತ್ತು ಹೊರಬರಲು ಇಷ್ಟವಿಲ್ಲದೇ ಅಲ್ಲಿಯೇ ಉಳಿಯುತ್ತೀರಿ. ಅದರಿಂದ ನಿಮಗೊಂದು ಸುಖ ಸಿಗುತ್ತದೆ. ಮತ್ತು ಅದನ್ನು ನೀವು ಶಾಶ್ವತಗೊಳಿಸುವ ಪ್ರಯತ್ನ ಮಾಡುತ್ತೀರಿ. ಅದೇ ವಿಶುದ್ಧ ಚಕ್ರದ ಭಾವ ಪ್ರಚೋದಕ ಸಾಮರ್ಥ್ಯ.

ನೀವು ನಿಮ್ಮೊಳಗೇ ಮಾತನಾಡಲು ತೊಡಗುತ್ತೀರಿ. ಮೊದಮೊದಲು ನೀವು ಮನಸ್ಸಿನಲ್ಲೇ ಮಾತನಾಡಿಕೊಳ್ಳುತ್ತಿರಿ. ಬಳಿಕ ಅದು ಗುನುಗುನು ಶಬ್ದವನ್ನು ಸೂಸುತ್ತದೆ. ಆಮೇಲೆ ನೀವು ದೊಡ್ಡದಾಗಿಯೇ ಮಾತನಾಡಿ ಬಿಡುತ್ತೀರಿ. ನಿಮಗೆ ನೀವು ಆಜ್ಞೆಯನ್ನು ನೀಡುತ್ತೀರಿ. ನಿಮ್ಮನ್ನು ನೀವೇ ಕಾಡುತ್ತೀರಿ. ಬೈಯುತ್ತೀರಿ. ಹೊಗಳುತ್ತೀರಿ. ಸಮಾಧಾನ ಮಾಡಿಕೊಳ್ಳುತ್ತೀರಿ. ಇವೆಲ್ಲದರಿಂದ ನಿಮ್ಮ ಮಾನಸಿಕ ಸ್ಥಿತಿ ಸುಧಾರಿಸುತ್ತಾ ಹೋಗುತ್ತದೆ.

ವಿಶುದ್ಧ ಚಕ್ರದ ಸಹಾಯದಿಂದಾಗಿ ನೀವು ಸಕಾರಾತ್ಮಕವಾದ ಪದಗಳನ್ನೇ ಬಳಸುತ್ತೀರಿ, ಆದರೆ ಕೆಲವು ಪದಗಳು ಸಕಾರಾತ್ಮಕ ಮತ್ತು ನಕಾರಾತ್ಮಕ ಭಾವನೆಗಳನ್ನು ಪ್ರಚೋದಿತ್ತವೆ. ನಕಾರಾತ್ಮಕ ಭಾವನೆಗಳು ಹಾನಿಯನ್ನು ಉಂಟು ಮಾಡುತ್ತವೆ. ಸಕಾರಾತ್ಮಕವಾಗಿದ್ದರೆ ನಿಮ್ಮ ಅಭಿವೃದ್ಧಿಗೆ ಕಾರಣವಾಗುತ್ತವೆ.

ನಿಮ್ಮ ಧ್ವನಿಯು ನಿಮ್ಮ ವ್ಯಕ್ತಿತ್ವವನ್ನು ತೋರಿಸುತ್ತದೆ. ಅದು ಟೋನ್ ಮತ್ತು ಪಿಚ್‌ಗಳನ್ನು ಅವಲಂಬಿಸಿವೆ. ನಿಮ್ಮ ಸ್ವರವೇ ನಿಮ್ಮ ಭಾವನೆಗಳನ್ನು ಹೇಳಿ ಬಿಡುತ್ತದೆ. ಅದರ ಏರಿಳಿತ ತುಂಬಾ ಮುಖ್ಯ. ಆಗ ಮಾತ್ರ ಯಾವುದೇ ಸನ್ನಿವೇಶ ಅರ್ಥವಾಗುತ್ತದೆ.

ಮಾತನಾಡುವಾಗ ದೇಹಭಾಷೆ, ಮುಖಭಾವ, ಕಣ್ಣಿನ ಸಂಪರ್ಕ ಇವುಗಳು ಇಲ್ಲದಿದ್ದರೆ ನೀವು ತಜ್ಞರಾಗಲು ಸಾಧ್ಯವಿಲ್ಲ. ನಿಮ್ಮ ನಿರಂತರತೆ ಮಾತ್ರ ನಿಮ್ಮನ್ನು ವಿಜ್ಞಾನಿಯನ್ನಾಗಿ ಮಾಡುತ್ತದೆ. ನಿರಂತರತೆ ಮಾತ್ರ ನಿಮ್ಮ ಆರ್ಥಿಕ ಅಭಿವೃದ್ಧಿ ಮಾಡುತ್ತದೆ. ನಿರಂತರತೆ ಮಾತ್ರ ನಿಮ್ಮ ಕೆಲಸದಲ್ಲಿ ಖುಷಿ ನೀಡುತ್ತದೆ. ನಿರಂತರತೆ ಮಾತ್ರ ನಿಮಗೊಂದು ವ್ಯಕ್ತಿತ್ವವನ್ನು ನೀಡುತ್ತದೆ. ನೀವು ಒಮ್ಮೆ ಮಾತನಾಡುವಾಗ, ನಿಮ್ಮ ಎದುರಿನಲ್ಲಿರುವ ಯಾರಾದರೂ ಒಬ್ಬರ ಕಣ್ಣಲ್ಲಿ ಕಣ್ಣಿಟ್ಟು ನೋಡಿ, ಮಾತು ಮುಗಿಯುವವರೆಗೂ ಆಗಾಗ ಅವರನ್ನು ಬರೀ ನೋಡುವುದಲ್ಲ ಕಣ್ಣಲ್ಲಿ ಕಣ್ಣಿಟ್ಟು ನೋಡಿ. ಅವರು ನಿಮ್ಮ ವಶಕ್ಕೆ ಬಂದುಬಿಡುತ್ತಾರೆ.

ಬಾಲ್ಯದಿಂದಲೂ ನೀವು ಕತೆಗಳನ್ನು ಕೇಳುತ್ತಾ ಕೇಳುತ್ತಾ ಬೆಳೆದು ಬಂದಿದ್ದೀರಿ. ಅದಕ್ಕಾಗಿಯೇ ಒಂದು ಪುಸ್ತಕ ಕಂಡರೂ ನೀವು ಅದನ್ನು ಕೈಗೆತ್ತಿಕೊಳ್ಳುತ್ತೀರಿ. ಮತ್ತು ಓದುತ್ತೀರಿ. ಮುಂದೊಂದು ದಿನ ನೀವು ಆ ರೀತಿಯಲ್ಲಿ ಬಂದ ಪುಸ್ತಕಗಳನ್ನೆಲ್ಲಾ ಓದಿಯೇ ಓದುತ್ತೀರಿ. ಮತ್ತು ಅದರಲ್ಲಿರುವ ಕತೆಗಳನ್ನು ಚಂದವಾಗಿ ಹೇಳುತ್ತೀರಿ. ಕತೆ ಹೇಳುವುದು ಒಂದು ಕಲೆ. ಕತೆಗಳು ಎಂತೆಂಥವರನ್ನೂ ಮರುಳು ಮಾಡಿದೆ.

ಇರಾನ್ ಬಗ್ಗೆ ಮೋದಿ ಮೌನದ ಹಿಂದೆ-ಮುಂದೆ



ರಷ್ಯಾ– ಉಕ್ರೇನ್ ಯುದ್ಧದ ನಂತರ ಈಗ ಅಮೆರಿಕ,ಇಸ್ರೇಲ್–ಇರಾನ್ ನಡುವೆ ಯುದ್ಧ ಆರಂಭವಾಗಿದೆ. ಇತ್ತ ಪಾಕಿಸ್ತಾನ–ಅಫಘಾನಿಸ್ತಾನಗಳ ನಡುವೆ ಯುದ್ಧ ನಡೆಯುತ್ತಿದೆ. ಇರಾನ್, ಪಾಕಿಸ್ತಾನ್, ಅಫಘಾನಿಸ್ತಾನಗಳಲ್ಲಿ ಯುದ್ಧಗಳು ಮತೀಯ ಆಧಾರದ ಮೇಲೆ ನಡೆಯುತ್ತಿವೆ. ಇಸ್ರೇಲ್‌ಗೆ ಮುಸ್ಲಿಂ ರಾಷ್ಟ್ರಗಳ ನಡುವೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಪ್ರಯತ್ನವಾದರೆ, ಅಮೆರಿಕಕ್ಕೆ ತನ್ನ 'ದೊಡ್ಡಣ್ಣ'ನ ಸ್ಥಾನವನ್ನು ಉಳಿಸಿಕೊಳ್ಳುವ ಕಾತರ. ಇರಾನ್, ಇಸ್ರೇಲನ್ನು ನಾಶ ಮಾಡಲು ಮೊದಲಿನಿಂದಲೂ ಕಿರುಕುಳ ನೀಡುತ್ತಲೇ ಬಂದಿದೆ. ಈ ಉಪಟಳವನ್ನು ಶಾಶ್ವತವಾಗಿ ಕೊನೆಗಾಣಿಸಬೇಕೆಂಬುದು ಇಸ್ರೇಲಿನ ಬಯಕೆ.

ಇಲ್ಲಿ ಇನ್ನೊಂದು ವಿಶೇಷವೆಂದರೆ ಮುಸ್ಲಿಂ ದೇಶಗಳೇ ಪರಸ್ಪರ ಬಡಿದಾಡಿಕೊಳ್ಳುವುದು. ಪಾಕಿಸ್ತಾನ ಮತ್ತು ಅಫಘಾನಿಸ್ತಾನಗಳೆರಡೂ ಮುಸ್ಲಿಂ ಮತೀಯ ಆಡಳಿತವಿರುವ ದೇಶಗಳು. ಆದರೆ ಮುಸ್ಲಿಮರಲ್ಲಿ ಶಿಯಾ–ಸುನ್ನಿ ಇತ್ಯಾದಿ ಅನೇಕ ಪರಸ್ಪರ ವಿರೋಧಿ ಜನಾಂಗಗಳಿವೆ. ಇರಾನ್ ಶಿಯಾ ಮುಸ್ಲಿಮರ ಆಡಳಿತ ಇರುವ ದೇಶ. ಅದು ಸುನ್ನಿ ಹಾಗೂ ವಹಾಬಿ ಪ್ರಾಬಲ್ಯದ ದೇಶಗಳಾದ ಸೌದಿ ಅರೇಬಿಯಾ, ಯುಎಇ, ಕತಾರ್, ಒಮಾನ್ ಮುಂತಾದ ದೇಶಗಳ ನಗರಗಳ ಮೇಲೆ ಕ್ಷಿಪಣಿದಾಳಿ ನಡೆಸುತ್ತಿದೆ.

ಇರಾನ್‌ನಲ್ಲೇ ಮುಸ್ಲಿಂ ಯುವ ಜನಾಂಗ ಖಮೇನಿ ಸಾವನ್ನು ಸಂಭ್ರಮಿಸುತ್ತಿರುವಾಗ ಭಾರತದ ಕೆಲವು ಮುಸ್ಲಿಂ ಗುಂಪುಗಳು ಆಯತೊಲ್ಲ ಖಮೇನಿಯ ಸಾವಿಗಾಗಿ ಕಣ್ಣೀರು ಸುರಿಸುತ್ತಿರುವುದು ವಿಚಿತ್ರ. ಇನ್ನು ಕಾಂಗ್ರೆಸ್ಸಿನ ಸಮಸ್ಯೆ ಇನ್ನೂ ವಿಚಿತ್ರ. ಇರಾನ್ ಯುದ್ಧ ಹಾಗೂ ಖಮೇನಿ ಹತ್ಯೆ ಬಗ್ಗೆ ಮೋದಿ ಮೌನ ಯಾಕೆ ಎಂಬುದೇ ಕಾಂಗ್ರೆಸಿಗರಿಗೆ ದೊಡ್ಡ ಚಿಂತೆ. ಏನೇ ಆದರೂ ಮೋದಿಯನ್ನು ಟೀಕಿಸುವುದು, ಮುಸ್ಲಿಮರ ಓಲೈಕೆ ಮಾಡುತ್ತಾ ಅಧಿಕಾರ ಗಳಿಸಲೆತ್ನಿಸುವುದು –ಇದೊಂದೇ ಅಜೆಂಡಾ ರಾಹುಲ್ ಮತ್ತು ಕಾಂಗ್ರೆಸಿಗರದ್ದು. ವಿದೇಶಾಂಗ ನೀತಿಯಲ್ಲಿ ಮೋದಿಯವರ ಪರಿಪಕ್ವತೆ ಬಗೆ ಅವರಿಗೇನು ಗೊತ್ತು? ಪಾಶ್ಚಾತ್ಯ ಜಗತ್ತು, ಮಧ್ಯ ಏಷ್ಯಾ ಯುದ್ಧದ ದಳ್ಳುರಿಯಲ್ಲಿ ಬೇಯುತ್ತಿದ್ದರೆ ಭಾರತದಲ್ಲಿ ಜನ ಹಾಯಾಗಿದ್ದಾರೆ. ಎಲ್ಲಾ ಕ್ರೈಸ್ತ, ಮುಸ್ಲಿಂ ದೇಶಗಳೊಂದಿಗೆ ಹಾಗೂ ಇಸ್ರೇಲ್, ರಷ್ಯಾಗಳೊಡನೆ ಕೂಡ ಮೋದಿ ಉತ್ತಮ ಸಂಬಂಧ ಸ್ಥಾಪಿಸಿದ್ದಾರೆ. ಜಗತ್ತು ತೈಲ ಸಂಕಷ್ಟದಲ್ಲಿದ್ದರೂ ರಷ್ಯಾದ ಎರಡು ಹಡಗುಗಳು ತೈಲ ಹೊತ್ತು ಭಾರತದತ್ತ ಬರುತ್ತಿವೆ.

ಈ ಯುದ್ಧದ ಸಂದರ್ಭದಲ್ಲಿ ಭಾರತ ಜಾಣ ನಡೆ ಪ್ರದರ್ಶಿಸಿದೆ. ಖಮೇನಿ ಹತ್ಯೆ ಬಗ್ಗೆ ಮೋದಿ ಮೌನ ವಹಿಸಿದರೂ, ಭಾರತದ ವಿದೇಶಾಂಗ ಖಾತೆಯ ಕಾರ್ಯದರ್ಶಿ ಇರಾನ್ ದೂತಾವಾಸಕ್ಕೇ ಹೋಗಿ ಅಲ್ಲಿನ ಪುಸ್ತಕದಲ್ಲಿ ಖಮೇನಿ ಸಾವಿನ ಬಗ್ಗೆ ಭಾರತದ ಪರವಾಗಿ ಸಂತಾಪ ಸೂಚಕ ಶಬ್ದಗಳನ್ನು ಬರೆದು ಬಂದಿದ್ದಾರೆ. ವಿದೇಶಾಂಗ ಸಚಿವ ಜೈಶಂಕರ್ ಇರಾನ್ ವಿದೇಶಾಂಗ ಸಚಿವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದ್ದಾರೆ. ಏಕೆಂದರೆ ಇರಾನಿನ ಛಬಾಹರ್ ಬಂದರನ್ನು ಭಾರತ ನಿರ್ಮಿಸಿದೆ. ಇದರಿಂದ ಯುರೋಪಿಗೆ ಹತ್ತಿರದ ವಾಣಿಜ್ಯ ಮಾರ್ಗ ಲಭ್ಯವಾಗುತ್ತದೆ. ಇರಾನ್‌ನಿಂದ ಭಾರತ ಹೇರಳ ತೈಲ ಖರೀದಿಸುತ್ತಿದೆ. ಬಿಕ್ಕಟ್ಟಿನ ಸಂದರ್ಭದಲ್ಲಿ ಪ್ರತಿಯೊಂದು ಹೆಜ್ಜೆಯನ್ನೂ ಅಳೆದುತೂಗಿ, ಅತಿ ಎಚ್ಚರಿಕೆಯಿಂದ ಇಡಬೇಕಾಗುತ್ತದೆ. ಇಂಥ ಸೂಕ್ಷ್ಮತೆ, ಜಾಣ್ಮೆ ಮಂದಮತಿಗಳಿಗೆ ಹೇಗೆ ಅರ್ಥವಾಗಬೇಕು? ಅವರಿಗೆ ತನ್ನ ವಂಶ ಅಧಿಕಾರ ಹಿಡಿಯಬೇಕೆಂಬ ಚಿಂತೆ–ಅದಕ್ಕಾಗಿ ಎಲ್ಲ ಗಿಮಿಕ್‌ಗಳು. ಮೋದಿಗಾದರೋ ರಾಷ್ಟ್ರ ಹಾಗೂ ಈ ರಾಷ್ಟ್ರದ 140 ಕೋಟಿ ಪ್ರಜೆಗಳ ಹಿತರಕ್ಷಣೆಯ ಚಿಂತೆ.

ಇರಾನ್‌ನ ಪ್ರಾಚೀನ ಧರ್ಮ, ಸಂಸ್ಕೃತಿ, ಇತಿಹಾಸಗಳ ಮೇಲೆ ಬೆಳಕು ಚೆಲ್ಲುವುದು ಇಲ್ಲಿ ಪ್ರಸ್ತುತವೆನಿಸುತ್ತದೆ. ಸುಮಾರು ಕ್ರಿ.ಶ.7ನೇ ಶತಮಾನದಲ್ಲಿ ಅಂದರೆ ಅರಬ್ ದೇಶದಲ್ಲಿ ಇಸ್ಲಾಮಿನ ಉದಯವಾದ ಮೇಲೆ, ಅರಬ್ ಮುಸ್ಲಿಮರು ಪರ್ಷಿಯಾ(ಇಂದಿನ ಇರಾನ್) ದೇಶದ ಮೇಲೆ ಆಕ್ರಮಣ ಮಾಡಿ ವಶಪಡಿಸಿಕೊಂಡರು. ಅಲ್ಲಿ ಆಗ ಸಾವಿರಾರು ವರ್ಷಗಳಷ್ಟು ಪ್ರಾಚೀನವಾದ ಜೊರಾಷ್ಟ್ರಿಯನ್ ಧರ್ಮವಿತ್ತು. ಮುಸ್ಲಿಂ ಆಕ್ರಮಕರ ವಶವಾದ ಮೇಲೆ ಜೊರಾಷ್ಟ್ರಿಯನ್ ಧರ್ಮವನ್ನು ನಿಷೇಧಿಸಿ ಅವರ ದೇವಾಲಯಗಳನ್ನು ಧ್ವಂಸಗೊಳಿಸಲಾಯಿತು. ಜನರನ್ನು ಹಿಂಸಿಸಿ ಬಲಾತ್ಕಾರದಿಂದ ಮತಾಂತರ ಮಾಡಲಾಯಿತು. ತಮ್ಮ ಧರ್ಮವನ್ನು ಉಳಿಸಿಕೊಳ್ಳಲು ಸಾವಿರಾರು ಜೊರಾಷ್ಟ್ರಿಯನ್ನರು ಹಡಗುಗಳಲ್ಲಿ ಪಲಾಯನಗೈದು ಭಾರತದ ಗುಜರಾತ್ ತೀರ ತಲುಪಿದರು. ಅಲ್ಲಿ ಆಗ ಕರ್ಣಾವತಿಯ ರಾಜ ಆಳುತ್ತಿದ್ದ ಎಂದೂ, ನಿರಾಶ್ರಿತರು ಅವನಲ್ಲಿ ಆಶ್ರಯ ಬೇಡಿದರೆಂದೂ ಹೇಳುತ್ತಾರೆ. ಇನ್ನೊಂದು ಐತಿಹ್ಯದ ಪ್ರಕಾರ ಸಂಜಾನ್ ತೀರಕ್ಕೆ ತಲುಪಿ ಅಲ್ಲಿನ ರಾಜನಲ್ಲಿ ಆಶ್ರಯ ಬೇಡಿದರೆಂದು ಹೇಳಲಾಗುತ್ತದೆ. ಒಂದು ದಂತಕತೆಯ ಪ್ರಕಾರ ಅಲ್ಲಿನ ರಾಜನು ಅವರ ನಡೆಯನ್ನು, ಸಂಸ್ಕೃತಿಯ ಮಟ್ಟವನ್ನು ಪರೀಕ್ಷಿಸಲು ಒಂದು ಲೋಟದಲ್ಲಿ ತುಳುಕುವಷ್ಟು ಹಾಲು ತುಂಬಿ ಕಳುಹಿಸಿದನಂತೆ. ಆದರೆ ಸಂಸ್ಕಾರವಂತರೂ, ಪ್ರತಿಭಾವಂತರೂ ಆದ ಪರ್ಷಿಯನ್ನರು ಆ ತುಂಬು ಲೋಟದಲ್ಲಿ ಸಕ್ಕರೆ ಮಿಶ್ರ ಮಾಡಿ, ತಾವು ಹಾಲು–ಸಕ್ಕರೆ ಮಿಶ್ರಣದಂತೆ ಸವಿಯಾದ ಸಂಬಂಧ ಇಟ್ಟುಕೊಳ್ಳುತ್ತೇವೆಂಬ ಸಂದೇಶ ಕಳುಹಿಸಿ ಕೊಟ್ಟರಂತೆ. ಸಂತುಷ್ಟನಾದ ರಾಜ ಅವರಿಗೆ ಆಶ್ರಯ ಕೊಟ್ಟನಂತೆ. ಅವರನ್ನು ಪಾರ್ಸಿಗಳು ಎನ್ನುತ್ತಾರೆ. ಅವರು ಇಂದಿಗೂ ಹಿಂದುಗಳೊಡನೆ ಸಹಬಾಳ್ವೆ ಮಾಡಿಕೊಂಡು ಬಂದಿದ್ದಾರೆ. ಭಾರತೀಯರೇ ಆಗಿದ್ದಾರೆ. ತಮ್ಮ ಧರ್ಮವನ್ನೂ ಅಡೆತಡೆ ಇಲ್ಲದೆ ಅನುಸರಿಸಿಕೊಂಡು ಬರುತ್ತಿದ್ದಾರೆ. ದೇಶಕ್ಕೆ ಅಪಾರ ಕೊಡುಗೆಯನ್ನು ಕೊಟ್ಟಿದ್ದಾರೆ. ಕೆಲವು ಪ್ರಮುಖ ಹೆಸರುಗಳನ್ನು ಉದಾಹರಿಸಬೇಕೆಂದರೆ –ಜಮ್‌ಶೆಡ್‌ಜಿ ಟಾಟಾ, ರತನ್ ಟಾಟಾ, ಗೋದ್ರೆಜ್, ವಾಡಿಯಾ, ಹೋಮಿ–ಜೆ.ಭಾಭಾ, ಸ್ಯಾಮ್‌ಮಾಣೆಕ್‌ಶಾ, ದಾಧಾಭಾಯಿ ನವರೋಜಿ, ಮೇಡಂ ಭಿಕ್ಕಾಜಿ ಕಾಮಾ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪಕ ಸದಸ್ಯರಲ್ಲಿ ಒಬ್ಬರಾದ ಫಿರೋಜ್ ಶಾ ಮೆಹ್ತಾ ಮುಂತಾದವರು.

1979ರವರೆಗೆ ಇರಾನ್‌ನಲ್ಲಿ ಮಹಮದ್ ರಾಜಾ ಶಾ ಪಹ್ಲವಿಯ ಆಡಳಿತವಿತ್ತು. ಅವರು ಅಮೆರಿಕದೊಂದಿಗೆ ಸ್ನೇಹದಲ್ಲಿದ್ದರು. ಅವರದ್ದು ವಂಶ ಸರ್ವಾಧಿಕಾರವಾಗಿದ್ದರೂ ಆಧುನಿಕ ಜೀವನ ಶೈಲಿಗೆ ವಿರೋಧವಿರಲಿಲ್ಲ. 1980ರ ಹೊತ್ತಿಗೆ ರುಹಲ್ಲಾ ಖೊಮೇನಿ ಇಸ್ಲಾಮಿಕ್ ಕ್ರಾಂತಿ ನಡೆಸಿ ಅಧಿಕಾರಕ್ಕೆ ಬಂದರು. ಅವರು ಶಿಯಾ ಮತೀಯ ನಾಯಕರು ಹಾಗೂ ಷರಿಯಾ ಕಾನೂನುಗಳನ್ನು ಖಡಕ್ಕಾಗಿ ಜಾರಿಗೆ ತಂದರು. ಯುವತಿಯರು ಮಹಿಳೆಯರಿಗೆ ಬುರ್ಖಾ ಕಡ್ಡಾಯವಾಯಿತು. ತಪ್ಪಿದವರಿಗೆ ಛಡಿ ಏಟು, ಹಿಂಸೆ. ಮಹಿಳೆಯರಿಗಂತೂ ಸ್ವಾತಂತ್ರ್ಯವೇ ಇಲ್ಲವಾಯಿತು. ವಿರೋಧಿಸಿದವರ ಮೇಲೆ ದೌರ್ಜನ್ಯ ಹಾಗೂ ನೇಣುಗಂಬದ ಶಿಕ್ಷೆ. 1989ರಲ್ಲಿ ಅವರು ನಿಧನರಾದ ಮೇಲೆ ಅಯತೊಲ್ಲಾ ಖಮೇನಿ ಕೂಡಾ ಅದೇ ಬಗೆಯ ಆಳ್ವಿಕೆ ಮುಂದುವರಿಸಿದರು. ಕೆಲವು ವರ್ಷದ ಹಿಂದೆ ಇರಾನ್‌ನ ಕಾಲೇಜ್ ಯುವತಿಯವರು ಹಿಜಾಬ್ ವಿರುದ್ಧ ಪ್ರತಿಭಟಿಸಿದ್ದು ಎಲ್ಲರಿಗೂ ತಿಳಿದಿದೆ.

2004ರ ಆಗಸ್ಟ್ 15ರಂದು ಇರಾನ್‌ನಲ್ಲಿ ಭಯಾನಕ ಘಟನೆ ನಡೆಯಿತು. ಆತಾಫಿ ಸಹಾಲೆ ಎಂಬ ಯುವತಿಯನ್ನು ಒಂದು ಕ್ರೇನಿಗೆ ಹಗ್ಗ ಕಟ್ಟಿ ನೇಣಿಗೆ ಏರಿಸಲಾಯಿತು. ಆಕೆಯ ಅಪರಾಧವೆಂದರೆ ಒಂದು ರಾತ್ರಿ ಆಕೆ ಕಾರಿನಲ್ಲಿ ಹಿಜಾಬ್ ಧರಿಸದೆ ಇದ್ದುದು ಮತ್ತು ಪುರುಷ ಡ್ರೈವರ್ ಜೊತೆ ಒಬ್ಬಳೇ ಹೋದುದು. ಆಕೆಯನ್ನು ಪೊಲೀಸ್ ಸ್ಟೇಶನ್ನಿಗೆ ಎಳೆದುಕೊಂಡು ಹೋಗಿ ಸಾಮೂಹಿಕ ಅತ್ಯಾಚಾರ ನಡೆಸಲಾಯಿತು. ಷರಿಯತ್ ಕಾನೂನಿನಂತೆ ನೇಣುಗಂಬದ ಶಿಕ್ಷೆ ವಿಧಿಸಲಾಯಿತು. ಕ್ರೇನಿನ ನೇಣಿನ ಕುಣಿಕೆಯಲ್ಲಿ ವಿಲ ವಿಲನೆ ಒದ್ದಾಡಿ, ಕೈಕಾಲು ಬಡಿಯುತ್ತಾ ಸಾಯುವ ಕೊನೆ ಕ್ಷಣದಲ್ಲಿ ಆಕೆ "ಮುಂದೊಂದು ದಿನ ನಿನ್ನ ಶವದ ಮೇಲೆಯೇ ಇಲ್ಲಿನ ಹೆಣ್ಮಕ್ಕಳು ಕುಣಿದು ಕುಪ್ಪಳಿಸಿ ಸಂಭ್ರಮಿಸುತ್ತಾರೆ ನೋಡು" ಎಂದು ಖಮೇನಿಗೆ ಶಪಿಸಿ ಪ್ರಾಣಬಿಟ್ಟಳು. ಕರ್ಮ ಎಂದಿಗೂ ಬೆನ್ನು ಬಿಡುವುದಿಲ್ಲ. ಇಂದು ಅಯತೊಲ್ಲಾ ಖಮೇನಿಯ ಶವ ಬಿದ್ದಿದೆ. ಇರಾನಿನ ಸಾರ್ವಜನಿಕ ಬೀದಿಗಳಲ್ಲಿ ಯುವಕ ಯುವತಿಯರು ಹಿಜಾಬ್ ಇಲ್ಲದೆ, ಕುಣಿದು ಸಂಭ್ರಮಿಸುತ್ತಿದ್ದಾರೆ. ಎಂಥ ವಿಡಂಬನೆ!

ಖಮೇನಿಗಾಗಿ ಭಾರತದಲ್ಲಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಕಣ್ಣೀರು ಸುರಿಸುತ್ತಾರೆ. ಅವರು ಓಲೈಸುತ್ತಿರುವ ಮುಸ್ಲಿಮರೂ ಕಣ್ಣೀರು ಸುರಿಸುತ್ತಿದ್ದಾರೆ. ಇಷ್ಟಕ್ಕೂ ಭಾರತ ಯಾಕಾಗಿ ಇರಾನ್‌ಗೆ, ಖಮೇನಿಗೆ ಬೆಂಬಲ ನೀಡಬೇಕು? ಛಬಾಹರ್ ಬಂದರು, ನಿಲ್ದಾಣ ಇರಾನ್ ಪುಕ್ಕಟೆ ಕೊಟ್ಟಿಲ್ಲ. ಭಾರತ ಕೋಟ್ಯಂತರ ರೂಪಾಯಿ ತನ್ನ ಖರ್ಚಿನಿಂದ ನಿರ್ಮಾಣ ಮಾಡಿಕೊಟ್ಟಿದೆ. ಇರಾನ್‌ಗೂ ಅದರ ಲಾಭವಿದೆ. ಮೇಲಾಗಿ ಇರಾನ್ ಒಂದು ಕಟ್ಟರ್‌ಪಂಥೀ ಸರ್ವಾಧಿಕಾರಿ ದೇಶ. ಅಲ್ಲಿನ ಪ್ರಜೆಗಳೇ ಅವರ ಆಡಳಿತದ ವಿರುದ್ಧ ಪ್ರತಿಭಟಿಸುತ್ತಾ ಬಂದಿದ್ದಾರೆ. ನಮ್ಮದು ಸ್ವತಂತ್ರ ಪ್ರಜಾಪ್ರಭುತ್ವ. ಮಾತ್ರವಲ್ಲದೆ ಭಾರತದ ವಿರುದ್ಧ ಪಾಕಿಸ್ತಾನ ಪುಲ್ವಾಮಾ ಆಕ್ರಮಣ ಮಾಡಿದಾಗಲಾಗಲೀ, ಕಾಶ್ಮೀರಿ ಪಂಡಿತರ ನರಮೇಧ ಮಾಡಿದಾಗಲಾಗಲೀ ಇರಾನ್ ಖಂಡಿಸಲಿಲ್ಲ. ಜಮ್ಮು–ಕಾಶ್ಮೀರದ ಬಗ್ಗೆ ಅದು ಸದಾ ಪಾಕಿಸ್ತಾನವನ್ನು ಬೆಂಬಲಿಸುತ್ತಾ ಬಂದಿದೆ. ಇವು ಕೆಲವೇ ಉದಾಹರಣೆಗಳು. ಅದು ಎಂದೂ ಭಾರತದ ಪ್ರಜಾಪ್ರಭುತ್ವದ ಪರವಾಗಿರಲಿಲ್ಲ. ಅವರ ತೈಲ ನಮಗೆ ಅನಿವಾರ್ಯವೇನೋ ಅಹುದು. ಆದರೆ ನಾವು ಪುಕ್ಕಟೆ ಖರೀದಿಸುತ್ತಿಲ್ಲ. ಅದು ವಾಣಿಜ್ಯ ವ್ಯವಹಾರ. ಹಾಗಾಗಿ ಇರಾನ್ ಬಗ್ಗೆ ಚಿಂತಿಸುವ ಅಗತ್ಯ ಅಷ್ಟೊಂದೇನೂ ಇಲ್ಲ. ಜೊತೆಗೆ ಇಸ್ರೇಲ್ ನಮಗೆ ಆಪತ್ಕಾಲದಲ್ಲಿ ಪ್ರಾಮಾಣಿಕವಾಗಿ ಸಹಾಯ ಮಾಡಿದ ದೇಶ.

ಇಂದು ಯುದ್ಧದಿಂದ ಜಗತ್ತು ಅಪಾಯದಲ್ಲಿದೆ ನಿಜ. ಆದರೆ ಜಾಗತಿಕವಾಗಿ ಇಸ್ಲಾಂ ಹೆಚ್ಚು ಅಪಾಯದಲ್ಲಿದೆ. ಕೊಲ್ಲಿ ಸಮರವು ಅದರ ಮೇಲೆ ದೊಡ್ಡ ಪರಿಣಾಮ ಬೀರುವುದು ನಿಶ್ಚಿತವಾಗಿದೆ.

ಇರಾನ್ ಯುದ್ಧ: ಪ್ರಾಕ್ಸಿ ಯುದ್ಧದಿಂದ ಮನೆಬಾಗಿಲಿನವರೆಗೆ

▸ **ಪ್ರಶಾಂತ್ ವೈದ್ಯರಾಜ್**



ಇಸ್ರೇಲ್, ಅಮೆರಿಕಾ ಮತ್ತು ಇರಾನ್ ನಡುವಿನ ಯುದ್ಧವು ಈಗ ಅತ್ಯಂತ ಅಪಾಯಕಾರಿ ಹಂತಕ್ಕೆ ತಲುಪಿದೆ. ನೇರ ದಾಳಿಗಳು, ಕ್ಷಿಪಣಿ ಪ್ರಹಾರಗಳು ಮತ್ತು ವೇಗವಾಗಿ ಏರುತ್ತಿರುವ ಭೂರಾಜಕೀಯ ಉದ್ವಿಗ್ನತೆಗಳು ಈಗ ಹಿಂದಿನ ಛಾಯಾ ಯುದ್ಧದ ಮಾದರಿಯನ್ನು ಬದಲಿಸಿವೆ. ಅಮೆರಿಕಾ ಟ್ರಂಪ್ ಮತ್ತು ನೇತನ್ಯಾಹು ಅವರ ಉದ್ದೇಶ ಇರಾನ್‌ನ ನಾಯಕತ್ವವನ್ನು ಉಚ್ಚಾಟನೆ ಮಾಡುವುದು, ಅದರ ಅಣುಕಾರ್ಯಕ್ರಮವನ್ನು ನಿಲ್ಲಿಸುವುದು, ಇಸ್ಲಾಮಿಕ್ ರೆವಲ್ಯೂಶನರಿ ಗಾರ್ಡ್ ಕಾರ್ಪ್ಸ್ (IRGC), ಕುದ್ಸ್ ಫೋರ್ಸ್ ಮತ್ತು ಬಸೀಜ್ ಸೇರಿದಂತೆ ಪ್ರಮುಖ ಸೈನಿಕ ಶಕ್ತಿಯನ್ನು ಕುಗ್ಗಿಸುವುದು ಮತ್ತು ಇರಾನ್ ಜನತೆಗೆ 'ತಮ್ಮ ದೇಶವನ್ನು ಮರಳಿ ಪಡೆಯಲು' ಅವಕಾಶ ಕಲ್ಪಿಸುವುದಾಗಿದೆ. ಇದರ ಹಿಂದೆ ಇರಾನ್‌ನ ತೈಲ ಮತ್ತು ಖನಿಜ ಸಂಪತ್ತುಗಳ ಮೇಲಿನ ಹಿತಾಸಕ್ತಿ ಕೂಡ ಅಡಕವಾಗಿದೆ ಎನ್ನಲಾಗುತ್ತಿದೆ. ಇಸ್ರೇಲಿ ಮತ್ತು ಅಮೆರಿಕನ್ ಪಡೆಗಳು ಇರಾನ್‌ನ ನಾಯಕರು ಮತ್ತು ಅದರ ಸೈನಿಕ ಮೂಲಸೌಕರ್ಯವನ್ನೂ ಗುರಿಯಾಗಿಸಿಕೊಂಡಿವೆ. ಇದಕ್ಕೆ ಪ್ರತಿಯಾಗಿ ಇರಾನ್ ಗಲ್ಫ್ ಪ್ರದೇಶದಲ್ಲಿನ ಅಮೆರಿಕಾ ನೆಲೆಗಳ ಮೇಲೆ ಪ್ರತಿದಾಳಿ ನಡೆಸುತ್ತಿದೆ. ಈ ಯುದ್ಧವು ಏಕಾಏಕಿ ಉಂಟಾಗಿಲ್ಲ ಮತ್ತು ದಶಕಗಳಿಂದ ರೂಪುಗೊಂಡಿದ್ದ ಒಂದು ತಂತ್ರದ ನೈಸರ್ಗಿಕ ಪರಿಪಾಕ ಎನ್ನುವುದನ್ನು ನಾವು ಗಮನಿಸಬೇಕು.

ಹಮಾಸ್‌ನ ದಾಳಿ ಮತ್ತು ಪ್ರತ್ಯುತ್ತರ

ಪ್ರಸ್ತುತ ಬೆಳವಣಿಗೆಯನ್ನು 2023ರ ಅಕ್ಟೋಬರ್ 7ರ ಘಟನಾವಳಿಗಳನ್ನು ಅವಲೋಕಿಸಿ ವಿಶ್ಲೇಷಿಸಬೇಕಾಗಿದೆ. ಅದೇ ದಿನ ಹಮಾಸ್ ಇಸ್ರೇಲ್‌ನ ದಕ್ಷಿಣ ಭಾಗದ ಮೇಲೆ ಭೀಕರ ದಾಳಿ ನಡೆಸಿತು. ಅದರಲ್ಲಿ ಸುಮಾರು 1,200 ಇಸ್ರೇಲಿ ನಾಗರಿಕರು ಸಾವನ್ನಪ್ಪಿದರು. 250 ಜನರನ್ನು ಗಾಜಾಕ್ಕೆ ಅಪಹರಿಸಲಾಯಿತು.

ಇರಾನ್‌ನ ಪ್ರಾಕ್ಸಿ ಜಾಲ

ಇಸ್ರೇಲ್ ಮತ್ತು ಅಮೆರಿಕಾ ವಿರುದ್ಧ ಕಾರ್ಯನಿರ್ವಹಿಸುತ್ತಿರುವ ಉಗ್ರಸಂಘಟನೆಗಳಿಗೆ ಇರಾನ್‌ನಿಂದ ದೀರ್ಘಾವಧಿಯ ಸಹಾಯ ದೊರಕುತ್ತಿದೆ. ಇರಾನ್ ಪ್ರತಿವರ್ಷ ಹಮಾಸ್ ಮತ್ತು ಪ್ಯಾಲೆಸ್ಟಿನಿಯನ್ ಸಂಸ್ಥೆಗಳಿಗೆ ಸುಮಾರು 100 ಮಿಲಿಯನ್ ಡಾಲರ್ ನೆರವು ನೀಡುತ್ತದೆ ಎಂಬ ಅಂದಾಜುಗಳಿವೆ. ಇದಲ್ಲದೆ ಇರಾನ್ ಉಗ್ರ ಸಂಘಟನೆಗಳಿಗೆ ರಾಕೆಟ್, ಕ್ಷಿಪಣಿ ಭಾಗಗಳು, ಡ್ರೋನ್ ತಂತ್ರಜ್ಞಾನ, ತರಬೇತಿ ಮತ್ತು ತಂತ್ರಜ್ಞ ಸಹಾಯ ನೀಡಿದೆ. ಇರಾನಿನ ಇಸ್ಲಾಮಿಕ್ ಗಣರಾಜ್ಯವು ಹಮಾಸ್‌ನ ಹಣಕಾಸು ಮತ್ತು ಮಿಲಿಟರಿ ಶಕ್ತಿಯ ಬೆನ್ನೆಲುಬಾಗಿದೆ. ಹಣಕಾಸಿನ ಹೊರತಾಗಿಯೂ ಟೆಹ್ರಾನ್ ಹಮಾಸ್‌ನ ಸಶಸ್ತ್ರ ವಿಭಾಗವಾದ ಇಜ್ ಅದ್–ದಿನ್ ಅಲ್–ಕಸ್ಸಾಮ್ ಬ್ರಿಗೇಡ್‌ಗಳಿಗೆ ತಂತ್ರಜ್ಞಾನ ತರಬೇತಿ ಮತ್ತು ಕಾರ್ಯಾಚರಣೆಯ ಮಾರ್ಗದರ್ಶನವನ್ನು ಪೂರೈಸಿದೆ. ಇರಾನಿನ ನಾಯಕರು ಹಮಾಸ್ ಅನ್ನು ಆಕ್ಸಿಸ್ ಆಫ್ ರೆಸಿಸ್ಟೆನ್ಸ್ ಎಂದೇ ನೋಡುತ್ತಾ ಬಂದಿದ್ದಾರೆ. ಹಮಾಸ್ ಮಾತ್ರವಲ್ಲದೆ ಲೆಬನಾನ್‌ನ ಹಿಜ್ಬುಲ್ಲಾ ಕೂಡ ಇರಾನಿ ಆಡಳಿತದಿಂದ ಆರ್ಥಿಕ ಸಹಾಯವನ್ನು ನಿರಂತರ ಪಡೆಯುತ್ತದೆ. ಒಂದು ಅಂದಾಜಿನ ಪ್ರಕಾರ ಇರಾನ್ ಹಿಜ್ಬುಲ್ಲಾಗೆ ವಾರ್ಷಿಕವಾಗಿ 700 ಮಿಲಿಯನ್ ಡಾಲರ್‌ನಿಂದ 1 ಬಿಲಿಯನ್ ಡಾಲರ್‌ವರೆಗೆ ನೆರವು ನೀಡುತ್ತದೆ ಎನ್ನಲಾಗುತ್ತದೆ. ಇಂತಹ ಪ್ರಾಕ್ಸಿ ಸಂಸ್ಥೆಗಳ ಮೂಲಕ ಇರಾನ್ ನೇರ ಯುದ್ಧವಿಲ್ಲದೆ ಮಧ್ಯಪ್ರಾಚ್ಯಾದ್ಯಂತ ತನ್ನ ಪ್ರಭಾವವನ್ನು ವಿಸ್ತರಿಸಿದೆ.

ಸೈದ್ಧಾಂತಿಕ ಬೇರುಗಳು

1979ರ ಇಸ್ಲಾಮಿಕ್ ಕ್ರಾಂತಿಯಲ್ಲಿ ಶಾಹ್ ಪತನದ ನಂತರ ಅಯತೊಲ್ಲಾ ಖಮೇನಿ ನೇತೃತ್ವದ ಇಸ್ಲಾಮಿಕ್ ಗಣರಾಜ್ಯ ಸ್ಥಾಪನೆಯಾಯಿತು. ಪಶ್ಚಿಮದ ಪ್ರಭಾವ ವಿರೋಧಿ ಧೋರಣೆ ಮತ್ತು ಕ್ರಾಂತಿಕಾರಿ ಇಸ್ಲಾಮಿನ ಪ್ರಸಾರ ಖಮೇನಿಯ ಪ್ರಮುಖ ಕಾರ್ಯಸೂಚಿಯಾಗಿತ್ತು. IRGC ಎಂಬ ಶಕ್ತಿಯ ಸೃಷ್ಟಿ ಈ ಕಾರ್ಯಸೂಚಿಯಾಧಾರದಲ್ಲೇ ನಡೆಯಿತು. ಇರಾನ್‌ನ ಪ್ರಾಕ್ಸಿ ಯುದ್ಧ ಹಲವಾರು ವರ್ಷಗಳ ಕಾಲ ಕಡಿಮೆ ವೆಚ್ಚದಲ್ಲಿ ತನ್ನ ಶತ್ರುಗಳಿಗೆ ಹಾನಿ ಮಾಡುವ ಮಾರ್ಗವೊಂದನ್ನು ತೋರಿಸಿಕೊಟ್ಟಿತು. ಆದರೆ ಅಕ್ಟೋಬರ್ 7ರ ನಂತರ ಈ ಸಮತೋಲನದಲ್ಲಿ ವ್ಯತ್ಯಾಸವಾಗಿದೆ. ದಶಕಗಳಿಂದ ಹಮಾಸ್‌ಗೆ ನೀಡಿದ ಬೆಂಬಲದಿಂದ ಇರಾನ್, ಆ ದಾಳಿಗೆ ನೇರವಾಗಿ ಸಂಬಂಧಪಟ್ಟಂತೆ ಕಾಣಿಸಿದೆ. ಲೆಬನಾನ್‌ನಿಂದ ಹಿಜ್ಬುಲ್ಲಾ, ಇರಾಕ್ ಮತ್ತು ಸಿರಿಯಾಗಳಿಂದ ಮಿಲಿಟರಿ ದಾಳಿಗಳು ಮತ್ತು ಯೆಮೆನ್‌ನಿಂದ ಹೌತಿ ಕ್ಷಿಪಣಿ ದಾಳಿಗಳು ಯುದ್ಧದ ಸ್ವರೂಪವನ್ನು ತೀವ್ರಗೊಳಿಸಿದೆ. ಇರಾನ್ ಇದನ್ನು ಪಶ್ಚಿಮದ ದೌರ್ಜನ್ಯಕ್ಕೆ ಪ್ರತಿಕ್ರಿಯೆ ಎಂದಿದೆ.

ಇರಾನ್‌ನ ಒಳರಾಜಕೀಯ ಮತ್ತು ಭಾರತದ ಸವಾಲು

ಇರಾನ್‌ನ ನಾಯಕತ್ವ ಹತ್ಯೆಗೊಳಗಾದ ಹಿನ್ನೆಲೆಯಲ್ಲಿ ದೇಶದ ಆಂತರಿಕ ಸ್ಥಿರತೆ ಪ್ರಶ್ನೆಯಲ್ಲಿದೆ. ದೀರ್ಘಕಾಲದ ಆರ್ಥಿಕ ನಿರ್ಬಂಧಗಳಿಂದ ಅಸಮಾಧಾನ ಮತ್ತು ಒತ್ತಡಗಳು ಹೆಚ್ಚುತ್ತಿವೆ. ಇದು ಇಸ್ಲಾಮಿಕ್ ಗಣರಾಜ್ಯಕ್ಕೆ ತಿರುಗುಬಾಣವಾಗಲಿದೆಯೇ ಎಂಬುದು ಮುಂದಿನ ದಿನಗಳಲ್ಲಿ ನಿರ್ಧಾರವಾಗಲಿದೆ.

ಭಾರತದ ದೃಷ್ಟಿಯಲ್ಲಿ ಈ ಸಂಘರ್ಷವು ತುಂಬಾ ಸೂಕ್ಷ್ಮ ಸಮೀಕರಣವಾಗಿದೆ. ಭಾರತಕ್ಕೆ ಈಗ ಯಾವ ಬಣಕ್ಕೂ ತಕ್ಷಣದ ಭಾವನಾತ್ಮಕ ಬೆಂಬಲ ಅಥವಾ ಖಂಡನೆ ನೀಡುವ ಅಗತ್ಯವಿಲ್ಲ. ಅನೇಕ ಸಂದರ್ಭದಲ್ಲಿ ಇರಾನ್ ಪಾಕಿಸ್ತಾನದ ಪರ ಧೋರಣೆ ತೋರಿದೆ. 1965 ಮತ್ತು 1971ರ ಯುದ್ಧಗಳಲ್ಲಿ ಇರಾನ್ ಇಸ್ಲಾಮಾಬಾದ್‌ಗೆ ಬೆಂಬಲ ನೀಡಿತ್ತು. ಇತ್ತೀಚಿನ ವರ್ಷಗಳಲ್ಲಿ ಚೀನಾದೊಂದಿಗೆ ಅದರ ಸಂಬಂಧ ಮತ್ತು ಆರ್ಥಿಕ ಸಹಕಾರ ಹೆಚ್ಚಾಗಿದೆ. ಆದರೆ ಭಾರತಕ್ಕೆ ಇಸ್ರೇಲ್ ಮತ್ತು ಅಮೆರಿಕಾದೊಂದಿಗೆ ಸಶಕ್ತ ರಕ್ಷಣಾ ಸಂಬಂಧವಿದೆ. ಇಂಥ ಸಂದರ್ಭದಲ್ಲಿ ಭಾರತಕ್ಕೆ ಉತ್ಸಾಹಕ್ಕಿಂತ ವಿವೇಕವೇ ಭಾರತಕ್ಕೆ ಹಿತ. ಈ ಯುದ್ಧವು ಅನಾಹುತವಲ್ಲ. ಇದು ದಶಕಗಳಿಂದ ರೂಪುಗೊಂಡಿದ್ದ ರಾಜತಾಂತ್ರಿಕ ಮತ್ತು ಮತೀಯ ವಿರೋಧದ ನೀತಿಯ ಫಲ.

7ನೇ ದಿನವೂ ಕಡಿಮೆಯಾಗದ ಯುದ್ಧದ ತೀಕ್ಷ್ಣತೆ

ಇರಾನಿ ಡ್ರೋನ್ ವಾಹಕ ನೌಕೆ ಮೇಲೆ ಅಮೆರಿಕ ದಾಳಿ

ಟೆಹ್ರಾನ್: ಇಸ್ರೇಲ್ ಮತ್ತು ಕೊಲ್ಲಿ ರಾಷ್ಟ್ರಗಳ ವಿರುದ್ಧ ಇರಾನ್ ಮತ್ತೊಂದು ಪ್ರತೀಕಾರದ ದಾಳಿಯನ್ನು ಪ್ರಾರಂಭಿಸಿದಾಗ ಇಸ್ರೇಲಿ ಯುದ್ಧ ವಿಮಾನಗಳು ಶುಕ್ರವಾರ ಬೈರುತ್ ಮತ್ತು ಟೆಹ್ರಾನ್ ಮೇಲೆ ದಾಳಿ ನಡೆಸಿದವು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್‌ನೊಂದಿಗಿನ ಮಾತುಕತೆಗಳನ್ನು ತಳ್ಳಿಹಾಕಿ ಅದರ ಬೇಷರತ್ತಾದ ಶರಣಾಗತಿಗೆ ಕರೆ ನೀಡಿದ್ದರಿಂದ, ಏಳನೇಯ ದಿನವೂ ಯುದ್ಧದ ತೀಕ್ಷ್ಣತೆ ಕಡಿಮೆಯಾದಂತಿಲ್ಲ. ಯುದ್ಧವು ಮಧ್ಯಪ್ರಾಚ್ಯ ಮತ್ತು ಅದರಾಚೆಗಿನ ಹನ್ನೆರಡಕ್ಕೂ ಹೆಚ್ಚು ದೇಶಗಳ ಮೇಲೆ ಪರಿಣಾಮ ಬೀರಿದೆ. ದೇಶದ ನೌಕಾಪಡೆಯ ವಿರುದ್ಧ ನಿರಂತರ ಕಾರ್ಯಾಚರಣೆಯನ್ನು ನಡೆಸಿದ್ದರಿಂದ ಸಮುದ್ರದಲ್ಲಿ ಇರಾನಿನ ಡ್ರೋನ್ ವಾಹಕ ನೌಕೆಯ ಮೇಲೆ ದಾಳಿ ನಡೆಸಿದೆ ಎಂದು ಅಮೆರಿಕ ಹೇಳಿದೆ. ಇರಾನಿನ ನೌಕಾಪಡೆಯ ಹಡಗನ್ನು ಅಮೆರಿಕ ಪಡೆಗಳು ಗುರುವಾರ ನಾಶಪಡಿಸಿವೆ ಎಂದು ಅಮೆರಿಕ ಸೆಂಟ್ರಲ್ ಕಮಾಂಡ್ ತಿಳಿಸಿದೆ.



ಸಮುದ್ರ ಮಧ್ಯೆ ಸಿಲುಕಿದ ತೈಲ ಪೂರೈಕೆಗೆ ವಿನಾಯಿತಿ

ಸಮುದ್ರದಲ್ಲಿ ಈಗಾಗಲೇ ಸಿಲುಕಿರುವ ತೈಲಕ್ಕೆ ಸಂಬಂಧಿಸಿದ ವ್ಯವಹಾರಗಳಿಗೆ ಮಾತ್ರ ಈ ಅನುಮತಿ ನೀಡಲಾಗಿದೆ. ಇರಾನ್ ಜಾಗತಿಕ ಇಂಧನವನ್ನು ಬಾಂಧಕವಾಗಿಸಲು ಮಾಡಿದ ಪ್ರಯತ್ನದಿಂದ ಉಂಟಾದ ಒತ್ತಡವನ್ನು ಈ ತಾತ್ಕಾಲಿಕ ಕ್ರಮ ಕಡಿಮೆ ಮಾಡುತ್ತದೆ ಎಂದು ಬೆಸೆಂಟ್ ಎಕ್ಸ್‌ನಲ್ಲಿ ಹೇಳಿದ್ದಾರೆ. ವರದಿಗಳ ಪ್ರಕಾರ ಭಾರತದ ಬಳಿ ಸುಮಾರು 25 ದಿನಗಳಿಗೆ ಸಾಕಾಗುವಷ್ಟು ಕಚ್ಚಾ ತೈಲ ಮತ್ತು ಅನಿಲ ಸಂಗ್ರಹ ಮಾತ್ರ ಇದೆ. ತೈಲದ ವಿಷಯಕ್ಕೆ ಬಂದರೆ, ಭಾರತ ತನ್ನ ಕಚ್ಚಾ ತೈಲದ ಸುಮಾರು ಶೇ.90ರಷ್ಟು ಆಮದು ಮಾಡಿಕೊಳ್ಳುತ್ತದೆ.

145 ದಶಲಕ್ಷ ಬ್ಯಾರೆಲ್ ರಷ್ಯಾ ತೈಲ ಭಾರತಕ್ಕೆ?

ವಾಣಿಜ್ಯ ಒಪ್ಪಂದಗಳು ಅಂತಿಮಗೊಂಡರೆ, ಸಮುದ್ರದಲ್ಲಿ ಪೂರೈಕೆಯಾಗದೆ ಉಳಿದಿರುವ ಸುಮಾರು 145 ಮಿಲಿಯನ್ ಬ್ಯಾರೆಲ್ ರಷ್ಯಾ ಕಚ್ಚಾ ತೈಲವನ್ನು ಭಾರತೀಯ ಬಂದರುಗಳಿಗೆ ಮರುನಿರ್ದೇಶಿಸಬಹುದು ಎಂದು ಕ್ಲೆಪರ್ ಸಂಸ್ಥೆಯ ಸಂಶೋಧನಾ ವಿಶ್ಲೇಷಕ ಸುಮಿತ್ ರಿಟೋಲಿಯಾ ಹೇಳಿದ್ದಾರೆ.

ಭಾರತಕ್ಕೆ ಲಾಭಗಳೇನು?

- ಸಾಕಷ್ಟು ತೈಲ ಸಿಗುವುದರಿಂದ ಇಂಧನ ಭದ್ರತೆ
- ತೈಲ ಬೆಲೆ ಏರಿಕೆ, ಸಾಗಣೆ ವೆಚ್ಚ ಮತ್ತು ಹಣದುಬ್ಬರದ ಒತ್ತಡ ಇಳಿಕೆ
- ಭಾರತದ ವಿದೇಶಿ ವಿನಿಮಯ ಖಾತೆ ರೇವಣಿ ಮತ್ತು ವಿತ್ತೀಯ ಸ್ಥಿರತೆಯಲ್ಲಿ ಸುಧಾರಣೆ
- ಹೂಡಿಕೆದಾರರ ಆತ್ಮವಿಶ್ವಾಸ ಹೆಚ್ಚಳ
- ಅಮೆರಿಕ, ರಷ್ಯಾ ಮತ್ತು ಜಾಗತಿಕ ತೈಲ ಮಾರುಕಟ್ಟೆಯಲ್ಲಿ ಸಂಬಂಧ ಗಟ್ಟಿ

ತೈಲ ಬೆಲೆಗಳ ಹೆಚ್ಚಳಕ್ಕೆ ಕಾರಣ

ಯುದ್ಧವು ಈಗಾಗಲೇ ತೈಲ ಬೆಲೆಗಳ ಹೆಚ್ಚಳಕ್ಕೆ ಕಾರಣವಾಗಿದೆ, ಮತ್ತು ಕತಾರ್ ಇಂಧನ ಸಚಿವರು ಇದು ವಿಶ್ವದ ಆರ್ಥಿಕತೆಯನ್ನು ಕೆಳಗಿಳಿಸಬಹುದು ಎಂದು ಎಚ್ಚರಿಸಿದ್ದಾರೆ. ಕತಾರ್‌ನ ಅತಿದೊಡ್ಡ ದ್ರವೀಕೃತ ನೈಸರ್ಗಿಕ ಅನಿಲ ಸ್ಥಾವರದ ಮೇಲೆ ಇರಾನಿನ ಡ್ರೋನ್ ದಾಳಿಯ ನಂತರ ಯುದ್ಧವು ತಕ್ಷಣವೇ ಕೊನೆಗೊಂಡರೂ ಸಾಮಾನ್ಯ ರಫ್ತುಗಳನ್ನು ಪುನರಾರಂಭಿಸಲು ವಾರಗಳಿಂದ ತಿಂಗಳುಗಳವರೆಗೆ ತೆಗೆದುಕೊಳ್ಳಬಹುದು ಎಂದಿದ್ದಾರೆ.

ವಿಶ್ವ ಆರ್ಥಿಕತೆಯನ್ನು ಕೆಳಮಟ್ಟಕ್ಕೆ ತರಲಿದೆ

ಇರಾನ್‌ನೊಂದಿಗೆ ಹೆಚ್ಚುತ್ತಿರುವ ಸಂಘರ್ಷವು ಕೆಲವೇ ವಾರಗಳಲ್ಲಿ ಕೊಲ್ಲಿಯಿಂದ ಇಂಧನ ರಫ್ತುಗಳನ್ನು ಸ್ಥಗಿತಗೊಳಿಸಬಹುದು. ಜಾಗತಿಕ ಆರ್ಥಿಕ ಆಘಾತವನ್ನು ಉಂಟುಮಾಡಬಹುದು ಎಂದು ಕತಾರ್ ಎಚ್ಚರಿಸಿದೆ. ಇಂಧನ ಸಚಿವ ಸಾದ್ ಅಲ್-ಕಾಬಿ ಇದು ವಿಶ್ವದ ಆರ್ಥಿಕತೆಯನ್ನು ಕೆಳಮಟ್ಟಕ್ಕೆ ತರುತ್ತದೆ ಎಂದು ಎಚ್ಚರಿಸಿದ್ದಾರೆ. ಯುದ್ಧವು ಮುಂದುವರಿದರೆ, ಗಲ್ಫ್ ಇಂಧನ ಉತ್ಪಾದಕರು ರಫ್ತು ನಿಲ್ಲಿಸಬೇಕಾಗಬಹುದು. ಇದು ಕಚ್ಚಾ ತೈಲದ ಬೆಲೆಯನ್ನು ಬ್ಯಾರೆಲ್‌ಗೆ 150 ಡಾಲರ್‌ಗೆ ಹೆಚ್ಚಿಸಬಹುದು ಮತ್ತು ಅಂತಾರಾಷ್ಟ್ರೀಯ ತೈಲ ಮತ್ತು ಅನಿಲ ಮಾರುಕಟ್ಟೆಗಳಲ್ಲಿ ಗಲ್ಫ್ ರಾಷ್ಟ್ರಗಳು ಪ್ರಮುಖ ಪಾತ್ರ ವಹಿಸುವುದರಿಂದ ಜಾಗತಿಕ ಇಂಧನ ಪೂರೈಕೆಯನ್ನು ಅಡ್ಡಿಪಡಿಸಬಹುದು ಎಂದು ಕಾಬಿ ಹೇಳಿದರು.

ಒಪ್ಪಂದ ಮಾತಿಲ್ಲ

ಪುಟ 1ರಿಂದ ತೀವ್ರತೆ ಇನ್ನಷ್ಟು ಹೆಚ್ಚಾಗಲಿದೆ ಎಂದು ಅಮೆರಿಕ ಎಚ್ಚರಿಕೆ ನೀಡಿದೆ. ಇರಾನ್ ಸಹ ತನ್ನ ಪ್ರತಿದಾಳಿ ಮುಂದುವರಿಸಿದೆ. ಬಿ2 ಸ್ಟೆಲ್ತ್ ಬಾಂಬರ್ ಯುದ್ಧ ವಿಮಾನದಿಂದ 2000 ಪೌಂಡ್‌ನಷ್ಟು ಬಾಂಬ್‌ಗಳಿಂದ ದಾಳಿ ನಡೆಸಿ ಇರಾನ್ ಕ್ಷಿಪಣಿ ಉಡಾವಣಾ ವ್ಯವಸ್ಥೆಯನ್ನು ನಾಶ ಮಾಡಲಾಗಿದೆ.



ಶುಕ್ರವಾರ ಲೆಬನಾನ್ ಮೇಲೆ ಇಸ್ರೇಲ್ 11 ವೈಮಾನಿಕ ದಾಳಿಗಳನ್ನು ನಡೆಸಿದ್ದು, ದಾಳಿ ತೀವ್ರತೆಯನ್ನು ಹೆಚ್ಚಿಸಿದೆ.

ಹೊಸ ನಾಯಕನ ಆಯ್ಕೆಗೆ ಇರಾನ್ ಚರ್ಚೆ: ಹೊಸ ಸರ್ವೋಚ್ಚ ನಾಯಕನ ಆಯ್ಕೆಗಾಗಿ ನಾಯಕನ ಆಯ್ಕೆ ಸಮಿತಿ ಶುಕ್ರವಾರ ಸಭೆ ಸೇರಿ ಚರ್ಚಿಸಿದೆ.

ಯುಎಇ ಮೇಲೆ 9 ಕ್ಷಿಪಣಿ, 109 ಡ್ರೋನ್ ದಾಳಿ: ಒಟ್ಟು 9 ಖಂಡಾಂತರ ಕ್ಷಿಪಣಿಗಳನ್ನು ಧ್ವಂಸ ಮಾಡಿದ್ದೇವೆ. 112 ಡ್ರೋನ್‌ಗಳಲ್ಲಿ 109 ಡ್ರೋನ್‌ಗಳನ್ನು ಹೊಡೆದುರುಳಿಸಿದ್ದೇವೆ. ಉಳಿದ 3 ಡ್ರೋನ್‌ಗಳು ಗಡಿಯಲ್ಲಿ ನೆಲಕ್ಕಪ್ಪಳಿಸಿದ್ದವು ಎಂದು ಎಂದು ಯುಎಇ ರಕ್ಷಣಾ ಸಚಿವಾಲಯ ಶುಕ್ರವಾರ ತಿಳಿಸಿದೆ.

ಖಮೇನಿ ಬಂಕರ್‌ಗಳಿಗೆ ಹಾನಿ: ಖಮೇನಿ ಸಾವಿನ ಬಳಿಕವೂ ಇರಾನ್ ಅಧಿಕಾರಿಗಳು ಟೆಹ್ರಾನ್‌ನಲ್ಲಿರುವ ಅವರ ಭೂಗತ ಅಡಗುದಾಣಗಳನ್ನು ಬಳಸುತ್ತಿದ್ದು, ಅವುಗಳ ಮೇಲೆ 50 ಯುದ್ಧ ವಿಮಾನಗಳಿಂದ ಇಸ್ರೇಲ್ ವೈಮಾನಿಕ ದಾಳಿ ನಡೆಸಿದೆ.

ಯುದ್ಧನೌಕೆಗಳ ಮೇಲೆ ಇಸ್ರೇಲ್ ದಾಳಿ

ಅಸ್ಸಾಮಿಯ್ ರಾಷ್ಟ್ರ ಇರಾನ್‌ನ ಡ್ರೋನ್ ದಾಳಿ ಸಾಮರ್ಥ್ಯದ ಐರಿಸ್ ಶಾಹಿದ್ ಬಘೇರಿ ಯುದ್ಧನೌಕೆಗಳ ಮೇಲೆ ಇಸ್ರೇಲ್ ಕ್ಷಿಪಣಿ ದಾಳಿ ನಡೆಸಿದೆ. ಇರಾನ್‌ನ ಹಲವು ವಾಯು ರಕ್ಷಣಾ ವ್ಯವಸ್ಥೆ ಮತ್ತು ಕ್ಷಿಪಣಿ ಉಡಾವಣಾ ವ್ಯವಸ್ಥೆಗಳನ್ನು ನಾಶಪಡಿಸಿದ್ದಾಗಿ ಇಸ್ರೇಲ್ ಹೇಳಿಕೊಂಡಿದೆ. ಇರಾನ್‌ನಲ್ಲಿ 1,230 ಸಾವು: ಇರಾನಿಯನ್ನರ ಸಾವಿನ ಸಂಖ್ಯೆ 1,230 ತಲುಪಿದೆ. ಲೆಬನಾನ್‌ನಲ್ಲಿ 120 ಮತ್ತು ಇಸ್ರೇಲ್‌ನಲ್ಲಿ 12 ಮಂದಿ ಮೃತಪಟ್ಟಿದ್ದಾರೆ.

ಅತಿ ದೊಡ್ಡ ರಷ್ಯಾ ತೈಲ ಖರೀದಿದಾರ ಭಾರತ

ಉಕ್ರೇನ್ ಮೇಲೆ ಮಾಸ್ಕೋ ದಾಳಿ ನಡೆಸಿದ ನಂತರ ರಷ್ಯಾ ಕಚ್ಚಾ ತೈಲದ ಅತಿ ದೊಡ್ಡ ಖರೀದಿದಾರರಲ್ಲಿ ಭಾರತ ಪ್ರಮುಖ ದೇಶವೆಂದು ಪರಿಗಣಿಸಲಾಗಿದೆ. ಅಮೆರಿಕವು ವ್ಯಾಪಾರ ಒಪ್ಪಂದದ ಒತ್ತಡ ಹಿನ್ನೆಲೆಯಲ್ಲಿ ಭಾರತ ಈ ವರ್ಷ ಆರಂಭದಿಂದ ರಷ್ಯಾ ತೈಲ ಖರೀದಿ ಕಡಿಮೆಗೊಳಿಸಿತ್ತು. ರಷ್ಯಾ ಮತ್ತು ಅಮೆರಿಕ ರಾಷ್ಟ್ರಗಳೊಂದಿಗೆ ಭಾರತ ಸಮತೋಲನದಲ್ಲಿ ವ್ಯವಹರಿಸುತ್ತಿದೆ.

ಖಮೇನಿ ಕೊಲ್ಲಲು ಬ್ಲೂ ಸ್ಪ್ಯಾರೋ ಕ್ಷಿಪಣಿ ಬಳಕೆ?

ಟೆಹ್ರಾನ್: ಇರಾನ್ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಸಾವಿನ ಬಳಿಕ ಬ್ಲೂ ಸ್ಪ್ಯಾರೋ ಎಂಬ ಕ್ಷಿಪಣಿ ವಿಶ್ವದ ಗಮನಸೆಳೆಯುತ್ತಿದೆ. ಖಮೇನಿ ಅವರನ್ನು ಕೊಲ್ಲಲು ಅಮೆರಿಕ ಸೇನೆ ಬ್ಲೂ ಸ್ಪ್ಯಾರೋ ಕ್ಷಿಪಣಿಯನ್ನು ಬಳಸಿದೆ ಎಂದು ವರದಿಯಾಗಿದೆ.

ಫೆ.28ರಂದು ಇರಾನ್ ಕಾಲಮಾನ ಬೆಳಗ್ಗೆ 7.30ರ ವೇಳೆಗೆ ಇಸ್ರೇಲ್‌ನಿಂದ ಬ್ಲೂ ಸ್ಪ್ಯಾರೋ ಕ್ಷಿಪಣಿ ದಾಳಿ ನಡೆಸಲಾಗಿದೆ ಎಂದು ತಿಳಿದುಬಂದಿದೆ. ಬ್ಲೂ ಸ್ಪ್ಯಾರೋ, ಇಸ್ರೇಲಿ ನಿರ್ಮಿತ ಖಂಡಾಂತರ ಟಾರ್ಗೆಟ್ ಕ್ಷಿಪಣಿಯಾಗಿದೆ. ಇದನ್ನು ಇಸ್ರೇಲ್‌ನ ರಾಫೆಲ್ ಅಡ್ವಾನ್ಸ್ಡ್ ಡಿಫೆನ್ಸ್ ಸಿಸ್ಟಮ್ಸ್ ಕಂಪನಿ ಅಭಿವೃದ್ಧಿಪಡಿಸಿದೆ. ಸ್ಪ್ಯಾರೋ ಕ್ಷಿಪಣಿ ಸರಣಿಗೆ ಸೇರಿದ ಅತ್ಯಾಧುನಿಕ ಕ್ಷಿಪಣಿ ಇದಾಗಿದೆ. ಇವುಗಳಲ್ಲಿ ಬ್ಲ್ಯಾಕ್ ಸ್ಪ್ಯಾರೋ ಮತ್ತು ಸಿಲ್ವರ್ ಸ್ಪ್ಯಾರೋ ಎಂಬ ಆವೃತ್ತಿಗಳಿವೆ.

ಇದೇ ತಂತ್ರಜ್ಞಾನ ಬಳಸಲಿದೆ ಭಾರತ!

ಸ್ಪ್ಯಾರೋ ಕ್ಷಿಪಣಿಗಳಲ್ಲಿನ ತಂತ್ರಜ್ಞಾನ ಬಳಸಿರುವ ರಾಕ್ಸ್ ಮತ್ತು ಗೋಲ್ಡನ್ ಹಾರಿಜಾನ್ ಕ್ಷಿಪಣಿಗಳನ್ನು ಭಾರತೀಯ ವಾಯುಪಡೆ (ಐಎಎಫ್) ಪ್ರಸ್ತುತ ಪರೀಕ್ಷೆ ನಡೆಸುತ್ತಿದೆ. ಭಾರತವೂ ಸ್ಪ್ಯಾರೋ ಕ್ಷಿಪಣಿಗಳನ್ನು ಪರೀಕ್ಷೆ ನಡೆಸುವ ದಿನಗಳು ದೂರವಿಲ್ಲ.

ಬ್ಲೂ ಸ್ಪ್ಯಾರೋ ವಿಶೇಷತೆಗಳು

- ಎಫ್-15 ಅಥವಾ ಎಫ್-35ನಂತಹ ಯುದ್ಧ ವಿಮಾನ ಅತಿ ಎತ್ತರದಲ್ಲಿದ್ದಾಗ ಉಡಾವಣೆ.
- ರಾಕೆಟ್ ಬೂಸ್ಟರ್ ನೆರವಿನಿಂದ ವೇಗ ಪಡೆಯುವ ಕ್ಷಿಪಣಿ.
- ವಾಯು ಮಂಡಲದ ಮೇಲ್ಭಾಗ ಸಂಚರಿಸಿ ಖಂಡಾಂತರ ಪಥದಲ್ಲಿ ಮುನ್ನುಗ್ಗುತ್ತದೆ.
- ಮುಖ್ಯ ಕ್ಷಿಪಣಿಯಿಂದ ರೀ-ಎಂಟ್ರಿ ಭಾಗ ಬೇರ್ಪಡುವುದು.
- ಬೇರ್ಪಟ್ಟ ಭಾಗವು ಗುರಿಯತ್ತ ವೇಗದಲ್ಲಿ ಚಲಿಸುವುದು.

6.5 ಮೀ. ಉದ್ದ | **1,900** ಕೆ.ಜಿ. ಭಾರ

2,000 ಕಿ.ಮೀ. ವ್ಯಾಪ್ತಿ

ಉಡಾವಣಾ ಯುದ್ಧ ವಿಮಾನ: ಎಫ್-15 ಈಗಲ್ ಅಥವಾ ಎಫ್-35ನಂತಹ ಯುದ್ಧ ವಿಮಾನಗಳು ಬ್ಲೂ ಸ್ಪ್ಯಾರೋ ಹೇಗೆ ದಾಳಿ ನಡೆಸುತ್ತದೆ?



ರಷ್ಯಾ ತೈಲ ಖರೀದಿಗೆ ಅಮೆರಿಕ ಸಹಮತ

ಹೊಸದಿಲ್ಲಿ: ರಷ್ಯಾದಿಂದ ಕಚ್ಚಾ ತೈಲ ಖರೀದಿಸಲು ಏ.3ರವರೆಗೆ 30 ದಿನಗಳ ತಾತ್ಕಾಲಿಕ ವಿನಾಯಿತಿ ನೀಡಿದ್ದಾಗಿ ಅಮೆರಿಕದ ವಿತ್ತೀಯ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಶುಕ್ರವಾರ ಘೋಷಿಸಿದ್ದಾರೆ. ಮಧ್ಯಪ್ರಾಚ್ಯ ಯುದ್ಧದ ಹಿನ್ನೆಲೆ ಜಾಗತಿಕ ತೈಲ ಮಾರುಕಟ್ಟೆಯಲ್ಲಿನ ಅಸ್ಥಿರತೆಯನ್ನು ಸರಿದೂಗಿಸುವ ಉದ್ದೇಶದಿಂದ ಭಾರತದ ಮೇಲಿನ ನಿರ್ಬಂಧಗಳನ್ನು ಅಮೆರಿಕ ಸಡಿಲಗೊಳಿಸಿದೆ.

ಹಾರ್ಮುಜ್ ಜಲಸಂಧಿಯ ಸಮೀಪ ಸುಮಾರು 145 ದಶಲಕ್ಷ ಬ್ಯಾರೆಲ್ ತೈಲ ಮತ್ತು ಅನಿಲ ಸಾಗಣೆ ಬಾಕಿಯಾಗಿದೆ. ಇದು ಪರ್ಷಿಯನ್ ಕೊಲ್ಲಿಯ ಕಿರಿದಾದ ಸಮುದ್ರ ಮಾರ್ಗವಾಗಿದ್ದು, ಭಾರತದ ಕಚ್ಚಾ ತೈಲ ಮತ್ತು ಅನಿಲ ಆಮದುಗಳ ಅರ್ಧದಷ್ಟು ಈ ಮಾರ್ಗದ ಮೂಲಕ ಸಾಗುತ್ತದೆ. ಅಮೆರಿಕ ಮತ್ತು ಇಸ್ರೇಲ್ ಯುದ್ಧ ಆರಂಭಿಸಿದ ಬಳಿಕ ಈ ಮಾರ್ಗದಿಂದ ಸಾಗಲು ಯತ್ನಿಸುವ ಹಡಗುಗಳ ಮೇಲೆ ದಾಳಿ ನಡೆಸುವುದಾಗಿ ಇರಾನ್ ಎಚ್ಚರಿಕೆ ನೀಡಿತ್ತು.

ಕಿರುಸುದ್ದಿ

ಎರಡನೇ ಮಗು ಪಡೆದ ದಂಪತಿಗೆ 25 ಸಾವಿರ ರೂ.

ಅಮರಾವತಿ: ರಾಜ್ಯದಲ್ಲಿ ಜನನ ಪ್ರಮಾಣವನ್ನು ಹೆಚ್ಚಿಸಲು ಎರಡನೇ ಮಗು ಪಡೆಯುವ ದಂಪತಿಗೆ 25,0000 ರೂ. ಪ್ರೋತ್ಸಾಹ ಧನ ನೀಡುವುದಾಗಿ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಘೋಷಿಸಿದ್ದಾರೆ. ವಿಧಾನಸಭೆಯನ್ನುದ್ದೇಶಿಸಿ ಮಾತನಾಡಿದ ನಾಯ್ಡು, ಆಂಧ್ರಪ್ರದೇಶದ ಒಟ್ಟು ಫಲವತ್ತತೆ ದರವನ್ನು (ಟಿಎಫ್ಆರ್) ಪ್ರಸ್ತುತ 1.5ರಿಂದ 2.1ಕ್ಕೆ ಹೆಚ್ಚಿಸುವ ಗುರಿಯನ್ನು ಸರ್ಕಾರ ಹೊಂದಿದೆ.ಹೆರಿಗೆಯ ಸಮಯದಲ್ಲಿಯೇ ಎರಡನೇ ಮಗು ಅಥವಾ ಅದಕ್ಕಿಂತ ಹೆಚ್ಚಿನ ಮಗುವನ್ನು ಹೊಂದಿರುವ ಪೋಷಕರಿಗೆ ನಾವು 25,000 ರೂ.ಗಳನ್ನು ನೀಡುತ್ತೇವೆ ಎಂದಿದ್ದಾರೆ. ಇದು ತಮ್ಮ ಜನಸಂಖ್ಯಾ ನಿರ್ವಹಣಾ ಯೋಜನೆ ರಾಜ್ಯದಲ್ಲಿ ದೊಡ್ಡ ಪ್ರಮಾಣದಲ್ಲಿ ಬದಲಾವಣೆ ತರಲಿದೆ ಎಂದರು.

ಫೈಟರ್ ಜೆಟ್ ಅಪಘಾತ ಇಬ್ಬರು ಪೈಲಟ್‌ಗಳ ಸಾವು

ಗುವಾಹಟಿ: ಅಸ್ಸಾಂನ ಕರ್ಬಿ ಆಂಗ್ಲಾಂಗ್ ಜಿಲ್ಲೆಯಲ್ಲಿ ಗುರುವಾರ ರಾತ್ರಿ ಸುಖೋಯ್ ಸು-30 ಎಂಕೆಐ ಫೈಟರ್ ಜೆಟ್ ಅಪಘಾತಕ್ಕೀಡಾಗಿ ಭಾರತೀಯ ವಾಯುಪಡೆಯ (ಐಎಎಫ್) ಇಬ್ಬರು ಪೈಲಟ್‌ಗಳು ಮೃತಪಟ್ಟಿದ್ದಾರೆ. ಅವಳಿ ಆಸನಗಳ ಯುದ್ಧ ವಿಮಾನವು ಜೋರ್ಹತ್ ವಾಯುಪಡೆ ನಿಲ್ದಾಣದಿಂದ ವಾಡಿಕೆಯ ಹಾರಾಟಕ್ಕಾಗಿ ಹೊರಟು ಸಂಜೆ 7.42 ರ ಸುಮಾರಿಗೆ ತನ್ನ ಸಂಪರ್ಕ ಕಳೆದುಕೊಂಡಿತು. ಅದರ ನಂತರ, ವಿಮಾನವನ್ನು ಟ್ರ್ಯಾಕ್ ಮಾಡಲು ಸಾಧ್ಯವಾಗಲಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ. ಜೋರ್ಹತ್‌ನಿಂದ ಸುಮಾರು 60 ಕಿಮೀ ದೂರದಲ್ಲಿರುವ ಕರ್ಬಿ ಆಂಗ್ಲಾಂಗ್ ಜಿಲ್ಲೆಯ ದೂರದ ಗುಡ್ಡಗಾಡು ಪ್ರದೇಶದಲ್ಲಿ ಯುದ್ಧ ವಿಮಾನವು ಅಪಘಾತಕ್ಕೀಡಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನೇಪಾಳ ಚುನಾವಣೆ: ಹೊಸ ಪಕ್ಷಕ್ಕೆ ಮುನ್ನಡೆ

ಕಠ್ಮಂಡು: ಮಾಜಿ ರ‍್ಯಾಪರ್ ಬಲೇಂದ್ರ ಶಾ ನೇತೃತ್ವದ ಹೊಸದಾಗಿ ರೂಪುಗೊಂಡ ರಾಷ್ಟ್ರೀಯ ಸ್ವತಂತ್ರ ಪಕ್ಷ (ಆರ್‌ಎಸ್‌ಪಿ), ನೇಪಾಳ ಲೋಕಸಭಾ ಚುನಾವಣೆಯಲ್ಲಿ ಮುಂಚೂಣಿಯಲ್ಲಿದ್ದು, ಆರಂಭಿಕ ಮತ ಎಣಿಕೆ ಮುಂದುವರೆದಂತೆ ರಾಷ್ಟ್ರವ್ಯಾಪಿ 137 ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದೆ. ನೇಪಾಳಿ ಕಾಂಗ್ರೆಸ್ ಇದುವರೆಗೆ ಒಂದು ಸ್ಥಾನವನ್ನು ಗಳಿಸಿದ್ದು, 10 ಹೆಚ್ಚುವರಿ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದೆ. ಸಿಪಿಎನ್-ಯುಎಂಎಲ್ ಏಳು ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದೆ. ನೇಪಾಳಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗಳು ಒಂಬತ್ತು ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದ್ದಾರೆ ಎಂದು ಕಠ್ಮಂಡು ಪೋಸ್ಟ್ ವರದಿ ಮಾಡಿದೆ.

ತಿಂಗಳಾಂತ್ಯಕ್ಕೆ ನಕಲ್ ಮುಕ್ತ ಭಾರತ ಖಚಿತ

ಹೊಸದಿಲ್ಲಿ: ತಿಂಗಾಳತ್ಯಕ್ಕೆ ದೇಶವು ಮಾವೋವಾದಿ ಮುಕ್ತವಾಗಲಿದೆ ಎಂದು ರಾಷ್ಟ್ರಕ್ಕೆ ಭರವಸೆ ನೀಡುತ್ತೇನೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿಯ ನೇತೃತ್ವದಲ್ಲಿ ನಕ್ಸಲಿಸಂ ಅನ್ನು ದೇಶದಿಂದ ಬೇರು ಸಮೇತ ಕಿತ್ತುಹಾಕುವುದು ದೇಶದ ಭದ್ರತಾ ಪಡೆಗಳಿಗೆ ದೊಡ್ಡ ಸಾಧನೆಯಾಗಲಿದೆ ಎಂದು ಶಾ ಹೇಳಿದರು. ನಮ್ಮ ಭದ್ರತಾ ಪಡೆಗಳು ನಿರೀಕ್ಷೆಗಳನ್ನು ತಲುಪಿವೆ. ದೇಶವು ಈಗ ಮಾವೋವಾದಿಗಳನ್ನು ನಿರ್ಮೂಲನೆ ಮಾಡುವ ಅಂಚಿನಲ್ಲಿದೆ ಎಂದು ಅವರು ಹೇಳಿದರು.



ಕಟಕ್ ಜಿಲ್ಲೆಯ ಮುಂಡಾಲಿಯಲ್ಲಿ ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್ಎಫ್)ಯ 57ನೇ ಸಂಸ್ಥಾಪನಾ ದಿನದ ಅಂಗವಾಗಿ ನಡೆದ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು, ಸಿಐಎಸ್‌ಎಫ್ ಪ್ರಮುಖ ಸಂಸ್ಥೆಗಳಿಗೆ ಭದ್ರತೆಯನ್ನು ಒದಗಿಸುವ ಮೂಲಕ ದೇಶದ ಆರ್ಥಿಕ ಬೆಳವಣಿಗೆಗೆ ವೇಗವರ್ಧಕವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಹೇಳಿದರು. 2047ರ ವೇಳೆಗೆ ವಿಕಸಿತ ಭಾರತ್ ಗುರಿಯನ್ನು ಸಾಧಿಸುವ ಸಲುವಾಗಿ, ಪ್ರಧಾನ ಮಂತ್ರಿಯವರ ಗುರಿಯಂತೆ, ಸಿಐಎಸ್‌ಎಫ್ ಆಂತರಿಕ ಭದ್ರತೆಯನ್ನು ಖಾತ್ರಿಪಡಿಸಿಕೊಂಡಿವೆ. ಇದು ರಾಷ್ಟ್ರದ ಬೆಳವಣಿಗೆಗೆ ಅತ್ಯಂತ ಪ್ರಮುಖ ಅಂಶವಾಗಿದೆ ಎಂದು ಶಾ ಹೇಳಿದರು.

9 ರಾಜ್ಯ, ಕೇಂದ್ರಾಡಳಿತದ ರಾಜ್ಯಪಾಲರ ಬದಲಾವಣೆ

ಹೊಸದಿಲ್ಲಿ: ರಾಷ್ಟ್ರಪತಿ ಭವನವು ದಿಲ್ಲಿ, ಲಡಾಖ್, ತೆಲಂಗಾಣ, ಮಹಾರಾಷ್ಟ್ರ, ಬಿಹಾರ, ಪಶ್ಚಿಮ ಬಂಗಾಳ, ತಮಿಳುನಾಡು, ಹಿಮಾಚಲ ಪ್ರದೇಶ ಮತ್ತು ನಾಗಾಲ್ಯಾಂಡ್ ಸೇರಿದಂತೆ ಹಲವಾರು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಒಳಗೊಂಡ ಪ್ರಮುಖ ರಾಜ್ಯಪಾಲರ ಪುನರ್‌ರಚನೆಯನ್ನು ಪ್ರಕಟಿಸಿದೆ. ರಾಷ್ಟ್ರಪತಿಗಳ ಕಚೇರಿಯ ಅಧಿಕೃತ ಪ್ರಕಟಣೆ ಪ್ರಕಾರ, ಆಯಾ ನೇಮಕಾತಿದಾರರು ತಮ್ಮ ಕಚೇರಿಗಳ ಉಸ್ತುವಾರಿಯನ್ನು ವಹಿಸಿಕೊಳ್ಳುವ ದಿನಾಂಕದಿಂದ ಈ ನೇಮಕಾತಿಗಳು ಜಾರಿಗೆ ಬರುತ್ತವೆ. ದಿಲ್ಲಿಯ ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸಕ್ಸೇನಾ ಅವರನ್ನು ಲಡಾಖ್‌ಗೆ ವರ್ಗಾಯಿಸಲಾಗಿದೆ. ಅಮೆರಿಕದ ಮಾಜಿ ಭಾರತೀಯ ರಾಯಭಾರಿ ತರನ್‌ಜೀತ್ ಸಿಂಗ್ ಸಂಧು ಅವರನ್ನು ದಿಲ್ಲಿಯ ನೂತನ ಲೆಫ್ಟಿನೆಂಟ್ ಗವರ್ನರ್ ಆಗಿ ನೇಮಕ ಮಾಡಲಾಗಿದೆ. ಇನ್ನು ಹಿಮಾಚಲಪ್ರದೇಶದ ರಾಜ್ಯಪಾಲ ಶಿವಪ್ರತಾಪ್ ಶುಕ್ಲಾ ಅವರನ್ನು ತೆಲಂಗಾಣಕ್ಕೆ ವರ್ಗಾಯಿಸಲಾಗಿದೆ. ಅಂತೆಯೇ ತೆಲಂಗಾಣದ ಈಗಿನ ರಾಜ್ಯಪಾಲ ಜಿಷ್ಣು ಶರ್ಮಾ ಅವರನ್ನು ಮಹಾರಾಷ್ಟ್ರಕ್ಕೆ ವರ್ಗಾಯಿಸಲಾಗಿದೆ. ಇನ್ನುಳಿದಂತೆ ನಂದಕಿಶೋರ್ ಯಾದವ್ ಅವರನ್ನು ನಾಗಾಲ್ಯಾಂಡ್ ರಾಜ್ಯಪಾಲರಾಗಿ ನೇಮಿಸಲಾಗಿದ್ದು, ನಿವೃತ್ತ ಸೇನಾ ಮುಖ್ಯಸ್ಥ ಸಯ್ಯದ್ ಅತಾ ಹಸ್ನೈನ್ ಅವರನ್ನು ಬಿಹಾರದ ರಾಜ್ಯಪಾಲರಾಗಿ ನೇಮಕ ಮಾಡಲಾಗಿದೆ. ತಮಿಳುನಾಡಿನ ರಾಜ್ಯಪಾಲರಾದ ಆರ್.ಎನ್.ರವಿ ಅವರನ್ನು ಪಶ್ಚಿಮಬಂಗಾಳದ ರಾಜ್ಯಪಾಲರನ್ನಾಗಿ ನೇಮಿಸಲಾಗಿದೆ. ಪ್ರಸ್ತುತ ಕೇರಳದ ರಾಜ್ಯಪಾಲರಾಗಿರುವ ರಾಜೇಂದ್ರ ವಿಶ್ವನಾಥ್ ಆರ್ಲೇಕರ್ ಅವರು ತ.ನಾಡಿನ ರಾಜ್ಯಪಾಲರ ಕಾರ್ಯಗಳನ್ನು ನಿರ್ವಹಿಸಲಿದ್ದಾರೆ. ಲಡಾಖ್‌ನ ಲೆಫ್ಟಿನೆಂಟ್ ಗವರ್ನರ್ ಕವಿಂದರ್ ಗುಪ್ತಾ ಹಿಮಾಚಲ ಪ್ರದೇಶದ ರಾಜ್ಯಪಾಲರಾಗಿ ನೇಮಿಸಲಾಗಿದೆ.

ಬಜೆಟ್ ಅಧಿವೇಶನ: ಕೈ ಸಂಸದರಿಗೆ ವಿಪ್

ಹೊಸದಿಲ್ಲಿ: ಮಾ.9ರಿಂದ 11ರವರೆಗೆ ಸಂಸತ್ತಿನ ಬಜೆಟ್ ಅಧಿವೇಶನದಎರಡನೇಹಂತಆರಂಭವಾಗಲಿದ್ದು,ಸೋಮವಾರವೇ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರ ವಿರುದ್ಧದ ಅವಿಶ್ವಾಸ ನಿರ್ಣಯ ಮಂಡನೆ ಕುರಿತು ಚರ್ಚೆಯಾಗುವ ಸಾಧ್ಯತೆಯಿದೆ. ಈ ಹಿನ್ನೆಲೆ ಲೋಕಸಭೆ ಅಧಿವೇಶನದಲ್ಲಿ ಸಂಸದರೆಲ್ಲರೂ ಕಡ್ಡಾಯ ಹಾಜರಾಗಬೇಕೆಂದು ಭಾರತೀಯ ಜನತಾ ಪಕ್ಷ (ಬಿಜೆಪಿ) ಮತ್ತು ವಿರೋಧ ಪಕ್ಷ ಕಾಂಗ್ರೆಸ್ ತಮ್ಮ ಸಂಸದರಿಗೆ ಶುಕ್ರವಾರ ಮೂರು ಸಾಲಿನ ವಿಪ್ ಜಾರಿ ಮಾಡಿವೆ. ಮಾ.9ರಂದು ಬಜೆಟ್ ಅಧಿವೇಶನದ ಎರಡನೇ ಹಂತ ಆರಂಭವಾಗಲಿದ್ದು, ಸ್ಪೀಕರ್ ಓಂ ಬಿರ್ಲಾ ಅವರನ್ನು ಪದಚ್ಯುತಿಗೊಳಿಸಬೇಕೆಂಬ ವಿರೋಧ ಪಕ್ಷದ ಸಂಸದರು ಸಲ್ಲಿಸಿರುವ ನೋಟಿಸ್ ಕುರಿತು ಚರ್ಚೆಯಾಗುವ ನಿರೀಕ್ಷೆಯಿದೆ.



ಬಹುಮತ ಸಿಕ್ಕರೆ ಬಿರ್ಲಾ ಪದಚ್ಯುತಿ: ಸದನದಲ್ಲಿ ಸರಳ ಬಹುಮತದಿಂದ ಅವಿಶ್ವಾಸ ನಿರ್ಣಯ ಅಂಗೀಕಾರವಾದರೆ ಸ್ಪೀಕರ್ ಓಂ ಬಿರ್ಲಾ ಅವರನ್ನು ಹುದ್ದೆಯಿಂದ ತೆಗೆದುಹಾಕಲಾಗುವುದು. ಮೊದಲ ಹಂತದ ಬಜೆಟ್ ಅಧಿವೇಶನವು ಫೆ.13ರಂದು ಕೊನೆಗೊಂಡಿದ್ದು, ಭಾರತ-ಅಮೆರಿಕ ಮಧ್ಯಂತರ ವ್ಯಾಪಾರ ಒಪ್ಪಂದ ಹಾಗೂ ಮಾಜಿ ಸೇನಾ ಮುಖ್ಯಸ್ಥ ಮನೋಜ್ ಮುಕುಂದ್ ನರಾವಣೆ ಅವರ ಪುಸ್ತಕದ ವಿವಾದ ಕುರಿತಾದ ತೀವ್ರ ಚರ್ಚೆಗಳಿಂದ ಕೂಡಿತ್ತು. ಜ.28ರಂದು ಲೋಕಸಭೆ ಮತ್ತು ರಾಜ್ಯಸಭೆಗಳು ಎರಡರಲ್ಲೂ ದ್ರೌಪದಿ ಮುರ್ಮು ಅವರ ರಾಷ್ಟ್ರಪತಿ ಭಾಷಣದೊಂದಿಗೆ ಬಜೆಟ್ ಅಧಿವೇಶನ ಆರಂಭಗೊಂಡಿತ್ತು.

ಯುಪಿಎಸ್‌ಸಿ ಫಲಿತಾಂಶ ಪ್ರಕಟ

958 ಅಭ್ಯರ್ಥಿಗಳು ಉತ್ತೀರ್ಣ

ಹೊಸದಿಲ್ಲಿ: ಅನುಜ್ ಅಗ್ನಿಹೋತ್ರಿ ಅವರು ನಾಗರೀಕ ಸೇವಾ ವಲಯದ 2025ನೇ ಸಾಲಿನ ಪರೀಕ್ಷೆಯಲ್ಲಿ ಮೊದಲನೇ ಸ್ಥಾನ ಪಡೆದಿದ್ದಾರೆ. ಶುಕ್ರವಾರದಂದು ಯುನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್(ಯುಪಿಎಸ್‌ಸಿ) ಫಲಿತಾಂಶಗಳು ಪ್ರಕಟವಾಗಿವೆ. ರಾಜೇಶ್ವರಿ ಸುವೆ, ಅಕಾಂಶ್ ಧುಲ್ ಕ್ರಮವಾಗಿ ಎರಡನೇ ಹಾಗೂ ಮೂರನೇ ಸ್ಥಾನ ಪಡೆದಿದ್ದಾರೆ. ಒಟ್ಟು 958 ಅಭ್ಯರ್ಥಿಗಳು ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರಣರಾಗಿದ್ದಾರೆ. ಈ ಅಭ್ಯರ್ಥಿಗಳನ್ನು ವಿವಿಧ ಹುದ್ದೆಗಳಿಗೆ ನೇಮಕ ಮಾಡಲಾಗುವುದು ಎಂದು ಆಯೋಗ ತಿಳಿಸಿದೆ. ಯುಪಿಎಸ್‌ಸಿ ಪರೀಕ್ಷೆಗಳನ್ನು ಮೂರು ಹಂತದಲ್ಲಿ ಆಯೋಜಿಸಲಾಗುತ್ತದೆ. ಪ್ರಿಲಿಮಿನರಿ, ಮೈನ್ ಹಾಗೂ ಇಂಟರ್‌ವ್ಯೂ. ಈ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವುವವರನ್ನು ಭಾರತೀಯ ಆಡಳಿತ ಸೇವೆ (ಐಎಎಸ್), ಭಾರತೀಯ ವಿದೇಶಾಂಗ ಸೇವೆ(ಐಎಫ್‌ಎಸ್) ಮತ್ತು ಭಾರತೀಯ ಆರಕ್ಷಣಾ ಸೇವೆ (ಐಪಿಎಸ್) ಹುದ್ದೆಗಳಿಗೆ ನೇಮಕ ಮಾಡಲಾಗುತ್ತದೆ. ಈ ಹಿಂದೆ ಒಟ್ಟು 1,087 ಹುದ್ದೆಗಳು ಭರ್ತಿಯಾಗಬೇಕಿವೆ ಎಂದು ಆಯೋಗ ಈ ಹಿಂದೆ ಹೇಳಲಾಗಿತ್ತು.

ಬೂತ್ ನಿರ್ವಹಣೆಗೆ 5,100 ಮಹಿಳೆಯರು
ಟೋಲ್‌ಗಳಲ್ಲಿ ಮಹಿಳಾ ಶಕ್ತಿ

ಹೊಸದಿಲ್ಲಿ: ದೇಶದ 1,140 ಪ್ಲಾಜಾಗಳಲ್ಲಿ ಬೂತ್ ಕಾರ್ಯಾಚರಣೆಗಳನ್ನು ನಿರ್ವಹಿಸಲು ಹಗಲಿನ ಪಾಳಿಯಲ್ಲಿ 5,100ಕ್ಕೂ ಹೆಚ್ಚು ಮಹಿಳಾ ಸಿಬ್ಬಂದಿಯನ್ನು ನಿಯೋಜಿಸಿರುವುದಾಗಿ ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (ಎನ್‌ಎಚ್‌ಎಐ) ಶುಕ್ರವಾರ ಹೇಳಿದೆ. ರಾಷ್ಟ್ರೀಯ ಹೆದ್ದಾರಿಗಳು ಮತ್ತು ಎಕ್ಸ್‌ಪ್ರೆಸ್ ವೇಗಳಲ್ಲಿನ ಟೋಲ್ ಪ್ಲಾಜಾಗಳಲ್ಲಿ ಮಹಿಳಾ ಉದ್ಯೋಗಿಗಳನ್ನು ಹೆಚ್ಚಿಸುವ ಮಹತ್ತರ ಯೋಜನೆಯ ಭಾಗವಾಗಿ ಈ ಬೆಳವಣಿಗೆ ನಡೆದಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಮಹಿಳೆಯರು ಸೇರುವ ನಿರೀಕ್ಷೆಯಿದೆ.



ಈ ಯೋಜನೆಯು ಲಿಂಗ ಸಮಾನತೆ ಮತ್ತು ಸಾಮಾಜಿಕ ಸಬಲೀಕರಣವನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ. ಜತೆಗೆ ರಾಷ್ಟ್ರೀಯ ಹೆದ್ದಾರಿಗಳಲ್ಲಿನ ಟೋಲ್ ಪ್ಲಾಜಾಗಳಲ್ಲಿ ಸೇವಾ ವಿತರಣೆಯನ್ನು ಸುಧಾರಿಸುತ್ತದೆ ಎಂದು ಎನ್‌ಎಚ್‌ಎಐ ಹೇಳಿದೆ.

ಶುಲ್ಕ ಪ್ಲಾಜಾ ನಿರ್ವಾಹಕರು ಮತ್ತು ರಾಷ್ಟ್ರೀಯ ಹೆದ್ದಾರಿ ಬಿಲ್ಡರ್ ಫೆಡರೇಶನ್ (ಎನ್‌ಎಚ್‌ಬಿಎಫ್), ಹೈವೇ ಆಪರೇಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಎಚ್‌ಒಎಐ) ಮತ್ತು ಅಖಿಲ ಭಾರತ ಬಳಕೆದಾರ ಶುಲ್ಕ ಗುತ್ತಿಗೆದಾರರ ಒಕ್ಕೂಟ (ಎಐಯುಸಿಎಫ್) ಸೇರಿದಂತೆ ವಿವಿಧ ಪಾಲುದಾರರೊಂದಿಗೆ ಚರ್ಚಿಸಿದ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಟೋಲ್ ಪ್ಲಾಜಾಗಳಲ್ಲಿ ಬಳಕೆದಾರರ ಶುಲ್ಕ ಸಂಗ್ರಹಕ್ಕಾಗಿ ಹಗಲಿನ ಪಾಳಿಯಲ್ಲಿ ಮಹಿಳಾ ಸಿಬ್ಬಂದಿಯನ್ನು ನಿಯೋಜಿಸಲು ಎಲ್ಲಾ ಟೋಲ್ ನಿರ್ವಾಹಕರು ಸರ್ವಾನುಮತದಿಂದ ಒಪ್ಪಿಕೊಂಡಿದ್ದಾರೆ. ಈ ಯೋಜನೆ ಮಹಿಳೆಯರಿಗೆ ಉದ್ಯೋಗಾವಕಾಶವನ್ನು ಹೆಚ್ಚಿಸಲು ಸಹಕಾರಯಾಗಿದೆ. ಮುಖ್ಯವಾಗಿ ಗ್ರಾಮೀಣ ಪ್ರದೇಶ ಮತ್ತು ಸಣ್ಣ ನಗರಗಳಲ್ಲಿ ಮೂಲಸೌಕರ್ಯಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವುದಕ್ಕೆ ಇದು ಸಹಕಾರಿಯಾಗಿದೆ.

ಸಂಪನ್ನ-ಹವಾಮಾನ ವಲಯ ಹೊಂದಿದ್ದೇವೆ : ಪ್ರಧಾನಿ ಮೋದಿ
ದೇಶೀಯ ಕೃಷಿ ಉತ್ಪನ್ನ ಜಾಗತಿಕ ಮಟ್ಟದ್ದು

ಹೊಸದಿಲ್ಲಿ: ಕೃಷಿ ರಂಗದಲ್ಲಿ ಉತ್ಪಾದಕತೆ ಮತ್ತು ರಫ್ತು ಬಲವನ್ನು ಹೆಚ್ಚಿಸುವಲ್ಲಿ ಭಾರತದ ವಿಭಿನ್ನ ಹವಾಮಾನ ವ್ಯವಸ್ಥೆಯನ್ನು ಬಳಸಿಕೊಳ್ಳುವಂತೆ ದೇಶದ ರೈತರಿಗೆ ಪ್ರಧಾನಿ ನರೇಂದ್ರ ಮೋದಿಯವರು ಶುಕ್ರವಾರ ಕರೆ ನೀಡಿದ್ದಾರೆ.

ಅವರು ಬಜೆಟೋತ್ತರದಲ್ಲಿ 'ಕೃಷಿ ಮತ್ತು ಗ್ರಾಮೀಣ ಪರಿವರ್ತನೆ 'ಎಂಬ ವಿಷಯದ ಮೇಲಿನ ವೆಬಿನಾರ್‌ನಲ್ಲಿ ಮಾತನಾಡಿದ ಮೋದಿಯವರು, ಜಾಗತಿಕ ಗುಣಮಟ್ಟ ಮತ್ತು ಬ್ರಾಂಡಿಂಗ್ ಗುಣಮಟ್ಟಗಳನ್ನು ತಲುಪುವಲ್ಲಿ ತಜ್ಞರು, ಕೈಗಾರಿಕೆಗಳು ಮತ್ತು ರೈತರ ನಡುವೆ ಸಮನ್ವಯವೊಂದರ ಅಗತ್ಯವಿದೆ ಎಂದರು. ಸ್ಥಳೀಯ ರೈತರನ್ನು ಜಾಗತಿಕ ಮಾರುಕಟ್ಟೆಗಳೊಂದಿಗೆ ಸಂಪರ್ಕಿಸುವ ಸ್ಪಷ್ಟ ಗುರಿಗಳನ್ನು ರೂಪಿಸುವ ಅಗತ್ಯವನ್ನು ಕೂಡ ಅವರು ಎತ್ತಿ ತೋರಿದರು.

ಇಂದು ವಿಶ್ವ ಮಾರುಕಟ್ಟೆಗಳು ತೆರೆದುಕೊಂಡು ಮುಕ್ತವಾಗಿವೆ .



ಹಾಗೆಯೇ ಜಾಗತಿಕ ಬೇಡಿಕೆಗಳು ಕೂಡ ಬದಲಾಗಿವೆ. ನಮ್ಮ ಕೃಷಿ ರಂಗವನ್ನು ರಫ್ತು ಕೇಂದ್ರಿತವನ್ನಾಗಿ ಮಾಡುವಲ್ಲಿ ಹೆಚ್ಚಿನ ಚರ್ಚೆ, ಸಮಾಲೋಚನೆಗಳ ಅಗತ್ಯವಿದೆ. ನಾವು ವಿಶಿಷ್ಟ ಹವಾಮಾನ ವ್ಯವಸ್ಥೆಯೊಂದನ್ನು ಹೊಂದಿದ್ದು, ಇದರ ಸಂಪೂರ್ಣ ಲಾಭವನ್ನು ನಾವು ಪಡೆಯಬೇಕಾಗಿದೆ. ನಾವು ಸಂಪನ್ನ ಕೃಷಿ-ಹವಾಮಾನ ವಲಯಗಳನ್ನು ಹೊಂದಿರುವುದು ನಮಗೆ ಅನುಕೂಲಕರವಾಗಿದೆ ಎಂದರು.

ರಫ್ತು ಕೇಂದ್ರಿತ ಉತ್ಪಾದನೆಯು,ಸಂಸ್ಕರಣೆ ಮತ್ತು ಮೌಲ್ಯವರ್ಧನೆಗಳ ಮೂಲಕ ಗ್ರಾಮೀಣ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತವೆ ಎಂಬುದರತ್ತ ಮೋದಿಯವರು ಬೊಟ್ಟು ಮಾಡಿದರು. 2026-27ನೇ ಸಾಲಿನ ಬಜೆಟ್, ಗೇರುಬೀಜ, ಕೋಕೋ, ಶ್ರೀಗಂಧದಂತಹ ಹೆಚ್ಚಿನ ಮೌಲ್ಯದ ಕೃಷಿ ಉತ್ಪನ್ನಗಳತ್ತ ಮತ್ತು ಮೌಲ್ಯವರ್ಧನೆಗೆ ಇರುವ ಅವಕಾಶಗಳತ್ತ ಗಮನ ಕೇಂದ್ರೀಕರಿಸಿದೆ.

ಇಂದು ವಿಶ್ವದಲ್ಲಿ ಆರೋಗ್ಯದ ಬಗ್ಗೆ ಹೆಚ್ಚು ಜಾಗೃತಿ ಉಂಟಾಗುತ್ತಿದ್ದು, ಆರೋಗ್ಯದ ಬಗ್ಗೆ ಕಾಳಜಿ ಮತ್ತು ಸಾವಯವ ಆಹಾರದ ಬಗ್ಗೆ ಬಲವಾದ ಒತ್ತು ನೀಡಲಾಗುತ್ತಿದೆ ಎಂಬುದನ್ನು ಎತ್ತಿತೋರಿದ ಮೋದಿಯವರು, ರಾಸಾಯನಿಕ ಮುಕ್ತ ಮತ್ತು ನೈಸರ್ಗಿಕ ಕೃಷಿಗೆ ಒತ್ತು ನೀಡಿದಲ್ಲಿ ಇದು ಜಗತ್ತಿನಾದ್ಯಂತ ಇರುವ ಮಾರುಕಟ್ಟೆಗಳನ್ನು ತಲುಪಲು ನಮಗೆ ರಾಜಮಾರ್ಗ ತೆರೆದುಕೊಳ್ಳಲಿದೆ.

ಕಿರುಸುದ್ದಿ

12 ಲಕ್ಷ ರೂ. ಮೌಲ್ಯದ ಎಮ್ಮೆಗಳ ರಕ್ಷಣೆ

ಅಂಕೋಲಾ: ಲಾರಿಯಲ್ಲಿ ಹಿಂಸಾತ್ಮಕ ರೀತಿಯಲ್ಲಿ ಅಕ್ರಮವಾಗಿ ಕಸಾಯಿಖಾನೆಗೆ ಸಾಗಿಸುತ್ತಿದ್ದ ಸುಮಾರು 12 ಲಕ್ಷ ಮೌಲ್ಯದ ಎಮ್ಮೆಗಳನ್ನು ಅಂಕೋಲಾ ಪೊಲೀಸರು ರಾಷ್ಟ್ರೀಯ ಹೆದ್ದಾರಿ52 ಹೆಬ್ಬುಳ ಬಳಿ ವಶಕ್ಕೆ ಪಡೆದುಕೊಂಡು ಇಬ್ಬರನ್ನು ಬಂಧಿಸಿದ್ದಾರೆ. ಲಾರಿ ಚಾಲಕ ಹರಯಾಣದ ಬುಲಷಣ ಶ್ರೀರಾಮ ಸ್ವರೂಪ್ (46) ಮತ್ತು ಜಾನುವಾರು ಸಾಗಿಸುತ್ತಿದ್ದ ರಾಮಕುಮಾರ ಜಾಧವ(55) ಬಂಧಿತ ಆರೋಪಿಗಳಾಗಿದ್ದು ಇವರಿಂದ 11.42 ಲಕ್ಷ ಮೌಲ್ಯದ ಕಪ್ಪು ಮುರಾ ಜಾತಿಯ 6 ಎಮ್ಮೆಗಳು ಮತ್ತು 29ಸಾವಿರ ಮೌಲ್ಯದ ಕಪ್ಪು ಮುರಾ ಜಾತಿಯ 5 ಎಮ್ಮೆ ಕರುಗಳು ಮತ್ತು 9ಲಕ್ಷ ಮೌಲ್ಯದ ಟಾಟಾ ಕಂಪನಿಯ ಲಾರಿಯನ್ನು ವಶಕ್ಕೆ ಪಡೆಯಲಾಗಿದೆ. ಆರೋಪಿತರು ಎಚ್.ಆರ್39 ಸಿ4024 ನೋಂದಣಿ ಸಂಖ್ಯೆಯ ಲಾರಿಯಲ್ಲಿ ಹರಯಾಣಾ ರಾಜ್ಯದಿಂದ ಮಂಗಳೂರಿಗೆ ಯಾವುದೇ ಪರವಾನಗಿ ಇಲ್ಲದೇ ವಧೆಯ ಉದ್ದೇಶದಿಂದ ಹಗ್ಗದಿಂದ ಗಟ್ಟಿಯಾಗಿ ಕಟ್ಟಿ ನೀರು ಆಹಾರ ನೀಡದೆ ನಿಂತುಕೊಳ್ಳಲು ಸರಿಯಾದ ವ್ಯವಸ್ಥೆ ಮಾಡದೇ ವಾಹನದ ಪರ್ಮಿಟ್ ಉಲ್ಲಂಘನೆ ಮಾಡಿಕೊಂಡು ಸಾಗಾಟ ಮಾಡುತ್ತಿದ್ದ ಸಂದರ್ಭದಲ್ಲಿ ಅಂಕೋಲಾ ಪಿಎಸ್ಐ ಗುರುನಾಥ ಹಾದಿಮನಿ ಮತ್ತು ಸಿಬ್ಬಂದಿಗಳು ದಾಳಿ ನಡೆಸಿ ಆರೋಪಿಗಳನ್ನು ವಶಕ್ಕೆ ಪಡೆದು ಜಾನುವಾರುಗಳ ರಕ್ಷಣೆ ಮಾಡಿದ್ದಾರೆ. ಈ ಕುರಿತು ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಬೈಕ್-ಕಾರು ಮುಖಾಮುಖಿ ಡಿಕ್ಕಿ

ಬನವಾಸಿ: ಬೈಕ್ ಮತ್ತು ಕಾರು ಮುಖಾಮುಖಿ ಡಿಕ್ಕಿಯಾಗಿ ಬೈಕ್ ಸವಾರ ಗಂಭೀರವಾಗಿ ಗಾಯಗೊಂಡ ಘಟನೆ ಬನವಾಸಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಶುಕ್ರವಾರ ಸಂಜೆ ನಡೆದಿದೆ. ಇಲ್ಲಿನ ದಾಸನಕೊಪ್ಪ ರಸ್ತೆಯ ಭೂತೇಶ್ವರ ಗುಡಿಯ ಬಳಿ ಈ ಅಪಘಾತ ಸಂಭವಿಸಿದ್ದು ಡಿಕ್ಕಿಯ ರಭಸಕ್ಕೆ ಬೈಕ್ ಸವಾರನ ಕಾಲಿಗೆ ಗಂಭೀರ ಸ್ವರೂಪದ ಗಾಯವಾಗಿದೆ. ಗಾಯಳುವನ್ನು ಕೂಡಲೇ ಬನವಾಸಿ ಪೊಲೀಸರು ಶಿರಸಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಗಾಯಗೊಂಡಿರುವ ಬೈಕ್ ಸವಾರ ಸೊರಬ ತಾಲೂಕಿನ ಸುರಣಗಿ ಗ್ರಾಮದ ಜೆಸಿಬಿ ಚಾಲಕ ದೇವರಾಜ ಪರಸಪ್ಪ ಸುರಣಗಿ ಎಂದು ತಿಳಿದುಬಂದಿದ್ದು, ಶಿರಸಿ ಆರ್. ಟಿ.ಓ ಅಧಿಕಾರಿಯ ಬೇಜವಾಬ್ದಾರಿ ಈ ಅಪಘಾತಕ್ಕೆ ಕಾರಣ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ. ಬನವಾಸಿ ಪೊಲೀಸ್ ಠಾಣೆಯ ಪಿಎಸ್ಐ ಮಾಂತೇಶ ಕುಂಬಾರ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪ್ರಕರಣ ದಾಖಲಿಸಿದ್ದಾರೆ.

ಪಿಯು ವಿದ್ಯಾರ್ಥಿ ಆತ್ಮಹತ್ಯೆ

ಭಟ್ಕಳ: ದ್ವಿತೀಯ ಪಿಯುಸಿ ವಿದ್ಯಾರ್ಥಿಯೊಬ್ಬ ವೈಯಕ್ತಿಕ ಕಾರಣಗಳಿಂದ ಮನನೊಂದು ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಹೆಬಳೆಯ ಹೊನ್ನೆಗದ್ದೆಯಲ್ಲಿ ಶುಕ್ರವಾರ ನಡೆದಿದೆ. ಮೃತ ವಿದ್ಯಾರ್ಥಿಯನ್ನು ಕೌಶಿಕ ಸುಬ್ರಾಯ ನಾಯ್ಕ (18) ಎಂದು ಗುರುತಿಸಲಾಗಿದೆ.



ಓದಿನಲ್ಲಿ ಬುದ್ಧಿವಂತನಾಗಿದ್ದ ಕೌಶಿಕ ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿದ್ದು, ಶುಕ್ರವಾರ ಬೆಳಗ್ಗೆ ಹೊನ್ನೆಗದ್ದೆಯಲ್ಲಿರುವ ತಮ್ಮ ಮನೆಯಲ್ಲಿ ಕೋಣೆಯ ಸೀಲಿಂಗ್ ಫ್ಯಾನ್‌ಗೆ ಉರುಳು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಯಾವುದೋ ವೈಯಕ್ತಿಕ ಕಾರಣದಿಂದ ಜೀವನದಲ್ಲಿ ಜಿಗುಪ್ಸೆಗೊಂಡು ಈ ಕೃತ್ಯಕ್ಕೆ ಮುಂದಾಗಿರಬಹುದು ಎಂದು ಹೇಳಲಾಗುತ್ತಿದೆ. ಈತ ಭೌತಶಾಸ್ತ್ರ ಪರೀಕ್ಷೆಯನ್ನು ಬರೆಯಬೇಕಿತ್ತು. ಈ ಕುರಿತು ಮೃತ ವಿದ್ಯಾರ್ಥಿಯ ತಂದೆ ಸುಬ್ರಾಯ ನಾಯ್ಕ ಅವರು ಭಟ್ಕಳ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಕಡಲೆಕಾಳು	4310	5239
ಉದ್ದಿನಬೇಳೆ	1818	10100
ತೆಂಗಿನಕಾಯಿ	22000	22000
ಹೆಸರುಕಾಳು	1209	5039
ಬೆಲ್ಲ	3825	3900
ಜೋಳ	1852	4189
ಮೆಕ್ಕೆಜೋಳ	1600	1770
ಮಡಿಕೆ (ಮಟಕಿ)	6225	13429
ಸಾಸುವೆ	6400	6400
ಈರುಳ್ಳಿ	400	2100
ಆಲೂಗಡ್ಡೆ	1200	1600
ಕುಸುಬೆ	5213	5213
ಸೋಯಾಬಿನ್	1319	5529
ತೊಗರಿ	3939	4979
ಗೋಧಿ	2300	3356

ರಂಗಪಂಚಮಿ: ರಂಗಿನಾಟಕ್ಕೆ ಹುಬ್ಬಳ್ಳಿ ಸಿದ್ಧ

ಹುಬ್ಬಳ್ಳಿ: ವಾಣಿಜ್ಯ ನಗರಿ ಹುಬ್ಬಳ್ಳಿಯಲ್ಲಿ ರಂಗಪಂಚಮಿ ರಂಗಿನಾಟಕ್ಕೆ ಸಿದ್ಧವಾಗಿದೆ. ಶನಿವಾರ ನಗರದಾದ್ಯಂತ ಜನತೆ ಹೋಳಿ ಹಬ್ಬ ಆಚರಿಸಲಿದ್ದು, ಅಹಿತಕರ ಘಟನೆಗಳಿಗೆ ಅವಕಾಶವಿಲ್ಲದಂತೆ ಪೊಲೀಸ್ ಇಲಾಖೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದೆ. ನಗರದಲ್ಲಿ 400ಕ್ಕೂ ಹೆಚ್ಚು ಕಾಮಣ್ಣ ರತಿ ಮೂರ್ತಿಗಳ ದಹನ ನಡೆಯಲಿದ್ದು, ಕಿರಿಯರಿಂದ ಹಿಡಿದು ಹಿರಿಯರವರೆಗೂ ಬಣ್ಣದ ಹಬ್ಬ ಆಚರಿಸಲಿದ್ದಾರೆ. ಹುಬ್ಬಳ್ಳಿಯಾದ್ಯಂತ ಪೊಲೀಸ್ ಬಿಗಿ ಬಂದೋಬಸ್ತ್ ಮಾಡಲಾಗಿದೆ. ಪೊಲೀಸರು ಸೂಕ್ಷ್ಮ ಹಾಗೂ ಅತೀ ಸೂಕ್ಷ್ಮ ಸ್ಥಳಗಳಲ್ಲಿ ಹದ್ದಿನ ಕಣ್ಣು ಇಟ್ಟಿದ್ದಾರೆ. ಚನ್ನಮ್ಮ ವೃತ್ತ, ಸಂಗೊಳ್ಳಿ ರಾಯಣ್ಣ ವೃತ್ತ, ಡಾ. ಬಿ.ಆರ್. ಅಂಬೇಡ್ಕರ್ ವೃತ್ತ, ಸ್ಟೇಷನ್ ರಸ್ತೆ, ದುರ್ಗದ ಬೈಲ್, ಹಳೇ ಹುಬ್ಬಳ್ಳಿ ವೃತ್ತ, ಇಂಡಿಪಂಪ್ ವೃತ್ತ, ಡಾಕಪ್ಪ ವೃತ್ತ, ಹೊಸೂರುವೃತ್ತ, ವಾಣಿವಿಲಾಸ ವೃತ್ತ ಸೇರಿದಂತೆ ಕೆಲವು ಪ್ರದೇಶಗಳಲ್ಲಿ ಸಿಬ್ಬಂದಿ ನಿಯೋಜಿಸಲಾಗಿದೆ. ಹು-ಧಾ ಪೊಲೀಸ್ ಕಮಿಷನರೇಟ್ ವ್ಯಾಪ್ತಿ ಹಾಗೂ ಹೊರ ಜಿಲ್ಲೆ ಸಿಬ್ಬಂದಿ, ಆರ್‌ಪಿಎಫ್, ಕೆಎಸ್‌ಆರ್‌ಪಿ, ಹೋಂಗಾರ್ಡ್ ಸೇರಿ 2500 ಕ್ಕೂ ಹೆಚ್ಚು ಸಿಬ್ಬಂದಿ ನಿಯೋಜಿಸಲಾಗಿದೆ.



ಐದು ಡ್ರೋನ್ ಕ್ಯಾಮೆರಾ, 30 ಕ್ಕೂ ಹೆಚ್ಚು ಗುಪ್ತ ಕ್ಯಾಮೆರಾ ಮೆನ್‌ಗಳು ಹಾಗೂ ಸೂಕ್ಷ್ಮ ಹಾಗೂ ಅತೀ ಸೂಕ್ಷ್ಮ 60 ಕ್ಕೂ ಹೆಚ್ಚು ಪ್ರದೇಶದಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಿ ಕಟ್ಟೆಚ್ಚರ ವಹಿಸಲಾಗಿದೆ.

ಮುಂಜಾಗ್ರತಾ ಕ್ರಮವಾಗಿ ಪೊಲೀಸ್ ಇಲಾಖೆ ಶುಕ್ರವಾರ ಮೂರು ಸಾವಿರ ಮಠದಿಂದ ನಗರದ ಕೆಲವು ಪ್ರದೇಶದಲ್ಲಿ ಪಥ ಸಂಚಲನ ನಡೆಸಿ,ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದೆ.

ಕ್ಷಿಪ್ರ ಕಾರ್ಯಾಚರಣೆ ಪಡೆಯ ಸಿಬ್ಬಂದಿಗೆ ಸೂಕ್ಷ್ಮ ಪ್ರದೇಶಗಳಲ್ಲಿನ ಜವಾಬ್ದಾರಿ ವಹಿಸಲಾಗಿದೆ. ಶಾಂತಿ ಕದಡುವವರ ಮೇಲೆ ಕಣ್ಣಿಡಲಿದ್ದಾರೆ. ಈಗಾಗಲೇ ಪೊಲೀಸ್ ಇಲಾಖೆಯಿಂದ ಶಾಂತಿಯುತವಾಗಿ ಹೋಳಿ ಹಬ್ಬ ಆಚರಿಸಲು ಎಲ್ಲ ಸಮುದಾಯದವರ, ಸಂಘ-ಸಂಸ್ಥೆಗಳ ಮುಖಂಡರ ಜೊತೆ ಸಭೆ ನಡೆಸಿ, ಸೌಹಾರ್ದತೆಯಿಂದ ಹಬ್ಬ ಆಚರಿಸಲು ವಿನಂತಿಸಲಾಗಿದೆ. ಬಲವಂತವಾಗಿ ಯಾರಿಗೂ ಯಾರೂ ಬಣ್ಣ ಹಚ್ಚಬಾರದು. ಮಹಿಳೆಯರಿಗೆ ಚುಡಾಯಿಸುವುದು, ಕೀಟಲೆ ಮಾಡುವುದು ಕಂಡು ಬಂದರೆ ಮಫ್ತಿಯಲ್ಲಿರುವ ಪೊಲೀಸರು ತಕ್ಷಣ ಕ್ರಮ ಕೈಗೊಳ್ಳಲಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮದ್ಯ ಮಾರಾಟ ಬಂದ್: ರಂಗಪಂಚಮಿ ಹಿನ್ನೆಲೆಯಲ್ಲಿ ಹುಬ್ಬಳ್ಳಿ ನಗರದಲ್ಲಿ ಮಂಗಳವಾರ ಹಾಗೂ ಮಾರ್ಚ್ 7ರಂದು ಮದ್ಯ ಮಾರಾಟ ಹಾಗೂ ಸಾಗಟ ನಿಷೇಧಿಸಲಾಗಿದೆ ಎಂದು ಪೊಲೀಸ್ ಇಲಾಖೆ ಆದೇಶಿದೆ.

ಬಣ್ಣ ಖರೀದಿ ಜೋರು

ನಗರದ ಕೇಶ್ವಾಪುರ, ದುರ್ಗದ ಬೈಲ್, ಜನತಾ ಬಜಾರ್, ಚನ್ನಮ್ಮ ವೃತ್ತ, ಗೋಕುಲ ರಸ್ತೆ, ಹಳೇಹುಬ್ಬಳ್ಳಿ ಸೇರಿದಂತೆ ವಿವಿಧ ಮಾರುಕಟ್ಟೆ ಪ್ರದೇಶಗಳಲ್ಲಿ ಬಣ್ಣಗಳ ಮಾರಾಟ ಜೋರಾಗಿದೆ. ವೈವಿಧ್ಯಮಯ ಪಿಚಕಾರಿಗಳು ಮಕ್ಕಳನ್ನು ಸೆಳೆಯುತ್ತಿದ್ದು, ಪಾಲಕರ ಜೊತೆಗೂಡಿ ಖರೀದಿಸುತ್ತಿದ್ದ ದೃಶ್ಯ ಕಂಡುಬಂತು. ದುರ್ಗದ ಬೈಲ್ ವೃತ್ತ, ಹಳೇ ಕೋರ್ಟ್ ವೃತ್ತದ ಸಾಯಿ ಮಂದಿರದ ಎದುರು, ಮೂರುಸಾವಿರ ಮಠದ ಬಳಿ ಹಲಗೆಗಳ ಮಾರಾಟ ಜೋರಾಗಿದೆ.

ಕೊಟ್ಟೂರಿನ ನೆಲವೇ ಸಾಧನೆಗೆ ಪ್ರೇರಣೆ

ಕೊಟ್ಟೂರು: ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಪರ್ವತಾರೋಹಣ ಮಾಡಿ ಸಾಧನೆ ಮಾಡಿರುವುದಕ್ಕೆ ನಾನು ಹುಟ್ಟಿ ಬೆಳೆದ ಕೊಟ್ಟೂರಿನ ಮಣ್ಣಿನ ಗುಣವೇ ಇದಕ್ಕೆ ಕಾರಣ ಎಂದು ಕ್ಯಾಪ್ಟನ್ ಡಾ. ಜಿ. ಸಂತೋಷ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ ಕೊಟ್ಟೂರು ತಾಲೂಕು ಘಟಕದ ವತಿಯಿಂದ ಇಂದು ತುಂಗಭದ್ರಾ ಶಿಕ್ಷಣ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿ, ಇಂತಹ ಅನೇಕ ಸಾಧನೆಗಳನ್ನು ಮಾಡಿರುವುದಕ್ಕೆ ನಾನು ಹುಟ್ಟಿದ ಈ ಕೊಟ್ಟೂರಿನ ನೆಲ ಹಾಗೂ ತಂದೆ ತಾಯಿಗಳ ಆಶೀರ್ವಾದ ಗುರುಗಳ ಪ್ರೇರಣೆಯೇ ಸಾಧನೆ ಮಾಡಲು ಸಹಕಾರಿಯಾಯಿತು. ಪರ್ವತಾರೋಹಣ ಎಂಬುದು ತುಂಬಾ ಕಠಿಣವಾದ ಕಾರ್ಯವಾಗಿದ್ದು ಮನಸ್ಸು ಮಾಡಿದರೆ ಯಾರು ಬೇಕಾದರೂ ಪರ್ವತಾರೋಹಣ ಮಾಡಬಹುದು ಎಂದರು. ಮುಂದಿನ ದಿನಗಳಲ್ಲಿ ಇನ್ನೂ ಎತ್ತರವಾದ ಪರ್ವತಗಳ ಪರ್ವತಾರೋಹಣ ಮಾಡಬೇಕೆಂಬ ಗುರಿ ಹೊಂದಿದ್ದು, ಶೀಘ್ರದಲ್ಲಿ ಆ ಸಾಧನೆಗಳನ್ನು ಮಾಡಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಘಟಕದ ಅಧ್ಯಕ್ಷ ದೇವರ ಮನೆ ಕೊಟ್ರೇಶ್, ಗುಲ್ಬರ್ಗ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಬಿ.ಸಿ. ಮಹಾಬಲೇಶ್ವರಪ್ಪ, ತುಂಗಭದ್ರಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಂ. ಶಿವಣ್ಣ, ಗುರುದೇವ ವಿದ್ಯಾ ಪ್ರಸಾರ ಪರಿಷತ್ ಕಾರ್ಯದರ್ಶಿ ಪಿ. ಶ್ರೀಧರ ಶೆಟ್ಟಿ, ಪ್ರಾಚಾರ್ಯ ಡಾ. ಟಿ. ಶ್ಯಾಮ್ ರಾಜ್, ಕಸಾಪ ಕಾರ್ಯಕಾರಿ ಸದಸ್ಯರಾದ ಹೆಚ್. ಎನ್. ಪ್ರಭಾಕರ್, ಸೊನ್ನದ ರಾಜಣ್ಣ, ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳು ಹಾಜರಿದ್ದರು. ವಿದ್ಯಾರ್ಥಿನಿ ಕೀರ್ತಿ ಪ್ರಾರ್ಥಿಸಿ, ಅರವಿಂದ್ ಬಸಾಪುರ್ ಸ್ವಾಗತಿಸಿ, ಈಶ್ವರಪ್ಪ ತುರಕಾಣಿ ಕಾರ್ಯಕ್ರಮ ನಿರ್ವಹಿಸಿದರು.





ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಮಂಡಿಸಿರುವ ರಾಜ್ಯ ಬಜೆಟ್ ನಲ್ಲಿ ಉತ್ತರ ಕರ್ನಾಟಕಕ್ಕೆ ಅನ್ಯಾಯ ವಾಗಿದೆ. ವಿಶೇಷವಾಗಿ ಬಾಗಲಕೋಟೆ ಜಿಲ್ಲೆಗೆ ಸಮಗ್ರ ಅಭಿವೃದ್ಧಿಗೆ ಹೇಳಿಕೊಳ್ಳುವ ಕೊಡುಗೆ ಏನು ಇಲ್ಲ.

■ ಅನಗವಾಡಿ ನಬಿ ಮ ನದಾಫ್, ಬಿಜೆಪಿ ಅಲ್ಪಸಂಖ್ಯಾತರ ಮೋರ್ಚಾದ ರಾಜ್ಯ ಕಾರ್ಯದರ್ಶಿ ಬಾಗಲಕೋಟೆ



ಯಾವುದೇ ನಿರ್ದಿಷ್ಟ ಗುರಿ ಇಲ್ಲದ ಬಜೆಟ್ ಇದಾಗಿದೆ. ಸಾಲವನ್ನು ಕೊಂಬಾಗ ಹಾಲೋಗರ ಹೊಂಬಂತೆ, ಸಾಲಿಗನು ಬಂದು ಸಾಲವನ್ನು ಕೇಳಿದಾಗ ಕಿಬ್ಬದಿಯ ಕೀಲು ಮುರಿದಂತೆ ಎಂಬಾತಾಗಿದೆ. ದಿಕ್ಕು ದಿಸೆಯಿಲ್ಲದ ಬಜೆಟ್ ಆಗಿದೆ.

■ ಹೇಮಾ ಬಸವರಾಜ ದಳವಾಯಿ, ಜಿಪಿಎಲ್ ಎಫ್‌ಎಲ್‌ಸಿಆರ್‌ಪಿ ಮುತ್ತಗಿ



ವಿದ್ಯಾರ್ಥಿಗಳ ಪರವಾದ ಹಾಗೂ ನಿರುದ್ಯೋಗಿಗಳಿಗೆ ಉದ್ಯೋಗ ಕೊಡುವ ಕೈಗಾರಿಕೆಗಳಿಗೆ ಸಬ್ ಸಿಡಿ, ಕೌಶಲ್ಯ ಅಭಿವೃದ್ಧಿ, ಕೃಷಿ, ನೀರಾವರಿ, ರಸ್ತೆ, ಗುಡಿ ಕೈಗಾರಿಕೆ, ತೋಟಗಾರಿಕೆ ಹೀಗೆ ಹಲವಾರು ಆಯಾಮಗಳಿಗೆ ಹೆಚ್ಚಿನ ಅನುದಾನವನ್ನು ಘೋಷಣೆ ಮಾಡುವ ಮುಖಾಂತರ ದೀನ ದಲಿತರ, ಬಡವರ, ನಿರುದ್ಯೋಗಿಗಳ, ವಿದ್ಯಾರ್ಥಿಗಳ ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಪರವಾದ ಬಜೆಟ್.

■ ರವಿ ರಾಠೋಡ, ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ



17 ಸಲ ಬಜೆಟ್ ಮಂಡಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಾಲದ ಬಜೆಟ್ ಮಂಡಿಸಿದ್ದಾರೆ. ಮುಂದಿನ ಸಲ ಹೇಗೂ ತಾವು ಅಧಿಕಾರಕ್ಕೆ ಬರುವುದಿಲ್ಲವೆಂದು, ಸಾಧ್ಯವಾದಷ್ಟು ಸಾಲದ ಹೊರೆ ನಮ್ಮ ರಾಜ್ಯದ ಮೇಲೆ ಬಿಟ್ಟು ಹೋಗುವವರಿದ್ದಾರೆ. ಮೇಲಾಗಿ ಕೇಂದ್ರ ಸರ್ಕಾರದಿಂದ ಜನ ಸಾಮಾನ್ಯರಿಗೆ ಜಿಎಸ್‌ಟಿ ಕಡಿಮೆ ಮಾಡಿರುವುದನ್ನು ವಿರೋಧಿಸಿದ್ದಾರೆ. ಇನ್ನಾದರೂ ನಮ್ಮ ರಾಜ್ಯದ ಮತದಾರರು ಇದನ್ನು ಅರ್ಥ ಮಾಡಿಕೊಳ್ಳಬೇಕು.

■ ಸುಧೀಂದ್ರ ದೇಶಪಾಂಡೆ, ಬಿಜೆಪಿ ಶಿಕ್ಷಣ ಪ್ರಕೋಷ್ಠ ರಾಜ್ಯ ಸಮಿತಿ ಸದಸ್ಯರು

ದುಬೈನಲ್ಲಿ ಸಿಲುಕಿದ್ದ ರಾಣಿ ಸಂಯುಕ್ತ ಕುಟುಂಬ ವಾಪಸ್

ವಿಜಯನಗರ: ಯುದ್ಧ ಪೀಡಿತ ಮಧ್ಯಪ್ರಾಚ್ಯ ರಾಷ್ಟ್ರದಲ್ಲಿ ಸಿಲುಕಿದ್ದ ಹೊಸಪೇಟೆಯ ಗಣಿ ಉದ್ಯಮಿ ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ರಾಣಿ ಸಂಯುಕ್ತ ಹಾಗೂ ಕುಟುಂಬಸ್ಥರು ಸುರಕ್ಷಿತವಾಗಿ ಸ್ವದೇಶಕ್ಕೆ ಮರಳಿದ್ದಾರೆ.



ಖಾಸಗಿ ಕಾರ್ಯಕ್ರಮದ ನಿಮಿತ್ತ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ರಾಣಿ ಸಂಯುಕ್ತ ಅವರ ಪತಿ ಶ್ರೀನಿವಾಸ ರೆಡ್ಡಿ, ಅವರ ಮಗ ರಾಜವರ್ಧನ್ ರೆಡ್ಡಿ, ಅಳಿಯ ಬಳ್ಳಾರಿಯ ಶಾಸಕ ನಾರಾ ಭರತ್ ರೆಡ್ಡಿ, ಮಗಳು ವೈಜಯಂತಿ ಹಾಗೂ ಮೊಮ್ಮಗಳು ಆರ್ನಾ ವರಾಲಿಕಾ ರೆಡ್ಡಿ ಸೇರಿದಂತೆ 6 ಜನರು ದುಬೈ ಪ್ರವಾಸಕ್ಕೆ ತೆರಳಿದ್ದರು. ಅವರು ದುಬೈ ತಲುಪಿದ ಎರಡು ದಿನಗಳ ಬಳಿಕ ಯುದ್ಧ ಆರಂಭಗೊಂಡಿದ್ದರಿಂದ ಮುಂದೇನು ಎಂದು ದಿಕ್ಕು ತೋಚದಂತಾಗಿತ್ತು.

ನಾವು ತಂಗಿದ್ದ ಅಂಟ್ಲಾಟೀಸ್ ಹೋಟೆಲ್ ಕಿಟಕಿಯಲ್ಲಿ ನೋಡ ನೋಡುತ್ತಿದ್ದಂತೆ ಗಜ ಗಾತ್ರದ ಮುಸೈಲ್ ಕಾಣಿಸಿಕೊಂಡಿದ್ದು, ಕ್ಷಣ ಮಾತ್ರದಲ್ಲಿ ಅದು ಅಬುದಾಬಿಯ ವಿಮಾನ ನಿಲ್ದಾಣದಲ್ಲಿ ಬಿದ್ದು ಸ್ಫೋಟಗೊಂಡಿತು. ಈ ಭಯಾನಕ ದೃಶ್ಯವನ್ನು ಕಂಡ ನಮಗೆ ಜೀವಂತವಾಗಿ ಮರಳಿ ಭಾರತಕ್ಕೆ ಬರುತ್ತೇವೆ ಎಂಬ ನಂಬಿಕೆಯೇ ಇರಲಿಲ್ಲ. ಇದಾದ ಮರು ದಿನ ಆನ್‌ಲೈನ್‌ನಲ್ಲಿ ಓಮಾನ್ ವೀಸಾ ಸಿಕ್ಕಿ, ಅಲ್ಲಿಂದ ಭಾರತದ ಬೆಂಗಳೂರಿಗೆ ವಿಮಾನದ ಟಿಕೆಟ್ ಲಭಿಸಿತ್ತು. ತಕ್ಷಣ ತರಾತುರಿಯಲ್ಲಿ ಓಮಾನ್ ತಲುಪಿತ್ತಿದ್ದಂತೆ ಬೆಂಗಳೂರು ವಿಮಾನ ರದ್ದಾಗುವ ಮುನ್ಸೂಚನೆಯಿದ್ದರಿಂದ ಕೇರಳದ ಟ್ರಿವೇಂಡ್ರಂ ವಿಮಾನ ಹಿಡಿದು ಭಾರತಕ್ಕೆ ಮರಳಿದೆವು ಎಂದು ಶ್ರೀನಿವಾಸ ರೆಡ್ಡಿ ಕಹಿ ಅನುಭವವನ್ನು ಪತ್ರಿಕೆಯೊಂದಿಗೆ ಹಂಚಿಕೊಂಡರು.

ಈ ಪೈಕಿ ಶಾಸಕ ನಾರಾ ಭರತ್ ರೆಡ್ಡಿ ಬಜೆಟ್ ಅಧಿವೇಶನದ ನಿಮಿತ್ತ ಬೆಂಗಳೂರಿನಲ್ಲಿ ಉಳಿದುಕೊಂಡಿದ್ದು, ಇನ್ನುಳಿದವರು ಗುರುವಾರ ಸಂಜೆ ಹೊಸಪೇಟೆಗೆ ವಾಪಸ್ಸಾಗಿದ್ದಾರೆ.

ಬಜೆಟ್‌ನಲ್ಲಿ ಬಹುಸಂಖ್ಯಾತರಿಗೆ ಅನ್ಯಾಯ: ನಾಯ್ಕ

ಭಟ್ಕಳ: ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ ಇಂದಿನ ರಾಜ್ಯ ಬಜೆಟ್ ಹಿಂದೂ ವಿರೋಧಿ ಬಜೆಟ್ ಆಗಿದ್ದು ಬಹುಸಂಖ್ಯಾತರಿಗೆ ಅನ್ಯಾಯವಾಗಿದೆ ಎಂದು ಮಾಜಿ ಶಾಸಕ ಸುನೀಲ ನಾಯ್ಕ ಹೇಳಿದ್ದಾರೆ.




ಬಜೆಟ್ ವಿಶ್ಲೇಷಣೆ ಮಾಡಿದ ಅವರು ಮುಖ್ಯಮಂತ್ರಿಗಳು ಕೇವಲ ಒಂದು ಸಮುದಾಯದ ಮುಖ್ಯಮಂತ್ರಿಗಳಲ್ಲ, ರಾಜ್ಯದ ಎಲ್ಲಾ ಸಮುದಾಯಗಳಿಗೂ ಮುಖ್ಯಮಂತ್ರಿಗಳು ಎನ್ನುವುದನ್ನು ಮರೆತಂತೆ ಕಾಣುತ್ತಿದೆ. ಜನರ ಮೇಲೆ ಸಾಲದ ಹೊರೆ ಹಾಕಿ ಒಂದು ಸಮುದಾಯದ ಅಭಿವೃದ್ಧಿಗೆ ಮಾತ್ರ ಸರ್ಕಾರ ಒತ್ತು ನೀಡುತ್ತಿದೆ ಎಂದೂ ಅವರು ಹೇಳಿದರು. ಈ ಬಜೆಟ್‌ನಿಂದ ಬಡವರು ಹಾಗೂ ಮಧ್ಯಮ ವರ್ಗದವರಿಗೆ ಯಾವುದೇ ಪ್ರಯೋಜನವಾಗಿಲ್ಲ. ಅಂಗನವಾಡಿ ಕಾರ್ಯಕರ್ತೆಯರು ಸಮವಸ್ತ್ರದ ಬೇಡಿಕೆ ಇಟ್ಟಿರಲಿಲ್ಲ, ಬದಲಾಗಿ ಗೌರವಧನ ಹೆಚ್ಚಳಕ್ಕೆ ಆಗ್ರಹಿಸಿದ್ದರು. ಆದರೆ ಸರ್ಕಾರ ಅವರ ನಿಜವಾದ ಬೇಡಿಕೆಯನ್ನು ಕಡೆಗಣಿಸಿ ಸಮ ವಸ್ತ್ರ ನೀಡಿ ಅವರನ್ನು ಮೆಚ್ಚಿಸಲು ಹೊರಟಿದೆ ಎಂದರು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣದ ಬೇಡಿಕೆ ಹಲವು ವರ್ಷಗಳಿಂದ ಕೇಳಿಬರುತ್ತಿದೆ. ಆದರೆ ಕೇವಲ 100 ಕೋಟಿ ಅನುದಾನದಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಸಾಧ್ಯವಿಲ್ಲ. ಇದು ಜಿಲ್ಲೆಯ ಜನರ ಕಣ್ಣೊರೆಯುವ ಪ್ರಯತ್ನ ಮಾತ್ರ ಎಂದು ಅವರು ಆರೋಪಿಸಿದರು. ಜಿಲ್ಲೆಯ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ವಿವಿಧ ವಿಭಾಗಗಳ ವೈದ್ಯರು, ಸಿಬ್ಬಂದಿ ಹಾಗೂ ಅಗತ್ಯ ಔಷಧಗಳ ಪೂರೈಕೆಯನ್ನು ಸರ್ಕಾರ ಮಾಡಲು ಕ್ರಮ ಕೈಗೊಂಡಿದ್ದರೆ ಇದಕ್ಕಿಂತ ಉತ್ತಮವಾಗುತ್ತಿತ್ತು ಎಂದೂ ಸುನಿಲ್ ನಾಯ್ಕ ನೆನಪಿಸಿದರು.

ಆಸ್ಪತ್ರೆ ಮೇಲ್ದರ್ಜೆಗೆ 5 ಕೋಟಿ ರೂ.ಅನುದಾನ ಮಂಜೂರು: ದೇಶಪಾಂಡೆ

ದಾಂಡೇಲಿ: ಕಾರ್ಮಿಕರೆ ಹೆಚ್ಚಿರುವ ದಾಂಡೇಲಿಯಲ್ಲಿ ಬಡ ಹಾಗೂ ಮಧ್ಯಮ ವರ್ಗದ ಜನರು ಹೆಚ್ಚಿನ ಪ್ರಮಾಣದಲ್ಲಿದ್ದು, ಅವರಿಗೆ ಅನುಕೂಲವಾಗಲೆಂದು ತಾನು ಈ ನಗರದಲ್ಲಿ ಈಗಾಗಲೆ 3,600 ಕ್ಕೂ ಹೆಚ್ಚು ಆಶ್ರಯ ಮನೆಗಳನ್ನುನೀಡಿದ್ದೇನೆ.ಕೊಳಚೆನಿರ್ಮೂಲನಾ ಮಂಡಳಿಯ ಯೋಜನೆಯಡಿ ಕೂಡ 1674 ಮನೆಗಳನ್ನು ನಿರ್ಮಿಸಲಾಗಿದೆ ಎಂದು ಶಾಸಕರು ಹಾಗೂ ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆಯವರು ಹೇಳಿದರು.



ಅವರು ನಗರ ಸಭೆಯ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂಬೇವಾಡಿಯಲ್ಲಿ ನಿರ್ಮಾಣ ಹಂತದಲ್ಲಿರುವ ಜಿಪ್ಲಸ್‌ಟು ಮನೆಗಳ ವಿತರಣೆಯಲ್ಲಿ ವಿಳಂಬವಾಗಿರುವ ಬಗ್ಗೆ ನನಗೂ ಕೂಡ ಬೇಸರವಿದೆ. ಗುತ್ತಿಗೆದಾರರ ಆಮೆಗತಿಯ ಕೆಲಸ ನನಗೂ ಸಮಾಧಾನ ತಂದಿಲ್ಲ, ಆದರೆ ಆದಷ್ಟು ತ್ವರಿತವಾಗಿ ಫಲಾನುಭವಿಗಳಿಗೆ ಮನೆಗಳನ್ನು ವಿತರಿಸಲು ಕ್ರಮವಹಿಸಲಾಗುವುದು ಎಂದರು.

ಜಿ ಪ್ಲಸ್ ಟು ಮನೆಗಳ ನಿರ್ಮಾಣ ಕಾಮಗಾರಿ ಹೌಸಿಂಗ್ ಬೋರ್ಡ್ ನವರಿಂದ ನಡೆಯುತ್ತಿದೆ. ಟೆಂಡರ್ ಕರೆದವರು ಅವರೇ. ಗುತ್ತಿಗೆದಾರರನ್ನು ಆಯ್ಕೆ ಮಾಡಿದವರು ಅವರೇ. ಗುತ್ತಿಗೆದಾರ ತನಗೆ ಹಣದ ಸಮಸ್ಯೆಯಾಗುತ್ತಿದೆ ಎನ್ನುತ್ತಿದ್ದಾನೆ. ಆದರೂ ಕೂಡ ನಾವು ಮೊದಲು ಎಲ್ಲ ಮನೆಗಳ ಕಾಮಗಾರಿಯನ್ನು ಪೂರ್ಣಗೊಳಿಸಿ ನಂತರ, ಹಣ ಮಂಜೂರಿ ಮಾಡಿಸುವ ವ್ಯವಸ್ಥೆ ಮಾಡುತ್ತೇವೆ ಎನ್ನುವ ಭರವಸೆಯನ್ನು ನೀಡಿದ್ದೇವೆ. ಇನ್ನು ಏಳು ಜನರು ತಾವು ಬ್ಯಾಂಕ್ ಸಾಲ ಮಾಡದೆ ನೇರವಾಗಿ ಹಣಭರಣ ಮಾಡಿದ್ದರಿಂದ ಅವರಿಗೆ ಮನೆಗಳನ್ನು ಹಸ್ತಾಂತರಿಸುತ್ತಿದ್ದೇವೆ. ಈ ಯೋಜನೆಯನ್ನು ತರುವಾಗ ಸಾಕಷ್ಟು ಶ್ರಮವಹಿಸಿದ್ದೇನೆ. ಬಡ ಹಾಗೂ ಮಾಧ್ಯಮ ವರ್ಗದ ಜನರಿಗೆ ಸೂರು ಸಿಗಬೇಕೆಂದು ನನ್ನ ಉದ್ದೇಶ. ಹಾಗಾಗಿ ಸಾರ್ವಜನಿಕರು ಮತ್ತು ಫಲಾನುಭವಿಗಳು ಸಹಕರಿಸಬೇಕೆಂದರು.

ದಶಮಾನೋತ್ಸವ ಇಂದು

ಬೀಳಗಿ: ಪಟ್ಟಣದ ಮನ್ನಿಕೇರಿ ಗ್ಲೋಬಲ್ ಗೈಡ್ ಪಬ್ಲಿಕ್ ಶಾಲೆ ದಶಮಾನೋತ್ಸವ ಮಾ.7ರಂದು ಸಂಜೆ 4ಕ್ಕೆ ಶಾಲಾ ಆವರಣದಲ್ಲಿ ನಡೆಯಲಿದೆ ಎಂದು ಮುಖ್ಯ ಶಿಕ್ಷಕಿ ವೀಣಾ ಸುರೇಶ ಮನಗೂಳಿ ತಿಳಿಸಿದ್ದಾರೆ. ನಮ್ಮ ಸಂಸ್ಥೆಯು ಕೇವಲ ಪಠ್ಯಕ್ಕೆ ಸೀಮಿತವಾಗದೇ, ನೈತಿಕ ಮೌಲ್ಯ ಮತ್ತು ಸಮಗ್ರ ಬೆಳವಣಿಗೆಯನ್ನು ಗುರಿಯಾಗಿಸಿಕೊಂಡಿದೆ. ಹತ್ತು ವರ್ಷಗಳ ಈ ಯಶಸ್ವಿ ಪಯಣದಲ್ಲಿ ಸಾವಿರಾರು ವಿದ್ಯಾರ್ಥಿಗಳ ಭವಿಷ್ಯಕ್ಕೆ ಅಡಿಪಾಯ ಹಾಕಿಕೊಟ್ಟ ತೃಪ್ತಿ ನಮಗಿದೆ. ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಾಧನೆ ಮಾಡಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದು. ಗಿರಿಸಾಗರ ಕಲ್ಯಾಣ ಹಿರೇಮಠದ ರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು. ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ ಉದ್ಘಾಟಿಸುವರು. ಸಂಸ್ಥೆಯ ಅಧ್ಯಕ್ಷ ಸುರೇಶ ಮನಗೂಳಿ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್.ಆದಾಪುರ, ಡಾ.ಅರ್ಚನಾ ದಡ್ಡೇನವರ, ಡಾ.ವಿಕಾಸ ದಡ್ಡೇನ್ನವರ ಪಾಲ್ಗೊಳ್ಳಲಿದ್ದಾರೆ ಸಾಹಿತಿ ಸದಾನಂದ ಏಳಗಂಟಿ, ಯಶಸ್ವಿ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷೆ ಆಶಾ ಬೀಳಗಿ, ಬೂದಿಹಾಳ (ಎಸ್.ಜಿ.) ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪಿ.ಆರ್.ನದಾಫ, ಸಂಸ್ಥೆಯ ಗೌರವಾಧ್ಯಕ್ಷ ಸಿದ್ದಪ್ಪ ಮನಗೂಳಿ ಪಾಲ್ಗೊಳ್ಳುವರು ಎಂದು ತಿಳಿಸಿದರು.

ರೋಹಿತ್ ವೇಮಲು ಕಾಯ್ದೆ ಜಾರಿ: ಸ್ವಾಗತಾರ್ಹ



ಬೀಳಗಿ: ಶಿಕ್ಷಣ ಇಲಾಖೆಗೆ ರೂ. 47.224 ಕೋಟಿ ಹಣ ಮೀಸಲಿಟ್ಟಿರುವುದು ಅಲ್ಲದೆ, 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣದ ಬಳಕೆಯನ್ನು ನಿಷೇಧ ಮಾಡಿದ ಸರ್ಕಾರದ ನಿರ್ಧಾರ ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಮಾನಸಿಕ ಸುರಕ್ಷತೆ ದೃಷ್ಟಿಯಿಂದ ಉಪಯುಕ್ತವಾಗಿದೆ. ಜೊತೆಗೆ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಮೇಲೆ ನಡೆಯುವ ಸಾಮಾಜಿಕ ದೌರ್ಜನ್ಯ ತಡೆಯಲು ರೋಹಿತ್ ವೇಮಲು ಕಾಯ್ದೆ ಜಾರಿಗೆ ತಂದಿರುವುದು ಸ್ವಾಗತಾರ್ಹವಾದದ್ದು ಎಂದು ಕೆಪಿಸಿಸಿ ಮಾಜಿ ಕಾರ್ಯದರ್ಶಿ ಎಂ.ಎನ್.ಪಾಟೀಲ ತಿಳಿಸಿದ್ದಾರೆ.

ಭತ್ತದ ಹುಲ್ಲಿನ ಬಣವಿಗೆ ಬೆಂಕಿ: ಹಾನಿ

ಮುಂಡಗೋಡ: ತಾಲೂಕಿನ ಹುಲಿಹೊಂಡ ಗ್ರಾಮದಲ್ಲಿ ಆಕಸ್ಮಿಕವಾಗಿ ಭತ್ತದ ಹುಲ್ಲಿನ ಬಣವಿಗೆ ಬೆಂಕಿ ತಗುಲಿ ಹಾನಿ ಸಂಭವಿಸಿದ ಘಟನೆ ಶುಕ್ರವಾರ ನಡೆದಿದೆ. ನಾಗಪ್ಪ ಅಲ್ಲಾಪುರ ಎಂಬುವರಿಗೆ ಅವರಿಗೆ ಸೇರಿದ ಸುಮಾರು ಮೂರು ಟ್ರ್ಯಾಕ್ಟರ್ ಹುಲ್ಲಿನ ಬಣವಿ, ಎರಡು ಟ್ರ್ಯಾಕ್ಟರ್ ಬಿಳಿ ಜೋಳದ ಸಿಪ್ಪೆ, ಮೂರು ಟ್ರ್ಯಾಕ್ಟರ್ ಗೋವಿನ ಜೋಳದ ಸಿಪ್ಪೆ ಮತ್ತು ಹುರುಳಿ ಸಿಪ್ಪೆ ಬೆಂಕಿ ತಗುಲಿದೆ. ಜಾನುವಾರುಗಳ ಮೇವಿಗೆ ಸಂಗ್ರಹಿದ್ದರು. ಶುಕ್ರವಾರ ಮಧ್ಯಾಹ್ನ ಆಕಸ್ಮಿಕವಾಗಿ ಬೆಂಕಿ ತಗುಲಿ ಅಪಾರ ಹಾನಿಯಾಗಿದೆ. ಮಾಹಿತಿ ತಿಳಿದು ಅಗ್ನಿಶಾಮಕ ದಳದವರು ಸ್ಥಳಕ್ಕೆ ಬಂದು ಬೆಂಕಿ ಆರಿಸಿದರಾದರೂ ಹುಲ್ಲಿನ ಬಣವಿ ಮತ್ತು ಇತರೆ ಮೇವು ಸುಟ್ಟು ಹೋಗಿತ್ತು. ಪ್ರಭಾರ ಅಗ್ನಿಶಾಮಕ ಠಾಣಾಧಿಕಾರಿ ಚಂದ್ರಪ್ಪ ಪೂಜಾರ, ಸಿಬ್ಬಂದಿಗಳಾದ ಮಲ್ಲಿಕಾರ್ಜುನ ಮಲ್ಲಿಗವಾಡ, ನಾಗರಾಜ ಮೂಲಿಮನಿ ಬಸವರಾಜ ನಾಣಾಪೂರ, ಅಡವೆಪ್ಪ ಕುರವಿನಕೊಪ್ಪ, ಅರುಣ ಮುಲಗೆ, ಸೋಮಶೇಖರ್ ಜೀವನವರ, ರಾಹುಲ ಜಿಡ್ಡಿಮನೆ ಸೇರಿದಂತೆ ಇತರರು ಕಾರ್ಯಾಚರಣೆಯಲ್ಲಿದ್ದರು.

ನಕಲಿ ವೈದ್ಯರ ಮೇಲೆ ದಾಳಿ



ಬಸವನಬಾಗೇವಾಡಿ: ಪಟ್ಟಣ ಸೇರಿದಂತೆ ತಾಲೂಕಿನ ಇವಣಗಿ, ಕಣಕಾಲ ಸೇರಿ ಮೂರು ಕಡೆಗಳಲ್ಲಿ ತಹಶೀಲ್ದಾರ, ತಾಲೂಕು ಆರೋಗ್ಯಾಧಿಕಾರಿಗಳ ನೇತೃತ್ವದಲ್ಲಿ ನಕಲಿ ವೈದ್ಯರ ಟಿಕಾಣೆಗಳ ಮೇಲೆ ಧೀಡಿರ್ ದಾಳಿ ನಡೆಸಿ ನೋಟೀಸ್ ನೀಡಿದ ಘಟನೆ ಶುಕ್ರವಾರ ನಡೆದಿದೆ.


ತಾಲೂಕು ಆರೋಗ್ಯಾಧಿಕಾರಿ ಕವಿತಾ ದೊಡಮನಿ ಅವರು ತಹಶೀಲ್ದಾರ ಕಚೇರಿಯಲ್ಲಿ ಕೆಪಿಎಂಇ ಸಭೆ ನಡೆಸಿ ನಂತರ ದಾಳಿ ನಡೆಸಿದ್ದಾರೆ. ಬಸವನಬಾಗೇವಾಡಿ ಹಾಗೂ ಸಮೀಪದ ಇವಣಗಿ ಗ್ರಾಮದಲ್ಲಿ ಆರ್ ಎಂ ಪಿ ವೈದ್ಯರ ಕ್ಲಿನಿಕ್ ಗಳ ಮೇಲೆ ದಾಳಿ ನಡೆಸಿ ಕ್ಲಿನಿಕ್ ನಲ್ಲಿ ದಾಖಲೆಗಳನ್ನು ಪರಿಶೀಲನೆ ಮಾಡಿ ಕ್ಲಿನಿಕ್ ಬಂದ್ ಮಾಡುವಂತೆ ನೋಟೀಸ್ ನೀಡಿದ್ದಾರೆ ಎಂದು ತಿಳಿದು ಬಂದಿದೆ. ಕಣಕಾಲ ಗ್ರಾಮದಲ್ಲಿ ಇಬ್ಬರು ನಕಲಿ ಒಬ್ಬರು ವೈದ್ಯಾಧಿಕಾರಿಗಳಿಗೆ ಸಿಕ್ಕರೆ ಒಬ್ಬರು ತಪ್ಪಿಸಿಕೊಂಡು ಕ್ಲಿನಿಕ್ ಬಂದ್ ಮಾಡಿಕೊಂಡು ಹೋಗಿದ್ದರು ಎಂದು ತಿಳಿದು ಬಂದಿದೆ, ಈ ಜನ ನಕಲಿ ವೈದ್ಯರಿಗೆ ನೋಟಿಸ್ ನೀಡಿ ಕ್ಲಿನಿಕ್ ನ್ನು ಬಂದ್ ಮಾಡುವಂತೆ ತಿಳಿಸಿದ್ದಾರೆ ಎಂದು ತಿಳಿದು ಬಂದಿದೆ. ತಹಶೀಲ್ದಾರ್ ವೈ. ಎಸ್.ಸೋಮನಕಟ್ಟಿ, ತಾಲೂಕು ಆರೋಗ್ಯಾಧಿಕಾರಿ ಡಾ.ಕವಿತಾ ದೊಡಮನಿ, ರಾಜಶೇಖರ ಚಿಂಚೋಳಿ, ಎಎಸ್ಐ ಶ್ರೀಕಾಂತ ಕುಪ್ಪೆಗೌಡರ, ತಾಲೂಕು ವೈದ್ಯರ ಸಂಘದ ಅಧ್ಯಕ್ಷ ಡಾ.ಮಹಾಂತೇಶ ಜಾಲಗೇರಿ ಸೇರಿದಂತೆ ಇತರರು ಇದ್ದರು.

ಕಂದಾಯ ಗ್ರಾಮ ಘೋಷಿಸಿಲು ಒತ್ತಾಯಿಸಿ ಪಾದಯಾತ್ರೆ

ಗಂಗಾವತಿ: ತಾಲೂಕಿನ ಬಸವನದುರ್ಗ ಗ್ರಾಮವನ್ನು ಕಂದಾಯ ಗ್ರಾಮವನ್ನಾಗಿ ಘೋಷಣೆ ಮಾಡಲು ಒತ್ತಾಯಿಸಿ, ಗ್ರಾಮದಿಂದ ತಹಶೀಲ್ದಾರ್ ಕಚೇರಿವರೆಗೆಪಾದಯಾತ್ರೆಯನ್ನು ನಡೆಸಲಾಗುವುದು ಎಂದು ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಡಾ.ವೆಂಕಟೇಶಬಾಬು ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಗ್ರಾಮಸ್ಥರಿಂದ ಶುಕ್ರವಾರ ಹಮ್ಮಿಕೊಂಡ ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡಿದರು.

ತಾಲೂಕಿನ ಆನೆಗೊಂದಿ ಗ್ರಾಮದ ಹೋಗುವ ಮಾರ್ಗದಲ್ಲಿ ಬರುವ ಬಸವನದುರ್ಗ ಗ್ರಾಮದಲ್ಲಿ ಸರಿಸುಮಾರು 9 ದಶಕಗಳಿಂದ 400ಕ್ಕೂ ಅಧಿಕ ಕುಟುಂಬಗಳು ದಾಖಲೆ ರಹಿತವಾಗಿ ವಾಸ ಮಾಡುತ್ತಿವೆ. ಕಂದಾಯ ಇಲಾಖೆಯು 2022 ನ.8ರಂದು ದಾಖಲೆ ರಹಿತ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಅಥವಾ ಕಂದಾಯ ಗ್ರಾಮದ ಭಾಗವಾಗಿ ಪರಿವರ್ತಿಸಿ ಹಕ್ಕು ದಾಖಲೆಗಳನ್ನು ಒದಗಿಸಲು ಅವಕಾಶ ಮಾಡಿಕೊಟ್ಟಿದೆ. ಕಂದಾಯ ಇಲಾಖೆಯ ನಿಯಮಗಳಂತೆ ಗ್ರಾಪಂ ವತಿಯಿಂದ ಬಸವನದುರ್ಗ ಗ್ರಾಮದ ನಿವಾಸಿಗಳಿಗೆ ಯಾವುದೇ ರೀತಿಯ ಹಕ್ಕು ಪತ್ರಗಳನ್ನು ನೀಡಿರುವುದಿಲ್ಲ ಮತ್ತು ಅಧಿಕೃತ ಆಸ್ತಿಯಾದ11ಎ ವಿತರಣೆ ಮಾಡಿರುವುದಿಲ್ಲ



ಎಂದು ಕಂದಾಯ ಇಲಾಖೆಗೆ ಈಗಾಗಲೇ ಪತ್ರ ವ್ಯವಹಾರವನ್ನು ಕೂಡ ಮಾಡಲಾಗಿದೆ. ಆದರೆ ಗಂಗಾವತಿಯ ಕಂದಾಯ ನಿರೀಕ್ಷಕರಾದ ಸೈಯದ್ ಬಷೀರ್ ಅವರು ಗ್ರಾಮದಲ್ಲಿನ ಯಾವುದೇ ಪೂರಕ ದಾಖಲೆಗಳನ್ನು ತೆಗೆದುಕೊಳ್ಳದೆ ಬಸವನದುರ್ಗ ಗ್ರಾಮವನ್ನು ಕಂದಾಯ ಗ್ರಾಮ ರಚನೆಯಿಂದ ಕೈಬಿಡಬೇಕು ಎಂದು ವರದಿಯನ್ನು ನೀಡಿದ್ದಾರೆ. ಕೆಲ ಪ್ರಭಾವಿ ವ್ಯಕ್ತಿಗಳ ಕೈಗೊಂಬೆಯಂತೆ ಕೆಲಸ ಮಾಡುತ್ತಿರುವ ಕಂದಾಯ ನಿರೀಕ್ಷಕ ಸೈಯದ್ ಬಷೀರ್ ನೀಡಿರುವ ವರದಿಯಿಂದ ಬಸವನದುರ್ಗ ಗ್ರಾಮವನ್ನು ಕಂದಾಯ ಗ್ರಾಮ ಪಟ್ಟಿಯಿಂದ ಕೈಬಿಡಲಾಗಿದೆ. ಬಸವನದುರ್ಗ ಗ್ರಾಮಸ್ಥರು ಮಾ.9ರಂದು ಗ್ರಾಮದಿಂದ ತಹಶೀಲ್ದಾರ್ ಕಚೇರಿಯವರೆಗೆ ನೂರಾರು ಜನ ಸೇರಿಕೊಂಡು ಪಾದಯಾತ್ರೆಯ ಮೂಲಕ ಆಗಮಿಸಿ, ತಹಶೀಲ್ದಾರ್ ಕಚೇರಿ ಎದುರು ಪ್ರತಿಭಟನೆಯನ್ನು ನಡೆಸಲಾಗುವುದು ಎಂದು ಹೇಳಿದರು. ಗ್ರಾಮಸ್ಥರಾದ ರಾಮಕೃಷ್ಣ, ಹೊನ್ನಪ್ಪ ನಾಯಕ, ಶ್ರೀನಿವಾಸ್ ರೆಡ್ಡಿ, ಚಂದ್ರಶೇಖರ, ರಾಜಶೇಖರ, ಎ.ರವಿಕುಮಾರ, ರಾಮನಗೌಡ, ರಾಮಣ್ಣ, ಬಸವರಾಜ, ಯಮನೂರಪ್ಪ, ನೂರುದ್ದೀನ್, ಸಲೀಂ ಹಾಗೂ ಇತರರಿದ್ದರು.

ಹೊಸ ದಿಗಂತ
ಶನಿವಾರ, 7 ಮಾರ್ಚ್ 2026
ಹುಬ್ಬಳ್ಳಿ




ರಾಜ್ಯ ಬಜೆಟ್
2026-2027



ದಾಖಲೆಯ ಬಜೆಟ್

ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಎಂಬ ಘೋಷವಾಕ್ಯದಲ್ಲಿ ಸಿಎಂ ಸಿದ್ದರಾಮಯ್ಯ ಅವರು ತಮ್ಮ 17 ನೇ ಬಜೆಟ್ ಮಂಡನೆ ಮಾಡಿದ್ದಾರೆ. ರಾಜ್ಯದ ಕಲ್ಯಾಣ ಕರ್ನಾಟಕ, ಕರಾವಳಿ, ದಕ್ಷಿಣ ಕನ್ನಡ, ಬಯಲು ಸೀಮೆ ಸೇರಿದಂತೆ 31 ಜಿಲ್ಲೆಗೂ ಅನುದಾನದ ಜತೆಗೆ ಬೆಂಗಳೂರಿನ ಜನ ದಟ್ಟಣೆ ತಗ್ಗಿಸಲು ಮೈಸೂರನ್ನು ರಾಜ್ಯದ ಎರಡನೇ ಐಟಿ ನಗರವನ್ನಾಗಿಸಲು ಒತ್ತು ನೀಡಲಾಗಿದೆ. ವಿವಿಧ ಜಿಲ್ಲೆಗೆ ನೀಡಲಾದ ಅನುದಾನ, ಅಭಿವೃದ್ಧಿ ದೃಷ್ಟಿಯಿಂದ ಘೋಷಿಸಲಾದ ಯೋಜನೆಗಳ ಜಿಲ್ಲಾವಾರು ವಿವರ ಇಲ್ಲಿದೆ.

ಯಾವ ಜಿಲ್ಲೆಗೆ ಏನೇನು?



ವಿಜಯಪುರ
- ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸಲು ವಿಸ್ತೃತ ಯೋಜನಾ ವರದಿ
- ವಿಜಯಪುರ ಜಿಲ್ಲೆಯಲ್ಲಿ ತೃತೀಯ ಹಂತದ ಕ್ಯಾನ್ಸರ್ ಆರೈಕೆ ಒದಗಿಸಲು ಕ್ಯಾನ್ಸರ್ ಆಸ್ಪತ್ರೆ, ಜಿಲ್ಲೆಯ ಮುದ್ದೇಬಿಹಾಳ ಗ್ರಾಮಾಂತರ ಠಾಣೆ

ಬೆಳಗಾವಿ
- ಜಿಲ್ಲೆಯ ರಾಯದುರ್ಗ ತಾಲೂಕಿನ ಗೊಣ್ಣಾವರ ಗ್ರಾಮದ ಹತ್ತಿರ ಮಲಪ್ರಭ ನದಿಯಿಂದ ಕೊರೆದ ಭಾಗಕ್ಕೆ ತಡೆಗೋಡೆ ನಿರ್ಮಾಣ.
- ಪರಿಶಿಷ್ಟ ಜಾತಿ ಮತ್ತು ಪಂಗಡದ ಉದ್ಯೋಗಸ್ಥ ಮಹಿಳೆಯರಿಗೆ ವಸತಿನಿಲಯ ಸ್ಥಾಪನೆ
- ಬೆಳಗಾವಿ ಜಿಲ್ಲೆಯ ಯರಗಟ್ಟಿ ಪೊಲೀಸ್ ಠಾಣೆ

ಬೀದರ್
- ಜಿಲ್ಲಾ ಕೇಂದ್ರ ಕಾರಾಗೃಹದಲ್ಲಿ 1,000 ಬಂದಿಗಳ ಸಾಮರ್ಥ್ಯದ ನೂತನ ಕಟ್ಟಡ.
- ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ಜಾನುವಾರುಗಳ ಸಿ.ಟಿ. ಸ್ಕ್ಯಾನಿಂಗ್ ಕೇಂದ್ರ ಸ್ಥಾಪನೆ.

ರಾಯಚೂರು
- ರಾಯಚೂರಿನಲ್ಲಿ 10 ಕೋಟಿ ರೂ. ವೆಚ್ಚದ ಸುಸಜ್ಜಿತ ಟ್ರಾಮಾ ಕೇರ್ ಕೇಂದ್ರ ಲೋಕಾರ್ಪಣೆ.
- ರಾಯಚೂರು ನಗರಸಭೆಯನ್ನು ಮಹಾನಗರ ಪಾಲಿಕೆಯನ್ನಾಗಿ ಮೇಲ್ದರ್ಜೆಗೆ.

ಕಲಬುರಗಿ
- ಗುಲ್ಬರ್ಗಾ ವೈದ್ಯಕೀಯ ಸಂಸ್ಥೆಯಲ್ಲಿ ಐವಿಎಫ್ ಕೇಂದ್ರವನ್ನು ತೆರೆಯಲು ತಲಾ 11 ಕೋಟಿ ರೂ. ಘೋಷಣೆ

ಯಾದಗಿರಿ
- 100 ಕೋಟಿ ರೂ. ವೆಚ್ಚದಲ್ಲಿ ನೂತನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ
- ಯಾದಗಿರಿ ಜಿಲ್ಲೆಯ ಕಕ್ಕೇರಾ ಪೊಲೀಸ್ ಠಾಣೆ,

ಕೊಪ್ಪಳ
- ಅಂಜನಾದ್ರಿ ಬೆಟ್ಟವನ್ನು ವಿಶ್ವ ಪ್ರಸಿದ್ಧ ಪ್ರವಾಸಿ ತಾಣವನ್ನಾಗಿ ಮಾಡಲು 100 ಕೋಟಿ ರೂ. ವೆಚ್ಚದ ಯೋಜನೆ.
- ನವಲಿ ಬಳಿ ತುಂಗಭದ್ರಾ ನೀರಿನ ಕೊರತೆ ನೀಗಿಸಲು ಸಮತೋಲನಾ ಜಲಾಶಯ ನಿರ್ಮಾಣದ ಪ್ರಯತ್ನ.

ಬಾಗಲಕೋಟೆ
- ಮುಧೋಳ ತಾಲೂಕಿನ ಜಂಬಗಿ ಹತ್ತಿರ ಬ್ಯಾರೇಜ್ ಹತ್ತಿರ ರಕ್ಷಣಾ ಗೋಡೆ ನಿರ್ಮಾಣ
- ಆಸ್ಪತ್ರೆಗಳ ಉನ್ನತೀಕರಣಕ್ಕೆ ಬಜೆಟ್ ನಲ್ಲಿ ನಿಧಿ ಹಂಚಿಕೆ

ವಿಜಯನಗರ
- 24 ಕೋಟಿ ವೆಚ್ಚದಲ್ಲಿ ಹೊಸ ತಾರಾಲಯ ಸ್ಥಾಪನೆ

ಧಾರವಾಡ
- ಜಿಲ್ಲೆಯಲ್ಲಿ ಡಿಜಿಟಲ್ ಗ್ರಾಂಥಾಲಯ ಹಾಗೂ ಅಧ್ಯಯನ ಕೇಂದ್ರ ಸ್ಥಾಪನೆಗೆ 10 ಕೋಟಿ ಮೀಸಲು
- ಹಜ್ ಭವನ ನಿರ್ಮಾಣ

ಹಾವೇರಿ
- ಜಿಲ್ಲೆಯ ತಿಳುವಳ್ಳಿ ಪೊಲೀಸ್ ಠಾಣೆ
- ರೇಷ್ಮೆಗೂಡಿನ ಸಾಕಾಣಿಕೆ ವೆಚ್ಚವನ್ನು 10 ರಿಂದ 20 ರೂ.ಗೆ ಹೆಚ್ಚಳ ಮಾಡಲಾಗುವುದು. ನಗರದಲ್ಲಿ ಡಿಸಿಸಿ ಬ್ಯಾಂಕ್ ಸ್ಥಾಪಿಸಲು ಪ್ರಸ್ತಾವನೆ.

ಉತ್ತರ ಕನ್ನಡ
- ಜಿಲ್ಲೆಗೆ 100 ಕೋಟಿ ವೆಚ್ಚದಲ್ಲಿ ಆಸ್ಪತ್ರೆ ನಿರ್ಮಾಣ
- ಜಿಲ್ಲೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ

ದಾವಣಗೆರೆ
- ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆಗಾಗಿ ಹೊನ್ನಾಳಿ ತಾಲ್ಲೂಕಿನಲ್ಲಿ ಬೃಹತ್ ಶೀತಲಗೃಹ ನಿರ್ಮಾಣ.
- ದಕ್ಷಿಣ ಕ್ಷೇತ್ರದಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ 100 ಕೋಟಿ ರೂ. ಮೀಸಲು.

ಗದಗ
- ಗದಗ-ಕಪ್ಪತಗುಡ್ಡ-ಲಕ್ಕುಂಡಿ ಪ್ರದೇಶಗಳನ್ನು ಒಳಗೊಂಡ ಪ್ರವಾಸೋದ್ಯಮ ಸರ್ಕ್ಯೂಟ್ ಅಭಿವೃದ್ಧಿ
- ಪಟ್ಟಣದ ಸಾರಿಗೆ ವ್ಯವಸ್ಥೆ ಸುಧಾರಿಸಲು ನೂತನ ಬಸ್ಸು ನಿಲ್ದಾಣ ನಿರ್ಮಾಣ

ಕೋಲಾರ
- ಜಿಲ್ಲೆಗೆ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ
- ನರಸಾಪುರ ಕೈಗಾರಿಕಾ ವಲಯದಲ್ಲಿ ನೂತನ ಪೊಲೀಸ್ ಠಾಣೆ

ಚಿತ್ರದುರ್ಗ
- ಜಿಲ್ಲೆಯ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಅರಿವು ಮೂಡಿಸಲು ನೂತನ ತಾರಾಲಯ ನಿರ್ಮಾಣ.
- ಮೊಳಕಾಲ್ಮೂರು ತಾಲ್ಲೂಕಿನ ವೆಂಕಟಾಪುರ ಡೈಕ್ ಪಾಥ್ ವೇ ದುರಸ್ತಿ ಕಾರ್ಯ.

ಬಳ್ಳಾರಿ
- ಹಜ್ ಯಾತ್ರಿಕರ ಮತ್ತು ಸಂಬಂಧಿಕರ ಅನುಕೂಲಕ್ಕಾಗಿ ಜಿಲ್ಲೆಯಲ್ಲಿ ಹಜ್ ಭವನ ನಿರ್ಮಾಣ.
- ಶ್ರೀ ನಾನಕ್ ಝೀರಾ ಸಾಹೇಬ್ ಗುರುದ್ವಾರದಲ್ಲಿ ಜ್ಞಾನ ಪ್ರಸಾರಕ್ಕಾಗಿ ಗ್ರಂಥಾಲಯ ಸ್ಥಾಪನೆ.

ಚಿಕ್ಕಬಳ್ಳಾಪುರ
- ಗುಡಿಬಂಡೆ ತಾಲೂಕಿನ ಹಂಪಸಂದ್ರ ಕೆರೆ ಅಭಿವೃದ್ಧಿ
- ಬಾಗೇಪಲ್ಲಿ ತಾಲೂಕಿನ ಮುದ್ದಹಳ್ಳಿ ಕುಂಟೆ ಕೆರೆಯನ್ನು ಮರುನಿರ್ಮಾಣ.

ಹಾಸನ
- ಸಾಲಗಾಮೇಯಲ್ಲಿ ಚೆಕ್ ಡ್ಯಾಂ ನಿರ್ಮಾಣ. ಅರಕಲಗೂಡು ತಾಲೂಕಿನ ಕೆಂಚನಕಟ್ಟೆಯಲ್ಲಿ ಚೆಕ್ ಡ್ಯಾಂ ನಿರ್ಮಾಣ.
- ಮಹಾನಗರ ಪಾಲಿಕೆಗಳಿಗೆ ಮಹಾತ್ಮಾ ಗಾಂಧಿ ನಗರ ವಿಕಾಸ ಯೋಜನೆಗೆ 200 ಕೋಟಿ ರೂ.

ಶಿವಮೊಗ್ಗ
- ವಿಮಾನ ನಿಲ್ದಾಣದಲ್ಲಿ ತರಬೇತಿ ಶಾಲೆ ಆರಂಭ
- ಶಿವಮೊಗ್ಗ-ಶಿಕಾರಪುರ-ರಾಣಿಬೆನ್ನೂರು ರೈಲು ಕಾಮಗಾರಿಗೆ ಅನುದಾನ ಬಿಡುಗಡೆ
- ಆಸ್ಪತ್ರೆ ಉನ್ನತೀಕರಣಕ್ಕೆ ಬಜೆಟ್ ನಲ್ಲಿ ನಿಧಿ ಹಂಚಿಕೆ

ಉಡುಪಿ
- ಸಮಾಜದಲ್ಲಿ ಸೌಹಾರ್ದಯುತ ವಾತಾವರಣ ಕಾಯ್ದುಕೊಳ್ಳಲು ಜಿಲ್ಲೆಯಲ್ಲಿ ವಿಶೇಷ ಕಾರ್ಯಪಡೆ ನಿಯೋಜನೆ.
- ಬ್ರಹ್ಮಾವರ ತಾಲ್ಲೂಕಿನ ಶಿರಿಯಾರದಲ್ಲಿ ಹೊಳೆ ಹೂಳು ತೆರವು ಮತ್ತು ಸಂರಕ್ಷಣೆ ಕಾಮಗಾರಿ.

ದಕ್ಷಿಣ ಕನ್ನಡ
- ಮಂಗಳೂರು ಮೀನುಗಾರಿಕಾ ಮಹಾವಿದ್ಯಾಲಯದಲ್ಲಿ ಸಮುದ್ರ ಕೃಷಿ ಪ್ರೋತ್ಸಾಹಿಸಲು ಸೆಂಟರ್ ಆಫ್ ಎಕ್ಸ್‌ಲೆನ್ಸ್ ಸ್ಥಾಪನೆ.
- ಮಾಣಿ ಮತ್ತು ಸಜಿಪನಡು ಗ್ರಾಮಗಳಲ್ಲಿ ಭದ್ರತೆಗಾಗಿ ನೂತನ ಪೊಲೀಸ್ ಠಾಣೆಗಳ ಸ್ಥಾಪನೆ.

ಮೈಸೂರು
- ತಾಂಡವಪುರದಲ್ಲಿ ಸಿಲ್ಕ್ ಪಾರ್ಕ್, ಲಿಂಗಾಂಬುಧಿ ಸಸ್ಯತೋಟ ಅಭಿವೃದ್ಧಿ, ಜಯದೇವ ಆಸ್ಪತ್ರೆ ಮೇಲ್ದರ್ಜೆಗೆ, ಏರೋಸ್ಪೇಸ್ ಪಾರ್ಕ್ ಅಭಿವೃದ್ಧಿ. ನಗರದ ಲಿಂಗಾಂಬುಧಿ ಸಸ್ಯತೋಟವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುವುದು.
- ಸಿಲ್ಕ್ ಬೋರ್ಡ್: ನಂಜನಗೂಡು ತಾಲೂಕಿನ ತಾಂಡವಪುರದಲ್ಲಿ ಸಿಲ್ಕ್ ಪಾರ್ಕ್ ಸ್ಥಾಪನೆಯನ್ನು ಘೋಷಿಸಲಾಗಿದೆ.
- ಸ್ಥಳೀಯ ಮೇಕೆಗಳ ಉನ್ನತೀಕರಣಕ್ಕಾಗಿ ಮೈಸೂರಿನಲ್ಲಿ ಬಯೋ ಮೇಕೆ ತಳಿ ಸಂವರ್ಧನಾ ಕೇಂದ್ರ ಸ್ಥಾಪನೆ.
- ಪಿರಿಯಾಪಟ್ಟಣದಲ್ಲಿ ಬಂಡೂರು ಕುರಿ ತಳಿ ಸಂವರ್ಧನಾ ಕೇಂದ್ರ ಸ್ಥಾಪನೆ ಸೇರಿದಂತೆ ಸಮಗ್ರ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಲಾಗಿದೆ.
- ಮೈಸೂರಿನಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ಪ್ರೋತ್ಸಾಹ ನೀಡಿದ್ದರಿಂದ 3 ಕಂಪನಿಗಳಲ್ಲಿ 30 ಸಾವಿರಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಗೆ ಆದ್ಯತೆ,

ಚಾಮರಾಜನಗರ
- ಹನೂರು ತಾಲೂಕಿನಲ್ಲಿ 1200 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಯೋಜನೆಗೆ 490 ಕೋಟಿ ಮೀಸಲು

ಚಿಕ್ಕಮಗಳೂರು
- ಜಿಲ್ಲೆಯ ಪ್ರವಾಸಿ ಕೇಂದ್ರಗಳಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಮತ್ಸ್ಯ ದರ್ಶಿನಿಗಳ ಸ್ಥಾಪನೆ.
- ಸಾರಿಗೆ ಇಲಾಖೆಯ ವತಿಯಿಂದ ಜಿಲ್ಲೆಯಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥ ನಿರ್ಮಾಣ.

ಕೊಡಗು
- ಸೋಮವಾರ ಪೇಟೆ ತಾಲೂಕಿನ ಐಗೂರು-ಅರೆಯೂರಿನಲ್ಲಿ ನಾಲೆ ಹಾಗೂ ತಡೆಗೋಡೆ ಅಭಿವೃದ್ಧಿಗೆ ವಿರಾಜಪೇಟೆ ತಾಲೂಕು ಭಾಗದಲ್ಲಿ ತೋಡಿಗೆ ತಡೆಗೋಡೆ ನಿರ್ಮಾಣ.

ಬೆಂ.ದಕ್ಷಿಣ
- ರಾಮನಗರದಲ್ಲಿ ನೂತನ ಜಿಲ್ಲಾ ನ್ಯಾಯಾಲಯ ಸಂಕೀರ್ಣ ನಿರ್ಮಾಣ.
- ರೇಷ್ಮೆ ಉದ್ದಿಮೆಗೆ ಉತ್ತೇಜನ ನೀಡಲು ಅತ್ಯಾಧುನಿಕ ಸಿಲ್ಕ್ ಪಾರ್ಕ್ ಸ್ಥಾಪನೆ.

ತುಮಕೂರು
- ಕ್ರೀಡಾ ಮೂಲಸೌಕರ್ಯಗಳನ್ನು ಮೂರು ಕೋಟಿ ರೂ.ಗಳ ವೆಚ್ಚದಲ್ಲಿ ಉನ್ನತೀಕರಣ.
- ಸಾರಿಗೆ ಇಲಾಖೆಯ ವತಿಯಿಂದ ಐದು ಕೋಟಿ ರೂ. ವೆಚ್ಚದಲ್ಲಿ ಸೀಜಿಂಗ್ ಯಾರ್ಡ್ ನಿರ್ಮಾಣ.

ಬೆಂಗಳೂರು ಗ್ರಾಮಾಂತರ
- ದೊಡ್ಡಬಳ್ಳಾಪುರದಲ್ಲಿ ಪ್ಯಾರಾ ಮೆಡಿಕಲ್ ಕೋರ್ಸ್ ಆರಂಭ
- ರೇಷ್ಮೆ ಅಭಿವೃದ್ಧಿಗೆ ವಿಶೇಷ ಅನುದಾನ ಬಿಡುಗಡೆ

ಮಂಡ್ಯ
- ಶ್ರೀರಂಗಪಟ್ಟಣ ವ್ಯಾಪ್ತಿಯ ಸಿಡಿಎಸ್ ನಾಲೆಗಳ ಅಭಿವೃದ್ಧಿ, ಕಬಿನಿ ಎಡದಂಡೆನಾಲೆ ಅಭಿವೃದ್ಧಿ, ಹೇಮಾವತಿ ನದಿಯಿಂದ ನಾಗಮಂಗಲ, ಚನ್ನರಾಯಪಟ್ಟಣ ತಾಲೂಕುಗಳ ಕೆರೆಗಳಿಗೆ ನೀರು ತುಂಬಿಸುವ ಯೋಜನೆ.

ಬೆಂಗಳೂರು ನಗರ ಜಿಲ್ಲೆ
- ಅಭಿವೃದ್ಧಿ ಜೊತೆಗೆ 1,700 ಕೋಟಿ ರೂ. ಮೊತ್ತದ 158 ಕಿ.ಮೀ. ಉದ್ದದ ವೈಟ್ ಟಾಪಿಂಗ್ ರಸ್ತೆ ಕಾಮಗಾರಿ
- 19,036 ಕೋಟಿ. ರೂ. ಮೊತ್ತದ ಉಪ ಮುಖ್ಯ ರಸ್ತೆಗಳ ಅಭಿವೃದ್ಧಿ
- ಹೊರವರ್ತುಲ ರಸ್ತೆ ಅಭಿವೃದ್ಧಿಗೆ 450 ಕೋಟಿ ರೂ.ಗಳ ಯೋಜನೆ
- 273 ಕೋಟಿ ರೂ. ಅಂದಾಜು ವೆಚ್ಚದಲ್ಲಿ ರಾಜಾಕಾಲುವೆಗಳ ಮೇಲ್ದರ್ಜೆ
- ಜಿಬಿಎ ಹಾಗೂ 5 ಮಹಾನಗರ ಪಾಲಿಕೆಗಳ ಸ್ಥಾಪನೆ
- ಬೆಂಗಳೂರು ಅಭಿವೃದ್ಧಿಗೆ 7,000 ಕೋಟಿ ರೂ. ಹೆಚ್ಚುವರಿ ಅನುದಾನ
- 3 ವರ್ಷಗಳಲ್ಲಿ 3 ಸಾವಿರ ಕೋಟಿ ವೆಚ್ಚದ ವೈಟ್ ಟಾಪಿಂಗ್ ರಸ್ತೆಗಳ ನಿರ್ಮಾಣ
- ವಿದ್ಯಾರ್ಥಿ ನಿಲಯ ಹಾಗೂ ವಾಣಿಜ್ಯ ಸಂಕೀರ್ಣ ನಿರ್ಮಾಣ
- ಮುಂದಿನ 3 ವರ್ಷಗಳಲ್ಲಿ 127 ಜಂಕ್ಷನ್‌ಗಳ ಸೌಂದರ್ಯೀಕರಣ
- 500 ಕಿ.ಮೀ. ಉದ್ದದ ಪಾದಚಾರಿ ಮಾರ್ಗವನ್ನು ಮೇಲ್ದರ್ಜೆಗೆ, 100 ಸ್ಕೈವಾಕ್‌ಗಳ ನಿರ್ಮಾಣ
- ಅಭಿವೃದ್ಧಿ ಕಾಮಗಾರಿಗಳಿಗೆ ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಒತ್ತು
- 6,939 ಕೋಟಿ ರೂ. ವೆಚ್ಚದಲ್ಲಿ ಹೆಚ್ಚುವರಿ 6 ಟಿಎಂಸಿ ನೀರು ಪೂರೈಸಲು ಕಾವೇರಿ 6ನೇ ಹಂತದ ಯೋಜನೆ
- 40 ಕಿ.ಮೀ. ಉದ್ದದ ಸುರಂಗಮಾರ್ಗವನ್ನು 40 ಸಾವಿರ ಕೋಟಿ ರೂ.ಗಳ ಮೊತ್ತದ (ಬೂಟ್) ಮಾದರಿಯಲ್ಲಿ ಕೈಗೊಳ್ಳಲು ಅನುಮೋದನೆ
- ಮೊದಲನೇ ಹಂತದಲ್ಲಿ 17 ಕಿ.ಮೀ. ಉದ್ದದ ಉತ್ತರ-ದಕ್ಷಿಣ ಕಾರಿಡಾರ್ ಯೋಜನೆಯನ್ನು 17,780 ಕೋಟಿ ರೂ. ಮೊತ್ತಕ್ಕೆ ಟೆಂಡರ್ ಕರೆಯಲಾಗುತ್ತದೆ.
- ಬೆಂಗಳೂರಲ್ಲಿ ಅತ್ಯಾಧುನಿಕ ಎಐ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸುವ ಉದ್ದೇಶದಿಂದ ನಾಸ್ಕಾಂ ಸಂಸ್ಥೆ ಸಹಭಾಗಿತ್ವದಲ್ಲಿ ಒಟ್ಟು 16 ಕೋಟಿ ರೂ. ವೆಚ್ಚದಲ್ಲಿ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸಲಾಗುವುದು.

ಗುಲ್ಬರ್ಗ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಾರ್ಯಾಲಯ, ಜೆಸ್ಕಾಂ, ಗುಲಬರ್ಗಾ–585102, ದೂ.08472–256881,

CIN:U04010KA2002SGC030436, E-mail: seeprojectsgescom@gmail.com

ಸಂ.:ಜೆಸ್ಕಾಂ/ಮು.ಅ.ವಿ.(ಕಾ)/ಅಅವಿ(ಯೋ)/ಕಾನಿಅ/ಸಕಾನಿಅ//ಯುಜಿ&ಎಬಿಸಿ/call-2/2025-26/89796-806 ದಿನಾಂಕ:05–03–2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ)

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತದಿಂದ ಕಲಬುರಗಿ ನಗರದಲ್ಲಿ ಇರುವ ಹಾಲಿ ಹೆಚ್.ಟಿ. ವಿದ್ಯುತ್ ವಾಹಕಗಳನ್ನು ಹೆಚ್.ಟಿ. ಯು.ಜಿ. ಕೇಬಲ್‌ಗಳಿಂದ ಬದಲಿಸುವುದು ಹಾಗೂ ಎಲ್.ಟಿ. ವಿದ್ಯುತ್ ವಾಹಕವನ್ನು ಎಲ್.ಟಿ. ಎ.ಬಿ ಕೇಬಲ್‌ನಿಂದ ಬದಲಿಸಿ ಅಳವಡಿಸಲು ಬೇಕಾಗಿರುವ ಎಲ್ಲಾ ವಸ್ತುಗಳ ಪೂರೈಕೆ, ನಿರ್ಮಾಣ, ಪರೀಕ್ಷೆ ಮತ್ತು ಕಾರ್ಯಾರಂಭ ಸೇರಿದಂತೆ ಒಟ್ಟು ಅನುಷ್ಠಾನದ ಕಾರ್ಯಕ್ಕಾಗಿ ವಹಿವಾಟು ಹಾಗೂ ಯೋಜನಾ ಮೇಲ್ವಿಚಾರಣಾ ಸಲಹೆಗಾರರನ್ನು ನೇಮಿಸಲು 02 ವರ್ಷಗಳ ಅವಧಿಗೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸ್ಪರ್ಧಾತ್ಮಕ ಬಿಡ್ಡಿಂಗ್ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಅರ್ಹ ಬಿಡ್‌ದಾರರುಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕ್ರ.ಸಂ.1 ಟೆಂಡರ್ ಸಂಖ್ಯೆ : No.GESCOM/CEE(O)/SEE(Proj)/EEE/AEE/AE-2/2025-26/UG&ABC/KLB/Call-2/BIR/622. ಅಂದಾಜು ಮೊತ್ತ (ಜಿ.ಎಸ್.ಟಿ. ಹೊರತುಪಡಿಸಿ) **(ರೂ.ಲಕ್ಷಗಳಲ್ಲಿ) 32.50,** ಕಂಪನಿ ಹೆಸರು : ಜೆಸ್ಕಾಂ

ಬಿಡ್ಡು ದಾಖಲೆಗಳು ದಿನಾಂಕ : **09.03.2026** ರಂದು ಅಥವಾ ನಂತರ https://kppp.karnataka.gov.in ನಲ್ಲಿ ಲಭ್ಯವಿರುತ್ತದೆ. ಬಿಡ್ಡುದಾರರು ಟೆಂಡರ್‌ಗಳಲ್ಲಿ ಭಾಗವಹಿಸಲು ಹೆಚ್ಚಿನ ವಿವರಗಳಿಗಾಗಿ ನಿಗಮ ಕಛೇರಿ, ಯೋಜನೆಗಳ ಶಾಖೆ, ಜೆಸ್ಕಾಂ, ಕಲಬುರಗಿ ರವರಿಂದ ಪಡೆಯಬಹುದಾಗಿದೆ.

ಸಹಿ/– ಮುಖ್ಯ ಇಂಜಿನೀಯರ್(ವಿ)
(ಕಾರ್ಯಚರಣೆ) ನಿಗಮ ಕಚೇರಿ, ಜೆಸ್ಕಾಂ,
ಕಲಬುರಗಿ

ವಾ.ಸಾ.ಸಂ.ಇ.ಕಲಬುರಗಿ/1142/ದೇಶಪಾಂಡೆ ಪಬ್ಲಿಸಿಟಿ/2025–26

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ ಯಾದಗಿರಿ ಜಿಲ್ಲೆ, ಯಾದಗಿರಿ

(ಜಿಲ್ಲಾ ನಗರಾಭಿವೃದ್ಧಿ ಕೋಶ)

ದೂರವಾಣಿ: 08473 253288 E-mail: ka.yadgiri.dudc@gmail.com
ಫ್ಯಾಕ್ಸ್: 08473 253701 : dudc_yadgiri@yahoo.com

ಕಡತ ಸಂಖ್ಯೆ/ಜಿನಕೋ/ಯೋಜನೆ/CMIDP/2025–26 ದಿನಾಂಕ:05.03.2026

~:ಅಲ್ಪಾವಧಿ ಇ–ಟೆಂಡರ ಪ್ರಕಟಣೆ:~

(ಇ–ಪ್ರೋಕ್ಯುರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಮತ್ತು ಕಾನೂನು–1999 ಹಾಗೂ ನಿಯಮಾವಳಿಗಳು–2000 ರಂತೆ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ನೊಂದಿಯಿಸಿದ (ರೆಜಿಸ್ಟ್ರೇಷನ್) ಏಜೆನ್ಸಿದಾರರಿಂದ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರಕ್ಯೂರ್‌ಮೆಂಟ್‌ನಲ್ಲಿ kppp.karnataka.gov.inರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸತಕ್ಕದ್ದು, ಹೆಚ್ಚಿನ ಮಾಹಿತಿಗಾಗಿ ತಾಂತ್ರಿಕ ಅಧಿಕಾರಿಗಳನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

01) ಟೆಂಡರ್‌ಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕ: 05.03.2026 02) ಪೂರ್ವಭಾವಿ ಸಭೆ ದಿನಾಂಕ : 12.03.2026 Time: 11.00 AM 03) ಸ್ಪಷ್ಟಿಕರಣದ ಬಗ್ಗೆ ಕೊನೆಯ ದಿನಾಂಕ: 16.03.2026 Time : 05.30 PM 04) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: 23.03.2026 Time:05.30 PM 05) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 25.03.2026 Time :11.00 AM 06) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 30.03.2026 Time :11.00 AM

1) ಇಂಡೆಂಟ್ ಸಂಖ್ಯೆ: DMA/2025-26/RD/WORK_INDENT56056 ವಿವರ: Construction of cement concrete road in selected locations in Deewalagudda in Ward No 29, Behind Khadiyana Masjid to Grave Yard Road and from Rangampet Mutton Market to Canal Culvert along with Devikeri Road in Shorapur city. **ಟೆಂಡರ್ ಮೊತ್ತ (ಲಕ್ಷಗಳಲ್ಲಿ):** 165.18 **ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 2,47,000/–

ಷರತ್ತು: ಟೆಂಡರ್ ಡಾಕ್ಯೂಮೆಂಟ್‌ನ ಷರತ್ತುಗಳ ಪ್ರಕಾರ ಟೆಂಡರ್‌ಗಳನ್ನು ಸಲ್ಲಿಸತಕ್ಕದ್ದು.

ಸಹಿ/– ಯೋಜನಾ ನಿರ್ದೇಶಕರು
ಜಿಲ್ಲಾ ನಗರಾಭಿವೃದ್ಧಿ ಕೋಶ ಯಾದಗಿರಿ

ವಾ.ಸಾ.ಸಂ.ಇ/ಯಾದಗಿರಿ/575/ಕೆ.ಎಸ್.ಎಂ.ಸಿ.&ಎ/2025–26

ಕರ್ನಾಟಕ ಸರ್ಕಾರ

ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ, ಉತ್ತರ ಕನ್ನಡ

ದೂರವಾಣಿ: 08384–226381 ಇ–ಮೇಲ್: ee_zpedsirsi@yahoo.co.in

ಕ್ರಸಂ:ಪಂ.ರಾ.ಇಂ/ವಿಶಿ/ಪಿ.ಬಿ–3/ಟೆಂಡರ್–39/CMIDP/2025–26/2988 ದಿನಾಂಕ: 03–03–2026

ಟೆಂಡರ್ ಪ್ರಕಟಣೆ 39/2025–26 (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನವಿಕೃತ ನೊಂದಾಯಿತ 2019–20ನೇ ಸಾಲಿನ ನವಿಕೃತ ನೋಂದಾಯಿಸಿದ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ CMIDP ಯೋಜನೆಯಡಿ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನಂತೆ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ http://www.kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿ ಹೆಸರು: SC Category (1) RDPR/2025-26/BD/WORK_INDENT25094 (2) RDPR/2025-26/RD/WORK_INDENT24962

ST Category (3) RDPR/2025-26/BD/WORK_INDENT25088

CAT II(A) Category (4) RDPR/2025-26/RD/WORK_INDENT24961 (5) RDPR/2025-26/RD/WORK_INDENT24964 (6) RDPR/2025-26/RD/WORK_INDENT24914

Others Category (7) RDPR/2025-26/RD/WORK_INDENT24963 (8) RDPR/2025-26/BD/WORK_INDENT25089 (9) RDPR/2025-26/BD/WORK_INDENT25091 (10) RDPR/2025-26/BD/WORK_INDENT25092 (11) RDPR/2025-26/BD/WORK_INDENT25093 (12) RDPR/2025-26/RD/WORK_INDENT24915

(1) ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 13–03–2026 ರ ಸಂಜೆ 16.00 ಘಂಟೆವರೆಗೆ (2) ಟೆಂಡರನ್ನು ತೆರೆಯುವ ದಿನಾಂಕ: 16–03–2026 ಸಂಜೆ 16.30 ಘಂಟೆಗೆ (ಸಾಧ್ಯವಾದಲ್ಲಿ) ಹೆಚ್ಚಿನ ವಿವರಗಳನ್ನು www.kppp.karnataka.gov.in ವೆಬ್ ಸೈಟಿನಲ್ಲಿ ಅಥವಾ ಈ ಕಚೇರಿಯಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ

DIPR/KWR/KSMCA/1179/25-26 dt.06.03.2026

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಅಧೀನಕ್ಕೆ ಒಳಪಟ್ಟಿದೆ)

ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕೃಭಾಜನಿನಿ, ಐಬಿಸಿ,
ನಿಮಪೋ ವಿಭಾಗ, ರಾಂಪೂರ (ಪ.ಅ). ದೂರವಾಣಿ ಸಂಖ್ಯೆ: 08488–224328,
ಇ–ಮೇಲ್:kbjnleerampur@gmail.com.

ಸಂಖ್ಯೆ:ಕೃಭಾಜನಿನಿ/ಐಬಿಸಿ/ನಿಮಪೋ/ವಿರಾಂ/ಪಿಬಿ–2/2025–26/3371 ದಿನಾಂಕ:05.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಪರವಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ, ರಾಂಪೂರ (ಪ.ಅ) ಇವರು ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಅನುಮೋದನೆಗೊಂಡಿರುವ ಒಟ್ಟು 05 ಸಂಖ್ಯೆ ಹೊರಗುತ್ತಿಗೆ ನೌಕರರ ನಿಯೋಜನೆ ಸೇವೆಗಳಿಗಾಗಿ ರೂ. 10.33 ಲಕ್ಷಗಳ ಮೊತ್ತ ಸೇವೆಗಳಿಗೆ Registration certificate of establishment from Govt of Karnataka & Department of Labour as per section 12(1) of Contract Labour Act ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಶೇಕಡಾವಾರು ದರದ ಟೆಂಡರನ್ನು ದ್ವಿ–ಲಕೋಟೆ ಪದ್ಧತಿಯ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ ಮೂಲಕ ವೆಬ್‌ಸೈಟ್ https://kppp.karnataka.gov.in ಮಾಹಿತಿ ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಬಹುದು.

* ಕೆ.ಪಿ.ಪಿ.ಪಿ.ಪೋರ್ಟಲ್ https://kppp.karnataka.gov.in ವೆಬ್‌ಸೈಟ್ ನಿಂದ ಖಾಲಿ ಟೆಂಡರ್ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು ಮತ್ತು ಭರ್ತಿ ಮಾಡಿದ ಬಿಡ್ ದಾಖಲೆಗಳನ್ನು ಸಲ್ಲಿಸುವ **ದಿನಾಂಕ: 07.03.2026 ರಿಂದ 16.03.2026** ರ ಸಾಯಂಕಾಲ 5.30 ಗಂಟೆಯವರೆಗೆ ಸಲ್ಲಿಸುವುದು.
* ಗುತ್ತಿಗೆದಾರರು **ದಿನಾಂಕ: 07.03.2026 ರಿಂದ 16.03.2026** ಸಾಯಂಕಾಲ 5.30 ಗಂಟೆಯವರೆಗೆ ಇ–ಟೆಂಡರ ಪುಸ್ತಕವನ್ನು Access ಮಾಡಬಹುದು.
* ಭರ್ತಿಗೊಳಿಸಿದ ಇ–ಟೆಂಡರ ಪುಸ್ತಕವನ್ನು **ದಿನಾಂಕ: 07.03.2026 ರಿಂದ 16.03.2026** ರ ಸಾಯಂಕಾಲ 5.30 ಗಂಟೆಯವರೆಗೆ ಸಲ್ಲಿಸುವದು.
* ದ್ವಿ–ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ನಿಮಪೋ ವಿಭಾಗ ರಾಂಪೂರ (ಪಿಎ) ತಾ: ಸಿಂದಗಿ ಜಿಲ್ಲೆ: ವಿಜಯಪೂರ ಕಛೇರಿಯಲ್ಲಿ ದಿನಾಂಕ: **18.03.2026** ರ ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವದು.
* ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ ರಾಂಪೂರ (ಪ.ಅ) ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ https://kppp.karnataka.gov.in ವೆಬ್‌ಸೈಟ್ ನಿಂದ ಪಡೆಯಬಹುದು.
* ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸುವುದು.
* ಯಾವುದೇ ಕಾರಣ ನೀಡದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳು ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ನಿಮಪೋ ಐಬಿಸಿ ವಿಭಾಗ, ರಾಂಪೂರ (ಪ.ಅ)

ವಾಸಾಸಂಇ/ವಿಜಯಪುರ/779/ಕೆಎಸ್‌ಎಂಸಿಎ/2025–26

ಕ್ರಿಮಿ. ನಂ. **01/2026**

ಮಾನ್ಯ 1ನೇ ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರ : **ಶ್ರೀ ಶಿವಕುಮಾರ ತಂದೆ ಶಂಕರ**

ವಿರುದ್ಧ

ಎದುರುದಾರರು : ಮಾನ್ಯ ಸಹಾಯಕ ಆಯುಕ್ತರು ಜನನ ವ ಮರಣ ನೋಂದಣಾಧಿಕಾರಿಗಳು, ಹು.ಧಾ.ಮ. ಪಾಲಿಕೆ ಹುಬ್ಬಳ್ಳಿ

ನೋಟೀಸು

ಈ ಮೇಲೆ ನಮೂದಿಸಿದ ಪ್ರಕರಣದಲ್ಲಿ ಅರ್ಜಿದಾರನು ತನ್ನ ತಾಯಿಯಾದ **ಶ್ರೀಮತಿ ಮುತ್ತಾಲಕ್ಷ್ಮೀ ಕೋಂ. ಶಂಕರ** ಇವರು ದಿ: **10–04–2024** ರಂದು ತಮ್ಮ ಮನೆಯಾದ **ಮನೆ ನಂ.27/ಬಿ. ಶಂಕರ ಚಾಳ, ಗುಡ್ಡಳೆಡ್ಡ ರಸ್ತೆ, ಹುಬ್ಬಳ್ಳಿಯಲ್ಲಿ** ಮೃತ ಪಟ್ಟಿರುತ್ತಾರೆ ಅಂತಾ ಕೋರಿ ಅರ್ಜಿಸಲ್ಲಿಸಿದ್ದು, ಆ ಪ್ರಕಾರ ಮರಣ ಪ್ರಮಾಣ ಪತ್ರ ಪಡೆಯಲು ಮಾನ್ಯ ನ್ಯಾಯಾಲಯಕ್ಕೆ ಮೇಲ್ಕಾಣಿಸಿದ ಅರ್ಜಿಯನ್ನು ಸಲ್ಲಿಸಿದ್ದು, ಸದರ ಅರ್ಜಿಯ ಚೌಕಶಿಯು ತಾ: **02–04–2026** ರಂದು ಬೆಳಿಗ್ಗೆ **11:00** ಗಂಟೆಗೆ ನ್ಯಾಯಾಲಯದಲ್ಲಿ ಮುದ್ದತ್ತು ನೇಮಿಸಿದ್ದು ಇರುತ್ತದೆ.

ಈ ಕುರಿತು ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತಸಂಬಂಧ ತಂಟೆ ವ ತಕರಾರು ವಗೈರೆ ಇದ್ದಲ್ಲಿ ಅಂತವರು ಮೇಲ್ಕಂಡ ದಿನಾಂಕದಂದು ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಪ್ರಕರಣವನ್ನು ತಮ್ಮ ಗೈರು ಹಾಜರಿಯಲ್ಲಿ ನಿರ್ಣಯಿಸಲಾಗುವುದು.

ನನ್ನ ಸಹಿಯೊಂದಿಗೆ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ : **18–03–2026** ರಂದು ಇದನ್ನು ಕೊಡಲಾಗಿದೆ.

ಹುಬ್ಬಳ್ಳಿ (ಕೋರ್ಟ ಮೊಹರು) ಕೋರ್ಟಿನ ಆಜ್ಞೆಯ ಮೇರೆಗೆ
ದಿ: 18–02–2026 ಸಹಿ/–ಶಿರಸ್ತೇದಾರರು
ಬಿ.ಕೆ.ಪಾಟೀಲ ಮಾನ್ಯ 1ನೇ ಜೆ.ಎಮ್.ಎಫ್.ಸಿ
ಅರ್ಜಿದಾರ ಪರ ವಕೀಲರು, ಹುಬ್ಬಳ್ಳಿ ನ್ಯಾಯಾಲಯ, ಹುಬ್ಬಳ್ಳಿ

ಕ್ರಿಮಿನಲ ಮಿಸಲೇನಿಯಸ್ ನಂ: 73/2026

ಮಾನ್ಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನವಲಗುಂದ ಇವರ ನ್ಯಾಯಾಲಯದಲ್ಲಿ ನವಲಗುಂದ

ಅರ್ಜಿದಾರ : ಶ್ರೀಮತಿ ಶಾಂತಾ ಕೋಂ. ಭರಮಪ್ಪ ದಿವಟಿರ

ವಿರುದ್ಧ

ಎದುರುದಾರರು : ಮೆ॥ ತಹಶೀಲ್ದಾರ, ಜನನ – ಮರಣ ನೋಂದಣಾಧಿಕಾರಿಗಳು, ನವಲಗುಂದ,

ಪತ್ರಿಕಾ ಪ್ರಕಟಣೆ

ಪ್ರಸ್ತುತ ಈ ಪ್ರಕರಣವನ್ನು ಅರ್ಜಿದಾರಳು ಮೆ: ನ್ಯಾಯಾಲಯಕ್ಕೆ ತನ್ನ ತಾಯಿಯಾದ ಶ್ರೀಮತಿ ಹನಮವ್ವ ಕೋಂ. ಗಂಗನಗೌಡ ಏಗನಗೌಡ್ರ ಇವರು ದಿ. 16–07–2013 ರಂದು ಅಳಗವಾಡಿ ಗ್ರಾಮದಲ್ಲಿ ಫೋತಿಯಾಗಿದ್ದು, ಸದರಿಯವರ ಮರಣ ಮಾಹಿತಿಯನ್ನು ಎದುರುಗಾರರಲ್ಲಿ ದಾಖಲಿಸಲು ಮೆ. ನ್ಯಾಯಾಲಯಕ್ಕೆ ಸಲ್ಲಿಸಿದ್ದು ಇರುತ್ತದೆ.

ಸದರ ಅರ್ಜಿಯ ವಿಚಾರಣೆಗೆ ಅಂತಾ ಮಾನ್ಯ ನ್ಯಾಯಾಲಯದವರು ದಿನಾಂಕ: 10/04/2026 ರಂದು ಬೆಳಿಗ್ಗೆ 10–30 ಗಂಟೆಗೆ ನಿಗದಿಯಾಗಿದ್ದು ಕಾರಣ ಅರ್ಜಿಗೆ ಸಂಬಂಧಪಟ್ಟ ಯಾರಾದರೂ ತಕರಾರು ವಗೈರೆ ಇದ್ದಲ್ಲಿ ಮೇಲ್ಕಾಣಿಸಿದ ದಿನಾಂಕ ಮತ್ತು ಸಮಯದಂದು ತಾವಾಗಲಿ ಅಥವಾ ತಮ್ಮ ವಕೀಲರ ಮುಖಾಂತರವಾಗಲಿ ಹಾಜರಾಗಿ ತಕರಾರುಗಳನ್ನು ಸಲ್ಲಿಸತಕ್ಕದ್ದು, ಒಂದು ವೇಳೆ ಯಾವುದೇ ತಕರಾರು ಬರದೇ ಇದ್ದಲ್ಲಿ ಪ್ರಕರಣವನ್ನು ಏಕತರ್ಫಿ ಆದೇಶ ಮಾಡಲಾಗುವುದು ಅಂತಾ ಕೊಟ್ಟ ಜಾಹೀರ ನೋಟೀಸು.

ಈ ಹೊತ್ತು ಕೋರ್ಟಿನ ಮೊಹರಿನೊಂದಿಗೆ ಹಾಗೂ ಆದೇಶದೊಂದಿಗೆ ಕೊಡಲ್ಪಟ್ಟಿರುತ್ತದೆ.

ಮಾನ್ಯ ಕೋರ್ಟ ಆಜ್ಞೆ ಮೇರೆಗೆ
ಶಿರಸ್ತೇದಾರರು
ಮೆ: ಜೆ.ಎಮ್.ಎಫ್.ಸಿ. ನ್ಯಾಯಾಲಯ ನವಲಗುಂದ
ನವಲಗುಂದ
ದಿನಾಂಕ : 05–03–2026
ಶ್ರೀ ಸಿ.ಸಿ ಅಕ್ಕಿ, ವಕೀಲರು, ನವಲಗುಂದ

CHANGE OF NAME

I, **GANGARAM HANUMANTAPPA LAMANI** (old name) Resident of 415, Anand Nagar Road, Mayur Nagar, Hubli - 580024, have changed my name as **GANGARAM LAMANI** (new name) henceforth I will be called and recognized by new name for all future purposes, dated: 06/03/2026.

CHANGE OF NAME

I, **MAHABOOB NOOR MAHAMMAD PIRAJADE** (old name) Resident of Laxmi Nagar, Banahatti - 587311, have changed my name as **MAHABOOB PIRAJADE** (new name) henceforth I will be called and recognized by new name for all future purposes, dated: 06/03/2026.

ಕರ್ನಾಟಕ ಸರಕಾರ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ಕೊಪ್ಪಳ

ಸಂಖ್ಯೆ: ಉಗ್ರಾಣ/24/2025–26/8326 ದಿನಾಂಕ : 06–03–2026

ಪ್ರಕಟಣೆ

2025–26 ಸಾಲಿನಲ್ಲಿ ಶುಚಿ ಕಾರ್ಯಕ್ರಮದಡಿ ಸ್ಯಾನಿಟರಿ ನ್ಯಾಪ್ಕಿನ್ ಪ್ಯಾಡ್ ಗಳನ್ನು ಖರೀದಿ ಮಾಡಲು ಇ–ಪ್ರಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಮರು–ಟೆಂಡರ್ ಕರೆಯಲಾಗಿದೆ. ಮರು ಟೆಂಡರ್ ದಾಖಲೆಗಳನ್ನು e-Portal **(https://kppp.karnataka.gov.in/)** ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

Sl. No	Indent No	Name Of the Equipment	Amount (in Lakhs)
1	DHFWS/2025-26/IND2079/CALL-2	2025–26 ಸಾಲಿನಲ್ಲಿ ಶುಚಿ ಕಾರ್ಯಕ್ರಮದಡಿ ಸ್ಯಾನಿಟರಿ ನ್ಯಾಪ್ಕಿನ್ ಪ್ಯಾಡ್‌ಗಳನ್ನು ಖರೀದಿ.	35.45

(1) ಟೆಂಡರ್ ಪ್ರಕಟಣೆ **ದಿನಾಂಕ: 06–03–2026.** (2) ಟೆಂಡರ್ ದಾಖಲೆಯನ್ನು ಡೌನಲೋಡ್ ಮಾಡಲು ಪ್ರಾರಂಭ **ದಿನಾಂಕ: 06–03–2026.** (3) ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ **ದಿನಾಂಕ : 07–03–2026ರಂದು ಸಾಯಂಕಾಲ 5.00 ಗಂಟೆಯೊಳಗೆ.** (4) ಟೆಂಡರ್ ಅಪಲೋಡ್ ಮಾಡಲು ಕೊನೆಯ ದಿನಾಂಕ : **13–03–2026 ರಂದು ಸಾಯಂಕಾಲ 5.30 ಗಂಟೆಯೊಳಗೆ.** (5) ಸ್ಯಾನಿಟರಿ ನ್ಯಾಪ್ಕಿನ್ ಪ್ಯಾಡ್ ಗಳ ಮಾದರಿ (Sample)ಗಳನ್ನು **ದಿನಾಂಕ: 16–03–2026ರಂದು ಸಾಯಂಕಾಲ 4.00 ಗಂಟೆಯೊಳಗೆ** ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ಕೊಪ್ಪಳ ಇಲ್ಲಿಗೆ ಸದರಿ ಟೆಂಡರ್‌ನಲ್ಲಿ ಭಾಗವಹಿಸುವ ಟೆಂಡರ್‌ದಾರರು ಕಡ್ಡಾಯವಾಗಿ ಮಾದರಿ (Sample)ಗಳನ್ನು ಸಲ್ಲಿಸಬೇಕು. (6) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ : 17–03–2026 ಸಾಯಂಕಾಲ 5.00 ಗಂಟೆಯೊಳಗೆ.**

ಹೆಚ್ಚಿನ ವಿವರಗಳನ್ನು **https://kppp.karnataka.gov.in ವೆಬ್‌ಸೈಟ್‌ನಲ್ಲಿ ಮೇಲಿನ ಟೆಂಡರ್ ನಂಬರಗಳ ಪ್ರಕಾರ ಪಡೆಯಬಹುದಾಗಿದೆ.**

ಸಹಿ/–ಜಿಲ್ಲಾ ಆರೋಗ್ಯ ಮತ್ತು ಕುಟುಂಬ
ಕಲ್ಯಾಣ ಅಧಿಕಾರಿಗಳು ಕೊಪ್ಪಳ

ವಾ.ಸಾ.ಇ/ಕೊಪ್ಪಳ/733/ದೇಶಪಾಂಡೆಪಬ್ಲಿಸಿಟಿ/2025–26

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

ಕಾರ್ಯನಿವಾಹಕ ಇಂಜನೀಯರವರ ಕಛೇರಿ, ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ–580001.
ದೂರವಾಣಿ : 0836– 2747944(ಕ) E-mail: eepwddha@gmail.com

ಕ್ರಸಂ/ಕಾನಿಇಂಧಾ/ಗುತ್ತಿಗೆ/ಪಿ.ಬಿ.1,2,3,4,5/2025–26/6925 ದಿನಾಂಕ: 05–03–2026

ಟೆಂಡರ ತಿದ್ದುಪಡಿ ಪ್ರಕಟಣೆ

ವಿಷಯ: ಟೆಂಡರ್ ತಿದ್ದುಪಡಿ ಪ್ರಕಟಣೆ ಕುರಿತು.

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: ಕಾನಿಇಂಧಾ/ಗುತ್ತಿಗೆ/ಪಿ.ಬಿ.1,2,3,4,5/2025–26/6752/6753 ದಿನಾಂಕ: 25/02/2026.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಟೆಂಡರ ಪ್ರಕಟಣೆಯಲ್ಲಿ ಪ್ರಕಟಿಸಲಾದ ಕಾಮಗಾರಿಗಳಲ್ಲಿ ಕೆಲವೊಂದು ಕಾಮಗಾರಿಗಳ ದಿನಾಂಕಗಳಲ್ಲಿ ತಿದ್ದುಪಡಿ ಮಾಡಲಾಗಿದೆ. ಕಾಮಗಾರಿಗಳ ವಿವರ ಈ ಕೆಳಗಿನಂತಿದೆ

GENERAL:- **1)** PWD/2025-26/RD/WORK_INDENT32604 **2)** PWD/2025-26/RD/WORK_INDENT31526 **3)** PWD/20226/RD/WORK_INDENT31535 (Extension) **4)** PWD/2025-26/RD/WORK_INDENT31550 (Extension) **5)** PWD/2025-26/RD/WORK_INDENT31544/CALL-2 **6)** PWD/2025-26/RD/WORK_INDENT31489 (Extension) **7)** PWD/2025-26/RD/WORK_INDENT31546 (Extension)

CAT-IIA:- **8)** PWD/2025-26/RD/WORK_INDENT33867

ಈ ಮೇಲ್ಕಂಡ ಕಾಮಗಾರಿಗಳ ದಿನಾಂಕಗಳನ್ನು, ಈ ಕೆಳಗಿನಂತೆ ತಿದ್ದಪಡಿ ಮಾಡಲಾಗಿದೆ.

As per Notification dates	Now to be Read as
1) ಪ್ರೀಬಿಡ್/ಆಕ್ಷೇಪಣೆಯನ್ನು ಸಲ್ಲಿಸುವ ಕೊನೆಯ ದಿನಾಂಕ: **23.03.2026 (ಬೆಳಿಗ್ಗೆ 12:30 ಗಂಟೆಯವರೆಗೆ)**	1) ಪ್ರೀಬಿಡ್/ಆಕ್ಷೇಪಣೆಯನ್ನು ಸಲ್ಲಿಸುವ ಕೊನೆಯ ದಿನಾಂಕ: 13.03.2026 (ಬೆಳಿಗ್ಗೆ 12:30 ಗಂಟೆಯವರೆಗೆ)
2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **24.03.2026 (ಸಾಯಂಕಾಲ 04:00 ಗಂಟೆಯವರೆಗೆ)**	2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 16.03.2026 (ಸಾಯಂಕಾಲ 04:00 ಗಂಟೆಯವರೆಗೆ)
3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 25.03.2026** (ಸಾಯಂಕಾಲ 04:30 ಗಂಟೆಯ ನಂತರ)	3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17.03.2026 (ಸಾಯಂಕಾಲ 04:30 ಗಂಟೆಯ ನಂತರ)
4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 26.03.2026 (ಸಾಯಂಕಾಲ 04:30 ಗಂಟೆಯ ನಂತರ)	4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 18.03.2026 (ಸಾಯಂಕಾಲ 04:30 ಗಂಟೆಯ ನಂತರ)

ಸಹಿ/–
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.

ವಾ.ಸಾ.ಇ./ಧಾರವಾಡ/1317/2025–26/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್–3/ಕೆಕೆಆರ್‌ಡಿಬಿ/2025–26/6386 ದಿನಾಂಕ : 02–03–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಸರಕು ಮತ್ತು ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಸರಬುರಾಜುದಾರರು/ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ **https:kppp.karnataka.gov.in**ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ. ಸದರಿ ಸರಕು/ಕಾಮಗಾರಿಗಳ ವಿವರ ಈ ಕೆಳಗೆನಂತಿವೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
i)	Ballari City Assembly Constituency	
1)	2025-26 PWD/2025-26/IND0116	50.00
3)	PWD/2025-26/IND0226	50.00
2)	PWD/2025-26/IND0227	50.00
4)	PWD/2025-26/IND0228	50.00
5)	PWD/2025-26/IND0229	50.00
6)	PWD/2025-26/IND0230	50.00
7)	PWD/2025-26/RD/WORK_INDENT33328 (Reserved for SC Category)	75.00
8)	PWD/2025-26/RD/WORK_INDENT34010 (General Category)	50.00
9)	PWD/2025-26/RD/WORK_INDENT33334 (General Category)	80.63
10)	PWD/2025-26/RD/WORK_INDENT33331 (General Category)	81.93
11)	PWD/2025-26/RD/WORK_INDENT34319 (General Category)	50.24
12)	PWD/2025-26/BD/WORK_INDENT34318 (Reserved for Cat-2A Category)	81.43
13)	PWD/2025-26/RD/WORK_INDENT33997 (Reserved for SC Category)	50.00
ii)	Ballari Rural Assembly Constituency	
1)	PWD/2025-26/IND0231	49.20
iii)	Kampli Assembly Constituency	
1)	PWD/2025-26/RD/WORK_INDENT34190	300.00
2)	PWD/2025-26/RD/WORK_INDENT34184	150.00
3)	PWD/2025-26/RD/WORK_INDENT33836	300.00

ಸೂಚನೆ: ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ, ಮರು ಟೆಂಡರ್ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಕಾಮಗಾರಿಗಳಿಗೆ ನಿಗಧಿಪಡಿಸಿದ ಪ್ರಿ–ಬಿಡ್ ಸಭೆ ದಿನಾಂಕ ಮತ್ತು ಸಮಯ : **09–03–2026 ರಂದು 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರ್, ಲೋಕೊಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ.** ಆ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **13–03–2026 ರಂದು 12.00 ಗಂಟೆಯ ವರೆಗೆ.** ಇ)ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **16–03–2026 ರಂದು 16.00 ಗಂಟೆಯ ವರೆಗೆ.** ಈ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.: **17–03–2026 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/–ಕಾರ್ಯನಿರ್ವಾಹಕ ಇಂಜನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ಡಿಐಪಿಆರ್/ಬಳ್ಳಾರಿ/1092/ಕೆಎಸ್‌ಎಂಸಿಎ/2025–26

ಪುರಸಭೆ ಕಾರ್ಯಾಲಯ, ಸಂಕೇಶ್ವರ.

ನಂ. ಪುಸಸಂ/ಕಂವಿ/2025–26/ ದಿನಾಂಕ: 05/03/2026

ಜಾಹೀರ ಲೀಲಾವ ಪ್ರಕಟಣೆ

ಸಂಕೇಶ್ವರ ಪಟ್ಟಣದ ಯಾವತ್ತೂ ಸಾರ್ವಜನಿಕರಿಗೆ ಈ ಪ್ರಕಟಣೆ ಮೂಲಕ ತಿಳಿಯಪಡಿಸುವುದೇನೆಂದರೆ, ಸಂಕೇಶ್ವರ ಪುರಸಭೆ ವ್ಯಾಪ್ತಿಯ (ಎ.ಪಿ.ಎಮ್.ಸಿ ಪ್ರದೇಶ ಹೊರತುಪಡಿಸಿ) ಸಂಕೇಶ್ವರ ಪುರಸಭೆ ವತಿಯಿಂದ ಈ ಕೆಳಗೆ ಕಾಣಿಸಿದ ಸಂತೆ ಕರ ಜಾಹೀರ ಲೀಲಾವನ್ನು ಸೋಮವಾರ ದಿನಾಂಕ: 23/03/2026 ರಂದು ಈ ಕೆಳಗೆ ಕಾಣಿಸಿದ ವೇಳೆ ಪ್ರಕಾರ ಸಂತೆ ಕರ ಲೀಲಾವನ್ನು ಪುರಸಭೆ ಕಾರ್ಯಾಲಯದ ಆವರಣದಲ್ಲಿ ಬಹಿರಂಗ ಜಾಹೀರ ಲಿಲಾವ ಮೂಲಕ ಹರಾಜು ಮಾಡಿ ನೀಡಲಾಗುವುದು. ಸದರಿ ಲೀಲಾವಿನಲ್ಲಿ ಭಾಗವಹಿಸಲಿಚ್ಛಿಸುವವರು ವೇಳೆಗೆ ಸರಿಯಾಗಿ ಹಾಜರಿದ್ದು ಲಿಲಾವಿನಲ್ಲಿ ಭಾಗವಹಿಸತಕ್ಕದ್ದು ಲಿಲಾವಿನ ವೇಳೆಯ 1 ಗಂಟೆಯ ಮೊದಲೇ ಠೇವಣಿ ಹಣವನ್ನು ಪುರಸಭೆಗೆ ಭರಣಾ ಮಾಡಿ ಲಿಲಾವಿನಲ್ಲಿ ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. ಪ್ರತಿದಿನದ ಹಾಗೂ ವಾರದ ಸಂತೆಯ ಕರ ವಸೂಲಿ ಹಕ್ಕನ್ನು ಮಾತ್ರ ಪುರಸಭೆಯ ಹದ್ದಿಯಲ್ಲಿಯ ಆಸ್ತಿ ಇದ್ದವರು ಮಾತ್ರ ಬೇಡಲು ಅರ್ಹರಿರುತ್ತಾರೆ. ಇನ್ನೂಳಿದ ಹರಾಜಿನ ಷರತ್ತುಗಳು ಹರಾಜಿನ ಕಾಲಕ್ಕೆ ಓದಿ ಹೇಳಲಾಗುವುದು.

ಲೀಲಾವಿನ ವಿವರ : ಸನ್ 2026–27 ನೇ ಸಾಲಿನ ಪ್ರತಿ ದಿನದ ಹಾಗೂ ವಾರದ ಸಂತೆಯ ಕರ ವಸೂಲಿ ಹಕ್ಕು (12 ತಿಂಗಳ ಅವಧಿ ಮಾತ್ರ) ಠೇವಣಿ ಹಣ–5,00,000–00 ಲೀಲಾವಿನ ವೇಳೆ : ಮುಂಜಾನೆ 11.00 ಗಂಟೆಗೆ ಮಾತ್ರ) ಹರಾಜನ್ನು ಮಂಜೂರ ಅಥವಾ ನಾ–ಮಂಜೂರ ಮಾಡುವ ಹಕ್ಕನ್ನು ಪುರಸಭೆಗೆ ಕಾಯ್ದಿರಿಸಿಕೊಂಡಿದೆ.

ಸಹಿ/–
ಶ್ರೀ ಪ್ರಕಾಶ ಬ. ಮಠದ
ಕೆ.ಎಂ.ಎ.ಎಸ್. ಗ್ರೇಡ್–1
ಮುಖ್ಯಾಧಿಕಾರಿ
ಪುರಸಭೆ ಸಂಕೇಶ್ವರ.

ಸಹಿ/–ಶ್ರೀ ಶ್ರವಣ ನಾಯ್ಕ ಕ.ಆ.ಸೇ.
ಉಪವಿಭಾಗಾಧಿಕಾರಿ,
ಬೆಳಗಾವಿ ಉಪವಿಭಾಗ, ಬೆಳಗಾವಿ ಹಾಗೂ
ಆಡಳಿತಾಧಿಕಾರಿ, ಪುರಸಭೆ ಸಂಕೇಶ್ವರ.

DIPR/BGM/RO-NO-2010/KSMCA/2025-26

ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ

ಅಗ್ರಹಾರ ಟ್ಯಾಂಕ್ ಬಂಡ ರಸ್ತೆ, ಬಿನ್ನಿಪೇಟೆ, ಬೆಂಗಳೂರು–560023
ಜಿಲ್ಲೆ : ಬೆಂಗಳೂರು, ರಾಜ್ಯ : ಕರ್ನಾಟಕ

ಕ್ರ.ಸಂ: ಹಹೂಮತ(ವಿ)ಕೃಉಮಾಸ(ಬೆಂ)/3456/2025–26 ದಿನಾಂಕ: 04.03.2026

ಪ್ರಕಟಣೆ

ಸಮಿತಿಯ ಬಿನ್ನಿಪೇಟೆ ಬಾಳೆಕಾಯಿ ಮಾರುಕಟ್ಟೆ ಪ್ರಾಂಗಣ, ಭಾನುವಾರದ ಸಂತೆ ಕಟ್ಟಡ ಮತ್ತು ಹೂವಿನ ಮಾರುಕಟ್ಟೆ ಪ್ರಾಂಗಣಗಳಲ್ಲಿ ಖಾಲಿ ಇರುವ ಮಳಿಗೆಗಳನ್ನು ಜೇಷ್ಠತೆ ಮತ್ತು ಅರ್ಹತೆ (Seniority-cum-merit) ಮೇರೆಗೆ ಮಾಸಿಕ ಲೀವ್–ಅಂಡ್–ಲೈಸನ್ಸ್ ಆಧಾರದ ಮೇಲೆ ಗರಿಷ್ಠ 55 ತಿಂಗಳ ಅವಧಿಗೆ, 11 ತಿಂಗಳಿಗೊಮ್ಮೆ ನವೀಕರಿಸುವ, 33 ತಿಂಗಳಿಗೊಮ್ಮೆ ಪ್ರತಿಶತ 5 ರಷ್ಟು ಲೀವ್–ಅಂಡ್–ಲೈಸನ್ಸ್ ದರಗಳನ್ನು ಹೆಚ್ಚಿಸುವ ಷರತ್ತಿಗೊಳ್ಳಪಟ್ಟು ಆಸ್ತಿ ಹಂಚಿಕೆ ನಿಯಮಾವಳಿಗಳು 2004ರ ನಿಯಮ 13ರ ಪ್ರಕಾರ ಹಂಚಿಕೆ ಮಾಡಲು ಉದ್ದೇಶಿಸಿದ್ದು, ಈ ಸಮಿತಿಯಿಂದ ಲೈಸನ್ಸ್ ಪಡೆದು ಬಾಳೆಕಾಯಿ ಹಾಗೂ ಹೂವಿನ ವ್ಯಾಪಾರ ವಹಿವಾಟು ನಡೆಸುತ್ತಿರುವ ಪೇಟೆಕಾರ್ಯಕರ್ತರಿಂದ ನಿಗಧಿಪಡಿಸಿರುವ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮಳಿಗೆಗಳ ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ	ಮಳಿಗೆಗಳ ವಿವರ	ವಿಸ್ತೀರ್ಣ ಚ.ಅಡಿ ಗಳಲ್ಲಿ	ಸ.ಕಾ.ನಿ.ಆ., ಮಾಆಯೋ., ಇವರು ನಿಗಧಿಪಡಿಸಿರುವ ಲೀವ್ ಅಂಡ್ ಲೈಸನ್ಸ್ ಶುಲ್ಕ (ರೂ.ಗಳಲ್ಲಿ)	ಪಾವತಿಸಬೇಕಾದ ಪ್ರಾರಂಭಿಕ ಮುಂಗಡ 2 ತಿಂಗಳ ಠೇವಣಿ (ರೂ.ಗಳಲ್ಲಿ)
1	2	3	4	5
ಬಾಳೆಕಾಯಿ ಮಾರುಕಟ್ಟೆ ಪ್ರಾಂಗಣ (ಕರೆ–1)				
ಸಾಮಾನ್ಯ ವರ್ಗ 1 ಸಂಖ್ಯೆ				
1	ಮಳಿಗೆ ಸಂಖ್ಯೆ 14	503.76	9,749	19,498
ಭಾ. ಸಂತ ಕಟ್ಟಡದಲ್ಲಿರುವ ಮಳಿಗೆಗಳು (ಕರೆ–2)				
ಸಾಮಾನ್ಯ ವರ್ಗ 1 ಸಂಖ್ಯೆ				
2	ಮಳಿಗೆ ಸಂಖ್ಯೆ 03	160.16	4,534	9,069
3	ಮಳಿಗೆ ಸಂಖ್ಯೆ 05	100.32	2,840	5.680
ಪರಿಶಿಷ್ಟ ಜಾತಿ				
4	ಮಳಿಗೆ ಸಂಖ್ಯೆ 17	198.00	5.606	11,212
ಪರಿಶಿಷ್ಟ ಪಂಗಡ				
5	ಮಳಿಗೆ ಸಂಖ್ಯೆ 20	121.00	3,426	6,852
ಎಫ್.ಪಿ.ಓ				
6	ಮಳಿಗೆ ಸಂಖ್ಯೆ 07	97.68	2.765	5,530
ಹೂವಿನ ಮಾರುಕಟ್ಟೆ ಪ್ರಾಂಗಣದಲ್ಲಿರುವ ಮಳಿಗೆ ಸಂಖ್ಯೆ 15 ಮತ್ತು 27 ಅನ್ನು ಪರಿಶಿಷ್ಟ ಪಂಗಡಕ್ಕೆ ಹಾಗೂ ಮಳಿಗೆ ಸಂಖ್ಯೆ 20, 23 ಮತ್ತು 28 ಅನ್ನು ಎಫ್.ಪಿ.ಓ ಗಳಿಗೆ ಮೀಸಲಿಟ್ಟು ಮಳಿಗೆಗಳನ್ನು ಹಂಚಿಕೆ ಮಾಡುವ ಸಂಬಂಧ 02 ಬಾರಿ ಪ್ರಕಟಣೆ ಹೊರಡಿಸಿದ್ದು, ಯಾರು ಭಾಗವಹಿಸದ ಕಾರಣ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಆಸ್ತಿ ಹಂಚಿಕೆ ನಿಯಂತ್ರಣ) ನಿಯಮಾವಳಿ 2004ರ ನಿಯಮ 17ರ ತಿದ್ದುಪಡಿ ಅಧಿಸೂಚನೆದಿನಾಂಕ:24.12.2025ರನ್ವಯಸಾಮಾನ್ಯವರ್ಗಕ್ಕೆ ಮೀಸಲಿಡಲಾಗಿದೆ.				
7	ಮಳಿಗೆ ಸಂಖ್ಯೆ 15	2.90 x 6.25	3.852	7.704
8	ಮಳಿಗೆ ಸಂಖ್ಯೆ 20	4.50 x 6.25	5,977	11,954
9	ಮಳಿಗೆ ಸಂಖ್ಯೆ 23	4.70 x6.25	6.242	12.484
10	ಮಳಿಗೆ ಸಂಖ್ಯೆ 27	4.50 x 6.25	5,977	11,954
11	ಮಳಿಗೆ ಸಂಖ್ಯೆ 28	2.65 x 6.25	3,520	7,040

ಷರತ್ತು ಮತ್ತು ನಿಬಂಧನೆಗಳು: (1) ಹಂಚಿಕೆ ಪಡೆಯಲು ಇಚ್ಛಿಸುವ ಪರವಾನಗಿ ಹೊಂದಿರುವ ಪೇಟೆಕಾರ್ಯಕರ್ತರು **ದಿನಾಂಕ: 16.03.2026 ರ ಸಂಜೆ 4 ಗಂಟೆಯೊಳಗೆ** ನೊಂದಣಿ ಶುಲ್ಕ **ರೂ. 500–00** (ರೂ. ಐದು ನೂರು ಮಾತ್ರ) ಗಳನ್ನು (ಮರುಪಾವತಿಸಲಾಗುವುದಿಲ್ಲ) Secretary, Fruits, Flowers and Vegetables Special Apmc Bangalore ಇವರ ಹೆಸರಿಗೆ ಡಿ.ಡಿ ಪಡೆದು ಈ ಕಛೇರಿಗೆ ಅಗತ್ಯ ದಾಖಲಾತಿಗಳೊಂದಿಗೆ ಸಲ್ಲಿಸಿ ನೊಂದಣಿ ಮಾಡಿಕೊಳ್ಳತಕ್ಕದ್ದು. **(2)** ಈ ಹಿಂದೆ ಸಮಿತಿಯಲ್ಲಿ ಹಂಚಿಕೆಗಾಗಿ ನೋಂದಾಯಿಸಿ ಕೊಂಡವರು ಅದರ ಪ್ರತಿಯನ್ನು ಸಮಿತಿಗೆ ಸಲ್ಲಿಸುವುದು, ಮತ್ತೊಮ್ಮೆ ನೋಂದಾಯಿಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲ. **(3)** ಹಂಚಿಕೆ ಪಡೆಯಲು ಇಚ್ಛಿಸುವ ನೋಂದಾಯಿತ ಅರ್ಹ ಪೇಟೆಕಾರ್ಯಕರ್ತರು ಶೇ.18 ರಂತೆ ಜಿ.ಎಸ್.ಟಿ. ಮೊತ್ತ ರೂ.180.00 ಗಳೊಂದಿಗೆ ಅರ್ಜಿ ಶುಲ್ಕ ರೂ.1000.00 ರಂತೆ ಒಟ್ಟಾರೆ ರೂ.1,180.00 (ರೂ. ಒಂದು ಸಾವಿರದ ನೂರ ಎಂಬತ್ತು ಮಾತ್ರ) ಗಳನ್ನು Secretary, Fruits, Flowers and Vegetables Special Apmc Bangalore ಇವರ ಹೆಸರಿಗೆ ಡಿ.ಡಿ. ಪಡೆದು ಈ ಕಛೇರಿಗೆ ಪಾವತಿಸಿ ನಮೂನೆ–III ರಲ್ಲಿ ಭರ್ತಿ ಮಾಡಿದ ಅರ್ಜಿಯ ಜೊತೆಗೆ ನಿಗಧಿಪಡಿಸಿದ ದಾಖಲಾತಿಗಳನ್ನು ಲಗತ್ತಿಸಿ ಸಲ್ಲಿಸಲು ಕೊನೆಯ **ದಿನಾಂಕ: 25.03.2026 ರ ಸಂಜೆ 4 ಗಂಟೆಯವರೆಗೆ. (4)** ಹಂಚಿಕೆ ಕೋರಿ ಸಲ್ಲಿಸಿದ ಅರ್ಜಿಗಳನ್ನು, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ ಮಾರುಕಟ್ಟೆ ಪ್ರಾಂಗಣದಲ್ಲಿನ ಆಸ್ತಿ ಹಂಚಿಕೆ ನಿಯಂತ್ರಣ ನಿಯಮಗಳು 2004 ರ ನಿಯಮ 8 ರಲ್ಲಿ ನಿಗಧಿಪಡಿಸಿರುವಂತೆ ಲೈಸನ್ಸ್ ಅರ್ಹತೆ, ಹಂಚಿಕೆಗಾಗಿ ಪ್ರಯತ್ನ ಮತ್ತು ಬಳಕೆದಾರರ ಶುಲ್ಕ ಪಾವತಿಯ ಆದ್ಯತೆ ಮೇರೆಗೆ ಪರಿಗಣಿಸಲಾಗುವುದು. **(5)** ಅರ್ಜಿದಾರರು ಕಳೆದ ಮೂರು ವರ್ಷಗಳ ಅಂದರೆ, 2022–23, 2023–24 ಮತ್ತು 2024–25 ಸಾಲಿನಲ್ಲಿ ಸಮಿತಿಗೆ ಪಾವತಿಸಿರುವ ಬಳಕೆದಾರರ ಶುಲ್ಕದ ವಿವರಗಳನ್ನು, ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು. ಸಮಿತಿಯಿಂದ ದಲ್ಲಾಲರ ಪರವಾನಗಿ ಪಡೆದ ಹಾಗೂ ಉಪ ನಿರ್ದೇಶಕರಿಂದ ಖರೀದಿದಾರರ ಪರವಾನಗಿ ಪಡೆದ ಬಗ್ಗೆ ವಿವರಗಳೊಂದಿಗೆ ಲೈಸನ್ಸ್ ಪ್ರತಿಯನ್ನು, ಲಗತ್ತಿಸತಕ್ಕದ್ದು. **(6)** ಹಂಚಿಕೆಗಾಗಿ ಅರ್ಜಿ ಸಲ್ಲಿಸುವ ಅರ್ಜಿದಾರರು ಸಮಿತಿಯಿಂದ ದಲ್ಲಾಲರ ಪರವಾನಗಿ ಹಾಗೂ ಉಪ ನಿರ್ದೇಶಕರಿಂದ ಖರೀದಿದಾರರ ಪರವಾನಗಿ ಪಡೆದು ಕನಿಷ್ಠ 03 ವರ್ಷಗಳ ಅವಧಿ ಕಳೆದಿರಬೇಕು ಹಾಗೂ ವ್ಯಾಪಾರ ವಹಿವಾಟನ್ನು ನಿರ್ವಹಿಸಿರಬೇಕು. **(7)** ಮಳಿಗೆ ಹಂಚಿಕೆಗಾಗಿ 2 ತಿಂಗಳಿಗೆ ಸಮನಾದ ಲೀವ್ ಅಂಡ್ ಲೈಸನ್ಸ್ ಶುಲ್ಕವನ್ನು ಈ ಪ್ರಕಟಣೆಯ ಕಾಲಂ 5 ರಲ್ಲಿ ನಮೂದಿಸಿರುವ ಮೊತ್ತಕ್ಕೆ ಇ.ಎಂ.ಡಿ ಮೊತ್ತವನ್ನು Secretary, Fruits, Flowers and Vegetables Special Apmc Bangalore ಇವರ ಹೆಸರಿಗೆ ಡಿ.ಡಿ ಮೂಲಕ ನಿಗಧಿತ ಅರ್ಜಿ ನಮೂನೆಯೊಂದಿಗೆ ಲಗತ್ತಿಸತಕ್ಕದ್ದು. **(8)** ಹಂಚಿಕೆಗೆ ಪ್ರಸ್ತಾಪಿಸಿರುವ ಮಳಿಗೆ ಸಂಖ್ಯೆ ಹಾಗೂ ವಿಸ್ತೀರ್ಣಗಳಲ್ಲಿ ಹೆಚ್ಚು ಅಥವಾ ಕಡಿಮೆ ಮಾಡುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ. **(9)** ಅರ್ಜಿದಾರರು ಹಂಚಿಕೆಗೆ ಕೋರಿರುವ ಮಳಿಗೆ ಸಂಖ್ಯೆ ಹಂಚಿಕೆಗೆ ಲಭ್ಯವಾಗದಿದ್ದಲ್ಲಿ, ಅನ್ವಯಿಸುವ ಬೇರೆ ಮಳಿಗೆಗಳನ್ನು, ಹಂಚಿಕೆಗೆ ಪರಿಗಣಿಸಲಾಗುವುದು. ಈ ಕುರಿತು ಅರ್ಜಿದಾರರು ಅಫಿಡವಿಟ್ ಸಲ್ಲಿಸತಕ್ಕದ್ದು. **(10)** ಎಲ್ಲಾ ಮಳಿಗೆ ಹಂಚಿಕೆಯು ನಿಯಮಾನುಸಾರ ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರ ಅನುಮೋದನೆಯ ಷರತ್ತಿಗೊಳಪಟ್ಟು ಹಂಚಿಕೆ ಮಾಡಲಾಗುವುದು. **(11)** ಸಮಿತಿಯು ಮಳಿಗೆ ಹಂಚಿಕೆಯನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಹೆಚ್ಚಿನ ವಿವರಗಳನ್ನು, ಹಣ್ಣು, ಹೂವು ಮತ್ತು ತರಕಾರಿಗಳ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಿನ್ನಿಪೇಟೆ, ಬೆಂಗಳೂರು ಇಲ್ಲಿ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/–
ಕಾರ್ಯದರ್ಶಿ

ಸಹಿ/–
ಆಡಳಿತಾಧಿಕಾರಿಗಳು

ವಾಸಾಸಂಇ/ವಾ.ಪ್ರ/ಎಎವಿ/6014/2025–26

ಸಾರ್ವಜನಿಕ ನೋಟಿಸು

ನನ್ನ ಪಕ್ಷಗಾರರು ಕೊಟ್ಟ ಅಧಿಕಾರ ವ ಮಾಹಿತಿ ಹಾಗೂ ಪೂರೈಸಲ್ಪಟ್ಟ ದಾಖಲಾತಿಗಳ ಮೇಲಿಂದ ಕೊಡುವ ಸಾರ್ವಜನಿಕ ನೋಟಿಸ್ ಏನೆಂದರೆ.

ಧಾರವಾಡ ಜಿಲ್ಲಾ ಧಾರವಾಡ ತಾಲೂಕ ಸಬ್ ರಜಿಸ್ಟ್ರಾರ ಹದ್ದಿಯ ಪೈಕಿ ಸತ್ತೂರ 1ನೇ ಹಂತದಲ್ಲಿರುವ ಸರ್ವೆ ನಂ. 65, 66, 67 & 73, 74, 75, 76, 77 ಇದರಲ್ಲಿ **ಕರ್ನಾಟಕ ಹೌಸಿಂಗ್ ಬೋರ್ಡನವರು ತಯಾರಿಸುತ್ತಿರುವ ಪ್ಲಾಟುಗಳ ಪೈಕಿ ಪ್ಲಾಟ ನಂ. ಎಮ್.ಐ.ಜಿ-137.** ಇದರ ಅಳತೆ ಪೂರ್ವ-ಪಶ್ಚಿಮ 15.00 ಮೀ. ಉತ್ತರ-ದಕ್ಷಿಣ 12.00 ಮೀ. ಇದ್ದು ಇದರ ಒಟ್ಟು ಅಳತೆ 180.00 ಚ.ಮೀ. ಇರುತ್ತದೆ. ಇದರ ಇ-ಸ್ವತ್ತಿನ ಸಂ: 21-8-657-389954, ವಾರ್ಡ ನಂ. 21, ಸ್ವತ್ತಿನ ಹಳೇ ಸಂಖ್ಯೆ: 21ಎ/389954, ನಿರ್ಧರಣಾ ಸಂ: ಕೆಎಚ್‌ಬಿ/ ಎಮ್‌ಐಜಿ-137 ಇದ್ದು ಇದರ ಮಾಲೀಕರಾದ **ಶ್ರೀ ವಿಜಯ ಕುಮಾರ ಮಡಿವಾಳಪ್ಪ ಸಾ: ಮನೆ ನಂ. 11-177, ಅಪ್ಪರ ಲೇನ್ ಬ್ರಹಮ್ಪುರ, ಗುಲ್ಬರ್ಗ, ಜಿ.ಜಿ. ಬಹಮನಿಪುರ, ಕಲಬುರಗಿ.** ಇವರಿಂದ ನನ್ನ ಪಕ್ಷಗಾರರು ಈ ಒಳಗಾಗಿ ಖರೀದಿ ವ್ಯವಹಾರವನ್ನು ಮುಗಿಸಿ ಕೊಂಡು ಖರೀದಿ ಪತ್ರವನ್ನು ನೊಂದ ಮಾಡಿಕೊಳ್ಳುವವರು ಇರುತ್ತಾರೆ.

ಆದ್ದರಿಂದ ಈ ಮೇಲ್ಕಾಣಿಸಿದ ಪ್ಲಾಟಿನ ಕುರಿತು ಯಾರಾದರೂ ಯಾವುದೇ ರೀತಿಯಿಂದ ವ್ಯವಹರಿಸಿದಲ್ಲಿ ಹಾಗೂ ಯಾರಾದರೂ ಯಾವುದೇ ರೀತಿಯಿಂದ ಹಕ್ಕು ಹಿತಸಂಬಂಧ, ತಂಟೆ ತಕರಾರು ವಗೈರೆ ಹಾಗೂ ವಾರಸಾ, ಹಣಕಾಸು, ಭೋಜಾ ವಗೈರೆ ಹಕ್ಕು ಸಾಧಿಸುವವರು ಇದ್ದಲ್ಲಿ ಈ ನೋಟಿಸ್ ಪ್ರಕಟಗೊಂಡ 7 ದಿನಗಳೊಳಗಾಗಿ ಈ ಕೆಳಕಾಣಿಸಿದ ವಿಳಾಸಕ್ಕೆ ಲಿಖಿತವಾಗಿ ದಾಖಲೆಗಳೊಂದಿಗೆ ತಕರಾರು ಸಲ್ಲಿಸತಕ್ಕದ್ದು ತಪ್ಪಿದಲ್ಲಿ ನಂತರ ಬಂದ ಯಾವುದೇ ತಂಟೆ ತಕರಾರುಗಳು ನನ್ನ ಪಕ್ಷಗಾರರ ಮೇಲೆ ಬಂಧನಕಾರಿ ಆಗಲಾರವು ಅಂತಾ ತಿಳಿಯಿರಿ ಅಂತಾ ಕೊಟ್ಟ ಸಾರ್ವಜನಿಕ ನೋಟಿಸ್.

ಎಸ್.ಸಿ. ಕವಳಿ, ವಕೀಲರು,
ಹುಬ್ಬಳ್ಳಿ, # 15, ಶಿವ ಶಕ್ತಿ ಬಿಲ್ಡಿಂಗ್, ತಿಮ್ಮಸಾಗರ ಕಾಲೋನಿ,
06-03-2026 ಹೊಸೂರ, ಹುಬ್ಬಳ್ಳಿ, ಮೊ : 9901601677

IN THE COURT OF THE HON'BLE III ADDL CIVIL JUDGE, & J.M.F.C. AT BALLARI
Cri. M.C. NO. 640/2025
Between : ANJINAPPA and others
.. Petitioners
AND
The Tahasildar cum Register of Births and Deaths, Taluk Office, Ballari.
...Respondent
NOTICE TO WHOM SO EVER IT MAY CONCERNED

To
Respondent: The Tahasildar cum Register of Births and Deaths, Taluk Office, Ballari.
WHEREAS, the above named petitioner has filed the above petition against you under section 13 (2) of Births and Deaths Act. 1969, for seeking the death certificate of petitioners father death certificate by name NETTAKALLAPPA S/o Late. ANJINAPPA, who died on 15-07-1995 at Petitioner no. 1's resident at Ward No.1, Sirivara Village, Ballari Taluk and District.
You are here by directed to appear in this court in person or by a pleader duly instructed on 15/04/2026 at about 11.00 am in the before this court to show cause against the above petitions filling wherein the petition will be heard and determined ex-parte.
Given under my hand and seal of the court on this day of 6th day of March-2026

By order of the court.
Chief Ministerial officer
III A.C.J & J.M.F.C. Court Ballari.
LALIYA NAIK
Advocate for the Petitioners.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

IN THE COURT OF THE HON'BLE IV ADDL CIVIL JUDGE, & J.M.F.C. AT BALLARI
Cri. M.C. NO. 73/2026
Between : M. SADA SHIVAIAH SWAMY and another
....Petitioners
AND
The Tahasildar cum Register of Births and Deaths, Taluk Office, Ballari
...Respondent
NOTICE TO WHOM SO EVER IT MAY CONCERNED

To
Respondent:The Tahasildar cum Register of Births and Deaths, Taluk Office, Ballari.
WHEREAS, the above named petitioner has filed the above petition against you under section 13 (2) of Births and Deaths Act. 1969, for seeking the death certificate of petitioners father death certificate by name BASAIAH SWAMY S/o Late.CHENNAIAH who died on 05-08-1984 at Rayapura Village, Rupanagudi Hobli, Ballari Taluk and District..
You are here by directed to appear in this court in person or by a pleader duly instructed on 09/04/2026 at about am in the before this court to show cause against the above petitions filling wherein the petition will be heard and determined ex-parte.
Given under my hand and seal of the court on this day of 5th day of March-2026

By order of the court.
Chief Ministerial officer
IV A.C.J & J.M.F.C. Court Ballari.
VISHWANATHSHARMA P G S
Advocate for the Petitioners.

IN THE COURT OF THE PRINCIPAL / ADDITIONAL CIVIL JUDGE AT HOSAPETE.
Cri.M.C.NO:505/2026
Kum.Sumitra Bai. ...Petitioner
-V/S-
The Tahasildar-cum-registrar of Birth and Death, Hosapete.
...Respondent
NOTICE TO WHOMSOEVER CONCERN

WHEREAS the above named petitioner Smt.Kum.Sumitra Bai D/o Late.K. Hanumantha Rao, aged about 70 years, R/o 525 1st Ward,Taloor Road, Kakubal village, Hosapete Taluk in Vijayanagara district has filed the petition under section 13 (3) of Registration of birth and death Act, seeking the direction of this court to issue direction to the respondent to enter the date of death of K.HANUMANTHA RAO S/o K.DODDAPPA of Kakubal village, who died on 05/01/1977 at his residence at Kakubal village, Hosapete Taluk
Whereas if any persons interested with respect to the above proceedings are hereby noticed to appear in this court in person or by pleader duly able to answer all material question relating to the said petition 10/04/2026 at about 11.00 A.M, otherwise the matter will be heard and determined.
Given under my hand and the seal of the court, this 28th day of 02/2026.

By order of the Hon'ble court
Shirestedhar
Principal Additional Senior Civil Judge & JMFC at Hosapete.
From
K.Chandrakanth,Advocates, Hosapete.

IN THE COURT OF THE PRINCIPAL / ADDITIONAL CIVIL JUDGE AT HOSAPETE.
Cri.M.C.NO:506/2026
Kum.Sumitra Bai. ...Petitioner
-V/S-
The Tahasildar-cum-registrar of Birth and Death, Hosapete. ...Respondent
NOTICE TO WHOMSOEVER CONCERN

WHEREAS the above named petitioner Smt.Kum.Sumitra Bai D/o Late.K. Hanumantha Rao, aged about 70 years, R/o 525 1st Ward,Taloor Road, Kakubal village, Hosapete Taluk in Vijayanagara district has filed the petition under section 13 (3) of Registration of birth and death Act, seeking the direction of this court to issue direction to the respondent to enter the date of death of K. YANKAMMA W/O LATE K.HANUMANTHA RAO of Kakubal village, who died on 10/08/2002 at her residence at Kakubal village, Hosapete Taluk in vijayanagara district.
Whereas if any persons interested with respect to the above proceedings are hereby noticed to appear in this court in person or by pleader duly able to answer all material question relating to the said petition 10/04/2026 at about 11.00 A.M, otherwise the matter will be heard and determined.
Given under my hand and the seal of the court, this 28th day of 02/2026.

By order of the Hon'ble court
Shirestedhar
Principal Additional Senior Civil Judge & JMFC at Hosapete.
From
K.Chandrakanth,Advocates, Hosapete.

ಪತ್ರಿಕಾ ಪ್ರಕಟಣೆಗಾಗಿ
ಮಾನ್ಯ ಗೌರವಾನ್ವಿತ ಪ್ರಧಾನ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಗಂಗಾವತಿ
ಕ್ರಿಮಿನಲ್ ಮಿಸಲೇನಿಎಸ್ ನಂ:231/2026

ಅರ್ಜಿದಾರರು :ಶ್ರೀಮತಿ ಜಾಯೀದಾ ಬೇಗಂ ಗಂಡ ದಿ॥ ಲಾಲಸಾಬ್ ವ: 42 ವರ್ಷ, ಉದ್ಯೋಗ: ಮನೆಗೆಲಸ ಸಾ: ವಾರ್ಡ ನಂ.15, ಎಸ್‌ಬಿಹೆಚ್ ಬ್ಯಾಂಕ್ ಹತ್ತಿರ, ಝಂಡಾ ಕಟ್ಟಿ ಹಿಂಭಾಗ, ಗಂಗಾವತಿ, ತಾ: ಗಂಗಾವತಿ, ಜಿ: ಕೊಪ್ಪಳ & ಇತರರು
ವಿರುದ್ಧ:
ಎದುರುದಾರರು : ಮಾನ್ಯ ಪೌರಾಯುಕ್ತರು, ನಗರಸಭೆ ಕಾರ್ಯಾಲಯ, ಗಂಗಾವತಿ
ಈ ಪ್ರಕರಣದಲ್ಲಿ ಅರ್ಜಿದಾರ ಕರ್ನಾಟಕ ಜನನ ಮತ್ತು ಮರಣ ನೋಂದಣಿ ಕಾಯಿದೆ 1969 ಅಧಿನಿಯಮ ಕಲಂ13(3)ರಡಿಯಲ್ಲಿ ಈ ನ್ಯಾಯಾಲಯಕ್ಕೆ ಅರ್ಜಿದಾರ ನಂ.1ರಿಂದ 6 ರವರ ತಂದೆಯಾದ ದಿ॥ ಹುಸೇನಸಾಬ ತಂದೆ ಬಾಲೇಸಾಬ ಇವರು ದಿನಾಂಕ:24-04-1997ರಂದು ಅರ್ಜಿದಾರರ ಮನೆಯಾದ ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಗಂಗಾವತಿ ಗ್ರಾಮದಲ್ಲಿ ಮರಣ ಹೊಂದಿದ ಕುರಿತಂತೆ ಮರಣ ನೋಂದಣಿ ಮತ್ತು ಮರಣ ಪ್ರಮಾಣ ಪತ್ರ ಕೊಡಿಸುವಂತೆ ಕೋರಿ ಎದುರುದಾರ ಕಛೇರಿ ಅಧಿಕಾರಿಯ ವಿರುದ್ಧ ಅರ್ಜಿಯನ್ನು ಸಲ್ಲಿಸಿದ ಪ್ರಯುಕ್ತ, ಅರ್ಜಿದಾರನ ಅರ್ಜಿ ಕುರಿತಂತೆ ಯಾರಾದರೂ ತಕರಾರು/ಆಕ್ಷೇಪಣೆಗಳನ್ನು ಸಲ್ಲಿಸಬೇಕಾದಲ್ಲಿ ದಿನಾಂಕ:9-4-2026ರ ಬೆಳಗ್ಗೆ11.00 ಗಂಟೆ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು, ಹಾಗೊಂದು ವೇಳೆ ಯಾರಿಂದಲೂ ಯಾವುದೇ ರೀತಿಯ ತಕರಾರು/ ಆಕ್ಷೇಪಣೆಗಳು ಈ ಮೇಲೆ ತಿಳಿಸಿದ ದಿನಾಂಕ ಮತ್ತು ಸಮಯದೊಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದ ಪಕ್ಷದಲ್ಲ, ಯಾವುದೇ ತಕರಾರು/ಆಕ್ಷೇಪಣೆಗಳು ಇಲ್ಲವೆಂದು ಭಾವಿಸಿ ಈ ನ್ಯಾಯಾಲಯ ಕೊನೆಯ ತೀರ್ಮಾನ ಕೈಗೊಂಡು ಏಕಪಕ್ಷೀಯ ಆದೇಶವನ್ನು ಜಾರಿ ಮಾಡುತ್ತದೆ. ಈ ದಿವಸ ದಿನಾಂಕ: 05-03-2026 ಈ ನ್ಯಾಯಾಲಯದ ಶೀಲು/ ಮುದ್ರೆಯೊಂದಿಗೆ ಕೊಡಲಾಗಿದೆ.
ಸ್ಥಳ: ಗಂಗಾವತಿ
ದಿ: 05-03-2026

ನ್ಯಾಯಾಲಯದ ಆದೇಶ ಅನುಸಾರ
ಶಿರಸ್ತೇದಾರರು
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಜೆ. ಎಮ್.ಎಫ್.ಸಿ. ಗಂಗಾವತಿ
ಪ್ರಕಾಶಗೌಡ ವಕೀಲರು,
ಅರ್ಜಿದಾರರ ಪರ ವಕೀಲರು, ಗಂಗಾವತಿ.

ಪತ್ರಿಕಾ ಪ್ರಕಟಣೆಗಾಗಿ
ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಗಂಗಾವತಿ
ಕ್ರಿಮಿನಲ್ ಮಿಸಲೇನಿಎಸ್ ನಂ: 230/2026

ಅರ್ಜಿದಾರ : ಶ್ರೀಮತಿ ಹನುಮವ್ವ ಗಂಡ ದಿ॥ ಬಸಪ್ಪ ವ: 72 ವರ್ಷ, ಉದ್ಯೋಗ: ಒಕ್ಕಲುತನ ಸಾ: ರಾಮದುರ್ಗ, ತಾ: ಗಂಗಾವತಿ. ಜಿ: ಕೊಪ್ಪಳ & ಇತರರು
ವಿರುದ್ಧ:
ಎದುರುದಾರರು :ಮಾನ್ಯ ತಹಶೀಲ್ದಾರರು, ಜನನ ಮರಣ ನೋಂದಣಾಧಿಕಾರಿಗಳು ತಹಶೀಲ್ ಕಾರ್ಯಾಲಯ, ಗಂಗಾವತಿ
ಈ ಪ್ರಕರಣದಲ್ಲಿ ಅರ್ಜಿದಾರ ಕರ್ನಾಟಕ ಜನನ ಮತ್ತು ಮರಣ ನೋಂದಣಿ ಕಾಯಿದೆ 1969 ಅಧಿನಿಯಮ ಕಲಂ13(3)ರಡಿಯಲ್ಲಿ ಈ ನ್ಯಾಯಾಲಯಕ್ಕೆ ಅರ್ಜಿದಾರ ನಂ.1ರವರ ಗಂಡ, ಅರ್ಜಿದಾರ ನಂ.2 ರವರ ತಂದೆ ಹಾಗೂ ಅರ್ಜಿದಾರ ನಂ.3 ರವರ ಮಾವನವರಾದ ದಿ॥ ಬಸಪ್ಪ ತಂದೆ ಧೂಳಪ್ಪ ತುಗ್ಗಲದೋಣಿ ಇವರು ದಿನಾಂಕ: 01-07-1996 ರಂದು ಅರ್ಜಿದಾರರ ಮನೆಯಾದ ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ರಾಮದುರ್ಗ ಗ್ರಾಮದಲ್ಲಿ ಮರಣ ಹೊಂದಿದ ಕುರಿತಂತೆ ಮರಣ ನೋಂದಣಿ ಮತ್ತು ಮರಣ ಪ್ರಮಾಣ ಪತ್ರ ಕೊಡಿಸುವಂತೆ ಕೋರಿ ಎದುರುದಾರ ಕಛೇರಿ ಅಧಿಕಾರಿಯ ವಿರುದ್ಧ ಅರ್ಜಿಯನ್ನು ಸಲ್ಲಿಸಿದ ಪ್ರಯುಕ್ತ, ಅರ್ಜಿದಾರನ ಅರ್ಜಿ ಕುರಿತಂತೆ ಯಾರಾದರೂ ತಕರಾರು/ಆಕ್ಷೇಪಣೆಗಳನ್ನು ಸಲ್ಲಿಸಬೇಕಾದಲ್ಲಿ ದಿನಾಂಕ: 9-4-2026ರ ಬೆಳಗ್ಗೆ ಗಂಟೆ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು, ಹಾಗೊಂದು ವೇಳೆ ಯಾರಿಂದಲೂ ಯಾವುದೇ ರೀತಿಯ ತಕರಾರು/ ಆಕ್ಷೇಪಣೆಗಳು ಈ ಮೇಲೆ ತಿಳಿಸಿದ ದಿನಾಂಕ ಮತ್ತು ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದ ಪಕ್ಷದಲ್ಲ, ಯಾವುದೇ + ತಕರಾರು/ಆಕ್ಷೇಪಣೆಗಳು ಇಲ್ಲವೆಂದು ಭಾವಿಸಿ ಈ ನ್ಯಾಯಾಲಯ ಕೊನೆಯ ತೀರ್ಮಾನ ಕೈಗೊಂಡು ಏಕಪಕ್ಷೀಯ ಆದೇಶವನ್ನು ಜಾರಿ ಮಾಡುತ್ತದೆ. ಈ ದಿವಸ ದಿನಾಂಕ: 6-3-2026 ರಂದು ಸಹಿ ಮಾಡಿ ಈ ನ್ಯಾಯಾಲಯದ ಶೀಲು/ ಮುದ್ರೆಯೊಂದಿಗೆ ಕೊಡಲಾಗಿದೆ. ಸಮಯದೊಳಗಾಗಿ
ಸ್ಥಳ: ಗಂಗಾವತಿ
ದಿನಾಂಕ: 06-03-2026

ನ್ಯಾಯಾಲಯದ ಆದೇಶ ಅನುಸಾರ
ಶಿರಸ್ತೇದಾರರು
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಜೆ. ಎಮ್. ಎಫ್.ಸಿ ಗಂಗಾವತಿ
ಪ್ರಕಾಶಗೌಡ ವಕೀಲರು,
ಅರ್ಜಿದಾರರ ಪರ ವಕೀಲರು, ಗಂಗಾವತಿ.

ಕ್ರಿಮಿನಲ್ ಮಿಸ್ಲೇನಿಯಸ್ ನಂ:2/2026
ಮಾನ್ಯ 1ನೇ ಜೆ.ಎಮ್ ಎಫ್. ಸಿ, ನ್ಯಾಯಾಲಯ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು: ಪುಣವಂತಪ್ಪ ತಂದೆ ಪೌಲಪ್ಪ ಮಣಕೂರ ವಿರುದ್ಧ
ಎದುರುದಾದರು: ಸಹಾಯಕ ಆಯುಕ್ತರು ವ ಜನನ-ಮರಣ ನೋಂದಣಿ ವಿಭಾಗ, ಕಛೇರಿ ವಲಯ ನಂ.6, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ನೋಟೀಸ್

ಈ ಮೇಲ್ಕಂಡ ಪ್ರಕರಣದಲ್ಲಿ ಮೊದಲನೆ ಅರ್ಜಿದಾರನು ತನ್ನ ತಾಯಿಯಾದ ಶ್ರೀಮತಿ ಪ್ರಕಾಶಮ್ಮ ಪೌಲಪ್ಪ ಮಣಕೂರ ಇವರು ದಿನಾಂಕ: 25/10/1998 ರಂದು ತಾಲೂಕ ಹುಬ್ಬಳ್ಳಿ ಜಿಲ್ಲಾ ಧಾರವಾಡ ಮಾದವನಗರ ಮನೆಯಲ್ಲಿ ಮರಣ ಹೊಂದಿದ್ದು ಇರುತ್ತದೆ. ಅಂತಾ ಮರಣ ಪ್ರಮಾಣ ಪತ್ರವನ್ನು ಪಡೆಯಲು ಈ ಅರ್ಜಿಯನ್ನು ದಾಖಲಿಸಿರುತ್ತಾರೆ.

ಮಾನ್ಯ ಗೌರವಾನ್ವಿತ ಘನ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಅದರ ಅರ್ಜಿಯ ವಿಚಾರಣೆ ದಿನಾಂಕ: 02/04/2026 ರಂದು ಇರುತ್ತದೆ. ಸದರ ತಾರೀಖಿನ ದಿವಸ ಯಾರದಾದರೂ ತಂಟೆ ವ ತಕರಾರು ವ ಹಿತಾಸಕ್ತಿ ಹಿತಸಂಬಂಧ ಇದ್ದಲ್ಲಿ ಅವರಾಗಲಿ ಅಥವಾ ಅವರಿಂದ ಅಧಿಕಾರ ಪಡೆದ ನ್ಯಾಯವಾದಿಗಳ ಮುಖಾಂತರವಾಗಲಿ ಸದರ ನ್ಯಾಯಾಲಯಕ್ಕೆ ಹಾಜರಾಗಿ ತಕರಾರು ಇದ್ದರೆ ತಿಳಿಸಬೇಕು. ಇದಕ್ಕೆ ತಪ್ಪಿದಲ್ಲಿ ಅವರ ಗೈರು ಹಾಜರಿಯಲ್ಲಿ ಪ್ರಕರಣವನ್ನು ನಿರ್ಣಯಿಸಲಾಗುವುದು.

ಇವತ್ತು ದಿನಾಂಕ: 06/03/2026 ನೇ ಇಸ್ವಿಯಂದು ನನ್ನ ಸಹಿ ಮಾಡಿ ನ್ಯಾಯಾಲಯ ಮೊಹರಿನೊಂದಿಗೆ ಮಾನ್ಯ ಮಾಡಿ ಕೊಡಲ್ಪಟ್ಟಿತು.
ಸ್ಥಳ: ಹುಬ್ಬಳ್ಳಿ
ದಿನಾಂಕ: 06/03/2026

ನ್ಯಾಯಾಲಯದ ಆಜ್ಞೆಯ ಮೇರೆಗೆ
ಶಿರಸ್ತೇದಾರರು
1ನೇ ಜೆ.ಎಮ್ ಎಫ್. ಸಿ, ನ್ಯಾಯಾಲಯ, ಹುಬ್ಬಳ್ಳಿ
ಎಸ್ ಎಸ್ ಪವಾರ
ಅರ್ಜಿದಾರರ ಪರ ವಕೀಲರು

ಪತ್ರಿಕಾ ಪ್ರಕಟಣೆಗಾಗಿ
ಮಾನ್ಯ ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಗಂಗಾವತಿ
ಕ್ರಿಮಿನಲ್ ಮಿಸಲೇನಿಯಸ್ ನಂ:: 146/12026

ಅರ್ಜಿದಾರರು:-1.ಲಕ್ಷ್ಮಿಪತಿ ತಂದೆ ವೀರುಪಣ್ಣ) ವಿರುಪನಗೌಡ ವಯಸ್ಸು: 35ವರ್ಷ, ಉದ್ಯೋಗ: ಒಕ್ಕಲುತನ ಸಾ॥ಖರಾಬದಿನ್ನಿ ತಾ॥ ಮಾನವಿ ಜಿ॥ ರಾಯಚೂರು
2.ಈರಮ್ಮ ಗಂಡ ಮೂಗಣ್ಣ ವಯಸ್ಸು: 36ವರ್ಷ, ಉದ್ಯೋಗ: ಒಕ್ಕಲುತನ & ಮನೆಕೆಲಸ ಸಾ॥ ವಾರ್ಡ ನಂ: 31, ವಿರುಪಾಪುರ ತಾಂಡ ವಿರುಪಾಪುರ ತಾ॥ ಗಂಗಾವತಿ ಜಿ॥ ಕೊಪ್ಪಳ
3.ಲಕ್ಷ್ಮೀದೇವಿ ಗಂಡ ದೇವರಾಜ ವಯಸ್ಸು: 35ವರ್ಷ, ಉದ್ಯೋಗ: ಒಕ್ಕಲುತನ & ಮನೆಕೆಲಸ ಸಾ॥ ಮುದ್ದಮಗುಡ್ಡಿ, ಖರಾಬದಿನ್ನಿ ತಾ॥ ಮಾನ್ವಿ ಜಿ ರಾಯಚೂರು
4. ಬಸಣ್ಣ @ ಬಸವರಾಜ ತಂದೆ ಬಸಣ್ಣ ವಯಸ್ಸು: 57ವರ್ಷ, ಉದ್ಯೋಗ: ಒಕ್ಕಲುತನ ಸಾ॥ ವಾರ್ಡ ನಂ: 1, ಮಸೀದಿ ಹತ್ತಿರ ಚಳ್ಳೂರು ತಾ॥ ಕಾರಟಗಿ ಜಿ॥ ಕೊಪ್ಪಳ
ಎದುರುದಾರರು: 1. ಮಾನ್ಯ ಪೌರಾಯುಕ್ತರು ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ನಗರಸಭೆ ಕಾರ್ಯಾಲಯ ಗಂಗಾವತಿ
2. ಸಂಬಂಧಪಟ್ಟ ಇತರೆ ತಕರಾರುದಾರರು
ಪ್ರಕಟಣೆ:-
ಮೇಲೆ ಹೆಸರಿಸಿದ ಅಪರಾಧಿಕ ಸಂಕೀರ್ಣ ಸಂಖ್ಯೆ 146/2026 ಸಲ್ಲಿಸಿದ ಅರ್ಜಿಯಲ್ಲಿ ಅರ್ಜಿದಾರ ನಂ: 1, ಇವರ ಅಕ್ಕಳಾದ ಹಾಗೂ ಅರ್ಜಿದಾರ 2ಮತ್ತು3, ಇವರ ತಾಯಿಯಾದ ಹಾಗೂ ಅರ್ಜಿದಾರ ನಂ:4, ಇವರ ಹೆಂಡತಿಯಾದ ಪದ್ಮಾವತಿ @ ಪದ್ದಮ್ಮ ಗಂಡ ಬಸಣ್ಣ @ ಬಸವರಾಜ (PADMAVATI @ PADDAMMA W/o BASANNA @ BASAVARAJ) ದಿನಾಂಕ: 08-04-2009ರಂದು ಗಂಗಾವತಿ ನಗರದ ಸಾರ್ವಜನಿಕ ಉಪವಿಭಾಗ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ, ಇವರ ಮರಣ ಪತ್ರವನ್ನು ಪಡೆಯಲು ಮಾನ್ಯ ನ್ಯಾಯಾಲಯದಲ್ಲಿ ಅರ್ಜಿದಾರರು ಅರ್ಜಿಯನ್ನು ಸಲ್ಲಿಸಿದ್ದು, ನ್ಯಾಯಾಲಯವು ತಮ್ಮ ಹಾಜರಾತಿಗಾಗಿ 2026ರ ಮಾರ್ಚ ತಿಂಗಳು 28ನೇ ದಿನದಂದು 11 ಗಂಟೆಗೆ ಈ ಅರ್ಜಿಗೆ ಸಂಬಂಧಿಸಿದಂತೆ ಉತ್ತರಿಸುವುದಕ್ಕಾಗಿ ನೀವು ಖುದ್ದಾಗಿ ಅಥವಾ ಸರಿಯಾಗಿ ಮಾಹಿತಿ ಪಡೆದಿರುವ ಮತ್ತು ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಬಲ್ಲ ವಕೀಲರ ಮೂಲಕ ಹಾಜರಾಗಬೇಕೆಂದು ಈ ನೋಟಿಸನ್ನು ಈ ಪ್ರಕಟಣೆ ಮೂಲಕ ಹೊರಡಿಸಲಾಗಿದೆ ಮತ್ತು ನಿಮ್ಮ ಹಾಜರಾತಿಗಾಗಿ ಮೇಲಿನ ದಿನಾಂಕವನ್ನು ನಿಗದಿಪಡಿಸಲಾಗಿದೆ. ಈ ಮೇಲಿನಂತೆ ನಿಗದಿಪಡಿಸಿದ ದಿನದಂದು ಹಾಜರಾಗಲು ನೀವು ತಪ್ಪಿದಲ್ಲಿ ಸದರಿ ಅರ್ಜಿಯನ್ನು ಏಕಪಕ್ಷೀಯವಾಗಿ ವಿಚಾರಣೆ ಮಾಡಲಾಗುವುದೆಂದು ಹಾಗೂ ತೀರ್ಮಾನಿಸಲಾಗುವುದೆಂದು ಈ ಪ್ರಕಟಣೆ ಮೂಲಕ ತಿಳಿಸಲಾಗಿದೆ. 2026ನೇ ವರ್ಷದ 2ನೇ ತಿಂಗಳ 24ನೇ ದಿನಾಂಕದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೋಹರಿನೊಂದಿಗೆ ನೀಡಲಾಗಿದೆ.
ಸ್ಥಳ: ಗಂಗಾವತಿ
ದಿ: 24-2-2026

ನ್ಯಾಯಾಲಯದ ಆದೇಶದ ಪ್ರಕಾರ
ಮುಖ್ಯ ಲಿಪಿಕ ಅಧಿಕಾರಿಗಳು
ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಗಂಗಾವತಿ
ಮುಖಾಂತರ:
ಅಂಬ್ರೇಶ ವಕೀಲರು, ಗಂಗಾವತಿ

ಪತ್ರಿಕಾ ಪ್ರಕಟಣೆಗಾಗಿ
ಮಾನ್ಯ ಹೆಚ್ಚುವರಿ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಗಂಗಾವತಿ
ಕ್ರಿಮಿನಲ್ ಮಿಸಲೇನಿಯಸ್ ನಂ:1415/2025

ಅರ್ಜಿದಾರ : ಶ್ರೀಮತಿ ಕಮಲಮ್ಮ ಗಂಡ ದಿ.ರಾಮಪ್ಪ, ವಯಾ : 50 ವರ್ಷ.ಉ : ಕೂಲಿ, ಸಾ: ಬೊಮ್ಮಸಾಗರ ತಾಂಡಾ, ತಾ: ಕನಕಗಿರಿ. ಜಿ: ಕೊಪ್ಪಳ ಮತ್ತು ಇನ್ನೊಬ್ಬರು
//ವಿರುದ್ಧ//
ಎದುರುದಾರರು : ಮಾನ್ಯ ತಹಶೀಲ್ದಾರರು ತಹಶೀಲ್ ಕಾರ್ಯಾಲಯ, ಕನಕಗಿರಿ
ಈ ಪ್ರಕರಣದಲ್ಲಿ ಅರ್ಜಿದಾರರು ಕರ್ನಾಟಕ ಜನನ ಮತ್ತು ಮರಣ ನೋಂದಣಿ ಕಾಯ್ದೆ 1969 ಅಧಿನಿಯಮ ಕಲಂ 13(3) ರಡಿಯಲ್ಲಿ ಈ ನ್ಯಾಯಾಲಯಕ್ಕೆ ಅರ್ಜಿದಾರ ನಂ.1 ರವರು ಸಲ್ಲಿಸುವ ಪತ್ರಿಕಾ ಪ್ರಕಟಣೆ ಕರಡುಪ್ರತಿ ಏನೆಂದರೆ ದಿವಂಗತರವರು ಅರ್ಜಿದಾರ ನಂ.1 ರವರಿಗೆ ಗಂಡ ಮತ್ತು ಅರ್ಜಿದಾರ ನಂ.2 ರವರಿಗೆ ತಂದೆಯಾದ ದಿ. ರಾಮಪ್ಪ ತಂದೆ ಓಬಳಪ್ಪ ಇವರು ದಿನಾಂಕ : 18.09.2019 ರಂದು ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲೂಕಿನ ಬೊಮ್ಮಸಾಗರ ತಾಂಡಾ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿದ ಕುರಿತಂತೆ ಮರಣ ನೊಂದಣಿ ಮತ್ತು ಮರಣ ಪ್ರಮಾಣ ಪತ್ರ ಕೊಡಿಸುವಂತೆ ಕೋರಿ ಎದುರುದಾರರ ಕಚೇರಿ ಅಧಿಕಾರಿ ವಿರುದ್ಧ ಅರ್ಜಿಯನ್ನು ಸಲ್ಲಿಸಿದ ಪ್ರಯುಕ್ತ, ಅರ್ಜಿದಾರರ ಕುರಿತಂತೆ ಯಾರಾದರೂ ತಕರಾರು/ಆಕ್ಷೇಪಣೆಗಳನ್ನು ಸಲ್ಲಿಸಬೇಕಾದಲ್ಲಿ ದಿನಾಂಕ :28/03/2026 ರ ಬೆಳಗ್ಗೆ 11.00 ಗಂಟೆಯ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು, ಹಾಗೊಂದು ವೇಳೆ ಯಾರಿಂದಲೂ ಯಾವುದೇ ರೀತಿಯ ತಕರಾರು/ಆಕ್ಷೇಪಣೆಗಳು ಈ ಮೇಲೆ ತಿಳಿಸಿದ ದಿನಾಂಕ ಮತ್ತು ಸಮಯದ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದ ಪಕ್ಷದಲ್ಲಿ, ಯಾವುದೇ ತಕರಾರು, ಆಕ್ಷೇಪಣೆಗಳು ಇಲ್ಲವೆಂದು ಭಾವಿಸಿ ಈ ನ್ಯಾಯಾಲಯ ಕೊನೆಯ ತೀರ್ಮಾನ ಕೈಗೊಂಡು ಏಕಪಕ್ಷೀಯ ಆದೇಶವನ್ನು ಜಾರಿ ಮಾಡುತ್ತದೆ. ಈ ದಿವಸ ದಿನಾಂಕ : 02/03/2026 ರಂದು ಸಹಿ ಮಾಡಿ ಈ ನ್ಯಾಯಾಲಯದ , ಸೀಲು/ ಮುದ್ರೆಯೊಂದಿಗೆ ಕೊಡಲಾಗಿದೆ.
ಸ್ಥಳ: ಗಂಗಾವತಿ
ದಿನಾಂಕ :02/03/ 2026

ನ್ಯಾಯಾಲಯದ ಆದೇಶದ ಅನುಸಾರ ಮಾನ್ಯ ಹೆಚ್ಚುವರಿ ದಿವಾಣಿ ನ್ಯಾಯಾಧೀಶರ ಮತ್ತು ಪ್ರದ. ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಲಯ ಗಂಗಾವತಿ
ವಾದಿಯರಪರ ವಕೀಲರು ಗಂಗಾವತಿ

ಪತ್ರಿಕಾ ಪ್ರಕಟಣೆಗಾಗಿ
ಮಾನ್ಯ ಗೌರವಾನ್ವಿತ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಗಂಗಾವತಿ
ಕ್ರಿಮಿನಲ್ ಮಿಸಲೇನಿಎಸ್ ನಂ: 996/2025

ಅರ್ಜಿದಾರ :ಶ್ರೀಮತಿ ರಾಜೇಶ್ವರಿ ಗಂಡ ಶಶಿಧರ ವ:58 ವರ್ಷ, ಉದ್ಯೋಗ: ಮನೆಗೆಲಸ ಸಾ: ಹುಲಸನಹಟ್ಟಿ, ತಾ: ಕನಕಗಿರಿ, ಜಿ: ಕೊಪ್ಪಳ
-ವಿರುದ್ಧ:-
ಎದುರುದಾರರು : ತಾಲೂಕ ಜನನ ಮರಣ ನೋಂದಾಣಾಧಿಕಾರಿ ತಹಶೀಲ್ ಕಾರ್ಯಾಲಯ, ಕನಕಗಿರಿ
ಈ ಪ್ರಕರಣದಲ್ಲಿ ಅರ್ಜಿದಾರ ಕರ್ನಾಟಕ ಜನನ ಮತ್ತು ಮರಣ ನೋಂದನಿ ಕಾಯಿದೆ 1969 ಅಧಿನಿಯಮ ಕಲಂ 13(3)ರಡಿಯಲ್ಲಿ ಈ ನ್ಯಾಯಾಲಯಕ್ಕೆ ಅರ್ಜಿದಾರ ನಂ. 1ರಿಂದ5 ರವರ ತಾಯಿಯಾದ ದಿ॥ ಮಲ್ಲಮ್ಮ ಗಂಡ ಗೋವಿಂದರಾವ್ ಇವರು ದಿನಾಂಕ: 10-06-2010 ರಂದು ಕೊಪ್ಪಳ ಜಿಲ್ಲೆ ಕನಕಗಿರಿ ತಾಲೂಕಿನ ಹುಲಸನಹಟ್ಟಿ ಗ್ರಾಮದಲ್ಲಿ ಮರಣ ಹೊಂದಿದ ಕುರಿತಂತೆ ಮರಣ ನೋಂದಣಿ ಮತ್ತು ಮರಣ ಪ್ರಮಾಣ ಪತ್ರ ಕೊಡಿಸುವಂತೆ ಕೋರಿ ಎದುರುದಾರ ಕಛೇರಿ ಅಧಿಕಾರಿಯ ವಿರುದ್ಧ ಅರ್ಜಿಯನ್ನು ಸಲ್ಲಿಸಿದ ಪ್ರಯುಕ್ತ, ಅರ್ಜಿದಾರನ ಅರ್ಜಿ ಕುರಿತಂತೆ ಯಾರಾದರೂ ತಕರಾರು/ ಆಕ್ಷೇಪಣೆಗಳನ್ನು ಸಲ್ಲಿಸಬೇಕಾದಲ್ಲಿ ದಿನಾಂಕ: 25-3-2026ರಬೆಳಿಗ್ಗೆ 11.00ಗಂಟೆ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು. ಹಾಗೊಂದು ವೇಳೆ ಯಾರಿಂದಲೂ ಯಾವುದೇ ರೀತಿಯ ತಕರಾರು/ ಆಕ್ಷೇಪಣೆಗಳು ಈ ಮೇಲೆ ತಿಳಿಸಿದ ದಿನಾಂಕ ಮತ್ತು ಸಮಯದೊಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದ ಪಕ್ಷದಲ್ಲಿ, ಯಾವುದೇ ತಕರಾರು/ ಆಕ್ಷೇಪಣೆಗಳು ಇಲ್ಲವೆಂದು ಭಾವಿಸಿ ಈ ನ್ಯಾಯಾಲಯ ಕೊನೆಯ ತೀರ್ಮಾನ ಕೈಗೊಂಡು ಏಕಪಕ್ಷಿಯ ಆದೇಶವನ್ನು ಜಾರಿ ಮಾಡುತ್ತದೆ. ಈ ದಿವಸ ದಿನಾಂಕ: 02-03-2026ರಂದು ಸಹಿ ಮಾಡಿ ಈ ನ್ಯಾಯಾಲಯದ ಮುದ್ರೆಯೊಂದಿಗೆ ಕೊಡಲಾಗಿದೆ.
ಸ್ಥಳ: ಗಂಗಾವತಿ
ದಿನಾಂಕ: 02-03-2026

ನ್ಯಾಯಾಲಯದ ಆದೇಶ ಅನುಸಾರ
ಮಾನ್ಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ಮತ್ತು ಪ್ರ. ದ. ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಗಂಗಾವತಿ
ಎಸ್.ಎಚ್.ಪಾಟೀಲ್
ಅರ್ಜಿದಾರರ ಪರ ವಕೀಲರು

ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ಬಾದಾಮಿ ಇವರ ನ್ಯಾಯಾಲಯದಲ್ಲಿ
ಜಿ.ಆಂಡ್ ಡಬ್ಲ್ಯೂ.ಸಿ. 13/2026

ಅರ್ಜಿದಾರರು :1. ಶ್ರೀಮತಿ ಪಾರ್ವತೆವ್ವ ಗಂ/ ಬಸಪ್ಪ ಬಡಿಗೇರ ವಯಾ: 48 ವರ್ಷ ಉದ್ಯೋಗ: ಮನೆಗೆಲಸ
2. ಅಜಯಕುಮಾರ ತಂ/ ಬಸಪ್ಪ ಬಡಿಗೇರ ವಯಾ: 27 ವರ್ಷ ಉದ್ಯೋಗ: ಕೃಷಿ
3. ವಿಜಯಕುಮಾರ ತಂ/ ಬಸಪ್ಪ ಬಡಿಗೇರ ವಯಾ: 26 ವರ್ಷ ಉದ್ಯೋಗ: ಕೃಷಿ
4. ಶ್ರೀಮತಿ ಭಾಗ್ಯಶ್ರೀ ಗಂ/ ರುದ್ರಗೌಡ ಪಾಟೀಲ ವಯಾ: 50 ವರ್ಷ ಉದ್ಯೋಗ: ಮನೆಗೆಲಸ
5. ಸದಾನಂದ ತಂ/ ಶಿವಣ್ಣ ಬಡಿಗೇರ ವಯಾ: 48 ವರ್ಷ ಉದ್ಯೋಗ: ಕೃಷಿ
6. ಶ್ರೀಮತಿ ಗಿರಿಜವ್ವ ಗಂ/ ಈರಣ್ಣ ಬಡಿಗೇರ ವಯಾ: 35 ವರ್ಷ ಉದ್ಯೋಗ: ಮನೆಗೆಲಸ
7. ಕು. ಸಂಜನಾ ತಂ/ ಈರಣ್ಣ ಬಡಿಗೇರ ವಯಾ: 17 ವರ್ಷ ಉದ್ಯೋಗ: ವಿದ್ಯಾರ್ಥಿ
8. ಕು. ಸೃಷ್ಟಿ ತಂ/ ಈರಣ್ಣ ಬಡಿಗೇರ ವಯಾ: 16 ವರ್ಷ ಉದ್ಯೋಗ: ವಿದ್ಯಾರ್ಥಿ
ಎಲ್ಲರೂ ಸಾ. ಅನವಾಲ ತಾ. ಬಾದಾಮಿ
ವಿರುದ್ಧ
ಎದುರುದಾರರು :- ಯಾರೂ ಇಲ್ಲ
ಕ್ರಮಾದೇಶ 5 ನಿಯಮ 20 (1 ಎ) ಸಿ.ಪಿ.ಸಿ.
ಅಡಿಯಲ್ಲಿ ಸಾರ್ವಜನಿಕ ನೋಟೀಸು
ಇದರಲ್ಲಿ ಅರ್ಜಿದಾರರು ಈ ಮೂಲಕ ಕೊಡುವ ಸಾರ್ವಜನಿಕ ಜಾಹೀರ ನೊಟೀಸು ಏನೆಂದರೆ,
ಸದರಿ ಮೇಲ್ಕಾಣಿಸಿದ ಅರ್ಜಿಯಲ್ಲಿ ಅರ್ಜಿದಾರ ಸಂಖ್ಯೆ 6 ರವರನ್ನು ಅಲ್ಪವಯಿ ಅರ್ಜಿದಾರ ಸಂಖ್ಯೆ 7 ಮತ್ತು 8 ರವರ ಪಾಲನಕರ್ತೆಯಾಗಿ ಅವರ ಪರವಾಗಿ ಬಾದಾಮಿ ತಾಲೂಕಾ ಪೈಕಿ ಕಾಡರಕೊಪ್ಪ ಗ್ರಾಮದ ರಿ.ಸ. ಸಂಖ್ಯೆ 167/1 ಕ್ಷೇತ್ರ 1 ಎಕರೆ 18 ಗುಂಟೆ ಜಮೀನನ್ನು ಮಾರಾಟ ಮಾಡಲು ಅನುಮತಿ ಕೋರಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಪ್ರಕರಣದಲ್ಲಿ ಯಾರದಾದರೂ ತಂಟೆ ವ ತಕರಾರು ಏನಾದರೂ ಇದ್ದಲ್ಲಿ ದಿನಾಂಕ: 23-04-2026 ರಂದು ತಾವಾಗಲಿ ಅಥವಾ ತಮ್ಮಿಂದ ಮಾಹಿತಿ ಮತ್ತು ಅಧಿಕಾರ ಪಡೆದ ನ್ಯಾಯವಾದಿಗಳ ಮೂಲಕ ಬೆಳಗ್ಗೆ 11-00 ಗಂಟೆಗೆ ತಮ್ಮ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ನಿರ್ಣಯಿಸಲಾಗುವುದು.
ನ್ಯಾಯಾಲಯದ ಆದೇಶ ಮತ್ತು ಮೊಹರಿನೊಂದಿಗೆ ಈ ದಿನ 04-03-2026 ರಂದು ನೀಡಲಾಗಿದೆ.
ಬಾದಾಮಿ
3/3/2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೆದಾರರು
ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಬಾದಾಮಿ
ಸಹಿ/-ಶ್ರೀಮತಿ ಆಯ್. ಎಮ್. ದುರಗನ್ನವರ
ಅರ್ಜಿದಾರರ ಪರ ವಕೀಲರು

IN THE COURT OF THE PRINCIPAL / ADDITIONAL CIVIL JUDGE AT HOSAPETE.
Cri.M.C.NO:507/2026
Kum.Sumitra Bai. ...Petitioner
-V/S-
The Tahasildar-cum-registrar of Birth and Death, Hosapete.
...Respondent
NOTICE TO WHOMSOEVER CONCERN

WHEREAS the above named petitioner Smt.Kum.Sumitra Bai D/o Late.K. Hanumantha Rao, aged about 70 years, R/o 525 1st Ward,Taloor Road, Kakubal village, Hosapete Taluk in Vijayanagara district has filed the petition under section 13 (3) of Registration of birth and death Act, seeking the direction of this court to issue direction to the respondent to enter the date of death of KUM. NARASAMMA D/O LATE K.HANUMANTHA RAO of Kakubal village, who died on 07/04/2001 at her residence at Kakubal village, Hosapete Taluk.
Whereas if any persons interested with respect to the above proceedings are hereby noticed to appear in this court in person or by pleader duly able to answer all material question relating to the said petition 10/04/2026 at about 11.00 A.M, otherwise the matter will be heard and determined.
Given under my hand and the seal of the court, this 28th day of 02/2026.

By order of the Hon'ble court
Shirestedhar
Principal Additional Senior Civil Judge & JMFC at Hosapete.
From
K.Chandrakanth,Advocates,Hosapete.

ಪತ್ರಿಕಾ ಪ್ರಕಟಣೆಗಾಗಿ :
ಮಾನ್ಯ ಹೆಚ್ಚುವರಿ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಗಂಗಾವತಿ
ಕ್ರಿಮಿನಲ್ ಮಿಸಲೇನಿಯಸ್ ನಂಬರ್ - 1414/2025

ಅರ್ಜಿದಾರ : ಶ್ರೀಮತಿ ಈರಮ್ಮ ಗಂಡ ದಿ.ಭೀಮಪ್ಪ, ವಯಾ: 68 ವರ್ಷ, ಉ : ಕೂಲಿ, ಸಾ: ಬೊಮ್ಮಸಾಗರ ತಾಂಡಾ, ತಾ: ಕನಕಗಿರಿ, ಜಿ: ಕೊಪ್ಪಳ ಮತ್ತು ಇನ್ನೊಬ್ಬರು
//ವಿರುದ್ಧ//
ಎದುರುದಾರರು : ಮಾನ್ಯ ತಹಶೀಲ್ದಾರರು ತಹಶೀಲ್ ಕಾರ್ಯಾಲಯ, ಕನಕಗಿರಿ
ಈ ಪ್ರಕರಣದಲ್ಲಿ ಅರ್ಜಿದಾರರು ಕರ್ನಾಟಕ ಜನನ ಮತ್ತು ಮರಣ ನೋಂದಣಿ ಕಾಯ್ದೆ 1969 ಅಧಿನಿಯಮ ಕಲಂ 13(3) ರಡಿಯಲ್ಲಿ ಈ ನ್ಯಾಯಾಲಯಕ್ಕೆ ಅರ್ಜಿದಾರ ನಂ.1 ರವರು ಸಲ್ಲಿಸುವ ಪತ್ರಿಕಾ ಪ್ರಕಟಣೆ ಕರಡುಪ್ರತಿ ಏನೆಂದರೆ ದಿವಂಗತರವರು ಅರ್ಜಿದಾರ ನಂ.1 ರವರಿಗೆ ಗಂಡ ಮತ್ತು ಅರ್ಜಿದಾರ ನಂ.2 ರವರಿಗೆ ತಂದೆಯಾದ ದಿ. ಭೀಮಪ್ಪ ತಂದೆ ಓಬಳಪ್ಪ ಇವರು ದಿನಾಂಕ : 23.06.2022 ರಂದು ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲೂಕಿನ ಬೊಮ್ಮಸಾಗರ ತಾಂಡಾ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿದ ಕುರಿತಂತೆ ಮರಣ ನೊಂದಣಿ ಮತ್ತು ಮರಣ ಪ್ರಮಾಣ ಪತ್ರ ಕೊಡಿಸುವಂತೆ ಕೋರಿ ಎದುರುದಾರರ ಕಚೇರಿ ಅಧಿಕಾರಿ ವಿರುದ್ಧ ಅರ್ಜಿಯನ್ನು ಸಲ್ಲಿಸಿದ ಪ್ರಯುಕ್ತ, ಅರ್ಜಿದಾರರ ಕುರಿತಂತೆ ಯಾರಾದರೂ ತಕರಾರು/ಆಕ್ಷೇಪಣೆಗಳನ್ನು ಸಲ್ಲಿಸಬೇಕಾದಲ್ಲಿ ದಿನಾಂಕ : 28/03/2026 ರ ಬೆಳಗ್ಗೆ 11.00 ಗಂಟೆಯ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು, ಹಾಗೊಂದು ವೇಳೆ ಯಾರಿಂದಲೂ ಯಾವುದೇ ರೀತಿಯ ತಕರಾರು/ ಆಕ್ಷೇಪಣೆಗಳು ಈ ಮೇಲೆ ತಿಳಿಸಿದ ದಿನಾಂಕ ಮತ್ತು ಸಮಯದ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದ ಪಕ್ಷದಲ್ಲಿ, ಯಾವುದೇ ತಕರಾರು, ಆಕ್ಷೇಪಣೆಗಳು ಇಲ್ಲವೆಂದು ಭಾವಿಸಿ ಈ ನ್ಯಾಯಾಲಯ ಕೊನೆಯ ತೀರ್ಮಾನ ಕೈಗೊಂಡು ಏಕಪಕ್ಷೀಯ ಆದೇಶವನ್ನು ಜಾರಿ ಮಾಡುತ್ತದೆ.
ಈ ದಿವಸ ದಿನಾಂಕ : 02/03/2026 ರಂದು ಸಹಿ ಮಾಡಿ ಈ ನ್ಯಾಯಾಲಯದ, ಸೀಲು/ಮುದ್ರೆಯೊಂದಿಗೆ ಕೊಡಲಾಗಿದೆ.
ಸ್ಥಳ: ಗಂಗಾವತಿ
ದಿನಾಂಕ :02/03/ 2026

ನ್ಯಾಯಾಲಯದ ಆದೇಶದ ಅನುಸಾರ ಮಾನ್ಯ ಹೆಚ್ಚುವರಿ ದಿವಾಣಿ ನ್ಯಾಯಾಧೀಶರ ಮತ್ತು ಪ್ರದ. ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಲಯ ಗಂಗಾವತಿ
ಅರ್ಜಿದಾರರ ಪರ ವಕೀಲರು, ಗಂಗಾವತಿ

ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ, ಹೊಸಪೇಟೆ.
ಐ.ಎಸ್.ಆರ್ ರಸ್ತೆ, ಚಿತ್ತವಾಡ್ಗಿ ಹೊಸಪೇಟೆ-583 201,
ದೂರವಾಣಿ ಸಂಖ್ಯೆ: 08394-227749
E-mail:hospethuda@gmail.com

ಸಂಖ್ಯೆ: ಹೊನಅಪ್ರಾ/ಎ1/ನಾ.ನಿ.ಹ/3/2025-26 ದಿನಾಂಕ: 06.03.2026.

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆ) 1991 ಕಲಂ 3(3) ರನ್ವಯ ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ಸ್ವಾಧೀನದಲ್ಲಿರುವ ನಾಗರೀಕ ಸೌಲಭ್ಯ ನಿವೇಶನಗಳನ್ನು ಹಂಚಿಕೆ ಮಾಡಲು ಸರ್ಕಾರಿ / ಅರೆ ಸರ್ಕಾರಿ ಹಾಗೂ ನೋಂದಾಯಿತ ಸಂಘ ಸಂಸ್ಥೆಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಆಸಕ್ತರು ಅರ್ಜಿಯ ಬೆಲೆ ರೂ. 200/-ಗಳನ್ನು ಪ್ರಾಧಿಕಾರದಲ್ಲಿ ಪಾವತಿಸಿ ಪಡೆಯುವುದು, ಭರ್ತಿ ಮಾಡಿದ ಅರ್ಜಿಯನ್ನು ದಿನಾಂಕ 06.04.2026 ರ ಒಳಗೆ ನಿಗಧಿ ಪಡಿಸಿದ ನೋಂದಣಿ ಶುಲ್ಕ ಮತ್ತು ಶೇ10% ರಷ್ಟು ಠೇವಣಿ ಮೊತ್ತದೊಂದಿಗೆ ಈ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸತಕ್ಕದ್ದು, ನಿವೇಶನಗಳ ಸಂಖ್ಯೆ, ವಿಸ್ತೀರ್ಣ, ಗುತ್ತಿಗೆ ಮೊತ್ತ, ಠೇವಣಿ ಮೊತ್ತ ಹಾಗೂ ಷರತ್ತುಗಳನ್ನು ಕಚೇರಿ ವೆಬ್‌ಸೈಟ್ **hospet.uda.gov.in** ಗೆ ಕಚೇರಿಗೆ ಸಂಪರ್ಕಿಸಿ (08394-227749) ಪಡೆಯುವುದು.

ಸಹಿ/-ಆಯುಕ್ತರು, ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ ಹೊಸಪೇಟೆ.
ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/577

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

ಅಲ್ಪಾವಧಿ ಟೆಂಡರ್ ಪ್ರಕಟಣೆ - ಕೆ.ಪಿ.ಪಿ. ಪೋರ್ಟಲ್ ಮುಖಾಂತರ

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂ: ಕಾಸಮಂ/ತಾ.ಶಾ./ಸ.ಇ./ಟೆಂಡರ್-44/2026/788 ದಿ: 05.03.2026

ಉಲ್ಲೇಖಿತ ಪ್ರಕಟಣೆಯನ್ವಯ ಆಹ್ವಾನಿಸಲಾದಂತೆ ದಕ್ಷಿಣ ಕನ್ನಡ ಜಿಲ್ಲೆಯ ಕಾಮಗಾರಿಗಳಿಗೆ ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮದನ್ವಯ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯೂನಲ್ಲಿರುವ ಕಲಂನನ್ವಯ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟಂತೆ ಐಟಂವಾರು ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ https://kppp.karnataka.gov.in ನಲ್ಲಿ ಅರ್ಹ ಗುತ್ತಿಗೆದಾರರಿಂದ ದಿ: 13.03.2026ರ ಸಂಜೆ 4.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಟೆಂಡರ್‌ದಾರರು ಕರ್ನಾಟಕ ಸರಕಾರದ ಕೆ.ಪಿ.ಪಿ. ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಪಡೆಯಬಹುದಾಗಿದೆ. (Download) ಹೆಚ್ಚಿನ ವಿವರವನ್ನು ಕಛೇರಿ ಸಮಯದಲ್ಲಿ ಪಡೆಯಬಹುದು. (ದೂರವಾಣಿ ಸಂ: 0824-2440720)

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
DIPR/DK/KSMCA/1709/25-26 dt. 06.03.2026 ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

ಕಾರ್ಯಪಾಲಕ ಅಭಿಯಂತರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿದ್ಯುತ್ ವಿಭಾಗ, ಕೆ.ಆರ್. ವೃತ್ತ, ಬೆಂಗಳೂರು.

ಸಂ: ಕಾ.ಇಂ(ವಿ)/ಲೋ.ಇ/ವಿದ್ಯುತ್/2025-26/2886 ದಿನಾಂಕ: 06.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ ಈ ಕೆಳಕಂಡ ಕಾಮಗಾರಿಗೆ KW-1 STD ಷರತ್ತುಗೊಳಪಟ್ಟಂತೆ, ಕೆ.ಪಿ.ಪಿ.ಪಿ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ವಿವರ ಈ ಕೆಳಕಂಡಂತಿದೆ.

ಕ್ರ ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)
1	Providing Microphone with Long Stem at Cabinet Hall Third Floor, Vidhana Soudha, Bengaluru. PWD/2025-26/EL/WORK_INDENT34384	Rs. 16.58

ಮೇಲಿನ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ವೆಬ್‌ಸೈಟ್ **https://kppp.karnataka.gov.in**ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: **06.03.2026** ರಿಂದ **13.03.2026, 16.00** ಗಂಟೆಯವರೆಗೆ ಹಾಗೂ ಭರ್ತಿ ಮಾಡಿದ ಟೆಂಡರ್ ಹಿಂತಿರುಗಿಸುವ ದಿನಾಂಕ: **13.03.2026** ರಂದು **16.00** ಗಂಟೆಯವರೆಗೆ ನಿಗದಿಪಡಿಸಲಾಗಿದೆ. ಸದರಿ ಟೆಂಡರ್ ವಿವರಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು(ವಿ).
ವಾಸಾಸಂಇ/ಉನಿ-ಸಿ.ಪಿ/6054/ಕೆಎಸ್‌ಎಂಸಿಎ/2025-26

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ನ್ಯಾಕ್ ಎ' ಮಾನ್ಯತೆ, ಆಸ್ತಿ ಅಧಿಕಾರಿಗಳ ಕಛೇರಿ,
ನಾಯಕ್ ಭವನ, ಗಾಕೃವಿಕೆ. ಬೆಂಗಳೂರು-560 065.

ಸಂಖ್ಯೆ.ಇ.ಓ/ಎಸ್.ಪಿ.ಓ/ಕೆಪಿಪಿಪಿ/21/2025-26 ದಿನಾಂಕ: 05-03-2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು, ಅವಶ್ಯವಿರುವ ಉಪಕರಣಗಳನ್ನು ಸರಬರಾಜು ಮಾಡಲು ಕೆ.ಜಿ-2, ಟೆಂಡರ್ ನಿಬಂಧನೆಗೊಳಪಟ್ಟಂತೆ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ.

ವಿವರ: (1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **12.03.2026ರ ಸಂಜೆ 4:00 ಘಂಟೆಯವರೆಗೆ.** (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **14.03.2026ರ ಬೆಳಿಗ್ಗೆ 10:30 ಕ್ಕೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 16.03.2026ರ ಬೆಳಿಗ್ಗೆ 10:30ಕ್ಕೆ.** ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಯುತ್ತದೆ. **ಸೂಚನೆ:** ಯಾವುದೇ ಟೆಂಡರ್‌ನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ಮಾಹಿತಿಗಾಗಿ ಟೆಂಡರ್ ಪ್ರಕಟಣೆಯ ವಿವರಗಳು ವೆಬ್‌ಸೈಟ್: **www.kppp.karnataka.gov.in** ರಲ್ಲಿ ದೊರೆಯುತ್ತದೆ ಹಾಗೂ ಈ ಕಚೇರಿಯನ್ನು, ಕಚೇರಿಯ ವೇಳೆಯಲ್ಲಿ ಸಹಾಯವಾಣಿ ದೂರವಾಣಿ ಸಂಖ್ಯೆ: **09240214000 / 09240214001 support@eprochelpdesk.com** ಅಥವಾ **www.uasbangalore.edu.in** ದೂರವಾಣಿ ಸಂಖ್ಯೆ: **23630128** ಸಂಪರ್ಕಿಸಬಹುದು.

ಸಹಿ/-
ಆಸ್ತಿ ಅಧಿಕಾರಿಗಳು
DIPR/CP/RO6049/AAPL/2025-26

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಛೇರಿ, ಗೋಪನಕೊಪ್ಪ, ಹುಬ್ಬಳ್ಳಿ
Tel/Fax No: (0836) 2322771/2324307
Website: https://hescom.karnataka.gov.in
e-mail : seeit@hescom.co.in CIN : U31401KA2002SGC030437
ಸಂಖ್ಯೆ:ಹೆಸ್ಕಾಂ/ಅಅ(ಮಾ&ತಂ)/ಕಾನಿಅ-ಐಟಿ-2/1431/2025-26/cys-25492
ದಿನಾಂಕ : 06.03.2026

ಆಸಕ್ತಿಯ ಅಭಿವ್ಯಕ್ತಿ (EOI) ಅಧಿಸೂಚನೆ
ಟೆಂಡರ್ ಸಲ್ಲಿಕೆಯ ಕೊನೆಯ ದಿನಾಂಕ ವಿಸ್ತರಣೆ

BBPS ಪ್ಲಾಟ್‌ಫಾರ್ಮ್ ಮೂಲಕ ವಿದ್ಯುತ್ ಬಿಲ್ ಪಾವತಿಗಳನ್ನು ಸಂಗ್ರಹಿಸಲು ಏಜೆನ್ಸಿ - ಭಾರತ್ ಬಿಲ್ ಪಾವತಿ ಆಪರೇಟಿಂಗ್ ಯುನಿಟ್ (BBPOU) ಆಯ್ಕೆಗಾಗಿ BBPOU ನಿಂದ ಆಸಕ್ತಿಯ ಅಭಿವ್ಯಕ್ತಿಯನ್ನು (EOI) ಅನ್ನು HESCOM/SEE (IT&MT)/EE-IT2/1431/2025-26/cys-11577 ದಿನಾಂಕ : 26.02.2026 ರಂದು ಆಹ್ವಾನಿಸಲಾಗಿದೆ.

ಮೊಹರು ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕವನ್ನು **12.03.2026** ರಿಂದ **18.03.2026** ರವರೆಗೆ ವಿಸ್ತರಿಸಲಾಗಿದೆ ಮತ್ತು ಅದನ್ನು **18.03.2026** ರಂದು ಮಧ್ಯಾಹ್ನ 1.00 ಗಂಟೆಗೆ ಅಧೀಕ್ಷಕ ಎಂಜಿನಿಯರ್ (ಐಟಿ ಮತ್ತು ಎಂಟಿ), ಕಾರ್ಪೋರೇಟ್ ಕಚೇರಿ, ವಿದ್ಯುತ್ ಭವನ, ಹೆಸ್ಕಾಂ, ಗೋಪನಕೊಪ್ಪ, ಹುಬ್ಬಳ್ಳಿ-580023 ರ ಕಚೇರಿಗೆ ಸಲ್ಲಿಸಬೇಕು ಮತ್ತು ಟೆಂಡರ್ ದಾಖಲೆಗಳನ್ನು **18.03.2026** ರಂದು ಸಂಜೆ 4.30 ಗಂಟೆಗೆ ತೆರೆಯಲಾಗುತ್ತದೆ. ವಿವರವಾದ EOI ಸಂಬಂಧಪಟ್ಟ ದಾಖಲೆಗಳು, ನಿಯಮಗಳು ಮತ್ತು ಷರತ್ತುಗಳನ್ನು ಹೆಸ್ಕಾಂ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಬಹುದು (https://hescom.karnataka.gov.in). ಸಹಿ/- ಅಧೀಕ್ಷಕ ಅಭಿಯಂತರರು(ವಿ)
ವಾಸಾಸಂಇ/ಧಾ/ಕೆಎಸ್‌ಎಂಸಿಎ/1316/2025-26 (ಐಟಿ&ಎಮ್‌ಟಿ) ಹೆಸ್ಕಾಂ, ಹುಬ್ಬಳ್ಳಿ

ಲೋಕೋಪಯೋಗಿ ಇಲಾಖೆ
ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ,
ಧಾರವಾಡ ವಿಭಾಗ, ಧಾರವಾಡ. ದೂರವಾಣಿ ಸಂಖ್ಯೆ: 0836-2747944
ಇ-ಮೇಲ್ ಐಡಿ: **eepwddha@gmail.com**

ಸಂಖ್ಯೆ: ಕಾನಿಇಂಧಾ/ಗುತ್ತಿಗೆ/ಪಿ.ಬಿ.2/2025-26/6922 ದಿನಾಂಕ: 05-03-2026

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(ಐಎಫ್‌ಟಿ - ಕೆಡಬ್ಲ್ಯೂ-1 ಮತ್ತು 4) (ಸ್ಟಾಂಡರ್ಡ್ ಡಾಕ್ಯೂಮೆಂಟ್ ಮುಖಾಂತರ)

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಧಾರವಾಡ ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಕೆಡಬ್ಲ್ಯೂ-1 ಮತ್ತು 4 ರ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. **(https://kppp.karnataka.gov.in)** ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಗುತ್ತಿಗೆದಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ **ಲೆಕ್ಕ ಶೀರ್ಷಿಕೆ:- 2059-80-053-4-00-200 ವಿವಿಧ ಇಲಾಖಾ ಕಟ್ಟಡಗಳ ದುರಸ್ತಿ / ನಿರ್ವಹಣೆ ಹಾಗೂ 4059-80-051-0-60-422 SCP (ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ) ಯೋಜನೆ ಅಡಿಯಲ್ಲಿ** ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಕಾಮಗಾರಿಯ ವಿವರ ಈ ಕೆಳಗಿನಂತಿದೆ.

GENERAL: 1) PWD/2025-26/BD/WORK_INDENT31562, 2) PWD/2025-26/RD/WORK_INDENT34112, 3) PWD/2025-26/RD/WORK_INDENT34105. ಪರಿಶಿಷ್ಟ ಪಂಗಡ (ಎಸ್.ಟಿ): 4) PWD/2025-26/RD/WORK_INDENT34102, CAT-II(A): 5) PWD/2025-26/RD/WORK_INDENT 34104, ಪರಿಶಿಷ್ಟ ಜಾತಿ (ಎಸ್.ಸಿ): 6) PWD/2025-26/RD/WORK_INDENT34103

ವೇಳಾಪಟ್ಟಿ: 1) ಪ್ರೀ-ಬಿಡ್ / ಆಕ್ಷೇಪಣೆಯನ್ನು ಸಲ್ಲಿಸುವ ಕೊನೆಯ ದಿನಾಂಕ: **13-03-2026 ರಂದು ಮಧ್ಯಾಹ್ನ 12.30 ಗಂಟೆಯವರೆಗೆ.** 2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **16-03-2026 ರಂದು ಸಾಯಂಕಾಲ 4.00 ಗಂಟೆಯವರೆಗೆ.** 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **17-03-2026 ರಂದು ಸಾಯಂಕಾಲ 4.30 ಗಂಟೆಯ ನಂತರ.** 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **18-03-2026 ರಂದು ಸಾಯಂಕಾಲ 4.30 ಗಂಟೆಯ ನಂತರ.**

ಕಾಮಗಾರಿಗಳಿಗೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಅಂತರ್‌ಜಾಲ ವಿಳಾಸ: **https://kppp.karnataka.gov.in** ದಲ್ಲಿ ಹಾಗೂ ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ ಕಛೇರಿಯಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ,
ಧಾರವಾಡ.
[illegible]

ತೋಟಗಾರಿಕೆ ಇಲಾಖೆ
ವಿಶೇಷಾಧಿಕಾರಿಗಳ ಕಛೇರಿ ನಂದಿಗಿರಿಧಾಮ
ಚಿಕ್ಕಬಳ್ಳಾಪುರ ಜಿಲ್ಲೆ-562101,
Email: nandihill.so@gmail.com

ಸಂಖ್ಯೆ/ತೋಇ/ವಿಅ/ನಂದಿಗಿರಿ/ತಾಸ/55/2025-26 ದಿನಾಂಕ: 02.03.2026

ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ವಿಶೇಷಾಧಿಕಾರಿಗಳ ಕಛೇರಿ, ನಂದಿಗಿರಿಧಾಮ, ಚಿಕ್ಕಬಳ್ಳಾಪುರ ಜಿಲ್ಲೆ ರವರ ಅಧೀನದಲ್ಲಿ ಬರುವ ನಂದಿಗಿರಿಧಾಮಕ್ಕೆ ಸುಲ್ತಾನ್ ಪೇಟೆ ಗ್ರಾಮದಿಂದ ಏಳು ಹಂತಗಳಲ್ಲಿ, ಸಾರ್ವಜನಿಕ ಕುಡಿಯುವ ನೀರು ಸರಬರಾಜು ಮತ್ತು ಪಂಪ್ ಹೌಸ್‌ಗಳ ನಿರ್ವಹಣೆಯನ್ನು ಎರಡು ವರ್ಷಗಳ ಅವಧಿಗೆ ಟೆಂಡರ್ ಆಹ್ವಾನಿಸಿದ್ದು, ಸದರಿ ಟೆಂಡರ್‌ನ್ನು ಸಲ್ಲಿಸಲು **ದಿನಾಂಕ: 17.03.2026** ರಂದು ನಿಗದಿಪಡಿಸಿದ್ದು, ಸದರಿ ಕಾರ್ಯಕ್ಕೆ ಪ್ರಥಮ ದರ್ಜೆ ವಿದ್ಯುತ್ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಅಂತರ್ಜಾಲದ ವೆಬ್ ಸೈಟ್ **https://kppp.karnataka.gov.in/** ವಿಳಾಸದಲ್ಲಿ ಪಡೆಯಬಹುದಾಗಿದೆ.

ಸಹಿ/- ವಿಶೇಷಾಧಿಕಾರಿ ಹಾಗೂ ಟೆಂಡರ್ ಆಹ್ವಾನ ಅಧಿಕಾರಿಗಳು
ನಂದಿ ಗಿರಿಧಾಮ, ಚಿಕ್ಕಬಳ್ಳಾಪುರ ಜಿಲ್ಲೆ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:469/ಕೆಎಸ್‌ಎಂಸಿಎ/2025-26

ಕರ್ನಾಟಕ ಸರಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಗದಗ.
ಬ್ಲಾಕ್ ಮಟ್ಟದ ಸಾರ್ವಜನಿಕ ಆರೋಗ್ಯ ಘಟಕ, ಜಿಲ್ಲಾ ಸಮೀಕ್ಷಾ ಘಟಕ, ಗದಗ
ಜಿಲ್ಲಾ ಕಾರ್ಯಕ್ರಮ ನಿರ್ವಹಣಾ ಘಟಕ, ಗದಗ ಫೋ.ನಂ.233996

ಕ್ರ.ಸಂ:ಜಿಆಕುಕಸೋಗ/ಎನ್.ಹೆಚ್.ಎಮ್/BPHU-ಟೆಂಡರ್‌ಪ್ರಕಟಣೆ/457/2025-26
ದಿನಾಂಕ: 06/03/2026

ಈ-ಟೆಂಡರ್ ಪ್ರಕಟಣೆ

2025-26 ನೇ ಸಾಲಿಗೆ ಗದಗ ಜಿಲ್ಲೆಯಲ್ಲಿ ಎನ್.ಹೆಚ್.ಎಂ ಕಾರ್ಯಕ್ರಮದಡಿಯಲ್ಲಿ 15ನೇ ಹಣಕಾಸು ಆಯೋಗದ ಅಡಿಯ ರಾಷ್ಟ್ರೀಯ ಆರೋಗ್ಯ ಅಭಿಯಾನ **(Block Level Public Health Unit)** ಬ್ಲಾಕ್ ಮಟ್ಟದ ಸಾರ್ವಜನಿಕ ಆರೋಗ್ಯ ಘಟಕ ಜಿಲ್ಲೆಯಲ್ಲಿನ ಎಲ್ಲಾ **Block Level Public Health Unit** ಗಳಿಗೆ ಅಗತ್ಯವಿರುವ ಪೀಠೋಪಕರಣಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ, ಟೆಂಡರ್ ಅಂದಾಜು ಮೊತ್ತ **ರೂ.17,31,600 ರೂಗಳು** ಇ.ಎಮ್.ಡಿ ಮೊತ್ತ **ರೂ.43,290/-** ಟೆಂಡರ್ ಸಲ್ಲಿಸಲು ಪ್ರಾರಂಭ ಮತ್ತು ಕೊನೆಯ ದಿನಾಂಕ: **05/03/2026** ರಿಂದ ಪ್ರಾರಂಭ ಹಾಗೂ **20/03/2026** ರಂದು ಸಂಜೆ **05:30**ಗಂಟೆಗೆ ವರೆಗೆ, ಹೆಚ್ಚಿನ ಮಾಹಿತಿಗಾಗಿ ಇ-ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in/** ಮೂಲಕ **Tender Reference Number :DHFWS/2025-26/IND2324** ಸಂಖ್ಯೆಯನ್ನು ಬಳಸಿಕೊಂಡು ಪರಿಶೀಲಿಸಬಹುದಾಗಿದೆ ಅಥವಾ **dhogadag@gmail.com/ dpdogadag@gmail.com** ಸಂಪರ್ಕಿಸಬಹುದಾಗಿದೆ.

ಸಹಿ/- ಉಪಾಧ್ಯಕ್ಷರು
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಗದಗ
ವಾ.ಸಾ.ಇ/ಗದಗ/697/ದೇಶಪಾಂಡೆಪಬ್ಲಿಸಿಟಿ/2025-26

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಳಗಾವಿ.
ಕಂಗ್ರಾಳಿ ಕೆ. ಹೆಚ್. ರಸ್ತೆ, ಬೆಳಗಾವಿ - 590 010, ಜಿಲ್ಲೆ: ಬೆಳಗಾವಿ, ರಾಜ್ಯ: ಕರ್ನಾಟಕ. ದೂರವಾಣಿ : 0831 - 2478927,
ಇ-ಮೇಲ್ : apmcbelgaum@gmail.com

ಸಂಖ್ಯೆ : ಕೃ.ಮಾ.ಇ./ಕೃ.ಉ.ಮಾ.ಸ.(ಬೆ)/ಅಭಿಕೆ/2255/2025-26 ದಿನಾಂಕ : 05-03-2026

ಇ-ಟೆಂಡರ್ ಪ್ರಕಟಣೆ

ಬೆಳಗಾವಿ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದ 2025-26 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಅನುಮೋದನೆಯಾದ ಈ ಕೆಳಕಾಣಿಸಿದ ಕಾಮಗಾರಿಗೆ ಕೆ.ಪಿ.ಪಿ.ಪಿ. ಪೋರ್ಟಲ್‌ನ ಮೂಲಕ ಟೆಂಡರ್‌ನ್ನು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿ ಹೆಸರು	ಟೆಂಡರ್‌ಗಿಟ್ಟ ಮೊತ್ತ ಜಿ.ಎಸ್.ಟಿ. ಹೊರತುಪಡಿಸಿ (ಲಕ್ಷ.ಗಳಲ್ಲಿ)	ಇ.ಎಂ.ಡಿ. ಮೊತ್ತ	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ & ಸಮಯ	ಟೆಂಡರ್ ತೆರೆಯುವ ದಿನಾಂಕ	
					ತಾಂತ್ರಿಕ ಬಿಡ್	ಆರ್ಥಿಕ ಬಿಡ್
01	Replacement of exiting deterorated L.T.U.G Cable System by providing over head System Using 9 mtrs RCC Poles with 3 phase, 5 wire L.T Aerial Bunched cable with LED Streetlights and Highmast light at main Market yard of Belagavi APMC (Under Action Plan 2025-26).	ರೂ. 91.23	ರೂ. 1,82,500.00	25-03-2026 ರ ಸಂಜೆ 5.30 ಗಂಟೆಗೆ	27-03-2026 ರ ಬೆಳಿಗ್ಗೆ 11.00 ಗಂಟೆಗೆ	02-04-2026 ರ ಸಂಜೆ 4.30 ಗಂಟೆಗೆ
02	ಕೃ.ಉ.ಮಾ.ಸ. ಬೆಳಗಾವಿ 2024-25 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಳಗಾವಿ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಮರಾಠ ಬ್ಯಾಂಕ್ ಎದುರುಗಡೆ ಇರುವ ದಿನಸಿ ಚಿಕ್ಕ ಮಳಿಗೆಗಳನ್ನು ಸುಧಾರಣೆ ಮಾಡುವುದು (09 ಸಂಖ್ಯೆ) ಕಾಮಗಾರಿ.	ರೂ. 8.46	ರೂ. 11,000.00	25-03-2026 ರ ಸಂಜೆ 5.30 ಗಂಟೆಗೆ	27-03-2026 ರ ಬೆಳಿಗ್ಗೆ 11.00 ಗಂಟೆಗೆ	02-04-2026 ರ ಸಂಜೆ 4.30 ಗಂಟೆಗೆ

ಟೆಂಡರ್ ಷರತ್ತು ಹಾಗೂ ನಿಬಂಧನೆಗಳು ಇ-ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಇರುತ್ತದೆ. ಹೆಚ್ಚಿನ ಮಾಹಿತಿಯನ್ನು, ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಕಾರ್ಯದರ್ಶಿಯವರಿಂದ ಅಥವಾ http://www.kppp.karnataka.gov.in ವೆಬ್‌ಸೈಟ್‌ನಲ್ಲಿ ಹಾಗೂ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ : 080 - 22501216 / 25501227 ಪಡೆಯಬಹುದಾಗಿದೆ.

ಸಹಿ/- ಕಾರ್ಯದರ್ಶಿ,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಳಗಾವಿ.

ಡಿಐಪಿಆರ್/ಬೆಳಗಾವಿ/2012/ಮಣಿಪಾಲ್/2025-26

ಸಹಿ/- ಆಡಳಿತಾಧಿಕಾರಿಗಳು,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಳಗಾವಿ.

ಬಜೆಟ್ ಮಾತು



ಇದು ಸಿದ್ದರಾಮಯ್ಯನವರು ತಮ್ಮದು 17ನೇ ಬಜೆಟ್ ಎಂದು ಹೇಳಿಕೊಂಡು ಬೀಗಲು ಮಂಡಿಸಿದ ಬಜೆಟ್ಟೇ ಹೊರತು, ಇದರಿಂದ ಕನ್ನಡಿಗರ ಹಾಗೂ ಕರ್ನಾಟಕದ ಪ್ರಗತಿಗೆ ನಯಾಪೈಸೆಯೂ ಪ್ರಯೋಜನವಿಲ್ಲ, ರಾಜ್ಯದ ಅಭಿವೃದ್ಧಿಯನ್ನು ಕಡೆಗಣಿಸಿರುವುದು ಈ ಬಜೆಟ್‌ನಲ್ಲಿ ಗೋಚರವಾಗುತ್ತದೆ.

■ **ವಿ.ಸೋಮಣ್ಣ,** ರೈಲ್ವೆ ಇಲಾಖೆ ರಾಜ್ಯ ಸಚಿವ

ಯಾವ ಇಲಾಖೆಗೆ ಎಷ್ಟು ಅನುದಾನ

ಪಂಚಾಯತ್ ರಾಜ್	ನೀರಾವರಿ	ವಸತಿ
26,559 ಕೋಟಿ ರೂ.	22,436 ಕೋಟಿ ರೂ.	22,203 ಕೋಟಿ ರೂ.

■ ಹೊನ್ನಾಳಿ, ತೊರವಿಯಲ್ಲಿ 2 ಶೀತಲಗೃಹ ನಿರ್ಮಾಣ



ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆಗಾಗಿ ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲೂಕು ಮತ್ತು ವಿಜಯಪುರ ಜಿಲ್ಲೆಯ ತೊರವಿಯಲ್ಲಿ ಒಟ್ಟು 12 ಸಾವಿರ ಮೆಟ್ರಿಕ್ ಟನ್ ಸಾಮರ್ಥ್ಯದ 2 ಶೀತಲ ಗೃಹಗಳನ್ನು 64 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸುವುದಾಗಿ ಸರ್ಕಾರ ಘೋಷಣೆ ಮಾಡಿದೆ. ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಎಲ್ಲಾ ಕೃಷಿ ಮಾರುಕಟ್ಟೆಗಳಲ್ಲಿ ಶೀತಲಗೃಹಗಳನ್ನು ನಿರ್ಮಿಸಲಾಗುವುದು. ಹೆಚ್ಚಿನ ಪ್ರವಾಸಿಗರನ್ನು, ಪರಿಸರ ಪ್ರೇಮಿಗಳನ್ನು ಆಕರ್ಷಿಸುವ ದೃಷ್ಟಿಯಿಂದ ಮೈಸೂರಿನ ಲಿಂಗಾಂಬುಧಿ ಸಸ್ಯ ತೋಟವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುವುದು. ಅಡಕೆ ಬೆಳೆಯ ಎಲೆ ಚುಕ್ಕಿ, ಹಳದಿ ಎಲೆ ಹಾಗೂ ಕೊಳೆ ರೋಗಗಳ ಮತ್ತು ತೆಂಗು ಬೆಳೆಯ ಕಪ್ಪು ತಲೆ ಹುಳು ಹಾಗೂ ಬಿಳಿ ನೊಣಗಳ ನಿಯಂತ್ರಣಕ್ಕಾಗಿ ವಿವಿಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರಗಳ ಸಹಯೋಗದೊಂದಿಗೆ ಸಮುದಾಯ ಆಧಾರಿತ ರೋಗ-ಕೀಟ ನಿಯಂತ್ರಣ ಕ್ರಮಗಳನ್ನು 10 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೊಳ್ಳಲಾಗುವುದು.



ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಒಂದೇ ಸೂರಿನಲ್ಲಿ ಗುಣಮಟ್ಟದ ಶಿಕ್ಷಣ

800 ಕರ್ನಾಟಕ ಪಬ್ಲಿಕ್ ಸ್ಕೂಲ್

ಉತ್ತಮ ಕಲಿಕೆ ಉಜ್ವಲ ಭವಿಷ್ಯ ಎಂಬ ಘೋಷವಾಕ್ಯದೊಂದಿಗೆ ಒಂದೇ ಸೂರಿನಲ್ಲಿ ಗುಣಮಟ್ಟದ ಶಿಕ್ಷಣ ನೀಡಲು ಎಡಿಬಿ ನೆರವಿನೊಂದಿಗೆ 500 ಶಾಲೆಗಳು, ಕೆಕೆಆರ್‌ಡಿಬಿ ನಿಧಿಯಿಂದ 200 ಶಾಲೆಗಳು ಹಾಗೂ ಕೆಎಂಇಆರ್‌ಸಿ ನಿಧಿಯಿಂದ 100 ಶಾಲೆಗಳು ಒಟ್ಟಾರೆ 800 ಶಾಲೆಗಳನ್ನು ಕೆಪಿಎಸ್ ಶಾಲೆಗಳನ್ನಾಗಿ ಉನ್ನತೀಕರಿಸಲಾಗುತ್ತಿದ್ದು, ಮುಂದಿನ 3ು ವರ್ಷಗಳಲ್ಲಿ ಒಟ್ಟಾರೆ 3,900 ಕೋಟಿ ರೂ.ಗಳನ್ನು ಮೀಸಲಿಟ್ಟಿದೆ.

ಸರ್ಕಾರಿ ಪ್ರಾಥಮಿಕ, ಪ್ರೌಢ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಹೊಸ ಕೊಠಡಿ ನಿರ್ಮಾಣ ಹಾಗೂ ಕೊಠಡಿಗಳ ದುರಸ್ತಿ ಕಾಮಗಾರಿಗಳಿಗೆ 565 ಕೋಟಿ ರೂ.ಗಳ ಅನುದಾನವನ್ನು ಮೀಸಲಿರಿಸಲಾಗಿದೆ.

ಶೌಚಾಲಯ ನಿರ್ಮಾಣಕ್ಕಾಗಿ 75 ಕೋಟಿ ರೂ. ಹಾಗೂ ಶಾಲೆಗಳಿಗೆ ಪೀಠೋಪಕರಣಗಳ ಖರೀದಿಸಲು 25 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುತ್ತಿದೆ. ಸರ್ಕಾರಿ ಪ್ರಾಥಮಿಕ, ಪ್ರೌಢ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳ ನಿರ್ವಹಣೆಗಾಗಿ 125 ಕೋಟಿ ರೂ.ಗಳ ಅನುದಾನವನ್ನು ಮೀಸಲಿರಿಸಲಾಗಿದ್ದು, ಈ ಅನುದಾನವನ್ನು ಶಾಲಾ ಹಾಗೂ ಕಾಲೇಜು ಅಭಿವೃದ್ಧಿ ಸಮಿತಿಗಳಿಗೆ ನೇರವಾಗಿ ವರ್ಗಾಯಿಸುವುದಾಗಿ ಸರ್ಕಾರ ಹೇಳಿದೆ.

ಸೈನಿಕ ಶಾಲೆಯ ಹಾಸ್ಟೆಲ್ ಕಟ್ಟಡಕ್ಕೆ 10 ಕೋಟಿ ರೂ.: ವಿಜಯಪುರದ ಸೈನಿಕ ಶಾಲೆಯ ಹಾಸ್ಟೆಲ್ ಕಟ್ಟಡಗಳನ್ನು ಹಂತ-ಹಂತವಾಗಿ ಪುನರ್ ನಿರ್ಮಿಸಲು ಪ್ರಸಕ್ತ ಸಾಲಿನಲ್ಲಿ 10 ಕೋಟಿ ರೂ. ಗಳನ್ನು ಮೀಸಲಿಟ್ಟಿದೆ.

ಇಂಗ್ಲಿಷ್ ಭಾಷಾ ತರಬೇತಿ ಕಾರ್ಯಕ್ರಮಕ್ಕೆ 24 ಕೋಟಿ ರೂ: ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ದ್ವಿಭಾಷಾ ತರಗತಿಗಳನ್ನು ಜಾರಿಗೊಳಿಸಲು ಪ್ರಾಥಮಿಕ ಶಾಲಾ ಶಿಕ್ಷಕರ ಸಾಮರ್ಥ್ಯ ವೃದ್ಧಿಗಾಗಿ ಇಂಗ್ಲಿಷ್ ಭಾಷಾ ತರಬೇತಿ ಕಾರ್ಯಕ್ರಮವನ್ನು 24 ಕೋಟಿ ರೂ. ವೆಚ್ಚದಲ್ಲಿ ಹಮ್ಮಿಕೊಳ್ಳಲಾಗಿದೆ. ಜತೆಗೆ ಐಐಟಿ ಧಾರವಾಡದ ಸಹಯೋಗದೊಂದಿಗೆ 8 ರಿಂದ 12ನೇ ತರಗತಿಯವರೆಗೆ ವಿದ್ಯಾಭ್ಯಾಸಮಾಡುತ್ತಿರುವಸುಮಾರು 12.28 ಲಕ್ಷ ವಿದ್ಯಾರ್ಥಿಗಳಿಗೆ ಅಂದಾಜು 5 ಕೋಟಿ ರೂ.ಗಳ ವೆಚ್ಚದಲ್ಲಿ ಕಲಿಕಾ ಪ್ರಕ್ರಿಯೆಯಲ್ಲಿ ಎಐ ತಂತ್ರಜ್ಞಾನವನ್ನು ಅಳವಡಿಸಿಕೊಂಡು ವೈಯಕ್ತಿಯ ಸ್ವಯಂ ಕಲಿಕಾ ಟ್ಯೂಟರ್ ಸೌಲಭ್ಯವನ್ನು ಒದಗಿಸಲಿದೆ. ವಿದ್ಯಾರ್ಥಿಗಳಲ್ಲಿ ಒತ್ತಡ ನಿವಾರಿಸಿ ಮಾನಸಿಕ ಆರೋಗ್ಯವನ್ನು ಸುಧಾರಿಸಲು 204 ಬಿಆರ್‌ಸಿ ಕೇಂದ್ರಗಳಲ್ಲಿ ಪ್ರತಿ ಕೇಂದ್ರಕ್ಕೆ ಒಬ್ಬರು ಅರ್ಹ ಮಾನಸಿಕ ಆರೋಗ್ಯ ಸಲಹೆಗಾರರನ್ನು ನೇಮಿಸಲು ಸರ್ಕಾರ ನಿರ್ಧರಿಸಿದೆ.



50 ಪ್ರೌಢಶಾಲೆಗಳ ಉನ್ನತೀಕರಣ

ಕಳೆದ ಸಾಲಿನ ಬಜೆಟ್‌ನಲ್ಲಿ ಘೋಷಿಸಿರುವಂತೆ 184 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢ ಶಾಲೆಗಳನ್ನಾಗಿ ಹಾಗೂ 50 ಪ್ರೌಢ ಶಾಲೆಗಳನ್ನು ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಅನುಕೂಲ ಕಲ್ಪಿಸಲಾಗಿದೆ. ಇನ್ನೂ ಧಾರವಾಡ ಸೇರಿ ರಾಜ್ಯದ ಹಲವೆಡೆ ವಿದ್ಯಾರ್ಥಿಗಳು ನೇಮಕಾತಿಗಾಗಿ ಪ್ರತಿಭಟನೆ ನಡೆಸಿದ ಬೆನ್ನಲ್ಲೇ ಶಿಕ್ಷಕರ 2026-27ನೇ ಸಾಲಿನಲ್ಲಿ ಶಾಲಾ-ಕಾಲೇಜುಗಳಲ್ಲಿ ಖಾಲಿ ಇರುವ 15 ಸಾವಿರ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ತೀರ್ಮಾನಿಸಿದೆ.

800 ಶಾಲೆಗಳನ್ನು ಕೆಪಿಎಸ್ ಶಾಲೆಗಳನ್ನಾಗಿ ಉನ್ನತೀಕರಣಕ್ಕೆ
3,900 ಕೋಟಿ ರೂ.

ಕೊಠಡಿಗಳ ದುರಸ್ತಿ ಕಾಮಗಾರಿಗಳಿಗೆ
565 ಕೋಟಿ ರೂ.ಗಳ ಅನುದಾನ

ಇಂಗ್ಲಿಷ್ ಭಾಷಾ ತರಬೇತಿ ಕಾರ್ಯಕ್ರಮಕ್ಕೆ
24 ಕೋಟಿ ರೂ.ಮೀಸಲು

ಮಾದಕ ವಸ್ತುಗಳ ತಡೆಗೆ ಕ್ರಮ

ವಿದ್ಯಾರ್ಥಿಗಳ ಆರೋಗ್ಯ, ಭವಿಷ್ಯ ಮತ್ತು ವ್ಯಕ್ತಿತ್ವ ರೂಪಿಸುವ ಸ್ಥಳವಾಗಿರುವ ಶಾಲಾ-ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಮಾದಕ ವಸ್ತುಗಳ ಬಳಕೆಯನ್ನು ತಡೆಯಲು ವಿದ್ಯಾರ್ಥಿಗಳಿಗೆ ಶಿಕ್ಷಣ ಮತ್ತು ಜಾಗೃತಿ ಕಾರ್ಯಕ್ರಮ, ಕಠಿಣ ನಿಯಮ ಹಾಗೂ ಸಹಾಯ ಕೇಂದ್ರಗಳ ಮೂಲಕ ಮಾದಕ ವಸ್ತುಗಳ ಮೇಲೆ ಕಟ್ಟುನಿಟ್ಟಿನ ನಿರ್ಬಂಧ ಹೇರುವ ಸರ್ಕಾರ ಮುಂದಾಗಿದೆ.

ರಾಜ್ಯ ಬಜೆಟ್
2026-2027



ದಾಖಲೆಯ ಬಜೆಟ್



ಮಿನಿ ಬಜೆಟ್

15 ಹೊಸ ಕೋರ್ಸ್ ಪ್ರಾರಂಭ



ಸರ್ಕಾರದ 11 ಪಾಲಿಟೆಕ್ನಿಕ್‌ಗಳಲ್ಲಿ ಹಾಗೂ ಚಿತ್ರದುರ್ಗ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಸ್ತುತ ಹೆಚ್ಚಿನ ಬೇಡಿಕೆ ಹಾಗೂ ಉದ್ಯೋಗಾವಕಾಶವಿರುವ ಕೋರ್ಸ್ ಗಳಾದ ಎಐ, ಮಷಿನ್ ಲರ್ನಿಂಗ್, ಕ್ಲೌಡ್ ಕಂಪ್ಯೂಟಿಂಗ್, ಮೈನಿಂಗ್ ಇಂಜಿನಿಯರಿಂಗ್, ಆಟೋಮೇಷನ್ ಇಂಜಿನಿಯರಿಂಗ್ ಸೇರಿ ಮುಂತಾದ 15 ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲಿದೆ.


- ವಿದ್ಯಾರ್ಥಿ ಸಂಘಗಳ ಚುನಾವಣೆನಡೆಸಲು ಸರ್ಕಾರ ಅಸ್ತು
- 9 ಉತ್ಕೃಷ್ಟತಾ ಕೇಂದ್ರಗಳ ಸ್ಥಾಪನೆ

ವಸತಿನಿಲಯಗಳಲ್ಲಿ ಎಐ ಆಧಾರಿತ ಸಾಫ್ಟ್‌ವೇರ್




ಕರ್ನಾಟಕ ಆಡಳಿತ ಸುಧಾರಣಾ ಆಯೋಗ -2 ಸಲ್ಲಿಸಿರುವ 10 ವರದಿಗಳಲ್ಲಿನ 6,031 ಶಿಫಾರಸ್ಸುಗಳ ಪೈಕಿ 2,014 ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲಾಗಿದೆ. ಉಳಿದ ಶಿಫಾರಸ್ಸು ಅನುಷ್ಠಾನಕ್ಕಾಗಿ ಕ್ರಮ ಕೈಗೊಳ್ಳಲಾಗುವುದು. ಇದರೊಂದಿಗೆ ರಾಜ್ಯದ ಎಲ್ಲಾ ಅಂಗನವಾಡಿಗಳು, ಶಾಲೆಗಳು, ಕಾಲೇಜುಗಳು, ವಸತಿನಿಲಯಗಳಲ್ಲಿ ಎಐ ಆಧಾರಿತ ಸಾಫ್ಟ್‌ವೇರ್ ಜಾರಿಗೊಳಿಸಲಾಗುವುದು ಹಾಗೂ ಪ್ರತಿದಿನದ ಫಲಾನುಭವಿಗಳ ಮುಖಾಂತರ ಹಾಜರಾತಿ ವ್ಯವಸ್ಥೆಯನ್ನು ಹಾಜರಾತಿ ವಿವರಗಳನ್ನು ಸಾರ್ವಜನಿಕವಾಗಿ ಪ್ರಕಟಿಸಲಾಗುವುದು.

ಒಂದು ಕೋಟಿ ರೂ.ವೆಚ್ಚದಲ್ಲಿ ದತ್ತಾಂಶ ವಿಶ್ಲೇಷಣಾ ಕೋಶ




ಇ ಆಡಳಿತ ಇಲಾಖೆಯಲ್ಲಿ ಲಭ್ಯವಿರುವ ದತ್ತಾಂಶ ವಿಶ್ಲೇಷಿಸಿ ಅದರ ಆಧಾರದ ಮೇಲೆ ನಿರ್ಧಾರವನ್ನು ಕೈಗೊಳ್ಳಲು ಸುಮಾರು ಒಂದು ಕೋಟಿ ರೂ. ವೆಚ್ಚದಲ್ಲಿ ದತ್ತಾಂಶ ವಿಶ್ಲೇಷಣಾ ಕೋಶವನ್ನು ಸ್ಥಾಪಿಸಲಾಗುವುದು. ದತ್ತಾಂಶವನ್ನು ವಿಶ್ಲೇಷಿಸಿ ಅದರ ಆಧಾರದ ಮೇಲೆ ನಿರ್ಧಾರವನ್ನು ಕೈಗೊಳ್ಳಲು ನೀತಿಗಳ ರಚನೆ, ಮೇಲ್ವಿಚಾರಣೆ ಮತ್ತು ಸರ್ಕಾರದ ಯೋಜನೆಗಳ ನಿರ್ವಹಣೆಗೆಗಾಗಿ ಸಂಬಂಧಿಸಿದಂತೆ ದತ್ತಾಂಶ ವಿಶ್ಲೇಷಣಾ ಕೋಶವನ್ನು ಸ್ಥಾಪಿಸಲಾಗುವುದು.

ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕ ಉಚಿತ



ರಾಜ್ಯ ಸರ್ಕಾರವು ಬಜೆಟ್‌ನಲ್ಲಿ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ್ದು, ವಿದ್ಯಾರ್ಥಿಗಳ ಕಲಿಕೆಯ ದೃಷ್ಟಿಯಿಂದ 1 ರಿಂದ 10ನೇ ತರಗತಿಯವರೆಗೆ ಮೌಲ್ಯ ಶಿಕ್ಷಣ ಪುಸ್ತಕಗಳನ್ನು, ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ಉಚಿತವಾಗಿ ನೀಡಲು ಸರ್ಕಾರ ಹೇಳಿದೆ. ಸರ್ಕಾರಿ ಶಾಲೆಗಳ ಬಲವರ್ಧನೆಗಾಗಿ ವಿಶೇಷವಾಗಿ ದಾಖಲಾತಿ ಪ್ರಮಾಣ ಮತ್ತು ಕಲಿಕೆಯ ಫಲಿತಾಂಶಗಳನ್ನು ಹೆಚ್ಚಿಸಲು ರಾಜ್ಯ ಸರ್ಕಾರ, ಈಗಾಗಲೇ 1 ರಿಂದ 10ನೇ ತರಗತಿವರೆಗೆ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳನ್ನು ವಿತರಿಸುತ್ತಿದೆ. 2026-27ನೇ ಸಾಲಿನಿಂದ ವಿದ್ಯಾವಿಕಾಸ ಯೋಜನೆ ಅಡಿಯಲ್ಲಿ ಪೂರ್ವ ಪ್ರಾಥಮಿಕ ವಿದ್ಯಾರ್ಥಿಗಳಿಗೆ ಚಟುವಟಿಕೆ ಪುಸ್ತಕಗಳನ್ನು ಉಚಿತವಾಗಿ ನೀಡಲಿದೆ.



7 ರೈಲ್ವೆ ಕಾಮಗಾರಿಗೆ ₹600 ಕೋಟಿ

ಏಳು ರೈಲ್ವೆ ಮಾರ್ಗಗಳ ಭೂಸ್ವಾಧೀನಕ್ಕಾಗಿ 2,950 ಕೋಟಿ ರೂ. ಹಾಗೂ ನಿರ್ಮಾಣ ಕಾಮಗಾರಿಗೆ 600 ಕೋಟಿ ರೂ.ಮೀಸಲಿರಿಸಲಾಗಿದೆ.

ರೈಲ್ವೆ ಇಲಾಖೆಯೊಂದಿಗೆ 50:50 ಅನುಪಾತದಲ್ಲಿ ವೆಚ್ಚ ಹಂಚಿಕೆ ಆಧಾರದ ಮೇಲೆ 9 ರೈಲ್ವೆ ಮಾರ್ಗ ಕೈಗೊಳ್ಳಲಾಗುತ್ತಿದೆ. ಈ ಪೈಕಿ 7 ರೈಲ್ವೆ ಮಾರ್ಗಗಳಿಗೆ ಭೂಸ್ವಾಧೀನಕ್ಕಾಗಿ 2,950 ಕೋಟಿ ರೂ. ಹಾಗೂ ನಿರ್ಮಾಣ ಕಾಮಗಾರಿಗಳಿಗಾಗಿ 2,682 ಕೋಟಿ ರೂ. ವೆಚ್ಚ ಮಾಡಲಾಗಿದೆ. ಇದಕ್ಕಾಗಿ 600 ಕೋಟಿ ರೂ. ಮೀಸಲಿರಿಸಿದೆ.



7 ದೇಶೀಯ ವಿಮಾನ ನಿಲ್ದಾಣಗಳ ಅಭಿವೃದ್ಧಿಗಾಗಿ 200 ಕೋಟಿ ರೂ.: ರಾಜ್ಯದಲ್ಲಿನ 7 ದೇಶೀಯ ವಿಮಾನ ನಿಲ್ದಾಣಗಳ ಅಭಿವೃದ್ಧಿಗಾಗಿ200ಕೋಟಿರೂ.ಅನುದಾನ ನಿಗದಿಪಡಿಸಲಾಗಿರುತ್ತದೆ. ವಿಜಯ ಪುರ ಹಾಗೂ ಶಿವಮೊಗ್ಗ ವಿಮಾನ ನಿಲ್ದಾಣದ ಆವರಣದಲ್ಲಿ ವಿಮಾನ ತರಬೇತಿ ಶಾಲೆ, ಉತ್ಪಾದನೆ ಚಟುವಟಿಕೆಗಳನ್ನು ಪಿಪಿಪಿ ಮಾದರಿಯಲ್ಲಿ ಸ್ಥಾಪಿಸಲು ಕ್ರಮಕೈಗೊಳ್ಳಲಾಗುವುದು.

» 7 ರೈಲ್ವೆ ಮಾರ್ಗಗಳಿಗೆ ಭೂಸ್ವಾಧೀನಕ್ಕಾಗಿ 2,950 ಕೋಟಿ ರೂ. ಹಾಗೂ ನಿರ್ಮಾಣ ಕಾಮಗಾರಿಗಳಿಗಾಗಿ 2,682 ಕೋಟಿ ರೂ.

ಉತ್ತರ ಕನ್ನಡದ ತದಡಿ ಪ್ರದೇಶದಲ್ಲಿ ವಸತಿ ವ್ಯವಸ್ಥೆ, ಪ್ರವಾಸಿ ಮಾಹಿತಿ ಕೇಂದ್ರ, ವಾಕಿಂಗ್ ಕಾರಿಡಾರ್ ಅಭಿವೃದ್ಧಿಪಡಿಸಲಾಗುವುದು.

ಬೈಯಪ್ಪನಹಳ್ಳಿ-ಹೊಸೂರು, ಯಶವಂತಪುರ- ಚನ್ನಸಂದ್ರ ದ್ವಿಪಥೀಕರಣ ಯೋಜನೆಗಳಡಿಯಲ್ಲಿ 70 ಕಿ.ಮೀ. ರೈಲು ಮಾರ್ಗಗಳ ಯೋಜನೆಗೆ 812 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಪ್ರಸಕ್ತ ಸಾಲಿನಲ್ಲಿ ಈ ಕಾಮಗಾರಿಗಳಿಗೆ 100 ಕೋಟಿ ರೂ. ಒದಗಿಸಲಾಗಿದೆ. ಬಂದರು ಮತ್ತು ಸರಕು ಸಾಗಾಣಿಕೆ ವಲಯದ ಅಭಿವೃದ್ಧಿಗಾಗಿ ಸಮಗ್ರ ಮಲ್ಟಿಮೋಡಲ್ ಲಾಜಿಸ್ಟಿಕ್ಸ್ ನೀತಿ ರೂಪಿಸಲಾಗುವುದು. ಜೊತೆಗೆ ಕರ್ನಾಟಕ ರಾಜ್ಯ ಸಾಗರೋತ್ತರ ಸಂಪನ್ಮೂಲ ಅಭಿವೃದ್ಧಿ, ಬಳಕೆ ನೀತಿ ರೂಪಿಸಲಾಗುವುದು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ವಿಧಾನ ಸಭೆಯಲ್ಲಿ 2026-27ನೇ ಸಾಲಿನ ಆಯವ್ಯಯ ಮಂಡಿಸಿದರು.



ಬಜೆಟ್ ಮಾತು

ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿರುವುದು ದೂರದೃಷ್ಟಿ ಇಲ್ಲದ, ರಾಜ್ಯದ ಸಮಗ್ರ ಅಭಿವೃದ್ಧಿಯ ಮುನ್ನೋಟ ಇಲ್ಲದ ಸಪ್ಪೆ, ಚಿಲ್ಲರೆ ಬಜೆಟ್ ಆಗಿದೆ.

ಟಿ.ಎ.ಶರವಣ, ವಿಧಾನ ಪರಿಷತ್ ಸದಸ್ಯ

2026-27ನೇ ಸಾಲಿನ ಬಜೆಟ್‌ನಲ್ಲಿ ಮಾನವ ವನ್ಯಜೀವಿ ಸಂಘರ್ಷ ನಿಯಂತ್ರಿಸಲು 1500 ಕೋಟಿ ರೂ. ಘೋಷಿಸಿದ್ದು, ಈ ವರ್ಷ 269 ಕೋಟಿ ಮೀಸಲಿಟ್ಟಿರುವುದು ಸ್ವಾಗತಾರ್ಹವಾಗಿದೆ.

■ **ಈಶ್ವರ ಬಿ ಖಂಡ್ರೆ,** ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ

2026-27ನೇ ಸಾಲಿನ ಬಜೆಟ್‌ನಲ್ಲಿ ನೀಡಲಾಗಿರುವ ಮಹತ್ವದ ಯೋಜನೆಗಳು ರಸ್ತೆ ಸಂಪರ್ಕ, ಸುರಕ್ಷತೆ, ಸೌಕರ್ಯ ಅಭಿವೃದ್ಧಿಗೆ ಹೊಸ ವೇಗ ನೀಡಲಿವೆ.

■ **ಸತೀಶ್ ಜಾರಕಿಹೊಳಿ,** ಲೋಕೋಪಯೋಗಿ ಸಚಿವ

ಸುಸ್ಥಿರ ಪ್ರಗತಿಯ ಕನಸನ್ನು ಕಂಡಿದ್ದ ಮಹಾತ್ಮ ಗಾಂಧಿಯವರ ಹೆಸರನ್ನು ಗ್ರಾಮಗಳಲ್ಲಿ ಚಿರಸ್ಥಾಯಿಯಾಗಿಸುವ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಮಹಾತ್ಮ ಗಾಂಧಿ ಗ್ರಾಪಂ ಎಂದು ಮರುನಾಮಕರಣ ಮಾಡಲಾಗುವುದು.

■ **ಪ್ರಿಯಾಂಕ್ ಖರ್ಗೆ,** ಐಟಿ-ಬಿಟಿ ಸಚಿವ

4.48 ಲಕ್ಷ ಕೋಟಿಯ ರಾಜ್ಯದ ಬಜೆಟ್‌ನಲ್ಲಿ ಶಿಕ್ಷಣ, ಆರೋಗ್ಯ, ಕೃಷಿ, ಸಹಕಾರ, ಪರಿಶಿಷ್ಟರ ಕಲ್ಯಾಣದ ಆದಿಯಾಗಿ ಎಲ್ಲಾ ವಲಯಗಳಿಗೂ ಕೂಡಾ ನ್ಯಾಯಬದ್ಧವಾದ ಅನುದಾನ ಹಂಚಿಕೆ ಮಾಡಲಾಗಿದೆ.

■ **ಡಾ.ಎಚ್. ಸಿ. ಮಹದೇವಪ್ಪ,** ಸಚಿವ

ಕಾನೂನು ಸುವ್ಯವಸ್ಥೆ ಬಲಪಡಿಸಲು ಮಹತ್ವದ ಯೋಜನೆ

8 ಸಾವಿರ ಹೊಸ ಹುದ್ದೆ ನೇಮಕ

ರಾಜ್ಯದ ಕಾನೂನು ಸುವ್ಯವಸ್ಥೆಯನ್ನು ಬಲಪಡಿಸಲು ಮತ್ತು ಪೊಲೀಸ್ ಇಲಾಖೆಯನ್ನು ಆಧುನೀಕರಣಗೊಳಿಸಲು ಸರ್ಕಾರವು ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಹತ್ತಾರು ಮಹತ್ವದ ಯೋಜನೆಗಳನ್ನು ಪ್ರಕಟಿಸಿದೆ.

ಬೃಹತ್ ನೇಮಕಾತಿ ಪ್ರಕ್ರಿಯೆ ಆರಂಭ: ಕಳೆದ 3 ವರ್ಷಗಳಲ್ಲಿ 5,911 ಹುದ್ದೆಗಳನ್ನು ಭರ್ತಿ ಮಾಡಲಾಗಿದ್ದು, ಈ ವರ್ಷ ಗೃಹ ಇಲಾಖೆಯಲ್ಲಿ ಖಾಲಿ ಇರುವ ಒಟ್ಟು 8,000 ವಿವಿಧ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲಾಗುವುದು ಎಂದು ಸರ್ಕಾರ ತಿಳಿಸಿದೆ. ಈ ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ಮತ್ತು ಕ್ರಮಬದ್ಧವಾಗಿ ನಡೆಸಲು ಶಾಶ್ವತ ಪೊಲೀಸ್ ಮತ್ತು ಪೊಲೀಸ್ ಸಹಾಯಕ ಸೇವೆಗಳ ನೇಮಕಾತಿ ಮಂಡಳಿಯನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ.

ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ: ಪ್ರಸಕ್ತ ಸಾಲಿನಲ್ಲಿ 250 ಕೋಟಿ ರೂ. ವೆಚ್ಚದಲ್ಲಿ ವಸತಿಗೃಹಗಳ ನಿರ್ಮಾಣ ಕಾಮಗಾರಿಗಳನ್ನು ಮುಂದುವರಿಸಲಾಗುವುದು. ವಿಶೇಷವಾಗಿ ಬೆಳಗಾವಿಯ ಸುವರ್ಣ ಸೌಧದಲ್ಲಿ ಅಧಿವೇಶನದ ಬಂದೋಬಸ್ತ್‌ಗೆ ಬರುವ 1,000 ಸಿಬ್ಬಂದಿಗಾಗಿ 20 ಕೋಟಿ ರೂ. ವೆಚ್ಚದಲ್ಲಿ ಶಾಶ್ವತ ಬ್ಯಾರಕ್ ನಿರ್ಮಿಸಲು ಉದ್ದೇಶಿಸಲಾಗಿದೆ.



ಮಾದಕದ್ರವ್ಯ ಮುಕ್ತ ಕರ್ನಾಟಕ

ಮಾದಕ ದ್ರವ್ಯ ವಿರೋಧಿ ಕಾರ್ಯಪಡೆಯನ್ನು 10 ಕೋಟಿ ರೂ. ವೆಚ್ಚದಲ್ಲಿ ಬಲಪಡಿಸಲಾಗುವುದು. ಬೆಂಗಳೂರಿನ ಟ್ರಾಫಿಕ್ ಸಮಸ್ಯೆ ನಿವಾರಣೆಗೆ 25 ಕೋಟಿ ರೂ. ವೆಚ್ಚದಲ್ಲಿ ಸಂಯೋಜಿತ ಡಿಜಿಟಲ್ ವೇದಿಕೆ, ಕಾರ್ಪೊರೇಟ್ ಸಹಯೋಗದೊಂದಿಗೆ ನಗರ ಪೊಲೀಸಿಂಗ್ ನಾವೀನ್ಯತೆ ಸಂಸ್ಥೆಯನ್ನು ಸೃಜಿಸಲಾಗುವುದು.

ಇಲಾಖೆ ಆಧುನೀಕರಣಕ್ಕೆ 142 ಕೋಟಿ ರೂ.: ನಿವೇಶನ ಲಭ್ಯವಿರುವ 10 ಪೊಲೀಸ್ ಠಾಣೆಗಳಿಗೆ 30 ಕೋಟಿ ರೂ. ವೆಚ್ಚದಲ್ಲಿ ಹೊಸ ಕಟ್ಟಡಗಳನ್ನು ನಿರ್ಮಿಸಲಾಗುವುದು. 75 ಕೋಟಿ ರೂ.ಗಳ ವೆಚ್ಚದಲ್ಲಿ ಹೊಸ ವಾಹನಗಳನ್ನು ಒದಗಿಸಲಾಗುತ್ತಿದೆ.

ವಿದ್ಯಾರ್ಥಿಗಳಿಗೆ ಅಗತ್ಯವಿರುವ ಮೂಲಸೌಲಭ್ಯಕ್ಕೆ ಆದ್ಯತೆ

ವಿದ್ಯಾರ್ಥಿ ಸಂಘಗಳ ಚುನಾವಣೆ

ವಿದ್ಯಾರ್ಥಿಗಳಲ್ಲಿ ನಾಯಕತ್ವ, ಹೊಣೆಗಾರಿಕೆ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳನ್ನು ಬೆಳೆಸುವ ನಿಟ್ಟಿನಲ್ಲಿ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆ ನಡೆಸಲು ಸರ್ಕಾರ ಉದ್ದೇಶಿಸಿದೆ.

ಕರ್ನಾಟಕ ಉನ್ನತ ಶಿಕ್ಷಣ ಪರಿವರ್ತನೆ ಯೋಜನೆ ಅಡಿ 40 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಮತ್ತು 11 ಪಾಲಿಟೆಕ್ನಿಕ್‌ಗಳನ್ನು ಮಾದರಿ ಸಂಸ್ಥೆಗಳನ್ನಾಗಿ ಅಭಿವೃದ್ಧಿಗೊಳಿಸಲಾಗುತ್ತಿದೆ. ವಿದ್ಯಾರ್ಥಿಗಳಲ್ಲಿ ಉದ್ಯಮಶೀಲತೆ, ಸ್ಟಾರ್ಟ್‌ಅಪ್ ಸಂಸ್ಕೃತಿಯನ್ನು ಪ್ರೋತ್ಸಾಹಿಸಲು ಎಡಿಬಿ ನೆರವಿನೊಂದಿಗೆ 9 ಉತ್ಕೃಷ್ಟತಾ ಕೇಂದ್ರಗಳನ್ನು ಸ್ಥಾಪಿಸಲಿದೆ.

ಶೇ.50ಕ್ಕಿಂತ ಹೆಚ್ಚು ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿರುವ 25 ಸರ್ಕಾರಿ ಪದವಿ ಕಾಲೇಜು, 3 ಪಾಲಿಟೆಕ್ನಿಕ್ ಹಾಗೂ 3 ಇಂಜಿನಿಯರಿಂಗ್ ಕಾಲೇಜುಗಳಲ್ಲಿ ತಲಾ ಒಂದು ಕೋಟಿ ರೂ.ಗಳಂತೆ ಒಟ್ಟು 31 ಕೋಟಿ ರೂ.ಗಳ ವೆಚ್ಚದಲ್ಲಿ ವಿದ್ಯಾರ್ಥಿನಿಯರಿಗೆ ಅವಶ್ಯವಿರುವ ಮೂಲ ಸೌಲಭ್ಯಗಳನ್ನು ಒದಗಿಸಲಿದೆ. ಒಂದು ಸಾವಿರಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಒಟ್ಟು 50 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅಗತ್ಯವಿರುವ ಪೀಠೋಪಕರಣಗಳು ಹಾಗೂ ಕಟ್ಟಡಗಳ ದುರಸ್ತಿ/ನವೀಕರಣ ಕಾಮಗಾರಿಗಳನ್ನು 100 ಕೋಟಿ ರೂ.ಗಳ ವೆಚ್ಚದಲ್ಲಿ ಮುಂದಿನ 3ವರ್ಷಗಳಲ್ಲಿ ಕೈಗೊಳ್ಳಲು ಕ್ರಮವಹಿಸಲಾಗಿದೆ. ವಿಜ್ಞಾನ, ತಾಂತ್ರಿಕ, ಗಣಿತ ಮತ್ತು ಇಂಜಿನಿಯರಿಂಗ್ ವಿಭಾಗಗಳಲ್ಲಿನ ಆಯ್ದ 3 ಸಾವಿರ ಮಹಿಳಾ ಪದವೀಧರರಿಗೆ ಕೌಶಲಾಭಿವೃದ್ಧಿ, ವೃತ್ತಿನಿರತ ತರಬೇತಿಗಳನ್ನು ಒಟ್ಟು 13.50 ಕೋಟಿ ರೂ. ವೆಚ್ಚದಲ್ಲಿ ಜಾರಿಗೊಳಿಸಲು ತಿಳಿಸಿದೆ.



ಮಾತೃತ್ವ ರಜೆ ಸೌಲಭ್ಯ

ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಅತಿಥಿ ಉಪನ್ಯಾಸಕರುಗಳಿಗೆ 90 ದಿನಗಳ ಮಾತೃತ್ವ ರಜೆಯ ಸೌಲಭ್ಯವನ್ನು ಮುಂದಿನ ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಲಿದೆ.

2026-2027 ರಾಜ್ಯ ಬಜೆಟ್ ನಾವು ಕಂಡಂತೆ



72 ಸಾವಿರ ಕೋಟಿ ರೂ.ಕೊರತೆ ಬಜೆಟ್ ಮಂಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಾರಿ 1.32 ಲಕ್ಷ ಕೋಟಿ ಸಾಲ ಮಾಡುವುದೇ ಸಾಧನೆ ಎನ್ನುವುದನ್ನು ಒತ್ತಿ ಹೇಳುತ್ತಿದ್ದು ಇದೊಂದು ದಿಕ್ಕು ದಿಸೆ ಇಲ್ಲದ ಬಜೆಟ್ ಆಗಿದೆ. ಒದ್ದಾಡುತ್ತಿರುವ ಸರ್ಕಾರ ಕೃಷಿಗೆ ಕೇವಲ 17,780 ಕೋಟಿ ರೂ. ನಿಗದಿ ಮಾಡುವ ಮೂಲಕ ಕೃಷಿ ವಲಯವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಕೃಷ್ಣಾ ಮೇಲ್ದಂಡೆ, ಭದ್ರಾ ಮೇಲ್ದಂಡೆ, ಮಹದಾಯಿ ಯೋಜನೆಗಳ ಕುರಿತಂತೆ ಯಾವುದೇ ಸ್ಪಷ್ಟತೆ ಇಲ್ಲ. ಮುಂಬರುವ ಸ್ಥಳೀಯ ಚುನಾವಣೆ ದೃಷ್ಟಿಯಿಂದ ಇಂದಿರಾ ಕಿಟ್, ಕ್ಯಾಂಟೀನ್ ಇತ್ಯಾದಿಗೆ ಆದ್ಯತೆ ನೀಡಿದೆ.

■ ಸಿ.ಸಿ. ಪಾಟೀಲ, ಶಾಸಕ



ಸಿಎಂ ಸಿದ್ದರಾಮಯ್ಯ ಅವರು ಮಂಡಿಸಿದ ಬಜೆಟ್ ಜನಪರ ಹಾಗೂ ಜನಸ್ನೇಹಿಯಾಗಿದೆ. ಶಾಸಕ ಯಾಸೀರ್ ಅಹ್ಮದ್ ಖಾನ್ ಪಠಾಣರ ಮನವಿ ಮೇರೆಗೆ ಸಂತ ಶಿಶುನಾಳ ಶರೀಫರ ಹೆಸರಿನಲ್ಲಿ ರಾಜ್ಯದ ವಿವಿಧೆಡೆ ವಸತಿ ಶಾಲೆ ಆರಂಭಿಸಿರುವುದು ನಮಗೆ ಹೆಮ್ಮೆ ಮೂಡಿಸಿದೆ. ಗದಗ-ವಾಡಿ ರೈಲ್ವೆ ಮಾರ್ಗದ ಭೂಸ್ವಾಧೀನದ ಸಂಪೂರ್ಣ ವೆಚ್ಚವನ್ನು ಹಾಗೂ ಶೇ.50ರ ನಿರ್ಮಾಣ ವೆಚ್ಚವನ್ನು ರಾಜ್ಯ ಸರ್ಕಾರ ಭರಿಸುವುದಾಗಿ ತಿಳಿಸುವ ಜೊತೆಗೆ ಹಾವೇರಿ ಮತ್ತು ಗದಗ ಜಿಲ್ಲೆಯ ಶಾಸಕರ ಮನವಿ ಮೇರೆಗೆ ವಿವಿಧ ಯೋಜನೆಗಳ ಘೋಷಣೆ ಮಾಡಿರುವುದು ನಮಗೆ ಮತ್ತು ಈ ಭಾಗದ ರೈತ ಸಮುದಾಯಕ್ಕೆ ಸಂತಸ ಮೂಡಿಸಿದೆ.

■ ಆನಂದಸ್ವಾಮಿ ಗಡ್ಡದ್ದೇವರಮಠ, ಕಾಂಗ್ರೆಸ್ ಮುಖಂಡರು

ಸಿಎಂ ಸಿದ್ದರಾಮಯ್ಯನವರು ಮಂಡಿಸಿರುವ 4.48 ಲಕ್ಷ ಕೋಟಿ ರೂ. ಗಾತ್ರದ 17ನೇ ಬಜೆಟ್ ಕರ್ನಾಟಕ ರಾಜ್ಯದ ಸಾಲವನ್ನು 8,24,389 ಕೋಟಿ ರೂ.ಗೆ ಹೆಚ್ಚಿಸಿರುವ ಸಾಲದ ದಾಖಲೆಯ ಮುಂಗಡಪತ್ರ ಇದಾಗಿದೆ. ರಾಜ್ಯದ ಪ್ರಗತಿ ಮತ್ತು ಅಭಿವೃದ್ಧಿಗೆ ಆದ್ಯತೆ ಕೊಡದೇ ಕೇವಲ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಸಿಮೀತವಾದ ಬಜೆಟ್ ಆಗಿದೆ. ರಾಜ್ಯಕ್ಕೆ ತೆರಿಗೆ ಪಾವತಿಸುವ ಕೈಗಾರಿಕೋದ್ಯಮಿಗಳಿಗೆ ಆದ್ಯತೆ ನೀಡದೇ ಅವರನ್ನು ಕಡೆಗಣಿಸಲಾಗಿದೆ.

■ ಶಿವಪ್ಪ ಮುಳಗುಂದ, ಬಿಜೆಪಿ ಹಿರಿಯ ಮುಖಂಡರು.



ಇದೊಂದು ಕಾರ್ಮಿಕರ ಹಿತವನ್ನು ಬಯಸಿದ ಬಜೆಟ್. ದುಡಿಯುವ ಕೈಗಳಿಗೆ ಮತ್ತಷ್ಟು ಶಕ್ತಿ ನೀಡಿದ ಬಜೆಟ್ ಇದಾಗಿದ್ದು, ನಾಡಿನ ಜನರು ನಿರೀಕ್ಷೆ ಮಾಡಿದ ರೀತಿಯಲ್ಲಿ ಕಾಂಗ್ರೆಸ್ ಸರ್ಕಾರ ಬಜೆಟ್ ಮಂಡಿಸಿದೆ. ಅಲ್ಲದೆ ಹಲವಾರು ಯೋಜನೆಗಳನ್ನು ಘೋಷಿಸುವ ಮೂಲಕ ಅಭಿವೃದ್ಧಿ ಕಾರ್ಯಗಳಿಗೆ ಮೆರಗು ನೀಡಿದ್ದಾರೆ.

■ ಮಲೀಕ್ ಯಲಿಗಾರ. ಕಾರ್ಯದರ್ಶಿಗಳು. ರೋಣ ಬ್ಲಾಕ್ ಕಾಂಗ್ರೆಸ್ ಘಟಕ ಸಾಮಾಜಿಕ ಜಾಲತಾಣ.



ಜನ ಸಾಮಾನ್ಯರಿಗೆ ಹೊರೆಯಾಗದ ರೀತಿಯಲ್ಲಿ ಶಿಕ್ಷಣ, ಆರೋಗ್ಯ, ಮೂಲ ಸೌಕರ್ಯಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗಿದ್ದು, ಅತಿಥಿ ಶಿಕ್ಷಕರ ಹಾಗೂ ಬಿಸಿಯೂಟ ಸಿಬ್ಬಂದಿಗಳ ಗೌರವ ಧನ ಹೆಚ್ಚಿಸಿದ್ದು ಸಂತಸ ತಂದಿದೆ. ಒಟ್ಟಿನಲ್ಲಿ ಸಿದ್ದರಾಮಯ್ಯನವರ ದಾಖಲೆ ಬಜೆಟ್ ಜನಸ್ನೇಹಿಯಾಗಿದೆ.

■ ಬಸವರಾಜ ಗುರಿಕಾರ.ಅಧ್ಯಕ್ಷ. ಅಖಿಲ ಭಾರತ ಶಿಕ್ಷಕರ ಫೆಡರೇಷನ್ ನವದೆಹಲಿ



ಇದೊಂದು ದಾಖಲೆಗಾಗಿ ಮಂಡಿಸಿದ ಬಜೆಟ್ ಹೊರತು ಮತ್ತೇನಿಲ್ಲ. ಈ ಬಜೆಟ್‌ನಲ್ಲಿ ರಾಜ್ಯದ ಜನತೆ ನಿರೀಕ್ಷೆ ಮಾಡುವಂತಹ ಉಪಯುಕ್ತ ಯೋಜನೆಗಳಿಲ್ಲ. ಬದಲಾಗಿ 1.32 ಲಕ್ಷ ಕೋಟಿ ರೂ.ಗಳ ಸಾಲದ ಬಜೆಟ್ ಎನ್ನುವುದನ್ನು ಬಿಟ್ಟರೆ ಸಮಾಜವಾದಿ ಅಥವಾ ಸಮಾನತೆಯ ಬಜೆಟ್ ಅಲ್ಲ.

■ ಅಶೋಕ ನವಲಗುಂದ. ಮಾಜಿ ಕಾರ್ಯದರ್ಶಿ. ರಾಜ್ಯ ಬಿಜೆಪಿ ಘಟಕ ರೋಣ.



ಅಹಿಂದ್ ಹೆಸರಿನಲ್ಲಿ ಅಧಿಕಾರ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರ ಅದೇ ವರ್ಗಗಳಿಗೆ ಈ ಬಜೆಟ್‌ನಲ್ಲಿ ಅನ್ಯಾಯ ಮಾಡಿದ್ದಾರೆ. ಈ ಬಜೆಟ್‌ನಿಂದ ಅಹಿಂದ ವರ್ಗದ ಜನರು ಎನು ನಿರೀಕ್ಷೆ ಮಾಡುವಂತಿಲ್ಲ, ಬದಲಾಗಿ ಇದೋಂದು ದಾಖಲೆಯ ಬಜೆಟ್ ಮಾತ್ರ,ಅಭಿವೃದ್ಧಿ ಕಾರ್ಯಗಳು ಶೂನ್ಯವಾಗಿವೆ.

■ ಮಲ್ಲು ಮಾದರ. ಬಿಜೆಪಿ ಎಸ್ಸಿ ಘಟಕದ ಪ್ರಧಾನ ಕಾರ್ಯದರ್ಶಿಗಳು ರೋಣ



ಸಿಎಂ ಸಿದ್ದರಾಮಯ್ಯನವರು ಮಂಡಿಸಿರುವ ಬಜೆಟ್ ಅಭಿವೃದ್ಧಿ ಪರ್ವದ ಬಜೆಟ್ ಎನ್ನುವುದರಲ್ಲಿ ಸಂದೇಹವಿಲ್ಲ, ನಾಡಿನ ಎಲ್ಲ ವರ್ಗದ ಜನರ ಹಿತವನ್ನು ಬಯಸಿದ್ದಾರೆ. ಹಾಗೆ ಬಿಸಿಯೂಟ ಸಿಬ್ಬಂದಿಗಳ ಗೌರವಧನವನ್ನು ಹೆಚ್ಚಿಸಿದ್ದಾರೆ. ಕಾಂಗ್ರೆಸ್ ಸರ್ಕಾರ ಬಡವರ ಎನ್ನುವುದನ್ನು ದಾಖಲೆಯ ಬಜೆಟ್‌ನಲ್ಲಿ ಸಾಬೀತು ಪಡಿಸಿದ್ದಾರೆ.

■ ಸೋಮು ನಾಗರಾಜ.ಉಪಾಧ್ಯಕ್ಷ. ರೋಣ ಬ್ಲಾಕ್ ಯುವ ಕಾಂಗ್ರೆಸ್



ಈ ಬಾರಿಯ ಬಜೆಟ್‌ನಲ್ಲಿ ನಾಡು ಕಂಡಿರುವ ಅಪ್ರತೀಮ ಕವಿಗಳ ಹೆಸರಿನಲ್ಲಿ ನಾಡಿನ ಸಂಸ್ಕೃತಿ ಪರಿಚಯಿಸಲು ಅನುದಾನವನ್ನು ಒದಗಿಸಲಾಗಿದೆ. ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಲಾಗಿದೆ. ಖಾಲಿಯಿರುವ ಹುದ್ದೆಗಳ ಭರ್ತಿಗೆ ಹಸಿರು ನಿಶಾನೆ ತೋರಲಾಗಿದೆ. ಈ ಬಾರಿಯ ಬಜೆಟ್ ನಾಡಿನ ಕಂಪನ್ನು ಪಸರಿಸಿದೆ.

■ ಅಂದಪ್ಪ ಬಿಚ್ಚೂರ.ತಾಪಂ ಮಾಜಿ ಸದಸ್ಯ. ನಿಡಗುಂದಿ





ಗದಗ: ನಗರದ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಿಂದ ಹಮ್ಮಿಕೊಳ್ಳಲಾಗಿದ್ದ ಯುವನಿಧಿ ಯೋಜನೆಯ ಕುರಿತು ಕಾರ್ಯಾಗಾರ ನಡೆಯಿತು. ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ.ಅಸೂಟಿ, ತಾಲೂಕು ಗ್ಯಾರಂಟಿ ಯೋಜನೆಗಳ ಸಮಿತಿಯ ಸದಸ್ಯ ಕೃಷ್ಣಗೌಡ ಪಾಟೀಲ, ಆನಂದ ಹೊಂಬಳ, ಪಿ.ಡಿ.ಕರಿಗಾರ, ತಾಲೂಕು ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ, ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ವಿದ್ಯಾಧರ ದೊಡಮನಿ, ಉದ್ಯೋಗ ವಿನಿಮಯ ಅಧಿಕಾರಿ ಬಸವಂತಪ್ಪ ಮೆಹಬೂಬ ಇದ್ದರು.

ಸಮಾಜದ ಸುಧಾರಣೆಯಲ್ಲಿ ಮಹಿಳೆ ಪಾತ್ರ ದೊಡ್ಡದ್ದು

ನರಗುಂದ: ಸಮಾಜದ ಸುಧಾರಣೆಯಲ್ಲಿ ಮಹಿಳೆಯರ ಪಾತ್ರ ದೊಡ್ಡದಾಗಿದೆ ಎಂದು ಮಾತೋಶ್ರೀ ಅಕ್ಕಮಹಾದೇವಿ ಶರಣಮ್ಮವರು ಹೇಳಿದರು.

ತಾಲೂಕಿನ ಶಿರೋಳದ ಜಗದ್ಗುರು ಶ್ರೀಯಚ್ಚರಸ್ವಾಮಿಗಳ ಗವಿಮಠದಲ್ಲಿ ನಡೆದ 29ನೇ ಮಾಸಿಕ ಶಿವಾನುಭವ ಗೋಷ್ಠಿ ಹಾಗೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಮಾತನಾಡಿದರು.

ಮಹಿಳೆಯರು ಸದ್ಯದ ದಿನಮಾನಗಳಲ್ಲಿ ಎಲ್ಲ ವರ್ಗದಲ್ಲೂ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದಾರೆ. ಹಾಗಾಗಿಯೇ ಸಮಾಜವು ಕೂಡ ಅಚ್ಚುಕಟ್ಟಾಗಿ ನಿರ್ವಹಣೆಯಾಗುತ್ತಿದೆ ಎಂದರು.

ಶೋಭಾ ಶಾಲದಾರ ಮಾತನಾಡಿ, ಮಹಿಳೆಯರಿಗೂ ಕೂಡ ಸಮಾನ ಸ್ಥಾನಮಾನವನ್ನು ನೀಡಿ ಗೌರವಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ ಎಂದರು.

ಪೂಜ್ಯಶ್ರೀ ಅಭಿನವ ಯಚ್ಚರ ಮಹಾಸ್ವಾಮಿಗಳು ಮಾತನಾಡಿ, ಮಹಿಳೆಯರಿಗೆ ಯಾವುದೇ ಒಂದು ಜವಾಬ್ದಾರಿಯನ್ನು ನೀಡಿದರು ಅದನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸುವ ಕಲೆ ಅವರಲ್ಲಿದೆ. ಒಂದು ಮನೆಯನ್ನಾಗಲಿ ಸಮಾಜವನ್ನಾಗಲಿ ಚೆನ್ನಾಗಿ ನಿರ್ವಹಿಸುವ ಸಾಮರ್ಥ್ಯ ಅವರಲ್ಲಿದೆ. ಮಹಿಳೆಯರು ಇಲ್ಲದೆ ಮನೆ ಅಷ್ಟೇ ಅಲ್ಲದೆ ಸಮಾಜವು ಸುಧಾರಿಸಲು ಸಾಧ್ಯವಿಲ್ಲ ಎಂದರು.

ಬಾಪೂಗೌಡ ತಿಮ್ಮಾನಗೌಡ್ರ ಪ್ರಾಸ್ತಾವಿಕವಾಗಿ ಮಾತನಾಡಿದರು. ದಾಕ್ಷಾಯಿಣಿ ಜಂಗವಾಡ, ಶೋಭಾ ಶಾಲದಾರ, ಕು.ಶಾಂತಾ ಕುಪ್ಪಸ್ತ, ಸುಶೀಲ ಕುಪ್ಪಸ್ತ, ಎಸ್.ವೈ. ಮುಲ್ಕಿಪಾಟೀಲ, ಜಂಬಯ್ಯ ಅಂಕ್ಲಿಮಠ, ಜಂಬಣ್ಣ ದಿಂಡಿ, ದೇವರಾಜ ಜಂಗವಾಡ, ರವಿ ಆಲಗುಂಡಿ, ರಂಗನಗೌಡ ತಿರಕನಗೌಡ್ರ, ಮಲ್ಲಣ್ಣ ಚಿಕ್ಕನರಗುಂದ, ಬಸವರಾಜ ಕುಪ್ಪಸ್ತ, ಮೈಲಾರಪ್ಪ ಹೂಗಾರ, ಸಂಗೀತ ಸೇವೆ ನಡೆಸಿದರು.



ನರಗುಂದ: ತಾಲೂಕಿನ ಶಿರೋಳದ ಜಗದ್ಗುರು ಶ್ರೀ ಯಚ್ಚರಸ್ವಾಮಿಗಳ ಗವಿಮಠದಲ್ಲಿ ನಡೆದ 29ನೇ ಮಾಸಿಕ ಶಿವಾನುಭವ ಗೋಷ್ಠಿ ಹಾಗೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ನಡೆಯಿತು.

ಹಲವು ಯೋಜನೆಗಳ ಅನುಷ್ಠಾನಕ್ಕೆ ಆದ್ಯತೆ

ಬೃಹತ್ ಕೈಗಾರಿಕೆಗಳು ಗಗನಕುಸುಮ

ಗದಗ: ಸಿಎಂ ಸಿದ್ದರಾಮಯ್ಯ ಮಂಡಿಸಿರುವ ಬಜೆಟ್‌ನಲ್ಲಿ ಜಿಲ್ಲೆಯ ಡಂಬಳದಲ್ಲಿ ತೋಟಗಾರಿಕೆ ಕಾಲೇಜನ್ನು ಸ್ಥಾಪಿಸಲು ಅಗತ್ಯವಿರುವ ಪ್ರಥಮ ಹಂತದ ಮೂಲಸೌಕರ್ಯ ಕಾಮಗಾರಿ ಕೈಗೆತ್ತಿಕೊಳ್ಳುವುದು, ಗದಗ-ಕಪ್ಪತಗುಡ್ಡ-ಲಕ್ಕುಂಡಿ ಪ್ರವಾಸೋದ್ಯಮ ಸರ್ಕ್ಯೂಟ್ ಅಭಿವೃದ್ಧಿಪಡಿಸುವುದು ಹಾಗೂ ಶಿರಹಟ್ಟಿ ಹಾಗೂ ರೋಣ ಕೆರೆಗಳನ್ನು ತುಂಬಿಸುವುದು ಸೇರಿ ಹಲವು ಯೋಜನೆಗಳ ಅನುಷ್ಠಾನಕ್ಕೆ ಆದ್ಯತೆ ನೀಡಲಾಗಿದೆ.

ಬಜೆಟ್ ಪ್ರತಿಯಲ್ಲಿ ಜಿಲ್ಲೆಯ ಹೆಸರು ತುಂಬ ವಿರಳವಾಗಿ ಕಾಣಿಸಿಕೊಂಡಿದೆ. ಜಿಲ್ಲೆಯ ಹೆಸರು ಪ್ರಸ್ತಾಪ ಇರುವ ಕಡೆಗಳಲ್ಲೆಲ್ಲಾ ತಜ್ಞರಿಂದ ಕಾರ್ಯಸಾಧ್ಯತಾ ವರದಿ ಪಡೆಯಲಾಗುವುದು, ಪ್ರಾರಂಭಿಸಲಾಗುವುದು, ಕ್ರಮವಹಿಸಲಾಗುವುದು, ಕೈಗೊಳ್ಳಲಾಗುವುದು ಎಂಬ ಶಬ್ದಗಳ ಹೊರತು ಗದಗ ಜಿಲ್ಲೆಗೆ ನಿರ್ದಿಷ್ಟವಾದ ಯೋಜನೆ ಸಿಕ್ಕಿದೆ ಎಂದು ಹೇಳಲು ಏನೂ ಇಲ್ಲವಾಗಿದೆ.

ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ಬೇಕಿರುವ ನೀರಿನ ಮೂಲ ಜಿಲ್ಲೆಯಲ್ಲಿ ಇಲ್ಲ. ಹಾಗಾಗಿ, ಜಿಲ್ಲೆಗೆ ಬೃಹತ್ ಕೈಗಾರಿಕೆಗಳು ಗಗನಕುಸುಮವಾಗಿವೆ. ಕೃಷಿ ಪ್ರಧಾನ ಜಿಲ್ಲೆಯಾಗಿರುವ ಗದಗ ಜಿಲ್ಲೆಗೆ ಮೆಣಸಿನಕಾಯಿ, ಹೆಸರುಕಾಳು, ಜೋಳ, ಈರುಳ್ಳಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಚಿಲ್ಲಿ ಕ್ಲಸ್ಟರ್, ಜವಳಿ ಪಾರ್ಕ್, ಫುಡ್ ಪಾರ್ಕ್ ಎಂಬುವು ಜಿಲ್ಲೆಯ ಜನರಿಗೆ ಹಲವು ವರ್ಷಗಳಿಂದ ಕನ್ನಡಿಯೊಳಗಿನ ಗಂಟಿನಂತಾಗಿವೆ.

ಕೈಗಾರಿಕೋದ್ಯಮಕ್ಕೆ ಮತ್ತೆ ಗ್ರಹಣ

ಸ್ಥಳೀಯ ಪ್ರತಿಭೆಗಳಿಗೆ ಉದ್ಯೋಗವಕಾಶ ಕಲ್ಪಿಸಲು ಸಾಧ್ಯವಾಗುತ್ತಿಲ್ಲ. ಜಿಲ್ಲೆಯಲ್ಲಿ ಫುಡ್ ಮತ್ತು ಕಾಟನ್ ಇಂಡಸ್ಟ್ರಿಗಳ ಸ್ಥಾಪನೆಗೆ ಸಾಕಷ್ಟು ಅವಕಾಶಗಳಿವೆ. ಈ ಉದ್ಯಮಗಳಿಗೆ ಬೇಕಿರುವ ಕಚ್ಚಾವಸ್ತುಗಳು ಕೂಡ ಸ್ಥಳೀಯವಾಗಿಯೇ ಸಿಗುತ್ತವೆ. ಆದರೆ, ಇಂತಹ ಸಣ್ಣ ಪುಟ್ಟ ಉದ್ಯಮಗಳ ಸ್ಥಾಪನೆಗೆ ಬೇಕಿರುವ ಮೂಲಸೌಕರ್ಯಗಳ ಕೊರತೆಯಿದೆ. ಆದರೆ, ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಕೈಗಾರಿಕೋದ್ಯಮ ಸೃಷ್ಟಿಸಲು ಯಾವುದೇ ಯೋಜನೆಗಳು ಅನುಷ್ಠಾನಗೊಳ್ಳದಿರುವುದು ಉದ್ಯಮಿಗಳ ನಿರೀಕ್ಷೆ ಹುಸಿಯಾಗಿಸಿದೆ.

ಬಜೆಟ್‌ನಲ್ಲಿ ಗದಗ ಜಿಲ್ಲೆಗೆ ಸಿಕ್ಕಿರುವುದು

- ತಜ್ಞರ ಕಾರ್ಯಸಾಧ್ಯತಾ ವರದಿಯ ಶಿಫಾರಸ್ಸಿನಂತೆ ಡಂಬಳದಲ್ಲಿ ತೋಟಗಾರಿಕೆ ಕಾಲೇಜನ್ನು ಸ್ಥಾಪಿಸಲು ಅಗತ್ಯವಿರುವ ಪ್ರಥಮ ಹಂತದ ಮೂಲಸೌಕರ್ಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು.
- ಪ್ರಮುಖ ಪ್ರವಾಸಿ ತಾಣವಾದ ಗದಗ-ಕಪ್ಪತಗುಡ್ಡ-ಲಕ್ಕುಂಡಿ ಪ್ರವಾಸೋದ್ಯಮ ಸರ್ಕ್ಯೂಟ್ ಅನ್ನು ಅಭಿವೃದ್ಧಿಪಡಿಸುವುದು.
- ಗದಗದಲ್ಲಿ ನೂತನ ಬಸ್ಸು ನಿಲ್ದಾಣಗಳನ್ನು ಹಾಗೂ ತರೀಕೆರೆಯಲ್ಲಿ ಬಸ್ಸು ಡಿಪೋ ಅನ್ನು ನಿರ್ಮಿಸುವುದು.
- 2026-27ನೇ ಸಾಲಿನಲ್ಲಿ ಮುಕ್ತಾಯಗೊಳಿಸಲು ಉದ್ದೇಶಿಸಿದ ಯೋಜನೆಗಳ ಪೈಕಿ ಶಿರಹಟ್ಟಿ ಕೆರೆ ತುಂಬಿಸುವ ಯೋಜನೆ
- ಆಡಳಿತಾತ್ಮಕ ಅನುಮೋದನೆ ನೀಡಿರುವ ಕಾಮಗಾರಿಗಳ ಪೈಕಿ ರೋಣ ತಾಲೂಕಿನ ಕೆರೆಗಳನ್ನು ತುಂಬುವ ಕಾಮಗಾರಿ ಹಾಗೂ ಮಲಪ್ರಭಾ ಯೋಜನೆಯಡಿ ರೋಣ ಮತಕ್ಷೇತ್ರದಲ್ಲಿ ಕಾಲುವೆಗಳ ಆಧುನೀಕರಣ
- ಕಾರ್ಮಿಕ ಇಲಾಖೆ ವ್ಯಾಪ್ತಿಯಲ್ಲಿ ಹಂತ 1ರಲ್ಲಿ ಅನುಮೋದನೆಯಾಗಿರುವ ಶ್ರಮಿಕ ವಸತಿ ಶಾಲೆಗಳ ಪೈಕಿ ರೋಣ ಹಾಗೂ ಹಂತ 2ರಲ್ಲಿ ಅನುಮೋದನೆಯಾಗಿರುವ ಶ್ರಮಿಕ ವಸತಿ ಶಾಲೆಗಳ ಪೈಕಿ ಗದಗದಲ್ಲಿ ಆರಂಭಿಸಲು ಉದ್ದೇಶಿಸಲಾಗಿದೆ.
- ಗದಗ-ವಾಡಿ ರೈಲ್ವೆ ಮಾರ್ಗದ ಭೂಸ್ವಾಧೀನದ ಸಂಪೂರ್ಣ ವೆಚ್ಚವನ್ನು ಹಾಗೂ ಶೇ. 50ರ ನಿರ್ಮಾಣ ವೆಚ್ಚವನ್ನು ರಾಜ್ಯ ಸರಕಾರ ಭರಿಸುವುದಾಗಿ ತಿಳಿಸಿದೆ.
- ಜಿಲ್ಲೆಗೆ ಹಿಂದುಳಿದ ವರ್ಗಗಳ ಇಲಾಖೆಯಡಿ ಒಂದು ಹೊಸ ಇಂಜಿನಿಯರಿಂಗ್ ಕಾಲೇಜು ಕಟ್ಟಡ ನಿರ್ಮಾಣಕ್ಕೆ ಅನುಮತಿ.. ಎರಡು ಇಂಜಿನಿಯರಿಂಗ್ ವಸತಿ ನಿಲಯ ಆರಂಭಕ್ಕೆ ಅನುಮೋದನೆ
- ಜಿಲ್ಲೆಗೊಂದು ಮೆಟ್ರಿಕ್ ನಂತರದ ಹಾಸ್ಟೆಲ್ ಘೋಷಣೆ
- ಏತ ನೀರಾವರಿ, ಚೆಕ್ ಡ್ಯಾಂ ಹಾಗೂ ಕೆರೆಗಳ ಪುನಶ್ಚೇತನಗೊಳಿಸುವುದು ಹಾಗೂ ಸಣ್ಣ ನೀರಾವರಿ ಇಲಾಖೆಯ ಅಧೀನದಲ್ಲಿರುವ ಕೆರೆಗಳನ್ನು ಅಭಿವೃದ್ಧಿಪಡಿಸಿ ಸಂರಕ್ಷಿಸುವುದು.

ಒಳಮೀಸಲಾತಿ ಜಾರಿಗೆ ಒತ್ತಾಯ




ನರಗುಂದ: ಒಳಮೀಸಲಾತಿ ಜಾರಿಯಾಗೋವರೆಗೂ ರಾಜ್ಯ ಸರಕಾರವು ಯಾವುದೇ ಹುದ್ದೆಯನ್ನು ಭರ್ತಿ ಮಾಡಬಾರದೆಂದು ಮಾದಿಗ ಯುವಸೇನೆ ಅಧ್ಯಕ್ಷ ಡಾ.ಮುತ್ತು ಸುರಕೋಡ ಸರಕಾರಕ್ಕೆ ಎಚ್ಚರಿಕೆ ನೀಡಿದರು.

ಪಟ್ಟಣದ ರಾಷ್ಟ್ರೀಯ ಹೆದ್ದಾರಿಯಲ್ಲಿನ ಶಿವಾಜಿ ಮಹಾರಾಜ್ ವೃತ್ತದಲ್ಲಿ ಕರ್ನಾಟಕ ರಾಜ್ಯ ಸಮಗಾರ ಹರಳಯ್ಯ ಸಂಘದ ತಾಲೂಕ ಘಟಕದಿಂದ ರಸ್ತೆ ತಡೆ ನಡೆಸಿ ತಹಶೀಲ್ದಾರ್‌ಅವರಿಗೆ ಮನವಿ ಅರ್ಪಿಸಿ ಮಾತನಾಡಿದರು.

ಒಳಮೀಸಲಾತಿಗಾಗಿ 35 ವರ್ಷದಿಂದ ಹೋರಾಟ ಮಾಡುತ್ತಿದ್ದೇವೆ. ಆದ್ದರಿಂದ ನ್ಯಾಯಾಲಯದ ಆದೇಶದಂತೆ ಒಳ ಮೀಸಲಾತಿಯನ್ನು ಜಾರಿ ಮಾಡಬೇಕು. ನ್ಯಾಯಾಲಯದ ಆದೇಶ ಉಲ್ಲಂಘನೆಯಾದಲ್ಲಿ ನರಗುಂದ ಬಂದ್ ಕರೆಯಂತಹ ಉಗ್ರ ಹೋರಾಟ ಮಾಡಲಾಗುವುದು ಎಂದು ರಾಜ್ಯ ಸರಕಾರಕ್ಕೆ ಎಚ್ಚರಿಕೆ ನೀಡಿದರು.

ತಾಲೂಕ ಸಮಗಾರ ಹರಳಯ್ಯ ಸಂಘದ ಅಧ್ಯಕ್ಷ ಅಣ್ಣಪ್ಪ ಅರಕೇರಿ ಮಾತನಾಡಿ, ಸಚಿವ ಸಂಪುಟದಲ್ಲಿ ಅನುಮೋದನೆ ಆಗಿರುವ 56,432 ಕ್ಕೂ ಅಧಿಕ ಹುದ್ದೆಗಳನ್ನು ಭರ್ತಿ ಮಾಡುತ್ತಿರುವುದು ಖಂಡನಿಯ, ಒಳಮೀಸಲಾತಿ ಅನಗುಣವಾಗಿ ಭರ್ತಿ ಮಾಡಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ವಸಂತ ಜೋಗಣ್ಣವರ, ಯಲ್ಲಪ್ಪ ದುತ್ತರಗಿ, ಆನಂದ ದುತ್ತರಗಿ, ಕಿರಣ ಜೋಗಣ್ಣವರ, ಈರಪ್ಪ ಮ್ಯಾಗೇರಿ, ಸೇರಿದಂತೆ ಅನೇಕರಿದ್ದರು.



ಬಜೆಟ್ಟಿನಲ್ಲಿ ಯಾವುದೇ ದಾಖಲೆ ಮಾಡುವಂತಹ ಅಂಶಗಳಿಲ್ಲ. ಈ ಬಜೆಟ್ಟಿನಲ್ಲಿ ವೋಟ್ ಬ್ಯಾಂಕಿಗಾಗಿ ಕೆಲವು ವರ್ಗಗಳ ಓಲೈಕೆ ಎದ್ದು ಕಾಣುತ್ತದೆ. ಬಜೆಟ್ ಎಂದರೆ ಅಭಿವೃದ್ಧಿ ಪರವಾಗಿರಬೇಕು ಈ ಬಜೆಟ್ಟಿಗೆ ಯಾವುದೇ ಗುರಿ ಇಲ್ಲದಾಗಿದೆ. ಗ್ಯಾರಂಟಿ ಎಂದು ಸುಳ್ಳುಗಳನ್ನು ಹೇಳಿ ಅಧಿಕಾರಕ್ಕೆ ಬಂದ ನಂತರ ನುಡಿದಂತೆ ನಡೆದಿದ್ದೇವೆ ಎಂದು ಲಕ್ಷಾಂತರ ರೂಪಾಯಿಗಳನು ಖರ್ಚು ಮಾಡಿ ಜಾಹಿರಾತುಗಳನು ಹಾಕಿದ್ದೆ ಸಾಧನೆ ಆಗಿದೆ ಹೊರತು ಇವು ಯಾವು ಗ್ಯಾರೆಂಟಿಗಳ ಗುರಿ ತಲುಪಿಲ್ಲ.

■ -ವೆಂಕನಗೌಡ ಗೋವಿಂದಗೌಡ್ರ, ಜೆಡಿಎಸ್ ಪಕ್ಷದ ರಾಜ್ಯ ವಕ್ತಾರ

ಜಾತಿ, ಪಂಥ ಮರೆತು ಹಿಂದೂಗಳು ಸಂಘಟಿತರಾಗಿ

ಲಕ್ಷ್ಮೇಶ್ವರ: ಸನಾತನ ಧರ್ಮದ ಪ್ರತಿಯೊಂದು ಆಚರಣೆ,ತಪಸ್ಸು,ಹೋಮ ಕೇವಲ ಹಿಂದೂಗಳಿಗೆ ಮಾತ್ರವಲ್ಲದೆ ಈ ಭೂಮಿಯ ಮೇಲಿನ ಪ್ರತಿಯೊಬ್ಬರಿಗೂ ಕೂಡ ಅಂತ ಹೇಳುವ ಸನಾತನ ಧರ್ಮವನ್ನು ನಾಶ ಮಾಡಲಿಕ್ಕೆ ಹೋಗುತ್ತಿರುವುದು ತುಂಬಾ ಬೇಸರದ ಸಂಗತಿ ಎಂದು ಹಿಂದೂ ಜನಜಾಗೃತಿ ಸಮಿತಿಯ ರಾಜ್ಯ ಸಮನ್ವಯಕ ಗುರುಪ್ರಸಾದ ಗೌಡ ಹೇಳಿದರು.

ತಾಲೂಕಿನ ಶಿಗ್ಲಿ ಗ್ರಾಮದ ಶಾಖಾಂಬರಿ ಸಮುದಾಯ ಭವನದಲ್ಲಿ 'ಹಿಂದೂ ಜನ ಜಾಗೃತಿ ಸಮಿತಿ ಯಿಂದ ರಾಷ್ಟ್ರ-ಜಾಗೃತಿ ಸಭೆಯಲ್ಲಿ ಮಾತನಾಡಿ, ಹಿಂದೂ ಸಮಾಜದ ಮೇಲೆ ಇವತ್ತು ವಿವಿಧ ಪ್ರಕಾರ ಆಘಾತ, ಅತ್ಯಾಚಾರ, ಹಲ್ಲೆಗಳು, ಗೋಹತ್ಯೆ, ದೇವರ ವಿಡಂಬನೆ, ಅಪಮಾನ ಮುಂತಾದ ವಿಷಯಗಳ ಬಗ್ಗೆ ಜಾಗೃತಿ ಮೂಡಿಸಲು ಸಮಿತಿಯು ಕಳೆದ 23 ವರ್ಷಗಳಿಂದ ಧರ್ಮಜಾಗೃತಿ ಕಾರ್ಯಕ್ರಮಗಳನ್ನು ಆಯೋಜನೆ ಮಾಡುತ್ತಿದೆ. ಯಾವಾಗ ಅಯೋಧ್ಯೆ ರಾಮಮಂದಿರದ ಮೇಲೆ ಭಗವಾ ಧ್ವಜ ಸ್ಥಾಪಿಸಲಾಯಿತು. ಆಗಿನಿಂದಲೇ ನಾವೆಲ್ಲರೂ ಹಿಂದೂರಾಷ್ಟ್ರ ಸ್ಥಾಪನೆಯ ಯುಗದ ಪ್ರಾರಂಭದ ಹೆಜ್ಜೆಯನ್ನು ಇಟ್ಟಿದ್ದೇವೆ ಎನ್ನುವುದು ಸ್ಪಷ್ಟವಾಗುತ್ತದೆ ಎಂದರು.

ಹಿಂದೂ ರಾಷ್ಟ್ರ ಸ್ಥಾಪನೆಗಾಗಿ ಹಿಂದೂಗಳು ಜಾತಿ-ಪಂಥ ಮರೆತು ಸಂಘಟಿತರಾಗಬೇಕು. ಕೇವಲ ಭಾಷಣಕ್ಕೆ ಸೀಮಿತವಾಗದೆ, ಪ್ರತಿದಿನ ಒಂದು ಗಂಟೆ ಧರ್ಮಕಾರ್ಯಕ್ಕಾಗಿ ಸಮಯ ಮೀಸಲಿಡಿ. ಹಿಂದೂ ದೇವಸ್ಥಾನಗಳ ರಕ್ಷಣೆ, ಧಾರ್ಮಿಕ ಸ್ವಾತಂತ್ರ್ಯ, ಸಾಂಸ್ಕೃತಿಕ ಮೌಲ್ಯಗಳ ಸಂರಕ್ಷಣೆಗಾಗಿ ಈ ದೇಶವನ್ನು ಹಿಂದೂ ರಾಷ್ಟ್ರವನ್ನಾಗಿ ಘೋಷಿಸುವುದಕ್ಕಾಗಿ ಮತ್ತು ಛತ್ರಪತಿ ಶಿವಾಜಿ ಮಹಾರಾಜರ 'ಹಿಂದವೀ ಸ್ವರಾಜ್ಯ'ದ ಸಂಕಲ್ಪದೊಂದಿಗೆ ಹಿಂದೂ ರಾಷ್ಟ್ರದ ನಿರ್ಮಾಣ ಯಜ್ಞದಲ್ಲಿ ಕೈಜೋಡಿಸಿ ಎಂದರು.

ಯುವ ಮುಖಂಡ ಆದೇಶ ಹುಲಗೂರು ಮಾತನಾಡಿದರು. ಕಾರ್ಯಕ್ರಮದಲ್ಲಿ 200 ಕ್ಕೂ ಅಧಿಕ ಹಿಂದೂ ಬಾಂಧವರು ಹಾಜರಿದ್ದರು.

ಹಿಂದೂ ಜನ ಜಾಗೃತಿ ಸಮಿತಿಯ ಲಕ್ಷ್ಮೀ ತಟ್ಟಿ, ಅಶೋಕ ಭೋಜ, ಶೋಭಾ ಇಟಗಿ, ಶಾಂತಾ ಹುಲಕೋಟಿ, ಪ್ರಕಾಶ ಬೆಟಗೇರಿ, ರಮೇಶ ಬೂದಿಹಾಳ, ಸುರೇಶ ಗೋಧಿ, ಕೃಷ್ಣ ಬಡ್ನಿ, ನಿಲಾಂಬಿಕಾ ಹಡಪದ, ಇದ್ದರು. ಸುಮಾ ಕುಂಬಾರ, ಪ್ರವೀಣ ಬೆನ್ನೂರು ನಿರೂಪಿಸಿದರು.



ಆಶ್ರಯ ನಿವೇಶನಕ್ಕಾಗಿ ಕೈಮುಗಿದು ಬೇಡಿದ ಫಲಾನುಭವಿಗಳು

ಲಕ್ಷ್ಮೇಶ್ವರ: ಜಿಲ್ಲಾ ಉಪವಿಭಾಗಾಧಿಕಾರಿ ಗಂಗಪ್ಪ ಎಂ. ಅವರು ಶುಕ್ರವಾರ ಲಕ್ಷ್ಮೇಶ್ವರದ ತಮ್ಮಾತಿಮ್ಮಿ ಗುಡ್ಡದಲ್ಲಿನ 16 ಎಕರೆ ಆಶ್ರಯ ನಿವೇಶನದ ಜಮೀನು ವೀಕ್ಷಿಸಲು ಬಂದ ಸಂದರ್ಭದಲ್ಲಿ ಕಳೆದ 9 ವರ್ಷದಿಂದ ಆಶ್ರಯ ನಿವೇಶನದ ಹಕ್ಕುಪತ್ರ ಪಡೆದ ಫಲಾನುಭವಿಗಳು ಅವರ ಕಾಲಿಗೆರಗಿ-ಕೈಮುಗಿದು ಅವಲೊತ್ತುಕೊಂಡ ಘಟನೆ ಜರುಗಿತು.

ಎಸಿ ಅವರಲ್ಲಿ ಪರಿಪರಿಯಾಗಿ ಬೇಡಿಕೊಂಡ ಫಲಾನುಭವಿಗಳು ಪ್ಲಾಟ್‌ಗೆ ತೆರಿಗೆ ಕಟ್ಟುತ್ತಿದ್ದು, ಇದುವರೆಗೂ ನಮ್ಮ ಪ್ಲಾಟ್ ಯಾವುದೆಂದು ಗುರುತಿಸಿಕೊಟ್ಟಿಲ್ಲ, ಅದಕ್ಕಾಗಿ ಮುಖ್ಯಮಂತ್ರಿ ಸೇರಿ ಎಲ್ಲ ಅಧಿಕಾರಿ, ಜನಪ್ರತಿನಿಧಿಗಳಿಗೆ ಮನವಿ ಮಾಡುತ್ತಾ ಬಂದಿದ್ದೇವೆ. ಧರಣಿ ಸತ್ಯಾಗ್ರಹ ಮಾಡಿದ್ದೇವೆ. ಆದರೆ ಯಾವುದೇ ಪ್ರಯೋಜನವಾಗಿಲ್ಲ ಎಂದು ತಮ್ಮ ಅಳಲು ತೋಡಿಕೊಂಡರು.

ಈಗಾಗಲೇ ಆಶ್ರಯ ನಿವೇಶನದ ಪಡೆದವರಲ್ಲಿ ಕೆಲವರು ಸ್ವಂತ ಸೂರಿನ ಕನಸಿನೊಂದಿಗೆ ಮಣ್ಣಾಗಿದ್ದಾರೆ. ನೀವಾದರೂ ನಮ್ಮ ಪ್ಲಾಟ್ ಯಾವುದು ಎಂದು ಗುರುತಿಸಿಕೊಡಿಸಿ. ಸಂಪರ್ಕ ರಸ್ತೆಯೇ ಇಲ್ಲದ ನಿವೇಶನಕ್ಕೆ ಸಂಪರ್ಕ ರಸ್ತೆ,



ನೀರು, ವಿದ್ಯುತ್, ರಸ್ತೆ, ಚರಂಡಿ, ಅಗತ್ಯ ಸೌಲಭ್ಯ ಕಲ್ಪಿಸಿಕೊಟ್ಟರೆ ಗುಡಿಸಲು ಕಟ್ಟಿಕೊಂಡು ಬದುಕುತ್ತೇವೆ. ಈ ವ್ಯವಸ್ಥೆ ಮಾಡಿಕೊಟ್ಟು ಪುಣ್ಯ ಬರುತ್ತೇ ಸರ್ ಎಂದು ಆಶ್ರಯ ಫಲಾನುಭವಿಗಳಾದ ಶಶಿಕಲಾ ಹಿರೇಮಠ, ರೇವತಿ ಕಟ್ಟಿಮನಿ, ರೇಣುಕಾ ಮುದಕವಿ, ಶಿವಲೀಲಾ ಹಿಪ್ಪರಗಿ, ಹನಮಂತಪ್ಪ ಸುಣಗಾರ, ಸಲೀಂಸಾಬ ಗುಮ್ಮಗೋಳ, ಹನಮಂತಪ್ಪ ಬೂದಿಹಾಳ ಕಯಮುಗಿದು ಪರಿಪರಿಯಾಗಿ ಕೇಳಿಕೊಂಡರು.

ಈ ವೇಳೆ ಮುಖ್ಯಾಧಿಕಾರಿ ಮಾಂತೇಶ ಬೀಳಗಿ ಅವರಿಂದ ಸಮಸ್ಯೆ ಆಲಿಸಿದ ಉಪವಿಭಾಗಾಧಿಕಾರಿಗಳೇ ಸೋಮವಾರವೇ ಆಶ್ರಯ ನಿವೇಶನಕ್ಕೆ ಸಂಪರ್ಕ ಕಲ್ಪಿಸಲು ಅಗತ್ಯವಿರುವ 8 ಗುಂಟೆ ಜಮೀನು ಖರೀದಿ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಹಕ್ಕುಪತ್ರ ಪಡೆದ ಫಲಾನುಭವಿಗಳಿಗೆ ಕೂಡಲೇ ಅವರ ಪ್ಲಾಟ್ ಗುರುತಿಸಿಕೊಡಬೇಕು. ಆದಷ್ಟು ಬೇಗ ಇಲ್ಲಿ ಮೂಲಭೂತ ಸೌಕರ್ಯ ಕಲ್ಪಿಸುವ ವ್ಯವಸ್ಥೆಯಾಗಬೇಕು. ಅಲ್ಲದೇ ಇನ್ನುಳಿದ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯನ್ನು ಶಾಸಕರು ಬಂದ ಮೇಲೆ ಪೂರ್ಣಗೊಳಿಸಿ ಎಂದರು.

ಈ ವೇಳೆ ತಹಶೀಲ್ದಾರ್ ಧನಂಜಯ ಎಂ, ಕಂದಾಯ ನಿರೀಕ್ಷಕ ಎನ್.ಎ ನದಾಫ್, ಪುರಸಭೆ ಅಧಿಕಾರಿ ಮಂಜುನಾಥ ಮುದಗಲ್, ಪ್ರಕಾಶ ಕೊಂಚಿಗೇರಿಮಠ, ಬಸವಣ್ಣೆಪ್ಪ ನಂದೆಣ್ಣವರ, ಸುರೇಶ ಹಟ್ಟಿ ಸೇರಿ ಹಲವರಿದ್ದರು.

ಯಪ್ಪಾ ನಿಮ್ಮ ಕಾಲಿಗೆ ಬೀಳತೇನ್ರಿ, ನಮ್ಮ ಪ್ಲಾಟ್ ಗುರುತಿಸಿಕೊಟ್ಟು ಒಂದಷ್ಟು ಸೌಲಭ್ಯ ಕಲ್ಪಿಸಿಕೊಡಿ ಗುಡಿಸಲು ಕಟ್ಟಿಕೊಂಡು ನಿಮ್ಮ ಹೆಸರ ಹೇಳಿ ಬದಕತೇವಿ ನಿಮಗ ಪುಣ್ಯ ಬರುತ್ತೇ.

■ ಶಶಿಕಲಾ ಹಿರೇಮಠ, ಆಶ್ರಯ ನಿವೇಶನದ ಹಕ್ಕುಪತ್ರ ಪಡೆದ ಫಲಾನುಭವಿ

ಮತಬ್ಯಾಂಕ್‌ಗಾಗಿ ಬಜೆಟ್ ಮಂಡನೆ: ಉಪನಾಳ

ಲಕ್ಷ್ಮೇಶ್ವರ: ಮುಖ್ಯಮಂತ್ರಿ ಸಿದ್ದರಾಮಯ್ಯನವರು 17 ಭಾರೀ ಬಜೆಟ್ ಮಂಡನೆ ಮಾಡಿ ದಾಖಲೆ ಮಾಡಿದ್ದೇನೆ ಎಂಬ ಜಂಬ ಬಿಟ್ಟು ಈವರೆಗೂ ಮಂಡಿಸಿರುವ ಬಜೆಟ್‌ನಿಂದ ಸಮಾಜದಲ್ಲಿ ಇಲ್ಲಿಯವರೆಗೆ ಆದ ಬದಲಾವಣೆ, ಅಭಿವೃದ್ಧಿ, ಕಲ್ಯಾಣ ಕಾರ್ಯಗಳನ್ನು ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳಲಿ ಎಂದು ಟಿಎಪಿಸಿಎಂಸಿ ಅಧ್ಯಕ್ಷ ಸೋಮಣ್ಣ ಉಪನಾಳ ಹೇಳಿದರು.

ಕೇವಲ ಮತಬ್ಯಾಂಕ್ ಸೃಷ್ಟಿಸಿಕೊಳ್ಳುವುದೋಸ್ಕರ ಅಲ್ಪಸಂಖ್ಯಾತರ ಓಲೈಕೆ ಮಾಡುವುದನ್ನು ಬಿಟ್ಟು ನಿರುದ್ಯೋಗ, ಕೃಷಿ, ಕೈಗಾರಿಕೆ, ಶಿಕ್ಷಣ, ಮೂಲಭೂತ ಸೌಕರ್ಯ, ಎಲ್ಲ ವರ್ಗದ ಯುವಕರ ಮತ್ತು ಮಹಿಳೆಯರ ಪರವಾಗಿ ಯಾವುದಾದರೂ ಒಂದಾದರೂ ಉಪಯುಕ್ತ ಯೋಜನೆ ನಿಮ್ಮ ಬಜೆಟ್‌ನಲ್ಲಿ ಇದೆಯೇ? ರೈತರು ತಾವು ಬೆಳೆದ ಬೆಳೆಗೆ ಯೋಗ್ಯ ಬೆಲೆ ನೀಡದೇ ದುಬಾರಿ ಬೆಲೆ ನಿಯಂತ್ರಣ ಆಯೋಗವನ್ನು ಸೃಜಿಸುತ್ತಿರುವುದು ಎಷ್ಟು ಸರಿ? ವಿದ್ಯಾವಂತ ಯುವಕರು ನಿರುದ್ಯೋಗದಿಂದ ಬಳಲುತ್ತಿದ್ದರೂ ಕಂಡು ಕಾಣದಂತೆ ಕುರುಡ ನಡೆ ಅನುಸರಿಸುತ್ತಿರುವುದು ಎಷ್ಟು ಸರಿ? ಮಹಿಳೆಯರು ಮತ್ತು ಗೃಹಿಣಿಯರಿಗೆ ನೀವು ಮಂಡಿಸಿರುವ ಬಜೆಟ್‌ನಿಂದ ಉಪಯೋಗವಿದೆಯೇ? ರೈತರು, ಮಹಿಳೆಯರು ಮತ್ತು ಯುವಕರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಮತಬ್ಯಾಂಕ್‌ಗಾಗಿ ಈ ಬಜೆಟ್ ಮಂಡಿಸಿದಂತಿದೆ ಎಂದರು.



ಅಲ್ಪಸಂಖ್ಯಾತರಿಗೆ ಮೃಷ್ಟಾನ್ನ ಭೋಜನ. ಬಹುಸಂಖ್ಯಾತ ಹಿಂದೂಗಳಿಗೆ ಬಜೆಟ್‌ನಲ್ಲಿ ಶೂನ್ಯ ನೀಡಲಾಗಿದೆ. ಕರ್ನಾಟಕದ ಜನತೆಗೆ ಸಿದ್ದರಾಮಯ್ಯ ಸರ್ಕಾರ ಮತ್ತೊಮ್ಮೆ ಖಾಲಿ ಚೊಂಬು ನೀಡಿದೆ. ರಾಜ್ಯದ ಮೂಲಸೌಕರ್ಯ ಅಭಿವೃದ್ಧಿಗೆ ಅನುದಾನ ಮೀಸಲಿಡುವಲ್ಲಿ ಕಾಂಗ್ರೆಸ್ ಸರ್ಕಾರ ಸೋತಿದೆ.

■ ಸಿದ್ದೇಶ್ ಎಸ್. ಹೂಗಾರ. ಜಿಲ್ಲಾ ಅಧ್ಯಕ್ಷ. ಬಿಜೆಪಿ ಓಬಿಸಿ ಮೋರ್ಚಾ ಗದಗ.



ಬಜೆಟ್ ತಿರಾ ಸಂಪೂರ್ಣ ಕಳಪೆ ಬಜೆಟ್ ಇದಾಗಿದ್ದು, ಜನ ವಿರೋಧಿ ಬಜೆಟ್ ಅನ್ನು ಸಿಎಂ ಸಿದ್ದರಾಮಯ್ಯ ಮಂಡಿಸಿದ್ದಾರೆ. 2026-27ರ ಬಜೆಟ್ ಕನ್ನಡಿಗರಿಗೆ ಬರಿ ಸಾಲದ ಸುಳಿ ಮತ್ತು ತೆರಿಗೆಯ ಹೊರೆಯನ್ನಷ್ಟೇ ನೀಡಿದೆ. ರಾಜ್ಯದ ಪ್ರಗತಿಗೆ ಹೊಸ ಯೋಜನೆಗಳನು ಜಾರಿಗೆ ತರಲು ಹಣವೆಲ್ಲಿದೆ ಆರ್ಥಿಕ ಸ್ಥಿತಿ ಡೋಲಾಯಮಾನವಾಗಿದೆ.

■ ವಸಂತ ಪಡಗದ, ಬಿಜೆಪಿ ಯುವ ಮುಖಂಡ

ಬಜೆಟ್‌ನಲ್ಲಿ ಕೊಳಗೇರಿ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡದೇ ಹಾಗೂ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಪ್ರತ್ಯೇಕ ಬಜೆಟ್ ಘೋಷಣೆ ಮಾಡದೇ ರಾಜ್ಯದ ಲಕ್ಷಾಂತರ ಸ್ಲಂ ಜನರಿಗೆ ಅನ್ಯಾಯ ಮಾಡಿದ್ದು, ಇದೊಂದು ಸ್ಲಂ ಜನರ ವಿರೋಧಿ ಬಜಟ್ ಆಗಿದೆ. ವಸತಿ ಇಲಾಖೆ ಜೊತೆಗೆ ಸೇರಿ ಅನುದಾನ ಘೋಷಣೆ ಮಾಡಿದ್ದರಿಂದ ಕೊಳಗೇರಿಗಳನ್ನು ಅಭಿವೃದ್ಧಿಗೊಳಿಸಲು ಅಸಾಧ್ಯ. ಈ ಬಾರಿ ಬಜೆಟ್‌ನಲ್ಲಿ ಸ್ಲಂ ಜನರಿಗೆ ಅನ್ಯಾಯವಾಗಿದೆ.

■ ಇಮ್ತಿಯಾಜ ಆರ್. ಮಾನ್ವಿ, ಗದಗ ಜಿಲ್ಲಾ ಸ್ಲಂ ಸಮಿತಿ ಅಧ್ಯಕ್ಷ



ಜಿಲ್ಲೆಗೆ ಯಾವುದೇ ವಿಶೇಷ ಅನುದಾನ ಘೋಷಣೆ ಆಗಿಲ್ಲ, ಗದಗ ಬೆಟಗೇರಿ ಅವಳಿ ನಗರದ ಕಳೆದ 75 ವರ್ಷ ದಿಂದ ಜ್ವಲಂತ ಸಮಸ್ಯೆಯಾಗಿರುವ ಕುಡಿಯುವ ನೀರಿನ ಪೈಪ್‌ಲೈನ್ ಹಾಗೂಇತರೆ ತಾಂತ್ರಿಕ ಕಾಮಗಾರಿಗಳಿಗಾಗಿ ಯಾವುದೇ ವಿಶೇಷ ಅನುದಾನ ನೀಡದೇ ನಿರಾಸೆ ಮೂಡಿಸಿದೆ. ಗದಗ ರಿಂಗ್ ರೋಡಗೆ ಭೂ ಸ್ವಾಧೀನದ ಬಗ್ಗೆ ಯಾವುದೇ ಕಾಳಜಿ ನೀಡಿಲ್ಲ. ಜಿಲ್ಲೆಗೆ ಯಾವುದೇ ಕೈಗಾರಿಕಾ ಘಟಕಗಳ ಸ್ಥಾಪನೆ ಬಗ್ಗೆ ಪ್ರಸ್ತಾಪವೂ ಇಲ್ಲ, ಅದಕ್ಕೆ ಅನುದಾನವೂ ಇಲ್ಲ ಇದರಿಂದಾಗಿ ಉದ್ಯೋಗಾವಕಾಶಗಳಿಗೆ ತಣ್ಣೀರು ಹಾಕಿದಂತಾಗದೆ.

■ ರಾಘವೇಂದ್ರ, ಯಳವತ್ತಿ, ಗದಗ-ಬೆಟಗೇರಿ ನಗರಸಭೆ ಸದಸ್ಯ



ಯಾವುದೇ ಅಭಿವೃದ್ಧಿ ಇಲ್ಲದ, ಅಭಿವೃದ್ಧಿ ಶೂನ್ಯ ನಿರಾಶದಾಯಕ ಬಜೆಟ್ ಆಗಿದೆ. ರಾಜ್ಯದ ಜನಕ್ಕೆ ನಿರಾಸೆ ಉಂಟು ಮಾಡಿದೆ. 5 ಗ್ಯಾರಂಟಿಗಳ ಜಾರಿಗೆ ಸಾಲ ಪಡೆಯಲು ಸರ್ಕಾರ ತೀರ್ಮಾನಿಸಿದೆ. ಸಾಲ ಮಾಡಿ ತುಪ್ಪ ತಿನ್ನಿಸುವ ಬಜೆಟ್ ಇದಾಗಿದೆ ಚುನಾವಣೆಯ ಬಳಿಕ ಕಾಂಗ್ರೆಸ್ ಜನ ವಿರೋಧಿ ನೀತಿ ಅನುಸರಿಸುತ್ತಿದೆ.

■ ರಾಜು ಕುರುಡಗಿ, ಜಿಲ್ಲಾ ಬಿಜೆಪಿ ಅಧ್ಯಕ್ಷ



ಸಿಎಂ ಸಿದ್ದರಾಮಯ್ಯನವರು ಮಂಡಿಸಿರುವ 17ನೇ ಬಜೆಟ್ ಕರ್ನಾಟಕವನ್ನು ಅಭಿವೃದ್ಧಿಯ ಹಾದಿಯಿಂದ ಮತ್ತಷ್ಟು ದೂರಕ್ಕೆ ತಳ್ಳಿ, 'ಸಾಲದ ಸುಳಿ'ಗೆ ಸಿಲುಕಿಸುತ್ತಿರುವ ಕರಾಳ ಅಧ್ಯಾಯವಾಗಿದೆ. ಇವರ ಪಂಚ ಗ್ಯಾರಂಟಿಗಳಿಗೆ ಪ್ರತ್ಯೇಕ ಅನುದಾನ ನಿಗದಿ ಮಾಡದೆ ಆಯಾ ಇಲಾಖೆಗಳ ಅನುದಾನವನ್ನೇ ಕಡಿತ ಮಾಡಿ ಪಂಚ ಗ್ಯಾರಂಟಿಗೆ ಜೋಡಿಸಲಾಗಿದೆ. ಬಂಡವಾಳ ವೆಚ್ಚದಲ್ಲಿ ಅಲ್ಪ ಏರಿಕೆ ಮಾಡಿ, ಅಭಿವೃದ್ಧಿಗೆ ಬ್ರೇಕ್ ಹಾಕಿರುವ ಈ ಕಾಂಗ್ರೆಸ್ ಸರ್ಕಾರ, ರಾಜ್ಯದ ಭವಿಷ್ಯವನ್ನು ಅಡವಿಟ್ಟಿದೆ. ಸಾರ್ವಜನಿಕ ಸಾಲ ಒಟ್ಟು 8.24 ಲಕ್ಷ ಕೋಟಿ ರೂ.ಗೆ ಏರಿಸಿರುವುದು ಪ್ರತಿ ಕನ್ನಡಿಗನಿಗೆ ಈ ಕಾಂಗ್ರೆಸ್ ಸರ್ಕಾರ ನೀಡಿರುವ 'ಉಡುಗೊರೆ.

■ ಉಮೇಶ ಚನ್ನು ಪಾಟೀಲ. ಬಿಜೆಪಿ ಯುವ ಮುಖಂಡರು ಹಾಗೂ ಸಂಸ್ಥಾಪಕರು ಚನ್ನು ಪಾಟೀಲ ಫೌಂಡೇಶನ್



ರಾಜ್ಯ ಸರ್ಕಾರ ಗ್ಯಾರಂಟಿಗಳನು ಈಡೇರಿಸಲು ರಾಜ್ಯದ ಬೊಕ್ಕಸವನ್ನೇ ಮೀಸಲಿಡುವ ಜೊತೆಗೆ ಅಭಿವೃದ್ಧಿಯನ್ನೇ ಮರೆತಿರುವುದು ಸಿದ್ಧರಾಮಯ್ಯ ಅವರ ಬಜೆಟ್‌ನಿಂದ ಸಾಬೀತಾಗಿದೆ. ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕವನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದ್ದು, ಕಾನೂನು ಸಚಿವರ ತವರು ನೆಲ ಗದಗ ಜಿಲ್ಲೆಗೆ ಯಥಾಪ್ರಕಾರ ಶೂನ್ಯ ಕೊಡುಗೆ ದೊರೆತಿದೆ. ಕಳಸಾ-ಬಂಡೂರಿ ವಿಷಯದಲ್ಲಿ ಸರ್ಕಾರ ಮತ್ತೇ ಮೌನತಾಳಿದೆ. ತೆರಿಗೆ ಹೆಚ್ಚಳವನ್ನು ಬಜೆಟ್‌ನಲ್ಲಿ ತೋರಿಸದೇ ಗ್ಯಾರಂಟಿಗಳ ಅನುಷ್ಠಾನಕ್ಕೆ ಮತ್ತೇ ಜನಸಾಮಾನ್ಯರನ್ನು ಸುಲಿಗೆ ಮಾಡುವ ಕಾಂಗ್ರೆಸ್ ಸರ್ಕಾರದ ಚಾಳಿ ಮುಂದುವರಿದಿದೆ.

■ ವಿಜಯಕುಮಾರ ಗಡ್ಡಿ, ಬಿಜೆಪಿ ಮುಖಂಡರು ಹಾಗೂ ಉದ್ಯಮಿ.



ಸಿಎಂ ಸಿದ್ದರಾಮಯ್ಯನವರು ಬಜೆಟ್‌ನಲ್ಲಿ 8.25 ಲಕ್ಷ ಕೋಟಿ ಸಾಲ ಮಾಡಿ ಹೊಸ ದಾಖಲೆ ಸೃಷ್ಟಿ ಮಾಡಿದ್ದಾರೆ. ಅಭಿವೃದ್ಧಿ ಕಾರ್ಯಕ್ಕೆ ಮೀಸಲಿಡಬೇಕಾದ ಅನುದಾನವನ್ನು ಗ್ಯಾರಂಟಿ ಅನುಷ್ಠಾನಕ್ಕೆ ಸುರಿಯಲಾಗಿದೆ. ಉಕ ಭಾಗಕ್ಕೆ ಕಾಂಗ್ರೆಸ್ ಸರ್ಕಾರ ಮಲತಾಯಿ ಧೋರಣೆಯನ್ನು ಮುಂದುವರಿಸಿದ್ದು, ಸರ್ಕಾರದಲ್ಲಿ ಹಿರಿಯ ಹಾಗೂ ಪ್ರಮುಖ ಖಾತೆಯ ಸಚಿವ ಎಚ್.ಕೆ. ಪಾಟೀಲ ಅವರು ತಮ್ಮ ಗದಗ ಜಿಲ್ಲೆಗೆ ಯಾವುದೇ ವಿಶೇಷ ಕೊಡುಗೆ ಕೊಡಿಸುವಲ್ಲಿ ವಿಫಲರಾಗಿದ್ದಾರೆ.

■ ಶರಣ್ ಪಾಟೀಲ, ಉಸಿರು ಫೌಂಡೇಶನ್ ಅಧ್ಯಕ್ಷರು ಹಾಗೂ ಬಿಜೆಪಿ ಮುಖಂಡ

ಚುಟುಕು ವಿಶ್ವಕಪ್
ಟಿ-20 ವಿಶ್ವಕಪ್ 2026
೧೪
ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಶನಿವಾರ, 7 ಮಾರ್ಚ್ 2026
ಹುಬ್ಬಳ್ಳಿ

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ,
ಉತ್ತರಾಯಣ, ಶಿಶಿರ ಋತು,
ಫಾಲ್ಗುಣ ಮಾಸ, ಕೃಷ್ಣ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಚಿತ್ತೆ

ದಿನದ ಮಾತು

ನಾಚಿಕೆ ಅನ್ನುವುದನ್ನು ಬಿಟ್ಟಾಗ ಮಾನವ ಮೃಗವಾಗುತ್ತಾನೆ.
▲ಲೋಕೋಕ್ತಿ

ದಿನ ಭವಿಷ್ಯ

ಮೇಷ ಸ್ಥಗಿತಗೊಳಿಸಿದ್ದ ಕಾರ್ಯ ಮತ್ತೆ ಆರಂಭಿಸಬೇಕಾದ ಅನಿವಾರ್ಯತೆ. ಸಹೋದ್ಯೋಗಿಗಳ ಸಹಕಾರ. ಕೌಟುಂಬಿಕ ಉದ್ವಿಗ್ನತೆ ಶಮನ.

ವೃಷಭ ದಿನದ ಜಂಜಡದಿಂದ ಮುಕ್ತಿ ಸಿಗಲಿದೆ. ಕ್ರೀಡಾ ಚಟುವಟಿಕೆಯಲ್ಲಿ ಪಾಲ್ಗೊಳ್ಳುವ ಅವಕಾಶ. ಆತ್ಮೀಯರ ಒಡನಾಟ. ಧನಪ್ರಾಪ್ತಿ ಸಾಧ್ಯತೆ.

ಮಿಥುನ ನಿಮ್ಮ ಕಾರ್ಯತಂತ್ರ ಯಾರ ಜತೆಗೂ ಹೇಳದಿರಿ. ದೀರ್ಘಾವಧಿ ಯೋಜನೆಗೆ ಹಣ ಹಾಕಬೇಡಿ. ಲಾಭ ಸಿಗದು. ಹೆತ್ತವರ ಹಿತಾಸಕ್ತಿಗೆ ಗಮನ ಕೊಡಿ.

ಕಟಕ ಆರೋಗ್ಯ ಕಾಳಜಿ ವಹಿಸಿ. ಆಹಾರ ಸೇವನೆ ಹಿತಮಿತವಾಗಿರಲಿ.ಸಂಗಾತಿ ಜತೆ ಭಿನ್ನಮತ ಸಂಭವ. ಅಧ್ಯಯನದಲ್ಲಿ ಯಶ. ಧನವ್ಯಯ ಅಧಿಕ.

ಸಿಂಹ ಒತ್ತಡ. ಸಮಸ್ಯೆ. ಮನೆಯಲ್ಲಿ ಸಣ್ಣ ಜಗಳ ಆದೀತು. ಸಂಯಮ ಕಾಯ್ದುಕೊಳ್ಳಿ. ವ್ಯವಹಾರದಲ್ಲಿ ಹಿನ್ನಡೆ, ಧನಹಾನಿ ಸಂಭವ.

ಕನ್ಯಾ ಕೌಟುಂಬಿಕ ಪರಿಸ್ಥಿತಿ ಆನಂದಕರ. ಆತ್ಮೀಯರ ಜತೆ ಕಾಲಕ್ಷೇಪ. ಆದಾಯದಲ್ಲಿ ಹೆಚ್ಚಳ. ಆರ್ಥಿಕ ಒತ್ತಡ ನಿವಾರಣೆ. ಆಪ್ತ ಬಂಧು ಭೇಟಿ.

ತುಲಾ ಆರ್ಥಿಕ ಸ್ಥಿರತೆ. ಉಳಿತಾಯ ಹೆಚ್ಚಳ. ಸಂಜೆ ವೇಳೆಗೆ ವ್ಯವಹಾರದ ಒತ್ತಡದಿಂದ ದೂರವಾಗಿ ಕಾಲ ಕಳೆಯುವಿರಿ. ಆಪ್ತ ಹವ್ಯಾಸದಲ್ಲಿ ಖುಷಿ.

ವೃಶ್ಚಿಕ ಸಂಗಾತಿ ಜತೆ ಅರಿತು ವ್ಯವಹರಿಸಿ. ಸಂಘರ್ಷಕ್ಕೆ ಆಸ್ಪದ ಕೊಡಬೇಡಿ. ಹೊಸ ವ್ಯವಹಾರ ಆರಂಭಕ್ಕೆ ಸಕಾಲ. ಸ್ವಂತ ಉದ್ದಿಮೆ ಹೊಂದಿದವರಿಗೆ ಲಾಭ.

ಧನು ಕೋಪತಾಪ ನಿಯಂತ್ರಿಸಿ. ಇಲ್ಲವಾದರೆ ಜಗಳ ನಡೆದೀತು. ಮಾತಿಗೆ ಮಾತು ಕೊಡಿಸದಿರಿ. ವಿದ್ಯಾರ್ಥಿಗಳಿಗೆ ತುಸು ಹಿನ್ನಡೆ ಉಂಟಾದೀತು.

ಮಕರ ನಿಮ್ಮ ಸುತ್ತ ಶಾಂತ ಪರಿಸ್ಥಿತಿ ಬೇಕಾದರೆ ನಿಮ್ಮ ಕೋಪಕ್ಕೆ ಕಡಿವಾಣ ಹಾಕಿ. ಇತರರ ವರ್ತನೆ ಅಸಹನೀಯ ಅನಿಸಿದರೂ ಈ ದಿನ ಸುಮ್ಮಗುಳಿಯಿರಿ.

ಕುಂಭ ಹೊಸ ಸವಾಲು ಎದುರಾಗಲಿದೆ. ಆದರೆ ಧೃತಿಗೆಡಬೇಡಿ. ಸೂಕ್ತ ಸಹಕಾರವೂ ಸಿಗಲಿದೆ. ಮನೆಯಲ್ಲಿ ವಿರಸ ಕಳೆದು ಸೌಹಾರ್ದತೆ ಮೂಡಲಿದೆ.

ಮೀನ ಮನೆಯಲ್ಲಿ ಶಾಂತಿ ಬೇಕೆ? ನಿಮ್ಮ ನಡೆನುಡಿ ಪ್ರಾಮಾಣಿಕವಾಗಿರಲಿ. ವೃತ್ತಿಯಲ್ಲಿ ಸಣ್ಣ ಸಮಸ್ಯೆ. ದೊಡ್ಡ ಹಾನಿ ತರದಿದ್ದರೂ ಮನಸ್ಸಿಗೆ ಕಿರಿಕಿರಿ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ 6,0,4,1

ಏಕಾತ್ಮತಾ ತತ್ವದರ್ಶನದಲ್ಲಿ ವಿಶ್ವ ವಿಫಲ

ಪುಟ ೧ ➡ ವಿವಾದಗಳನ್ನು ತರ್ಕದಿಂದಲ್ಲ, ಸದ್ಭಾವನೆ ಮತ್ತು ಸೌಹಾರ್ದಗಳಿಂದ ಪರಿಹರಿಸಿಕೊಳ್ಳಬೇಕು. ಸಮಾಜವು ಸ್ವಾರ್ಥ ಮತ್ತು ವಿಭಜನೆಗಳನ್ನು ತೊಡೆದುಹಾಕಿ ಅಲ್ಲಿ ಸದ್ಭಾವನೆಯನ್ನು ಹಂತ ಹಂತವಾಗಿ ಬೆಳೆಸಿಕೊಳ್ಳುವ ಅಗತ್ಯವಿದೆ. ಜಗತ್ತು ಇಂದು ಎದುರಿಸುತ್ತಿರುವ ಸಮಸ್ಯೆಗಳಿಗೆ ಭಾರತ ತನ್ನ ಪ್ರಾಚೀನ ಏಕತೆಯ ಜ್ಞಾನದ ಮೂಲಕ ಉತ್ತರ ಹೊಂದಿದೆ. ಸಮಾಜವು ಭೇದವಿಲ್ಲದೆ ಒಂದಾಗಿ ಧರ್ಮವನ್ನು ರಕ್ಷಿಸಲು ಮುಂದಾಗಬೇಕು. ಇದರಿಂದ ಉತ್ತಮ ವಿಶ್ವವೊಂದನ್ನು ಸ್ಥಾಪಿಸಲು ಸಾಧ್ಯವಿದೆ. ಈ ಮೂಲಕ ಭಾರತ ಸುಖ, ಶಾಂತಿ, ಸಮೃದ್ಧಿ ಸಾಧಿಸುವುದಷ್ಟೇ ಅಲ್ಲದೆ ವಿಶ್ವಗುರುವಾಗಿ ಎದ್ದು ನಿಲ್ಲಬಲ್ಲದು. ಇದು ಹೊಸ ಸಾಮರಸ್ಯದ ವಿಶ್ವಕ್ಕೆ ನಾಂದಿಯಾಗಬಹುದು ಎಂದು ಭಾಗ್ವತ್ ವಿವರಿಸಿದರು.

ಎಲ್ಲ ನಂಬಿಕೆಗಳೂ ದೇವರೆಡೆಗೆ ಸಾಗುವಂತಹದ್ದೇ ಆದ್ದರಿಂದ ಗೌರವಕ್ಕೆ ಅರ್ಹವೇ ಆಗಿವೆ.ಪ್ರತಿಯೊಬ್ಬ ವ್ಯಕ್ತಿಯೂ ತಮ್ಮ ನಂಬಿಕೆಯ ಸನ್ಮಾರ್ಗದಲ್ಲಿ ಸಾಗಿದಾಗ ಎಲ್ಲರಿಗೂ ಶಾಂತಿ, ಒಳಿತುಂಟಾಗುತ್ತದೆ ಎಂದರು. ಮಧ್ಯಯುಗದ ಕಾಲದಲ್ಲಿ ಭಾರತದಲ್ಲಿದ್ದ ಪ್ರಮುಖ ಜೈನಮುನಿ ಆಚಾರ್ಯ ಜಿನದತ್ತ ಸೂರಿ(ದಾದಾ ಗುರುದೇವ್) ಅವರ ಬೋಧನೆಗಳು, ವಿದೇಶಿ ಆಕ್ರಮಣಗಳಂತಹ ಶತಮಾನಗಳ ಸವಾಲು-ಬಿಕ್ಕಟ್ಟುಗಳನ್ನು ಎದುರಿಸುವಂತಹ ಶಕ್ತಿ ಹೊಂದಿದ್ದವು. ಇದು ಸನಾತನ ಸಂಸ್ಕೃತಿಯ ಬಲವನ್ನು ಪ್ರತಿಬಿಂಬಿಸುತ್ತದೆ ಎಂದು ಅವರು ಹೇಳಿದರು.

ಶತಮಾನಗಳ ಬಳಿಕ ಜೈಸಲ್ಮೇರ್‌ನಲ್ಲಿ ಸಾಂಕ್ರಾಮಿಕ ಹರಡಿದ ವೇಳೆ ರಾಜ ಆ ಬಟ್ಟೆಯನ್ನು ಅಲ್ಲಿಂದ ತರಲು ಆದೇಶಿಸಿದ. ಈ ಬಟ್ಟೆಯ ಸ್ಪರ್ಶದ ಪವಿತ್ರ ನೀರನ್ನು ನಗರದಾದ್ಯಂತ ಚಿಮುಕಿಸಿದಾಗ ಸಾಂಕ್ರಾಮಿಕ ರೋಗ ನಿರ್ಮೂಲನೆಗೊಂಡಿತ್ತು. ಈ ಪವಿತ್ರ ವಸ್ತ್ರ ಈಗಲೂ ಅಲ್ಲಿ ಸುರಕ್ಷಿತವಾಗಿದ್ದು, ಭಕ್ತರು ಈ ಪವಿತ್ರ ವಸ್ತ್ರದ ಮೆರವಣಿಗೆ ನಡೆಸುವುದೇ ಚಾದರ ಉತ್ಸವವಾಗಿದೆ.

ಬಜೆಟ್‌ನಲ್ಲಿ ಪ್ರಸ್ತಾವನೆ | ಮೈಸೂರಲ್ಲಿ ಸೈಕ್ಲಿಂಗ್ ವೆಲೋಡ್ರೋಮ್ ನಿರ್ಮಾಣ


4 ರಾಷ್ಟ್ರ ಮಟ್ಟದ ಮ್ಯಾರಥಾನ್

• ಬೆಂಗಳೂರು: ಸೈಕ್ಲಿಂಗ್, ಕಯಾಕಿಂಗ್ ಮತ್ತು ಮ್ಯಾರಥಾನ್ ಕ್ರೀಡೆಗೆ ಒತ್ತು ನೀಡಿ, ರಾಜ್ಯಾದ್ಯಂತ ನೂತನ ಕ್ರೀಡಾಂಗಣಗಳನ್ನು ನಿರ್ಮಿಸುವುದು. ಇರುವ ಕ್ರೀಡಾಂಗಣ ಗಳ ಗುಣಮಟ್ಟ ಹೆಚ್ಚಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟಿನಲ್ಲಿ ಪ್ರಸ್ತಾಪಿಸಿದ್ದಾರೆ. ಕ್ರೀಡೆ ಕುರಿತಾದ ಯೋಜನೆಗಳ ಬಗ್ಗೆ ಮಾತನಾಡುತ್ತಾ ಅವರು, ತುಮಕೂರಿನಲ್ಲಿ ಕ್ರೀಡಾ ಮೂಲಸೌಕರ್ಯಗಳನ್ನು ಮೂರು ಕೋಟಿ ರೂ.ಗಳ ವೆಚ್ಚದಲ್ಲಿ ಉನ್ನತೀಕರಿಸಲಾಗುವುದು ಎಂದು ತಿಳಿಸಿದರು.

ಕ್ರೀಡಾ ಉತ್ತೇಜನ ವಿಚಾರದಲ್ಲಿ ಮ್ಯಾರಥಾನ್ ಮತ್ತು ನೀರಿನೊಂದಿಗೆ ಆಡಲಾಗುವ ಕ್ರೀಡೆಗಳ ಉತ್ತೇಜನಕ್ಕೆ ಸರ್ಕಾರ ಮುಂದಾಗಿದೆ. ಬೆಳಗಾವಿ ಅಂಥ ಪ್ರಮುಖ ನಗರಗಳಲ್ಲಿ ಕುಸ್ತಿ, ರಾಷ್ಟ್ರೀಯ ಮ್ಯಾರಥಾನ್ ಆಯೋಜನೆಗೆ ಒತ್ತು ನೀಡುವ ಭರವಸೆ ಕೂಡ ಸಿಎಂ ಸಿದ್ದರಾಮಯ್ಯ ನೀಡಿದ್ದಾರೆ.

ರಾಷ್ಟ್ರ ಮಟ್ಟದ ಮ್ಯಾರಥಾನ್: ಸಶಕ್ತ ಕರ್ನಾಟಕ ಕಾರ್ಯಕ್ರಮದಡಿ ಬೆಳಗಾವಿ, ಗೋಕರ್ಣ, ಚಿತ್ರದುರ್ಗ ಮತ್ತು ಹಂಪಿಯಲ್ಲಿ ರಾಷ್ಟ್ರಮಟ್ಟದ 4 ಮ್ಯಾರಥಾನ್‌ಗಳನ್ನು ಆಯೋಜಿಸುವ ಯೋಜನೆ ರೂಪಿಸಲಾಗಿದೆ. ರಾಷ್ಟ್ರೀಯ ಮಟ್ಟದಲ್ಲಿ ಈ ಮ್ಯಾರಥಾನ್‌ಗಳು ನಡೆಯಲಿವೆ. ದೇಶದ ಪ್ರತಿಭಾನ್ವಿತ ರನ್ನರ್‌ಗಳೊಂದಿಗೆ ನಮ್ಮ ಅಥ್ಲೀಟ್‌ಗಳು ಸ್ಪರ್ಧಿಸಿ ಉತ್ತಮ ಫಲಿತಾಂಶ ತರುವ ಉದ್ದೇಶ ಯೋಜನೆ ಹೊಂದಿದೆ. ಒಂದೊಂದು ಮ್ಯಾರಥಾನ್‌ಗಳು ಸುಮಾರು 10 ಲಕ್ಷ ರೂ. ಮೂಲದ್ದಾಗಿರುತ್ತದೆ. ಇಷ್ಟಕ್ಕೆ ನಿಲ್ಲದೆ, 10 ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ಮಟ್ಟದ ಮ್ಯಾರಥಾನ್ ಮಾಡುವ ಬಗ್ಗೆ ಪ್ರಸ್ತಾಪಿಸಲಾಗಿದೆ. ಇದು ಸುಮಾರು 4 ಲಕ್ಷ ರೂ. ಮೌಲ್ಯ ಹೊಂದಿರುತ್ತದೆ.

ಸೈಕ್ಲಿಂಗ್ ಟ್ರ್ಯಾಕ್: ಸೈಕ್ಲಿಂಗ್‌ಗೆ ಉತ್ತೇಜನ ನೀಡಲು



ಮೈಸೂರಿನಲ್ಲಿರುವ ದಟ್ಟಗಳ್ಳಿಯಲ್ಲಿ ಗುರುತಿಸಲಾದ ಜಾಗದಲ್ಲಿ ಆಧುನಿಕ ಸೈಕ್ಲಿಂಗ್ ವೆಲೋಡ್ರೋಮ್ ನಿರ್ಮಾಣ ಮಾಡುವ ಪ್ರಸ್ತಾವನೆ ಮಾಡಲಾಗಿದೆ. ಕರ್ನಾಟಕದಲ್ಲಿ ಸೈಕ್ಲಿಂಗ್‌ಗೆ ಉತ್ತಮ ವ್ಯಾಪ್ತಿ ಇದ್ದು, ಸಾವಿರಾರು ಸೈಕ್ಲಿಂಗ್ ಪ್ರಿಯರಿಗೆ ನೂತನ ಯೋಜನೆ ಸಹಾಯಕವಾಗಲಿದೆ. ಸೈಕ್ಲಿಂಗ್‌ನಲ್ಲಿ ಪರಿಣಾಮಕಾರಿ ಬದಲಾವಣೆಯಾಗಲಿದೆ.

ಬೆಂಗಳೂರಲ್ಲಿ ಕಯಾಕಿಂಗ್ ಕೇಂದ್ರ: ನೀರಲ್ಲಿ ಆಡಲಾಗುವ ಕಯಾಕಿಂಗ್, ದೋಣಿ ಸವಾರಿಯ ಉತ್ತೇಜನ ಮತ್ತು ಅಭ್ಯಾಸಕ್ಕೆ ಒತ್ತು ನೀಡುವ ದೃಷ್ಟಿಯಿಂದ ಬೆಂಗಳೂರಿನ ಹೆಸರಘಟ್ಟ ಕೆರೆಯಲ್ಲಿ ಪಿಪಿಪಿ ಮಾದರಿಯ ಕಯಾಕಿಂಗ್ ಮತ್ತು ದೋಣಿ ಸವಾರಿಯ ಶ್ರೇಷ್ಠತಾ ಕೇಂದ್ರಗಳ ಪ್ರಸ್ತಾವನೆ ಮಾಡಲಾಗಿದೆ. ಒಲಿಂಪಿಕ್ಸ್ ಭಾಗವಾಗಿರುವ ಕಯಾಕಿಂಗ್ ಅಭ್ಯಾಸಕ್ಕೆ ಬೂಸ್ಟರ್ ನೀಡುವ ಉದ್ದೇಶ ಪ್ರತಿಪಾದಿಸಲಾಗಿದೆ.

ಹೊಸ ಕ್ರೀಡಾಂಗಣಗಳ ನಿರ್ಮಾಣ: ಬಂಗಾರಪೇಟೆ, ಮುದ್ದೇಬಿಹಾಳ, ಗುಳೇದಗುಡ್ಡ, ಕನಕಪುರ, ಕುಕನೂರು ಮತ್ತು ಮಸ್ಕಿಯಲ್ಲಿ ತಲಾ 2 ಕೋಟಿ ರೂ. ವೆಚ್ಚದಲ್ಲಿ ತಾಲ್ಲೂಕು ಕ್ರೀಡಾಂಗಣಗಳ ನಿರ್ಮಾಣ ಮಾಡುವ ಬಗ್ಗೆ ಪ್ರಸ್ತಾಪಿಸಲಾಗಿದೆ.

ವಿಜಯನಗರ ಕ್ರೀಡಾಂಗಣ ಉತ್ತೇಜನ: ವಿಜಯನಗರ ಜಿಲ್ಲೆಯಲ್ಲಿರುವ ಕ್ರೀಡಾಂಗಣವನ್ನು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಕೆಎಮ್‌ಇಆರ್‌ಸಿ ಅನುದಾನದಲ್ಲಿ ಮೇಲ್ದರ್ಜೆಗೇರಿಸಲಾಗುವುದು. ಮಕ್ಕಳ ಕ್ರೀಡಾ ಪ್ರತಿಭೆಯನ್ನು ಪ್ರೋತ್ಸಾಹಿಸಲು ವಿರಾಜಪೇಟೆಯಲ್ಲಿ ಸುಸಜ್ಜಿತ ಕ್ರೀಡಾ ತರಬೇತಿ ವಸತಿ ನಿಲಯ ನಿರ್ಮಾಣಕ್ಕೆ ಕ್ರಮ ಕೈಗೊಳ್ಳುವ ಬಗ್ಗೆ ಬಜೆಟಿನಲ್ಲಿ ಪ್ರಸ್ತಾಪಿಸಲಾಗಿದೆ.

ಬೆಳಗಾವಿಯಲ್ಲಿ ಕುಸ್ತಿ ಅಖಾಡ: ಸಮಸ್ತ ಕರ್ನಾಟದ ಕುಸ್ತಿ ಪಟುಗಳನ್ನು ಪ್ರೋತ್ಸಾಹಿಸಲು ಬೆಳಗಾವಿಯ ಬೆಳಗುಂದಿಯಲ್ಲಿ ನೂತನ ಕುಸ್ತಿ ಅಖಾಡ ನಿರ್ಮಾಣ ಮಾಡುವ ಪ್ರಸ್ತಾವನೆ ಸಲ್ಲಿಸಲಾಗಿದೆ. ಬೆಳಗಾವಿಯಲ್ಲಿ ವಿಶೇಷವಾಗಿ ಕುಸ್ತಿ ಪಂದ್ಯಗಳನ್ನು ಹೆಚ್ಚಾಗಿ ಆಡಲಾಗುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರ ಕೈಗೊಳ್ಳಲಾಗಿದೆ.

ಕ್ರೀಡಾ ವಿಜ್ಞಾನ ಕೇಂದ್ರ ಸ್ಥಾಪನೆ

ಇನ್ನು ಕಲ್ಯಾಣ ಕರ್ನಾಟಕ ಭಾಗದ ಕ್ರೀಡಾಪಟುಗಳಿಗೆ ಉತ್ತಮ ಕ್ರೀಡಾ ವಿಜ್ಞಾನ ಸೇವೆಗಳನ್ನು ಒದಗಿಸಲು ಸಾರ್ವಜನಿಕ- ಖಾಸಗಿ ಸಹಭಾಗಿತ್ವದಲ್ಲಿ ಕಲಬುರಗಿಯಲ್ಲಿ ಆಧುನಿಕ ಕ್ರೀಡಾ ವಿಜ್ಞಾನ ಕೇಂದ್ರ ಆರಂಭ ಮಾಡಲು ಸರ್ಕಾರ ಮುಂದಾಗಿದೆ. ಗ್ರಾಮೀಣ ಮಟ್ಟದ ಕ್ರೀಡೆಗೂ ಉತ್ತಮ ದರ್ಜೆಯ ಸೌಲಭ್ಯಗಳನ್ನು ತಲುಪಿಸುವುದು ಇದರ ಉದ್ದೇಶವಾಗಿದೆ.

ಸರಣಿ ಶ್ರೇಷ್ಠ ಪ್ರಶಸ್ತಿಗೆ ಎಂಟು ಜನರ ಫೈಟ್

• ಮುಂಬೈ: ವಿಶ್ವಕಪ್ ಪಂದ್ಯಾವಳಿಯುದ್ದಕ್ಕೂ ಮಿಂಚಿರುವ ಆಟಗಾರರ ಪಟ್ಟಿಯನ್ನು ಬಿಡುಗಡೆ ಮಾಡಿರುವ ಐಸಿಸಿ ಪ್ರತಿಷ್ಠಿತ ಪಂದ್ಯಾವಳಿಗಾಗಿ ಸರಣಿ ಶ್ರೇಷ್ಠ ಆಟಗಾರರನ್ನು ನಾಮನಿರ್ದೇಶನ ಮಾಡಲಾಗಿದೆ. ಇದರಲ್ಲಿ ಸಂಜು ಸ್ಯಾಮ್ಸನ್ ಒಬ್ಬರೇ ಭಾರತೀಯರಾಗಿದ್ದಾರೆ. ಭಾನುವಾರದಂದು ಫೈನಲ್ ಪಂದ್ಯ ನಡೆಯಲಿದೆ. ವಾಡಿಕೆಯಂತೆ ಪಂದ್ಯಕ್ಕೂ ಮುನ್ನ ನಾಮನಿರ್ದೇನ ಮಾಡಲಾಗುತ್ತದೆ. ಈ ಬಾರಿಯ ನಾಮನಿರ್ದೇಶನದಲ್ಲಿ ದ.ಆಫ್ರಿಕಾದ ಇಬ್ಬರು, ನ್ಯೂಜಿಲೆಂಡ್‌ನ ಇಬ್ಬರು, ಇಂಗ್ಲೆಂಡ್, ಪಾಕಿಸ್ತಾನ, ಭಾರತ, ಅಮೆರಿಕದ ಒಬ್ಬರನ್ನು ನಾಮನಿರ್ದೇಶನ ಮಾಡಲಾಗಿದೆ. ಇಂಗ್ಲೆಂಡ್ ಆಲ್‌ರೌಂಡರ್ ವಿಲ್ ಜ್ಯಾಕ್ಸ್ ಮುಂಚೂಣಿಯಲ್ಲಿದ್ದಾರೆ. ಕೂಟದುದ್ದಕ್ಕೂ ಅತ್ಯುತ್ತಮ ಪ್ರದರ್ಶನ ನೀಡಿರುವ ಅವರು, ಪ್ರಮುಖ ಆಲ್ ರೌಂಡರ್ ಎನಿಸಿಕೊಂಡಿದ್ದಾರೆ. ಪಾಕಿಸ್ತಾನದ ಫರ್ಹಾನ್ ಅವರನ್ನು ಈ ಪಟ್ಟಿಗೆ ಸೇರಿಸಲಾಗಿದೆ. ಎರಡು ಶತಕ ಬಾರಿಸಿದ ದಾಖಲೆಯನ್ನೂ ಮಾಡಿರುವ ಅವರು ನಾಮನಿರ್ದೇಶನಗೊಂಡಿದ್ದಾರೆ. ಇನ್ನು ದ.ಆಫ್ರಿಕಾದಿಂದ ಇಬ್ಬರು, ನ್ಯೂಜಿಲೆಂಡ್ ತಂಡದಿಂದ ಇಬ್ಬರನ್ನು ಪಟ್ಟಿಯಲ್ಲಿ ಸೇರಿದಲಾಗಿದೆ.

ನಾಮನಿರ್ದೇಶನಗೊಂಡ ಆಟಗಾರರು

ಹೆಸರು	ತಂಡ	ಪ್ರದರ್ಶನ
ಸಂಜು ಸ್ಯಾಮ್ಸನ್	ಭಾರತ	232 ರನ್
ಏಡನ್ ಮಾರ್ಕ್ರಂ	ದ.ಆಫ್ರಿಕಾ	286 ರನ್
ಲುಂಗಿ ಎನ್‌ಗಿಡಿ	ದ.ಆಫ್ರಿಕಾ	12 ವಿಕೆಟ್
ಟಿಮ್ ಸೈಫರ್ಟ್	ನ್ಯೂಜಿಲೆಂಡ್	274 ರನ್
ರಚಿನ್ ರವೀಂದ್ರ	ನ್ಯೂಜಿಲೆಂಡ್	11 ವಿಕೆಟ್, 128 ರನ್
ಸಹಿಬ್ಜಾದ್ ಫರ್ಹಾನ್	ಪಾಕಿಸ್ತಾನ	383 ರನ್
ಶ್ಯಾಡ್ಲಿ ವ್ಯಾನ್	ಅಮೆರಿಕ	13 ವಿಕೆಟ್

ಸೆಮಿಗೇರಿದ ಅಂಕಿತಾ, ವೈಷ್ಣವಿ


▸ರಾಚಪ್ಪಾ ಜಂಬಗಿ

• ಕಲಬುರಗಿ: ಭಾರತೀಯ 3ನೇ ಶ್ರೇಯಾಂಕಿತ ವೈಷ್ಣವಿ ಅಡ್ಕರ್ ಎದುರಾಳಿಯ ನಿರಂತರ ಡ್ರಾಪ್ ಶಾಟ್ ಬಳಸಿ ಮೂಲಕ ಪಂದ್ಯದಲ್ಲಿ ಮೇಲುಗೈ ಸಾಧಿಸಿದರೆ, ಇನ್ನೊಂದೆಡೆ ಅಂಕಿತಾ ರೈನಾ, ಎದುರಾಳಿಯ ಅನಗತ್ಯ ತಪ್ಪಿನ ಪ್ರಯೋಜನ ಪಡೆದು ಶುಕ್ರವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಗೆದ್ದು ಸಿಂಗಲ್ಸ್ ಸೆಮಿಫೈನಲ್‌ಗೆ ಲಗ್ಗೆಯಿಟ್ಟರು.

ನಗರದ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದಲ್ಲಿ ಲಾನ್ ಟೆನ್ನಿಸ್ ಅಂಗಳದಲ್ಲಿ ನಡೆದ ಐಟಿಎಫ್ ಡಬ್ಲ್ಯು-35 ಓಪನ್ ಟೆನಿಸ್ ಟೂರ್ನಿಯ ಪಂದ್ಯದಲ್ಲಿ ವೈಷ್ಣವಿ, ಉಕ್ರೇನ್‌ನ ಎಲಿನಾ ನೆಪ್ಲಿಯ ವಿರುದ್ಧ ನೇರ ಸೆಟ್‌ಗಳಲ್ಲಿ ಜಯ ಪಡೆದರು. ಈ ಮಧ್ಯೆ ನೆಪ್ಲಿಯ,ಅಡ್ಕರ್‌ರ ಆಟದ ರಿದಮ್‌ನ್ನು ಕದಡುವ ಉದ್ದೇಶದಿಂದ ಕೆಲವೊಮ್ಮೆ ಡ್ರಾಪ್ ಶಾಟ್ ಪ್ರಯೋಗಿಸಿದ್ದರಿಂದ ಗೇಮ್‌ನಲ್ಲಿ ದೀರ್ಘ ಡ್ಯೂಸ್ ಹೋರಾಟ ಕಂಡುಬಂತು.

ಮೊದಲ ಗೇಮ್‌ನಲ್ಲಿ ಸರ್ವ್ ಬ್ರೇಕ್ ಮಾಡಿ ನಂತರ ಕಠಿಣ ಹೋರಾಟ ನಡೆದರೂ ಅವರು 6-1, 6-3 ಅಂತರದಲ್ಲಿ ಗೆಲುವು ಸಾಧಿಸಿ ಮುಂದಿನ ಹಂತಕ್ಕೆ ಪ್ರವೇಶ ಪಡೆದರು. ಇನ್ನೊಂದೆಡೆ ಅಂಕಿತಾ ರೈನಾ, ರಷ್ಯಾದ ಎಲಿನಾ ಬರ್ಡಿನಾ ವಿರುದ್ಧ ನೇರ ಸೆಟ್‌ಗಳಲ್ಲಿ ಜಯ ಸಾಧಿಸಿದರು. ಆರಂಭದಲ್ಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿ ಮೊದಲ ಗೇಮ್‌ನಲ್ಲೇ ಬ್ರೇಕ್ ಪಾಯಿಂಟ್ ಸೃಷ್ಟಿಸಿಕೊಂಡರು. ಬರ್ಡಿನಾ ತಮ್ಮ ಶಾಟ್‌ಗಳಲ್ಲಿ ವೈವಿಧ್ಯತೆ ತರುವ ಪ್ರಯತ್ನ ಮಾಡಿದರೂ ಅದು ಫಲಕಾರಿಯಾಗಲಿಲ್ಲ, ಕೊನೆಯಲ್ಲಿ ಅಂಕಿತಾ 6-0,6-2ರ ಗೆಲುವು ಪಡೆದರು.

ಮಿಂಚಿದ ನಾಕ್ಲೋ,ಗಿಂಬ್ರೇರ್: ಥಾಯ್ಲೆಂಡಿನ ಎ ಚಾಂಟ್ ವಿರುದ್ಧದ ಸಿಂಗಲ್ಸ್ ಪಂದ್ಯದಲ್ಲಿ ಟಿ ನಾಕ್ಲೋ 6-4,6-1 ಅಂತರದಲ್ಲಿ ಗೆಲವು ಸಾಧಿಸಿದರು. ಇಸ್ರೇಲಿನ ಎಮ್ ಲಾರೋನ್ ವಿರುದ್ಧದ ಕ್ವಾರ್ಟರ್‌ನಲ್ಲಿ ನೆದರ್ಲ್ಯಾಂಡ್ಸ್‌ನ ಜಾಸ್ಮಿನ್ ಗಿಂಬ್ರೇರ್ ಕ್ಲಾಸಿಕ್ ಆಟ ಪ್ರದರ್ಶಿಸುವ ಮೂಲಕ 6-2-6-2 ಅಂತರದಲ್ಲಿ ಗೆಲುವು ಪಡೆದುಕೊಂಡು.



ಡಬಲ್ಸ್‌ನಲ್ಲಿ ನಂ.1 ಸ್ಥಾನ ಖಚಿತ

ಡಬಲ್ಸ್ ಸೆಮಿಫೈನಲ್‌ನಲ್ಲಿ ಭಾರತದ ಅಗ್ರ 3ನೇ ಶ್ರೇಯಾಂಕಿತ ವೈಷ್ಣವಿ ಅಡ್ಕರ್ ಮತ್ತು ಅಂಕಿತಾ ರೈನಾ 7-6 (5), 6-2 ಸೆಟ್‌ಗಳಿಂದ ಸೋನಾಲ್ ಪಾಟೀಲ್ ಮತ್ತು ಬೇಲಾ ತಮ್ಹಾಂಕರ್ ಅವರನ್ನು ಮಣಿಸಿ ಫೈನಲ್‌ಗೇರಿದರು. ಮತ್ತೊಂದು ಸೆಮಿಫೈನಲ್ ಪಂದ್ಯದಲ್ಲಿ ಆಕಾಂಕ್ಷಾ ದಿಲೀಪ್ ನಿಟ್ಟೂರೆ ಮತ್ತು ಸೋಹಾ ಸಾದಿಕ್ ಜೋಡಿ 6-7 (7), 6-0, 10-5 ಸೆಟ್‌ಗಳಿಂದ ಜಪಾನ್‌ನ ಮಿಚಿಕಾ ಒಜೆಕಿ ಜೋಡಿಯನ್ನು ಸೋಲಿಸಿ ಫೈನಲ್ ತಲುಪಿತು. ಇದರೊಂದಿಗೆ ಭಾರತಕ್ಕೆ ಪದಕ ಖಚಿತವಾಗಿದೆ.

ಮಹಿಳೆಯರ ಟೆಸ್ಟ್: ಭಾರತಕ್ಕೆ ಮಿಶ್ರ ಫಲ

• ಪರ್ತ್: ಬ್ಯಾಟಿಂಗ್‌ನಲ್ಲಿ ಭಾರೀ ಹಿನ್ನಡೆ ಅನುಭವಿಸಿದ ನಂತರ ಬೌಲಿಂಗ್‌ನಲ್ಲಿ ಮಿಂಚಿರುವ ಭಾರತ ತಂಡವು ಸಮಾಧಾನಕರ ಪ್ರದರ್ಶನ ನೀಡದಿದ್ದರೂ ಮಿಶ್ರ ಫಲ ಪಡೆಯಿತು. ಆಸ್ಟ್ರೇಲಿಯಾದಲ್ಲಿ ನಡೆಯುತ್ತಿರುವ ಭಾರತ ಹಾಗೂ ಆಸ್ಟ್ರೇಲಿಯಾ ನಡುವಿನ ಡೆ, ನೈಟ್ ಟೆಸ್ಟ್ ಪಂದ್ಯದಲ್ಲಿ ಭಾರತ ಮೊದಲ ದಿನವೇ ಆಲೌಟ್ ಆಯಿತು, ಆದಾಗ್ಯೂ ಆಸ್ಟ್ರೇಲಿಯಾ ಬ್ಯಾಟರ್‌ಗಳನ್ನು ಕಟ್ಟಿ ಹಾಕಿದ್ದು, 3 ವಿಕೆಟ್‌ಗಳನ್ನು ಪಡೆದುಕೊಂಡಿದೆ. ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ ರಾಡ್ರಿಗ್ಸ್ ಅವರ ಉತ್ತಮ



ಬ್ಯಾಟಿಂಗ್‌ನೊಂದಿಗೆ 62.4 ಓವರ್‌ಗಳಲ್ಲಿ 198 ರನ್ ಗಳಿಸುವಷ್ಟರಲ್ಲಿ ಆಲೌಟ್ ಆಯಿತು. ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ 97 ರನ್ ಗಳಿಸುವಷ್ಟರಲ್ಲಿ 3 ಪ್ರಮುಖ ವಿಕೆಟ್‌ಗಳನ್ನು ಕಳೆದುಕೊಂಡಿದೆ. ಶೆಫಾಲಿ ವರ್ಮಾ ಉತ್ತಮ ಆರಂಭ ಒದಗಿಸಿದರೂ, ಮಂಧಾನ, ಪ್ರತಿಕಾ ಬೇಗನೇ ವಿಕೆಟ್ ಒಪ್ಪಿಸಿದ್ದು ಭಾರತಕ್ಕೆ ಆಘಾತ ನೀಡಿತು. ಮಧ್ಯಮ ಕ್ರಮಾಂಕದಲ್ಲಿ ರಾಡ್ರಿಗ್ಸ್ 52 ರನ್ ಬಾರಿಸಿದರು. ಕೆಳಕ್ರಮಾಂಕದಲ್ಲಿ ಕಾಶ್ವಿ ಗೌತಮ್ 34 ರನ್‌ಗಳಿಸಿ ಬ್ಯಾಟಿಂಗ್ ಮಾಡುತ್ತಿದ್ದರು. ಅಷ್ಟೊತ್ತಿಗಾಗಲೇ ಭಾರತ ಪತನಗೊಂಡಿತು. ಆಸ್ಟ್ರೇಲಿಯಾ ಪರ ಅನ್ನಾಬೆಲ್ ಸುದರ್‌ಲೆಂಡ್ 46 ರನ್ ಮಾತ್ರ ನೀಡಿ 4 ವಿಕೆಟ್ ಕಿತ್ತರು. ಪಂದ್ಯದ ಬೆಸ್ಟ್ ಬೌಲರ್ ಎನಿಸಿಕೊಂಡರು. ಲೂಸಿ 3 ವಿಕೆಟ್ ಪಡೆದರು. ಆಸ್ಟ್ರೇಲಿಯಾಗೂ ದೊಡ್ಡ ಆರಂಭ ಸಿಗಲಿಲ್ಲ. ವಾಲ್, ಲಿಚ್‌ಫೀಲ್ಡ್ ಬೇಗನೇ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ಎಲ್ಲೀಸ್ ಪೆರ್ರಿ 62 ಬಾಲ್‌ಗಳಲ್ಲಿ ಔಟಾಗದೆ 43 ರನ್ ಗಳಿಸಿ ಬ್ಯಾಟಿಂಗ್ ಉಳಿಸಿಕೊಂಡಿದ್ದಾರೆ. ಅನ್ನಾಬೆಲ್ 20 ರನ್ ಗಳಿಸಿ ಬ್ಯಾಟಿಂಗ್ ಮಾಡುತ್ತಿದ್ದಾರೆ.

ವಿಧಾನಸೌಧದ ಬಳಿ ಬಿಜೆಪಿ ಪ್ರತಿಭಟನೆ



• ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ ರಾಜ್ಯ ಬಜೆಟ್ ಖಾಲಿ ಚೊಂಬಿನಂತಿದೆ ಎಂದು ಆಕ್ಷೇಪಿಸಿ ಬಿಜೆಪಿ ವತಿಯಿಂದ ವಿಧಾನಸೌಧದ ಬಳಿ ಪ್ರತಿಭಟನೆ ನಡೆಸಲಾಯಿತು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆಯ ವಿಪಕ್ಷ ನಾಯಕ ಆರ್.ಅಶೋಕ್, ಉಪ ನಾಯಕ ಅರವಿಂದ ಬೆಲ್ಲದ, ವಿಧಾನಪರಿಷತ್ ವಿಪಕ್ಷ ಮುಖ್ಯ ಸಚೇತಕ ಎನ್.ರವಿಕುಮಾರ್ ಸೇರಿದಂತೆ ಶಾಸಕರು, ವಿಧಾನಪರಿಷತ್ ಸದಸ್ಯರು ಭಾಗವಹಿಸಿದ್ದರು. ಕನ್ನಡಿಗರಿಗೆ ಖಾಲಿ ಚೊಂಬು ಕೊಟ್ಟ ಕಾಂಗ್ರೆಸ್ ಸರ್ಕಾರ ಎಂಬ ಪೋಸ್ಟರ್ ಹಿಡಿದು ಬಿಜೆಪಿ ಶಾಸಕರು ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಪ್ರಮುಖರು ಕೈಯಲ್ಲಿ ಖಾಲಿ ಚೊಂಬನ್ನು ಪ್ರದರ್ಶಿಸಿದರು. ಯುವಕರಿಗೆ ಮೋಸ ಮಾಡಿದ ಸರಕಾರಕ್ಕೆ ಧಿಕ್ಕಾರ, 3 ವರ್ಷದಲ್ಲಿ ಮೂರೂವರೆ ಲಕ್ಷ ಕೋಟಿ ಸಾಲ ಮಾಡಿದ ಸರಕಾರಕ್ಕೆ ಧಿಕ್ಕಾರ, ಬಜೆಟ್ಟಂತೆ ಬಜೆಟ್ ಖಾಲಿ ಚೊಂಬಿನ ಬಜೆಟ್- ಎಂಬಿತ್ಯಾದಿ ಘೋಷಣೆಗಳನ್ನು ಕೂಗಲಾಯಿತು.

ರಾಜ್ಯದ ಜನರಿಗೆ ಖಾಲಿ ಚೊಂಬು ನೀಡಿದ ಸಿದ್ದರಾಮಯ್ಯನವರಿಗೆ ಧಿಕ್ಕಾರ, ಕನ್ನಡಿಗಥರಿಗೆ ಖಾಲಿ ಚೊಂಬು ನೀಡಿದ ಸಿದ್ದರಾಮಯ್ಯನವರಿಗೆ ಧಿಕ್ಕಾರ ಎಂದು ಕೂಗಿದರು. ರಾಜ್ಯದ ರೈತರಿಗೆ ಖಾಲಿ ಚೊಂಬು ಕೊಟ್ಟ ಸರಕಾರಕ್ಕೆ ಧಿಕ್ಕಾರ ಎಂದು ಕೂಗಲಾಯಿತು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿಕೆ

ಜನರ ಅಪೇಕ್ಷೆಯಂತೆ ರಾಜ್ಯದಲ್ಲಿ ಬದಲಾವಣೆ

• ಮೈಸೂರು: ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತ ವೈಖರಿಯಿಂದ ರಾಜ್ಯದ ಜನರು ಬೇಸತ್ತು ಹೋಗಿದ್ದಾರೆ. ಬದಲಾವಣೆಯನ್ನು ಬಯಸಿದ್ದಾರೆ. ಹಾಗಾಗಿ ಜನರ ಅಪೇಕ್ಷೆಯಂತೆ ರಾಜ್ಯದಲ್ಲಿ ಬದಲಾವಣೆ ತರಲು ನಾನು ರಾಜ್ಯ ಪ್ರವಾಸವನ್ನು ಕೈಗೊಂಡಿದ್ದೇನೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಶುಕ್ರವಾರ ಮೈಸೂರಿನ ಚಾಮುಂಡಿಬೆಟ್ಟಕ್ಕೆ ಆಗಮಿಸಿದ ಅವರು, ನಾಡ ಶಕ್ತಿ ದೇವತೆ ತಾಯಿ ಚಾಮುಂಡೇಶ್ವರಿಯ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿ, ಪ್ರಾರ್ಥಿಸಿದರು. ಬಳಿಕ ಚಾಮುಂಡಿಬೆಟ್ಟದ ಪಾದದಲ್ಲಿರುವ ಸುತ್ತೂರು ಮಠಕ್ಕೆ ಆಗಮಿಸಿ, ಶ್ರೀಮಠದ ಪೀಠಾಧಿಪತಿಗಳಾದ ಶ್ರೀಶಿವರಾತ್ರಿದೇಶಿಕೇಂದ್ರ ಸ್ವಾಮಿಯವರನ್ನು ಭೇಟಿ ಮಾಡಿ, ಆಶೀರ್ವಾದ ಪಡೆದರು. ಕುಶಲೋಪರಿ ವಿಚಾರಿಸಿದ ಬಳಿಕ ಶ್ರೀಮಠದಲ್ಲಿಯೇ ಉಪಹಾರ ಸೇವಿಸಿದರು. ನಂತರ ಮಾಧ್ಯಮದವರೊಂದಿಗೆ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರದ ಜನರ ಎಲ್ಲಾ ನಿರೀಕ್ಷೆಗಳನ್ನು ಸರ್ಕಾರ ಹುಸಿ ಮಾಡಿದೆ. ರಾಜ್ಯದಲ್ಲಿ ಯಾವ ಅಭಿವೃದ್ಧಿ



ಕಾರ್ಯಗಳು ನಡೆಯುತ್ತಿಲ್ಲ, ಮುಖ್ಯಮಂತ್ರಿ ಬದಲಾವಣೆ ವಿಚಾರವಾಗಿ ಕಚ್ಚಾಡುತ್ತಿದ್ದಾರೆ. ಗೊಂದಲ ಗಳಿವೆ. ಕಾನೂನು ಸುವ್ಯವಸ್ಥೆ ಹಾಳಾಗಿದೆ. ಜನರಿಗೆ ನೆಮ್ಮದಿಯಿಲ್ಲದಂತಾಗಿದೆ. ಈ ಕಾರಣ ಜನ ಬದಲಾವಣೆ ಬಯಸಿದ್ದಾರೆ ಎಂದು ಹೇಳಿದರು.

ಇರಾನ್ ಮತ್ತು ಇಸ್ರೇಲ್ ನಡುವಿನ ಯುದ್ಧದ ವಿಚಾರದಲ್ಲಿ ಪ್ರಧಾನಮಂತ್ರಿ ನರೇಂದ್ರಮೋದಿ ಅವರ ಬಗ್ಗೆ ಗೊಂದಲ ಮೂಡಿಸುತ್ತಿದ್ದಾರೆ. ಮೋದಿ ಅವರು ಒಳ್ಳೆಯ ಕೆಲಸಗಳನ್ನ ಮಾಡುತ್ತಿದ್ದಾರೆ. ಹೀಗಿದ್ದರೂ ಗೊಂದಲ ಸೃಷ್ಟಿ ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈ ವೇಳೆ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಬಿಜೆಪಿ ಗ್ರಾಮಾಂತರ ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಎನ್. ಸುಬ್ಬಣ್ಣ, ನಗರಾಧ್ಯಕ್ಷ ಎಲ್.ನಾಗೇಂದ್ರ, ಮಾಜಿ ಸಚಿವ ಎನ್. ಮಹೇಶ್, ಮಾಜಿ ಸಂಸದ ಪ್ರತಾಪ್‌ಸಿಂಹ ಮತ್ತಿತರರು ಹಾಜರಿದ್ದರು.

ಹೋಳಿ ಹಬ್ಬ: ಜೈ ಮಹಾರಾಷ್ಟ್ರ ಹಾಡು, ಆಯೋಜಕರ ವಿರುದ್ಧ ದೂರು

• ಬೆಳಗಾವಿ: ಹೋಳಿ ಹಬ್ಬದ ದಿನ ಬೆಳಗಾವಿಯ ಅನಗೋಳ ಪ್ರದೇಶದ ರಾಜಹಂಸ ಗಲ್ಲಿಯಲ್ಲಿ ಆಯೋಜಿಸಲಾಗಿದ್ದ ಹೋಳಿ ಹಬ್ಬದ ಸಂಭ್ರಮಾಚರಣೆಯಲ್ಲಿ ಬೇರೆ ರಾಜ್ಯ ಓಲೈಸುವ ಉದ್ದೇಶದಿಂದ 'ಜೈ ಜೈ ಮಹಾರಾಷ್ಟ್ರ ಮಾಜಾ' ಎಂಬ ಹಾಡನ್ನು ಹಾಕಿ ಕುಣಿದು ಮತ್ತೊಂದು ಯಟವಟ್ಟು ಮಾಡಿಕೊಂಡ ಎಂಇಎಸ್ ಪುಂಡರ ವಿರುದ್ಧ ಕನ್ನಡಿಗರ ಆಕ್ರೋಶಕ್ಕೆ ಕಾರಣವಾಗಿತ್ತು. ಈ ಕೃತ್ಯ ಕನ್ನಡಿಗ ಮತ್ತು ಸಾರ್ವಜನಿಕರ ಭಾವನೆಗಳಿಗೆ ಧಕ್ಕೆ ತಂದಿದ್ದು, ಆಯೋಜಕರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳುವಂತೆ ಕರ್ನಾಟಕ ರಕ್ಷಣಾ ವೇದಿಕೆ ಬೆಳಗಾವಿ ಜಿಲ್ಲಾ ಘಟಕದ ವತಿಯಿಂದ ಟಿಳಕವಾಡಿ ಪೊಲೀಸ್ ಠಾಣೆಯಲ್ಲಿ ಕಾರ್ಯಕ್ರಮದ ಆಯೋಜಕರ ವಿರುದ್ಧ ದೂರು ದಾಖಲಿಸಲಾಗಿದೆ.

ಜೈ ಜೈ ಮಹಾರಾಷ್ಟ್ರ ಮಾಜಾ ಎಂದು ಹಾಡಿಗೆ ನೃತ್ಯ ಮಾಡಿದವರ ಹಾಗೂ ಆಯೋಜಕರ ವಿರುದ್ಧ ಟಿಳಕವಾಡಿ ಪೊಲೀಸರು ದೂರು ದಾಖಲಿಸಿಕೊಂಡು ತನಿಖೆ ಮುಂದುವರಿಸಿ ಕಠಿಣ ಕ್ರಮಕ್ಕೆ ಗೊಳ್ಳಲಿದ್ದಾರೆ.

ಗ್ಯಾರಂಟಿಯಿಂದ ಅಭಿವೃದ್ಧಿ ನಿಂತಿಲ್ಲ: ಜಾರಕಿಹೊಳಿ

• ಬೆಳಗಾವಿ: ಗ್ಯಾರಂಟಿ ಯೋಜನೆಗಳಿಗೆ ವಾರ್ಷಿಕ 50-60 ಸಾವಿರ ಕೋಟಿ ರೂ. ವೆಚ್ಚವಾಗುತ್ತಿರುವುದು ಸರ್ಕಾರದ ಮೇಲೆ ಆರ್ಥಿಕ ಹೊರೆಯಾಗಿದೆ. ಆದರೂ ಅಭಿವೃದ್ಧಿ ಕೆಲಸಗಳು ನಿಂತಿಲ್ಲ ಎಂದು ಲೋಕೋಪಯೋಗಿ ಇಲಾಖೆ ಸಚಿವ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.



ಗ್ಯಾರಂಟಿ ಯೋಜನೆಗಳ ಬಗ್ಗೆ ಡಿಸಿಎಂ ಡಿ.ಕೆ. ಶಿವಕುಮಾರ, ಸಚಿವ ಎಂ.ಬಿ.ಪಾಟೀಲ ಅಪಸ್ವರ ಎತ್ತಿದ ಬೆನ್ನಲ್ಲೇ, ಸಚಿವ ಸತೀಶ ಜಾರಕಿಹೊಳಿ ಕೂಡ ಅದೇ ಧಾಟಿಯಲ್ಲಿಯೇ ಶುಕ್ರವಾರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ್ದಾರೆ.

ಕಳೆದ 2-3 ವರ್ಷಗಳಲ್ಲಿ ಸರ್ಕಾರ ಏನೂ ಮಾಡಿಲ್ಲ, ಎಂಬ ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಆರೋಪ ನಿರಾಧಾರ. ನಾವು



ಕೆಲಸ ಮಾಡಿದ್ದೇವೋ ಇಲ್ಲವೋ ಎಂಬುದನ್ನು ಜನರೇ ತೀರ್ಮಾನಿಸುತ್ತಾರೆ. ಗುತ್ತಿಗೆದಾರರ ಬಾಕಿ ಬಿಲ್ ಕುರಿತ ಬೇಡಿಕೆಗಳನ್ನು ಸಿಎಂ ಗಮನಕ್ಕೆ ತಂದರೆ ಸಮಸ್ಯೆ ಬಗೆಹರಿದು ಹಣ ಬಿಡುಗಡೆಯಾಗಲಿದೆ ಎಂದು ತಿಳಿಸಿದರು.

ರಾಜ್ಯ ರಾಜಕಾರಣದಲ್ಲಿ ಮುಖ್ಯಮಂತ್ರಿ ಬದಲಾವಣೆ ಹಾಗೂ ಅಧಿಕಾರ ಹಂಚಿಕೆ ಕುರಿತ ಗೊಂದಲಗಳಿಗೆ ಹೈಕಮಾಂಡ್ ಕೂಡಲೇ ಸ್ಪಷ್ಟನೆ ನೀಡಬೇಕು. ಇಲ್ಲದಿದ್ದರೆ ಸರ್ಕಾರಕ್ಕೆ ಸಂಕಷ್ಟ ಎದುರಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.


ಒಬ್ಬರು ಅರ್ಧ ಅವಧಿ ಎನ್ನುತ್ತಾರೆ, ಮತ್ತೊಬ್ಬರು ಪೂರ್ಣ ಅವಧಿ ಎನ್ನುತ್ತಾರೆ. ಇಂತಹ ಚರ್ಚೆಗಳಿಂದ ಶಾಸಕರು, ಕಾರ್ಯಕರ್ತರು ಹಾಗೂ ಅಧಿಕಾರಿಗಳಲ್ಲಿ ಗೊಂದಲದ ವಾತಾವರಣ ನಿರ್ಮಾಣ ಸೃಷ್ಟಿಯಾಗುತ್ತಿದೆ. ಗೊಂದಲ ಹೀಗೆಯೇ ಮುಂದುವರಿದರೆ ಸರ್ಕಾರಕ್ಕೆ ಸಂಕಷ್ಟವಾಗಲಿದೆ ಎಂಬುವುದಕ್ಕೆ ಮೌನವಾದರು.

ದೆಹಲಿ ನಾಯಕತ್ವವೇ ಈ ಬಗ್ಗೆ ಕಟ್ಟುನಿಟ್ಟಿನ ನಿರ್ಧಾರ ಪ್ರಕಟಿಸಬೇಕು. ಸಿಎಂ ಬದಲಾವಣೆ ಇದೆಯೋ ಇಲ್ಲವೋ ಎಂಬುದನ್ನು ಹೈಕಮಾಂಡ್ ಸ್ಪಷ್ಟಪಡಿಸಬೇಕು. ಅಲ್ಲದೆ, ಮೂಲಸೌಕರ್ಯ ವಲಯದಲ್ಲಿ ಪದೇ ಪದೆ ಹೊರಹೊಮ್ಮುತ್ತಿರುವ ಗುತ್ತಿಗೆದಾರರಿಗೆ ಬಾಕಿ ಪಾವತಿಗಳ ವಿಷಯದ ಕುರಿತು, ಮುಖ್ಯಮಂತ್ರಿಗಳ ಗಮನಕ್ಕೆ ತಂದರೆ ಈ ವಿಷಯ ಪರಿಹರಿಸಬಹುದು ಎಂದರು.

ಬಾಕಿ ಇರುವ ಮಸೂದೆಗಳ ವಿಷಯವನ್ನು ಮುಖ್ಯಮಂತ್ರಿ ಮುಂದೆ ಇಟ್ಟ ನಂತರ, ಸಮಸ್ಯೆಯನ್ನು ಪರಿಹರಿಸಲಾಗುವುದು ಮತ್ತು ಹಣ ಬಿಡುಗಡೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ಪದಬಂಧ

▸ ರಾಜಾ ಸಂಗಮೇಶ ಹಿರೇಮಠ



5916

ಎಡದಿಂದ ಬಲಕ್ಕೆ
2.ಭಾರವಾಗಿ ಉಸಿರಾಡು (4)
4.ಹತ್ತೂರಲ್ಲೂ ನೆಲೆಸಿರುವ ಶಿವ (2)
5.ಚಲಿಸುವುದರ ನಡುವೆ ಬುದ್ಧಿವಂತನಿದ್ದಾನೆ (3)
6.ಎಳೆಯ ಬಿಸಿಲನ್ನು ಹೀಗೂ ಹೇಳುತ್ತೇವೆ (5)
9.ಸಣ್ಣ ಗಂಟೆಗಳಿರುವ ಕಾಲಿನ ಆಭರಣ (4)
10.ಭಗವಂತನ ಸೇವಕ ಚಲನಚಿತ್ರವಾಗಿದ್ದಾನೆ (4)
13.ಲಲಿತಕಲೆಗಳ ಸಾರವನ್ನು ಅನುಭವಿಸು (5)
15.ದೊಡ್ಡ ಜಲವಾಹ (4)
17.ಸ್ವತಂತ್ರವಾಗಿ ಉಚ್ಚರಿಸುವ ವರ್ಣ (2)
18.ಕಾಸು ಕೊಟ್ಟು ದಾರ ಖರೀದಿಸಿದ ಕುದುರೆಯ ಸೇವಕ (4)

ಮೇಲಿನಿಂದ ಕೆಳಕ್ಕೆ
1.ಮಲಗಲು ಉಪಯೋಗಿಸುವ ಆಸನ (2)
2.ಘೋಷಣೆ-ಅಲಂಕಾರಗಳೊಂದಿಗೆ ಸಾಗುವ ಕಾರ್ಯಕ್ರಮ (5)
3.ಧನಸಂಪತ್ತಿನಿಂದ ಕೂಡಿದ ಸ್ಥಿತಿ (4)
4.ಆಯುಧದ ಅಲಗು ಚೂಪಾಗಿದೆ (3)
7.ವ್ಯಕ್ತಿ-ವಸ್ತುವಿನ ಸುತ್ತಲಿನ ಪರಿಸ್ಥಿತಿ (4)
8.ಸಾಲ ಪಡೆದು ಕೊಡದೇ ಇರುವವನು (4)
11.ಬಲವಾದ ರಕ್ಷಣೆ-ದೃಢವಾದ ಗೂಡು (5)
12.ಒಂಬತ್ತು ಬಗೆಯ ಕಲೆಯ ಭಾವಗಳು (4)
14. ಆಕೃತಿ ಸಹಿತವಾಗಿರುವಿಕೆ (3)
16.ತಲೆಯ ಮೇಲಿನ ಶಿಖೆ (2)

5915 ಉತ್ತರ

ಎಡದಿಂದ ಬಲಕ್ಕೆ:
3.ಪಾಪಸುಕಳ್ಳಿ
5.ಭವತಾರಿಣಿ 6.ಪಾಶ
7.ಕಾರ್ಯ 9.ಕಳವಳ
11.ದೇವಾಲಯ
15.ಆವಿ 16.ಭಯ
17.ಭಾಷಾವಿಜ್ಞಾನ
19.ವರದಿಗಾರ

ಮೇಲಿನಿಂದ ಕೆಳಕ್ಕೆ:
1.ಶುಭಮಂಗಳ
2.ಶೀತಾ 3.ಪಾಣಿಪಾತ್ರ
4.ಕನಕಾಚಲ 8.ವೊಳ
10.ವನವಿಹಾರ 12.ವಾಣಿ
13.ಯಮುನಾನದಿ
14.ರಾಯಭಾರ 18.ವಿದ್ಯೆ



2026-2027
ರಾಜ್ಯ ಬಜೆಟ್
ನಾವು ಕಂಡಂತೆ



ಸಿದ್ದರಾಮಯ್ಯನವರು ಮಂಡಿಸಿರುವ ಇಂದಿನ ಬಜೆಟ್ ಕರ್ನಾಟಕದ ಪಾಲಿಗೆ ಭರವಸೆಗಿಂತ ಹೆಚ್ಚಾಗಿ ಆರ್ಥಿಕ ಸಂಕಷ್ಟವನ್ನೇ ತಂದೊಡ್ಡಿದೆ. ಅಭಿವೃದ್ಧಿಗಿಂತ ಕೇವಲ ಜನಪ್ರಿಯ ಯೋಜನೆಗಳ ಹೆಸರಿನಲ್ಲಿ ರಾಜ್ಯವನ್ನು ಸಾಲದ ಕೂಪಕ್ಕೆ ದೂಡಲಾಗಿದೆ. ಈ ಮೂಲಕ ಅವರು ಅತಿ ಹೆಚ್ಚು ಸಾಲ ಮಾಡಿದ ಮುಖ್ಯಮಂತ್ರಿ ಎಂಬ ಹಣೆಪಟ್ಟಿಯನ್ನು ಮತ್ತಷ್ಟು ಗಟ್ಟಿಗೊಳಿಸಿಕೊಂಡಿದ್ದಾರೆ. ಈ ಬಜೆಟ್ ರಾಜ್ಯದ ಭವಿಷ್ಯದ ಬಗ್ಗೆ ಯಾವುದೇ ದೂರದೃಷ್ಟಿ ಹೊಂದಿಲ್ಲದ ಮತ್ತು ಸಾಮಾನ್ಯ ಜನರ ಮೇಲೆ ಸಾಲದ ಹೊರೆ ಹೊರಿಸುವ ಒಂದು ನಿರಾಶಾದಾಯಕ ಆಯವ್ಯಯವಾಗಿದೆ. ಸಮಗ್ರ ಉತ್ತರ ಕನ್ನಡ ಜಿಲ್ಲೆಯ ಅಭಿವೃದ್ಧಿಗೆ ಪೂರಕವಾದ ಯಾವುದೇ ಮಹತ್ವದ ಯೋಜನೆಗಳನ್ನು ಘೋಷಿಸದೆ, ಕೇವಲ ಸಾಂಕೇತಿಕವಾಗಿ ಆಸ್ಪತ್ರೆಯ ಸ್ಥಾಪನೆಯ ಭರವಸೆ ನೀಡಿರುವುದು ಜನತೆಗೆ ಹೆಚ್ಚಿನ ಪ್ರಯೋಜನ ನೀಡುವುದಿಲ್ಲ. ಘೋಷಿತ ಯೋಜನೆಗಳು ಕೇವಲ ಬಜೆಟ್ ಪುಸ್ತಕಕ್ಕೆ ಸೀಮಿತವಾಗದೆ ಶೀಘ್ರವಾಗಿ ಅನುಷ್ಠಾನಕ್ಕೆ ಬರಲಿ.

■ **ವಿಶ್ವೇಶ್ವರ ಹೆಗಡೆ ಕಾಗೇರಿ,** ಸಂಸದರು ಉತ್ತರ ಕನ್ನಡ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿರುವ ದಾಖಲೆಯ 17ನೇ ಬಜೆಟ್‌ನಲ್ಲಿ ರಾಜ್ಯದ ಸಮಗ್ರ ಅಭಿವೃದ್ಧಿ ಹಾಗೂ ಸರ್ವ ಜನರ ಕಲ್ಯಾಣಕ್ಕೆ ಒತ್ತು ನೀಡಲಾಗಿದೆ. ಇದು ಹಿಂದುಳಿದ, ದೀನ-ದಲಿತರ ಜನಪರವಾದ ಬಜೆಟ್. ಆರ್ಥಿಕ ಶಿಸ್ತಿನನಿಂದ ಕೂಡಿದ ಬಜೆಟ್ ಇದಾಗಿದ್ದು, ಗ್ಯಾರಂಟಿ ಯೋಜನೆಗಳಿಗೆ ಅನುದಾನ ಒದಗಿಸುವ ಮೂಲಕ ಇತರ ಕ್ಷೇತ್ರಗಳಿಗೂ ಸಮಾನ ಆದ್ಯತೆ ನೀಡಿದ್ದಾರೆ.

■ **ಶಿವರಾಜ ತಂಗಡಗಿ,** ಜಿಲ್ಲಾ ಉಸ್ತುವಾರಿ ಸಚಿವ



ರಾಜ್ಯ ಬಜೆಟ್ ಸಂಪೂರ್ಣ ನಿರಾಶಾದಾಯಕವಾಗಿದೆ. ಅನ್ಯಾಯವೇ ಇಲ್ಲಿ ಪ್ರಧಾನವಾಗಿದೆ. ಯಾವ ಮಹತ್ವದ ಯೋಜನೆಗಳನ್ನು ಮುಖ್ಯಮಂತ್ರಿ ಘೋಷಿಸಿಲ್ಲ. ಕೇವಲ ಪ್ರಣಾಳಿಕೆಯನ್ನು ಹೇಳುವಂತೆ ಆಶ್ವಾಸನೆಗಳ ಮಹಾಪೂರವನ್ನೇ ಹರಿಸಿದ್ದಾರೆ ಹೊರತು ಅನುಷ್ಠಾನದ ಯಾವ ವಿಷಯವೂ ಇಲ್ಲ, ಕೃಷ್ಣಾ ಮೇಲ್ದಂಡೆ ಯೋಜನೆಗೆ ಯಾವ ಅನುದಾನವೂ ಮೀಸಲಿರಿಸಿಲ್ಲ, ಸರ್ಕಾರಿ ವೈದ್ಯಕೀಯ ಕಾಲೇಜ್ ಬಗ್ಗೆ ನಾಮಕೆ ವಾಸ್ತೆ ಪ್ರಸ್ತಾಪ ಹೀಗೆ ಜಿಲ್ಲೆಗೆ ದೊಡ್ಡ ಅನ್ಯಾಯ ಮಾಡಲಾಗಿದೆ.

■ **ರಮೇಶ ಜಿಗಜಿಣಗಿ,** ಸಂಸದ



ಸರ್ವ ಜನಾಯ, ಸರ್ವ ಹಿತಾಯ ಬಜೆಟ್. ಸರ್ವಾಂಗೀಣ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ. ಅದರಲ್ಲೂ ಪ್ರಮುಖವಾಗಿ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡಿರುವುದು ಗಮನಾರ್ಹ. ಸರ್ವೋದಯವಾಗಲಿ ಸರ್ವರಲಿ ಎಂಬ ಕವಿವಾಣಿಯಂತೆ ಎಲ್ಲ ವರ್ಗಕ್ಕೂ ಎಲ್ಲ ಕ್ಷೇತ್ರಕ್ಕೂ ಕೊಡುಗೆ ನೀಡಲಾಗಿದೆ.

■ **ಡಾ.ಶರಣಪ್ರಕಾಶ್ ಪಾಟೀಲ್,** ವೈದ್ಯಕೀಯ ಶಿಕ್ಷಣ ಸಚಿವ



ರಾಜ್ಯ ಸರ್ಕಾರ ಈ ಬಾರಿಯ ವಿಶೇಷ ಬಜೆಟ್ ಎಲ್ಲಾ ವರ್ಗದ ಜನರಿಗೂ ಅನುಕೂಲಕರವಾದ ಬಜೆಟ್ ಆಗಿದೆ. ಕಲ್ಯಾಣ ಕರ್ನಾಟಕ ಭಾಗ ಸೇರಿದಂತೆ ಕಲಬುರಗಿಗೂ ಹೆಚ್ಚಿನ ಒತ್ತು ನೀಡಲಾಗಿದೆ. ಡಾ.ಬಿ.ಆರ್.ಅಂಬೇಡ್ಕರ್ ಭೇಟಿ ನೀಡಿ ಕಲಬುರ್ಗಿಯಲ್ಲಿ ಅವರ ಹೆಸರಿನಲ್ಲಿ ಸಿಬಿಎಸ್‌ಇ ಪಠ್ಯಕ್ರಮದ ನಾಲ್ಕು ಕೈಸ್ತ ವಸತಿ ಶಾಲೆ ಪ್ರಾರಂಭ ಸೇರಿದಂತೆ ಹಲವು ಯೋಜನೆಗಳಿಗೆ ಕಾಯಕಲ್ಪ ನೀಡಿದೆ.ರಾಜ್ಯದ ಅಭಿವೃದ್ಧಿಗೆ ಪೂರಕವಾದ ಬಜೆಟ್ ಇದಾಗಿದೆ.

■ **ಪ್ರಿಯಾಂಕ್ ಖರ್ಗೆ,** ಆರ್‌ಡಿಪಿಆರ್ ಸಚಿವ



ಐತಿಹಾಸಿಕ ಬಜೆಟ್, ರೈತರಪರ, ಜನಪರ, ಬಡವರಪರವಾಗಿರುವ ಬಜೆಟ್ ಇದಾಗಿದೆ. ಕಳೆದ 30 ತಿಂಗಳಲ್ಲಿ 18 ಸಾವಿರ ಕೋಟಿ ರೂ. ಹಣ ಕೊಟ್ಟಂತಾಗಿದೆ. ಕಲ್ಯಾಣ ನಾಡು ರಾಜ್ಯ ಜಿಡಿಪಿಗೆ ಹೆಚ್ಚಿನ ಕೊಡುಗೆ ನೀಡಲೆಂದು ಕಲ್ಯಾಣ ನಾಡಲ್ಲೇ ದತ್ತಾಂಶ ವಿಶ್ಲೇಷಣೆ ಕೇಂದ್ರ ಸ್ಥಾಪನೆಗೂ ಬಜೆಟ್‌ನಲ್ಲಿ ಅನುಮೋದನೆ ದೊರಕಿದೆ. ಕಲ್ಯಾಣ ನಾಡು ಸೇರಿದಂತೆ ರಾಜ್ಯದ ಒಟ್ಟಾರೆ ಅಭಿವೃದ್ಧಿಗೆ ಈ ಬಜೆಟ್ ತನ್ನದೇ ಕೊಡುಗೆ ನೀಡಲಿದೆ.

■ **ಡಾ.ಅಜಯ್ ಧರ್ಮಸಿಂಗ್,** ಕೆಕೆಆರ್‌ಡಿಬಿ ಅಧ್ಯಕ್ಷ, ಜೇವರ್ಗಿ ಶಾಸಕ



ಮಾರುಕಟ್ಟೆ ಸಂಪರ್ಕಗಳನ್ನು ಸಮರ್ಪಕವಾಗಿ ಬಲಪಡಿಸುವುದೂ ಸೇರಿ ರೂಪಿಸಲಾಗುವ ಸಮಗ್ರ ಮುಖ್ಯಮಂತ್ರಿ ಕೃಷಿ ವಿಸ್ತಾರ ಯೋಜನೆ, ಎಐ ತಂತ್ರಜ್ಞಾನದಿಂದ ರೈತ ಕರೆ ಕೇಂದ್ರ ಉನ್ನತಿ, ಎಪಿಎಂಸಿಗಳ ಸಂಪೂರ್ಣ ಡಿಜಿಟಲೀಕರಣ ಯೋಜನೆಗಳು ಕೃಷಿಕರ ಬದುಕಿನ ಬದಲಾವಣೆಗೆ ಪೂರಕವಾಗಲಿವೆ. ಕಳಪೆ ಬಿತ್ತನೆ ಬೀಜ, ಕೀಟನಾಶಕ ಪೂರೈಕೆ ತಡೆ ಅತ್ಯಗತ್ಯವಾಗಿದ್ದು, ಕೈಗೊಳ್ಳಬೇಕಾದ ಕ್ರಮಗಳ ಕುರಿತು ರಾಜ್ಯಮಟ್ಟದ ಸಲಹಾ ಸಮಿತಿ ರಚನೆ ಘೋಷಣೆ ಸ್ವಾಗತಾರ್ಹ.

■ **ಶಿವಾನಂದ ಎಸ್. ಪಾಟೀಲ** ಜವಳಿ, ಕಬ್ಬು ಅಭಿವೃದ್ಧಿ, ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ

ಮಂತ್ರಾಲಯದ ಸುಬುಧೇಂದ್ರತೀರ್ಥ ಸ್ವಾಮೀಜಿ ಅಭಿಪ್ರಾಯ

ದೇಶದ ಅಭಿವೃದ್ಧಿಗೆ ಡ್ರಗ್ಸ್ ಮಾರಕ

◆ರಾಯಚೂರು: ಮಾದಕ ವಸ್ತುಗಳ ಸೇವನೆ ವ್ಯಕ್ತಿ, ಅವನ ಕುಟುಂಬ ಹಾಗೂ ದೇಶದ ಪ್ರಗತಿ ಕುಂಠಿತಗೊಳಿಸುತ್ತದೆ. ಇಂದಿನ ಯುವ ಜನತೆ ದೇಶದ ಮುಂದಿನ ಸಂಪತ್ತು ಎನ್ನುವುದನ್ನು ಮರೆಯಬಾರದು. ಪ್ರತಿಯೊಬ್ಬರೂ ಮಾದಕ ವಸ್ತುಗಳಿಂದ ದೂರವಿರುತ್ತೇವೆ ಎಂದು ಸಂಕಲ್ಪ ಮಾಡಬೇಕು ಎಂದು ಮಂತ್ರಾಲಯ ರಾಘವೇಂದ್ರ ಮಠದ ಸುಬುಧೇಂದ್ರತೀರ್ಥ ಸ್ವಾಮೀಜಿ ಹೇಳಿದರು.

ಶುಕ್ರವಾರ ನಗರದ ಜಿಲ್ಲಾ ಪೊಲೀಸ್ ಪರೇಡ್ ಮೈದಾನದಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ನಶಾ ಮುಕ್ತ ಭಾರತ, ನಶಾ ಮುಕ್ತ ಕರ್ನಾಟಕ, ನಶಾ ಮುಕ್ತ ಕ್ಯಾಂಪಸ್ ಸಂದೇಶದಡಿ ಆಯೋಜಿಸಿದ್ದ ಬೃಹತ್ ವಾಕಥಾನ್ ಕಾರ್ಯಕ್ರಮದ ಸಾನ್ನಿಧ್ಯವಹಿಸಿ ಮಾತನಾಡಿದರು.

ಪ್ರಸ್ತುತ ಹಣಕೊಟ್ಟು ವಿಷಪೂರಿತ ಆಹಾರ ಸೇವಿಸುವ ಮೂಲಕ ಅನಾರೋಗ್ಯ ತೆಗೆದುಕೊಳ್ಳುತ್ತಿದ್ದೇವೆ. 2018ರ ಅಂಕಿ-ಅಂಶಗಳ ಪ್ರಕಾರ ಜಗತ್ತಿನಲ್ಲಿ 30 ಕೋಟಿಗೂ ಹೆಚ್ಚು ಜನರು ಮಾದಕ ವ್ಯಸನಿಗಳಾಗಿದ್ದಾರೆ. ಅದರಲ್ಲಿ 10 ಕೋಟಿಯಷ್ಟು ಜನರು ಭಾರತೀಯರು ಎಂಬುದು ಆತಂಕಕಾರಿ ಸಂಗತಿ. ವ್ಯಸನ ಮುಕ್ತ ಸಮಾಜ ನಿರ್ಮಾಣ ಮಾಡಲು ಎಲ್ಲರೂ ಕೈಜೋಡಿಸಬೇಕು. ಜನಸಾಮಾನ್ಯರಿಗೆ ವಿದ್ಯಾವಂತರು ಜಾಗೃತಿ ಮೂಡಿಸುವ ಕಾರ್ಯವಾಗಬೇಕು ಎಂದರು.



ಜಿಲ್ಲಾಧಿಕಾರಿ ನಿತೀಶ.ಕೆ ಮಾತನಾಡಿ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕಾರ್ಯ ಅತ್ಯಂತ ಶ್ಲಾಘನೀಯವಾಗಿದೆ. ರಾಯಚೂರು ಬೇರೆ ರಾಜ್ಯಗಳ ಗಡಿ ಹಂಚಿಕೊಂಡಿರುವುದರಿಂದ ಇಲ್ಲಿ ಡ್ರಗ್ಸ್ ಪದಾರ್ಥಗಳ ಸಾಗಣೆ, ಮಾರಾಟ ಸಾಧ್ಯತೆ ಇರುತ್ತದೆ. ಇಂತಹ ಜಾಲವನ್ನು ಹತ್ತಿಕ್ಕಲು ಪೊಲೀಸ್ ಇಲಾಖೆಯು ಸನ್ನದ್ಧವಾಗಿದೆ. ಯುವಕರನ್ನು ದಾರಿ ತಪ್ಪಿಸುವ ಯಾವುದೇ ಆಘಾತಕಾರಿ ಕೃತ್ಯಗಳಿಗೆ ನಾವು ಅವಕಾಶ ಕೊಡುವುದಿಲ್ಲ ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ ಮಾತನಾಡಿ, ನಗರದಲ್ಲಿ ಗಾಂಜಾ ಸೇರಿದಂತೆ ಡಗ್ಸ್ ಮಾರಾಟ ಮತ್ತು ಸೇವನೆ ಹೆಚ್ಚಿನ ಪ್ರಮಾಣದಲ್ಲಿ ವಿದ್ಯಾರ್ಥಿಗಳಲ್ಲಿ ಕಂಡುಬರುತ್ತಿದೆ. ಚಾಕೊಲೇಟ್, ಚಹಾ ಮತ್ತು ತಂಪು ಪಾನೀಯಗಳಲ್ಲಿ ಡ್ರಗ್ಸ್ ಮತ್ತು ಗಾಂಜಾ ಮಿಶ್ರಣ ಮಾಡಿ ಮಾರಾಟ ಮಾಡುವುದು ಕಂಡುಬರುತ್ತಿದೆ. ಇಂತಹ ಮಾರಾಟ ಜಾಲವನ್ನು ಪತ್ತೆ ಹಚ್ಚಿ ಅವರ ವಿರುದ್ಧ ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ ಎಂದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಬಿ.ಸಿ.ಭಗವಾನ್ ಮಾತನಾಡಿದರು. ರಿಮ್ಸ್‌ನ ನಿರ್ದೇಶಕ ಡಾ.ರಮೇಶ.ಬಿ.ಎಚ್, ನವೋದಯ ಮೆಡಿಕಲ್ ಸಂಸ್ಥೆಯ ಮುಖ್ಯಸ್ಥ ಎಸ್.ಆರ್.ರೆಡ್ಡಿ, ಈಶ್ವರಿ ವಿಶ್ವವಿದ್ಯಾಲಯದ ಬಿ.ಕೆ.ಸ್ಮಿತಾ ಅಕ್ಕನವರು, ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ ನಿರೀಕ್ಷಕ ವಿಕಾಸ್ ಸಿಂಗ್, ದಿಶಾಭೋದ್ ಫೌಂಡೇಶನ್ ಡಾ.ಹರ್ಷ ಹರ್ದಾರ್ ಗಣ್ಯರಾದ ಡಾ.ದೇವಾನಂದ, ಡಾ.ಮುರಳಿ ರಾವ್, ಡಾ.ಚಂದ್ರಶೇಖರ ರೆಡ್ಡಿ, ಡಾ.ಗಿರೀಶ ಕಟ್ಟಿ ಸೇರಿದಂತೆ ಇತರರಿದ್ದರು.

ಶೈಕ್ಷಣಿಕ ಒಪ್ಪಂದಕ್ಕೆ ಐಐಟಿ-ಎನ್‌ಆರ್‌ಸಿಸಿ ಸಹಿ

◆ಧಾರವಾಡ: ನಗರದ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ಧಾರವಾಡ ಮತ್ತು ಹೈದರಾಬಾದ್‌ನ ಭಾರತೀಯ ಬಾಹ್ಯಾಕಾಶ ರಾಷ್ಟ್ರೀಯ ದೂರಸಂವೇದಿ ಕೇಂದ್ರ (ಎನ್‌ಆರ್‌ಸಿಸಿ) ಜೊತೆ ಪರಸ್ಪರ ಒಪ್ಪಂದಕ್ಕೆ ಸಹಿ ಹಾಕಿವೆ.

ಭೂ ವೈಜ್ಞಾನಿಕ ತಂತ್ರಜ್ಞಾನಗಳು ಮತ್ತು ಸಂಬಂಧಿತ ಸಂಶೋಧನಾ ಕ್ಷೇತ್ರಗಳನ್ನು ಬಲಪಡಿಸುವ ಹಾಗೂ ಪರಸ್ಪರ ಸಹಾಯಕ್ಕೆ ಐಐಟಿ ನಿರ್ದೇಶಕ ಡಾ.ವೆಂಕಪ್ಪಯ್ಯ ದೇಸಾಯಿ ಮತ್ತು ಡಾ.ಪ್ರಕಾಶ್ ಚವ್ಹಾಣ ಸಹಿ ಹಾಕಿದ್ದಾರೆ. ಐಐಟಿ ನಿರ್ದೇಶಕ ಡಾ.ವೆಂಕಪ್ಪಯ್ಯ ದೇಸಾಯಿ, ಸಾಮಾಜಿಕ ಅಭಿವೃದ್ಧಿಗೆ ದೂರ ಸಂವೇದಿ ಅನ್ವಯಿಕೆಗಳು, ಡೇಟಾ ವಿಶ್ಲೇಷಣೆ ಮತ್ತು ಬಾಹ್ಯಾಕಾಶ ತಂತ್ರಜ್ಞಾನದ ಸಂಶೋಧನೆಯಲ್ಲಿ ಸಾಂಸ್ಥಿಕ ಮಹತ್ವ ಸಾರಿ ಹೇಳಿದರು.

ಹೈದರಾಬಾದ್‌ನ ಡಾ.ಪ್ರಕಾಶ್ ಚವ್ಹಾಣ ಮಾತನಾಡಿ, ದೂರ ಸಂವೇದಿ, ಉಪಗ್ರಹ ದತ್ತಾಂಶ ಅನ್ವಯಿಕೆಗಳ ಮತ್ತು ಶೈಕ್ಷಣಿಕ ಹಾಗೂ ಸಂಶೋಧನಾ ಪಾಲುದಾರಿಕೆ ಅವಕಾಶಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಭೂವೈಜ್ಞಾನಿಕ ವಿಜ್ಞಾನ, ಉಪಗ್ರಹ ದತ್ತಾಂಶ ಅನ್ವಯಿಕೆಗಳಲ್ಲಿ ಜಂಟಿ ಸಂಶೋಧನಾ ಉಪಕ್ರಮಗಳು, ಶೈಕ್ಷಣಿಕ ವಿನಿಮಯ ಮತ್ತು ಸಾಮರ್ಥ್ಯ ವೃದ್ಧಿಯ ಉತ್ತೇಜನಕ್ಕಾಗಿಯೇ ಈ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ.



ಜನರ ದಿಕ್ಕು ತಪ್ಪಿಸಲು ಅಂಕಿ ಅಂಶಗಳ ಕಟ್ಟು ಕಥೆ

◆ಹುಬ್ಬಳ್ಳಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿರುವ ಪ್ರಸಕ್ತ ಸಾಲಿನ ಆಯವ್ಯಯವು ಜನಸಾಮಾನ್ಯರ ನಿರೀಕ್ಷೆಗಳನ್ನು ಹುಸಿಗೊಳಿಸಿದೆ. ಇದು ದಿಕ್ಕು ದಿಸೆಯಿಲ್ಲದ, ಕೇವಲ ಮತಬ್ಯಾಂಕ್ ರಾಜಕಾರಣ ದೃಷ್ಟಿಯಲ್ಲಿ ಸಿದ್ಧವಾಗಿರುವ, ಜನರ ದಿಕ್ಕು ತಪ್ಪಿಸುವ ಅಂಕಿ-ಅಂಶಗಳ ಕಟ್ಟು ಕಥೆಯಾಗಿದೆ ಎಂದು ಸಂಸದ ಜಗದೀಶ ಶೆಟ್ಟರ್ ಆರೋಪಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಬಜೆಟ್ ಗಾತ್ರವನ್ನು 4.48 ಲಕ್ಷ ಕೋಟಿ ರೂ,ಗೆ ಏರಿಸಲಾಗಿದೆ. ಆದರೆ ಇದರಲ್ಲಿ ಬಹುಪಾಲು ಸಾಲದ ಮೂಲಕವೇ ಭರಿಸಲಾಗುತ್ತಿದೆ. ಈ ಸಾಲದ ಹೊರೆಯಿಂದ ಮುಂದಿನ ಪೀಳಿಗೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಲಿದೆ. ಗ್ಯಾರಂಟಿ ಯೋಜನೆಗಳ ಅಬ್ಬರದಲ್ಲಿ ರಾಜ್ಯದ ನೀರಾವರಿ, ಲೋಕೋಪಯೋಗಿ ಮತ್ತು ಗ್ರಾಮೀಣಾಭಿವೃದ್ಧಿ ಕೆಲಸಗಳಿಗೆ ಅಗತ್ಯ ಇರುವಷ್ಟು ಅನುದಾನ ಸಿಕ್ಕಿಲ್ಲ. ಕಳೆದ ಮೂರು ವರ್ಷಗಳಿಂದ ಸ್ಥಗಿತಗೊಂಡಿರುವ ಅಭಿವೃದ್ಧಿ ಕೆಲಸಗಳು ಈ ಬಾರಿಯೂ ಕುಂಟುತ್ತಾ ಸಾಗಲಿವೆ.

ಬರ ಮತ್ತು ಪ್ರವಾಹದಿಂದ ಕಂಗೆಟ್ಟಿರುವ ರೈತರಿಗೆ ಸಾಲ ಮನ್ನಾ ಅಥವಾ ವಿಶೇಷ ಪ್ಯಾಕೇಜ್ ನೀಡುವಲ್ಲಿ ಸರ್ಕಾರ ವಿಫಲವಾಗಿದೆ. 56,432 ಹುದ್ದೆಗಳ ನೇಮಕಾತಿ ಮತ್ತು ವಯೋಮಿತಿ ಸಡಿಲಿಕೆ ಘೋಷಣೆಗಳು ಕೇವಲ ಚುನಾವಣಾ ಗಿಮಿಕ್ ಆಗಿವೆ. ಖಾಲಿ ಹುದ್ದೆಗಳ ಭರ್ತಿಯ ಭರವಸೆಯನ್ನು ಕಳೆದ ಮೂರು ಬಜೆಟ್‌ಗಳಲ್ಲಿಯೂ ನೀಡಲಾಗಿದೆ. ಆದರೆ, ಈವರೆಗೆ ನೇಮಕಾತಿ ಪ್ರಕ್ರಿಯೆ ನಡೆದಿಲ್ಲ, ವಯೋಮಿತಿ ಸಡಿಲಿಕೆ ಎಂಬುದು ಕೇವಲ ಯುವಕರನ್ನು ಹಾದಿ ತಪ್ಪಿಸುವ ತಂತ್ರವಾಗಿದೆ. ಬೆಂಗಳೂರಿನ ಟನಲ್ ರಸ್ತೆ ಮತ್ತು ಬಿಸಿನೆಸ್ ಕಾರಿಡಾರ್ ಯೋಜನೆಗಳು ಕೇವಲ ಕಾಗದದ ಮೇಲಿವೆ. ಈ ಯೋಜನೆಗಳಿಗೆ ಅಗತ್ಯವಿರುವ ಬೃಹತ್ ಮೊತ್ತವನ್ನು ಎಲ್ಲಿಂದ ತರುತ್ತಾರೆ ಎಂಬ ಸ್ಪಷ್ಟತೆ ಬಜೆಟ್‌ನಲ್ಲಿ ಇಲ್ಲ ಎಂದು ಕಿಡಿಕಾರಿದ್ದಾರೆ.

ನಾಳೆ ನಾಗಾವಿ ನಾಡಿಗೆ ಸಿಎಂ ಸಿದ್ದರಾಮಯ್ಯ

1,069 ಕೋಟಿ ರೂ. ಮೊತ್ತದ ಕಾಮಗಾರಿಗಳಿಗೆ ಚಾಲನೆ

◆ಕಲಬುರಗಿ: ಜಿಲ್ಲೆಯ ಚಿತ್ತಾಪುರದಲ್ಲಿ ಇದೇ ಮಾ.8ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ 1,069 ಕೋಟಿ ರೂ.ಗಳಿಗೂ ಅಧಿಕ ಮೊತ್ತದ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಿಲಾನ್ಯಾಸ ನೆರವೇರಿಸಲಿದ್ದಾರೆ.

ಸಣ್ಣ ನೀರಾವರಿ ಇಲಾಖೆ, ಕೆ.ಎನ್.ಎನ್.ಎಲ್, ಕರ್ನಾಟಕ ಗೃಹ ಮಂಡಳಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಪಶುಪಾಲನಾ ಹಾಗೂ ಪಶುವೈದ್ಯಕೀಯ ಸೇವಾ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ, ಕೆ.ಆರ್.ಐ.ಡಿ.ಎಲ್, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ರಾಜೀವ್ ಗಾಂಧಿ ಹೌಸಿಂಗ್ ಕಾರ್ಪೊರೇಶನ್, ಚಿತ್ತಾಪುರ ಪುರಸಭೆ, ರಾಜ್ಯ ಪೊಲೀಸ್ ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ, ಲೋಕೋಪಯೋಗಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆ, ಕೃಷಿ ಇಲಾಖೆ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕಾಡಾ, ರೈಟ್ಸ್ ಲಿ. ಹಾಗೂ ರೈಲ್ವೆ ಇಲಾಖೆ ಹೀಗೆ ಸುಮಾರು 20 ಇಲಾಖೆಯ 979.83 ಕೋಟಿ ರೂ. ಮೊತ್ತದ 777 ಹೊಸ ಅಭಿವೃದ್ಧಿ ಕಾಮಗಾರಿಗಳಿಗೆ ಶಿಲಾನ್ಯಾಸ ನೆರವೇರಿಸಲಾಗುತ್ತದೆ.



ಇದಲ್ಲದೆ ಕಾರ್ಯಕ್ರಮದಲ್ಲಿ ವಿವಿಧ 8 ಇಲಾಖೆಗಳ ಮೂಲಕ ಪೂರ್ಣಗೊಂಡ 23 ಕಾಮಗಾರಿಗಳಿಗೆ ಉದ್ಘಾಟನೆ ನಡೆಯಲಿದ್ದು, ಇವುಗಳ ಒಟ್ಟು ಅಂದಾಜು ವೆಚ್ಚ ಸುಮಾರು 89.57 ಕೋಟಿ ರೂ. ಆಗಿದೆ. ಇದರಲ್ಲಿ ಮುಖ್ಯವಾಗಿ ಕರ್ನಾಟಕ ಗೃಹ ಮಂಡಳಿ, ಲೋಕೋಪಯೋಗಿ ಇಲಾಖೆ, ನಿರ್ಮಿತಿ ಕೇಂದ್ರ, ಕೃಷಿ ಇಲಾಖೆ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ, ಅರಣ್ಯ ಇಲಾಖೆ ಹಾಗೂ ಚಿತ್ತಾಪುರ ಮತ್ತು ವಾಡಿ ಪುರಸಭೆಯ ಕಾಮಗಾರಿಗಳು ಲೋಕಾರ್ಪಣೆಯಾಗಲಿವೆ.

ಇದರಿಂದ ಚಿತ್ತಾಪುರ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 1,069 ಕೋಟಿ ಕ್ಕೂ ಅಧಿಕ ಮೊತ್ತದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ದೊರೆಯಲಿದ್ದರಿಂದ ಚಿತ್ತಾಪುರ ಕ್ಷೇತ್ರದಲ್ಲಿ ರಸ್ತೆ, ನೀರಾವರಿ, ಆರೋಗ್ಯ, ಗೃಹ ನಿರ್ಮಾಣ, ಕುಡಿಯುವ ನೀರು, ಗ್ರಾಮೀಣ ಮೂಲಸೌಕರ್ಯ ಹಾಗೂ ಕೃಷಿ ಕ್ಷೇತ್ರಗಳಲ್ಲಿ ಮಹತ್ವದ ಅಭಿವೃದ್ಧಿಗೆ ದಾರಿ ಮಾಡಿಕೊಡಲಿದೆ.

ಕಾರ್ಯಕ್ರಮದಲ್ಲಿ ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾದ ಡಾ. ಮಲ್ಲಿಕಾರ್ಜುನ ಖರ್ಗೆ, ರಾಜ್ಯದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐ.ಟಿ-ಬಿ.ಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ ಖರ್ಗೆ ಸೇರಿದಂತೆ ಪ್ರದೇಶದ ಸಚಿವರುಗಳು, ಶಾಸಕರು, ಸಂಸದರು ಹಾಗೂ ಇತರೆ ಚುನಾಯಿತ ಜನಪ್ರತಿನಿಧಿಗಳು ಭಾಗವಹಿಸಲಿದ್ದು, ಕ್ಷೇತ್ರದ ಸಾವಿರಾರು ಜನಸಂಖ್ಯೆ ಐತಿಹಾಸಿಕ ಕಾರ್ಯಕ್ರಮಕ್ಕೆ ಸಾಕ್ಷಿಯಾಗಲಿದೆ.

ಬಿಜೆಪಿಗೆ ಶೀಘ್ರ ಅಧಿಕಾರ: ಜಿಗಜಿಣಗಿ

◆ವಿಜಯಪುರ: ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬರುವುದು ನೂರಕ್ಕೆ ಶೇ.100ರಷ್ಟು ಸತ್ಯ ಎಂದು ಸಂಸದ ರಮೇಶ ಜಿಗಜಿಣಗಿ ಭವಿಷ್ಯ ನುಡಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಹಮ್ಮಿಕೊಂಡ ಬಿಜೆಪಿ ಜಿಲ್ಲಾ ಕಾರ್ಯಕಾರಣಿ ಸಭೆಯಲ್ಲಿ ಅವರು ಮಾತನಾಡಿದರು.

ಜನರ ಒಲವು ಬಿಜೆಪಿಯ ಮೇಲೆ ಎಂದಿಗೂ ಕಡಿಮೆಯಾಗಿಲ್ಲ, ಆದರೆ ಕಾಂಗ್ರೆಸ್‌ನವರು ಈ ಹಿಂದಿನ ಚುನಾವಣೆಯಲ್ಲಿ ಜನರನ್ನು ಗ್ಯಾರಂಟಿ ಹೆಸರಿನಲ್ಲಿ ಯಾಮಾರಿಸುವ ಪ್ರಯತ್ನ ಮಾಡಿದರು. ಆದರೆ ಈಗ ಗ್ಯಾರಂಟಿಗಳನ್ನೇ ಸರಿಯಾಗಿ ನೀಡುತ್ತಿಲ್ಲ, ಕೇವಲ ಕುರ್ಚಿ ಕಾದಾಟದಲ್ಲಿಯೇ ನಿರತವಾಗಿರುವುದು ಜನರಿಗೆ ಬೇಸರ ತರಿಸಿದೆ, ಹೀಗಾಗಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಜಯ ಸಾಧಿಸುವುದು ನಿಶ್ಚಿತ ಎಂದರು.

ಪಕ್ಷಕ್ಕಾಗಿ ಯಾರು ದುಡಿದಿದ್ದಾರೆ ಯಾರು ದುಡಿದಿಲ್ಲ ಎನ್ನುವುದು ನನಗೆ ಸೇರಿದಂತೆ ಎಲ್ಲ ಮುಖಂಡರಿಗೂ ಗೊತ್ತಿದೆ, ಹೀಗಾಗಿ ಕಾರ್ಯಕರ್ತರು ಇದರ ಬಗ್ಗೆ ತಲೆ ಕೆಡಿಸಿಕೊಳ್ಳಬೇಡಿ. ರಾಜಕಾರಣದಲ್ಲಿ ಒಂದು ಸಮಾಜ ಅಥವಾ ವ್ಯಕ್ತಿಯಿಂದ ನಡೆಯುವುದಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಬಂಗಾರ ಹಂಚಿದ ಜಿಲ್ಲೆಯವರು ನಾವು, ಕೆಜಿಗಟ್ಟಲೇ ದೇಶದ ಸುರಕ್ಷತೆಗಾಗಿ ಬಂಗಾರ ಹಂಚಿಕೆ ಮಾಡಿದ ಜಿಲ್ಲೆ ನಮ್ಮದು, ಇಲ್ಲಿ ದೇಶಾಭಿಮಾನ ಉಸಿರಾಗಿಸಿಕೊಂಡ ಬಿಜೆಪಿ 8 ಸೀಟು ಗೆಲ್ಲುವುದು ಕಷ್ಟವೇ ಎಂದು ಪ್ರಶ್ನಿಸಿದರು.



ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಮಾತನಾಡಿ, ಕಾರ್ಯಕರ್ತರ ತ್ಯಾಗ ಬಲಿದಾನದಿಂದ ಬಿಜೆಪಿ ಇಂದು ವಿಶ್ವದಲ್ಲಿಯೇ ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ ಎಂದರು.

ಜಿಪಂ, ತಾಪಂ, ಗ್ರಾಪಂ ಚುನಾವಣೆ ಹತ್ತಿರ ಬರುತ್ತಿರುವುದರಿಂದ ನಾವು ಸ್ಥಳೀಯವಾಗಿ ಬಲಿಷ್ಠರಾಗಬೇಕು, ಆಗ ಮಾತ್ರ ನಾವು ವಿಧಾನಸಭೆ, ಲೋಕಸಭೆ ಚುನಾವಣೆ ಗೆಲುವು ಸಾಧಿಸಲು ಸಾಧ್ಯ, ಸ್ಥಳೀಯ ಚುನಾವಣೆಗಳಲ್ಲಿ ನಾವು ಗೆಲ್ಲಲೇಬೇಕು ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ ಮಾತನಾಡಿ, ಕಾರ್ಯಕರ್ತರು ಮನಸ್ಸು ಮಾಡಿದರೆ ಏನೆಲ್ಲ ಮಾಡಲು ಸಾಧ್ಯ, ಬಿಜೆಪಿಗೆ ಸಮರ್ಪಣಾ ಮನೋಭಾವ ಕಾರ್ಯಕರ್ತರ ದೊಡ್ಡ ಪಡೆಯೇ ಇದೆ ಎಂದರು.

ಮಾಜಿ ಸಚಿವ ಎಸ್.ಕೆ. ಬೆಳ್ಳುಬ್ಬಿ, ಮಾಜಿ ಶಾಸಕ ರಮೇಶ ಭೂಸನೂರ, ಸಾವಯವ ಬೀಜ ಪ್ರಮಾಣ ಸಂಸ್ಥೆ ಮಾಜಿ ಅಧ್ಯಕ್ಷ ವಿಜುಗೌಡ ಪಾಟೀಲ, ಮುಖಂಡರಾದ ಕಾಸುಗೌಡ ಬಿರಾದಾರ, ಸಂಜೀವ್ ಐಹೊಳಿ, ವಿವೇಕಾನಂದ ಡಬ್ಬಿ, ಗೋಪಾಲ ಘಟಕಾಂಬಳೆ, ಸಾಬು ಮಾಶ್ಯಾಳ, ಈರಣ್ಣ ರಾವೂರ, ಮಳುಗೌಡ ಪಾಟೀಲ, ಅನೀಲ ಜಮಾದಾರ, ರಜನಿ ಸಂಬಣ್ಣಿ, ಸ್ವಪ್ನಾ ಕಣಮುಚನಾಳ, ಸಂಜಯ ಪಾಟೀಲ ಕನಮಡಿ, ಉಮೇಶ ಕಾರಜೋಳ, ಡಾ.ಸುರೇಶ ಬಿರಾದಾರ, ವಿಜಯಕುಮಾರ ಕುಡಿಗನೂರ ಇದ್ದರು.

ಡಿಪಿಆರ್ ಹಿಂಪಡೆಗೆ ಆಗ್ರಹ | ರೋಸ್ಟರ್ ಜಾರಿಗೆ ಒತ್ತಾಯ

ದಲಿತ ಮುಖಂಡರ ಬಂಧನ-ಬಿಡುಗಡೆ

◆ಧಾರವಾಡ: ಒಳಮೀಸಲಾತಿ ಜಾರಿಗೆ ಹೊರಡಿಸಿದ ಡಿಪಿಆರ್ ಆದೇಶ ಹಿಂಪಡೆದು ರೋಸ್ಟರ್ ಬಿಂದು ಗುರುತಿಸಿ, ನೇಮಕಾತಿಗೆ ಒತ್ತಾಯಿಸಿ ಶುಕ್ರವಾರ ರಾಷ್ಟ್ರೀಯ ಹೆದ್ದಾರಿ ರಸ್ತೆ ತಡೆ ನಡೆಸಿದ ಹಲವು ದಲಿತ ಮುಖಂಡರನ್ನು ಬಂಧಿಸಿ, ಬಿಡುಗಡೆ ಮಾಡಲಾಗಿದೆ.

ನಗರದ ಹೊರವಲಯದ ನರೇಂದ್ರ ಬಳಿ ರಾಷ್ಟ್ರೀಯ ಹೆದ್ದಾರಿ ರಸ್ತೆ ತಡೆ ನಡೆಸಿದ ಪ್ರತಿಭಟನಾಕಾರರು, ಕೆಲಕಾಲ ರಸ್ತೆಯಲ್ಲಿ ಧರಣಿ ನಡೆಸಿದರು. ತಮಟೆ ಬಾರಿಸುತ್ತ ಮೀಸಲಾತಿ ಕೊಡಿ, ಇಲ್ಲವೇ ಕುರ್ಚಿ ಬಿಡಿ, ಜೈ ಮಾದಿಗ ಎಂಬ ಘೋಷಣೆಗಳು ಮೊಳಗಿಸಿದರು.

ಎಲ್ಲ ಕ್ಷೇತ್ರಗಳಲ್ಲಿ ಪೂರ್ಣ ಒಳಮೀಸಲಾತಿ ಜಾರಿಗೊಳಿಸಬೇಕು. ಮುಂಬಡ್ತಿಗೂ ಒಳಮೀಸಲಾತಿ ರೋಸ್ಟರ್ ನಿಗದಿಪಡಿಸಬೇಕು. ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಎಸ್ಸಿಗೆ ವರ್ಗೀಕರಣ ಅನುಪಾತದಲ್ಲಿ ಒಳಮೀಸಲಾತಿ ನೀಡುವಂತೆ ಸರ್ಕಾರಕ್ಕೆ ಆಗ್ರಹ ಮಾಡಿದರು. ನ್ಯಾಯಮೂರ್ತಿ ನಾಗಮೋಹನದಾಸ್ ಕಮಿಟಿ ವರದಿ ಆಧಾರದಡಿ ಒಳಮೀಸಲು ಜಾರಿಗೆ ಮಾಡಬೇಕು. ಫೆ.27ರಂದು 56 ಸಾವಿರ ಹುದ್ದೆಗಳ ಭರ್ತಿಗಾಗಿ ಆದೇಶ ಮಾಡಿದ್ದು, ಕೂಡಲೇ ಹಿಂಪಡೆಯಬೇಕು ಎಂದು ರಾಜ್ಯ ಸರ್ಕಾರಕ್ಕೆ ಒತ್ತಾಯ ಮಾಡಿದರು.



ವಿಷಯ ತಿಳಿದು ಧರಣಿ ನಿರತ ಸ್ಥಳಕ್ಕೆ ಆಗಮಿಸಿದ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಅವರು ಮನವಿ ಸ್ವೀಕಾರಕ್ಕೆ ಮುಂದಾದ ವೇಳೆ ಧರಣಿನಿರತರು ಜಿಲ್ಲಾಧಿಕಾರಿ ಬರಲು ಪಟ್ಟು ಹಿಡಿದಾಗ, ಪೊಲೀಸರು ಮುಖಂಡರನ್ನು ಬಂಧಿಸಿ ಬಳಿಕ ಬಿಡುಗಡೆ ಮಾಡಿದ್ದಾರೆ. ಪ್ರತಿಭಟನೆಯಲ್ಲಿ ಮುಖಂಡರಾದ ವೆಂಕಟೇಶ ಸಗಬಾಲ, ಅಶೋಕ ದೊಡಮನಿ, ಶಿಡ್ಲಪ್ಪ ಹೆಗಡೆ, ಶಂಕರ ಮುಗಳಿ, ಕರಿಯಪ್ಪ ಮಾದರ, ಕಲ್ಮೇಶ ಹಾದಿಮನಿ, ಚಂದ್ರಶೇಖರ ನಡುವಿನಮನಿ, ನಿಂಗಪ್ಪ ಹಂಚಿನಾಳ ಹಾಗೂ ಶಂಕರ ದೊಡಮನಿ ಪಾಲ್ಗೊಂಡಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಜಿ.ಪರಮೇಶ್ವರ, ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ.ಮಹಾದೇವಪ್ಪ ಅವರು ರಾಜ್ಯದ ಮಾದಿಗರ ಸಂಕಷ್ಟ ಅರ್ಥೈಸಿಕೊಳ್ಳಬೇಕು. ಕೂಡಲೇ ಮೀಸಲಾತಿ ಜಾರಿಗೆ ಕ್ರಮವಹಿಸಬೇಕು

■ **ವೀರಭದ್ರಪ್ಪ ಹಾಲಹರವಿ,** ಮಾಜಿ ಶಾಸಕ

ಶಾರ್ಟ್ ಸರ್ಕ್ಯೂಟ್‌ನಿಂದ ಕುರಿ ಶೆಡ್‌ಗೆ ಬೆಂಕಿ

700ಕ್ಕೂ ಹೆಚ್ಚು ಕುರಿಗಳು ಸಜೀವ ದಹನ

◆ಸಿಂಧನೂರು: ತಾಲೂಕಿನ ಮುಕ್ಕುಂದ ಗ್ರಾಮದಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಕುರಿ ಶೆಡ್‌ಗೆ ಬೆಂಕಿ ಹೊತ್ತಿಕೊಂಡಿದೆ. ಈ ದುರಂತದಲ್ಲಿ ವೈ.ಹೇಮಲತಾ ಮಧುಸೂದನ್ ರೆಡ್ಡಿ ಎಂಬುವರಿಗೆ ಸೇರಿದ 700ಕ್ಕೂ ಹೆಚ್ಚು ಕುರಿಗಳು ಸಜೀವ ದಹನವಾಗಿವೆ.

ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಗುರುವಾರ ರಾತ್ರಿ ಎರಡು ಗಂಟೆ ಸುಮಾರಿಗೆ ಕುರಿ ದೊಡ್ಡಿಗೆ ಬೆಂಕಿ ಬಿದ್ದ ಪರಿಣಾಮ ಶೆಡ್‌ನಲ್ಲಿದ್ದ ಸುಮಾರು 700ಕ್ಕೂ ಅಧಿಕ ಕುರಿಗಳು ಬೆಂಕಿಗಾಹುತಿಯಾದ ಘಟನೆ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಮುಕ್ಕುಂದ ಗ್ರಾಮದಲ್ಲಿ ಹೊರ ವಲಯದಲ್ಲಿ ನಡೆದಿದೆ.

ವೈ.ಹೇಮಲತಾ ಮಧುಸೂದನ್ ರೆಡ್ಡಿ ಎಂಬುವರಿಗೆ ಸೇರಿದ ಕುರಿ ಶೆಡ್ ಇದಾಗಿದ್ದು,ದೊಡ್ಡದಾದ ಶೆಡ್ ಮಾಡಿ ಸುಮಾರು 700ಕ್ಕೂ ಹೆಚ್ಚು ಕುರಿಗಳನ್ನು ಸಾಕಾಣಿಕೆ ಮಾಡಿದ್ದರು.ಆದರೆ ಗುರುವಾರ ತಡ ರಾತ್ರಿ ಈ ಶೆಡ್ ನೋಡಿಕೊಳ್ಳುತ್ತಿದ್ದ ಇಬ್ಬರು ಕೆಲಸಗಾರರು ಶೆಡ್‌ಗೆ ಬೆಂಕಿ ಬಿದ್ದಿದ್ದು ನೋಡಿ ಜೋರಾಗಿ ಕಿರುಚಿಕೊಂಡಿದ್ದಾರೆ. ಅವರ ಕಿರುಚಾಟ ಕೇಳಿ ಸ್ಥಳೀಯರು ಅಗ್ನಿಶಾಮಕ ಸಿಬ್ಬಂದಿಗೆ ಮಾಹಿತಿ ನೀಡಿದ್ದಾರೆ. ಅಗ್ನಿಶಾಮಕದಳದವರು ಸ್ಥಳಕ್ಕೆ ಭೇಟಿ ನೀಡುವ ವೇಳೆಗಾಗಲೇ ಇಡೀ ಕುರಿ ಶೆಡ್ ಬೆಂಕಿಗಾಹುತಿಯಾಗಿದ್ದು, ಶೆಡ್‌ನಲ್ಲಿದ್ದ ಎಲ್ಲಾ ಕುರಿಗಳು ಸಜೀವ ದಹನ ಸೇರಿದಂತೆ ಟ್ರ್ಯಾಕ್ಟರ್ ಟ್ರಾಲಿ ಸಂಪೂರ್ಣ ಭಸ್ಮಗೊಂಡಿದ್ದು ಇದರಿಂದಾಗಿ ಎರಡು ಕೋಟಿ ರೂಪಾಯಿ ನಷ್ಟ ಉಂಟಾಗಿದೆ ಎಂದು ಅಂದಾಜಿಸಲಾಗಿದೆ.

ಸ್ಥಳಕ್ಕೆ ಸಿಂಧನೂರು ಸಿಂಧನೂರು ಗ್ರಾಮೀಣ ಪೊಲೀಸರು ಹಾಗೂ ಅಗ್ನಿಶಾಮಕ ಸಿಬ್ಬಂದಿ ಆಗಮಿಸಿ ಬೆಂಕಿ ನಂದಿಸುವ ಪ್ರಯತ್ನ ಮಾಡಿದ್ದಾರೆ.ಸೂಕ್ತ ಪರಿಹಾರಕ್ಕಾಗಿ ಕುರಿ ಶೆಡ್ ಮಾಲೀಕರು ವೈ.ಹೇಮಲತಾ ಮಧುಸೂದನ್ ರೆಡ್ಡಿ ಆಗ್ರಹಿಸಿದ್ದಾರೆ. ಇನ್ನೂ ಈ ಒಂದು ಘಟನೆ ಸಿಂಧನೂರು ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಡಬಲ್ಸ್ : ಫೈನಲ್‌ಗೇರಿದ ಭಾರತೀಯ ನಾರಿಯರು

◆ಕಲಬುರಗಿ: ಕಠಿಣ ಕ್ಷಣದಲ್ಲಿ ಸಮಾಧಾನದಿಂದ ಆಡಿದ ಭಾರತದ ಅನುಭವಿ ಜೋಡಿಗಳು ಪಂದ್ಯವನ್ನು ಸಂಪೂರ್ಣವಾಗಿ ತನ್ನ ಹಿಡಿತಕ್ಕೆ ತೆಗೆದುಕೊಂಡು, ಅದ್ಭುತವಾದ ಆಟ ಪ್ರದರ್ಶನ ಮಾಡುವ ಮೂಲಕ ಐಟಿಎಫ್ ಡಬ್ಲ್ಯೂ 35 ಮಹಿಳಾ ಓಪನ್ ಟೆನಿಸ್ ಟೂರ್ನಿಯಲ್ಲಿ ಇಂದು ನಡೆಯುವ ಡಬಲ್ಸ್‌ನ ಫೈನಲ್ ಪಂದ್ಯಕ್ಕೆ ಲಗ್ಗೆಯಿಟ್ಟಿವೆ.

ನಗರದ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದ ಲಾನ್ ಟೆನಿಸ್ ಅಂಗಣದಲ್ಲಿ ನಡೆದ ಐಟಿಎಫ್ ಮಹಿಳಾ ಓಪನ್ ಟೆನಿಸ್ ಟೂರ್ನಿಯ ಕೋರ್ಟ್ 2ರಲ್ಲಿ ನಡೆದ ವುಮೆನ್ಸ್ ಡಬಲ್ ಪಂದ್ಯದಲ್ಲಿ ಭಾರತದ ವೈಷ್ಣವಿ ಅಡ್ಕರ್ ಮತ್ತು ಅಂಕಿತಾ ರೈನಾ ಜೋಡಿ ಮಹತ್ವದ ಕ್ಷಣಗಳಲ್ಲಿ ಧೈರ್ಯ ಕಳೆದುಕೊಳ್ಳದೆ ಟೈಬ್ರೇಕ್‌ನಲ್ಲಿ ಒಂದನೇ ಸೆಟ್ ತಮ್ಮದಾಗಿಸಿಕೊಂಡರು. ಅನಂತರ 2ನೇ ಸೆಟ್‌ನಲ್ಲಿ ಸಂಪೂರ್ಣ ಪ್ರಾಬಲ್ಯ ಮೆರೆದಿದ್ದ ಭಾರತದ ಸೋನಲ್ ಪಾಟೀಲ್ ಮತ್ತು ಬೇಲಾ ತಮ್ಹಂಕರ್ ಜೋಡಿಯನ್ನು ಅಂತಿಮವಾಗಿ 7-6, 6-2 ಅಂಕಗಳಿಂದ ಸೋಲಿಸಿ ಗಮನಾರ್ಹ ಜಯ ಸಾಧಿಸಿದರು.



ಮತ್ತೊಂದು ಡಬಲ್ಸ್ ಸೆಮಿಫೈನಲ್ ಪಂದ್ಯದಲ್ಲಿ ಭಾರತದ ಆಕಾಂಕ್ಷಾ ದಿಲೀಪ್ ನಿಟ್ಟೂರ ಮತ್ತು ಸೋಹಾ ಸಾದಿಕ್ ಜೋಡಿ 6-7 (7), 6-0, 10-5 ಸೆಟ್‌ಗಳಿಂದ ಜಪಾನ್‌ನ ಮಿಚಿಕಾ ಒಜೆಕಿ ಹಾಗೂ ಶ್ರಾವ್ಯ ಶಿವಾನಿ ಚಿಲಕಲಪುಡಿ ಜೋಡಿಗೆ ಆಘಾತ ನೀಡಿ ಫೈನಲ್ ತಲುಪಿತು. ಇದೀಗ ನಾಳೆ ನಡೆಯಲಿರುವ ಡಬಲ್ಸ್ ಫೈನಲ್ ಪಂದ್ಯದಲ್ಲಿ ಭಾರತದ ಜೋಡಿಗಳು ಪ್ರಶಸ್ತಿಗಾಗಿ ಸೆಣಸಾಟ ನಡೆಸಲಿವೆ.

ಇಂದಿನ ಮುಖಾಮುಖಿ

ಇಂದಿನ ಸಿಂಗಲ್ಸ್ ಸೆಮಿಫೈನಲ್ ಪಂದ್ಯದಲ್ಲಿ ಭಾರತದ 3ನೇ ಶ್ರೇಯಾಂಕಿತ ವೈಷ್ಣವಿ ಅಡ್ಕರ್ ಹಾಗೂ ನೆದರ್ಲ್ಯಾಂಡ್ಸ್‌ನ ಜಾಸ್ಮಿನ್ ಗಿಂಬ್ರೇರ್ ಸೆಣಸಾಟ ನಡೆಸಲಿದ್ದು, ಇನ್ನೊಂದೆಡೆ ಅನುಭವಿ ಆಟಗಾರ್ತಿ ಅಂಕಿತಾ ರೈನಾ, ಥಾಯ್ಲೆಂಡಿನ ಥಾಸಾಪಾರ್ನ್ ನಾಕ್ಲೋದೊಂದಿಗೆ ಅದೃಷ್ಟ ಬರೆಯಲಿದ್ದಾರೆ. ಅದೇ ರೀತಿ ಮಧ್ಯಾಹ್ನದ ಬಳಿಕ ಮಹಿಳಾ ಡಬಲ್ಸ್ ಫೈನಲ್ ಪಂದ್ಯದಲ್ಲಿ ಭಾರತೀಯರಾದ ಆಕಾಂಕ್ಷಾ ದಿಲೀಪ್ ನಿಟ್ಟೂರೆ, ಸೋಹಾ ಸಾಧಿಕ್ ಜೋಡಿ ಇಡೀ ಟೂರ್ನಿಯಲ್ಲಿ ಗಮನ ಸೆಳೆದ ಜೋಡಿಯಲ್ಲಿ ಒಂದಾದ ವೈಷ್ಣವಿ ಅಡ್ಕರ್ ಹಾಗೂ ಅಂಕಿತಾ ರೈನಾ ವಿರುದ್ಧ ಸೆಣಸಲಿದ್ದಾರೆ.

ಕಿರುಸುದ್ದಿ

ಹಿರೇಮಲ್ಲೂರ ಹೋರಿ ಹಬ್ಬಕ್ಕೆ ಷರತ್ತಿನ ಅನುಮತಿ

ಹಾವೇರಿ: ಶಿಗ್ಗಾವಿ ತಾಲೂಕು ಹಿರೇಮಲ್ಲೂರ ಗ್ರಾಮದಲ್ಲಿ ಮಾರ್ಚ್ 7ರಂದು ಹೋರಿ ಹಬ್ಬ ಆಚರಣೆಗೆ ವಿವಿಧ ಷರತ್ತು ಹಾಗೂ ನಿಬಂಧನೆಗಳನ್ನು ವಿಧಿಸಿ ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅನುಮತಿ ನೀಡಿದ್ದಾರೆ. ಕ್ರೀಡೆಯನ್ನು ಆಯೋಜಿಸುವ ಆಯೋಜಕರು, ವ್ಯಕ್ತಿಗಳು, ಸಂಘ-ಸಂಸ್ಥೆಗಳು ಸ್ಪರ್ಧೆಯಲ್ಲಿ ಭಾಗವಹಿಸುವ ಎತ್ತುಗಳಿಗೆ ಯಾವುದೇ ವ್ಯಕ್ತಿಯಿಂದ ಕ್ರೌರ್ಯ, ಹಿಂಸೆ ಮಾಡಿದಲ್ಲಿ ಅವರಿಗೆ ಪ್ರಾಣಿ ಹಿಂಸೆ ತಡೆಗಟ್ಟುವ ಅಧಿನಿಯಮ 1960ರ ಅಡಿಯಲ್ಲಿ ದಂಡನೆಗೆ ಒಳಪಡಿಸಲಾಗುವುದು ಹಾಗೂ ಆಯೋಜಕರ ಮೇಲೆ ಕಾನೂನಿನ್ವಯ ಕ್ರಮ ವಹಿಸಲಾಗುವುದು. ಕ್ರೀಡೆಯಲ್ಲಿ ಭಾಗವಹಿಸುವ ಎತ್ತುಗಳ ಮಾಲೀಕರು ಪಶುವೈದ್ಯಾಧಿಕಾರಿಗಳಿಂದ ಪಡೆದ ಜಾನುವಾರು ಸಾಗಾಣಿಕೆ ಪ್ರಮಾಣಪತ್ರ, ಕಡ್ಡಾಯವಾಗಿ ಹೊಂದಿರಬೇಕು, ಕ್ರೀಡೆ ಪ್ರಾರಂಭದಿಂದ ಅಂತ್ಯದವರೆಗೆ ಚಿತ್ರೀಕರಣ ಮಾಡಬೇಕು, ಚಿತ್ರೀಕರಣದ ಪ್ರತಿ ತಹಶೀಲ್ದಾರರಿಗೆ ನೀಡುವುದು ಸೇರಿದಂತೆ ವಿವಿಧ ಷರತ್ತುಗಳನ್ನು ವಿಧಿಸಲಾಗಿದೆ. ಷರತ್ತು ಹಾಗೂ ನಿಬಂಧನೆಗಳನ್ನು ಯಾವುದೇ ಸಮಯದಲ್ಲಿ ಉಲ್ಲಂಘಿಸಿದಲ್ಲಿ, ಯಾವುದೇ ಮುನ್ಸೂಚನೆ ನೀಡದೇ ಈ ಎತ್ತಿನ ಓಟ, ಎತ್ತಿನಗಾಡಿ ಓಟದ ಕ್ರೀಡೆಯ ಅನುಮತಿಯನ್ನು ರದ್ದು ಮಾಡುವ ಅಧಿಕಾರ ಈ ಪ್ರಾಧಿಕಾರಕ್ಕೆ, ನಿಯೋಜಿಸಿದ ಅಧಿಕಾರಿಯವರಿಗೆ ಕಾಯ್ದಿರಿಸಲಾಗಿದೆ ಎಂದು ಅನುಮತಿ ಪತ್ರದಲ್ಲಿ ತಿಳಿಸಿದ್ದಾರೆ.

ಪ್ರಧಾನಿ ವಿರುದ್ಧ ಪೋಸ್ಟ್: ಪ್ರಕರಣ ದಾಖಲು

ಸಿರುಗುಪ್ಪ: ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಮಾಡಿದ ಆರೋಪಿ ವಿರುದ್ಧ ಸಿರುಗುಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತಾಲೂಕಿನ ದೇಶನೂರ ಗ್ರಾಮದ ಸೈಯದ್ ಮೇಸ್ತ್ರಿ ಆರೋಪಿ. ಇಸ್ರೇಲ್ ಇರಾನ್ ಮಧ್ಯೆ ನಡೆಯುತ್ತಿರುವ ವೈಮಾನಿಕ ದಾಳಿ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ವಿರುದ್ಧ ತಾಲೂಕಿನ ದೇಶನೂರ ಗ್ರಾಮದ ಸೈಯದ್ ಮೇಸ್ತ್ರಿ ಎನ್ನುವವರು ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿಯಾಗಿ ಪೋಸ್ಟ್ ಮಾಡಿದ್ದರು. ಇದು ಸಾಕಷ್ಟು ವೈರಲ್ ಆಗಿತ್ತು. ಸಿರುಗುಪ್ಪ ನಗರದ ಎಸ್. ಸರದಾರ್ ಎನ್ನುವವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಾಗಿದ್ದು, ಆರೋಪಿ ಹುಡುಕಾಟಕ್ಕೆ ಪೊಲೀಸರು ಬಲೆ ಬೀಸಿದ್ದಾರೆ.

ನಾಪತ್ತೆಯಾಗಿದ್ದ ಬಾಲಕ ಮನೆಯಲ್ಲೇ ಪತ್ತೆ

ದಾಂಡೇಲಿ: ನಗರದ ಹಳೆ ದಾಂಡೇಲಿಯ ಲಮಾಣಿಚಾಳದಿಂದ ನಾಪತ್ತೆಯಾಗಿದ್ದ 5 ವರ್ಷದ ಪುಟಾಣಿ ಬಾಲಕ ಆತನ ಮನೆಯಲ್ಲೆ ಪತ್ತೆಯಾಗಿರುವ ಘಟನೆ ಶುಕ್ರವಾರ ನಡೆದಿದೆ. ಹಳೆ ದಾಂಡೇಲಿಯ ಲಮಾಣಿಚಾಳದ ನಿವಾಸಿಗಳಾದ ಯಾಸೀನ್ ಹೆಬ್ಬಳ್ಳಿ ಮತ್ತು ಅರ್ಜುಬಾನು ದಂಪತಿಗಳ



ಸುಪುತ್ರನಾಗಿರುವ ಅಜಾನ್ ಮಹ್ಮದ್ ಯಾಸೀನ್ ಹೆಬ್ಬಳ್ಳಿ ಎಂಬಾತನೇ ನಾಪತ್ತೆಯಾದ ಪುಟಾಣಿ ಬಾಲಕನಾಗಿದ್ದು, ಈತ ಔಷಧಿ ತೆಗೆದುಕೊಳ್ಳಲು ಹೆದರಿ ಮನೆಯ ಕೊಠಡಿಯಲ್ಲಿ ಆಟದ ಸಾಮಾನು ಇಟ್ಟಿರುವ ಸ್ಥಳದಲ್ಲಿ ಮಲಗಿಕೊಂಡಿದ್ದ ಎನ್ನಲಾಗಿದೆ. ಬಾಲಕ ನಾಪತ್ತೆಯಾಗಿರುವ ಕುರಿತಂತೆ ಇಡೀ ಹಳೆ ದಾಂಡೇಲಿಯಲ್ಲಿ ಮತ್ತು ದಾಂಡೇಲಿ ನಗರದಲ್ಲಿ ಸುದ್ದಿ ಹರಿದಾಡಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಆದರೆ, ಮನೆ ಜನರು ಸರಿಯಾಗಿ ಮನೆಯನ್ನು ಪರಿಶೀಲಿಸದೆ ಇರುವುದರಿಂದ ಬಾಲಕ ನಾಪತ್ತೆಯಾಗಿದ್ದಾನೆ ಎಂಬ ಮಾಹಿತಿ ಹರಡಿಕೊಂಡಿತ್ತು. ಅಂತಿಮವಾಗಿ ಅಜಾನ್ ಮಹಮ್ಮದ್ ಯಾಸೀನ್ ಹೆಬ್ಬಳ್ಳಿ ಆತನ ಮನೆಯಲ್ಲೇ ಪತ್ತೆಯಾಗಿರುವ ಮೂಲಕ ಈ ಪ್ರಕರಣ ಸುಖಾಂತ್ಯಗೊಂಡಿದೆ. ಶುಕ್ರವಾರ ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ಪೊಲೀಸರಿಂದ ಹಿಡಿದು ಸ್ಥಳೀಯರಿಗೆ ಹಾಗೂ ನಗರದ ಜನತೆಗೆ ಬಹಿದೊಡ್ಡ ತಲೆನೋವಾಗಿ ಪರಿಣಮಿಸಿದ್ದ ಮತ್ತು ಆತಂಕಕ್ಕೆ ಕಾರಣವಾಗಿದ್ದ ಈ ಘಟನೆ ಸುಖಾಂತ್ಯ ಕಂಡಿದೆ.

ರಾಜ್ಯ ಬಜೆಟ್‌ಗೆ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಪ್ರಶಂಸೆ

ಉ.ಕ. ಅಭಿವೃದ್ಧಿಗೆ ಆದ್ಯತೆ

ಹುಬ್ಬಳ್ಳಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸುವ ಒತ್ತಡದ ಮಧ್ಯೆಯೂ ರಾಜ್ಯದ ಅಭಿವೃದ್ಧಿಗಾಗಿ ಸಂಪನ್ಮೂಲ ಕ್ರೋಢೀಕರಿಸುವ ಹೊಸ ಯೋಜನೆಗಳನ್ನು ಘೋಷಿಸಿರುವುದು ನಿಜವಾಗಿಯೂ ಜಾಣ್ಮೆಯಾಗಿದೆ ಎಂದು ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಅಧ್ಯಕ್ಷ ಜಿ.ಕೆ. ಆದಪ್ಪಗೌಡರ ತಿಳಿಸಿದ್ದಾರೆ.

ನಗರದಲ್ಲಿ ಶುಕ್ರವಾರ ಸಂಸ್ಥೆ ಸಭಾಂಗಣದಲ್ಲಿ ರಾಜ್ಯ ಬಜೆಟ್ ವೀಕ್ಷಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹುಬ್ಬಳ್ಳಿಯಲ್ಲಿ 236 ಕೋಟಿ ವೆಚ್ಚದ ಜಯದೇವ ಹೃದ್ರೋಗ ಕೇಂದ್ರ ಸ್ಥಾಪನೆ, ಕೈಗಾರಿಕಾ ವಸ್ತು ಪ್ರದರ್ಶನ ಪ್ರಾಧಿಕಾರಕ್ಕೆ 10ಕೋಟಿ ರೂ. ಅನುದಾನ ಘೋಷಿಸಿರುವುದು ನಮ್ಮ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಗೆ ಸಂತಸ ತಂದಿದೆ ಎಂದರು.

ಈ ಅನುದಾನದಲ್ಲಿ ಸಂಸ್ಥೆಯ ಅಮರಗೋಳದಲ್ಲಿರುವ ಹುಬ್ಬಳ್ಳಿ ಧಾರವಾಡ ವಿವಿಧೋದ್ದೇಶ ವಸ್ತು ಪ್ರದರ್ಶನ ಕೇಂದ್ರಕ್ಕೆ ಪಾಲು ದೊರೆಯುವ ನಿರೀಕ್ಷೆ ಇದೆ. 83 ಲಕ್ಷ ರೈತರಿಗೆ ಶೂನ್ಯ ಬಡ್ಡಿ ಸಾಲ ಯೋಜನೆ ಮತ್ತು ನೀರಾವರಿ ಯೋಜನೆಗಳಿಗಾಗಿ 490 ಕೋಟಿ ರೂ. ಮೀಸಲಿಟ್ಟಿರುವುದು ಈ ಸರ್ಕಾರದ ಶ್ಲಾಘನೀಯ ಕ್ರಮವಾಗಿದೆ ಎಂದು ಹೇಳಿದರು.

ಕೃಷಿ ಇಲಾಖೆಗೆ 8373 ಕೋಟಿ ಅನುದಾನ ಘೋಷಣೆ, ಕೃಷಿ ವಿಸ್ತಾರ ಯೋಜನೆಗೆ ಹೆಚ್ಚಿನ 100ಕೋಟಿ ರೂ. ಅನುದಾನ ಘೋಷಣೆಯು ರೈತರಿಗೆ ಸಂತಸ ಉಂಟು ಮಾಡಿದೆ. ಆಲಮಟ್ಟಿ ಅಣೆಕಟ್ಟು ಎತ್ತರದ ಸಂತ್ರಸ್ತರ ಪರಿಹಾರ ಪರಿಷ್ಕರಣೆಯು ಪ್ರತಿ ಎಕರೆ ಕೃಷಿ ಜಮೀನಿಗೆ 30ಲಕ್ಷ ಹಾಗೂ ಎಕರೆ ತರಿ ಜಮೀನಿಗೆ 40ಲಕ್ಷ ಘೋಷಣೆ ಮಾಡಿರುವುದು ಶ್ಲಾಘನೀಯವಾಗಿದೆ. ರಾಜ್ಯದಲ್ಲಿ ರೈಲು ಯೋಜನೆಗಳಿಗೆ 600ಕೋಟಿ ಮೀಸಲು, ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಗದಗ, ಕಪ್ಪತ್ತಗುಡ್ಡ, ಲಕ್ಕುಂಡಿ ಪ್ರವಾಸೋದ್ಯಮ ಸರ್ಕ್ಯೂಟ್ ಅಭಿವೃದ್ಧಿಗೆ ವಿಶೇಷ ಅನುದಾನ ಘೋಷಣೆ ಈ ಭಾಗದ ನಾಗರಿಕರಿಗೆ ಸಂತಸವನ್ನು ತಂದಿವೆ ಎಂದು ತಿಳಿಸಿದರು.



> 16 ವಯಸ್ಸಿನವರೆಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ಬಳಕೆ ನಿಷೇಧ ಹೇರಿರುವುದು ಸ್ವಾಗತಾರ್ಹ. ಧಾರವಾಡ ಕೈಗಾರಿಕಾ ನೋಡ್‌ಗೆ ಸಂಬಂಧಿಸಿದಂತೆ 1ಸಾವಿರ ಎಕರೆಯನ್ನು ಭೂಸ್ವಾಧೀನ ಮಾಡಲು 600 ಕೋಟಿ ರೂ. ಅನುದಾನ, ಪ್ರಸಕ್ತ ಸಾಲಿನಲ್ಲಿ 200ಕೋಟಿ ರೂ. ಮೀಸಲಿಡಲಾಗಿದೆ.
> ■ ಸಿದ್ದೇಶ್ವರ ಕಮ್ಮಾರ, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಉಪಾಧ್ಯಕ್ಷ

ಪಶುಸಂಗೋಪನೆಗೆ 4084 ಕೋಟಿ, ಕೃಷಿ ಮತ್ತು ತೋಟಗಾರಿಕೆಗೆ 8373 ಕೋಟಿ, ಆಹಾರ, ನಾಗರೀಕ ಸರಬರಾಜು 7942 ಕೋಟಿ, ಲೋಕೋಪಯೋಗಿ 11424 ಕೋಟಿ, ಸಮಾಜ ಕಲ್ಯಾಣ ಇಲಾಖೆ-18612 ಕೋಟಿ, ಕಂದಾಯ ಇಲಾಖೆ-19845 ಕೋಟಿ, ಹಾವೇರಿಯಲ್ಲಿ ಸಿಲ್ಕ ಪಾರ್ಕ್ ಸ್ಥಾಪನೆ, ರೈತ ಮಾಲ್ ಸ್ಥಾಪನೆಗೆ ಸರ್ಕಾರ ನಿರ್ಧಾರ ಮಾಡಿದೆ ಎಂದು ಹೇಳಿದರು.

ಗೌರವ ಕಾರ್ಯದರ್ಶಿ ಉದಯ ರೇವಣಕರ, ಇತ್ತೀಚೆಗೆ ನಮ್ಮ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯು ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಬಜೆಟ್ ಪೂರ್ವ ಸಲಹೆ ಸೂಚನೆಗಳನ್ನು ಸಲ್ಲಿಸುವಾಗ ಬಿಯಾಂಡ್‌ಬೆಂಗಳೂರುಪರಿಕಲ್ಪನೆಅಡಿಯಲ್ಲಿಹುಬ್ಬಳ್ಳಿ ಧಾರವಾಡ ಮತ್ತು ಉತ್ತರ ಕರ್ನಾಟಕ ಭಾಗದಲ್ಲಿ ಯುವಕರಿಗೆ ಉದ್ಯೋಗವಕಾಶ ಒದಗಿಸಲು, ಬಂಡವಾಳ ಹೂಡಿಕೆದಾರರಿಗೆ ಉತ್ತೇಜನ ನೀಡಲು ಸರ್ಕಾರ ಕ್ರಿಯಾ ಯೋಜನೆ ಜಾರಿಗೊಳಿಸಬೇಕೆಂದು ಮನವಿ ಮಾಡಿಕೊಳ್ಳಲಾಗಿತ್ತು. ಇದಕ್ಕೆ ಸ್ಪಂದಿಸಿದ ಮುಖ್ಯಮಂತ್ರಿಗಳು ತಮ್ಮ ಬಜೆಟ್‌ನಲ್ಲಿ ಈ ಅಂಶವನ್ನು ಪ್ರಸ್ತಾಪಿಸಿದ್ದು, ಈ ಭಾಗದ ಉದ್ದಿಮೆಗಳಿಗೆ ಸಂತಸ ನೀಡಿದೆ ಎಂದು ಹೇಳಿದ್ದಾರೆ.

ಉಪಾಧ್ಯಕ್ಷ ಪ್ರವೀಣ ಅಗಡಿ, ವೀರಣ್ಣ ಕಲ್ಲೂರ, ಸಿಎ ವಾಯ್.ಎಂ.ಖಟಾವಕರ, ಸದಸ್ಯರಾದ ಸುಭಾಸ ಬಾಗಲಕೋಟಿ, ಸಿ.ಜಿ.ಧಾರವಾಡಶೆಟ್ಟರ, ಬ್ರಹ್ಮಕುಮಾರ ಬೀಳಗಿ ಇದ್ದರು.

ಕಾಮಗಾರಿ ಪೂರ್ಣ, ಪರಿಹಾರ ನೀಡಲು ಕ್ರಮ | ರಾಜ್ಯ ಬಜೆಟ್‌ನಲ್ಲಿ ಘೋಷಣೆ

ಕೃಷ್ಣೆಗೆ ಅನುದಾನ ಮೀಸಲಿಲ್ಲ

ಬಾಗಲಕೋಟೆ: ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಜೆಟ್ ಮಂಡಿಸುವಲ್ಲಿ ದಾಖಲೆ ನಿರ್ಮಿಸಿದರು ಆದರೆ ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತ ಕಾಮಗಾರಿ ಪೂರ್ಣಗೊಳಿಸಲು ಕ್ರಮ ವಹಿಸುವುದಾಗಿ ತಿಳಿಸಿದ್ದು ಕೃಷ್ಣೆಯ ಮಕ್ಕಳ ನಿರೀಕ್ಷೆಯಂತೆ ಅನುದಾನ ಮೀಸಲಿಡದಿರುವುದು ನಿರಾಸೆ ಮೂಡಿಸಿತು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ಬಾರಿ 18 ಸಾವಿರ ಕೋಟಿ ರೂ. ಮೀಸಲಿಟ್ಟು ಘೋಷಣೆ ಮಾಡುತ್ತಾರೆ ಎಂಬ ನಿರೀಕ್ಷೆ ಕೃಷ್ಣೆಯ ಸಂತ್ರಸ್ತರಲ್ಲಿ ನಿರಾಸೆ ಮೂಡಿಸಿತು.

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ವ್ಯಾಪ್ತಿಯ ಆಲಮಟ್ಟಿ ಅಣೆಕಟ್ಟಿನ ಗೇಟನ್ನು 524.256 ಮೀಟರ್‌ವರೆಗೆ ಎತ್ತರಿಸುವುದರಿಂದ ಮುಳುಗಡೆಯಾಗುವ ಜಮೀನುಗಳನ್ನು ಒಪ್ಪಂದ ಐತೀರ್ಪಿನ (Consent Award) ಮುಖಾಂತರ ಒಂದೇ ಹಂತದಲ್ಲಿ ಭೂಸ್ವಾಧೀನಪಡಿಸಿಕೊಂಡು ರೈತರಿಗೆ ಪರಿಹಾರ ವಿತರಣೆಗೆ ಕ್ರಮವಹಿಸಲಾಗುವುದು. ಅಲ್ಲದೇ, 2.01 ಲಕ್ಷ ಎಕರೆ ನೀರಾವರಿ ಸಾಮರ್ಥ್ಯ ಕಲ್ಪಿಸುವ ಬಾಕಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು.

ಕೃಷ್ಣಾ ಕಣಿವೆ, ಕಾವೇರಿ ಕಣಿವೆ ಹಾಗೂ ಇತರ ನದಿಗಳ ಕಣಿವೆಯ ವಿವಿಧ ಯೋಜನೆಗಳಡಿ ಬಾಕಿ ಇರುವ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು.

ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಭೂಸ್ವಾಧೀನ ಕುರಿತಂತೆ ನ್ಯಾಯಾಲಯಗಳಲ್ಲಿ ದಾಖಲಿಸಿರುವ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಿ ಸೂಕ್ತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಭೂಸ್ವಾಧೀನ ಪ್ರಕರಣಗಳ ವಿಶೇಷ ತ್ವರಿತಗತಿ (Fast-track) ನ್ಯಾಯಾಲಯವನ್ನು ಬಾಗಲಕೋಟೆ ಜಿಲ್ಲೆಯಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ.

ಬಾಗಲಕೋಟೆ, ವಿಜಯಪುರ, ಕಲಬುರಗಿ, ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಒಟ್ಟಾರೆ 3,000 ಹೆಕ್ಟೇರ್ ಪ್ರದೇಶದಲ್ಲಿ ಸಮಗ್ರ ಮಣ್ಣು ಮತ್ತು ನೀರಿನ ನಿರ್ವಹಣೆ, ಸಮರ್ಪಕ ತ್ಯಾಜ್ಯ ನಿರ್ವಹಣೆ, ನೀರಿನ ಬಳಕೆ ಮತ್ತು ಸಮತೋಲನ ಪೋಷಕಾಂಶ ನಿರ್ವಹಣೆಯನ್ನು ಸಕ್ಕರೆ ಕಾರ್ಖಾನೆಗಳ ಸಹಯೋಗದೊಂದಿಗೆ ಜಾರಿಗೊಳಿಸಿದೆ.

ಹಿಂದಿನ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ ಬಾಗಲಕೋಟೆಯಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಘಟಕ ಕಾಲೇಜನ್ನು ಸ್ಥಾಪಿಸಲು ಕ್ರಮವಹಿಸಲಾಗಿದೆ. ಕಾಲೇಜುಗಳ ಕಾರ್ಯಾಚರಣೆಗಾಗಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ಅಥಣಿ, ಹುನಗುಂದ ಮತ್ತು ಮುಧೋಳದಲ್ಲಿ 50 ಹಾಸಿಗೆ ಸಾಮರ್ಥ್ಯದ ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳನ್ನು ಸ್ಥಾಪನೆ ಮಾಡಲು ಅನುಮೋದನೆ ನೀಡಲಾಗಿದೆ, ಬಾಗಲಕೋಟೆ ಜಿಲ್ಲೆಯ ಐಹೊಳೆ ಸೇರಿದಂತೆ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಒತ್ತು ನೀಡಲಾಗುವುದು ಎಂದು ಬಜೆಟ್‌ನಲ್ಲಿ ತಿಳಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿರುವ ಬಜೆಟ್ ಜಿಲ್ಲೆಗೆ ಅಷ್ಟೊಂದು ಬಂಪರ್ ಕೊಡುಗೆಯನ್ನು ನೀಡಿಲ್ಲವೆಂದು ವಿರೋಧ ಪಕ್ಷದ ನಾಯಕರು ತಿಳಿಸಿದ್ದಾರೆ.

ಸಮೃದ್ಧ ಕರ್ನಾಟಕಕ್ಕೆ ಪೂರಕ ಬಜೆಟ್: ಸಚಿವ ಜಾರಕಿಹೊಳಿ

ಬೆಳಗಾವಿ: ಸಮಸ್ತ ಕನ್ನಡಿಗರ ಸರ್ವಾಂಗೀಣ ಪ್ರಗತಿಯ ದೃಷ್ಟಿಯಲ್ಲಿಟ್ಟುಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮ ದಾಖಲೆಯ 17ನೇ ಬಜೆಟ್ ಶುಕ್ರವಾರ ಮಂಡಿಸಿದ್ದಾರೆ. 4.48 ಲಕ್ಷ ಕೋಟಿ ರೂ. ಮೊತ್ತದ ಈ ಬೃಹತ್ ಆಯವ್ಯಯವು ಸಮೃದ್ಧ ಕರ್ನಾಟಕ ನಿರ್ಮಾಣದತ್ತ ಮಹತ್ವದ ಹೆಜ್ಜೆಯಾಗಿದೆ ಎಂದು ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ.



2026-27 ಸಾಲಿನ ಬಜೆಟ್ ಕುರಿತು ಅಭಿಪ್ರಾಯ ವ್ಯಕ್ತಪಡಿಸಿದ ಅವರು, ಸರ್ಕಾರದ ಪಂಚಗ್ಯಾರಂಟಿ ಯೋಜನೆಗಳಿಗೆ ಹೆಚ್ಚಿನ ಒತ್ತು ನೀಡಲಾಗಿದ್ದು, ಇದಕ್ಕಾಗಿ ಸುಮಾರು ರೂ.52,000 ಕೋಟಿಗೂ ಅಧಿಕ ಹಣ ಮೀಸಲಿಡಲಾಗಿದೆ. ಇದರಲ್ಲಿ ಗೃಹಲಕ್ಷ್ಮಿ ಯೋಜನೆಗೆ ರೂ.28,608 ಕೋಟಿ ಅನುದಾನ ನೀಡಲಾಗಿದೆ. ರಾಜ್ಯದ 800 ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ ಮೇಲ್ದರ್ಜೆಗೇರಿಸಲು ರೂ.3,900 ಕೋಟಿ ಮೀಸಲಿಡಲಾಗಿದೆ. ಅಲ್ಲದೆ, ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೊಸ ಲೇಬರ್ ರೆಸಿಡೆನ್ಶಿಯಲ್ ಸ್ಕೂಲ್‌ಗಳನ್ನು ಘೋಷಿಸಲಾಗಿದೆ ಎಂದಿದ್ದಾರೆ.

ತಾಯಿ-ಮಗು ಮರಣ ಪ್ರಮಾಣ ತಗ್ಗಿಸಲು ವಿಶೇಷ ಒತ್ತು ನೀಡಲಾಗಿದ್ದು, ರಾಜ್ಯಾದ್ಯಂತ ಡಿಜಿಟಲ್ ಹೆಲ್ತ್ ಕಾರ್ಡ್ ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಯುಪಿಐ ಪಾವತಿ ಸೌಲಭ್ಯವನ್ನು ಪರಿಚಯಿಸಲಾಗುತ್ತಿದೆ. 38 ಲಕ್ಷ ರೈತರಿಗೆ ರೂ.30,000 ಕೋಟಿ ವರೆಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡುವ ಮಹತ್ವದ ಘೋಷಣೆ ಮಾಡಲಾಗಿದೆ. ಕೃಷಿ ಮಾಹಿತಿಗಾಗಿ ಎಐ ಆಧಾರಿತ ರೈತ ಕಾಲ್ ಸೆಂಟರ್ ಸ್ಥಾಪಿಸಲಾಗುತ್ತಿದೆ.

ಬೆಂಗಳೂರನ್ನು ವಿಶ್ವದ ಅತ್ಯಂತ ವಾಸಯೋಗ್ಯ ನಗರವನ್ನಾಗಿ ಮಾಡಲು ಆದ್ಯತೆ ನೀಡಲಾಗಿದೆ. ಮೆಟ್ರೋ ಜಾಲದ ವಿಸ್ತರಣೆ ಮತ್ತು ನಗರದ 450 ಕಿ.ಮೀ ರಸ್ತೆಯನ್ನು ವೈಟ್ ಟಾಪಿಂಗ್ ಮಾಡಲು ರೂ.3,000 ಕೋಟಿ ನಿಗದಿಪಡಿಸಲಾಗಿದೆ. 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳ ಬಳಕೆಯನ್ನು ನಿರ್ಬಂಧಿಸುವ ಪ್ರಸ್ತಾಪ ಮತ್ತು ಶಾಲಾ-ಕಾಲೇಜುಗಳಲ್ಲಿ ಕಿರುಕುಳ ತಡೆಗೆ ರೋಹಿತ್ ವೇಮುಲ ಕಾಯ್ದೆ ಜಾರಿಗೆ ತರಲು ನಿರ್ಧರಿಸಲಾಗಿದೆ.

ಒಟ್ಟಾರೆ ನಾಡಿನ ಕಟ್ಟಕಡೆಯ ವ್ಯಕ್ತಿಗೂ ಸರ್ಕಾರದ ಸೌಲಭ್ಯಗಳು ತಲುಪಬೇಕು ಎಂಬ ಗಾಂಧೀಜಿಯವರ ಅಂತ್ಯೋದಯ ತತ್ವವೇ ಸಿಎಂ ಅವರು ಮಂಡಿಸಿದ ಬಜೆಟ್ ಅಡಿಪಾಯವಾಗಿದೆ ಎಂದು ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಅಲ್ಪಸಂಖ್ಯಾತರ ತುಷ್ಟೀಕರಣದಿಂದ ರಾಜ್ಯಕ್ಕೆ ದ್ರೋಹ: ಶಾಸಕ ಬೆಲ್ಲದ

ಹುಬ್ಬಳ್ಳಿ: ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟು, ಅಭಿವೃದ್ಧಿ ಕುಂಠಿತವಾಗಿರುವ ಸಂದರ್ಭದಲ್ಲಿ ಸಿದ್ದರಾಮಯ್ಯ ಸರ್ಕಾರ, ಕನ್ನಡಿಗರ ತೆರಿಗೆ ಹಣವನ್ನು ಕೇವಲ ಒಂದು ನಿರ್ದಿಷ್ಟ ಸಮುದಾಯದ ಓಲೈಕೆಗಾಗಿ ಸುರಿಯುವ ಮೂಲಕ ರಾಜ್ಯಕ್ಕೆ ದ್ರೋಹ ಬಗೆಯುತ್ತಿದೆ ಎಂದು ವಿಧಾನಸಭೆ ವಿಪಕ್ಷ ಉಪನಾಯಕ ಹಾಗೂ ಹು-ಧಾ ಪಶ್ಚಿಮ ವಿಧಾನಸಭಾ ಕ್ಷೇತ್ರದ ಶಾಸಕ ಅರವಿಂದ ಬೆಲ್ಲದ ಆರೋಪಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ್ದು ಪ್ರಸಕ್ತ ಸಾಲಿನ ಆಯವ್ಯಯವಲ್ಲ, ಸಂಪೂರ್ಣ ವೋಟ್ ಬ್ಯಾಂಕ್ ರಾಜಕಾರಣದ ಕರಡು ಎಂಬಂತೆ ಭಾಸವಾಗುತ್ತದೆ. ರಾಜ್ಯದ ಬಹುಸಂಖ್ಯಾತ ಜನತೆ ತೆರಿಗೆ ಪಾವತಿಸುತ್ತಿದ್ದರೆ, ಅದರ ಸಿಂಹಪಾಲನ್ನು ಕೇವಲ ಒಂದು ವರ್ಗದ ಅಭಿವೃದ್ಧಿಗೆ ಮೀಸಲಿಡುತ್ತಿರುವುದು ನಾಡಿನ ದೌರ್ಭಾಗ್ಯ.

ಕೆಪಿಎಸ್ ಮಾದರಿಯಲ್ಲಿ ಅಲ್ಪಸಂಖ್ಯಾತ ಶಾಲೆಗಳ ಅಭಿವೃದ್ಧಿ, ಹೊಸ ವಸತಿ ಶಾಲೆಗಳು, ಹಜ್ ಭವನಗಳ ನಿರ್ಮಾಣ ಮತ್ತು ವಕ್ಫ್ ಆಸ್ತಿಗಳ ಅಭಿವೃದ್ಧಿಗೆ ಭಾರಿ ಅನುದಾನ ನೀಡಿರುವುದು ಸರ್ಕಾರದ ತುಷ್ಟೀಕರಣದ ನೀತಿ ತೋರುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಅಲ್ಪಸಂಖ್ಯಾತರ ಓಲೈಕೆಗಾಗಿ ಅಲ್ಪಸಂಖ್ಯಾತರ ಬಡಾವಣೆಗಳ ಮೂಲಸೌಕರ್ಯ ಅಭಿವೃದ್ಧಿಗೆ ನೂರಾರು ಕೋಟಿ ರೂ., ಅಲ್ಪಸಂಖ್ಯಾತ ಅನಾಥರಿಗಾಗಿ ಹೊಸ ವೃದ್ಧಾಶ್ರಮ, ನಿರುದ್ಯೋಗಿ ಅಲ್ಪಸಂಖ್ಯಾತರಿಗೆ ಉದ್ಯೋಗಕ್ಕಾಗಿ 3 ಲಕ್ಷದವರೆಗೆ ಆರ್ಥಿಕ ನೆರವು, ಹಜ್ ಭವನಗಳ ನಿರ್ಮಾಣ ಹೀಗೆ ಆ ಸಮುದಾಯದ ಓಲೈಕೆಗೆ ಹಲವು ಘೋಷಣೆಗಳನ್ನು ಮಾಡುವ ಮೂಲಕ ಅಲ್ಪಸಂಖ್ಯಾತರ ಓಲೈಕೆಗೆ ಮುಂದಾಗಿರುವುದು ಸ್ಪಷ್ಟವಾಗಿದೆ. ಈಗಾಗಲೇ 8.24 ಲಕ್ಷ ಕೋಟಿ ರೂ. ಸಾಲದ ಹೊರೆಯಲ್ಲಿರುವ ರಾಜ್ಯ ಸರ್ಕಾರ, ಸಾಲದ ಬಡ್ಡಿ ಮನ್ನಾ ಮತ್ತು ಉಚಿತ ಸೌಲಭ್ಯಗಳ ಹೆಸರಿನಲ್ಲಿ ಬೊಕ್ಕಸ ಖಾಲಿ ಮಾಡುವುದು ಮುಂದಿನ ಪೀಳಿಗೆಗೆ ಮಾಡುವ ಅನ್ಯಾಯ ಎಂದು ತಿಳಿಸಿದ್ದಾರೆ.

'ವೋಟ್ ಬ್ಯಾಂಕ್' ಪ್ರೇರಿತ ಬಜೆಟ್: ಸಚಿವ ಜೋಶಿ

ಹುಬ್ಬಳ್ಳಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ ಬಜೆಟ್ 4.48 ಲಕ್ಷ ಕೋಟಿ ಬೃಹತ್ ಗಾತ್ರದ ಹೆಗ್ಗಳಿಕೆಗಷ್ಟೇ ಸೀಮಿತ. ಅಂತೆಯೇ ರಾಜ್ಯದ ಸಾಲ ಹೆಚ್ಚಳ ಮತ್ತು ವಿತ್ತೀಯ ಕೊರತೆಯಲ್ಲಿ ಸಹ ದಾಖಲೆ ನಿರ್ಮಿಸಿದ್ದಲ್ಲದೆ, 'ವೋಟ್ ಬ್ಯಾಂಕ್' ಪ್ರೇರಿತ ಎಂಬಂತಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಪ್ರತಿಕ್ರಿಯಿಸಿದ್ದಾರೆ.



ಈ ಕುರಿತು ಪ್ರಕಟಣೆಗೆ ತಿಳಿಸಿದ ಅವರು, ರಾಜ್ಯ ಸರ್ಕಾರದ 2026-27ನೇ ಸಾಲಿನ ಈ ಬಜೆಟ್ ಅಲ್ಲಿ ರಾಜ್ಯವನ್ನು ಆರ್ಥಿಕ ಪ್ರಗತಿಯತ್ತ ಕೊಂಡೊಯ್ಯುವ ಬದಲು ಆರ್ಥಿಕ ಸಂಕಷ್ಟವನ್ನು ತೆರೆದಿಟ್ಟಿದೆ. ಅಲ್ಪಸಂಖ್ಯಾತ ಸಮುದಾಯ ಸೇರಿದಂತೆ ಕೆಲವೇ ಕೆಲವು ಸಮಾಜಗಳಿಗೆ ಬಜೆಟ್ ಮೀಸಲಿಟ್ಟಂತೆ ಕಾಣುತ್ತಿದೆ ಎಂದು ಪ್ರತಿಕ್ರಿಯಿಸಿದ್ದಾರೆ.

ದೊಡ್ಡ ಗಾತ್ರದ ಬಜೆಟ್ ಆಗಿದ್ದರೂ ಇದೊಂದು ಸ್ಪಷ್ಟ ಅರ್ಥ ನೀತಿ ಬಿಂಬಿಸದ, 'ಅರ್ಥ'ವಿಲ್ಲದ ಈ ಆಯವ್ಯಯ ಥೇಟ್ ರಾಜಕೀಯ ಭಾಷಣದಂತಿದೆಯೇ ಹೊರತು ಯಾವುದೇ ಅರ್ಥಶಾಸ್ತ್ರದ ಮಾರ್ಗದರ್ಶಿಗೆ ಒಳಪಟ್ಟಂತೆ ಕಾಣುತ್ತಿಲ್ಲ ಎಂದಿದ್ದಾರೆ ಜೋಶಿ.

ಲೆಕ್ಕರಾಮಯ್ಯ ಅಲ್ಲ ಸಾಲರಾಮಯ್ಯ: ರಾಜ್ಯ ಸರ್ಕಾರದ ಪ್ರಸಕ್ತ ಬಜೆಟ್‌ನಲ್ಲಿ 97,449 ಕೋಟಿ ವಿತ್ತೀಯ ಕೊರತೆ ಮತ್ತು 29,957 ಕೋಟಿ ರಾಜಸ್ವ ಸಂಗ್ರಹ ಕೊರತೆ ತೋರಿಸಿರುವ ಸಿಎಂ ಸಿದ್ದರಾಮಯ್ಯ ಅವರು ಲೆಕ್ಕರಾಮಯ್ಯ ಅಲ್ಲ, ಸಂಪದ್ಭರಿತವಾಗಿದ್ದ ಕರುನಾಡಿನ ಪಾಲಿಗೆ 1.32 ಲಕ್ಷ ಕೋಟಿ ಸಾಲದ ಹೊರೆ ಹೊರಿಸಿದ ಸಾಲರಾಮಯ್ಯ ಆಗಿದ್ದಾರೆಂದು ಜೋಶಿ ಟೀಕಿಸಿದ್ದಾರೆ.

ಜನಕ್ಕೆ 125 ದಿನಗಳ ಉದ್ಯೋಗ ಖಾತ್ರಿ ನೀಡುವುದರೊಂದಿಗೆ ನಗರ ಮತ್ತು ಗ್ರಾಮೀಣ ಅಭಿವೃದ್ಧಿಯಲ್ಲಿ ಮಹತ್ತರ ಪಾತ್ರ ವಹಿಸಿರುವ ವಿಬಿ ಜಿ ರಾಮ್ ಜಿ ಯೋಜನೆಗೆ ರಾಜ್ಯ ಸರ್ಕಾರ ತನ್ನ ಬಜೆಟ್‌ನಲ್ಲಿ ನಯಾ ಪೈಸೆ ಅನುದಾನ ಒದಗಿಸಿಲ್ಲ. ಇದು ಇವರ ಅಭಿವೃದ್ಧಿ ವಿರೋಧಿ ನೀತಿಯನ್ನು ತೋರ್ಪಡಿಸುತ್ತದೆ. ರಾಜ್ಯದ ಪಾಲಿಗೆ 'ಗ್ಯಾರಂಟಿ ಸಾಲ ಶೂಲ'ದ ಬಜೆಟ್ ಆಗಿದೆ. 'ವೋಟ್ ಬ್ಯಾಂಕ್' ಮತ್ತು ಗ್ರಾಮ ಪಂಚಾಯ್ತಿಗಳಿಗೆ ಮಹಾತ್ಮ ಗಾಂಧಿ ನಾಮಕರಣ ಘೋಷಿಸಿದ 'ಕಾಂಗ್ರೆಸ್ ಹೈ ಕಮಾಂಡ್ ಓಲೈಕೆ'ಯ ಆಯವ್ಯಯ ಎಂದು ಸಚಿವ ಜೋಶಿ ಟೀಕಿಸಿದ್ದಾರೆ.

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಪ್ರತ್ಯೇಕ ಡಿಸಿಸಿ ಬ್ಯಾಂಕ್

ಹಾವೇರಿ: ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಪ್ರತ್ಯೇಕ ಡಿಸಿಸಿ ಬ್ಯಾಂಕ್ ರಚನೆಯ ಬೇಡಿಕೆಗಳಿಗೆ ಬಜೆಟ್‌ನಲ್ಲಿ ಸ್ಪಂದನೆ ವ್ಯಕ್ತವಾಗಿದ್ದು, ಈ ಬೇಡಿಕೆಗಳು ಈಡೇರಲಿವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಆಶಯ ವ್ಯಕ್ತಪಡಿಸಿದ್ದಾರೆ.



ಬಜೆಟ್‌ನಲ್ಲಿ ವೈದ್ಯಕೀಯ ಕಾಲೇಜು, ಆಸ್ಪತ್ರೆ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ನಿರ್ಮಾಣ ಕಾಮಗಾರಿಗಳಿಗೆ 620 ಕೋಟಿ ರೂ. ಹಾಗೂ ಉಪಕರಣಗಳ ಖರೀದಿಗೆ 220 ಕೋಟಿ ರೂ. ಅನುದಾನ ಮೀಸಲಿಡಲಾಗಿದೆ. ಹಾವೇರಿ ವೈದ್ಯಕೀಯ ಕಾಲೇಜು ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಸಿಎಂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಭರವಸೆ ನೀಡಿದ್ದು, ಈ ಉದ್ದೇಶದ ಯೋಜನೆಗಳಿಗೆ ಬಜೆಟ್‌ನಲ್ಲಿ ಅನುದಾನ ತೆಗೆದಿರಿಸಿದ್ದಾರೆ. ಹೀಗಾಗಿ ಹಾವೇರಿಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕನಸು ನನಸಾಗುವ ನಿರೀಕ್ಷೆ ಇದೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಧಾರವಾಡ ಡಿಸಿಸಿ ಬ್ಯಾಂಕ್ ವಿಭಜನೆ ಮಾಡಿ ಹಾವೇರಿಗೆ ಪ್ರತ್ಯೇಕ ಡಿಸಿಸಿ ಬ್ಯಾಂಕ್ ರಚನೆ ಮಾಡಬೇಕು ಎಂಬುದು ಜಿಲ್ಲೆಯ ರೈತರ ಬೇಡಿಕೆಯಾಗಿದ್ದು, ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಸಹಕಾರಿ ಬ್ಯಾಂಕ್ ಸ್ಥಾಪನೆಗೆ ಆರ್‌ಬಿಐಗೆ ಪ್ರಸ್ತಾವನೆ ಸಲ್ಲಿಸುವುದಾಗಿ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಹೀಗಾಗಿ ಈ ಬೇಡಿಕೆ ಕೂಡ ಈಡೇರುವ ವಿಶ್ವಾಸವಿದೆ.

ಇದೊಂದು ಸಾಲದ ಬಜೆಟ್, ಸರ್ಕಾರ ದಿವಾಳಿಯಾಗಿದೆ: ರೂಪಾಲಿ

ಕಾರವಾರ: ಬಿಜೆಪಿ ಸರ್ಕಾರ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಮೂರು ವರ್ಷಗಳ ಕಾಲ ವಿಳಂಬ ಮಾಡಿ ಈ ಬಜೆಟ್‌ನಲ್ಲಿ ಮತ್ತೆ ಘೋಷಿಸಲಾಗಿದೆ. ಆದರೆ, ಜನತೆಗೆ ಸೂಪರ್ ಸ್ಪೆಷಾಲಿಟಿ ಸೌಲಭ್ಯ ದೊರೆತಾಗಲಷ್ಟೇ ಈ ಘೋಷಣೆ ಸಾರ್ಥಕವಾಗಲಿದೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷೆ, ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕಿ ರೂಪಾಲಿ ಎಸ್.ನಾಯ್ಕ ಪ್ರತಿಕ್ರಿಯಿಸಿದ್ದಾರೆ.



ಬಿಜೆಪಿ ಸರ್ಕಾರ ಇದ್ದಾಗ ಕಾರವಾರ ಹಾಗೂ ಜಿಲ್ಲೆಯ ಮಧ್ಯವರ್ತಿ ಸ್ಥಳವಾದ ಕುಮಟಾದಲ್ಲಿ ಒಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಘೋಷಿಸಿತ್ತು. ಆದರೆ ಈ ಬಜೆಟ್‌ನಲ್ಲಿ ಘೋಷಣೆ ಒಂದೇ ಆಸ್ಪತ್ರೆಗೆ ಸೀಮಿತವಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಯಾವುದೇ ಮಹತ್ವದ ಕೊಡುಗೆ ಇಲ್ಲ, ಪ್ರವಾಸೋದ್ಯಮ, ಪರಿಸರ ಪೂರಕ ಕೈಗಾರಿಕೆ ಸ್ಥಾಪನೆ, ಮೀನುಗಾರಿಕೆ, ತೋಟಗಾರಿಕೆಗೆ ಪ್ರಯೋಜನವಾಗುವ ಯೋಜನೆಗಳು ಇಲ್ಲ, ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿರುವುದು ಸಾಲದ ಬಜೆಟ್. ರಾಜ್ಯದ ಸಾಲವನ್ನು 1.32 ಲಕ್ಷ ಕೋಟಿ ರೂ.ಗೆ ಏರಿಸಿದ್ದಾರೆ. ಇದು ಸರ್ಕಾರ ದಿವಾಳಿಯಾಗಿರುವುದರ ದ್ಯೋತಕವಾಗಿದೆ. ಇನ್ನು ಈ ಸಾಲದ ಹೊರೆಯನ್ನು ಇಳಿಸಿಕೊಳ್ಳಲು ಜನರ ಮೇಲೆ ತೆರಿಗೆಯ ಭಾರ ಹೇರುವ ದಿನಗಳು ದೂರವಿಲ್ಲ ಎಂದು ರೂಪಾಲಿ ಎಸ್.ನಾಯ್ಕ ಕಳವಳ ವ್ಯಕ್ತಪಡಿಸಿದ್ದಾರೆ.

ರಾಜ್ಯದ ಜನತೆಗೆ ದಾರಿ ತಪ್ಪಿಸುತ್ತಿರುವ ಮುಖ್ಯಮಂತ್ರಿ: ಸಂಸದ ಬೊಮ್ಮಾಯಿ

ಹಾವೇರಿ: ಸಿಎಂ ಸಿದ್ದರಾಮಯ್ಯ ಹಣಕಾಸಿನ ವಿಚಾರದಲ್ಲಿ ರಾಜ್ಯದ ಜನತೆಗೆ ಸುಳ್ಳು ಹೇಳಿ ದಾರಿ ತಪ್ಪಿಸುತ್ತಿದ್ದಾರೆ. ಬಜೆಟ್‌ನಲ್ಲಿ ಆರ್ಥಿಕ ಶಿಸ್ತಿನ ಒಳಗಡೆಯೇ ಸಾಲ ಪಡೆದಿದ್ದೇನೆ ಎಂದಿದ್ದಾರೆ. ಆದರೆ, ವಿತ್ತೀಯ ಕೊರತೆ ಶೇ.3ರಷ್ಟು ದಾಟುತ್ತಿದೆ. ಇದನ್ನು ಮರೆಮಾಚಲು ಹೊಂದಾಣಿಕೆ ಮಾಡುತ್ತಾರೆ. ಈ ಬಜೆಟ್ ಕರ್ನಾಟಕದ ಮಟ್ಟಿಗೆ ಅಭಿವೃದ್ಧಿ ಶೂನ್ಯ, ಸಾಲದ ಹೊರೆ ಹೊರೆಸಿರುವ, ದಿಕ್ಕು ದೆಸೆ ಇಲ್ಲದ ಬಜೆಟ್ ಎಂದು ಮಾಜಿ ಸಿಎಂ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.



ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ ಸಿದ್ದರಾಮಯ್ಯ ಇಷ್ಟು ಸಾಲ ಮಾಡಿ, ಇಷ್ಟು ತೆರಿಗೆ ಹೆಚ್ಚಳ ಮಾಡಿ, ಮತ್ತೂ ಕೊರತೆ ಬಜೆಟ್ ಮಾಡುತ್ತೀರೆಂದರೆ ಯಾವ ಪುರುಷಾರ್ಥಕ್ಕಾಗಿ? ಕೆಲವು ಸಾಲಗಳನ್ನು ಬಜೆಟ್ ವ್ಯಾಪ್ತಿಗೆ ತಂದಿಲ್ಲ. ವಿತ್ತೀಯ ಕೊರತೆ ಜಿಎಸ್ ಡಿಪಿಯ ಶೇ.25ರ ಒಳಗೆ ಇರಬೇಕು ಅಂತ ಇದೆ. ಅದನ್ನು 24.94 ಅಂತ ತೋರಿಸಿದ್ದಾರೆ. ಅಂದರೆ 0.6 ಮಾತ್ರ ಅವಕಾಶ ಇದೆ ಅಂತ ತೋರಿಸಿದ್ದಾರೆ. ವಾಸ್ತವವಾಗಿ ಕಳೆದ ವರ್ಷವೇ ಶೇ.25 ರ ಮಿತಿ ದಾಟಿದೆ. ಈ ವರ್ಷವೂ ದಾಟಿದೆ. ರಿಸರ್ವ್ ಬ್ಯಾಂಕಿನ ಹಲವಾರು ಸಾಲಗಳನ್ನು ಇಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳದೇ ಸುಮಾರು 10ಸಾವಿರ ಕೋಟಿ ಲೆಕ್ಕಕ್ಕೆ ತೆಗೆದುಕೊಳ್ಳದೆ ಹೊಂದಾಣಿಕೆ ಮಾಡಿದ್ದಾರೆ. ಇದು ಜನರನ್ನು ದಾರಿ ತಪ್ಪಿಸುತ್ತಿದೆ ಎಂದು ದೂರಿದರು.

ಹಾವೇರಿಗೆ ಶೂನ್ಯ ಕೊಡುಗೆ: ಹಾವೇರಿಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಬೇಕು ಅಂತ ನಾವು ಬೇಡಿಕೆ ಇಟ್ಟಿದ್ದೇವು. ಜಿಲ್ಲಾ ಉಸ್ತುವಾರಿ ಸಚಿವರೂ ಹೇಳಿದ್ದರು. ಸಿಎಂ ಸಿದ್ದರಾಮಯ್ಯ ಹಾವೇರಿಗೆ ಬಂದಾಗ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮಾಡುತ್ತೇವೆ ಎಂದು ಹೇಳಿದ್ದರು. ಆದರೆ ಘೋಷಣೆ ಮಾಡಲಿಲ್ಲ. ಹಾವೇರಿ ಜಿಲ್ಲೆಗೆ ಕೊಡುಗೆ ಶೂನ್ಯ. ಶಿಶುನಾಳ ಶರೀಫರ ಹೆಸರಿನಲ್ಲಿ ಬೇರೆ ಜಿಲ್ಲೆಗಳಲ್ಲಿ ಶಾಲೆ ಮಾಡುತ್ತಾರೆ. ವರದಾ ಬೆಡ್ತಿ ಯೋಜನೆ ಬಗ್ಗೆ ಬಜೆಟ್‌ನಲ್ಲಿ ಮಾತನಾಡಿಲ್ಲ, ಇದಕ್ಕೆ ಡಿಪಿಆರ್‌ಗೆ ಅನುಮತಿ ಕೊಟ್ಟಿದ್ದಾರೆ. ಆ ಕೆಲಸ ಕೂಡಲೇ ಆಗಬೇಕು, ಅದಕ್ಕೆ ಏಜೆನ್ಸಿ ನಿಗದಿ ಮಾಡಬೇಕು. ಅದನ್ನು ಬಜೆಟ್‌ನಲ್ಲಿ ಘೋ?ಣೆ ಮಾಡಬೇಕಿತ್ತು. ಅದು ಇಲ್ಲದಿರುವುದು ಹಾವೇರಿ ಜಿಲ್ಲೆಯ ರೈತರಿಗೆ ಆಘಾತ ತಂದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಅಭಿವೃದ್ಧಿಯ ಮುನ್ನೋಟ ಇಲ್ಲದ ರಾಜ್ಯ ಬಜೆಟ್: ಮುರುಗೇಶ ನಿರಾಣಿ

ಬೀಳಗಿ: ಸಿದ್ದರಾಮಯ್ಯ ಮಂಡಿಸಿರುವುದು ಜೊಳ್ಳು, ಕಳಪೆ ಹಾಗೂ ಕಣ್ಣೊರೆಸುವ ಹಾಗೂ ಮಂಕುಬೂದಿ ಎರಚುವ ಬಜೆಟ್ ಆಗಿದೆ. ಸಂಪನ್ಮೂಲ ಕ್ರೋಢೀಕರಣಕ್ಕೆ ಸ್ಪಷ್ಟ ಮೂಲಗಳಿಲ್ಲ, ಅದೇ ಅಬಕಾರಿ, ಅದೇ ಸ್ಟಾಂಪ್ ಡ್ಯೂಟಿ ಇದೆ. ಮೋಟಾರು ವಾಹನ ತೆರಿಗೆ ಇಲಾಖೆ. ಅಬಕಾರಿ ಇಲಾಖೆಗಳಲ್ಲಿ ದರಗಳ ಮೇಲಿನ ನಿಯಂತ್ರಣವನ್ನು ಉತ್ಪಾದಕರಿಗೆ ಕೊಡುವ ಮೂಲಕ, ಇಡೀ ವ್ಯವಸ್ಥೆಯ ನಾಶಕ್ಕೆ ಸರ್ಕಾರ ಅವಕಾಶ ಕಲ್ಪಿಸಿದೆ ಎಂದು ಮಾಜಿ ಸಚಿವ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಮುರುಗೇಶ ನಿರಾಣಿ ತಿಳಿಸಿದ್ದಾರೆ. ಲೈಸೆನ್ಸ್ ಸ್ಲಾಬ್‌ಗಳನ್ನು ತಗ್ಗಿಸಿದೆ ಆದರೂ, ಪ್ರತ್ಯೇಕ ಆದೇಶದಲ್ಲಿ ಲೈಸೆನ್ಸ್ ದರ ದುಬಾರಿ ಮೂಲಕ, 45 ಸಾವಿರ ಕೋಟಿ ರೂ.ಗಳ ಟಾರ್ಗೆಟ್ ವಿಧಿಸಲಾಗಿದೆ. ಮುದ್ರಾಂಕ ಶುಲ್ಕ ಇಲಾಖೆಗೆ 29 ಸಾವಿರ ರೂ.ಗಳ ಟಾರ್ಗೆಟ್ ವಿಧಿಸಿರುವುದು ನೋಡಿದರೆ ತೆರೆಮರೆಯಲ್ಲಿ ಸ್ಟಾಂಪ್ ರಿಜಿಸ್ಟ್ರೇಷನ್ ಶುಲ್ಕ ಹೆಚ್ಚಳ ಅಥವಾ ಭೂಮಿಯ ಮುಖಬೆಲೆ ಹೆಚ್ಚಳದ ನೆಪದಲ್ಲಿ ಜನರ ಜೇಬಿಗೆ



ಕತ್ತರಿ ಹಾಕುವ ಯತ್ನಕ್ಕೆ ಸರ್ಕಾರ ಕೈ ಹಾಕಿರುವುದು ಕಂಡುಬರುತ್ತದೆ. ವಿಶೇಷವಾಗಿ ಪ್ರಾದೇಶಿಕ ಅಸಮತೋಲನ ಬಗೆಹರಿಸಲು ಇತ್ತೀಚೆಗೆ ಸಲ್ಲಿಕೆಯಾದ ಗೋವಿಂದರಾವ್ ವರದಿ ಜಾರಿ ಮಾಡಿ ಹಿಂದುಳಿದ ಪ್ರದೇಶಗಳಿಗೆ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ. ಇನ್ನು ಎಲ್ಲಕ್ಕೂ ಮುಖ್ಯವಾಗಿ ರಾಜ್ಯದಲ್ಲೂ 2.8 ಲಕ್ಷ ಸರ್ಕಾರಿ ಹುದ್ದೆಗಳು ಖಾಲಿ ಬಿದ್ದಿದ್ದು, ಅವುಗಳನ್ನು ತುಂಬುವ ನೀತಿ ಇಲ್ಲ, ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಬಗ್ಗೆ ಸರ್ಕಾರಕ್ಕೆ ನಿಲುವಿಲ್ಲ, ಬರೋಬ್ಬರಿ 1,32,000 ಕೋಟಿ ರೂ.ಸಾಲ ಮಾಡಲಾಗಿದ್ದು, ರಾಜ್ಯದ ಒಟ್ಟು ಹೊಣೆಗಾರಿಕೆ 8,24,389 ಕೋಟಿ ರೂ.ಗೆ ಏರಿಕೆಯಾಗಿರುವುದು ಕಳವಳದ ಸಂಗತಿಯಾಗಿದ್ದು, ಬಂಡವಾಳ ವೆಚ್ಚ 74,682 ಕೋಟಿ ರೂ.ಗೆ ಇಳಿಕೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಅಡಿಗಾಸ್ ಯಾತ್ರಾದಿಂದ ಕೈಲಾಸ ಮಾನಸ ಸರೋವರ ಯಾತ್ರೆ

ಬೆಂಗಳೂರು: ನೀವು ಭವ್ಯ, ದಿವ್ಯ ಕೈಲಾಸ ಮಾನಸ ಸರೋವರ ಯಾತ್ರೆಯನ್ನು ಮಾಡಲು ಆಲೋಚಿಸುತ್ತಿದ್ದೀರಾ? ಹಾಗಾದರೆ ಇಲ್ಲಿದೆ ಸಿಹಿ ಸುದ್ದಿ! ಕೇಂದ್ರ ಸರ್ಕಾರದ 'ಅನುಭವಿ ಸೇವಾ ಪೂರೈಕೆದಾರ' ಎಂಬ ಮಾನ್ಯತೆ ಗಳಿಸಿರುವ ಅಡಿಗಾಸ್ ಯಾತ್ರಾ ಟ್ರಾವೆಲ್ ಸಂಸ್ಥೆಯು ಈ ಯಾತ್ರೆಯನ್ನು ಆಯೋಜಿಸಿದೆ.

ಕೈಲಾಸ ಮಾನಸ ಸರೋವರ ಯಾತ್ರೆ 2026ರ ಮೇ ತಿಂಗಳಿನಿಂದ ಆರಂಭವಾಗುತ್ತದೆ. ವಿಮಾನ ಮತ್ತು ಹೆಲಿಕಾಪ್ಟರ್ ಮೂಲಕ ಪ್ರಯಾಣ ಕಲ್ಪಿಸಿರುವುದರಿಂದ 10 ದಿನಗಳಲ್ಲಿ ಸುಲಭ ಮತ್ತು ಸುರಕ್ಷಿತ ಯಾತ್ರೆ ಕೈಗೊಳ್ಳಬಹುದು. ಭಾರತದ ಗಡಿಯಿಂದ 50 ಕಿಲೋಮೀಟರ್ ದೂರದಲ್ಲಿ ಚೀನಾ-ಟಿಬೆಟ್ ಗಡಿಯನ್ನು ದಾಟಿದರೆ ಕೈಲಾಸ ಮಾನಸ ಸರೋವರಕ್ಕೆ ತಲುಪಬಹುದು.

ಬೆಂಗಳೂರಿನಿಂದ ಲಖನೌ ತನಕ ವಿಮಾನದಲ್ಲಿ ಪ್ರಯಾಣ: ಲಖನೌದಿಂದ ನೇಪಾಳ ಗಂಝ್‌ಗೆ 180 ಕಿಲೋಮೀಟರ್ ತನಕ ರಸ್ತೆ ಪ್ರಯಾಣ ಮಾಡಿ ಮೊದಲ ದಿನ ರಾತ್ರಿ ಅಲ್ಲಿ ತಂಗಲಾಗುವುದು. ಎರಡನೇ ದಿನ ನೇಪಾಳ ಗಂಜ್‌ನಿಂದ ಸಿಮಿಕೋಟ್ ತನಕ ವಿಮಾನ ಪ್ರಯಾಣ. ಸಿಮಿಕೋಟ್‌ನಿಂದ ಟಿಬೆಟ್-ನೇಪಾಳ ಗಡಿ ಭಾಗದ ಹಿಲ್ಸಾ ಎಂಬಲ್ಲಿಗೆ ಹೆಲಿಕಾಪ್ಟರ್ ಮೂಲಕ ಯಾತ್ರೆ. ಹೀಗೆ ಲಖನೌದಿಂದ ಟಿಬೆಟ್-ನೇಪಾಳ ಗಡಿಭಾಗಕ್ಕೆ ಒಂದೇ ದಿನದಲ್ಲಿ ತಲುಪಲಾಗುವುದು.

ಹಿಲ್ಸಾ ಬಿಟ್ಟ ನಂತರ ಎರಡನೇ ರಾತ್ರಿ ಪುರಾಂಗ್ ಎಂಬಲ್ಲಿ ಪ್ರವಾಸಿಗರು ವಾಸ್ತವ್ಯ ಹೂಡುತ್ತಾರೆ. ಅಲ್ಲಿನ ಹವಾಮಾನಕ್ಕೆ ಹೊಂದಿಕೊಳ್ಳಲು ಮತ್ತೊಂದು ದಿನ ಅಲ್ಲಿಯೇ ತಂಗಲಾಗುವುದು. ನಾಲ್ಕನೇ ದಿನ ಪುರಾಂಗ್‌ನಿಂದ ಪವಿತ್ರ ಮಾನಸ ಸರೋವರಕ್ಕೆ ಪ್ರಯಾಣ. ಇದು ಅತಿ ಎತ್ತರ ಪ್ರದೇಶದಲ್ಲಿರುವ ಸಿಹಿ ನೀರಿನ ಸರೋವರ ಆಗಿದೆ. ಕೈಲಾಸ ಪರ್ವತದ ದಕ್ಷಿಣ ಭಾಗದಲ್ಲಿದೆ. ಅಲ್ಲಿ ಒಂದು ರಾತ್ರಿ ಪ್ರವಾಸಿಗರು ತಂಗುತ್ತಾರೆ. ಮಾನಸ ಸರೋವರದ ಪಕ್ಕದಲ್ಲೇ ರಾಕ್ಷಸ ಸರೋವರ್ ಎಂಬ ಉಪ್ಪಿನ ನೀರಿನ ಸರೋವರವಿದೆ. ಇದನ್ನೆಲ್ಲ ವೀಕ್ಷಿಸಿದ ಬಳಿಕ ಕೈಲಾಸ ಪರ್ವತದ ಬುಡದಲ್ಲಿರುವ ದಾರ್ಚೆನ್ ಎಂಬಲ್ಲಿಗೆ ತೆರಳಿ ವಾಸ್ತವ್ಯ ಮಾಡಲಾಗುವುದು. ಬಳಿಕ ಮೂರು ದಿನಗಳ ಕೈಲಾಸ ಪರ್ವತದ ಪರಿಕ್ರಮ ಆರಂಭವಾಗುತ್ತದೆ. ಪರಿಕ್ರಮದ ಮೊದಲ ದಿನ ಕೈಲಾಸ ಪರ್ವತದ ಪ್ರವೇಶ ಸ್ಥಳವಾದ ಯಮದ್ವಾರದ ತನಕ ರಸ್ತೆ ಮಾರ್ಗದಲ್ಲಿ ವಾಹನಗಳಲ್ಲಿ ತೆರಳಲಾಗುತ್ತದೆ. ಯಮದ್ವಾರದಿಂದ ದೇರಾಪುಕ್ ತನಕ 12 ಕಿಲೋಮೀಟರ್ ನಡಿಗೆ ಇರುತ್ತದೆ. ದೇರಾಪುಕ್‌ನಲ್ಲಿ ರಾತ್ರಿ ವಾಸ್ತವ್ಯಕ್ಕೆ ವ್ಯವಸ್ಥೆ. ದೇರಾಪುಕ್‌ನಿಂದ ಎರಡನೇ ದಿನದ ಪರಿಕ್ರಮ ಜುತುಲ್‌ಪುಕ್ ತನಕ ಪ್ರಯಾಣ ಬೆಳೆಸಬೇಕಾಗುತ್ತದೆ. ಮೂರನೇ ದಿನ ಮತ್ತೆ ದಾರ್ಚೆನ್‌ಗೆ ತಲುಪಲಾಗುತ್ತದೆ. ಅಲ್ಲಿಗೆ ಕೈಲಾಸ ಪರ್ವತದ ಪರಿಕ್ರಮ ಮುಕ್ತಾಯವಾಗುತ್ತದೆ.

18-70 ವರ್ಷ ವಯೋಮಾನದವರು ಕೈಲಾಸ ಮಾನಸ ಸರೋವರ ಯಾತ್ರೆ ಮಾಡಬಹುದು. ಪಾಸ್‌ಪೋರ್ಟ್ ಇರಬೇಕು. ಕಳೆದ 32 ವರ್ಷಗಳಿಂದಲೂ 3 ಲಕ್ಷಕ್ಕೂ ಹೆಚ್ಚು ಪ್ರವಾಸಿಗರಿಗೆ ಪ್ರವಾಸ ಕಾರ್ಯಕ್ರಮಗಳನ್ನು ಅಡಿಗಾಸ್ ಆಯೋಜಿಸಿದೆ.

ಸಸ್ಯಾಹಾರಿ ಊಟೋಪಚಾರ, ನುರಿತ ಮಾರ್ಗದರ್ಶನ, ಡೀಲಕ್ಸ್ ಬಸ್, ಸ್ಟ್ಯಾಂಡರ್ಡ್ ರೂಮ್, ಟ್ರಾವೆಲ್ ವಿಮೆಯನ್ನು ಒದಗಿಸಲಾಗುತ್ತಿದೆ. ಹೆಚ್ಚಿನ ವಿವರಗಳಿಗೆ ಮೊಬೈಲ್- 70222 59008 / 9449478944 / 080-26616678 ಹಾಗೂ ವೆಬ್‌ಸೈಟ್ www.adigasyatranews.com ಸಂಪರ್ಕಿಸಬಹುದೆಂದು ನಿರ್ದೇಶಕಿ ಆಶಾ ಅಡಿಗ ತಿಳಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಇಂದು ವಿದ್ಯುತ್ ವ್ಯತ್ಯಯ

ಕಾರವಾರ: ಉಪ ವಿಭಾಗದದಲ್ಲಿ ತುರ್ತು ಕಾಮಗಾರಿ ಇರುವುದರಿಂದ ಮಾ.7ರಂದು ಬೆ. 9:30 ರಿಂದ ಸಂಜೆ 6 ಗಂಟೆಯವರೆಗೆ ಹಬ್ಬುವಾಡ ಫೀಡರಿನ ಎಲ್ಲಾ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲ್ಲಿದ್ದು, ಗ್ರಾಹಕರು ಸಹಕರಿಸುವಂತೆ ಕಾರವಾರ ಹೆಸ್ಕಾಂ, ಕಾರ್ಯ ಮತ್ತು ಪಾಲನಾ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಪರಿಹಾರ ವಿತರಣಾ ಕಾರ್ಯಕ್ರಮ

ಕಾರವಾರ: ಜಿಲ್ಲಾ ಉಸ್ತುವರಿ ಸಚಿವರು, ಲೋಕಸಭಾ ಸದಸ್ಯರು ಮತ್ತು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಭೂಸ್ವಾಧೀನ ಕಾಯ್ದೆ 28(ಅ) ರಡಿ ಪರಿಹಾರ ವಿತರಣಾ ಕಾರ್ಯಕ್ರಮ ಮಾ.7ರಂದು ಮ.3 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ನೌಕಾನೆಲೆಯ ವಿಶೇಷ ಭೂಸ್ವಾಧೀನಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾ.9ರಂದು ಸಮಾಲೋಚನಾ ಸಭೆ

ಹೊನ್ನಾವರ: ಪಪಂ 2026-27ನೇ ಸಾಲಿನ ಆಯ-ವ್ಯಯ ಮಂಡಿಸಲು ಸಾರ್ವಜನಿಕರಿಂದ ಮಾಹಿತಿ ಪಡೆಯುವ ಕುರಿತು ಮಾ.9 ರಂದು ಮದ್ಯಾಹ್ನ 4ಗಂಟೆಗೆ ಪಟ್ಟಣ ಪಂಚಾಯತ ಸಭಾಭವನದಲ್ಲಿ ಪಟ್ಟಣ ಪಂಚಾಯತದ ಆಡಳಿತಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಬಜೆಟ್ ಸಂಬಂಧ ಸಾರ್ವಜನಿಕರ ಪೂರ್ವಭಾವಿ ಸಮಾಲೋಚನಾ ಸಭೆ ನಡೆಯಲಿದೆ. ಹೊನ್ನಾವರ ಪಟ್ಟಣ ಪಂಚಾಯತ ವ್ಯಾಪ್ತಿಯ ಆಸಕ್ತ ಸಾರ್ವಜನಿಕರು ಈ ಸಭೆಯಲ್ಲಿ ಭಾಗವಹಿಸಿ ಆಯ-ವ್ಯಯ ತಯಾರಿಕೆಗೆ ತಮ್ಮ ಸಲಹೆ ಸೂಚನೆಗಳನ್ನು ನೀಡಬೇಕೆಂದು ಆಡಳಿತಾಧಿಕಾರಿಗಳು ಹಾಗೂ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.

ಇಂದು ಹೋಳಿ ಸಂಭ್ರಮ



ದಾಂಡೇಲಿ: ನಗರದಲ್ಲಿ ಧನಗರ ಗೌಳಿ ಸಮುದಾಯದವರ ಹೋಳಿ ಸಂಭ್ರಮ ಮುಂದುವರೆದಿದೆ. ಹೋಳಿ ಹುಣ್ಣಿಮೆಯಿಂದ ಆರಂಭಗೊಂಡ ಈ ಸಂಭ್ರಮ ಮಾ.7ರ ಶನಿವಾರ ಸಂಪನ್ನಗೊಳ್ಳಲಿದೆ.ನಗರದ ಸಮೀಪದಲ್ಲಿರುವ ಹಸನ್ಮಾಳದ ಗೌಳಿವಾಡದ ಧನಗರ ಗೌಳಿ ಸಮುದಾಯ ಬಾಂಧವರ ಗೌಳಿ ನೃತ್ಯ ತಂಡವು ನಗರ ಹಾಗೂ ನಗರದ ಸುತ್ತಮುತ್ತಲ ಹಳ್ಳಿಗಳಲ್ಲಿ ಮನೆ ಮನೆಗಳಿಗೆ ಭೇಟಿ ನೀಡಿ ಗೌಳಿ ನೃತ್ಯವನ್ನು ಪ್ರದರ್ಶಿಸಿ ಹೋಳಿ ಸಂಭ್ರಮವನ್ನಾಚರಿಸುತ್ತಿದೆ. ಗುರುವಾರ ನಗರದ ಸಿವಿಲ್ ನ್ಯಾಯಾಲಯದ ಹತ್ತಿರದ ರಸ್ತೆಯಲ್ಲಿ ಧನಗರ ಗೌಳಿ ಸಮುದಾಯದ ನೃತ್ಯ ತಂಡವು ಗೌಳಿ ನೃತ್ಯವನ್ನು ಪ್ರದರ್ಶಿಸಿ ಎಲ್ಲರ ಗಮನ ಸೆಳೆಯಿತು.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	62289	67799
ಬಿಳಿಗೋಟು	20609	41299
ಕೆಂಪುಗೋಟು	24118	39299
ಬೆಟ್ಟೆ	40150	53561
ರಾಶಿ	50018	54799
ಚಾಲಿ	43299	47861
ಬಿ.ಕಾಳುಮೆಣಸು	85069	85069

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	58800	62066
ರಾಶಿ	38810	58295
ಬೆಟ್ಟೆ	36111	52479
ಕೆಂಪುಗೋಟು	18899	39109
ಬಿಳಿಗೋಟು	16012	41089
ಚಾಲಿ ಹೊಸದು	39009	47599
ಚಾಲಿ	48009	50266
ಕೋಕಾ	12000	34299
ಕಾಳುಮೆಣಸು	57111	67819



ಕಾರವಾರ: ರಾಜ್ಯದ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ರಾಜ್ಯದ ಎಲ್ಲಾ ರಸ್ತೆ ಸಾರಿಗೆ ನಿಗಮಗಳ ಬಸ್ ನಿಲ್ದಾಣಗಳಲ್ಲಿ ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ ಐತಿಹಾಸಿಕ 17ನೇ ಬಜೆಟ್ ನೇರ ಪ್ರಸಾರವನ್ನು ಎಲ್‌ಇಡಿ ಪರದೆ ಮೇಲೆ ಪ್ರಯಾಣಿಕರು ಬಸ್ ನಿಲ್ದಾಣಗಳಲ್ಲಿ ವೀಕ್ಷಿಸುವ ಮೂಲಕ ಖುಷಿಪಟ್ಟರು.

ಬಸ್ ನಿಲ್ದಾಣಗಳಲ್ಲಿ ಬಜೆಟ್ ವೀಕ್ಷಿಸಿದ ಪ್ರಯಾಣಿಕರು

ಕಾರವಾರ: ರಾಜ್ಯದ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ರಾಜ್ಯದ ಎಲ್ಲಾ ರಸ್ತೆ ಸಾರಿಗೆ ನಿಗಮಗಳ ಬಸ್ ನಿಲ್ದಾಣಗಳಲ್ಲಿ ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ ಐತಿಹಾಸಿಕ 17ನೇ ಬಜೆಟ್ ನೇರ ಪ್ರಸಾರವನ್ನು ಎಲ್‌ಇಡಿ ಪರದೆ ಮೇಲೆ ಪ್ರಯಾಣಿಕರು ವೀಕ್ಷಿಸುವ ಮೂಲಕ ಖುಷಿಪಟ್ಟರು.ವಿಧಾನ ಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್ ಮಂಡಿಸುತ್ತಿದ್ದಂತೆಯೇ ರಾಜ್ಯದ ಬಹುತೇಕ ಬಸ್ ನಿಲ್ದಾಣಗಳಲ್ಲಿ ಬಜೆಟ್ ನೇರ ಪ್ರಸಾರವನ್ನು ವೀಕ್ಷಿಸಲು ಅವಕಾಶ ಕಲ್ಪಿಸಿದ್ದರಿಂದ ಬಸ್ ನಿಲ್ದಾಣಗಳಲ್ಲಿದ್ದ ಪ್ರಯಾಣಿಕರು ಬಜೆಟ್ ಮಂಡನೆಯನ್ನು ನೇರವಾಗಿ ಕಣ್ತುಂಬಿಸಿಕೊಳ್ಳುವ ಮೂಲಕ ಸಂತೋಷ ವ್ಯಕ್ತಪಡಿಸಿದರು.ಸಾಮಾನ್ಯವಾಗಿ ಸಾರ್ವಜನಿಕರಿಗೆ ಇಂತಹ ಕಾರ್ಯಕ್ರಮಗಳನ್ನು ನೇರವಾಗಿ ವೀಕ್ಷಿಸಲು ಅವಕಾಶ ಕಡಿಮೆ. ಈ ಬಾರಿ ಬಜೆಟ್ ಮಂಡನೆ ಕುರಿತು ಸರ್ಕಾರ ಕೈಗೊಂಡ ಈ ಹೊಸ ಪ್ರಯತ್ನಕ್ಕೆ ಪ್ರಯಾಣಿಕರು ಮೆಚ್ಚುಗೆ ವ್ಯಕ್ತಪಡಿಸಿದರು. ಬಸ್ ನಿಲ್ದಾಣಗಳಲ್ಲಿ ಪ್ರಯಾಣಕ್ಕಾಗಿ ಕಾಯುತ್ತಿದ್ದ ಅನೇಕರು ಎಲ್‌ಇಡಿ ಪರದೆಗಳ ಮೂಲಕ ಬಜೆಟ್ ಮಂಡನೆಯನ್ನು ಏಕಾಗ್ರತೆಯಿಂದ ವೀಕ್ಷಿಸಿ, ಸರ್ಕಾರದ ವಿವಿಧ ಯೋಜನೆಗಳು ಹಾಗೂ ಅಭಿವೃದ್ಧಿ ಕ್ರಮಗಳ ಕುರಿತು ಮಾಹಿತಿ ಪಡೆಯಲು ಸಾಧ್ಯವಾಯಿತು.ಸಾರ್ವಜನಿಕರಿಗೆ ಸರ್ಕಾರದ ಕಾರ್ಯಕ್ರಮಗಳನ್ನು ನೇರವಾಗಿ ತಲುಪಿಸುವ ಉದ್ದೇಶದಿಂದ ಕೈಗೊಂಡ ಈ ಕ್ರಮವನ್ನು ಕಾರವಾರದ ಬಸ್ ನಿಲ್ದಾಣದಲ್ಲಿ ಜನತೆ ಸ್ವಾಗತಿಸಿದರು.ಬಸ್ ನಿಲ್ದಾಣಗಳಲ್ಲಿ ಅಳವಡಿಸಿರುವ ಎಲ್ ಇಡಿ ಪರದೆಗಳಲ್ಲಿ, ಪ್ರಯಾಣಿಕರು ಬಜೆಟ್ ಮಂಡನೆ ಬಜೆಟ್ ವೀಕ್ಷಿಸಿ ಸಂತಸ ವ್ಯಕ್ತಪಡಿಸಿದರು ಎಂದು ಕಾರವಾರ ಘಟಕದ ವ್ಯವಸ್ಥಾಪಕಿ ಸೌಮ್ಯ ತಿಳಿಸಿದರು.



ಸಿದ್ದಾಪುರ: ಜಲ ಜೀವನ್ ಮಿಷನ್ (ಎಎಒ) ಯೋಜನೆಯಡಿ ನಿರ್ಮಿಸಲಾದ ಕುಡಿಯುವ ನೀರಿನ ಸರಬರಾಜಿಗೆ ಶಾಸಕ ಭೀಮಣ್ಣ ನಾಯ್ಕ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು, ಸ್ಥಳೀಯ ಮುಖಂಡರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ವಿವಿಧ ಸಮಿತಿಗಳ ಸಭೆ | ಜಿಲ್ಲಾಧಿಕಾರಿ ಲಕ್ಷ್ಮೀ ಪ್ರಿಯಾ ಸೂಚನೆ

ಕೈಗಾರಿಕಾ ವಸಾಹತುಗಳಿಗೆ ಸೌಲಭ್ಯ ಒದಗಿಸಿ

ಕಾರವಾರ: ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿನ ಕೈಗಾರಿಕಾ ವಸಾಹತುಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ಜಿಲ್ಲಾಧಿಕಾರಿ ಕೆ.ಲಕ್ಷ್ಮೀ ಪ್ರಿಯಾ ಸೂಚಿಸಿದರು.

ಅವರು ಶುಕ್ರವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ, ಕೈಗಾರಿಕಾ ಇಲಾಖೆಯ ವಿವಿಧ ಸಮಿತಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನಗರ ಸ್ಥಳೀಯ ಸಂಸ್ಥೆಗಳು ಕೈಗಾರಿಕೆಗಳಿಂದ ತೆರಿಗೆ ವಸೂಲಿ ಮಾಡುತ್ತಿದ್ದು, ಈ ಪ್ರದೇಶದಲ್ಲಿ ಅಗತ್ಯವಿರುವ ಕಾಮಗಾರಿಗಳನ್ನು ಕೈಗೊಳ್ಳುತ್ತಿಲ್ಲ ಎಂದು ಕೈಗಾರಿಕೋದ್ಯಮಿಗಳು ನೀಡಿದ ದೂರಿಗೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು, ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯ ಕೈಗಾರಿಕಾ ವಸಾಹತುಗಳಲ್ಲಿ ನೀರು, ವಿದ್ಯುತ್, ರಸ್ತೆ, ತ್ಯಾಜ್ಯ ನಿರ್ವಹಣೆ ಸೇರಿದಂತೆ ಇತರೇ ಅಗತ್ಯ ಕಾಮಗಾರಿಗಳನ್ನು ನಿರ್ವಹಿಸುವ ಕುರಿತು ತಮ್ಮ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳುವಂತೆ ಸೂಚನೆ ನೀಡಿದರು.

ದಾಂಡೇಲಿ ಕೈಗಾರಿಕಾ ವಸಾಹತುವಿನಲ್ಲಿ ಹಂಚಿಕೆಯಾಗಿರುವ ನಿವೇಶನಗಳನ್ನು ನೋಂದಣಿ ಮಾಡುವ ಕುರಿತಂತೆ ಎದುರಿಸುತ್ತಿರುವ ಸಮಸ್ಯೆಗಳ ಕುರಿತಂತೆ ಕರ್ನಾಟಕ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ, ಯೋಜನಾ ನಿರ್ದೇಶಕರು ನಗರಾಭಿವೃದ್ಧಿ ಕೋಶ ಮತ್ತು ಆಯುಕ್ತರು ನಗರಸಭೆ ದಾಂಡೇಲಿ ಜಂಟಿಯಾಗಿ ನಿಯಮಾನುಸಾರ ಪರಿಶೀಲಿಸಿ ಸಮಸ್ಯೆಯನ್ನು ಇತ್ಯರ್ಥಪಡಿಸುವಂತೆ ಮತ್ತು ರಾಮನಗರ ಕೈಗಾರಿಕಾ ವಸಾಹತುಗೆ ನಿರಂತರ ವಿದ್ಯುತ್ ಪೂರೈಕೆ ಮಾಡಲು ವಿದ್ಯುತ್ ಉಪ ಕೇಂದ್ರ ಸ್ಥಾಪಿಸುವ ಕುರಿತಂತೆ ತಹಶೀಲ್ದಾರ್ ಅವರಿಂದ ವರದಿ ಪಡೆದು, ಅರಣ್ಯ ಇಲಾಖೆಯ ಸೂಕ್ತ ಅನುಮತಿಯೊಂದಿಗೆ ವಿದ್ಯುತ್ ಕೇಂದ್ರ ಸ್ಥಾಪಿಸುವಂತೆ ಹೆಸ್ಕಾಂ ಅಧಿಕಾರಿಗಳಿಗೆ ತಿಳಿಸಿದರು.ಹೊಸ ಕೈಗಾರಿಕೆಗಳ ಆರಂಭಕ್ಕೆ ಅನುಮತಿ ನೀಡುವ ಮುನ್ನ, ಈ ಕೈಗಾರಿಕೆಗಳಿಂದ ಸುತ್ತಮುತ್ತಲಿನ ಪರಿಸರ ಮತ್ತು ಜನಜೀವನಕ್ಕೆ ಯಾವುದೇ ಹಾನಿಯಾಗುವುದಿಲ್ಲ ಎಂಬುದನ್ನು ಸಂಪೂರ್ಣ ಖಚಿತಪಡಿಸಿಕೊಂಡು, ಈ ಬಗ್ಗೆ ಸಂಬಂಧಪಟ್ಟ ಇಲಾಖೆಗಳ ಅಗತ್ಯ ಅನುಮತಿಯ ವರದಿಯನ್ನು ಅಧಿಕಾರಿಗಳು ಪರಿಶೀಲಿಸುವಂತೆ ನಿರ್ದೇಶನ ನೀಡಿದರು.ಜಿಲ್ಲೆಯಲ್ಲಿ ರಫ್ತು ಉತ್ತೇಜನಕ್ಕೆ ಅಗತ್ಯವಿರುವ ಕ್ರಮ ಕೈಗೊಳ್ಳುವ ಬಗ್ಗೆ, ಪ್ರಧಾನಮಂತ್ರಿ ಉದ್ಯೋಗ ಸೃಜನಾ ಯೋಜನೆಯ ಪ್ರಗತಿ ಬಗ್ಗೆ, ಪಿಎಂ ವಿಶ್ವಕರ್ಮ ಯೋಜನೆಯ ಪ್ರಗತಿ ಬಗ್ಗೆ ವಿಸ್ತೃತ ಚರ್ಚೆ ನಡೆಯಿತು.ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಪ್ರಕಾಶ್ ಹಾಲಮ್ಮನವರ್, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ನಾಗರಾಜ ನಾಯ್ಕ ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಜಿಲ್ಲೆಯ ಕೈಗಾರಿಕೋದ್ಯಮಿಗಳು ಉಪಸ್ಥಿತರಿದ್ದರು.



ಅಧಿಕಾರಿಗಳಿಗೆ ಸೂಚನೆ

ಸಿದ್ದಾಪುರದ ಮಳವಳ್ಳಿಯಲ್ಲಿ ನಿರ್ಮಿಸುತ್ತಿರುವ ನೂತನ ಕೈಗಾರಿಕ ವಸಾಹತು ಅಭಿವೃದ್ಧಿ ಕಾಮಗಾರಿಯನ್ನು ಶೀಘ್ರದಲ್ಲಿ ಮುಕ್ತಾಯಗೊಳಿಸುವಂತೆ ಮತ್ತು ಮುಡಗೇರಿಯಲ್ಲಿ ಕೈಗಾರಿಕಾ ಉದ್ದೇಶಕ್ಕೆ ಸ್ವಾಧೀನಪಡಿಸಿಕೊಂಡಿರುವ ಜಮೀನಿನ ಬಾಕಿ ಇರುವ ಪರಿಹಾರದ ಮೊತ್ತವನ್ನು ಶೀಘ್ರವಾಗಿ ಪಾವತಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಕಾರವಾರಕ್ಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಘೋಷಣೆ

ಕಾರವಾರ: ಪ್ರಸಕ್ತ ಸಾಲಿನ ಆಯವ್ಯಯ ಭಾಷಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ 100 ಕೋಟಿ ವೆಚ್ಚದಲ್ಲಿ ಸೂಪರ ಸ್ಪೆಷಾಲಿಟಿ ಆಸ್ಪತ್ರೆಯನ್ನು ಘೋಷಿಸಿದ್ದಾರೆ.

ಕಾರವಾರದಲ್ಲಿ 198 ಕೋಟಿ ರೂ. ವೆಚ್ಚದ 450 ಹಾಸಿಗೆ ಸಾಮರ್ಥ್ಯದ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ಉದ್ಘಾಟನೆಗೆ ಬಂದಿದ್ದ ಸಿದ್ದರಾಮಯ್ಯ ಅವರ ಸೂಪರ್ ಸ್ಪೆಷ್ಯಾಲಿಟಿ ಆಸ್ಪತ್ರೆ ಘೋಷಿಸುವುದಾಗಿ ಭರವಸೆ ನೀಡಿದ್ದರು. ಶಾಸಕ ಸತೀಶ ಸೈಲ್ ಬೇಡಿಕೆಗೆ ಸ್ಪಂದಿಸಿ ಅವರು ಈ ಭರವಸೆ ನೀಡಿದ್ದರು. ಈಗ ಅವರು ಕೊಟ್ಟ ಮಾತು ಉಳಿಸಿಕೊಂಡಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಜನರ ಬಹು ವರ್ಷದ ಕನಸಾಗಿರುವ ಸೂಪರ ಸ್ಪೆಷಾಲಿಟಿ ಆಸ್ಪತ್ರೆಯನ್ನು ಉತ್ತರ ಕನ್ನಡ ಜಿಲ್ಲೆಯ ಎಲ್ಲಾ ಶಾಸಕರ, ಸಂಸದರ, ಉಸ್ತುವಾರಿ ಸಚಿವರ ಹಾಗೂ ಕಾರವಾರ ಅಂಕೋಲಾ ವಿಧಾನ ಸಭಾ ಕ್ಷೇತ್ರದ ಶಾಸಕರ, ಇತರೇ ಎಲ್ಲಾ ಹೋರಾಟಗಾರರ, ಸಂಘ ಸಂಸ್ಥೆಗಳ ಮತ್ತು ಸಾರ್ವಜನಿಕರ ಹೋರಾಟದ ಮತ್ತು ಪ್ರಯತ್ನದ ಫಲವಾಗಿ 2026-27ನೇ ಸಾಲಿಗೆ ಮಾನ್ಯ ಮುಖ್ಯ ಮಂತ್ರಿಗಳು ಘೋಷಣೆ ಮಾಡಿರುತ್ತಾರೆ.

ಉತ್ತರ ಕನ್ನಡ ಜಿಲ್ಲೆಗೆ ಸೂಪರ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕಾಗಿ ಅನುದಾನ ಮಂಜೂರು ಮಾಡಿದ ಮುಖ್ಯಮಂತ್ರಿಗಳಿಗೆ, ಉಪ ಮುಖ್ಯಮಂತ್ರಿಗಳಿಗೆ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಿಗೆ , ಸದರಿ ಆಸ್ಪತ್ರೆಯ ಮಂಜೂರಾತಿಗೆ ಶ್ರಮಿಸಿದ ಸ್ಥಳೀಯ ಶಾಸಕ ಸತೀಶ ಕೃಷ್ಣ ಸೈಲ್, ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್. ವೈದ್ಯ, ಶಾಸಕ ಆರ್.ವಿ.ದೇಶಪಾಂಡೆ ಹಾಗೂ ಉತ್ತರ ಕನ್ನಡ ಜಿಲ್ಲೆಯ ಎಲ್ಲಾ ಶಾಸಕರಿಗೆ ಮತ್ತು ಸಂಸದರಿಗೆ, ಇತರೇ ಎಲ್ಲಾ ಹೋರಾಟಗಾರರಿಗೆ, ಸಂಘ ಸಂಸ್ಥೆಗಳಿಗೆ ಮತ್ತು ಸಾರ್ವಜನಿಕರಿಗೆ ಕ್ರಿಮ್ಸ ಕಾರವಾರದ ಆಡಳಿತ ಮಂಡಳಿ ಹೃತ್ಪೂರ್ವಕ ಧನ್ಯವಾದ ತಿಳಿಸಿದೆ.



ಭಟ್ಕಳ: ಮುರುಡೇಶ್ವರ ಕಡಲ ತೀರದಲ್ಲಿ ಪ್ರಥಮ ಬಾರಿಗೆ ಏರ್ಪಡಿಸಲಾಗಿದ್ದ ನಮ್ಮೂರ ಹೋಳಿ-2026ರನ್ನು ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಉದ್ಘಾಟಿಸಿದರು.

ಕೃಷಿ ಸಾಲ ಅವಧಿ ಮುಂದೂಡಲು ಸೂಚನೆ

ಕಾರವಾರ: ಜಿಲ್ಲೆಯ ಅಡಿಕೆ ಬೆಳೆಗಾರರು ಎಲೆಚುಕ್ಕಿ ರೋಗದ ಕಾರಣ ತೀರಾ ಸಂಕಷ್ಟಕ್ಕೆ ಒಳಗಾಗಿರುವ ಹಿನ್ನಲೆಯಲ್ಲಿ ಕೃಷಿ ಮಾಧ್ಯಮಿಕ ಸಾಲ ಮತ್ತು ಕೆಸಿಸಿ ಸಾಲದ ಮರುಪಾವತಿಯನ್ನು ಮುಂದೂಡುವ ಕುರಿತಂತೆ ನಿರ್ಣಯವನ್ನು ಸಿದ್ದಪಡಿಸಿ ರಿಸರ್ವ್ ಬ್ಯಾಂಕ್‌ಗೆ ಸಲ್ಲಿಸುವಂತೆ ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ದಿಲೀಷ್ ಶಶಿ ಲೀಡ್ ಬ್ಯಾಂಕ್ ಅಧಿಕಾರಿಗೆ ಸೂಚನೆ ನೀಡಿದರು.

ಅವರು ಶುಕ್ರವಾರ ಜಿಪಂ ಸಭಾಂಗಣದಲ್ಲಿ ನಡೆದ,ಲೀಡ್ ಬ್ಯಾಂಕ್ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಅಡಿಕೆ ಬೆಳೆಗಾರರು ಎಲೆಚುಕ್ಕೆ ರೋಗದ ಕಾರಣದಿಂದ ಸಂಕಷ್ಟಕ್ಕೆ ಒಳಗಾಗಿರುವ ಹಿನ್ನೆಲೆಯಲ್ಲಿ ಸಹಕಾರ ಸಂಘಗಳಲ್ಲಿ ಕೃಷಿಕ ಸದಸ್ಯರು ಏಪ್ರಿಲ್ 15ಕ್ಕೆ ಮರುಪಾವತಿಸಬೇಕಾದ ಕೃಷಿ ಮಾಧ್ಯಮಿಕ ಸಾಲದ ಕಂತುಗಳನ್ನು ಒಂದು ವರ್ಷದ ಅವಧಿಗೆ ಮುಂದೂಡುವ ಹಾಗೂ ಏ.30 ಕ್ಕೆ ತುಂಬಬೇಕಾದ ಕೆಸಿಸಿ ಸಾಲವನ್ನು ಒಂದು ವರ್ಷದ ವರೆಗೆ ವಧಾಯಿಸಿ ಕೊಡುವ ಕುರಿತಂತೆ, ಶಿರಸಿಯ ತೋಟಗಾರ್ಸ್ ರೂರಲ್ ಕೋ ಆಪರೇಟಿವ್ ಅಗ್ರಿಕಲ್ಚರಲ್ ಸೊಸೈಟಿಯ ಅಧಿಕಾರಿಗಳು, ಕೃಷಿಕರ ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಪರವಾಗಿ ಸಲ್ಲಿಸಿದ ಮನವಿಯನ್ನು ಪುರಸ್ಕರಿಸಿದ ಅವರು, ಜಿಲ್ಲೆಯ ಅಡಿಕೆ ಬೆಳೆಗಾರರ ಸಂಕಷ್ಟ ಪರಿಸ್ಥಿತಿಯ ಕುರಿತು ಸಹಮತ ವ್ಯಕ್ತಪಡಿಸಿ, ಸಾಲ ಮರುಪಾವತಿ ಅವಧಿ ಮುಂದೂಡುವ ಬಗ್ಗೆ ಸಭೆಯ ನಿರ್ಣಯ ಸಿದ್ದಪಡಿಸಿ ಕಳುಹಿಸುವಂತೆ ಸೂಚಿಸಿದರು.

ಜಿಲ್ಲೆಯಲ್ಲಿ ಬ್ಯಾಂಕ್‌ಗಳ ಸಾಲ ಮತ್ತು ಠೇವಣಿ ಅನುಪಾತ ಶೇ.46.6 ಇದ್ದು, ಈ ಪ್ರಮಾಣವು ರಿಸರ್ವ್ ಬ್ಯಾಂಕ್ ಮಾರ್ಗಸೂಚಿಯಂತೆ ಕನಿಷ್ಠ ಶೇ.60 ಇರಬೇಕಾಗಿದೆ. ಬ್ಯಾಂಕ್‌ಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾಲಗಳನ್ನು ವಿತರಣೆ ಮಾಡುವಂತೆ ತಿಳಿಸಿದ ಅವರು, ವಸತಿ ಹಾಗೂ ಶೈಕ್ಷಣಿಕ ಉದ್ದೇಶ, ಸ್ವ ಉದ್ಯೋಗ ಕೈಗೊಳ್ಳುವವರು, ಸರ್ಕಾರಿ ಯೋಜನೆಗಳ ಫಲಾನುಭವಿಗಳ ಅರ್ಜಿಗಳನ್ನು ತಿರಸ್ಕರಿಸದೇ, ಅರ್ಜಿಗಳಲ್ಲಿನ ದೋಷಗಳನ್ನು ಸರಿಪಡಿಸಿ, ಹೆಚ್ಚಿನ ಸಂಖ್ಯೆಯಲ್ಲಿ ಸಾಲದ ಅರ್ಜಿಗಳನ್ನು ಮಂಜೂರು ಮಾಡುವಂತೆ ತಿಳಿಸಿದರು.

ಪ್ರಸಕ್ತ ಸಾಲಿನ ಡಿಸೆಂಬರ್ ವರೆಗೆ ಜಿಲ್ಲೆಯ ಬ್ಯಾಂಕ್‌ಗಳಲ್ಲಿ ರೂ.25208 ಕೋಟಿ ಠೇವಣಿ ಸಂಗ್ರಹಿಸಿದ್ದು, ರೂ.12013 ಕೋಟಿ ಸಾಲ ವಿತರಿಸಲಾಗಿದೆ ಎಂದು ಬ್ಯಾಂಕ್ ಅಧಿಕಾರಿಗಳು ಮಾಹಿತಿ ನೀಡಿದರು.

ಸಭೆಯಲ್ಲಿ ಜಿಪಂ ಮುಖ್ಯ ಯೋಜನಾಧಿಕಾರಿ ಸೋಮಶೇಖರ್ ಮೇಸ್ತಾ, ಯೋಜನಾ ನಿರ್ದೇಶಕ ಕರೀಂ ಅಸಾದಿ, ಮುಖ್ಯ ಲೆಕ್ಕಾಧಿಕಾರಿ ಆನಂದ್ ಸಾ ಹಬೀಬ್, ನಬಾರ್ಡ್ ಮೆನೇಜರ್ ಸುಶೀಲ್ ನಾಯ್ಕ, ಲೀಡ್ ಬ್ಯಾಂಕ್ ಮೆನೇಜರ್ ರಾಜಪ್ಪ, ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಬ್ಯಾಂಕ್‌ಗಳ ಅಧಿಕಾರಿಗಳು ಉಪಸ್ಥಿತರಿದ್ದರು.



ಕಾನೂನು ಅರಿವು ವಿಚಾರಗೋಷ್ಠಿ

ಅಂಕೋಲಾ: ತಾಲೂಕು ಆಡಳಿತ ಅಂಕೋಲಾ, ತಾಪಂ ಮತ್ತು ಸಮಾಜ ಕಲ್ಯಾಣ ಇಲಾಖೆ ಅಂಕೋಲಾ ಇವರ ಸಂಯುಕ್ತ ಆಶ್ರಯದಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ದೌರ್ಜನ್ಯ ಪ್ರತಿಬಂಧ ಅಧಿನಿಯಮಗಳ ಕುರಿತು ಕಾನೂನು ಅರಿವು ವಿಚಾರಗೋಷ್ಠಿ ಮತ್ತು ಕಾರ್ಯಾಗಾರ ತಾಪಂ ಸಭಾಭವನದಲ್ಲಿ ನಡೆಯಿತು.

ಕಾರ್ಯಾಗಾರ ಉದ್ಘಾಟಿಸಿದ ತಾಪಂ ಕಾರ್ಯ ನಿರ್ವಹಣಾಧಿಕಾರಿ ರಾಮು ಗುನಗಿ ಮಾತನಾಡಿ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿಗಾಗಿ ಸರ್ಕಾರದ ಯೋಜನೆಗಳ ಅನುಷ್ಠಾನಕ್ಕೆ ಆದ್ಯತೆ ನೀಡುವುದು ಎಲ್ಲಾ ಇಲಾಖೆಗಳ ಜವಾಬ್ದಾರಿಯಾಗಿದ್ದು, ಪರಿಶಿಷ್ಟ ಜನಾಂಗಗಳ ಮೇಲಿನ ದೌರ್ಜನ್ಯ ಪ್ರತಿಬಂಧಕ ಕಾನೂನುಗಳ ಕುರಿತು ಅರಿವು ಮೂಡಿಸುವ ಕಾರ್ಯ ಕಾಲ ಕಾಲಕ್ಕೆ ನಡೆಯಬೇಕು.

ಅಂಕೋಲಾ ಜೆ.ಎಂ.ಎಫ್.ಸಿ ನ್ಯಾಯಾಲಯದ ಸಹಾಯಕ ಸರ್ಕಾರಿ ಅಭಿಯೋಜಕಿ ಶಿಲ್ಪಾ ನಾಯ್ಕ ಮಾತನಾಡಿ, ದೇವದಾಸಿ ಪದ್ದತಿ, ಬಾಲ್ಯ ವಿವಾಹ ಹಾಗೂ ಪೋಕ್ಸೋ ಪ್ರಕರಣಗಳ ತಡೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ಪ್ರತಿಬಂಧಕ ಕಾಯ್ದೆ ಕುರಿತು ಉಪನ್ಯಾಸ ನೀಡಿದರು.



ವಕೀಲ ಉಮೇಶ ನಾಯ್ಕ ಪರಿಶಿಷ್ಟ ಜಾತಿ ಪಂಗಡಗಳಿಗೆ ನೀಡಲಾಗುವ ಜಮೀನುಗಳ ಮಾರಾಟ ಮತ್ತು ವಂಚನೆಗಳ ವಿರುದ್ಧ ಇರುವ ನಿಯಮಗಳನ್ನು ತಿಳಿಸಿದರು.ಪಿ.ಎಸ್.ಐ ಗುರುನಾಥ ಹಾದಿಮನಿ ಅಪರಾಧ ತಡೆ ಕಾನೂನುಗಳ ಕುರಿತು ತಿಳಿಸಿದರು.ಉಪ ತಹಶೀಲ್ದಾರ್ ಗಿರೀಶ ಜಾಂಬಾವಳಿಕರ್ ಅಧ್ಯಕ್ಷತೆ ವಹಿಸಿದ್ದರು.ಸಮಾಜದ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ವಿನಾಯಕ ನಾಯ್ಕ ಸ್ವಾಗತಿಸಿದರು, ವಾರ್ಡನ್ ವೀಣಾ ನಾಯಕ ಸಂವಿಧಾನ ಪೀಠಿಕೆ ವಾಚಿಸಿದರು, ಪೂರ್ಣಿಮಾ ಶೆಟ್ಟಿ ಕಾರ್ಯಕ್ರಮ ನಿರ್ವಹಿಸಿದರು ಶಿವಾನಂದ ಗೌಡ ವಂದಿಸಿದರು.

ರೇಣುಕಾಚಾರ್ಯ ಜಯಂತ್ಯುತ್ಸವ

ಮುಂಡಗೋಡ: ಧರ್ಮ ಮತ್ತು ಜೀವನ ಎಲ್ಲರಿಗೂ ಬೇಕು. ಜೀವನದಲ್ಲಿ ಸ್ವಾರಸ್ಯವಿದೆ ಅಹಂ ಎನ್ನುವುದನ್ನು ನಾವು ಅಳಿಯಬೇಕು. ಸ್ವಾರ್ಥ ಸಾಧನೆ ಮತ್ತು ಇಂದ್ರಿಯಗಳ ತೃಪ್ತಿಗಾಗಿ ನಮ್ಮ ಜೀವನವನ್ನು ಮಾರಿಕೊಳ್ಳಬಾರದು ಎಂದು ಕಲ ಘಟಗಿ ಹಾಗೂ ಗೋಕರ್ಣ 12 ಮಠದ ರೇವಣಸಿದ್ದೇಶ್ವರ ಶ್ರೀಗಳು ಹೇಳಿದರು.

ತಾಲೂಕು ಆಡಳಿತ, ತಾಪಂ ಹಾಗೂ ಪಪಂ ಇವರ ಸಂಯುಕ್ತ ಆಶ್ರಯದಲ್ಲಿ ಪಟ್ಟಣದ ತಹಶೀಲ್ದಾರ ಕಚೇರಿಯ ಸಭಾಭವನದಲ್ಲಿ ಆಯೋಜಿಸಿದ್ದ ವೀರಶೈವ ಧರ್ಮ ಸಂಸ್ಥಾಪಕ ಜಗದ್ಗುರು ರೇಣುಕಾಚಾರ್ಯ ಜಯಂತ್ಯುತ್ಸವದ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು. ನಾವು ಧರ್ಮವನ್ನು ರಕ್ಷಣೆ ಮಾಡಿದರೆ ಧರ್ಮ ನಮ್ಮನ್ನು ರಕ್ಷಣೆ ಮಾಡುತ್ತದೆ ಎಂಬುದನ್ನು ರೇಣುಕಾಚಾರ್ಯರು ಪ್ರತಿಪಾದಿಸಿದರು. 1400 ವರ್ಷಗಳ ಸಂಚಾರ ಮಾಡಿ 700 ವರ್ಷ ಅಂತರಿಕ್ಷವಾಗಿ ಮತ್ತು 700 ವರ್ಷ ಭೂಮಂಡಲ ಸುತ್ತಾಡಿ ಧರ್ಮ ಜಾಗೃತಿ ಮಾಡಿದರು ಎಂದರು.ರುದ್ರಮುನಿ ಶ್ರೀಗಳು ಆಶೀರ್ವಚನ ನೀಡಿ, ಇವತ್ತಿನ ಬದುಕಿನಲ್ಲಿ ಜಯಂತಿಗಳು ಮನುಕುಲದ ಉದ್ಧಾರ ಮಾಡುವ ಅಸ್ತ್ರಗಳಾಗಿರಬೇಕು. ಪ್ರತಿಯೊಬ್ಬನ ಪರಿವರ್ತನೆಯಾಗಬೇಕು ಎಂದರು. ತಹಶೀಲ್ದಾರ್ ಶಂಕರ ಗೌಡಿ, ಮಾಜಿ ಶಾಸಕ ವಿ.ಎಸ್. ಪಾಟೀಲ, ಕಸಾಪ ತಾಲೂಕು ಘಟಕದ ಅಧ್ಯಕ್ಷ ವಸಂತ ಕೊಣಸಾಲಿ ಮಾತನಾಡಿದರು. ತಾಲೂಕಿನ ಇಂದೂರ ಗ್ರಾಮದ ಸಾಹಿತಿ ಚಿದಾನಂದ ಪಾಟೀಲ(ಕೋವಿ) ಉಪನ್ಯಾಸ ನೀಡಿದರು. ಈ ವೇಳೆ ಇಬ್ಬರೂ ಶ್ರೀಗಳನ್ನು ಸನ್ಮಾನಿಸಲಾಯಿತು. ಶಿರಸ್ತೇದಾರ ಜಿ.ಬಿ.ಭಟ್, ತೋಟಗಾರಿಕೆ ಅಧಿಕಾರಿ ಕೃಷ್ಣಾ ಕುಳ್ಳೂರ, ಬಿಸಿಎಂ ಅಧಿಕಾರಿ ಕರಿಯಪ್ಪ ಎ.ಎಚ್., ಪ್ರಭಾರ ಸಿಡಿಪಿಒ ಸಂಜೀವ ಸದಲಗಿ, ಜಂಗಮ ಸಮಾಜದ ಜಿಲ್ಲಾ ಉಪಾಧ್ಯಕ್ಷ ಚನ್ನಬಸಯ್ಯ ಹಿರೇಮಠ, ತಾಲೂಕು ಅಧ್ಯಕ್ಷ ಮಂಜುನಾಥ ಹಿರೇಮಠ, ಕಾರ್ಯದರ್ಶಿ ಬಸವಣ್ಣ-ವೀರಭದ್ರೇಶ್ವರ ದೇವಸ್ಥಾನದ ಕಾರ್ಯದರ್ಶಿ ನಾಗಪ್ಪ ಕಡಗಿ, ಬಸವಣ್ಣೆಪ್ಪ ಹೊತಗಣ್ಣವರ ಮತ್ತು ಸಮಾಜದ ಬಾಂಧವರು ಉಪಸ್ಥಿತರಿದ್ದರು. ನಿವೃತ್ತ ಶಿಕ್ಷಕ ಎಸ್.ಬಿ.ಹೂಗಾರ ಸ್ವಾಗತಿಸಿ, ನಿರೂಪಿಸಿದರು. ಸಂಗಯ್ಯ ಶಾಸ್ತ್ರಿ ವಂದಿಸಿದರು.



ರಾಜ್ಯದ ಸಮಗ್ರ ಅಭಿವೃದ್ಧಿಗೆ ಬಜೆಟ್ ಪೂರಕ

ಯಲ್ಲಾಪುರ: ಮುಖ್ಯ ಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ ರಾಜ್ಯ ಬಜೆಟ್ ಸರ್ವರ ಸಬಲೀಕರಣ ಅವಕಾಶಗಳ ಅನಾವರಣ, ನವ ಕರ್ನಾಟಕ ನಿರ್ಮಾಣ ಎಂಬ ದೃಷ್ಟಿಕೋನವನ್ನು ಪ್ರತಿಬಿಂಬಿಸುವಂತಹ ಜನಪರ ಬಜೆಟ್ ಆಗಿದೆ ಎಂದು ಶಾಸಕ ಶಿವರಾಮ ಹೆಬ್ಬಾರ್ ಅಭಿಪ್ರಾಯಪಟ್ಟಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿದ ಅವರು, ಬಜೆಟ್‌ನಲ್ಲಿ ನಾಡಿನ ಅನ್ನದಾತರ ಹಿತಾಸಕ್ತಿ ಕಾಪಾಡುವ ಹಲವು ಯೋಜನೆಗಳಿಗೆ ಆದ್ಯತೆ ನೀಡಿರುವುದು ಸಂತೋಷಕರ ಸಂಗತಿಯಾಗಿದೆ. ಕೃಷಿ, ಮೀನುಗಾರಿಕೆ ಹಾಗೂ ಶ್ರಮಿಕ ವರ್ಗದ ಸಮಗ್ರ ಕಲ್ಯಾಣಕ್ಕೆ ಹೊಸ ಯೋಜನೆಗಳನ್ನು ಘೋಷಿಸಿರುವುದು ಗ್ರಾಮೀಣ ಆರ್ಥಿಕತೆಗೆ ಬಲ ತುಂಬುವ ಕಾರ್ಯವಾಗಿದೆ. ವಿಶೇಷವಾಗಿ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಗಣಕೀಕರಣ (ಡಿಜಿಟಲೀಕರಣ) ಯೋಜನೆಗಳಿಗೆ ಉತ್ತೇಜನ ನೀಡಿರುವುದು ಸಹಕಾರಿ ಸಂಸ್ಥೆಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಿ, ರೈತರು ಮತ್ತು ಸದಸ್ಯರಿಗೆ ಇನ್ನಷ್ಟು ಸುಗಮ ಸೇವೆ ದೊರಕುವಂತೆ ಮಾಡಲಿದೆ.

ಇದಲ್ಲದೆ ನಮ್ಮ ಉಕ ಜಿಲ್ಲೆಯ ಬಹುಕಾಲದ ಪ್ರಮುಖ ಬೇಡಿಕೆಯಾದ ಆರೋಗ್ಯ ಮೂಲಸೌಕರ್ಯ ಅಭಿವೃದ್ಧಿಗೆ ಈ ಬಜೆಟ್ ಮಹತ್ವದ ಕೊಡುಗೆ ನೀಡಿದೆ. ಕಾರವಾರದಲ್ಲಿ 100 ಕೋಟಿ ರೂಪಾಯಿ ವೆಚ್ಚದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ 198 ಕೋಟಿ ರೂಪಾಯಿ ವೆಚ್ಚದಲ್ಲಿ 450 ಹಾಸಿಗೆ ಸಾಮರ್ಥ್ಯದ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಘೋಷಿಸಿರುವುದು ಜಿಲ್ಲೆಯ ಜನತೆಗೆ ಉತ್ತಮ ಆರೋಗ್ಯ ಸೇವೆಗಳನ್ನು ಒದಗಿಸಲು ನೆರವಾಗಲಿದೆ. ಇದರಿಂದ ಜಿಲ್ಲೆಯ ಜನರು ಉನ್ನತ ಮಟ್ಟದ ಚಿಕಿತ್ಸೆಗೆ ದೂರದ ನಗರಗಳಿಗೆ ತೆರಳಬೇಕಾದ ಅನಿವಾರ್ಯತೆ ಕಡಿಮೆಯಾಗಲಿದೆ

ಜಲ ಸಂಪನ್ಮೂಲ ಮತ್ತು ನೀರಾವರಿ ಕ್ಷೇತ್ರಕ್ಕೂ ಬಜೆಟ್‌ನಲ್ಲಿ ಮಹತ್ವದ ಆದ್ಯತೆ ನೀಡಲಾಗಿದೆ.

ಕರ್ನಾಟಕ ರಾಜ್ಯದ ಸಮೃದ್ಧ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿರುವ ಹವ್ಯಕ ಭಾಷೆಯ ಬೆಳವಣಿಗೆ ಹಾಗೂ ಸಂರಕ್ಷಣೆಗೆ 'ಹವ್ಯಕ ಭಾಷಾ ಅಕಾಡಮಿ' ಸ್ಥಾಪನೆಗೆ ಬಜೆಟ್‌ನಲ್ಲಿ ಘೋಷಣೆ ಮಾಡಿರುವುದು ಅತ್ಯಂತ ಶ್ಲಾಘನೀಯವಾದ ನಿರ್ಧಾರವಾಗಿದೆ. ಎಂದು ಅವರು ತಿಳಿಸಿದ್ದಾರೆ.

ಒಟ್ಟಿನಲ್ಲಿ ಈ ಬಜೆಟ್ ರಾಜ್ಯದ ಸಮಗ್ರ ಅಭಿವೃದ್ಧಿಗೆ ಪೂರಕವಾಗಿದೆ ಎಂದು ತಿಳಿಸಿದ್ದಾರೆ.

ಆರೋಗ್ಯ,ಶಿಕ್ಷಣ, ಕೃಷಿಗೆ ಆದ್ಯತೆ

ಹಳಿಯಾಳ: ಸಮತೋಲಿತ ಮತ್ತು ದೂರದೃಷ್ಟಿಯ ಬಜೆಟ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಾಖಲೆಯ ತಮ್ಮ 17ನೇ ಬಜೆಟ್ ಮಂಡನೆಯ ಮೂಲಕ ತಮ್ಮ ಆರ್ಥಿಕ ಜ್ಞಾನ ಮತ್ತು ಆಡಳಿತ ಅನುಭವವನ್ನು ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ.



ಈ ಬಜೆಟ್ ದೂರದೃಷ್ಟಿಯೊಂದಿಗೆ ರೂಪುಗೊಂಡಿದ್ದು, ಆರ್ಥಿಕ ಶಿಸ್ತನ್ನು ಕಾಯ್ದುಕೊಂಡು ರಾಜ್ಯದ ಎಲ್ಲಾ ವರ್ಗದ ಜನರು, ಎಲ್ಲಾ ಪ್ರದೇಶಗಳು ಹಾಗೂ ವಿವಿಧ ಕ್ಷೇತ್ರಗಳ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಮಂಡಿಸಲಾಗಿದೆ. ವಿಶೇಷವಾಗಿ ಆರೋಗ್ಯ, ಶಿಕ್ಷಣ, ಕೃಷಿ, ಜಲಸಂಪನ್ಮೂಲ ಮತ್ತು ಪ್ರವಾಸೋದ್ಯಮದ ಮೂಲಕ ಉದ್ಯೋಗ ಸೃಷ್ಟಿ ಸೇರಿದಂತೆ ಮೂಲಭೂತ ಕ್ಷೇತ್ರಗಳಿಗೆ ಹೆಚ್ಚಿನ ಆದ್ಯತೆ ನೀಡಿರುವುದು ರಾಜ್ಯದ ಸಮಗ್ರ ಅಭಿವೃದ್ಧಿಗೆ ಪೂರಕವಾಗಲಿದೆ.

ಬಜೆಟ ನಲ್ಲಿ ಮುಖ್ಯವಾಗಿ ಉಕ ಜಿಲ್ಲೆಯ ಕಾರವಾರದಲ್ಲಿ ಸೂಪರ ಸ್ಪೇಶಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ 100.00 ರೂ.ಕೋಟಿ ಅನುದಾನ ಮೀಸಲಿಟ್ಟಿದ್ದು, ಉಕ ಜಿಲ್ಲೆಯ ಜನತೆಯ ಬಹುದಿನದ ಕನಸು ನನಸಾಗಿದೆ. ಜೊತೆಗೆ ಮಾಜಿ ಕುಸ್ತಿಪಟುಗಳಿಗೆ ಮಾಸಾಶನವನ್ನು ಹೆಚ್ಚಿಸಿದ್ದು, ಅವರ ಜೀವನೋಪಾಯಕ್ಕೆ ಸಹಾಯವಾಗಲಿದೆ. ಜನಪರ ಮತ್ತು ಅಭಿವೃದ್ಧಿ ಮುಖಿ ಬಜೆಟ್ ಮಂಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ಶಾಸಕ ಆರ್.ವಿ.ದೇಶಪಾಂಡೆ ಪತ್ರಿಕಾ ಹೇಳಿಕೆ ನೀಡಿದ್ದಾರೆ.

ಜನರಿಗೆ ಟೋಪಿ ಹಾಕುವ ಬಜೆಟ್

ಶಿರಸಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿರುವ ಬಜೆಟ್ ಉತ್ತರ ಕನ್ನಡ ಜಿಲ್ಲೆಯ ಪಾಲಿಗೆ ಕೇವಲ ಬೋಗಸ್ ಆಗಿದ್ದು, ಇದು ಜನರ ಕಣ್ಣೊರೆಸುವ ತಂತ್ರ ಎಂದು ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಅನಂತ ಮೂರ್ತಿ ಹೆಗಡೆ ತೀವ್ರವಾಗಿ ಟೀಕಿಸಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿದ ಅವರು, ಜಿಲ್ಲೆಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಘೋಷಿಸಿರುವುದು ಕೇವಲ 100 ಕೋಟಿ ರೂ.ಗಳಲ್ಲಿ, ಇಂದು ಒಂದು ಸುಸಜ್ಜಿತ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 10 ರಿಂದ 20 ಕೋಟಿ ಬೇಕು ಎಂದಿರುವಾಗ, ನೂರು ಕೋಟಿಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಲು ಸಾಧ್ಯವೇ? ಸುಮಾರು 400 ಕೋಟಿರೂ.ಗಳು ಬೇಕಾಗುವ ಇಂತಹ ಯೋಜನೆಗೆ ಇಷ್ಟು ಕಡಿಮೆ ಹಣ ಮೀಸಲಿಟ್ಟಿರುವುದು ಚುನಾವಣೆ ಗಿಮಿಕ್ ಅಷ್ಟೆ ಎಂದು ಕಿಡಿಕಾರಿದರು.

ಬಜೆಟ್‌ನಲ್ಲಿ ಶಿರಸಿ ಆಸ್ಪತ್ರೆಗೂ ಯಾವುದೇ ಅನುದಾನ ಘೋಷಣೆ ಮಾಡಲಾಗಿಲ್ಲ. ಈ ಹಿಂದೆ ಬಿಜೆಪಿ ಸರಕಾರದ ಅವಧಿಯಲ್ಲಿ ಕುಮಟಾದಲ್ಲಿ ಘೋಷಣೆಯಾದ ಆಸ್ಪತ್ರೆಗೆ ಹಣ ನೀಡದೆ, ಹೊಸದಾಗಿ ಆಸ್ಪತ್ರೆ ಮಾಡುತ್ತೇವೆ ಎನ್ನುವುದು ಜನರನ್ನು ಮರಳು ಮಾಡುವ ಟೋಪಿ ಹಾಕುವ ಬಜೆಟ್ ಆಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಉಕ ಜಿಲ್ಲೆಗೆ ಯಾವುದೇ ವಿಶೇಷ ಅನುದಾನ ಇಲ್ಲ, ಅಲ್ಲದೇ ರೈತ ವಲಯಕ್ಕೂ ಯಾವುದೇ ಅನುಕೂಲ ಮಾಡಿಕೊಡುವಂಥ ಕೊಡುಗೆ ಇಲ್ಲ. ಯಾವುದೇ ವಿಶೇಷ ಅಥವಾ ಪ್ರತ್ಯೇಕ ಅನುದಾನ ಇಲ್ಲ. ಕೃಷಿ ವಲಯಕ್ಕೆ ಕೊಟ್ಟಂತೆ ತೋರಿಸಿ ಏನೂ ನೀಡಿಲ್ಲ ಎಂದು ಆರೋಪಿಸಿದ್ದಾರೆ.

ನುಡಿದಂತೆ ನಡೆದ ಸಿದ್ದರಾಮಯ್ಯ

ಹೊನ್ನಾವರ: ಆರ್ಥಿಕ ಹೊರೆಯಿಂದ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಜನಪ್ರಿಯ ಪಂಚ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಲು ಉದ್ದೇಶಿಸಿದೆ ಎಂದು ಅಪಪ್ರಚಾರ ಮಾಡುತ್ತಿದ್ದ ವಿರೋಧ ಪಕ್ಷಗಳಿಗೆ ಈ ಬಾರಿಯ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಾವಿರಾರು ಕೋಟಿ ರೂಪಾಯಿಗಳನ್ನು ಪಂಚ ಗ್ಯಾರಂಟಿ ಯೋಜನೆಗಳಿಗೆ ಕಾಯ್ದಿರಿಸುವ ಮೂಲಕ ತಾನು ಕೊಟ್ಟ ಮಾತಿನಂತೆ ನಡೆಯುವ, ಬಡವರ ಪರ ಮುಖ್ಯಮಂತ್ರಿ ಎಂದು ಸಾಬೀತು ಪಡಿಸಿದ್ದಾರೆ ಎಂದು ಉಕ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜಗದೀಪ ಎನ್.ತೆಂಗೇರಿ ಹೇಳಿದ್ದಾರೆ.ಬಡವರಿಗಾಗಿ ಇನ್ನೂ ಮುಂದೆ ಅನ್ನಭಾಗ್ಯ ಯೋಜನೆಯಲ್ಲಿ ಹೆಚ್ಚುವರಿ ಐದು ಕೆ.ಜಿ. ಅಕ್ಕಿಯ ಬದಲಾಗಿ ಬೇಳೆಕಾಳು, ಅಡಿಗೆ ಎಣ್ಣೆ, ಉಪ್ಪು, ಚಹಾಪುಡಿಯನ್ನು ಒಳಗೊಂಡ ಇಂದಿರಾ ಕಿಟ್ ನೀಡುವುದರ ಕುರಿತಂತೆ ಬಜೆಟನಲ್ಲಿ ಪ್ರಕಟಿಸಿರುವುದು ಸ್ವಾಗತಾರ್ಹಕ್ರಮ ಎಂದಿದ್ದಾರೆ. ಅಲ್ಲದೇ ಉತ್ತರ ಕನ್ನಡ ಜಿಲ್ಲೆಯ ಜನರ ಬಹುದಿನಗಳ ಬೇಡಿಕೆಯಾದ ಮಲ್ಟಿ ಸ್ಪೇಶಾಲಿಟಿ ಆಸ್ಪತ್ರೆಗೆ ನೂರು ಕೋಟಿ ರೂಪಾಯಿಗಳನ್ನು ಮೀಸಲಿಟ್ಟು, ತಕ್ಷಣ ಜಿಲ್ಲಾ ಕೇಂದ್ರ ಕಾರವಾರದಲ್ಲಿ ಆಸ್ಪತ್ರೆ ಆರಂಭಿಸಲು ಮುಂದಾಗಿರುವುದು ಜಿಲ್ಲೆಯ ಎಲ್ಲಾ ವರ್ಗದ ಜನರಲ್ಲಿ ಹರ್ಷ ತಂದಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜಗದೀಪ ಎನ್. ತೆಂಗೇರಿ ಸಂತಸ ವ್ಯಕ್ತಪಡಿಸಿದ್ದಾರೆ.





2026-2027 ರಾಜ್ಯ ಬಜೆಟ್ ನಾವು ಕಂಡಂತೆ



ಸಿಎಂ ಸಿದ್ದರಾಮಯ್ಯನವರು ಮಂಡಿಸಿದ ಬಜೆಟ್ ರಾಜ್ಯದ ಜನತೆಗೆ ಮೂಗಿನ ಮೇಲೆ ತುಪ್ಪ ಸವರಿದ ಹಾಗಿದೆ. ಇದೊಂದು ನಿರಾಶಾದಾಯಕ ಬಜೆಟ್ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿರುವ ಯಾವುದೇ ಯೋಜನೆಯು ಬಜೆಟ್‌ನಲ್ಲಿ ಇಲ್ಲ, ಉತ್ತರ ಕರ್ನಾಟಕ ಅಭಿವೃದ್ಧಿ ಪಡಿಸುವ ಯಾವುದೇ ದೊಡ್ಡ ಯೋಜನೆಯೂ ಇಲ್ಲ. ರಾಜ್ಯದ ಜನತೆಯ ಮೇಲೆ ಸಾಲದ ಹೊರೆ ಹೇರುವುದೇ ಇವರ ಸಾಧನೆಯಾಗಿದೆ.

■ ಕೆ.ಎಸ್. ಸಿದ್ದಬಸಪ್ಪ ಯಾದವ್, ಜೆಡಿಎಸ್ ರಾಜ್ಯ ಉಪಾಧ್ಯಕ್ಷ



ರಾಜ್ಯದ ಜನತೆಯನ್ನು ಸಾಲಗಾರನ್ನಾಗಿಸುವ ಕಾಂಗ್ರೆಸ್ ಬಜೆಟ್. ಅಭಿವೃದ್ಧಿ ಮಾಡದೇ, ರಾಜ್ಯಕ್ಕೆ ಅಸೆಟ್ ಮಾಡದೇ 34ರ ಕ್ಯಾಬಿನೆಟ್ ಬಿಟ್ಟು, 144ರ ಕ್ಯಾಬಿನೆಟ್ ಮಾಡಿ ಜನರನ್ನು ಸಾಲಗಾರನ್ನಾಗಿಸಿದ ದುರದೃಷ್ಟಕರ ಬಜೆಟ್. ಕೇವಲ ಸಾಲವನ್ನೇ ಮಾಡುವುದನ್ನೇ ಗುರಿಯಾಗಿರಿಸಿರುವ ಬಜೆಟ್.

■ ರಾಜಶೇಖರಗೌಡ ಕಟ್ಟೇಗೌಡರ್, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ



ಸಿಎಂ ಸಿದ್ದರಾಮಯ್ಯ ಮಂಡಿಸಿದ ಬಜೆಟ್‌ನಲ್ಲಿ ಯಾವುದೇ ಹೊಸತನವಿಲ್ಲ. 4.49 ಲಕ್ಷ ಕೋಟಿ ರೂ. ಬಜೆಟ್ ಆಗಿದ್ದು, 97 ಸಾವಿರ ಕೋಟಿ ರೂ.ಗಳು ಕೊರತೆ ಹೊಂದಿದೆ. ಇದರಿಂದ ವರ್ಷಕ್ಕೆ 60 ಸಾವಿರ ಕೋಟಿ ರೂ.ಗಳ ಬಡ್ಡಿಯಾಗುತ್ತದೆ. ಹಾವೇರಿ ಜಿಲ್ಲೆಗೆ ಸಿಲ್ಕ್ ಪಾರ್ಕ್ ಕೊಟ್ಟಿರುವುದು ಸ್ವಾಗತಾರ್ಹ. ಸಾಲ, ಬಡ್ಡಿ ಹಾಗೂ ಗ್ಯಾರಂಟಿ ಯೋಜನೆಗಳಿಗೆ ಹೆಚ್ಚು ಹಣ ವ್ಯಯವಾಗಿದ್ದು, ರಾಜ್ಯದ ಹಣಕಾಸಿನ ಮೇಲೆ ಹೆಚ್ಚು ಒತ್ತಡ ಬಿದ್ದಿದೆ. ದೊಡ್ಡ ಮಟ್ಟದ ಯಾವುದೇ ಅಭಿವೃದ್ಧಿ ಕಾರ್ಯಗಳಿಲ್ಲ.

■ ವಿ.ಪಿ.ಲಿಂಗನಗೌಡ್ರ, ಕೆಎಲ್‌ಇ ಸ್ಥಾನಿಕ ಆಡಳಿತ ಮಂಡಳಿ ಚೇರಮನ್, ರಾಣೇಬೆನ್ನೂರ



ಸಿಎಂ ಸಿದ್ದರಾಮಯ್ಯ ಜನರ ನಿರೀಕ್ಷೆ ಮತ್ತು ಕನಸು ಹುಸಿಗೊಳಿಸುವ ಬಜೆಟ್ ಮಂಡಿಸಿದ್ದು, 5 ಸಾವಿರ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಲ್ಯಾಪ್‌ಟ್ಯಾಪ್ ಘೋಷಿಸಿದ್ದಾರೆ. ಹಾಗಾದರೆ ಉಳಿದ ವಿದ್ಯಾರ್ಥಿಗಳು ಏನು ಮಾಡಬೇಕು?. ಬಡವರು ಎಲ್ಲ ಸಮಾಜದಲ್ಲೂ ಇದ್ದಾರೆ. ಆದರೆ, ಉಳಿದ ವಿದ್ಯಾರ್ಥಿಗಳ ಕೈಗೆ ಸಿದ್ದರಾಮಯ್ಯ ಚೊಂಬು ಕೊಟ್ಟಿದ್ದಾರೆ. ಸಾಲ ಮಾಡಿ ತುಪ್ಪ ತಿನ್ನು ಎನ್ನುವ ಹಾಗೇ ಸಿದ್ದರಾಮಯ್ಯ ಬಜೆಟ್ ಮಂಡಿಸಿದ್ದಾರೆ.

■ ಜಿ.ಜಿ. ಹೊಟ್ಟಿಗೌಡ್ರ, ಹುಬ್ಬಳ್ಳಿ ವಾಣಿಜ್ಯೋದ್ಯಮ ಸಂಸ್ಥೆ ಮಾಜಿ ಅಧ್ಯಕ್ಷ, ರಾಣೇಬೆನ್ನೂರ.



ಸಿಎಂ ಸಿದ್ದರಾಮಯ್ಯನವರು ಮಂಡಿಸಿದ ಬಜೆಟ್ ಕೇವಲ ಒಂದು ಸಮುದಾಯವನ್ನೇ ಗುರಿಯಾಗಿರಿಸಿಕೊಂಡು ಅವರನ್ನು ಓಲೈಸುವ ಸಲುವಾಗಿಯೇ ಈ ಬಜೆಟ್ ಮಂಡಿಸಿದ್ದಾರೆ. ಅಸಮತೋಲನ ಎದ್ದು ಕಾಣುತ್ತಿದೆ. ಹಿಂದೂ ವಿರೋಧಿ ನೀತಿಯನ್ನು ಅನುಸರಿಸಿದೆ. ಕಾಂಗ್ರೆಸ್ಸಿನ ಗ್ಯಾರಂಟಿಗಳನ್ನು ನೀಡಲು ಅತೀ ಹೆಚ್ಚು ಸಾಲ ಪಡೆದು ಬೆಲೆ ಏರಿಕೆ ನಿಯಂತ್ರಣ ಮಾಡದೆ, ಉದ್ಯೋಗ ಸೃಷ್ಟಿಗೆ ದಾರಿ ತೋರದೇ, ರೈತರಿಗೆ ಸ್ಪಷ್ಟ ಭರವಸೆ ನೀಡುವ ಯೋಚನೆ ಇಲ್ಲದೆ, ಜನರ ಸಮಸ್ಯೆಗಳು ಹಾಗೆಯೇ ಉಳಿಸಿದ ನಿರಾಸೆದಾಯಕ ಬಜೆಟ್ ಇದಾಗಿದೆ.

■ ಅರುಣಕುಮಾರ ಪೂಜಾರ, ಮಾಜಿ ಶಾಸಕ

ರಾಜ್ಯ ಬಜೆಟ್‌ನಲ್ಲಿ ರೈತರ ಬೆಳೆಸಾಲ ಮನ್ನಾ ಮಾಡಬೇಕಿತ್ತು. ಜಿಲ್ಲೆಗೆ ಡಿಸಿಸಿ ಬ್ಯಾಂಕ್ ಘೋಷಣೆ ಮಾಡುವ ವಿಶ್ವಾಸವಿತ್ತು. ಬೇಡ್ತಿ ವರದಾ ನದಿಜೋಡಣೆ ಪ್ರಸ್ತಾಪವಿಲ್ಲ. ನೀರಾವರಿ ವಲಯಕ್ಕೆ ಹೆಚ್ಚಿನ ಆದ್ಯತೆ ಕೊಟ್ಟಿಲ್ಲ. ಕಬ್ಬು ಬೆಳೆಗಾರರಿಗೆ ಬೆಳೆವಿಮೆ ತುಂಬುವ ಅವಕಾಶ ಕಲ್ಪಿಸಿಲ್ಲ. ಈ ಬಜೆಟ್‌ನಲ್ಲಿ ರೈತರಿಗೆ ಏನು ಅನುಕೂಲವಿಲ್ಲ, ರೈತರಿಗಾಗಿಯೇ ಪ್ರತ್ಯೇಕ ಬಜೆಟ್ ಮಂಡನೆ ಮಾಡಬೇಕಿತ್ತು.

■ ಭುವನೇಶ್ವರ ಶಿಡ್ಲಾಪೂರ, ಜಿಲ್ಲಾಧ್ಯಕ್ಷ, ರೈತ ಸಂಘ, ಕಬ್ಬು ಬೆಳೆಗಾರ ಸಂಘ



ಹಾವೇರಿ : ಕರ್ನಾಟಕ ರಾಜ್ಯ ಬೀಜ ನಿಗಮದ ಅಧ್ಯಕ್ಷ ಎಂ.ಅಂಜನಪ್ಪ ನಿಗಮದ ಹಾವೇರಿ ಘಟಕಕ್ಕೆ ಶುಕ್ರವಾರ ಭೇಟಿ ನೀಡಿ, ಬೀಜ ಸಂಸ್ಕರಣಾ ಘಟಕದ ಯಂತ್ರೋಪಕರಣಗಳು, ಕಟ್ಟಡದ ಸ್ಥಿತಿ, ಬೀಜೋಪಚಾರ, ಸಂಗ್ರಹಣದ ವ್ಯವಸ್ಥೆ, ಕಾಪು ದಾಸ್ತಾನಿನಡಿ ಸಂಗ್ರಹಿಸಿದ ವಿವಿಧ ರಸಗೊಬ್ಬರಗಳನ್ನು ಪರೀಶಿಲನೆ ಮಾಡಿದರು. ಕಂಪನಿ ಕಾರ್ಯದರ್ಶಿ ಕಾರ್ತಿಕ, ಸಹಾಯಕ ಕೃಷಿ ನಿರ್ದೇಶಕ ವೀರಭದ್ರಪ್ಪ, ನಿಗಮದ ಮಾಜಿ ಚುನಾಯಿತ ನಿರ್ದೇಶಕ ನಿಂಗಪ್ಪ ಎಸ್. ಹಾವೇರಿ, ಹಾವೇರಿ ಕೇಂದ್ರದ ಉಪ ವ್ಯವಸ್ಥಾಪಕ ಸ್ವಾಮಿ ಎಲ್. ಇತರರಿದ್ದರು.

ಸಂವಿಧಾನವನ್ನು ಗೌರವಿಸಿ: ಜಂಗಮಶೆಟ್ಟಿ

ಹಾನಗಲ್ಲ: ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವ್ಯಕ್ತಿ ಸ್ವಾತಂತ್ರ್ಯ ಹಾಗೂ ಪತ್ರಿಕಾ ಸ್ವಾತಂತ್ರ್ಯವನ್ನು ಗೌರವಿಸಿ ಕಾಪಾಡುವುದು ಸಂವಿಧಾನದ ಧ್ಯೇಯವಾಗಿದ್ದು, ರಾಜಕೀಯ ಅಧಿಕಾರವನ್ನು ಬಳಸಿ ಸ್ವಾರ್ಥಕ್ಕಾಗಿ ಯಾವುದೇ ವ್ಯಕ್ತಿಗಳ ಮೇಲೆ ಅಧಿಕಾರ ಚಲಾಯಿಸಿ ಅನ್ಯಾಯ ಎಸಗುವುದು ಪ್ರತಿಭಟನಾರ್ಹವಾದುದು ಎಂದು ಹಾವೇರಿ ವಿಶ್ವವಿದ್ಯಾಲಯದ ಕುಲಪತಿ ಡಾ.ಸುರೇಶ ಜಂಗಮಶೆಟ್ಟಿ ತಿಳಿಸಿದರು. ಹಾನಗಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಭಾರತ ಸರ್ಕಾರದ ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ, ಬೆಂಗಳೂರಿನ ಎನ್‌ಎಸ್‌ಎಸ್ ಪ್ರಾದೇಶಿಕ ನಿರ್ದೇಶನಾಲಯ, ಹಾವೇರಿ ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಘಟಕ ಸಂಯುಕ್ತವಾಗಿ ಆಯೋಜಿಸಿದ ಮೇರಾ ಯುವ ಭಾರತ, ತುರ್ತು ಪರಿಸ್ಥಿತಿ -50 ಭಾರತ ಸ್ವಾತಂತ್ರಕ್ಕೆ ಒಂದು ಪಾಠ ಎಂಬ ವಿಷಯದ ಕುರಿತು ಹಾವೇರಿ ಜಿಲ್ಲಾ ಮಟ್ಟದಲ್ಲಿ ಪದವಿ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ ಭಾಷಣ ಸ್ಪರ್ಧೆ ಉದ್ಘಾಟಿಸಿ ಮಾತನಾಡಿ, ಪ್ರಜಾಪ್ರಭುತ್ವದ ಘನತೆ ಗೌರವಗಳನ್ನು ಎತ್ತಿ ಹಿಡಿಬೇಕು. ಯುವಕರು ದೇಶದ ಸಂವಿಧಾನವನ್ನು ಗೌರವಿಸುವ ಹಾಗೂ ಪಾಲಿಸುವಲ್ಲಿ ಗಟ್ಟಿಯಾಗಿ ನಿಲ್ಲಬೇಕು. ದೇಶದ ಹಿತಕ್ಕೆ ಎಲ್ಲರೂ ಒಟ್ಟಾಗಿ ಯೋಜಿಸಿ ಯೋಚಿಸಿ ನಡೆಯಬೇಕು ಎಂದರು. ಕರ್ನಾಟಕ ವಿಶ್ವವಿದ್ಯಾಲಯದ ಕಾಲೇಜು ಉಪನ್ಯಾಸಕರ ಸಂಘದ ಅಧ್ಯಕ್ಷ ಡಾ.ಮಂಜುನಾಥ ತಲ್ಲೂರ, ಪ್ರಾ. ಡಾ.ಚನ್ನಬಸಪ್ಪ ಕುಮ್ಮೂರ ಮಾತನಾಡಿದರು. ಸಂಜಯ ಬುಕ್ಕೆ, ಯಮುನಾ ಕೋನೆಸರ್, ಮಂಜುನಾಥ ಸೋಲಾಗೋಪ್ಪ, ವಿನಯ ಕುಲಕರ್ಣಿ, ಅಹಮದ್ ಫಜಲ್ ಖತೀಬ, ವಿಜಯಕುಮಾರ, ಶಿವಕುಮಾರ, ಜೆ.ನಯನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಸ್ಪರ್ಧೆಯಲ್ಲಿ ಪಾಲ್ಗೊಂಡ 45 ವಿದ್ಯಾರ್ಥಿಗಳಲ್ಲಿ 5 ವಿದ್ಯಾರ್ಥಿಗಳು ರಾಜ್ಯ ಮಟ್ಟಕ್ಕೆ ಆಯ್ಕೆ ಮಾಡಲಾಯಿತು.



ಹಾನಗಲ್ಲ : ಹಾನಗಲ್ಲಿನ ಬಿಸಿಎಂ ಇಲಾಖೆ ಏರ್ಪಡಿಸಿದ್ದ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವ ಬಗೆ ಹಾಗೂ ವೃತ್ತಿ ಮಾರ್ಗದರ್ಶನ ತರಬೇತಿ ಕಾರ್ಯಾಗಾರವನ್ನು ತಹಶೀಲ್ದಾರ್ ಎಸ್.ರೇಣುಕಾ ಉದ್ಘಾಟಿಸಿ ಮಾತನಾಡಿದರು. ಸಾಹಿತಿ ಪ್ರೊ.ಮಾರುತಿ ಶಿಡ್ಲಾಪೂರ, ಬಿಸಿಎಂ ಇಲಾಖೆ ವಿಸ್ತೀರ್ಣಾಧಿಕಾರಿ ಎಸ್.ಆನಂದ, ಧರೆಪ್ಪ ಬಾಗಣ್ಣನವರ, ಶ್ರೀಶೈಲ, ನಿರಂಜನ ಗುಡಿ, ಅಣ್ಣಪ್ಪ ನಾಯ್ಕರ, ಬಿ.ಸಿ.ಬಾರ್ಕಿ, ಲಕ್ಮಣ ಹೊಳೆಮ್ಮನವರ, ಎಂ.ಎಚ್.ಮುಜಾವರ, ರೇಣವ್ವ ಬೆಳಗಲಿ, ರೇಖಾ ತಳವಾರ, ಜಿ.ಎಸ್.ಪಾಟೀಲ, ಕಾಂತೇಶ ಹೂವಪ್ಪನವರ ಇದ್ದರು.

ರಾಜ್ಯ ಬಜೆಟ್: ಹಾವೇರಿ ಜಿಲ್ಲೆಗೆ ಮಿಶ್ರ ಫಲ

ಹಾವೇರಿ: ಮಧ್ಯ ಕರ್ನಾಟಕದ ಜಿಲ್ಲೆ ಎನಿಸಿಕೊಂಡಿರುವ ಉತ್ತರ ಕರ್ನಾಟಕದ ಹೆಬ್ಬಾಗಿಲು ಹಾವೇರಿ ಜಿಲ್ಲೆ ಈ ಬಾರಿ ಹಲವು ಯೋಜನೆಗಳಿಗೆ ಬಜೆಟ್‌ನಲ್ಲಿ ಅಸ್ತು ಎಂದು ಅನುಮೋದನೆ ಪಡೆಯುವ ಮೂಲಕ ಹಲವು ಯೋಜನೆಗಳಲ್ಲಿ ಜಿಲ್ಲೆಯ ಹೆಸರು ಮೂಡಿಬರುವ ಮೂಲಕ ಮಿಶ್ರ ಫಲಗಳನ್ನು ಪಡೆದುಕೊಂಡಿದೆ.

ಹಾವೇರಿಯಲ್ಲಿ ಸಿಲ್ಕ್ ಪಾರ್ಕ್ ಸ್ಥಾಪನೆಗೆ ಕ್ರಮ ವಹಿಸಲಾಗುವುದು. ನಬಾರ್ಡ್ ಸಂಸ್ಥೆಯ ಸಲಹೆಯಂತೆ ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಸ್ಥಾಪಿಸಲು ಆರ್‌ಬಿಐಗೆ ಪ್ರಸ್ತಾವನೆ ಸಲ್ಲಿಸಲಾಗುವುದು. ಅದೇ ರೀತಿ ವಕ್ಫ್ ಸಂಸ್ಥೆಯಡಿ ಸವಣೂರಿನಲ್ಲಿ ಒಂದು ಹೊಸ ಮಹಿಳಾ ಪಿಯು ಕಾಲೇಜ್ ಪ್ರಾರಂಭಿಸಲಾಗುವುದು. ಇನ್ನು ಬಹುದಿನಗಳಿಂದ ನಿರೀಕ್ಷೆಯಲ್ಲಿ ಕಾದಿದ್ದ ಜನರಿಗೆ ಈ ಬಾರಿ ಭಾವೈಕ್ಯತೆಯ ಹರಿಕಾರ ಸಂತ ಶಿಶುನಾಳ ಶರೀಫರ ಹೆಸರಿನಲ್ಲಿ ಪ್ರತಿಷ್ಠಾನ ಸ್ಥಾಪಿಸುವುದು ಒಂದು ನಿರೀಕ್ಷೆ ಮೂಡಿಸಿದೆ.

ಇನ್ನು ಹಾನಗಲ್ಲ ತಾಲೂಕಿನ ಪ್ರಮುಖ ಹೋಬಳಿ ಕೇಂದ್ರವಾಗಿರುವ ತಿಳವಳ್ಳಿಯಲ್ಲಿ ಹೊಸ ಪೊಲೀಸ್ ಠಾಣೆ ಸ್ಥಾಪನೆಗೆ ಅನುಮೋದನೆ ದೊರಕಿರುವುದು ಸ್ವಾಗತಾರ್ಹ.

ರಟ್ಟೀಹಳ್ಳಿ ತಾಲೂಕಿನಲ್ಲಿ ಚೆಕ್ ಡ್ಯಾಂ ಮತ್ತು ತಡೆಗೋಡೆ ನಿರ್ಮಾಣ, ಶಿಗ್ಗಾವಿ ತಾಲೂಕಿನಲ್ಲಿ ಸೇತುವೆ ಸಹಿತ ಚೆಕ್ ಡ್ಯಾಂ ನಿರ್ಮಾಣ, ಸಂಗೂರಿನಲ್ಲಿ ಬ್ರಿಡ್ಜ್ ಕಂ ಬ್ಯಾರೇಜ್ ಗೇಟ್ ಅಳವಡಿಕೆ ಮತ್ತು ತಡೆಗೋಡೆ ನಿರ್ಮಾಣ ಮತ್ತು ಶಿಗ್ಗಾವಿ ತಾಲೂಕು ತಡಸ-ಅಡವಿ ಸೋಮಾಪುರ ನಡುವೆ ಫೀಡರ್ ಕಾಲುವೆ ಅಭಿವೃದ್ಧಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಸಿಕ್ಕಿರುವುದು ನೀರಾವರಿ ಮತ್ತು ಕೃಷಿ ವಲಯದಲ್ಲಿ ಕೊಂಚ ವಿಶ್ವಾಸ ಮೂಡಿದಂತಾಗಿದೆ. ಆದರೆ ಇವುಗಳಿಗೆ ಕೇವಲ ಆಡಳಿತಾತ್ಮಕ ಅನುಮೋದನೆಗೆ ಸೀಮಿತಗೊಳ್ಳದೇ ಅಗತ್ಯ ಅನುದಾನ ನೀಡುವ ಮೂಲಕ ಕಾಮಗಾರಿ ಚಾಲನೆ ನೀಡಿ ಅವುಗಳನ್ನು ತುರ್ತಾಗಿ ಪೂರ್ಣಗೊಳಿಸುವ ಮೂಲಕ ಯೋಜನೆಗಳ ಅನುಷ್ಠಾನಕ್ಕೆ ಮುಂದಾಗಬೇಕಿದೆ.

ಆಡಳಿತಾತ್ಮಕ ಅನುಮೋದನೆ

ಇನ್ನು ಬಜೆಟ್‌ನಲ್ಲಿ ಹಲವಾರು ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಅದರಲ್ಲಿ ರಟ್ಟೀಹಳ್ಳಿ ತಾಲೂಕು ಮದಗ-ಮಾಸೂರು ಕೆರೆಯ ಆಧುನೀಕರಣ, ಬ್ಯಾಡಗಿ ತಾಲೂಕಿನ ಗುಡ್ಡದಮಲ್ಲಾಪುರ ಏತ ನೀರಾವರಿ ಯೋಜನೆ, ಹಾನಗಲ್ ಭಾಗದ 111 ಕೆರೆಗಳಿಗೆ ವರದಾ ನದಿಯಿಂದ ಏತ ನೀರಾವರಿ ಮೂಲಕ ನೀರು ತುಂಬಿಸುವುದು ಪ್ರಮುಖವಾಗಿವೆ. ಈ ಮೂಲಕ ಆ ಭಾಗದ ನೀರಾವರಿಗೆ ಕೊಂಚ ಸೌಲಭ್ಯಗಳ ಭರವಸೆ ಸಿಕ್ಕಂತಾಗಿದೆ.

ವಸತಿ ಶಾಲೆಗಳು: ಇನ್ನು ಜಿಲ್ಲೆಯ ಬ್ಯಾಡಗಿ, ಹಾವೇರಿ, ರಾಣೇಬೆನ್ನೂರ, ಶಿಗ್ಗಾವಿ, ಹಾನಗಲ್, ಹಿರೇಕೆರೂರಿನ ವಿಧಾನಸಭಾ ಕ್ಷೇತ್ರಗಳಲ್ಲಿ ಕಾರ್ಮಿಕ ಇಲಾಖೆ ವತಿಯಿಂದ ಶ್ರಮಿಕ ವಸತಿ ಶಾಲೆಗಳ ಆರಂಭಕ್ಕೆ ಘೋಷಣೆ ಮಾಡಲಾಗಿದ್ದು, ಇವುಗಳ ಅನುಷ್ಠಾನ ಕೂಡ ಅಷ್ಟೇ ಅಗತ್ಯವಿದೆ. ಈಗಾಗಲೇ ಜಿಲ್ಲೆಯಲ್ಲಿ ಕ್ರೈಸ್ ವತಿಯಿಂದ ಬಿಸಿಎಂ, ಎಸ್ಸಿ ಮತ್ತು ಎಸ್ಟಿ ಇಲಾಖೆ ಮೂಲಕ 28 ವಸತಿ ಶಾಲೆಗಳು, ಅಲ್ಪಸಂಖ್ಯಾತರ ಇಲಾಖೆ ಮೂಲಕ 5 ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಇವು ಜಿಲ್ಲೆಯ ಮಟ್ಟಿಗೆ ಸಾಲದು ಎಂಬುದು ಸರ್ವವಿಧಿತ. ಬಿಸಿಎಂ, ಎಸ್ಸಿ ಮತ್ತು ಎಸ್ಟಿ ಇಲಾಖೆ ಮೂಲಕ 28 ವಸತಿ ಶಾಲೆಗಳ 6ನೇ ತರಗತಿಯ 1400 ಸೀಟುಗಳಿಗೆ ಜಿಲ್ಲೆಯಲ್ಲಿ ಬರೋಬ್ಬರಿ 11ಸಾವಿರಕ್ಕೂ ಹೆಚ್ಚು ಮಕ್ಕಳು ಇತ್ತೀಚೆಗೆ ಪ್ರವೇಶ ಪರೀಕ್ಷೆ ಬರೆದಿದ್ದನ್ನು ಸ್ಮರಿಸಿಕೊಳ್ಳಬಹುದು.

ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎನ್ನುವ ಬದಲು ಸರ್ವರಿಗೂ ತೆರಿಗೆ ಸರ್ವರಿಗೂ ಸಾಲದ ಭಾಗ್ಯ ಎಂಬಂತಾಗಿದೆ. ಈ ಬಜೆಟ್ ರಾಜ್ಯದ ಆರ್ಥಿಕ ಭವಿಷ್ಯಕ್ಕೆ ಸ್ಪಷ್ಟ ದಿಕ್ಕು ನೀಡಬೇಕಾದ ಬಜೆಟ್‌ನಲ್ಲಿ ಮತ್ತು ಅಭಿವೃದ್ಧಿ ಯೋಜನೆಗಳಿಗೆ ಹಣ ಮೀಸಲಿಡುವ ಬದಲು ಸಾಲದ ಬಲೆಗೆ ರಾಜ್ಯವನ್ನು ತಳ್ಳುತ್ತಿರುವುದು ಈ ಬಜೆಟ್‌ನ ಮುಖ್ಯಾಂಶ.

■ ವಿನಾಯಕ ಕುರುಬರ, ವಕೀಲ, ಕಾರ್ಮಿಕ ಮುಖಂಡ

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ 2026-27ನೇ ಸಾಲಿನ ಆಯವ್ಯಯವು ನಾಡಿನ ಸಮಗ್ರ ಅಭಿವೃದ್ಧಿ, ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಶಿಸ್ತಿಗೆ ಹಿಡಿದ ಕೈಗನ್ನಡಿಯಾಗಿದೆ. ಸರ್ವೋದಯ ಮತ್ತು ಸಮಾನತೆಯ ಆಶಯದ ಜನಪರ ಬಜೆಟ್ ಆಗಿದೆ. ಬಜೆಟ್‌ನಲ್ಲಿ ಎಲ್ಲ ವರ್ಗದ ಜನರ ಹಿತ ಕಾಯಲಾಗಿದೆ. ಆರ್ಥಿಕ ಸವಾಲುಗಳ ನಡುವೆಯೂ ಅಭಿವೃದ್ಧಿ ವೇಗಕ್ಕೆ ಚ್ಯುತಿ ಬಾರದಂತೆ ಸಮತೋಲಿತ ಬಜೆಟ್ ಮಂಡಿಸಲಾಗಿದೆ.

■ ರುದ್ರಪ್ಪ ಲಮಾಣಿ, ವಿಧಾನಸಭೆ ಉಪಸಭಾಧ್ಯಕ್ಷ, ಶಾಸಕ

ದುಡಿಯುವ ವರ್ಗದಿಂದ ಸರ್ಕಾರಕ್ಕೆ ಆದಾಯ

ಹಾವೇರಿ: ರೈತ ಮತ್ತು ದುಡಿಯುವ ವರ್ಗ ಆಧುನಿಕ ಯುಗದ ಕುಬೇರರು. ಅನುದಾನ ಮಂಜೂರಾತಿಯಿಂದ ದೇಶದ ಆರ್ಥಿಕತೆ ಹೆಚ್ಚಾಗುವುದಿಲ್ಲ, ದುಡಿಯುವ ವರ್ಗಮಾಡುವ ಕೆಲಸ ಹಾಗೂ ಉತ್ಪಾದನೆಯಿಂದ ಸರ್ಕಾರಕ್ಕೆ ಆದಾಯ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು. ನಗರದ ಜಿಪಂ ಸಭಾಭವನದಲ್ಲಿ ಶುಕ್ರವಾರ, ಜಿಲ್ಲಾಡಳಿತ, ಜಿಪಂ ಹಾಗೂ ಜಿಲ್ಲಾ ಅಗ್ರಣೀಯ ಬ್ಯಾಂಕ್ ಸಹಯೋಗದಲ್ಲಿ ನಡೆದ ಫಲಾನುಭವಿಗಳಿಗೆ ಸಾಲ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿ, ದುಡಿಯುವ ವರ್ಗದ ಜನರ ಬಳಿ ಹಣ ಬರಬೇಕು ಎಂಬ ಉದ್ದೇಶದಿಂದ ಪ್ರಧಾನಿ ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ದೇಶದಲ್ಲಿ 60 ಕೋಟಿ ಜನಧನ್ ಖಾತೆಗಳಿದ್ದು, ಈ ಪೈಕಿ ಮಹಿಳೆಯರ ಖಾತೆಗಳು ಹೆಚ್ಚಾಗಿದ್ದು, ಉಳಿತಾಯ ಮಾಡುತ್ತಿದ್ದಾರೆ. ಹಾವೇರಿ ಜಿಲ್ಲೆಗೆ ಪ್ರತ್ಯೇಕ ಡಿಸಿಸಿ ಬ್ಯಾಂಕ್ ಕನಸು ಈಗ ನನಸಾಗಿದೆ. ಕೇಂದ್ರ ಸಚಿವ ಅಮಿತ್ ಶಾ ಅವರ ದೂರದೃಷ್ಟಿಕೋನದಿಂದ ಜಿಲ್ಲೆಗೊಂದು ಡಿಸಿಸಿ ಬ್ಯಾಂಕ್ ಘೋಷಣೆ ಮಾಡಿದ್ದಾರೆ. ಈಗಾಗಲೇ ಆರ್.ಬಿ.ಐ.ಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು. ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಮಾತನಾಡಿ, ದೇಶದ ಆರ್ಥಿಕ ಸದೃಢತೆಗೆ ಬ್ಯಾಂಕ್‌ಗಳ ಪಾತ್ರ ಪ್ರಮುಖ, ಜನರಿಗೆ ಸಾಲ ಸಿಕ್ಕರೆ ಅವರ ಆರ್ಥಿಕ ಚಟುವಟಿಕೆ ಸುಧಾರಣೆಗೆ ಸಹಾಯಕ. ಕೃಷಿ ಸೇರಿದಂತೆ ಆದ್ಯತಾ ವಲಯಕ್ಕೆ ಸಾಲ ನೀಡುವ ಪ್ರಮಾಣ ಹೆಚ್ಚಾಗಬೇಕು ಎಂದರು. ಜಿಪಂ ಸಿಇಒ ರುಚಿ ಬಿಂದಲ್, ಬ್ಯಾಂಕ್ ಆಫ್ ಬರೋಡಾ ಶಿವಮೊಗ್ಗ ವಲಯದ ಪ್ರಾದೇಶಿಕ ಉಪ ವ್ಯವಸ್ಥಾಪಕ ದೀಪಕ ಶಹಕರ, ಮಂಗಳೂರು ವಲಯದ ಉಪ ವ್ಯವಸ್ಥಾಪಕ ರಾಜೇಶ ಶರ್ಮಾ, ಪಂಕಜಕುಮಾರ ಸಮನ್, ಪ್ರಾದೇಶಿಕ ವ್ಯವಸ್ಥಾಪಕ ನವೀನ ಬಿ, ನಬಾರ್ಡನ ಡಿ.ಡಿ.ಎಂ ರಂಗನಾಥ ಇದ್ದರು.

ಚೆಕ್ ವಿತರಣೆ

ಪಿಎಂ.ವಿಶ್ವಕರ್ಮ ಅಡಿ 12ಜನರಿಗೆ ರೂ.11.50 ಲಕ್ಷ, ಪಿಎಂಇಜಿಪಿ 12 ಜನರಿಗೆ ರೂ.83.45 ಲಕ್ಷ, ಮುದ್ರಾ 44 ಜನರಿಗೆ ರೂ.251.77 ಲಕ್ಷ, ಪಿಎಂ ಸ್ವನಿಧಿ 110 ಜನಕ್ಕೆ ರೂ.19.74 ಲಕ್ಷ, ಪಿಎಂಎಫ್‌ಎಂಇ- 26 ಜನಕ್ಕೆ ರೂ.240.33 ಲಕ್ಷ, ಎನ್.ಆರ್.ಎಲ್.ಎಂ-ಎಸ್‌ಎಚ್‌ಜಿ ಅಡಿ 20 ಜನರಿಗೆ ರೂ.112 ಲಕ್ಷ ಹಾಗೂ ಎನ್‌ಯುಎಲ್‌ಎಂ ಅಡಿ 5 ಫಲಾನುಭವಿಗಳಿಗೆ ರೂ.44 ಲಕ್ಷ ಸೇರಿದಂತೆ 301 ಫಲಾನುಭವಿಗಳಿಗೆ ರೂ.819.74 ಕೋಟಿ ಮೊತ್ತದ ಸಾಲದ ಚೆಕ್ ಹಾಗೂ ಮಂಜೂರಾತಿ ಪತ್ರ ವಿತರಣೆ ಮಾಡಲಾಯಿತು. ಪಿಎಂಜೆಜೆಬಿಯ ಮತ್ತು ಪಿಎಂಎಸ್‌ಬಿವೈ ಯೋಜನೆ ಮೃತರ ಕುಟುಂಬ ಸದಸ್ಯರಿಗೆ ಮರಣ ಪರಿಹಾರ ಚೆಕ್ ವಿತರಣೆ ಮಾಡಲಾಯಿತು.



ಸೌರ ಕೃಷಿ ಯೋಜನೆಗೆ ಖಾದ್ರಿ ಶ್ಲಾಘನೆ

ಇಂಧನ ಇಲಾಖೆಗೆ 29,947 ಕೋಟಿ ರೂ. ಮೀಸಲು

ಹಾವೇರಿ : ರಾಜ್ಯ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸೌರ ಕೃಷಿ ಯೋಜನೆ ಎಂಬ ಹೊಸ ಕಾರ್ಯಕ್ರಮವನ್ನು ಘೋಷಿಸುವ ಮೂಲಕ ಸಿಎಂ ಸಿದ್ದರಾಮಯ್ಯ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಹಗಲು 7 ತಾಸು ವಿದ್ಯುತ್ ಪೂರೈಸುವ ಬದ್ಧತೆಯನ್ನು ಸಾಕಾರಗೊಳಿಸುತ್ತಿದ್ದಾರೆ ಎಂದು ಹೆಸ್ಕಾಂ ಅಧ್ಯಕ್ಷ ಸೈಯದ್ ಅಜೀಮ್ ಪೀರ್ ಖಾದ್ರಿ ಹೇಳಿದ್ದಾರೆ.



ಬಜೆಟ್ ಕುರಿತು ಶುಕ್ರವಾರ ಪ್ರತಿಕ್ರಿಯೆ ನೀಡಿರುವ ಅವರು, ಸಿಎಂ ಬಜೆಟ್‌ನಲ್ಲಿ ಶಿಕ್ಷಣ, ಆರೋಗ್ಯ, ಕೃಷಿ, ಕೈಗಾರಿಕೆ ಸೇರಿದಂತೆ ಎಲ್ಲ ಕ್ಷೇತ್ರಗಳಿಗೂ ಒತ್ತು ನೀಡಿದ್ದಾರೆ. ಇದೊಂದು ಮುಂದಾಲೋಚನೆ ಹಾಗೂ ಅಭಿವೃದ್ಧಿ ಪೂರ್ವಕ ಬಜೆಟ್ ಆಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದು, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗ ತೀವ್ರ ಬರಗಾಲ ಇದ್ದರೂ ರೈತರಿಗೆ 7 ಗಂಟೆ ವಿದ್ಯುತ್ ಪೂರೈಸಲು ಎಲ್ಲಾ ರೀತಿಯ ಕ್ರಮ ಕೈಗೊಳ್ಳಲಾಗಿತ್ತು. ಇದಕ್ಕೆ ಪೂರಕವಾಗಿ ನಾವು ಕೇಂದ್ರ ಪುರಸ್ಕೃತ ಕುಸುಮ್ -ಸಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಮೂಲಕ ಕೃಷಿ ಫೀಡರ್‌ಗಳನ್ನು ಸೌರೀಕರಣಗೊಳಿಸಿ ರೈತರಿಗೆ ಹಗಲು ವೇಳೆ ವಿದ್ಯುತ್ ನೀಡಲು ಪ್ರಯತ್ನಿಸಿದ್ದೇವು. ಇದೇ ಮಾದರಿಯಲ್ಲಿ ಈಗ ಸುಮಾರು 3000 ಮೆಗಾವ್ಯಾಟ್ ಸೌರ ವಿದ್ಯುತ್ ಉತ್ಪಾದಿಸಿ ರೈತರ ಪಂಪ್ ಸೆಟ್‌ಗಳಿಗೆ ಹಗಲು ವೇಳೆ ವಿದ್ಯುತ್ ಪೂರೈಸುವ ಮುಖ್ಯಮಂತ್ರಿ ಸೌರ ಕೃಷಿ ಯೋಜನೆ ಜಾರಿಗೊಳಿಸುವುದಾಗಿ ಹೇಳಿದ್ದಾರೆ.

ಅಲ್ಲದೆ, ಕೃಷಿ ಪಂಪ್ ಸೆಟ್‌ಗಳಿಗೆ 10 ಅಶ್ವಶಕ್ತಿವರೆಗೆ ಉಚಿತ ವಿದ್ಯುತ್ ಒದಗಿಸುವ ಯೋಜನೆಗೆ 19,290 ಕೋಟಿ ರೂ. ಮೀಸಲಿಡುವ ಮೂಲಕ ಮುಖ್ಯಮಂತ್ರಿಗಳು ರೈತರ ಕುರಿತಾಗಿ ಇರುವ ಬದ್ಧತೆಯನ್ನು ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ.

2026-27ನೇ ಸಾಲಿನಲ್ಲಿ 100 ಹೊಸ ಉಪ ಕೇಂದ್ರಗಳನ್ನು ಸ್ಥಾಪಿಸುವ ಕುರಿತು ಘೋಷಿಸುವ ಮೂಲಕ ಎಲ್ಲರಿಗೂ ಸಮರ್ಪಕ ವಿದ್ಯುತ್ ಪೂರೈಕೆಯನ್ನು ಸಾಕಾರಗೊಳಿಸಲು ದೃಢ ಹೆಜ್ಜೆ ಇಟ್ಟಿದ್ದಾರೆ. ಅದೇ ರೀತಿ ಬೇಡಿಕೆ ಅವಧಿಯಲ್ಲಿ ವಿದ್ಯುತ್ ಪೂರೈಸಲು ನವೀಕರಿಸಬಹುದಾದ ಇಂಧನ ಮೂಲಗಳಿಂದ ಉತ್ಪಾದನೆಯಾದ ವಿದ್ಯುತ್ತನ್ನು ಸಂಗ್ರಹಿಸಲು ಅನುಕೂಲವಾಗುವಂತೆ 2,000 ಮೆಗಾವ್ಯಾಟ್ ಪರ್ ಅವರ್ ಬ್ಯಾಟರಿ ಶಕ್ತಿ ಸಂಗ್ರಹ ವ್ಯವಸ್ಥೆ ಯೋಜನೆಗೆ ಅಂದಾಜು 3,400 ಕೋಟಿ ರೂ. ಹೂಡಿಕೆಗೆ ಅವಕಾಶ ಕಲ್ಪಿಸಿರುವುದು ಶ್ಲಾಘನೀಯ ಎಂದಿದ್ದಾರೆ.

ಕಸ ವಿಂಗಡಣೆ ಕೊರತೆ: ರೋಗ ಹರಡುವಿಕೆಯ ಆತಂಕ

ರಟ್ಟೀಹಳ್ಳಿ : ಕಸದ ವಿಲೇವಾರಿ, ಅಸಮರ್ಪಕ ನಿರ್ವಹಣೆ ಮತ್ತು ಹೆಚ್ಚುತ್ತಿರುವ ತ್ಯಾಜ್ಯ ಉತ್ಪಾದನೆಯು ಪರಿಸರ, ಆರೋಗ್ಯ ಮತ್ತು ನಗರ ಸೌಂದರ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಪ್ಲಾಸ್ಟಿಕ್ ಮಾಲಿನ್ಯ ರೋಗಗಳ ಹರಡುವಿಕೆ, ಪ್ರಾಣಿಗಳಿಗೆ ಅಪಾಯ, ದುರ್ವಾಸನೆ ಪ್ರಮುಖ ಸಮಸ್ಯೆಗಳಾಗಿವೆ. ಹಸಿ ಮತ್ತು ಒಣ ಕಸದ ವಿಂಗಡಣೆ ಕೊರತೆ, ಅಕ್ರಮ ಡಂಪಿಂಗ್ನಿಂದಾಗಿ ನಗರ, ಗ್ರಾಮೀಣ ಪ್ರದೇಶಗಳಲ್ಲಿ ಪರಿಸರದ ಸಮತೋಲನ ಕೆಡುತ್ತಿದೆ ಎಂದು ಲಯನ್ಸ್ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ವಿಜಯ ಬುಳ್ಳಾಪುರ ಹೇಳಿದರು.

ಪಟ್ಟಣದ ಲಯನ್ಸ್ ಶಾಲೆಯಲ್ಲಿ ಜರುಗಿದ ಸ್ವಚ್ಛ ಭಾರತ 2.0.ಕಾರ್ಯಕ್ರಮದ ಅಂಗವಾಗಿ ಮಕ್ಕಳು, ಪಾಲಕರಿಗಾಗಿ ಹಮ್ಮಿಕೊಂಡಿದ್ದ ಕಸ ವಿಲೇವಾರಿ, ಪರಿಹಾರೋಪಾಯಗಳು ಕಾರ್ಯಕ್ರಮದಲ್ಲಿ ಮಾತನಾಡಿ, ಕೊಳೆಯುವ ಕಸದಿಂದ ಕಾಲರ, ಟೈಫಾಯಿಡ್‌ನಂತಹ ಕಾಯಿಲೆಗಳು ಹೆಚ್ಚಾಗುತ್ತವೆ. ಪ್ಲಾಸ್ಟಿಕ್ ಮತ್ತು ಇತರ ತ್ಯಾಜ್ಯಗಳು ಮಣ್ಣು, ನೀರು, ಗಾಳಿಯನ್ನು ಕಲುಷಿತಗೊಳಿಸುತ್ತವೆ. ಹಸಿ ಮತ್ತು ಒಣ ಕಸ ಬೇರ್ಪಡಿಸದೆ ಎಲ್ಲೆಂದರಲ್ಲಿ ಕಸ ಬೀಸಾಡುವುದು ದೊಡ್ಡ ಸಮಸ್ಯೆಯಾಗಿದೆ ಎಂದರು.



ರಸ್ತೆ ಬದಿಗಳಲ್ಲಿ ಕಸವನ್ನು ರಾಶಿ ಹಾಕುವುದರಿಂದ ಹಳ್ಳಿ, ಪಟ್ಟಣ, ನಗರದ ಸೌಂದರ್ಯ ಹಾಳಾಗುತ್ತದೆ. ಎಲ್ಲೆಂದರಲ್ಲಿ ಕಸ ಎಸೆಯುವವರಿಗೆ ದಂಡ ವಿಧಿಸುವುದು ಅನಿವಾರ್ಯವಾಗಿದೆ. ಪರಿಸರ ರಕ್ಷಣೆಯಲ್ಲಿ ಎಲ್ಲರ ಪಾತ್ರ ಮುಖ್ಯವಾಗಿದೆ. ಸಾರ್ವನಿಕರಲ್ಲಿ ಸ್ವಚ್ಛತೆ ಮತ್ತು ಕಸದ ಬಗ್ಗೆ ಜಾಗೃತಿ ಮೂಡಿಸುವುದು ಅವಶ್ಯವಾಗಿದೆ. ಮರುಬಳಕೆ ಮತ್ತು ಪುನರ್ಬಳಕೆ ಕ್ರಮಗಳನ್ನು ಅಳವಡಿಸಿಕೊಳ್ಳುವುದು ಕಸದ ಸಮಸ್ಯೆಗೆ ಶಾಶ್ವತ ಪರಿಹಾರವಾಗಿದೆ ಎಂದರು.

ಈ ವೇಳೆ ವಿ.ಎಸ್,ಆರ್ಕಾಚಾರಿ, ಕೆ.ವೈ.ಬಾಜೀರಾಯರ, ಸಿ.ಎಸ್.ಪೂಜಾರ, ಪಪಂ ಸಮುದಾಯ ಸಂಘಟನಾಧಿಕಾರಿ ಗದಿಗೇಶ ಶಿರಸಿ, ಗಂಗಮ್ಮ ಬೆನ್ನೂರ, ವಿಜಯಲಕ್ಷ್ಮೀ ಕವಲಿ ಮುಂತಾದವರು ಭಾಗವಹಿಸಿದ್ದರು.

ಹಾವೇರಿ ಜಿಲ್ಲೆಗೆ ಯಾವುದೇ ವಿಶೇಷ ಪ್ಯಾಕೇಜ್ ಘೋಷಣೆ ಇಲ್ಲ. ಡಿಸಿಸಿ ಬ್ಯಾಂಕ್ ಘೋಷಣೆ ಮಾಡಿಲ್ಲ, ರೈತರ ಜಮೀನುಗಳಿಗೆ ಪ್ರತಿ ಎಕರೆಗೆ 30ರಿಂದ 40 ಲಕ್ಷದವರೆಗೆ ಸರ್ಕಾರ ದರ ನಿಗದಿ ಮಾಡಿದ್ದಾರೆ. ನಿಮ್ಮ ಗ್ಯಾರಂಟಿ ಯೋಜನೆಯ ಯುವನಿಧಿಗೆ ಹಣ ಮೀಸಲಿಟ್ಟಿಲ್ಲ. ಈ ಸರ್ಕಾರ ಯುವಕರಿಂದಲೇ ಅಧಿಕಾರಕ್ಕೆ ಬಂದಿದ್ದು, ಅವರ ಭರವಸೆ ಹುಸಿಯಾಗಿದೆ.

■ ಮಂಜುನಾಥ ಗೌಡಶಿವಣ್ಣವರ, ಜಿಲ್ಲಾಧ್ಯಕ್ಷ, ಜೆಡಿಎಸ್, ಹಾವೇರಿ

ಸಿಎಂ ಸಿದ್ದರಾಮಯ್ಯ ಅವರು ದಾಖಲೆಯ 17ನೇ ಬಜೆಟ್ ಮಂಡಿಸಿದ್ದು, 4.48 ಲಕ್ಷ ಕೋಟಿ ರೂ. ಗಾತ್ರದ ಆಯವ್ಯಯ ಮಂಡಿಸಿದ್ದಾರೆ. ಎಲ್ಲಾ ವರ್ಗದ ಜನರ ಆಶೋತ್ತರಗಳ ಈಡೇರಿಕೆ, ಗ್ಯಾರಂಟಿ ಯೋಜನೆ ಜತೆಗೆ ರಾಜ್ಯದ ಅಭಿವೃದ್ಧಿಗೆ ಒತ್ತು ನೀಡಿದ್ದಾರೆ. ಗೃಹಲಕ್ಷ್ಮಿ, ಗೃಹಜ್ಯೋತಿ, ಶಕ್ತಿ ಯೋಜನೆ, ಅನ್ನಭಾಗ್ಯ ಯೋಜನೆಗೆ ಸಾವಿರಾರು ಕೋಟಿ ಅನುದಾನ ಮೀಸಲಿಟ್ಟಿದ್ದಾರೆ. ಇದು ದೂರದೃಷ್ಟಿಯುಳ್ಳ ಅಭಿವೃದ್ಧಿ ಕಣ್ಣೋಟದ ಸಮತೋಲನ ಬಜೆಟ್ ಆಗಿದೆ. ಜಿಲ್ಲೆಗೆ ಸಿಲ್ಕ್ ಬೋರ್ಡ್, ತಿಳವಳ್ಳಿಗೆ ನೂತನ ಪೋಲಿಸ್ ಠಾಣೆ, ಸವಣೂರಿನಲ್ಲಿ ಮಹಿಳಾ ಕಾಲೇಜು, ಆಶ್ರಯ ಯೋಜನೆಯ ಮನೆಗಳಿಗೆ ಹೆಚ್ಚು ಸಹಾಯಧನ ನೀಡಿದ್ದು, ಸಮಗ್ರ ಅಭಿವೃದ್ಧಿಪರ ಬಜೆಟ್ ಆಗಿದೆ.


■ ಸಂಜೀವಕುಮಾರ ನೀರಲಗಿ, ಜಿಲ್ಲಾಧ್ಯಕ್ಷ, ಹಾವೇರಿ ಜಿಲ್ಲಾ ಕಾಂಗ್ರೆಸ್ ಸಮಿತಿ

ಇದು ಬಜೆಟ್ ಅಥವಾ ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆ ಪತ್ರವೇ ಎಂಬುದು ಗೊಂದಲವಾಗಿದೆ. ಸಿಎಂ ಸಿದ್ದರಾಮಯ್ಯನವರ ಕೊನೆಯ ಬಜೆಟ್ ಇದಾಗಿದ್ದು, ರಾಜ್ಯದ ಮೇಲೆ ಸಾಲದ ಹೊರೆಯನ್ನ ಹೆಚ್ಚಿಸಿದೆ. ಜನ ಸಾಮಾನ್ಯರ ಬದುಕನ್ನು ಸುಧಾರಿಸುವ ಬಜೆಟ್ ಇದಲ್ಲ. ಹಾವೇರಿ ಜಿಲ್ಲೆಯಲ್ಲಿ 6ಕ್ಕೆ 6 ಜನ ಶಾಸಕರಿದ್ದರೂ, ಬಜೆಟ್‌ನಲ್ಲಿ ಹೇಳಿಕೊಳ್ಳುವಂತ ಯೋಜನೆಗಳಿಲ್ಲ, ಕೇವಲ ಘೋಷಣೆಗಳಿವೆ. 6 ಜನ ಶಾಸಕರು ಹಾವೇರಿ ಜಿಲ್ಲೆಯ ಜನರ ಕೈಗೆ ಚಿಪ್ಪು ಕೊಟ್ಟು ಜನರನ್ನು ಮೂರ್ಖರನ್ನಾಗಿಸಿದ್ದಾರೆ.

■ ಅಭಿಷೇಕ ಉಪ್ಪಿನ, ಸಾಮಾಜಿಕ ಕಾರ್ಯಕರ್ತ, ಹಾವೇರಿ


ರಾಜ್ಯದ ಬಜೆಟ್‌ನಲ್ಲಿ ಸಿಎಂ ಸಿದ್ದರಾಮಯ್ಯ ಅವರು ಹಾವೇರಿ ಜಿಲ್ಲೆಗೆ ಬಹುಮುಖ್ಯವಾಗಿ ಕೈಗಾರಿಕಾ ವಲಯದ ಅಭಿವೃದ್ಧಿಗಾಗಿ ದೊಡ್ಡ ಮಟ್ಟದ ಪ್ರಾಜೆಕ್ಟ್ ಏನಾದರೂ ಕೊಡುತ್ತಾರೆಂಬ ನಿರೀಕ್ಷೆ ಇಟ್ಟುಕೊಂಡಿದ್ದೇವು. ಆದರೆ ನಮ್ಮ ನಿರೀಕ್ಷೆ ಹುಸಿಯಾಗಿದೆ. ಸಿಲ್ಕ್ ಪಾರ್ಕವೊಂದನ್ನು ಬಿಟ್ಟರೆ ಹೇಳಿಕೊಳ್ಳುವ ಸೌಲಭ್ಯ ದೊರೆತಿಲ್ಲ. ಬದಲಾಗಿ ಶಿಕ್ಷಣ, ಆರೋಗ್ಯ ಹೀಗೆ ಸಾಮಾಜಿಕ ವಲಯಕ್ಕೆ ಆದ್ಯತೆ ನೀಡಿ ಸಮತೋಲತೆಯ ಬಜೆಟ್ ಮಂಡಿಸಿದ್ದಾರೆ.

■ ಜಿ.ವಿ ಹಿರೇಗೌಡ್ರ, ಅಧ್ಯಕ್ಷರು, ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ ಹಾವೇರಿ.




ಸಿಎಂ ಸಿದ್ದರಾಮಯ್ಯ ಸಮತೋಲನದ ಬಜೆಟ್ ಮಂಡಿಸಿದ್ದು, ವಿಶೇಷವಾಗಿ ಶಿಕ್ಷಣಕ್ಕೆ ದಾಖಲೆಯ 47,224 ಕೋಟಿ ರೂ. ಅನುದಾನ ದೊರಕಿಸಿದ್ದಾರೆ. ಕಾರ್ಮಿಕರು, ಅಲ್ಪಸಂಖ್ಯಾತರು, ಎಸ್‌ಸಿ., ಎಸ್‌ಟಿ. ವಸತಿ ಶಾಲೆ ಮತ್ತು ವಸತಿ ನಿಲಯಗಳ ಸ್ಥಾಪನೆ, ಹಾನಗಲ್‌ನಲ್ಲಿ 2 ನೇ ಹಂತದಲ್ಲಿ ಶ್ರಮಿಕರ ವಸತಿ ಶಾಲೆ ಆರಂಭಕ್ಕೆ ಕ್ರಮ ಕೈಗೊಳ್ಳಲಾಗಿದೆ. ಮುಖ್ಯವಾಗಿ ಆಶ್ರಯ ವಸತಿ ಯೋಜನೆಯಡಿಯ ಸಹಾಯಧನವನ್ನು ಸಾಮಾನ್ಯ ವರ್ಗಕ್ಕೆ 2 ಲಕ್ಷ ರೂ., ಎಸ್‌ಸಿ, ಎಸ್‌ಟಿ ಫಲಾನುಭವಿಗಳಿಗೆ 3 ಲಕ್ಷ ರೂ.ಗೆ ಏರಿಸಲಾಗಿದೆ. ಭಾವೈಕ್ಯತೆಯ ಸಂದೇಶ ಸಾರಿದ ಸಂತ ಶಿಶುನಾಳ ಶರೀಫರ ಹೆಸರಿನಲ್ಲಿ ಪ್ರತಿಷ್ಠಾನ ಘೋಷಿಸಲಾಗಿದೆ. ಜಿಲ್ಲೆಗೆ ಸಿಲ್ಕ್ ಬೋರ್ಡ್ ಸೇರಿದಂತೆ ಅನೇಕ ಕೊಡುಗೆ ನೀಡಲಾಗಿದ್ದು, ದೂರದೃಷ್ಟಿಯ ಜನಪರ ಬಜೆಟ್ ಇದಾಗಿದೆ.

■ ಶ್ರೀನಿವಾಸ ಮಾನೆ, ಶಾಸಕ, ಹಾನಗಲ್



ಸಿಎಂ ಸಿದ್ದರಾಮಯ್ಯ ಮಂಡಿಸಿರುವ ದಾಖಲೆಯ 17ನೇ ಆಯವ್ಯಯವು ರಾಜ್ಯದ ಬೆಳವಣಿಗೆ ಆದ್ಯತೆಗಳ ಸ್ಪಷ್ಟ ರೂಪುರೇಷಗಳನ್ನು ಒಳಗೊಂಡಿದೆ. ಹಾವೇರಿಗೆ ಪ್ರತ್ಯೇಕ ಡಿಸಿಸಿ ಬ್ಯಾಂಕ್ ರಚನೆ ಮಾಡಬೇಕು ಎಂಬುದು ಜಿಲ್ಲೆಯ ರೈತರ ಬೇಡಿಕೆಯಾಗಿದ್ದು, ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಸಹಕಾರಿ ಬ್ಯಾಂಕ್ ಸ್ಥಾಪನೆಗೆ ಆರ್‌ಬಿಐಗೆ ಪ್ರಸ್ತಾವನೆ ಸಲ್ಲಿಸುವುದಾಗಿ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಹೀಗಾಗಿ ಈ ಬೇಡಿಕೆ ಈಡೇರುವ ವಿಶ್ವಾಸವಿದೆ. ಬ್ಯಾಡಗಿ ತಾಲೂಕಿನ ಗುಡ್ಡದಮಲ್ಲಾಪುರ ಏತ ನೀರಾವರಿ ಯೋಜನೆ, ಬ್ಯಾಡಗಿಯಲ್ಲಿ ಶ್ರಮಿಕ ವಸತಿ ಆರಂಭಿಸುವುದಾಗಿ ಘೋಷಿಸಿದ್ದಾರೆ. ಹಾವೇರಿಗೆ ಸಿಲ್ಕ್ ಪಾರ್ಕ್ ಘೋಷಣೆ ಆಗಿದೆ. ಒಟ್ಟಾರೆಯಾಗಿ ಇಡೀ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಅತ್ಯುತ್ತಮ ಬಜೆಟ್ ಇದಾಗಿದೆ.

■ ಬಸವರಾಜ ಶಿವಣ್ಣನವರ, ಶಾಸಕ



ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ ಬಜೆಟ್ ಜಿಲ್ಲೆಯ ಪಾಲಿಗೆ ನಿರಾಸೆ ಮೂಡಿಸಿದೆ. ಜಿಲ್ಲೆಯ ಜನರು ಬಹು ನಿರೀಕ್ಷೆ ಹೊಂದಿದ್ದ ಸುಪರ್ ಸ್ಪೆಷಾಲಿಟಿ ಆಸ್ಪತ್ರೆ ಘೋಷಣೆ ಕನಸಾಗಿಯೇ ಉಳಿಯಿತು. ಜೊತೆಗೆ ವರದಾ-ಬೇಡ್ತಿ ನದಿ ಜೋಡಣೆ ಬಗ್ಗೆಯೂ ಪ್ರಸ್ತಾಪ ಮಾಡದಿರುವುದು ಜಿಲ್ಲೆಯ ರೈತರಲ್ಲಿ ನಿರಾಸೆ ಮೂಡಿಸಿದೆ. ಬಜೆಟ್‌ನಲ್ಲಿ ಹಾವೇರಿ ವಿಶ್ವವಿದ್ಯಾಲಯಕ್ಕೆ ಅಗತ್ಯ ಅನುದಾನ ಮೀಸಲಿಟ್ಟಿಲ್ಲ. ಅಲ್ಲದೇ ತುಂಗಭದ್ರಾ ನದಿಗೆ ಹಾವನೂರು-ಶಾಖಾರ ಮಧ್ಯೆ ಬ್ರಿಡ್ಜ್ ಕಂ ಬ್ಯಾರೇಜ್, ನೀರಾವರಿ ಯೋಜನೆಗಳಿಗೆ ಅನುದಾನ, ಎಂಜಿನಿಯರಿಂಗ್ ಕಾಲೇಜಿನ ಪುನಶ್ಚೇತನ, ಹಾವೇರಿ ನಗರಕ್ಕೆ ನಿರಂತರ ಕುಡಿಯುವ ನೀರಿನ ಯೋಜನೆ ಅನುಷ್ಠಾನಕ್ಕೆ ಅನುದಾನ ಸೇರಿದಂತೆ ಹಲವಾರು ನಿರೀಕ್ಷೆಗಳು ಹುಸಿಯಾಗಿವೆ.

■ ಮಲ್ಲಿಕಾರ್ಜುನ ಹಾವೇರಿ, ಎಪಿಎಂಸಿ ಮಾಜಿ ಅಧ್ಯಕ್ಷ

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮಾ.11ಕ್ಕೆ ಪ್ರತಿಭಟನೆ



ರಾಣೇಬೆನ್ನೂರ: ರಾಜ್ಯದ ಎಲ್ಲ ಸರ್ಕಾರಿ ಆಸ್ಪತ್ರೆಗಳಿಗೆ ಸಕಾಲಕ್ಕೆ ಸಮರ್ಪಕ ಔಷಧ ವಿತರಣೆ ಮಾಡುವುದು ಸೇರಿ ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ಮಾ.11ರಿಂದ ಮಾ.15ರವರೆಗೆ ರಾಜ್ಯದ ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ತುರ್ತು ಸೇವೆ ಮಾತ್ರ ಹೊರತು ಪಡಿಸಿ ಉಳಿದ ಸೇವೆ ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಮುಷ್ಕರ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿ ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂ ತಾಲೂಕು ಘಟಕದ ವತಿಯಿಂದ ಶುಕ್ರವಾರ ತಹಸೀಲ್ದಾರ್ ಆರ್.ಎಚ್. ಭಾಗವಾನ್ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಸರ್ಕಾರ ಇಲಾಖೆಯ ಎಲ್ಲ ವೃಂದಗಳ ಜೇಷ್ಠತಾ ಪಟ್ಟಿ ಪ್ರಕಟಿಸಿಲ್ಲ. ಅಧಿಕಾರಿ ಮತ್ತು ನೌಕರರ 5 ವರ್ಷಗಳ ಮುಂಬಡ್ತಿಗಳನ್ನು ನೀಡದೆ ವಿಳಂಬ ಮಾಡುತ್ತಿದೆ. ನಿಮಯಗಳಲ್ಲಿ ಇದ್ದರೂ ಸೇವಾನಿರತ ವೈದ್ಯರು, ಅಧಿಕಾರಿಗಳಿಗೆ ಹಾಗೂ ನೌಕರರ ಉನ್ನತ ವ್ಯಾಸಂಗ, ಸ್ನಾತಕೋತ್ತರ ವ್ಯಾಸಂಗಪಕ್ಕೆ ಅವಕಾಶ ನೀಡದಿರುವುದು ಸೇರಿ ವಿವಿಧ ಬೇಡಿಕೆ ಈಡೇರಿಕೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಗುವುದು ಎಂದರು. ಈ ಸಂದರ್ಭದಲ್ಲಿ ಡಾ. ರಾಜು ಶಿರೂರ, ಡಾ. ಚನ್ನಬಸಯ್ಯ ಹಿರೇಮಠ, ಮಲ್ಲಿಕಾರ್ಜುನ ಮಡಿವಾಳರ, ಮಂಜುನಾಥ ಕೆಂಚರೆಡ್ಡಿ, ವಿಕ್ರಂ ಸಣ್ಣಮನಿ, ಪ್ರಶಾಂತ ಚೌಟಗಿ, ಡಾ. ಪ್ರಕಾಶ ದೊಣಗಾರ, ರಾಜು ಗುರಪ್ಪನವರ, ವಿರುಪಾಕ್ಷ ಮುಂಡಾಸದ, ಸಿದ್ದಪ್ಪ ಗುಡೇಣ್ಣನವರ ಮತ್ತಿತರರು ಪಾಲ್ಗೊಂಡಿದ್ದರು.

ಕಿರುಸುದ್ದಿ

ಇದು ಬಜೆಟ್ ಅಲ್ಲ, ಕರ್ನಾಟಕ ವಿನಾಶದ ನೀಲನಕ್ಷೆ: ಪಾಟೀಲ

ಬೆಳಗಾವಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಮಂಡಿಸಿದ ಬಜೆಟ್ ನಲ್ಲಿ ಅಭಿವೃದ್ಧಿ ಎಂಬ ಪದದ ಅರ್ಥವನ್ನೇ ಕಾಂಗ್ರೆಸ್ ಸರ್ಕಾರ ಮರೆತಂತಿದೆ ಎಂದು ಸುಭಾಷ್ ಪಾಟೀಲ ತಿಳಿಸಿದ್ದಾರೆ.



ಕಾಂಗ್ರೆಸ್ ಸರ್ಕಾರದ 2026-27ರ ಬಜೆಟ್ ನಲ್ಲಿ ಕನ್ನಡಿಗರಿಗೆ ಬರಿ ಸಾಲದ ಸುಳಿ ಮತ್ತು ತೆರಿಗೆಯ ಹೊರೆಯನ್ನಷ್ಟೇ ನೀಡಿದೆ. ಈ ಸರ್ಕಾರ ಕರ್ನಾಟಕವನ್ನು ಕಲ್ಯಾಣ ರಾಜ್ಯದ ಬದಲು ಸಾಲಗಾರ ರಾಜ್ಯವನ್ನಾಗಿ ಪರಿವರ್ತಿಸಿದೆ. ಅಂಕಿ-ಅಂಶಗಳೇ ಸರ್ಕಾರದ ವೈಫಲ್ಯಕ್ಕೆ ಸ್ಪಷ್ಟ ಕನ್ನಡಿ ಹಿಡಿದಿದೆ ಎಂದು ತಿಳಿಸಿದ್ದಾರೆ. ಕಾಂಗ್ರೆಸ್ ಸರ್ಕಾರ ಸುಮಾರು 1.32 ಲಕ್ಷ ಕೋಟಿಯಷ್ಟು ಸಾಲ ಮಾಡುತ್ತಿದೆ. ಆದರೆ ಆ ಸಾಲದ ಹಣದಲ್ಲಿ ಸರ್ಕಾರ ಮಾಡುತ್ತಿರುವ ಬಂಡವಾಳ ವೆಚ್ಚ ಕೇವಲ 72,000 ಕೋಟಿ ಮಾತ್ರ. ಹೂಡಿದ ಸಾಲದ ಬಹುದೊಡ್ಡ ಭಾಗವನ್ನು ಆಸ್ತಿ ಸೃಜನೆಗೆ ಬಳಸುವ ಬದಲು, ದಿನನಿತ್ಯದ ಆಡಳಿತಾತ್ಮಕ ವೆಚ್ಚಗಳಿಗೆ ಮತ್ತು ಅವೈಜ್ಞಾನಿಕ ಗ್ಯಾರೆಂಟಿಗಳ ಅಸಮರ್ಪಕ ನಿರ್ವಹಣೆಗೆ ಸುರಿಯುತ್ತಿದೆ. ಇದು ಬಜೆಟ್ ಅಲ್ಲ, ಇದು ಕರ್ನಾಟಕದ ವಿನಾಶದ ನೀಲನಕ್ಷೆ ಎಂದು ತಿಳಿಸಿದ್ದಾರೆ.

ಅಬಕಾರಿ ಸುಂಕ ಏರಿಕೆ: ಹೋರಾಟದ ಎಚ್ಚರಿಕೆ

ಬೆಳಗಾವಿ: ರಾಜ್ಯದ ಮದ್ಯ ಪ್ರಿಯರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ 17ನೇ ಆಯವ್ಯಯದಲ್ಲಿ ಬಿಗ್ ಶಾಕ್ ನೀಡಿದ್ದಾರೆ. ಗ್ಯಾರಂಟಿ ಯೋಜನೆಗಳಿಗೆ ಸಂಪನ್ಮೂಲ ಕ್ರೋಢೀಕರಿಸುವ ಸವಾಲಿನ ನಡುವೆ, ಅಬಕಾರಿ ಸುಂಕವನ್ನು ಹೆಚ್ಚಿಸಲು ಸರ್ಕಾರ ನಿರ್ಧರಿಸಿದೆ. ಮದ್ಯದ ಮೇಲಿನ ಅಬಕಾರಿ ಸುಂಕವನ್ನು ಹಂತ ಹಂತವಾಗಿ ಹೆಚ್ಚಳ ಮಾಡುವುದಾಗಿ ಮುಖ್ಯಮಂತ್ರಿಗಳು ಘೋಷಿಸಿದ್ದಾರೆ. ಅದೇ ರೀತಿ ರಾಜ್ಯದಲ್ಲಿ ಹೊಸ ಅಬಕಾರಿ ನೀತಿ ಘೋಷಣೆಯಾಗಿದ್ದು, ಮದ್ಯದ ದರವನ್ನು ಉತ್ಪಾದಕರೇ ಹೆಚ್ಚಳ ಮಾಡಲಿದ್ದಾರೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಪುರುಷರಿಗೆ ಯಾವುದೇ ಪ್ರಯೋಜನೆ ಯಾಗಿಲ್ಲ, ಕೂಡಲೇ ಸಿದ್ದರಾಮಯ್ಯ ಸರ್ಕಾರ ಮಧ್ಯದ ಬೆಲೆ ಏರಿಕೆಯನ್ನು ವಾಪಸ್ ಪಡೆಯಬೇಕು ಇಲ್ಲವಾದಲ್ಲಿ ರಾಜ್ಯಾದ್ಯಂತ ಮದ್ಯಪ್ರಿಯರು ಮುಖ್ಯಮಂತ್ರಿ ಮನೆಯ ಮುಂದೆ ಉಗ್ರವಾದ ಹೋರಾಟ ಮಾಡಬೇಕಾಗುತ್ತದೆ ಎಂದು ಶ್ರೀಕಾಂತ್ ಅರಭಾವಿ ಎಚ್ಚರಿಕೆ ನೀಡಿದ್ದಾರೆ.

ಅಲ್ಪಸಂಖ್ಯಾತರಿಗೆ ಮೀಸಲಾದ ಬಜೆಟ್; ಪಾಟೀಲ

ಬೆಳಗಾವಿ: ರಾಜ್ಯದ ಬಜೆಟ್‌ನಲ್ಲಿ 1.32 ಲಕ್ಷ ಕೋಟಿ ಸಾಲ ಮಾಡುವ ಮೂಲಕ ರಾಜ್ಯವನ್ನು ಸಾಲದ ಸುಳಿಗೆ ಸಿಲುಕಿಸುವ ಬಜೆಟ್‌ನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ್ದಾರೆ ಎಂದು ಬಿಜೆಪಿ ಮುಖಂಡ ಸಿದ್ದನಗೌಡ ಪಾಟೀಲ ಆರೋಪಿಸಿದರು. ಕೇವಲ ಅಲ್ಪಸಂಖ್ಯಾತರನ್ನ ಒಲೈಸಿಕೊಳ್ಳುವದಕ್ಕಾಗಿ ಅಲ್ಪಸಂಖ್ಯಾತರ ಶಾಲೆಗಳನ್ನು ಕೆಪಿಎಸ್ ಮಾದರಿಯಲ್ಲಿ, ಉನ್ನತೀಕರಣಕ್ಕೆ 1000 ಕೋಟಿ ರೂ. ಅಲ್ಪಸಂಖ್ಯಾತರ ವಸತಿ ಶಾಲೆಗಳ ಆರಂಭ, ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿಶೇಷ ತರಬೇತಿ, ಅಲ್ಪಸಂಖ್ಯಾತ ಕಾಲೋನಿಗಳ ಮೂಲಸೌಕರ್ಯಕ್ಕೆ ನೂರಾರು ಕೋಟಿ ಮೀಸಲು ಅಲ್ಪಸಂಖ್ಯಾಂತ ನಿರ್ಗತಿಕರಿಗೆ ಎರಡು ವೃದ್ಧಾಶ್ರಮ ಆರಂಭ ಅಲ್ಪಸಂಖ್ಯಾಂತ ನಿರುದ್ಯೋಗಿಗಳಿಗೆ, 3 ಲಕ್ಷ ರೂ. ವರೆಗೆ ಸಹಾಯಧನ ಅಲ್ಪಸಂಖ್ಯಾತ ಮಹಿಳೆಯರ, ಸ್ವ-ಉದ್ಯೋಗ ಪ್ರೋತ್ಸಾಹಕ್ಕೆ ಸೊಸೈಟಿ ಸ್ಥಾಪನೆ ಮಾಡಲಾಗಿದೆ. ಹುಬ್ಬಳ್ಳಿ-ಕಲಬುರಗಿಯಲ್ಲಿ, ಹಜ್ ಭವನ ನಿರ್ಮಾಣ ಅಲ್ಪಸಂಖ್ಯಾತ ನಿಗಮದ ಸಾಲದ ಬಡ್ಡಿ ಮನ್ನಾ ಅಲ್ಪಸಂಖ್ಯಾತ ಉದ್ಯೋಗಸ್ಥ, ಮಹಿಳೆಯರಿಗೆ 4 ಹಾಸ್ಟೆಲ್ ಅಲ್ಪಸಂಖ್ಯಾತ ಇಲಾಖೆಯಲ್ಲಿ ಖಾಲಿ ಹುದ್ದೆಗಳ ಭರ್ತಿ, ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್ ಖರೀದಿಗೆ 50 ಸಾವಿರ, ವಕ್ಫ್ ಆಸ್ತಿ ಅಭಿವೃದ್ಧಿಗೆ ಹಣ ಮೀಸಲು ಹೀಗೆ ಅಲ್ಪಸಂಖ್ಯಾತರನ್ನ ಬಿಟ್ಟು ಬೇರೆ ಯಾವ ಜನಾಂಗವು ಮುಖ್ಯಮಂತ್ರಿಗಳಿಗೆ ಕಾಣದಾಗಿವೆ ಎಂದು ರಾಜ್ಯ ಬಿಜೆಪಿ ಮಾಧ್ಯಮ ಸಮಿತಿ ಸದಸ್ಯ ಎಫ್.ಎಸ್.ಸಿದ್ದನಗೌಡರ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ನೇಸರಗಿ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ, ಬೆಳಗಾವಿ ಜಿಲ್ಲಾ ಗ್ರಾಮಾಂತರ, ಜಿಲ್ಲಾ ಕಾಂಗ್ರೆಸ್ ಸಮಿತಿಯ ವ್ಯಾಪ್ತಿಯ ಬೈಲಹೊಂಗಲ ವಿಧಾನಸಭಾ ಕ್ಷೇತ್ರದ ಬೈಲಹೊಂಗಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾದ ಡಾ. ಮಹಾಂತೇಶ ಕಳ್ಳಿಬಡ್ಡಿ ಅವರನ್ನು ನೇಸರಗಿ ಗ್ರಾಮದಲ್ಲಿ ಕಾಂಗ್ರೆಸ್ ಮುಖಂಡರು ಸತ್ಕರಿಸಿದರು. ಈ ಸಂದರ್ಭದಲ್ಲಿ ಯುವ ಮುಖಂಡ ಸಚಿನ ಪಾಟೀಲ, ಅಡಿವಪ್ಪ ಮಾಳಣ್ಣವರ, ಮಂಜುನಾಥ ಹುಲಮನಿ, ಮಲ್ಲಿಕಾರ್ಜುನ ಕಲ್ಲೋಳಿ, ಅಶೋಕ ಹತ್ತರಗಿ, ಬಾಳಪ್ಪ ಜಕ್ಕಣ್ಣವರ ಉಪಸ್ಥಿತರಿದ್ದರು.

ಕೆಎಲ್‌ಇಯಿಂದ ಕನ್ನಡ ಸೇವೆ

ಚಿಕ್ಕೋಡಿ: ಜಾಗತಿಕವಾಗಿ ವಿಸ್ತರಣೆಗೊಂಡಿರುವ ಗಡಿಭಾಗದಲ್ಲಿ ಕೆಎಲ್‌ಇ ಸಂಸ್ಥೆ ಕನ್ನಡ ಮಾಧ್ಯಮದ ಶಾಲೆಗಳನ್ನು ತೆರೆಯುವ ಮೂಲಕ ಸದ್ದಿಲ್ಲದೇ ಕನ್ನಡ ಸೇವೆ ಮಾಡುತ್ತಿದೆ ಎಂದು ಕಾಶಿಪೀಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಹೇಳಿದರು. ತಾಲೂಕಿನ ಯಡೂರ ಗ್ರಾಮದಲ್ಲಿ ಕೆಎಲ್‌ಇ ಕನ್ನಡ ಮಾಧ್ಯಮ ಶಾಲಾ ಕಟ್ಟಡದ ಭೂಮಿಪೂಜೆಯನ್ನು ಶುಕ್ರವಾರ ನೆರವೇರಿಸಿ ಮಾತನಾಡಿ, ಕೆಎಲ್‌ಇ ಸಂಸ್ಥೆ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಕೊಡುಗೆ ಚಿರಸ್ಮರಣೀಯವಾಗಿದೆ. ಇದರ ಹಿಂದೆ ಸಂಸ್ಥೆಯ ಗೌರವ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಶ್ರಮ ಅಗಾಧವಾದುದಾಗಿದೆ. ಈ ಭಾಗದ ವಿದ್ಯಾರ್ಥಿಗಳ ಸರ್ವಾಂಗೀಣ ವಿಕಾಸವನ್ನು ಕೆಎಲ್‌ಇ ಸಂಸ್ಥೆ ಕೈಗೊಳ್ಳಬೇಕೆಂದರು. ಕೆಎಲ್‌ಇ ಸಂಸ್ಥೆಯ ಗೌರವ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಮಾತನಾಡಿ, ಪಂಚಪೀಠಾಧೀಶರು ಕೆಎಲ್‌ಇ ಸಂಸ್ಥೆಯ ಕಾರ್ಯಗಳಿಗೆ ಸದಾ ಆಶೀರ್ವದಿಸುತ್ತಾ ಬಂದಿದ್ದಾರೆ. ಯಡೂರ ಕ್ಷೇತ್ರದಲ್ಲಿ ಸಂಸ್ಥೆಯಿಂದ ಇನ್ನಷ್ಟು ಅತ್ಯುನ್ನತ ಶಾಲೆಗಳನ್ನು ತೆರಯಲಾಗುವುದು ಎಂದರು. ಶ್ರೀಶೈಲ ಪೀಠದ ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಉಜ್ಜಯಿನಿ ಪೀಠದ ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಕಾಶಿ ಪೀಠದ ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕ ಗಣೇಶ ಹುಕ್ಕೇರಿ, ಕೆಎಲ್‌ಇ ಸಂಸ್ಥೆಯ ನಿರ್ದೇಶಕ ಮಹಾಂತೇಶ ಕವಟಗಿಮಠ, ಜಯಾನಂದ ಮುನವಳ್ಳಿ, ಬಸವರಾಜ ಪಾಟೀಲ, ವಿಶ್ವನಾಥ ಪಾಟೀಲ, ಪ್ರವೀಣ ಬಾಗೇವಾಡಿ, ಮಂಜುನಾಥ ಮುನವಳ್ಳಿ, ವಿಜಯ ಮೆಟಗುಡ್, ಮಾಜಿ ನಿರ್ದೇಶಕ ಶಂಕ್ರಣ್ಣ ಮುನವಳ್ಳಿ ಇತರರು ಇದ್ದರು.



ಚಿಕ್ಕೋಡಿ: ತಾಲೂಕಿನ ಯಡೂರ ಗ್ರಾಮದಲ್ಲಿ ಕೆಎಲ್‌ಇ ಕನ್ನಡ ಮಾಧ್ಯಮ ಶಾಲಾ ಕಟ್ಟಡದ ಭೂಮಿಪೂಜೆಯನ್ನು ಶುಕ್ರವಾರ ಕಾಶಿಪೀಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ನೆರವೇರಿಸಿದರು. ಶಾಸಕ ಗಣೇಶ ಹುಕ್ಕೇರಿ, ಕೆಎಲ್‌ಇ ಸಂಸ್ಥೆಯ ನಿರ್ದೇಶಕ ಮಹಾಂತೇಶ ಕವಟಗಿಮಠ, ಜಯಾನಂದ ಮುನವಳ್ಳಿ, ಬಸವರಾಜ ಪಾಟೀಲ ಸೇರಿದಂತೆ ಗಣ್ಯರು ಇದ್ದರು.

ಯರಗಟ್ಟಿಯಲ್ಲಿ ಪೊಲೀಸ್ ಠಾಣೆ ಸ್ಥಾಪನೆ

ಯರಗಟ್ಟಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2026-27 ನೇ ಸಾಲಿನ ಕರ್ನಾಟಕ ಬಜೆಟ್ ಅನ್ನು ವಿಧಾನಸಭೆಯಲ್ಲಿ ಮಂಡಿಸಿದ್ದು, ಬೆಳಗಾವಿ ಹಾಗೂ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಹಲವು ಮಹತ್ವದ ಘೋಷಣೆಗಳನ್ನು ಮಾಡಿದ್ದಾರೆ. ಈ ಬಜೆಟ್ ನಲ್ಲಿ ಜನಹಿತ ಮತ್ತು ಅಭಿವೃದ್ಧಿಗೆ ಉತ್ತೇಜನ ನೀಡುವ ಹಲವು ಯೋಜನೆಗಳ ಬಜೆಟ್ ಇದು ಎಂದು ಶಾಸಕ ವಿಶ್ವಾಸ ವೈದ್ಯ ತಿಳಿಸಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿರುವ ಅವರು, ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆಗಳನ್ನು ಮರುಪ್ರಾರಂಭ.

ತುರ್ತು ವೈದ್ಯಕೀಯ ಸೇವೆಯನ್ನು ಬಲಪಡಿಸಲು ಜಿಲ್ಲಾ ಹಾಗೂ ತಾಲೂಕು ಆಸ್ಪತ್ರೆಗಳಲ್ಲಿ ಟ್ರಾಮಾ ಕೇರ್ ಕೇಂದ್ರಗಳ ಸ್ಥಾಪನೆ.

ಬೆಳಗಾವಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯೋಗದಲ್ಲಿರುವ ಮಹಿಳೆಯರಿಗೆ ವಸತಿ ನಿಲಯಗಳ ನಿರ್ಮಾಣ. ಬೆಳಗಾವಿ ಗ್ರಾಮೀಣ ಭಾಗದಲ್ಲಿ ಹೊಸ ಪ್ರಥಮ ದರ್ಜೆ ಕಾಲೇಜು ಆರಂಭ. ಉತ್ತರ ಕರ್ನಾಟಕದ ಬೆಳಗಾವಿ ಜಿಲ್ಲೆಯಲ್ಲಿ 1,000 ಎಕರೆ ಪ್ರದೇಶದಲ್ಲಿ ಕೈಗಾರಿಕಾ ಪಾರ್ಕ್ ಅಭಿವೃದ್ಧಿ. ಬೆಳಗಾವಿ ಜಿಲ್ಲೆಯ ಯರಗಟ್ಟಿಯಲ್ಲಿ ಹೊಸ ಪೊಲೀಸ್ ಠಾಣೆ ಸ್ಥಾಪನೆ.

ಬೈಲಹೊಂಗಲದಲ್ಲಿ ಪ್ರಜಾಸೌಧ ನಿರ್ಮಾಣ. ಬೆಳಗಾವಿ ಮತ್ತು ಕಲಬುರಗಿ ವಿಭಾಗಗಳಲ್ಲಿ ಕುರಿ/ಮೇಕೆ ಹಾಗೂ ಹಸು/ಎಮ್ಮೆ ಖರೀದಿಗೆ 10,000 ಫಲಾನುಭವಿಗಳಿಗೆ ತಲಾ 25% ಸಬ್ಸಿಡಿ.ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ ಮತ್ತು ಚಿಕ್ಕಮಗಳೂರಿನಲ್ಲಿ ''ಮಕ್ಕ ದರ್ಶಿನಿ' ಕೇಂದ್ರಗಳ ಸ್ಥಾಪನೆ. ಬೆಂಗಳೂರು, ಮೈಸೂರು, ಹುಬ್ಬಳ್ಳಿ-ಧಾರವಾಡ, ಮಂಗಳೂರು, ಬೆಳಗಾವಿ ಮತ್ತು ಕಲಬುರಗಿಯಲ್ಲಿ ಎಸ್ ಸಿ/ಎಸ್‌ಟಿ ಉದ್ಯೋಗಿನಿಯರಿಗಾಗಿ 10 ಕಾರ್ಯನಿರತ ಮಹಿಳಾ ವಸತಿ ನಿಲಯಗಳ ಆರಂಭಕ್ಕೆ ಘೋಷಣೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

> **ಶಾಶ್ವತ ಬ್ಯಾರಕ್‌ಗಳ ನಿರ್ಮಾಣ**
> ಬೆಳಗಾವಿಯಲ್ಲಿ ವಿಧಾನಮಂಡಲ ಅಧಿವೇಶನದ ಬಂದೋಬಸ್ತ್ ಕಾರ್ಯದಲ್ಲಿ ನಿಯೋಜನೆಯಾಗುವ 1,000 ಸಿಬ್ಬಂದಿಗೆ 20 ಕೋಟಿ ವೆಚ್ಚದಲ್ಲಿ ಶಾಶ್ವತ ಬ್ಯಾರಕ್‌ಗಳ ನಿರ್ಮಾಣ.ಅಥಣಿಯಲ್ಲಿ ಹೊಸ ಕೃಷಿ ಮಹಾವಿದ್ಯಾಲಯ ಸ್ಥಾಪನೆ.ಬೆಳಗಾವಿಯ ಪಶುವೈದ್ಯಕೀಯ ಕಾಲೇಜುಗಳಲ್ಲಿ ಸಿಟಿ ಸ್ಕ್ಯಾನಿಂಗ್ ಯಂತ್ರಗಳ ಸ್ಥಾಪನೆ.16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಸಾಮಾಜಿಕ ಮಾಧ್ಯಮ ಬಳಕೆಗೆ ನಿರ್ಬಂಧ.

ಗ್ಯಾರಂಟಿಗೆ ಹಣ ಹೊಂದಿಸುವ ಬಜೆಟ್

ಗೋಕಾಕ: ತಮ್ಮ ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಾಣಿಕೆ ಮಾಡುವುದರಲ್ಲಿಯೇ ಬಜೆಟ್ ರೂಪುರೇಷೆ ತಯಾರಿಸಿದಂತಿದೆ. ಕನ್ನಡಿಗರ ಮೇಲೆ ಮತ್ತಷ್ಟು ಸಾಲದ ಹೊರೆಯನ್ನು ಹೊರೆಸಿದ್ದಾರೆ. ಈ ಮೂಲಕ ಜನರನ್ನು ಆರ್ಥಿಕವಾಗಿ ಮತ್ತಷ್ಟು ಕುಗ್ಗುವಂತೆ ಮಾಡಿದ್ದಾರೆ ಎಂದು ಶಾಸಕ ಬಾಲಚಂದ್ರ ಜಾರಕಿಹೊಳಿ ತಿಳಿಸಿದ್ದಾರೆ.



ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿರುವ ಅವರು, ಇಲಾಖಾವಾರು ಹಣ ಹಂಚಿಕೆ ಮಾಡಿರುವುದನ್ನು ಗಮನಿಸಿದರೆ ಖಜಾನೆಯಲ್ಲಿ ಹಣದ ಕೊರತೆ ರಾಜ್ಯ ಸರ್ಕಾರವನ್ನು ಕಾಡುತ್ತಿದೆ ಎಂಬುವುದು ಸ್ಪಷ್ಟವಾಗುತ್ತಿದೆ. ಹೀಗಾಗಿ ಇದೊಂದು ಅಭಿವೃದ್ಧಿ ಶೂನ್ಯ, ಪ್ರಗತಿ ರಹಿತ, ದಿಕ್ಕು ದೆಸೆ ಇಲ್ಲದ ಬಜೆಟ್ ಆಗಿದೆ. ರಾಜ್ಯದ ಅಭಿವೃದ್ಧಿಯನ್ನು ಸಂಪೂರ್ಣ ಕಡೆಗಣನೆ ಮಾಡಲಾಗಿದೆ. ಉತ್ತರ ಕರ್ನಾಟಕದ ಯುಕೆಪಿಗೆ ಹೆಚ್ಚು ಹಣವನ್ನು ತೆಗೆದಿಡದೇ ಅನ್ಯಾಯ ಮಾಡಲಾಗಿದೆ. ಜತೆಗೆ ನೀರಾವರಿ ಕ್ಷೇತ್ರಕ್ಕೂ ಹೇಳಿಕೊಳ್ಳುವಷ್ಟು ಅನುದಾನ ನೀಡಿಲ್ಲ. ವಿತ್ತೀಯ ಕೊರತೆ ಬಜೆಟ್‌ನಲ್ಲಿ ಎದ್ದು ಕಾಣುತ್ತಿರುವುದರಿಂದ ಯಾವುದೇ ಹೊಸ ಯೋಜನೆಗಳನ್ನು ಘೋಷಿಸಲು ಮುಖ್ಯಮಂತ್ರಿಯವರು ಮುಂದಾಗಿಲ್ಲ. ಹಳೆಯ ಭರವಸೆಗಳನ್ನೇ ಹೊಸದಾಗಿ ಹೇಳಿದ್ದಾರೆ. ರೈತರಿಗಾಗಿ ಬಜೆಟ್ ನಲ್ಲಿಯಾವುದೇ ವಿಶೇಷಪ್ಯಾಕೇಜ್‌ಗಳು ನೀಡಿಲ್ಲ. ರೈತರಲ್ಲಿ ಭೇದ ಭಾವ ಮಾಡಿದ್ದು, ಕಬ್ಬು ಬೆಳೆಗಾರರನ್ನು ಸಂಪೂರ್ಣ ಕಡೆಗಣನೆ ಮಾಡಲಾಗಿದೆ. ಕಳೆದ ಎರಡು ವರ್ಷಗಳ ಬಜೆಟ್ ಅನ್ನು ಗಮನಿಸಿದಾಗ ಅವರು ಮಾತನಾಡಿರುವುದಕ್ಕೂ ಬಜೆಟ್‌ನಲ್ಲಿ ಘೋಷಣೆ ಮಾಡಿರುವ ಕಾರ್ಯಕ್ರಮ ಅನುಷ್ಠಾನ ಮಾಡಿರುವುದಕ್ಕೂ ಒಂದಕ್ಕೊಂದು ಸಂಬಂಧ ಇಲ್ಲ. ಹೀಗಾಗಿ ಈ ಬಜೆಟ್‌ನಲ್ಲಿ ಬೇರೆ ಬೇರೆ ಇಲಾಖೆಗಳಿಗೆ ಮೀಸಲಿಟ್ಟಿರುವ ಹಣವನ್ನು ಅವರು ಪೂರ್ಣ ಪ್ರಮಾಣದಲ್ಲಿ ಕೊಡುವುದಿಲ್ಲ. ಈ ಬಜೆಟ್ ಪುಸ್ತಕದಲ್ಲಿ ಮಾತ್ರ ಇರಲಿದೆ. ಸರ್ಕಾರಕ್ಕೆ ಸಾಕಷ್ಟು ಆದಾಯ ತಂದುಕೊಡುವ ಹಲವಾರು ಪ್ರವಾಸಿ ತಾಣಗಳು ಉತ್ತರ ಕರ್ನಾಟಕದಲ್ಲಿದ್ದರೂ ಇಂತಹ ಪ್ರವಾಸಿ ತಾಣಗಳ ಅಭಿವೃದ್ಧಿಯ ಪ್ರಸ್ತಾವವೇ ಇಲ್ಲ ಎಂದು ತಿಳಿಸಿದ್ದಾರೆ.

ಅಭಿವೃದ್ಧಿ ಪರ ಬಜೆಟ್: ಸಂಸದೆ

ಬೆಳಗಾವಿ : ಸಿಎಂ ಸಿದ್ದರಾಮಯ್ಯ ಅವರು ಮಂಡಿಸಿದ ಬಜೆಟ್ ಜನಪರವಾದ ಮತ್ತು ರಾಜ್ಯದ ಅಭಿವೃದ್ಧಿಯ ಬಜೆಟ್ ಆಗಿದೆ ಎಂದು ಸಂಸದೆ ಪ್ರಿಯಂಕಾ ಜಾರಕಿಹೊಳಿ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ಮಾಹಿತಿ ನೀಡಿರುವ ಅವರು, ರಾಜ್ಯದ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ನಾಡಿನ ಜನಪರವಾದ ಈ ಬಜೆಟ್ ನಲ್ಲಿ ಬೆಳಗಾವಿ ಜಿಲ್ಲೆಗೂ ಉತ್ತಮ ಆದ್ಯತೆ ನೀಡಿರುವುದು ಶ್ಲಾಘನೀಯವಾಗಿದೆ. ಸರ್ವರಿಗೂ ಸಮಪಾಲು ಎಂಬಂತೆ ಎಲ್ಲಾ ಕ್ಷೇತ್ರಕ್ಕೂ ಸಿಎಂ ಸಿದ್ದರಾಮಯ್ಯ ಅವರು ಆದ್ಯತೆ ನೀಡಿದ್ದು, ಇದೊಂದು ಉತ್ತಮ ಬಜೆಟ್ ಆಗಿದೆ. ಅಲ್ಲದೇ ಇದೊಂದು ಜನಪರ ಕಾಳಜಿಯ ಬಜೆಟ್ ಆಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.



ಬಜೆಟ್‌ನಲ್ಲಿ ಉತ್ತರ ಕರ್ನಾಟಕಕ್ಕೆ ಅನ್ಯಾಯ



ಯರಗಟ್ಟಿ: ಸಿಎಂ ಸಿದ್ದರಾಮಯ್ಯ ಅವರು ಇಂದು ಮಂಡಿಸಿದ ಬಜೆಟ್ ನಲ್ಲಿ ''ಅಭಿವೃದ್ಧಿ'' ಎಂಬ ಪದದ ಅರ್ಥವನ್ನೇ ಕಾಂಗ್ರೆಸ್ ಸರ್ಕಾರ ಮರೆತಂತಿದೆ. ಕಾಂಗ್ರೆಸ್ ಸರ್ಕಾರದ 2026-27ರ ಬಜೆಟ್ ಕನ್ನಡಿಗರಿಗೆ ಬರಿ ಸಾಲದ ಸುಳಿ ಮತ್ತು ತೆರಿಗೆಯ ಹೊರೆಯನ್ನಷ್ಟೇ ನೀಡಿದೆ. ಈ ಸರ್ಕಾರ ಕರ್ನಾಟಕವನ್ನು ಕಲ್ಯಾಣ ರಾಜ್ಯದ ಬದಲು 'ಸಾಲಗಾರ ರಾಜ್ಯ'ವನ್ನಾಗಿ ಪರಿವರ್ತಿಸಿದೆ. ಅಂಕಿ-ಅಂಶಗಳೇ ಸರ್ಕಾರದ ವೈಫಲ್ಯಕ್ಕೆ ಸ್ಪಷ್ಟ ಕನ್ನಡಿ ಹಿಡಿದಿದೆ. ನನ್ನ ಪ್ರಕಾರ ಈ ಬಜೆಟ್ ಬೆಂಗಳೂರು ಮತ್ತು ಮೈಸೂರು ಸೀಮಿತವಾದ ಬಜೆಟ್ ಹಾಗೂ ಬೆಳಗಾವಿ ಜಿಲ್ಲೆಗೆ ಚೆಂಬೂ ನೀಡಿದೆ. ಎಲ್ಲದಕ್ಕೂ ಕೇಂದ್ರ ಸರ್ಕಾರವನ್ನು ದೂಷಿಸುವುದನ್ನೇ ಕಸುಬು ಮಾಡಿಕೊಂಡಿರುವ ಕಾಂಗ್ರೆಸ್ ಸರ್ಕಾರ, ಮೊದಲು ತನ್ನ ಈ ಎಡಬಿಡಂಗಿ ಆರ್ಥಿಕ ನೀತಿಗಳಿಂದ ರಾಜ್ಯಕ್ಕಾಗುತ್ತಿರುವ ಅನ್ಯಾಯಕ್ಕೆ ಮೊದಲು ಉತ್ತರ ನೀಡಲಿ. ಸಾಲವನ್ನೇ ಸಾಧನೆ ಎಂದು ನಂಬಿರುವ ಈ ಅಭಿವೃದ್ಧಿ ಶೂನ್ಯ ಜನವಿರೋಧಿ ಸರ್ಕಾರಕ್ಕೆ ಜನತೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಅರ್ಜಿ ಆಹ್ವಾನ: ಮಾ.9 ಅಂತಿಮ ದಿನ

ಚಿಕ್ಕೋಡಿ: ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಹಾಗೂ ಡಾ.ಬಾಬು ಜಗಜೀವನರಾಮ್ ಅವರ 119ನೇ ಜಯಂತಿ ಅಂಗವಾಗಿ 2026-27ನೇ ಸಾಲಿನ ಪ್ರಶಸ್ತಿಗಾಗಿ ಸಮಾಜ ಕಲ್ಯಾಣ ಇಲಾಖೆ ಅರ್ಜಿ ಆಹ್ವಾನಿಸಿದೆ. ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡದ ಜನಾಂಗದವರ ಶ್ರೇಯಸ್ಸಿಗಾಗಿ ಪ್ರೋತ್ಸಾಹಿಸಿ, ಶ್ರಮಿಸಿ, ಗಣನೀಯ ಸೇವೆ ಸಲ್ಲಿಸಿದ ಅರ್ಹ ವ್ಯಕ್ತಿಗಳನ್ನು ಗುರುತಿಸಿ ಪ್ರಶಸ್ತಿ ನೀಡಲಾಗುವುದು. ಆಸಕ್ತರು ನಿಗದಿತ ಅರ್ಜಿ ನಮೂನೆಯಲ್ಲಿ ಮಾ.9ರೊಳಗೆ ಅರ್ಜಿಯನ್ನು ಕಚೇರಿ ವಿಳಾಸಕ್ಕೆ ಸಲ್ಲಿಸುವಂತೆ ಚಿಕ್ಕೋಡಿ ತಾಲೂಕು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಅರ್ಚನಾ ಸಾನೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜಾರಾಮ್ ಮಹಾರಾಜರ ಜಯಂತಿ ಆಚರಣೆ

ಸವದತ್ತಿ: ಸುಕ್ಷೇತ್ರ ಗುರುಲಹೊಸೂರಿನ ರಾಜಾರಾಮ ಮಠದಲ್ಲಿ ಸಂತ ಶ್ರೇಷ್ಠ ರಾಜಾರಾಮ್ ಮಹಾರಾಜರ 257 ನೇಯ ಜಯಂತಿ ಉತ್ಸವ ಆಚರಿಸಲಾಯಿತು.

ಗ್ರಂಥರಾಜ ಧಾನೇಶ್ವರಿ ಪಾರಾಯಣ ಗುರು ಬಾಬಾ ಸಾಹೇಬ್ ಅಜರೇಕರ ಪಡ ಧಾರವಾಡ ವಾರಕರಿ ಮಂಡಳಿಯವರು ಗುರು ಹರಿಬಾವೂ ಬೋರಾಟೇ ಸಾನ್ನಿಧ್ಯದಲ್ಲಿ ನೆರವೇರಿತು.

ಸಂತ ಶ್ರೇಷ್ಠ ರಾಜಾರಾಮ್ ಮಹಾರಾಜರ ತೊಟ್ಟಿಲು ಉತ್ಸವ ಪೂಜ್ಯರ ಹಾಗೂ ಸಂತಮಾಂತರ ಸಮ್ಮುಖದಲ್ಲಿ ನಡೆಯಿತು.

ಮಠದ ಪೀಠಾಧಿಕಾರಿಗಳಾದ ಗಂಗಾಧರ ದಿಕ್ಷಿತರು, ಸಂತ ಶ್ರೇಷ್ಠ ರಾಜಾರಾಮ್ ಮಹಾರಾಜರ ಕುರಿತು ಪ್ರವಚನ ನೀಡಿದರು.



ತೊಟ್ಟಿಲು ಉತ್ಸವ ಕಾರ್ಯಕ್ರಮದಲ್ಲಿ ಚಿದಂಬರೇಶ್ವರ ದೇವಸ್ಥಾನದ ದಂಡಪಾಣಿ ದೀಕ್ಷಿತರು, ಪ್ರಸನ್ನ ದೀಕ್ಷಿತರು, ಬ್ರಹ್ಮಾನಂದ ಆಶ್ರಮದ ಶಿವಾನಂದ ಮಹಾಸ್ವಾಮಿಗಳು, ವಿನಯ್ ದೀಕ್ಷಿತರು , ಭಾಸ್ಕರ ದೀಕ್ಷಿತರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳ ಮಠಾಧೀಶರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಕುಡಚಿ: ಗ್ರಾಮೀಣ ಭಾಗದ ಟಿಕನಹಾಳ ತೋಟದ ಅಂಗನವಾಡಿ ಕೇಂದ್ರ 16ರಲ್ಲಿ ಮಕ್ಕಳಿಗೆ ಹಮ್ಮಿಕೊಂಡಿದ್ದ ಮನೋರಂಜನಾ ಆಟಗಳಲ್ಲಿ ಸಾಧನೆ ಮಾಡಿದ ಮಕ್ಕಳಿಗೆ ಸಮಾಜ ಸೇವಕ ಸಲ್ಮಾನ್ ಡಾಂಗೆ ಕಲಿಕಾ ಸಾಮಗ್ರಿ ವಿತರಣೆ ಮಾಡಿದರು. ಈ ಸಂದರ್ಭದಲ್ಲಿ ಅಂಗನವಾಡಿ ಕಾರ್ಯಕರ್ತೆ ರೇಣುಕಾ ಮದಲೆ, ವಿದ್ಯಾರ್ಥಿಗಳು, ಪಾಲಕರು ಇತರರು ಉಪಸ್ಥಿತರಿದ್ದರು.

ದೇಶದ ಆರ್ಥಿಕತೆಗೆ ಲಾರಿ ಚಾಲಕರ ಕೊಡುಗೆ ಅಪಾರ

ಯಮಕನಮರಡಿ: ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಲಾರಿ ಚಾಲಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ದೇಶದ ವಿವಿಧ ಭಾಗಗಳಿಗೆ ಅಗತ್ಯವಾದ ಆಹಾರ ಪದಾರ್ಥಗಳು, ಕೈಗಾರಿಕಾ ವಸ್ತುಗಳು, ಔಷಧಿಗಳು ಮತ್ತು ಇತರೆ ಸಾಮಗ್ರಿಗಳನ್ನು ಸುರಕ್ಷಿತವಾಗಿ ಮತ್ತು ಸಮಯಕ್ಕೆ ಸರಿಯಾಗಿ ತಲುಪಿಸುವ ಕೆಲಸವನ್ನು ಲಾರಿ ಚಾಲಕರು ನಿರಂತರವಾಗಿ ಮಾಡುತ್ತಿದ್ದಾರೆ. ಅವರ ಪರಿಶ್ರಮದಿಂದ ದೇಶದ ವ್ಯಾಪಾರ, ಕೈಗಾರಿಕೆ ಮತ್ತು ಕೃಷಿ ಕ್ಷೇತ್ರಗಳು ಸರಾಗವಾಗಿ ನಡೆಯುತ್ತಿವೆ ಎಂದು ಅವರು ತಿಳಿಸಿ, ಅವರ ಕಲ್ಯಾಣ ಮತ್ತು ಆರೋಗ್ಯದ ಬಗ್ಗೆ ವಿಶೇಷ ಗಮನ ಹರಿಸುವುದು ಅಗತ್ಯವೆಂದು ಜಿಲ್ಲಾ ಪಂಚಾಯತ್ ಬೆಳಗಾವಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ ಅಭಿಪ್ರಾಯಪಟ್ಟರು.

ಹತ್ತರಗಿ ಟೋಲ್ ಪ್ಲಾಜಾ ಸಮೀಪ ಮಹಿಳಾ ಕಲ್ಯಾಣ ಸಂಸ್ಥೆ ಬೆಳಗಾವಿ ವತಿಯಿಂದ ಲಾರಿ ಚಾಲಕರ ಅಭ್ಯುದಯಕ್ಕಾಗಿ ಆಯೋಜಿಸಿದ್ದ ಅಭಯ ಸಾರಥಿ ಯೋಜನೆಯ ಆರೋಗ್ಯ ಶಿಬಿರಕ್ಕೆ ಭೇಟಿ ನೀಡಿ ಅವರು ಮಾತನಾಡಿದರು.

ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ, ಫೋರ್ಸೈಟ್ ಫೌಂಡೇಶನ್ ಹಾಗೂ ಐಐಟಿ ನವದೆಹಲಿ ಇವರ ಸಹಯೋಗದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.ಕಾರ್ಯಕ್ರಮಕ್ಕೆ ವಿಶೇಷ ಅತಿಥಿಯಾಗಿ ಬೆಳಗಾವಿಯ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್, ಐಪಿಎಸ್ ಹಾಗೂ ಪ್ರೊಬೇಷನರಿ ಐಪಿಎಸ್ ಅಧಿಕಾರಿ ಭಾನುಪ್ರಕಾಶ್ ಅವರು ಭೇಟಿ ನೀಡಿ ಶಿಬಿರದ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ಅವರು ಸಂಸ್ಥೆಯ ಸಮಾಜಮುಖಿ ಕಾರ್ಯವನ್ನು ಮೆಚ್ಚುಗೆ ವ್ಯಕ್ತಪಡಿಸಿದರು.



ಲಾರಿ ಚಾಲಕರ ಆರೋಗ್ಯ ತಪಾಸಣೆ, ಜಾಗೃತಿ ಮತ್ತು ವಿವಿಧ ಸೌಲಭ್ಯಗಳನ್ನು ಒದಗಿಸುವ ಮೂಲಕ ಅವರ ಜೀವನಮಟ್ಟವನ್ನು ಸುಧಾರಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ ಎಂದು ಸಂಯೋಜಕಿ ಸುರೇಖಾ ಪಾಟೀಲ ತಿಳಿಸಿದರು.

ಯುವಕರಲ್ಲಿ ಶಿಸ್ತು ಮೂಡಿಸುವ ಸರಳ ಮಾರ್ಗ ಕ್ರೀಡೆ

ಹಲ್ಯಾಳ : ಗ್ರಾಮದಲ್ಲಿ ಕ್ರೀಡಾಭಿಮಾನ ಬೆಳೆಯಲಿ ಎನ್ನುವ ಸದುದ್ದೇಶ ಹೊಂದಿರುವ ಹಲ್ಯಾಳ ಗ್ರಾಮದ ಕ್ರೀಡಾಭಿಮಾನಿಗಳು ಉತ್ಸಾಹಿ ಕ್ರೀಡಾ ಪಟುಗಳಿಗೆ ಪ್ರೋತ್ಸಾಹಿಸಲು ಮಿನಿ ಪ್ರೊ ಕಬ್ಬಡ್ಡಿಯನ್ನು ಆಯೋಜಿಸಿದ್ದರು. ಆರು ತಂಡಗಳು ಎಲ್ಲರನ್ನು ಬೆರಗು ಗೊಳಿಸುವಂತೆ ಆಟವನ್ನು ಆಡಿದರು.

ಕಬಡ್ಡಿ ಕೇವಲ ಆಟವಲ್ಲ, ಇದು ಆತ್ಮವಿಶ್ವಾಸವನ್ನು ಹೆಚ್ಚಿಸುವ ಮತ್ತು ಶಿಸ್ತನ್ನು ಬೆಳೆಸುವ ಒಂದು ಸರಳ ಮಾರ್ಗವಾಗಿದೆ. ಪ್ರಸ್ತುತ ಎಲ್ಲೆಂದರಲ್ಲಿ ಯುವಕರೆಲ್ಲ ದುಶ್ಚಟ್ಟಗಳಿಗೆ ಒಳಗಾಗುತ್ತಿದ್ದಾರೆ. ಪ್ರತಿ ಗ್ರಾಮದಲ್ಲಿ ಈ ರೀತಿ ಯುವಕರ ಅಭಿರುಚಿಗೆ ಅನುಗುಣವಾಗಿ ಕ್ರೀಡೆಗಳನ್ನು ಆಯೋಜಿಸುವುದರಿಂದ ಯುವಕರಲ್ಲಿ ಕ್ರೀಡೆ ಬಗ್ಗೆ ಆಸಕ್ತಿ ಹೆಚ್ಚುತ್ತದೆ ಎಂದು ವೈದ್ಯರಾದ

ಡಾ. ಶಿವಬಸು ನಾಯಿಕ ಹೇಳಿದರು. ನಂತರ ಅವರು ಪ್ರಥಮ ಸ್ಥಾನ ಪಡೆದ ವಿಜೇತ ತಂಡಬೆಂಗಾಲ ವಾರಿಯರ್ಸ್ ಮತ್ತು ದ್ವಿತೀಯ ಸ್ಥಾನ ಪಡೆದ ಯು ಮುಂಬಾ ತಂಡಗಳಿಗೆ ಟ್ರೋಫಿಗಳನ್ನು ನೀಡಿದರು. ಈ ವೇಳೆ ವಿಠ್ಠಲ್ ಕಾಂಬಳೆ,ಶಶಿಕಾಂತ್ ದಳವಾಯಿ,ಕುಶಾಲ ಬನಸೋಡೆ,ರವಿ ಕೋಳಿ,ಮಹಾಂತೇಶ್ ಇಂಗಳಿ,ಪ್ರಭು ಬಾಗಿ ಶಿವು ನಾಯಿಕ್,ಅಭಿಶೇಕ್ ಬನಸೋಡೆ,ವಿಕಾಸ ಬಾಗಿ,ಅಣ್ಣಪ್ಪ ಚಿಂಚಲಿ ಮತ್ತು ಇತರರಿದ್ದರು.



ನೀರಿನ ಗುಣಮಟ್ಟ ಪರೀಕ್ಷೆ ಕಡ್ಡಾಯಗೊಳಿಸಿ

ಚನ್ನಮ್ಮನ ಕಿತ್ತೂರು: ಬೇಸಿಗೆ ಅವಧಿಯಲ್ಲಿ ನೀರಿನ ಗುಣಮಟ್ಟದ ಪರೀಕ್ಷೆಯನ್ನು ಕಡ್ಡಾಯಗೊಳಿಸಿ ಕುಡಿಯುವ ನೀರಿನ ಸಮಸ್ಯೆಯಾದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕೆಂದು ತಾಲೂಕು ಪಂಚಾಯತಿ ಇಒ ನಿಂಗಪ್ಪ ಮಸಳಿ ಹೇಳಿದರು.



ತಾಲೂಕು ಪಂಚಾಯತಿ ಚನ್ನಮ್ಮನ ಕಿತ್ತೂರು ಸಭಾ ಭವನದಲ್ಲಿ ಗ್ರಾಮ ಪಂಚಾಯತಿ ಆಡಳಿತ ಅಧಿಕಾರಿಗಳು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸ್ವಚ್ಚತೆಯನ್ನು ಕಡ್ಡಾಯವಾಗಿ ಕಾಪಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಮುಂದಿನ ಕರ ವಸೂಲಾತಿ ಅಭಿಯಾನದಲ್ಲಿ ಶೇ.100ರಷ್ಟು ಸಾಧನೆ ಮಾಡಲು ಅಧಿಕಾರಿಗಳು ವಿಶೇಷ ಗಮನ ಹರಿಸಬೇಕು ಎಂದು ಸೂಚಿಸಿದ ಅವರು, ವಸತಿ ಯೋಜನೆ ಹಾಗೂ ಸ್ವಚ್ಚ ಭಾರತ ಮಿಷನ್ (ಎಸ್‌ಬಿಎಂ) ಯೋಜನೆಯಡಿ ಬಾಕಿ ಉಳಿದಿರುವ ಜಿಯೋ-ಟ್ಯಾಗಿಂಗ್ ಕಾರ್ಯಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಸೂಚಿಸಿದರು. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಆದ್ಯತೆಯಾಗಿರಬೇಕು ಎಂದು ತಿಳಿಸಿದರು. 15ನೇ ಹಣಕಾಸು ಆಯೋಗ ಹಾಗೂ ನಿಧಿ-2ರ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ಮಾದರಿ ಕಾಮಗಾರಿಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಿದರು.ಈ ಸಂದರ್ಭದಲ್ಲಿ ತಾಪಂ ಸಹಾಯಕ ನಿರ್ದೇಶಕರು (ಗ್ರಾ.ಉ) ಮಹಮ್ಮದ್ ಗೌಸ್ ರಿಸಲ್ದಾರ್, ಸಹಾಯಕ ನಿರ್ದೇಶಕರು (ಪಂ.ರಾ) ವಿಜಯ್ ಪಾಟೀಲ್, ಯೋಜನಾಧಿಕಾರಿ ಗೌಡಪ್ಪ ಗಿರಿಮಲ್ಲನವರ, ಗ್ರಾಮ ಪಂಚಾಯತಿ ಅಧಿಕಾರಿಗಳು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ವಿಷಯ ನಿರ್ವಾಹಕರು, ಎಂಐಎಸ್ ಸಂಯೋಜಕರು, ಐಇಸಿ ಸಂಯೋಜಕರು, ತಾಪಂ ಸಿಬ್ಬಂದಿ

ವಿಜೃಂಭಣೆಯ ಕುಂಭೋತ್ಸವ

ಚಿಕ್ಕೋಡಿ: ತಾಲೂಕಿನ ಯಡೂರ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶುಕ್ರವಾರ ಮಹಾಕುಂಭಾಭಿಷೇಕ ಮಹೋತ್ಸವ ಅತ್ಯಂತ ವೈಭವಹಾಗೂ ಧಾರ್ಮಿಕ ಸಂಪ್ರದಾಯಗಳೊಂದಿಗೆ ನೆರವೇರಿತು. ಕೃಷ್ಣಾ ನದಿಯಿಂದ ಆರಂಭಗೊಂಡ ಕುಂಭಮೇಳದಲ್ಲಿ ಸಹಸ್ರಾರು ಮಹಿಳೆಯರು ಹಸಿರು, ಕೆಂಪು, ಬಿಳಿ, ನೀಲಿ ಮತ್ತು ಹಳದಿ ಬಣ್ಣದ ಸೀರೆಗಳನ್ನು ಉಟ್ಟು ತಲೆಯ ಮೇಲೆ ಕುಂಭ ಹೊತ್ತು ಸಾಗಿದ ದೃಶ್ಯ ಕಂಡು ಬಂತು.

ಕುಂಭ ಹೊತ್ತು ಮಹಿಳೆಯರು ಸರದಿ ಸಾಲಿನಲ್ಲಿ ಸಾಗುತ್ತಿದ್ದರೆ, ವೀರಗಾಸೆ ಕುಣಿತ, ತಾಳ-ಮದ್ದಳೆ ವಾದ್ಯ ತಂಡ ಮೆರವಣಿಗೆಯಲ್ಲಿ ಓಂ ನಮಃ ಶಿವಾಯ ಎಂಬ ಮಂತ್ರ ಪಠಿಸುತ್ತಾ ಸಹಸ್ರ ಸಹಸ್ರ ಜನರು ವೀರಭದ್ರ ದೇವಸ್ಥಾನದತ್ತ ಹೆಜ್ಜೆ ಹಾಕಿದರು. ಬಿಸಿಲನ್ನೂ ಲೆಕ್ಕಿಸದೇ ಹೊರಟ ಕುಂಭ ಹೊತ್ತ ಮಹಿಳೆಯರು ದೇವಸ್ಥಾನದ ಕರ್ತೃ ಗದ್ದುಗೆಗೆ ಪ್ರದಕ್ಷಿಣೆ ಹಾಕಿ, ನಮಿಸಿದರು.



ದೇವಸ್ಥಾನದ ಪೂರ್ವ, ದಕ್ಷಿಣ, ಉತ್ತರ ಹಾಗೂ ಮೂಲಲಿಂಗ ರಾಜಗೋಪುರಗಳ ಕಲಶಗಳಿಗೆ ಕಾಶಿ ಪೀಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಉಜ್ಜಯಿನಿಯ ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಶ್ರೀಶೈಲ ಪೀಠದ ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಕಾಶಿ ಪೀಠದ ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರು ನಾಲ್ಕು ದಿಕ್ಕಿನಲ್ಲಿರುವ ರಾಜಗೋಪುರಗಳಿಗೆ ಮಹಾಕುಂಭಾಭಿಷೇಕವನ್ನು ನೆರವೇರಿಸಿದರು.

ಘನತ್ಯಾಜ್ಯ ವಿಲೇವಾರಿ ಘಟಕ ಆರಂಭಕ್ಕೆ ವಿರೋಧ

ಕಾಗವಾಡ: ತಾಲೂಕಿನ ಐನಾಪೂರ ಪಟ್ಟಣದ ವ್ಯಾಪ್ತಿಯಲ್ಲಿ ಮಂಗಸೂಳಿ ರಸ್ತೆಗೆ ಹೊಂದಿಕೊಂಡ ಮುಲ್ಲಾನ ಮಡ್ಡಿಯ ಸರ್ವೇ ನಂ.131ರಲ್ಲಿ 3 ಎಕರೆ ಸರ್ಕಾರಿ ಜಮೀನನ್ನು ಕಾಗವಾಡ ತಾಲೂಕಿನ ಶೇಡಬಾಳ ಪಟ್ಟಣ ಪಂಚಾಯತಿಯ ಘನ ತ್ಯಾಜ್ಯ ವಿಲೇವಾರಿ ಘಟಕವನ್ನು ಪ್ರಾರಂಭಿಸುತ್ತಿದ್ದು, ಇದಕ್ಕೆ ಐನಾಪೂರ ಪಟ್ಟಣ ಸಾರ್ವಜನಿಕರಿಂದ ವ್ಯಾಪಕ ವಿರೋಧ ವ್ಯಕ್ತವಾಗಿದೆ.

ಮಾ.6ರಂದು ಶುಕ್ರವಾರ ಕಾಮಗಾರಿ ಆರಂಭಿಸಲು ಶೇಡಬಾಳ ಪಟ್ಟಣ ಪಂಚಾಯತಿಯ ಅಧಿಕಾರಿಗಳು ಆಗಮಿಸಿದಾಗ ಐನಾಪೂರ ಮುಲ್ಲಾನ ಮಡ್ಡಿಯ ಸ್ಥಳೀಯ ರೈತರು ಹಾಗೂ ಪಟ್ಟಣದ ನೂರಾರು ಜನರು ಕಾಮಗಾರಿಗೆ ತಡೆವೊಡ್ಡಿ ಪ್ರತಿಭಟನೆ ಮಾಡಿದರು.

ಇಲ್ಲಿನ ತೋಟದ ವಸತಿ ಜನರಿಗೆ ತುಂಬಾ ದುರ್ವಾಸನೆ ಬರುತ್ತಿದ್ದು, ನೊಣ ಹಾಗೂ ಸೊಳ್ಳೆಗಳ ಕಾಟ ಬೀದಿ ನಾಯಿಗಳು ಹೆಚ್ಚಾಗಿದ್ದು ಚಿಕ್ಕ ಮಕ್ಕಳಿಗೆ ಹಾಗೂ ಹಿರಿಯರಿಗೆ ಆರೋಗ್ಯ ಮೇಲೆ ತುಂಬಾ ದುಷ್ಪರಿಣಾಮ ಬೀರುತ್ತಿದೆ.

ಸದರಿ ಶೇಡಬಾಳ ಪಟ್ಟಣದ ಘನ ತ್ಯಾಜ್ಯ ವಿಲೇವಾರಿ ಘಟಕವನ್ನು ರದ್ದು ಮಾಡಿ ಬೇರೆಡೆ ಸ್ಥಳಾಂತಿರಸಬೇಕು, ಒಂದು ವೇಳೆ ಮೊಂಡುತನದಿಂದ ಕಾಮಗಾರಿ ಪ್ರಾರಂಭಿಸಿದರೆ ಐನಾಪೂರ ಪಟ್ಟಣದ ಅಂಗಡಿ ಮುಂಗಟ್ಟುಗಳನ್ನು ಬಂದು ಮಾಡಿ ರಸ್ತೆ ತಡೆ ಮಾಡಲಾಗುವುದು ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸಿದ್ದೇಶ್ವರ ಪಿಕೆಪಿಎಸ್ ಅಧ್ಯಕ್ಷ ಪ್ರವೀಣ ಗಾಣಿಗೇರ, ಐನಾಪೂರ ಪಿ.ಕೆ.ಪಿ.ಎಸ ಅಧ್ಯಕ್ಷ ತಮ್ಮಣ್ಣಾ ಪಾರಶೆಟ್ಟಿ, ಪ.ಪಂ ಸದಸ್ಯರಾದ ಸಂಜು ಭಿರಡಿ, ದಾದಾ ಜಂತೆನ್ನವರ,ನಿಸಾರ ಮುಲ್ಲಾ, ಸಹದೇವ ನಾಯಿಕ, ನಿಂಗಪ್ಪ ಕುಡವಕ್ಕಲಗಿ, ಅಜೀತ ಅಲಗೊನ್ನವರ, ರಾವಸಾಬ ಅಲಗೋನ್ನರ. ಮಲಕಾರಿ ಕುಡವಕ್ಕಲಗಿ, ರಾಮು ಸವದತ್ತಿ, ಮಕಬುಲ್ ಮುಲ್ಲಾ ಅಡಿವೆಪ್ಪಾ ಅಕಿವಾಟೆ,ಮುರಿಗೆಪ್ಪಾ ಬೆಳಕೂಡ,ಶೇಡಬಾಳ ಪಟ್ಟಣ ಪಂಚಾಯತಯ ಮುಖ್ಯಾಧಿಕಾರಿ ಕೆ.ಕೆ. ಗಾವಡೆ ಇತರ ಇದ್ದರು.



ಕಿರುಸುದ್ದಿ

ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಮಂಡಿಸಿದ 2026-27ನೇ ಸಾಲಿನ ರಾಜ್ಯ ಬಜೆಟ್ ಸಮತೋಲನ ಹಾಗೂ ಜನಪರ ಬಜೆಟ್ ಆಗಿದೆ. ಈ ಬಜೆಟ್‌ನಲ್ಲಿ ಸಾಮಾಜಿಕ ಕಲ್ಯಾಣ, ಕೃಷಿ ಅಭಿವೃದ್ಧಿ, ಶಿಕ್ಷಣ ಹಾಗೂ ಮೂಲಸೌಕರ್ಯ ಕ್ಷೇತ್ರಗಳಿಗೆ ಹೆಚ್ಚಿನ ಆದ್ಯತೆ ನೀಡಿರುವುದು ಶ್ಲಾಘನೀಯ.ರೈತರು, ಮಹಿಳೆಯರು, ವಿದ್ಯಾರ್ಥಿಗಳು ಹಾಗೂ ಯುವಕರ ಕಲ್ಯಾಣವನ್ನು ಗಮನದಲ್ಲಿಟ್ಟುಕೊಂಡು ಹಲವು ಯೋಜನೆಗಳನ್ನು ಘೋಷಿಸಿರುವುದು ಸಂತೋಷದ ಸಂಗತಿ. ರಾಜ್ಯದ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ರೂಪಿಸಿದ ಈ ಬಜೆಟ್ ಕರ್ನಾಟಕವನ್ನು ಮತ್ತಷ್ಟು ಪ್ರಗತಿಯ ದಿಕ್ಕಿನಲ್ಲಿ ಕೊಂಡೊಯ್ಯುವ ವಿಶ್ವಾಸವಿದೆ.

■ ಗಣೇಶ ಹುಕ್ಕೇರಿ, ಶಾಸಕರು, ಚಿಕ್ಕೋಡಿ-ಸದಲಗಾ

202627ನೇ ಸಾಲಿನ ರಾಜ್ಯ ಬಜೆಟ್ ರಾಜ್ಯದ ಅಭಿವೃದ್ಧಿ ಹಾಗೂ ಜನಕಲ್ಯಾಣವನ್ನು ಸಮನ್ವಯಗೊಳಿಸಿದ ದೂರದೃಷ್ಟಿಯ ಬಜೆಟ್ ಆಗಿದೆ. ಸರ್ಕಾರದ ಗ್ಯಾರಂಟಿ ಯೋಜನೆಗಳಿಗೆ ಆದ್ಯತೆ ನೀಡುವುದರ ಜೊತೆಗೆ ಕೃಷಿ, ಶಿಕ್ಷಣ, ಮೂಲಸೌಕರ್ಯ ಹಾಗೂ ಕೈಗಾರಿಕಾ ಕ್ಷೇತ್ರಗಳಿಗೆ ನೀಡಿರುವ ಉತ್ತೇಜನ ರಾಜ್ಯದ ಸಮಗ್ರ ಪ್ರಗತಿಗೆ ಸಹಾಯಕವಾಗಲಿದೆ. ವಿಶೇಷವಾಗಿ ಬಡವರು, ರೈತರು, ಮಹಿಳೆಯರು ಮತ್ತು ಯುವಕರ ಜೀವನಮಟ್ಟವನ್ನು ಸುಧಾರಿಸುವ ದಿಟ್ಟ ಸಂಕಲ್ಪ ಈ ಬಜೆಟ್ನಲ್ಲಿ ಕಾಣಿಸುತ್ತದೆ. ಜನಸಾಮಾನ್ಯರ ನಿರೀಕ್ಷೆಗಳಿಗೆ ಸ್ಪಂದಿಸುವ ಈ ಬಜೆಟ್ ರಾಜ್ಯದ ಆರ್ಥಿಕ ಬಲವರ್ಧನೆಗೆ ಹಾಗೂ ಅಭಿವೃದ್ಧಿಯ ಹೊಸ ದಿಕ್ಕುಗಳನ್ನು ತೆರೆದಿಡುವಲ್ಲಿ ಮಹತ್ವದ ಪಾತ್ರ ವಹಿಸಲಿದೆ.

■ ಪ್ರಕಾಶ ಹುಕ್ಕೇರಿ, ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ

ಮುಖ್ಯಮಂತ್ರಿ ಸಿದ್ಧರಾಮಯ್ಯ ಮಂಡಿಸಿರುವ ರಾಜ್ಯ ಬಜೆಟ್ ದಿಕ್ಕು ದೆಸೆ ಇಲ್ಲದ ಪ್ರಗತಿ ಶೂನ್ಯ ಬಜೆಟ್ ಆಗಿದ್ದು, ಸಾಲದ ಶೂಲಕ್ಕೆ ರಾಜ್ಯವನ್ನು ತೆಗೆದುಕೊಂಡು ಹೋಗುವ ಬಜೆಟ್ ಇದಾಗಿದೆ, ಇದರಿಂದ ರಾಜ್ಯದ ಹಣಕಾಸಿನ ಮೇಲೆ ಬಹಳ ದೊಡ್ಡ ಪರಿಣಾಮ ಬೀರಲಿದೆ. ಹೊಸ ತೆರಿಗೆ ರಾಜ್ಯವನ್ನು ಆರ್ಥಿಕವಾಗಿ 15 ವರ್ಷ ಹಿಂದೆ ತೆಗೆದುಕೊಂಡು ಹೋಗುತ್ತದೆ. ಇದು ನಿರಾಸೆದಾಯಕ ಬಜೆಟ್ ಆಗಿದೆ. 17 ಬಾರಿ ಬಜೆಟ್ ಮಂಡನೆ ಮಾಡಿರುವ ಸಿಎಂರಿಂದ ಇದನ್ನು ನಿರೀಕ್ಷೆ ಮಾಡಿರಲಿಲ್ಲ.

■ ಶಶಿಕಲಾ ಜೊಲ್ಲೆ, ಶಾಸಕರು, ನಿಪ್ಪಾಣಿ

ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಕೊಡುತ್ತೇವೆ ಎಂದು ಹೇಳಿ ಸರ್ವರಿಗೂ ತೆರಿಗೆ, ಸರ್ವರಿಗೂ ಸಾಲ ಎಂಬ ಸ್ಥಿತಿ ನಿರ್ಮಿಸಿದೆ.ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ 17ನೇ ಬಜೆಟ್ 4.48 ಲಕ್ಷ ಕೋಟಿ ರೂ. ಮೊತ್ತದ ಬೃಹತ್ ಗಾತ್ರದ ಬಜೆಟ್ ಹೆಗ್ಗಳಿಕೆಗಷ್ಟೇ ಸೀಮಿತ. ಅಭಿವೃದ್ಧಿ ಯೋಜನೆಗಳಿಗೆ ಹಣ ಮೀಸಲಿಡುವ ಬದಲು ಸಾಲದ ಬಲೆಗೆ ರಾಜ್ಯವನ್ನು ತಳ್ಳುತ್ತಿರುವುದು ಈ ಬಜೆಟ್ ನ ಕಹಿಸತ್ಯ.

■ ಅಣ್ಣಾಸಾಹೇಬ ಜೊಲ್ಲೆ, ಅಧ್ಯಕ್ಷರು, ಬಿಡಿಸಿಸಿ ಬ್ಯಾಂಕ್, ಬೆಳಗಾವಿ

ಇಂದಿನಿಂದ ಉರುಸ್

◆ **ಕೊಕಟನೂರ:** ಗ್ರಾಮದಲ್ಲಿ ಯಮನೂರಪ್ಪ ಉರುಸ್ ಹಾಗೂ ಜಾತ್ರಾ ಮಹೋತ್ಸವ ನಿಮಿತ್ತ ಮಾ.7ರಂದು ವಿವಿಧ ಕಾರ್ಯಕ್ರಮ ಆಯೋಜಿಸಲಾಗಿದೆ. ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆವರೆಗೆ ವಿವಿಧ ಮನರಂಜನೆ ಕಾರ್ಯಕ್ರಮಗಳು, ಸಂಜೆ 5 ಗಂಟೆಗೆ ದರ್ಗಾಕ್ಕೆ ದೇವರ ಗಲೀಫ ಹಾಗೂ ಗಂಧ ತರಲಾಗುವುದು. ರಾತ್ರಿ 9 ಗಂಟೆಗೆ ರೇಣುಕಾದೇವಿ ಬಯಲಾಟ ನಡೆಯಲಿದೆ. ಮಾ.8ರಂದು ಬೆಳಿಗ್ಗೆ 10 ಗಂಟೆಗೆ ದರ್ಗಾಕ್ಕೆ ಗಲೀಫ ಏರಿಸಲಾಗುವುದು, ಮಧ್ಯಾಹ್ನ ಭಕ್ತಾದಿಗಳಿಗೆ ಅನ್ನಪ್ರಸಾದ, ರಾತ್ರಿ ಗಂಟೆಗೆ ಸೋಲಾಪುರದ ಸಿದ್ದರಾಮೇಶ್ವರ ನಾಟ್ಯ ಸಂಘ ಕಲಾವಿದರಿಂದ ಸೊಕ್ಕಿನ ಸೋಸೆ ನಾಟಕ ಪ್ರದರ್ಶನಗೊಳ್ಳಲಿದೆ. ಮುಖಂಡರಾದ ಚಿದಾನಂದ ಸವದಿ, ಸಿದ್ದಪ್ಪ ಮುದಕಣ್ಣವರ ಉದ್ಘಾಟಿಸುವರು, ಕೆಪಿಸಿಸಿ ಸದಸ್ಯ ಶ್ಯಾಮರಾವ್ ಪೂಜಾರಿ ಅಧ್ಯಕ್ಷತೆ ವಹಿಸುವರು, ಮುಖ್ಯ ಅತಿಥಿಗಳಾಗಿ ಜಿಪಂ ಮಾಜಿ ಸದಸ್ಯ ಆಪ್ಪಾಸಾಬ ಆವತಾಡೆ, ಮುಖಂಡರಾದ ಬಾಳಾಸಾಬ ಪೂಜಾರಿ, ವಿಶಾಲ ದೇಸಾಯಿ, ಮಹಾವೀರ ಹಳಕಿ, ವಿನಾಯಕ ಬಾಗಡಿ, ಅಣ್ಣಪ್ಪಾ ಖೋತ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ಕಮಿಟಿ ಸದಸ್ಯ ಹಣಮಂತ ಬಾಗಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ರಾಯಬಾಗ: ಕೆ.ಎಲ್.ಇ ಸಂಸ್ಥೆಯ ಮಲಗೌಡ ಪಾಟೀಲ ವಾಣಿಜ್ಯ ಮಹಾವಿದ್ಯಾಲಯ ಹಾಗೂ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ಜರುಗಿದ 2025-26ನೇ ಸಾಲಿನ ಏಕವಲಯ ಪುರುಷ ಹಾಗೂ ಮಹಿಳೆಯರ ಹ್ಯಾಂಡ್ಬಾಲ್ ಪಂದ್ಯಾವಳಿ ಮತ್ತು ವಿಶ್ವವಿದ್ಯಾಲಯ ತಂಡದ ಆಯ್ಕೆ ಪ್ರಕ್ರಿಯೆಯು ಅತ್ಯಂತ ಯಶಸ್ವಿಯಾಗಿ ಮುಕ್ತಾಯಗೊಂಡಿತು.

ಸಮಾನತೆ ಸಾರಿದ ಡಾ.ಅಂಬೇಡ್ಕರ್

◆ **ಚಿಕ್ಕೋಡಿ:** ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್ ಅವರು ಪ್ರತಿಯೊಬ್ಬರೂ ಗೌರವಯುತ ಜೀವನ ಸಾಗಿಸಲು ಸಂವಿಧಾನ ಮಾರ್ಗ ಹಾಕಿಕೊಟ್ಟಂತ ಮಹನೀಯರು. ಸಮಾಜದಲ್ಲಿ ಸಮಾನತೆಯ ಜೀವನ ಸಾಗಿಸಲು ಮೇಲು ಕೀಳು ಭಾವನೆ ತೊಡೆದು ಸರ್ವರಿಗೂ ಸಮಾನ ಸ್ಥಾನ ದೊರಕಿಸಿದ್ದಾರೆ ಎಂದು ಚಿಕ್ಕೋಡಿ ಉಪವಿಭಾಗಾಧಿಕಾರಿ ಸುಭಾಷ ಸಂಪಗಾವಿ ಹೇಳಿದರು. ಪಟ್ಟಣದ ಐ.ಎಂ.ಎ ಸಭಾಭವನದಲ್ಲಿ ಜಿಲ್ಲಾಡಳಿತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಮಹಾನಗರ ಪಾಲಿಕೆ ಸಹಯೋಗದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಭೀಮಗಾಯನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ದಲಿತ ಮುಖಂಡ ಅಶೋಕ ಭಂಡಾರಕರ ಮಾತನಾಡಿದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವಾರ್ತಾ ಸಹಾಯಕ ವಿಜಯಕುಮಾರ ಬೆಟಗೇರಿ ಅವರು ಡಾ.ಅಂಬೇಡ್ಕರ್ ಅವರ ವಿಚಾರಧಾರೆಗಳ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ವಸತಿ ನಿಲಯ ಮೇಲ್ವಿಚಾರಕ ಸಂಜಯ ದೇಸಾಯಿ ಸಂವಿಧಾನ ಪೀಠಿಕೆ ಬೋಧಿಸಿದರು. ಭೀಮಗಾಯನ ಕಾರ್ಯಕ್ರಮವನ್ನು ಚಿಕ್ಕಬಳ್ಳಾಪುರದ ಸಿದ್ಧಾರ್ಥ ಯುವ ಕ್ರೀಡಾ ಸಾಂಸ್ಕೃತಿಕ ಸಂಘವು ಪ್ರಸ್ತುತಪಡಿಸಿತು. ಈ ಸಂದರ್ಭದಲ್ಲಿ ಚಿಕ್ಕೋಡಿ ತಹಶೀಲ್ದಾರ್ ರಾಜೇಶ ಬುರ್ಲಿ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ ಅರ್ಚನಾ ಸಾನೆ, ಸಿಡಿಪಿಒ ಸಂತೋಷ ಕಾಂಬಳೆ, ಸಮಾಜದ ಮುಖಂಡರಾದ ಸುದರ್ಶನ ತಮ್ಮಣ್ಣವರ, ನಿರಂಜನ ಕಾಂಬಳೆ, ಭೀಮರಾವ ನಾಡಕರ್ಣಿ, ಬಾಬುರಾವ ಘಟ್ಟಿ, ರಾಜಕುಮಾರ ಬಾಳಪ್ಪಗೋಳ, ಭರತ ಕಲಾಚಂದ್ರ ಮುಂತಾದವರು ಇದ್ದರು.



ಚಿಕ್ಕೋಡಿ: ಪಟ್ಟಣದ ಐ.ಎಂ.ಎ ಸಭಾಭವನದಲ್ಲಿ ಜಿಲ್ಲಾಡಳಿತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಮಹಾನಗರ ಪಾಲಿಕೆ ಸಹಯೋಗದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಭೀಮಗಾಯನ ಕಾರ್ಯಕ್ರಮವನ್ನು ಚಿಕ್ಕೋಡಿ ಉಪವಿಭಾಗಾಧಿಕಾರಿ ಸುಭಾಷ ಸಂಪಗಾವಿ ಸೇರಿದಂತೆ ಗಣ್ಯರು ಉದ್ಘಾಟಿಸಿದರು.

ಶುದ್ಧ ಕುಡಿಯುವ ನೀರು ಪೂರೈಸಿ



◆ **ಹುಕ್ಕೇರಿ:** ಗ್ರಾಮದೇವತೆ ಜಾತ್ರಾ ಮಹೋತ್ಸವದಲ್ಲಿ ಲಕ್ಷಾಂತರ ಜನ ಭಕ್ತಾದಿಗಳು ಹುಕ್ಕೇರಿ ಪಟ್ಟಣಕ್ಕೆ ಆಗಮಿಸುವುದರಿಂದ ಸಾಂಕ್ರಾಮಿಕ ರೋಗಗಳಿಗೆ ಆಸ್ಪದ ನೀಡದಂತೆ ಕ್ರಮ ಕೈಗೊಳ್ಳಲು ಶುಚಿತ್ವಕ್ಕೆ ಆದ್ಯತೆ ನೀಡಬೇಕು. ಶುದ್ಧ ಕುಡಿಯುವ ನೀರನ್ನು ಒದಗಿಸುವ ನಿಟ್ಟಿನಲ್ಲಿ ಪುರಸಭೆ ಶ್ರಮಿಸಬೇಕು ಎಂದು ಉಪ ವಿಭಾಗಾಧಿಕಾರಿ ಹಾಗೂ ಪುರಸಭೆ ಆಡಳಿತಾಧಿಕಾರಿಗಳಾದ ಶ್ರವಣಕುಮಾರ ನಾಯಕ ತಿಳಿಸಿದರು

ಅವರು ತಾಲೂಕಾ ಪಂಚಾಯತಿ ಸಭಾಭವನದಲ್ಲಿ ಲಕ್ಷ್ಮೀದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಪೋಲಿಸ್ ಇಲಾಖೆ ವತಿಯಿಂದ ಹಮ್ಮಿಕೊಂಡ ಶಾಂತಿ ಮತ್ತು ಪೂರ್ವ ಸಿದ್ದತಾ ಸಭೆಯಲ್ಲಿ ಮಾತನಾಡಿದರು.

ಲಕ್ಷ್ಮೀದೇವಿ ಸಂಚರಿಸುವ ಮಾರ್ಗ, ಪ್ರತಿಸ್ಥಾಪಿಸುವ ಸ್ಥಳಗಳಲ್ಲಿ ಸಮಯಪಾಲನೆ ಅವಶ್ಯ.. ಪುರಸಭೆ ಅಧಿಕಾರಿಗಳು ಜಾತ್ರೆಯಲ್ಲಿ ಸಾರ್ವಜನಿಕರಿಗೆ ಸಮಸ್ಯೆಯಾಗದಂತೆ ರಸ್ತೆ, ನೀರು, ವಿದ್ಯುತ್, ಶೌಚಾಲಯಗಳು ಸೇರಿದಂತೆ ಜಾತ್ರೆಗೆ ಬೇಕಾಗುವ ಮೂಲಭೂತ ಸೌಲಭ್ಯವನ್ನು ಕಲ್ಪಿಸಬೇಕೆಂದರು.

ಸ್ವಚ್ಚತೆಗೆ ಸಾರ್ವಜನಿಕರ ಸಹಕಾರವೂ ಅವಶ್ಯವೆಂದರು. ಡಿವೈಎಸ್ಪಿ ರವಿ ನಾಯಿಕ ಮಾತನಾಡಿ. ಅಹಿತಕರ ಘಟನೆ ತಡೆಯುವುದಕ್ಕೆ ಸೂಕ್ತ ಪೋಲಿಸ್ ಸಿಬ್ಬಂದಿ ನಿಯೋಜಿಸುತ್ತೇವೆ. ಆದರೆ ಪಟ್ಟಣದ ಯುವಕರು ಹಿರಿಯರ ಮಾರ್ಗದರ್ಶನದಲ್ಲಿ ಜಾತ್ರೆ ಯಶಸ್ಸಿಗೆ ಕೈ ಜೋಡಿಸಬೇಕು. ಕೋಮು ಸೌಹಾರ್ದತೆಗೆ ಹೆಸರಾಗಿರುವ ಹುಕ್ಕೇರಿ ಪಟ್ಟಣದಲ್ಲಿ ಭಾವೈಕ್ಯತೆಯಿಂದ ಆಚರಿಸುವಂತೆ ಕೋರಿದರು.

ಜಾತ್ರೆಯಲ್ಲಿ ಸಂಶಯಾಸ್ಪದ ವ್ಯಕ್ತಿಗಳು ಕಂಡು ಬಂದಲ್ಲಿ ಪೋಲಿಸ್ ಇಲಾಖೆಗೆ ತಿಳಿಸಲು ಸೂಚಿಸಿದರು. ಮಾಜಿ ಸಚಿವ ಶಶಿಕಾಂತ ನಾಯಿಕ, ಮುಸ್ಲಿಂ ಸಮಾಜದ 11 ಜಮಾತ ಅಧ್ಯಕ್ಷ ಸಲೀಮ್ ನದಾಫ, ಜಾತ್ರಾ ಸಮಿತಿ ಅಧ್ಯಕ್ಷ ಭಾಪು ನಾಯಿಕ, ಕಾರ್ಯದರ್ಶಿ ಗುರು ಕುಲಕರ್ಣಿ, ಚಂದ್ರಶೇಖರ ಗಂಗಣ್ಣವರ, ರವಿ ಕರಾಳೆ, ಭೀಮಶಿ ಮುದಕ್ಕನವರ, ಚನ್ನಪ್ಪಾ ಗಜಬರ, ಆನಂದ ಗಂಧ, ತಮ್ಮಣಗೌಡಾ ಪಾಟೀಲ ಮಾತನಾಡಿ ಬಸ್ ನಿಲ್ದಾಣ ಬಳಿ ಅಂಗಡಿಕಾರರು ಫುಟಪಾತ್ ಅತಿಕ್ರಮಿಸಿಕೊಂಡಿದ್ದಾರೆ. ಅವುಗಳ ತೆರವು, ಜಾತ್ರೆಗೆ ಬೇಕಾಗುವ ಸೌಲಭ್ಯ, ಪಾರ್ಕಿಂಗ್, ಪಟ್ಟಣದ ಸ್ವಚ್ಚತೆಗೆ ಆದ್ಯತೆ ಸೇರಿದಂತೆ ವಿವಿಧ ಸಮಸ್ಯೆಗಳನ್ನು ಅಧಿಕಾರಿಗಳಿಗೆ ತಿಳಿಸಿದರು.

ಒಟ್ಟಾರೆ ಜಾತ್ರೆ ಸುವ್ಯವಸ್ಥಿತ ಮತ್ತು ಶಾಂತಿಯುತ ಆಚರಣೆಗೆ ಪಟ್ಟಣದ ಜನರ ಸಹ ಭಾಗಿತ್ವ ಅವಶ್ಯವೆಂದು ಸಭೆಯಲ್ಲಿ ತಿಳಿಸಿದರು.

ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಅಧ್ಯಕ್ಷ ಮಹಾವೀರ ನಿಲಜಗಿ, ಮಾಜಿ ಸಚಿವ ಶಶಿಕಾಂತ ನಾಯಿಕ, ತಹಶೀಲ್ದಾರ ಬಲರಾಮ ಕಟ್ಟಿಮನಿ, ಜಯಗೌಡ ಪಾಟೀಲ, ಜಾತ್ರಾ ಕಮಿಟಿ ಸದಸ್ಯರು ಹಾಗೂ ಅಧಿಕಾರಿಗಳಿದ್ದರು. ಬಿ.ಕೆ ಸಣ್ಣಕ್ಕಿ ಸ್ವಾಗತಿಸಿ, ನಿರೂಪಿಸಿದರು.

ಶ್ರೀ ಲಕ್ಷ್ಮೀ ದೇವಿ ಸಂಚರಿಸುವ ಕಡೆಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಯುವಕರು ಎಲ್ಲ ಸಮುದಾಯದ ಮುಖಂಡರು ಜಾತ್ರಾ ಮಹೋತ್ಸವದಲ್ಲಿ ಪೋಲಿಸ ಅಧಿಕಾರಿಗಳಿಗೆ ಸಹಕಾರ ನೀಡುವಂತೆ ವಿನಂತಿಸಿದರು. ಪುರಸಭೆ ಮುಖ್ಯಾಧಿಕಾರಿ ಮಾತನಾಡಿ, ಡಿಡಿಟಿ, ಫಾಗಿಂಗ್ ಮತ್ತು ಮೋಬೈಲ್ ಶೌಚಾಲಯಗಳ ಅಳವಡಿಕೆ, ಶುಚಿತ್ವಕ್ಕಾಗಿ ಹೆಚ್ಚುವರಿ ಸಿಬ್ಬಂದಿಗಳ ನೇಮಕ ಮಾಡಕೊಳ್ಳಲಾಗಿದೆ.

■ ಬಸ್ಸಾಪೂರೆ, ಸಿಪಿಐ

▸▸ ಲಕ್ಷ್ಮೀದೇವಿ ಜಾತ್ರಾ ಮಹೋತ್ಸವ ಪೂರ್ವ ಸಿದ್ಧತಾ ಸಭೆ

▸▸ ಪುರಸಭೆ ಆಡಳಿತಾಧಿಕಾರಿ ಶ್ರವಣಕುಮಾರ ನಾಯಕ ಸೂಚನೆ

ಏ.1ರಿಂದ ಗ್ರಾಮದೇವಿ ಜಾತ್ರೆ

◆ **ನೇಸರಗಿ:** ಸಮೀಪದ ಮದನಬಾವಿ ಗ್ರಾಮದ ಗ್ರಾಮದೇವತೆಯ ಜಾತ್ರಾ ಮಹೋತ್ಸವವು ಏ.1 ರಿಂದ 9ರವರೆಗೆ ಮಾಜಿ ಶಾಸಕ ಮಹಾಂತೇಶ ದೊಡ್ಡಗೌಡರ ಹಾಗೂ ಗ್ರಾಮದ ಹಿರಿಯರ ನೇತೃತ್ವದಲ್ಲಿ ನೆರವೇರಲಿದೆ ಎಂದು ಇಂಚಲ ಸಾಧು ಸಂಸ್ಥಾನ ಮಠದ ಡಾ. ಶಿವಾನಂದ ಭಾರತಿ ಸ್ವಾಮೀಜಿ ಹೇಳಿದರು.

ಅವರು ಸಮೀಪದ ಮದನಬಾವಿ ಗ್ರಾಮದ ಚನ್ನವೃಷಬೇಂದ್ರ ಶ್ರೀಗಳ ಜಾತ್ರಾ ಮಹೋತ್ಸವದಲ್ಲಿ ಏಪ್ರಿಲ್ 1 ರಿಂದ 9 ರವರೆಗೆ ಜರಗುವ ಆಮಂತ್ರಣ ಪತ್ರಿಕೆ ಬಿಡುಗಡೆ ನೆರವೇರಿಸಿ ಮಾತನಾಡಿದರು.

ಮಾಜಿ ಶಾಸಕ ಮಹಾಂತೇಶ ದೊಡ್ಡಗೌಡರ ಮಾತನಾಡಿ, ಅನೇಕ ವರ್ಷಗಳ ಹಿಂದೆ ಗ್ರಾಮದೇವಿಯ ಜಾತ್ರೆ ನೆರವೇರಿತ್ತು. ಮುಂದಿನ ತಿಂಗಳು 9 ದಿನಗಳ ಕಾಲ ಅದ್ದೂರಿಯಾಗಿ ಆಚರಿಸಲು ಊರ ಹಿರಿಯರು ನಿರ್ಣಯಿಸಿದ್ದು, ಈ ಜಾತ್ರೆಗೆ ಊರಿನ ಹಿರಿಯರು, ಯುವಕರು, ಮಹಿಳೆಯರು ಅರ್ಥಪೂರ್ಣವಾಗಿ ಎಲ್ಲರೂ ಸೇರಿಕೊಂಡು ಸೌಹಾರ್ದಯುತವಾಗಿ ಭಕ್ತಿ ಭಾವದಿಂದ, ತನು, ಮನ, ಧನದಿಂದ ಅದ್ದೂರಿಯಾಗಿ ಶ್ರೀ ಗ್ರಾಮದೇವಿಯ ಜಾತ್ರೆ ಆಚರಿಸೋಣ ಎಂದರು.

ಚನ್ನವೃಷಬೇಂದ್ರ ಅಜ್ಜನವರ ಜಾತ್ರಾ ಮಹೋತ್ಸವ ಅಂಗವಾಗಿ ಜ್ಞಾನದಾಸೋಹದಲ್ಲಿ ಮಹಾತ್ಮರಾದ ಬೈಲಹೊಂಗಲ ಶಿವಾನಂದ ಮಠದ ಮಹಾದೇವ ಸರಸ್ವತಿ ಮಹಾಸ್ವಾಮಿಗಳು ಸೇರಿದಂತೆ ನಾಡಿನ ಪ್ರಮುಖ ಪೂಜ್ಯರು ಭಾಗವಹಿಸಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ಬಸವಣ್ಣೆಪ್ಪ ಹಮ್ಮನಿ, ಶಿವಪ್ಪ ಗುಜನಾಳ, ನಿಂಗನಗೌಡ ದೊಡ್ಡಗೌಡರ, ಈರನಗೌಡ ದೊಡ್ಡಗೌಡರ, ಯಲ್ಲನಗೌಡ ದೊಡ್ಡಗೌಡರ,ಬಾಬುಗೌಡ ದೊಡ್ಡಗೌಡರ, ಯಲ್ಲನಗೌಡ ದೊಡ್ಡಗೌಡರ, ಅಜ್ಜಪ್ಪ ಹಮ್ಮನಿ, ಅಣ್ಣಯ್ಯ ನಂಜರಗಿ, ಶ್ರೀಕಾಂತ ಉಡಿಕೇರಿ, ಸೇರಿದಂತೆ ಗ್ರಾಮದ ಹಿರಿಯರು, ಗ್ರಾಮಸ್ಥರು ಉಪಸ್ಥಿತರಿದ್ದರು. ಶಿವನಗೌಡ ದೊಡ್ಡಗೌಡರ ನಿರೂಪಿಸಿದರು.




ರಸ್ತೆ ಅಗಲೀಕರಣಕ್ಕೆ ನಿವಾಸಿಗಳ ಆಗ್ರಹ

◆ **ಕುಡಚಿ:** ಪಟ್ಟಣದ ಅಂಬೇಡ್ಕರ್ ನಗರದ ಡಾ. ಬಾಬಾಸಾಹೇಬ ಅಂಬೇಡ್ಕರ ವೃತ್ತದಿಂದ ಚಿಂಚಲಿ ವೃತ್ತದ ವರೆಗೆ ಮಂಜೂರಾದ ರಸ್ತೆ ಕಾಮಗಾರಿಯನ್ನು ತಡೆ ಹಿಡಿದು, ಅಗಲೀಕರಣ ಮಾಡಿಯೆ ಕಾಮಗಾರಿ ಪ್ರಾರಂಭಿಸುವಂತೆ ಆಗ್ರಹಿಸಿ ಪುರಸಭೆ ಮುಖ್ಯಾಧಿಕಾರಿಗಳಿಗೆ ಅಂಬೇಡ್ಕರ ನಗರದ ಮುಖಂಡರು ನಿವಾಸಿಗಳು ಮನವಿ ಸಲ್ಲಿಸಿದರು.

ಈ ಹಿಂದೆ ದಿನಾಂಕ 2017ರಲ್ಲಿ ಜಿಲ್ಲಾ ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿ ಕೋಶ ಬೆಳಗಾವಿಯವರು ಕುಡಚಿ ಪುರಸಭೆ ಮುಖ್ಯಾಧಿಕಾರಿಗಳಿಗೆ ಸ್ಥಾನಿಕ ಚೌಕಾಸಿ ವರದಿ ಕೇಳಿದ್ದು, ಈ ಕುರಿತು ಪುರಸಭೆ ಮುಖ್ಯಾಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. 2017ರಲ್ಲಿ ಚಿಕ್ಕೋಡಿ ಉಪವಿಭಾಗಾಧಿಕಾರಿಯವರು ರಾಯಬಾಗ ತಹಶೀಲ್ದಾರ್ ಅವರಿಗೆ ಕುಡಚಿ ಪಟ್ಟಣದ

ಡಾ.ಬಿ.ಆರ್. ಅಂಬೇಡ್ಕರ ವೃತ್ತದಿಂದ ಚಿಂಚಲಿ ವೃತ್ತದ ವರೆಗೆ ಅನಧಿಕೃತವಾಗಿ ಕಟ್ಟಡ ನಿರ್ಮಾಣಗೊಳ್ಳುತ್ತಿದ್ದು, ಕಟ್ಟಡಗಳನ್ನು ಪರಿಶೀಲಿಸಿ ಸ್ಥಾನಿಕ ಚೌಕಾಶಿ ನಡೆಸಿ ಎಂದು ಕೋರಿದ್ದು, ಅದರಂತೆ 2022ರಲ್ಲಿ ರಾಯಬಾಗ ತಹಶಿಲ್ದಾರರು ವಾರ್ಡ ನಂ.16 ಅಂಬೇಡ್ಕರ್ ನಗರದಿಂದ ಚಿಂಚಲಿ ವೃತ್ತದ ವರೆಗೆ 33 ಅಡಿ ಅಗಲ ರಸ್ತೆ ಇದ್ದು, ಈ ಬಗ್ಗೆ ವರದಿ ಕೇಳಿದ್ದು ಕುಡಚಿ ಪುರಸಭೆ ಮುಖ್ಯಾಧಿಕಾರಿ ನೀಡಿರುವುದಿಲ್ಲಾ. ಸದ್ಯ ಆರಂಭವಾದ 13ಅಡಿ ರಸ್ತೆ ಬದಲು 33 ಅಡಿ ಅಗಲೀಕರಣ ಮಾಡಬೇಕೆಂದು ಎಂದು ಆಗ್ರಹಿಸಿ ಹಲವು ದಲಿತ ಪರ ಸಂಘಟನೆಗಳು ಹಾಗೂ ಅಂಬೇಡ್ಕರ್ ನಗರದ ನಿವಾಸಿಗಳು ಪುರಸಭೆ ಮುಖ್ಯಾಧಿಕಾರಿ ಬಾಬಾಸಾಹೇಬ ಮಾನೆ ಇವರಿಗೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ದಿಲೀಪ ಘಾಟಗೆ, ಶ್ರೀಧರ್ ಕಂತ್ರಾಟೆ, ಮೋಹನ್ ಕಾಂಬಳೆ, ಶಂಕರ ಯಳಕರ, ರಾಜು ಕಾಂಬಳೆ, ಭಾಸ್ಕರ ಸಾವಂತ್, ರಾಜೇಶ ಘಾಟಗೆ, ಮಚ್ಛೇಂದ್ರ ಕಾಂಬಳೆ, ಸಂಭಾಜಿ ಕಾಂಬಳೆ, ಪ್ರವೀಣ ಕಾಂಬಳೆ, ಮಹೇಶ್ ಬೀರಣಗಿ, ಮಂಜು ಬೀರಣಗಿ, ರಾಜು ವಡ್ಡರ, ಅಂಕುಶ ಬಿರಣಗಿ, ಬಟ್ಟು ಕಾಂಬಳೆ, ರಾಮದಾಸ್ ಮದಲೆ ಇತರರು ಉಪಸ್ಥಿತರಿದ್ದರು.



ರಾಜ್ಯವನ್ನು ಸಾಲದ ಶೂಲಕ್ಕೆ ತಳ್ಳುತ್ತಿರುವ ಕಾಂಗ್ರೆಸ್ ಸರ್ಕಾರ

◆ **ಮೂಡಲಗಿ:** ಮುಖ್ಯಮಂತ್ರಿ ಸಿದ್ದರಾಮಯ್ಯನವರ 17ನೇ ಬಜೆಟ್ ಕೇವಲ ಅಂಕಿ-ಅಂಶಗಳ ಕಸರತ್ತಲ್ಲ, ಇದು ಕರ್ನಾಟಕದ ಸಮಗ್ರ ಅಭಿವೃದ್ಧಿಯ ಅಂತ್ಯಕ್ರಿಯೆ. ದೂರದೃಷ್ಟಿಯಿಲ್ಲದ ಈ ಬಜೆಟ್ ರಾಜ್ಯವನ್ನು ಸಾಲದ ಶೂಲಕ್ಕೆ ತಳ್ಳಿದೆ. ಈ ಬಜೆಟ್‌ನಲ್ಲಿ ಹೊಸ ರಸ್ತೆಗಳಿಲ್ಲ, ನೀರಾವರಿ ಯೋಜನೆಗಳಿಗೆ ನಯಾಪೈಸೆ ಹಣ ಮೀಸಲಿಟ್ಟಿಲ್ಲ, ಮೂಲಸೌಕರ್ಯದ ಪಾಲಿನ ಅನುದಾನವೆಲ್ಲಾ ಗ್ಯಾರಂಟಿಗಳಿಗೆ ಬಳಕೆಯಾಗಿದೆ ಇದು ಕರ್ನಾಟಕದ ಪಾಲಿಗೆ ಮತ್ತೊಂದು ಪೊಳ್ಳು ಭರವಸೆಯ ಬಜೆಟ್ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ತೀವ್ರವಾಗಿ ಖಂಡಿಸಿದ್ದಾರೆ.



ಶುಕ್ರವಾರ ಪತ್ರಿಕಾ ಹೇಳಿಕೆ ನೀಡಿದ ಅವರು, ಅತಿವೃಷ್ಟಿಯಿಂದ ಬೀದಿಗೆ ಬಿದ್ದ ರೈತರಿಗೆ ಬಿಡಿಗಾಸಿನ ಪರಿಹಾರವಿಲ್ಲ, ಬೆಲೆ ಕುಸಿತದಿಂದ ಕಂಗಾಲಾಗಿರುವ ರೈತರಿಗೆ ಕೇವಲ ರೂ.100 ಕೋಟಿ ಮಾರುಕಟ್ಟೆ ಮಧ್ಯಪ್ರವೇಶ ನೀಡಿರುವುದು ರೈತರ ಮೂಗಿಗೆ ತುಪ್ಪ ಸವರುವ ಕೆಲಸವಲ್ಲದೆ ಮತ್ತೇನಲ್ಲ. ಇದು ಅಪ್ಪಟ ರೈತ ವಿರೋಧಿ ಬಜೆಟ್ ಆಗಿದೆ ಎಂದು ತಿಳಿಸಿದ್ದಾರೆ.

2026-27ರ ಬಜೆಟ್ ಅಂದಾಜಿನಲ್ಲಿ ರೂ 1.32 ಲಕ್ಷ ಕೋಟಿ ಸಾಲ ಮಾಡಲು ಯೋಜನೆ ರೂಪಿಸಲಾಗಿದೆ. ಅಂದರೆ ಕೇವಲ ನಾಲ್ಕು ವರ್ಷಗಳಲ್ಲಿ ಈ ಸರ್ಕಾರವು ಸುಮಾರು ರೂ 4.4 ಲಕ್ಷ ಕೋಟಿ ಹೊಸ ಸಾಲ ಮಾಡುವ ಪರಿಸ್ಥಿತಿ ಉಂಟುಮಾಡಿದೆ. ಇದು ಅಭಿವೃದ್ಧಿಗಾಗಿ ಮಾಡಿದ ಸಾಲವೇ? ಅಥವಾ ಚುನಾವಣಾ ಗ್ಯಾರಂಟಿಗಳಿಗಾಗಿ ರಾಜ್ಯದ ಭವಿಷ್ಯವನ್ನು ಗಿರವಿ ಇಟ್ಟ ಸಾಲವೇ ಎಂಬ ಪ್ರಶ್ನೆ ಇಂದು ಪ್ರತಿಯೊಬ್ಬರ ಮನಸ್ಸಿನಲ್ಲಿ ಮೂಡಿದೆ.

ಬಜೆಟ್‌ನಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಸಾವಿರಾರು ಕೋಟಿ ರೂಪಾಯಿಗಳ ಭಾರಿ ಅನುದಾನ ಘೋಷಿಸಲಾಗಿದೆ. ಇತ್ತ ದಲಿತರು ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿಗೆ, ಅವರ ನಿಗಮಗಳಿಗೆ ಬಿಡಿಗಾಸೂ ಇಲ್ಲ. ಇದು ರಾಜ್ಯದ ಶೋಷಿತ ಸಮುದಾಯಗಳಿಗೆ ಮಾಡಿರುವ ದ್ರೋಹವಲ್ಲವೇ? ಇದು ರಾಜ್ಯದ ಬಜೆಟ್ ಆಗಿ ಉಳಿದಿಲ್ಲ, ಒಂದು ನಿರ್ದಿಷ್ಟ ಸಮುದಾಯದ ಏಳಿಗೆಗಾಗಿ ರೂಪಿಸಿದ ಬಜೆಟ್‌ನಂತೆ ಭಾಸವಾಗುತ್ತಿದೆ" ಎಂದು ಸಂಸದ ಕಡಾಡಿ ಆರೋಪಿಸಿದ್ದಾರೆ.

ರಂಗ ಸ್ಮರಣೋತ್ಸವ: ಗೋಕಾಕನಲ್ಲಿ ಇಂದು ಪ್ರಶಸ್ತಿ ಪ್ರದಾನ

◆ **ಗೋಕಾಕ:** ಗೋಕಾವಿ ನಾಡಿನ ವೃತ್ತಿ ರಂಗಭೂಮಿಯ ಹಿರಿಯ ಕಲಾವಿದರಾದ ದಿ. ಬಿ.ಆರ್.ಅರಿಷಿಣಗುಡಿ ಹಾಗೂ ದಿ.ಬಸವಣ್ಣೆಪ್ಪ ಹೊಸಮನಿ ಅವರ ಸ್ಮರಣಾರ್ಥವಾಗಿ ಗೋಕಾಕ-ಬೆಂಗಳೂರು ಆಶಾಕಿರಣ ಕಲಾಟ್ರಸ್ಟ್ ವತಿಯಿಂದ ನೀಡಲಾಗುವ ರಂಗ ಸ್ಮರಣೋತ್ಸವ 12ನೇ ಪ್ರಶಸ್ತಿ ಪ್ರದಾನ ಸಮಾರಂಭವು ಇದೇ ಶನಿವಾರ ಮಾ.7ರಂದು ಬೆಳಿಗ್ಗೆ 10ಕ್ಕೆ ಇಲ್ಲಿನ ಯೋಗಿಕೊಳ್ಳ ರಸ್ತೆಯ ರೋಟರಿ ರಕ್ತ ಭಂಡಾರ ಸಭಾಂಗಣದಲ್ಲಿ ಜರುಗಲಿದೆ.2026ನೇ ಸಾಲಿನ ದಿ. ಬಿ.ಆರ್.ಅರಿಷಿಣಗೋಡಿ ರಂಗಭೂಮಿ ದ್ರೋಣ ಪ್ರಶಸ್ತಿಗೆ ರಂಗಭೂಮಿಯ ಹಿರಿಯ ಕಲಾವಿದ ಕುಡುದರಹಾಳು ಡಾ. ಶಿವಕುಮಾರ ತಾತನವರು ಹಾಗೂ ದಿ. ಬಸವಣ್ಣೆಪ್ಪ ಹೊಸಮನಿ ರಂಗಭೂಮಿ ಭೀಷ್ಮ ಪ್ರಶಸ್ತಿಗೆ ರಂಗಭೂಮಿಯ ಹಿರಿಯ ಕಲಾವಿದ ಜಯಣ್ಣ ಗೋಕಾಕ ನಾಮಾಂಕಿತ ಜಯರಾಜ ಹೊಸಮನಿ ಅವರು ಪ್ರಶಸ್ತಿಗೆ ಆಯ್ಕೆಗೊಂಡಿದ್ದಾರೆ.

ಸಾನ್ನಿಧ್ಯವನ್ನು ಶೂನ್ಯ ಸಂಪಾದನಮಠದ ಪೀಠಾಧಿಪತಿ ಮುರುಘರಾಜೇಂದ್ರ ಸ್ವಾಮೀಜಿ ಹಾಗೂ ಘೋಡಗೇರಿ ಶಿವಾನಂದ ಮಠದ ಮಲ್ಲಯ್ಯಾ ಸ್ವಾಮೀಜಿ ವಹಿಸುವರು.ಲೋಕೋಪಯೋಗಿ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಅವರು ಸಮಾರಂಭವನ್ನು ಉದ್ಘಾಟಿಸಿ, ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಅಧ್ಯಕ್ಷತೆಯನ್ನು ರಾಜಕೀಯ ಧುರೀಣ ಅಶೋಕ ಪೂಜಾರಿ ಅವರು ವಹಿಸುವರು.ವಿಶೇಷ ಆಮಂತ್ರಿತರಾಗಿ ಬೆಂಗಳೂರಿನ ರಂಗಭೂಮಿ, ಕಿರುತೆರೆ ಮತ್ತು ಬೆಳ್ಳಿತೆರೆ ಕಲಾವಿದರಾದ ಆನಂದ ಮತ್ತು ಸ್ವಾತಿ ಪಾಲ್ಗೊಳ್ಳಲಿದ್ದಾರೆ. ಮುಖ್ಯ ಅತಿಥಿಗಳಾಗಿ ತಹಶೀಲ್ದಾರ ಡಾ. ಮೋಹನ ಭಸ್ಮೆ, ಬೆಂಗಳೂರಿನ ಸಾಹಿತಿ ಮತ್ತು ಸಾಮಾಜಿಕ ಚಿಂತಕ ಡಾ. ವೆಂಕಟೇಶ ಆರ್. ಚೌಥಾಯಿ, ಅಖಿಲ ಭಾರತ ಸಾಹಿತ್ಯ ಪರಿ?ತ್ ಜಿಲ್ಲಾಧ್ಯಕ್ಷ ಮಹಾಂತೇಶ ತಾಂವಶಿ, ರೋಟರಿ ರಕ್ತ ಭಂಡಾರದ ಅಧ್ಯಕ್ಷ ಮಲ್ಲಿಕಾರ್ಜುನ ಕಲ್ಲೋಳಿ ಹಾಗೂ ಸಿರಿಗನ್ನಡ ಮಹಿಳಾ ವೇದಿಕೆಯ ರಾಜ್ಯಾಧ್ಯಕ್ಷೆ ರಜನಿ ಜೀರಗ್ಯಾಳ ಪಾಲ್ಗೊಳ್ಳಲಿದ್ದಾರೆ. ಇದೇ ಸಂದರ್ಭದಲ್ಲಿ ಚಿತ್ರಕಲಾವಿದ ಶಂಕರಗೌಡ ಪಾಟೀಲ ಅವರು ರಂಗಭೂಮಿ ಕಲಾವಿದರ 81ನೇ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಿದ್ದಾರೆ.ಸಮಸ್ತ ರಂಗಭೂಮಿ ಕಲಾವಿದರ ಅಭಿಮಾನಿಗಳು ಸಮಾರಂಭದಲ್ಲಿ ಪಾಲ್ಗೊಂಡು ಯಶಸ್ವೀಗೊಳಿಸುವಂತೆ ಟ್ರಸ್ಟ್ ಅಧ್ಯಕ್ಷರೂ ಆಗಿರುವ ಕಿರುತೆರೆ ನಟಿ ಮಾಲತಿಶ್ರೀ ಮೈಸೂರು ಅವರು ಪತ್ರಿಕಾ ಪ್ರಕಟಣೆ ಮೂಲಕ ಕೋರಿದ್ದಾರೆ.

ಸೇವಾ ಮನೋಭಾವ ಬೆಳೆಸಲು ಎನ್‌ಎಸ್‌ಎಸ್ ಸಹಕಾರಿ

◆ **ಮೂಡಲಗಿ:** ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವನೆ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸುವಲ್ಲಿ ಎನ್‌ಎಸ್‌ಎಸ್ ಶಿಬಿರಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಚೇರಮನ್ ಬಸಗೌಡ ಪಾಟೀಲ ನುಡಿದರು.

ತಾಲೂಕಿನ ಕಲ್ಲೋಳಿ ಪಟ್ಟಣದ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕ ಹಾಗೂ ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ದತ್ತುಗ್ರಾಮ ಬಳೋಬಾಳದಲ್ಲಿ ಹಮ್ಮಿಕೊಂಡಿರುವ 2025-26ನೇ ಸಾಲಿನ ವಾರ್ಷಿಕ ವಿಶೇಷ ಶಿಬಿರಕ್ಕೆ ಶುಕ್ರವಾರ ಚಾಲನೆ ನೀಡಿ ಮಾತನಾಡಿ, ಶಾಶ್ವತವಾದ ಕಾರ್ಯಗಳನ್ನು ಮಾಡುವ ಮೂಲಕ ಶಿಬಿರವನ್ನು ಯಶಸ್ವಿಗೊಳಿಸಲು ತಿಳಿಸಿದರು.

ಕಾಲೇಜಿನ ಪ್ರಾಚಾರ್ಯರಾದ ಡಾ. ಸುರೇಶ ಹನಗಂಡಿ ಅವರು ವಿದ್ಯಾರ್ಥಿಗಳಿಗೆ ಶಿಬಿರದ ಶಿಸ್ತು ಮತ್ತು ಉದ್ದೇಶಗಳ ಬಗ್ಗೆ ಮಾರ್ಗದರ್ಶನ ನೀಡಿದರು. ಕಾರ್ಯಕ್ರಮಾಧಿಕಾರಿ ಶಂಕರ ನಿಂಗನೂರ ಪ್ರಾಸ್ತಾವಿಕವಾಗಿ ಮಾತನಾಡಿ, ಏಳು ದಿನಗಳ ಕಾಲ ನಡೆಯಲಿರುವ ವಿವಿಧ ಸೇವಾ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಗ್ರಾಮ ಪಂಚಾಯತ ಸದಸ್ಯ ಸುನೀಲ ಈರೇಶನವರ ಮಾತನಾಡಿ, ಗ್ರಾಮದ ಸ್ವಚ್ಛತೆ ಮತ್ತು ಅಭಿವೃದ್ಧಿ ಕಾರ್ಯಗಳಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಶ್ಲಾಘನೀಯ ಎಂದು ಹಾರೈಸಿದರು. ಸರ್ಕಾರಿ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯಿನಿ ಕೆ.ಜೆ. ಸರ್ವಿ ಅವರು ಶಿಬಿರದ ಯಶಸ್ಸಿಗೆ ಶುಭ ಕೋರಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ ಸದಸ್ಯರಾದ ಪ್ರಧಾನಿ ಕಳಸನ್ನವರ, ಸರ್ಕಾರಿ ಪ್ರೌಢ ಶಾಲೆಯ ಎ.ಡಿ.ಎಂ.ಸಿ. ಅಧ್ಯಕ್ಷ ಶ್ರೀಶೈಲ್ ಬೆಳವಿ, ಗ್ರಾಮದ ಹಿರಿಯರಾದ ಲಗಮಣ್ಣ ಕಳಸನ್ನವರ, ಸಹ ಶಿಬಿರಾಧಿಕಾರಿಗಳಾದ ಬಿ.ಸಿ. ಮಾಳಿ, ಬೋಧಕ/ಬೋಧಕೇತರ ಸಿಬ್ಬಂದಿ, ಸ್ವಯಂಸೇವಕರು ಸೇರಿದಂತೆ ಗ್ರಾಮದ ಪ್ರಮುಖರು ಉಪಸ್ಥಿತರಿದ್ದರು.

ರಾಧಿಕಾ ಕರೆಪ್ಪಗೋಳ ಹಾಗೂ ಸಂಗಡಿಗರು ಪ್ರಾರ್ಥಿಸಿದರು, ಪ್ರೀಯಾ ಹುಣಶ್ಯಾಳ ಹಾಗೂ ಸಂಗಡಿಗರು ಎನ್.ಎಸ್.ಎಸ್. ಗೀತೆ ಹಾಡಿದರು. ಡಾ. ಕೆ.ಎಸ್. ಪರವ್ವಗೋಳ ನಿರೂಪಿದರು, ಸಹಶಿಬಿರಾಧಿಕಾರಿ ಎಂ.ಬಿ. ಜಾಲಗಾರ ಸ್ವಾಗತಿಸಿದರು. ವಿಲಾಸ ಕೆಳಗಡೆ ವಂದಿಸಿದರು.



▸▸ ಎನ್‌ಎಸ್‌ಎಸ್ 2025-26ನೇ ಸಾಲಿನ ವಾರ್ಷಿಕ ವಿಶೇಷ ಶಿಬಿರ

ಧೈರ್ಯದಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ ಎದುರಿಸಿ: ಸವದಿ

◆ **ಅಥಣಿ:** 2025-26ನೇ ಸಾಲಿನ ಈ ವರ್ಷದ ಮಾರ್ಚ್ 18 ರಿಂದ ಎಸ್ ಎಸ್ ಎಲ್ ಸಿ ಪರೀಕ್ಷೆ ಬರೆಯಲಿರುವ ಬಿ.ಬಿ. ಇಮ್ಮಡಿ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗಳೇ ತಾವು ಯಾರು ಆತಂಕ ಪಡದೇ ಧೈರ್ಯಶಾಲಿಗಳಾಗಿ ಪರೀಕ್ಷೆ ಬರೆದು ಹೆಚ್ಚಿನ ಅಂಕಗಳನ್ನು ಪಡೆಯುವ ಮೂಲಕ ಕಲಿತ ಶಾಲೆಗೆ, ಹುಟ್ಟಿದ ಊರಿಗೆ ಕಲಿಸಿದ ಗುರುಗಳಿಗೆ ಜನ್ಮ ಕೊಟ್ಟ ತಂದೆ ತಾಯಿಗೆ ಕೀರ್ತಿ ತಂದು ಕೊಡುವ ಕೀರ್ತಿಶಾಲಿಗಳು ತಾವಾಗಬೇಕು ಎಂದು ಯುವ ನಾಯಕರಾದ ಚಿದಾನಂದ ಸವದಿ ಹೇಳಿದರು.

ಅಥಣಿ ತಾಲೂಕಿನ ಬಳ್ಳಿಗೇರಿ ಗ್ರಾಮದ ಬಿ ಬಿ ಇಮ್ಮಡಿ ಸರಕಾರಿ ಪ್ರೌಢಶಾಲೆಯ ಎಸ್ ಎಸ್ ಎಲ್ ಸಿ ಪರೀಕ್ಷೆ ಬರೆಯಲಿರುವ 178 ವಿದ್ಯಾರ್ಥಿಗಳಿಗೆ ಪರೀಕ್ಷಾ ಪ್ಯಾಡ್ ಗಳನ್ನು ವಿತರಿಸಿ ಅವರು ಮಾತನಾಡಿದ ನಾವು ಕಳೆದ ವರ್ಷ ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿ ದ್ವಿತೀಯ ವಿದ್ಯಾರ್ಥಿಗಳಿಗೆ ಶೇ.90 ಪ್ರತಿಶತಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಎಂಬ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು ಈ ವರ್ಷವೂ ಕೂಡ ಅಥಣಿ ತಾಲೂಕು ಮತ್ತು ಕಾಗವಾಡ ತಾಲೂಕಿನ ಎಸ್ ಎಸ್ ಎಲ್ ಸಿ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಆಯೋಜಿಸಿದ್ದು, ಅದರಲ್ಲಿ ವಿಶೇಷವಾಗಿ ಅಥಣಿ ತಾಲೂಕಿನ ಸರ್ಕಾರಿ ಪ್ರೌಢಶಾಲೆಗಳಲ್ಲಿ ಹತ್ತನೇಯ ತರಗತಿ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳಿರುವ ಎರಡನೇಯ ಅತೀ ದೊಡ್ಡ ಶಾಲೆ ಬಿ ಬಿ ಸರಕಾರಿ ಪ್ರೌಢಶಾಲೆಯಾಗಿರುವುದರಿಂದ ಈ ವರ್ಷ 178 ವಿದ್ಯಾರ್ಥಿಗಳು ತಾವೆಲ್ಲರೂ ಪ್ರತಿಶತ ಶೇ 90ಕ್ಕಿಂತ ಅತೀ ಹೆಚ್ಚು ಅಂಕಗಳನ್ನು ಪಡೆಯುವ ಮೂಲಕ ಈ ವರ್ಷ ಜೂನ್ ತಿಂಗಳಲ್ಲಿ ಆಯೋಜಿಸುವ ಪ್ರತಿಭಾ ಪುರಸ್ಕಾರದ ಪುರಸ್ಕೃತರು ತಾವಾಗಬೇಕೆಂದು ಎಂದು ಹೇಳುವ ಮೂಲಕ ವಿದ್ಯಾರ್ಥಿಗಳಲ್ಲಿ ಉತ್ಸಾಹ ಮತ್ತು ಹುಮ್ಮಸ್ಸು ತುಂಬಿದರು. ಹನುಮಂತ ಕುರಬರ ಮಾತನಾಡಿದರು. ಈ ಸಂದರ್ಭದಲ್ಲಿ ಎಸ್ ಡಿ ಎಂ ಸಿ ಅಧ್ಯಕ್ಷರಾದ ಮಲ್ಲಪ್ಪಾ ಮಾಳಿ ಪ್ರಭಾಕರ ಇಮ್ಮಡಿ, ಹನುಮಂತಗೌಡ ಹುಚಗೌಡರ್ ವಿನೋದ ಇಮ್ಮಡಿ, ರಮೇಶ್ ಅಥಣಿ, ಭೀಮಪ್ಪ ಕುಳ್ಳೊಳ್ಳಿ, ಯಂಕಪ್ಪ ಸನದಿ ರವಿ ಕೌಲಗುಡ್ಡ ಇತರರು ಉಪಸ್ಥಿತರಿದ್ದರು. ಶಾಲಾ ಸಹ ಶಿಕ್ಷಕರಾದ ಎಂ ಎಂ ಬುರ್ಲಿ ಯವರು ಕಾರ್ಯಕ್ರಮದಲ್ಲಿ ಸ್ವಾಗತಿಸಿ ನಿರೂಪಿಸಿದರು. ಎಸ್. ಪಿ. ಅಥಣಿ ವಂದಿಸಿದರು.



▸▸ ಕಲಿಕಾ ಸಾಮಗ್ರಿ ವಿತರಣೆ

2026-2027 ರಾಜ್ಯ ಬಜೆಟ್ ನಾವು ಕಂಡಂತೆ

ಅಭಿವೃದ್ಧಿಗೆ ಪೂರಕವಲ್ಲದ ಬಜೆಟ್



• **ಬಾಗಲಕೋಟೆ:** ರೈತರು, ಶ್ರಮಿಕರು, ಬಡವರು, ಮಹಿಳೆಯರು, ತಳ ಸಮುದಾಯ ಹಾಗೂ ಯುವಶಕ್ತಿ ಕಡೆಗಣಿಸಿದಲ್ಲದೆ. ರಾಜ್ಯ ಹಾಗೂ ಬಾಗಲಕೋಟೆ ಅಭಿವೃದ್ಧಿಗೆ ಪೂರಕವಲ್ಲದ ನಿರಾಶದಾಯಕ ಬಜೆಟ್ ಆಗಿದೆ ಎಂದು ಮಾಜಿ ಶಾಸಕ ವೀರಣ್ಣ ಚರಂತಿಮಠ ತಿಳಿಸಿದ್ದಾರೆ. ದಾಖಲೆ ಬಜೆಟ್ ಮಂಡಿಸುವ ಸಿದ್ದರಾಮಯ್ಯನವರು ವೃತ್ತಿಯ ಕೊರತೆಯಲ್ಲಿಯೂ ಚಮತ್ಕಾರ ಸೃಷ್ಟಿಸುತ್ತಾರೆ ಎಂದು ನಂಬಿಕೆ ಇಟ್ಟಿದ್ದ ಜನರ ಭರವಸೆಗೆ ತಣ್ಣೀರು ಎರಚಿದ್ದಾರೆ. ಗ್ಯಾರಂಟಿ ಯೋಜನೆಗಳಿಗೆ ಮತ್ತೆ ಹಣವನ್ನು ಮೀಸಲಿಟ್ಟ ಆದರೆ ಯುವ ನಿಧಿಗೆ ಶೂನ್ಯ ಅನುದಾನ ಕೊಟ್ಟಿದ್ದಾರೆ. ಮುಳಗಡೆ ಸಮಸ್ಯೆಯಲ್ಲಿ ಮುಳಗಿ ಏಳುವ ಬಾಗಲಕೋಟೆಯ ಅಭಿವೃದ್ಧಿಯಡೆ ತಮ್ಮ ಕಟಾಕ್ಷ ತೋರದೆ ಹೋಗಿದ್ದು ವಿಷಾದನೀಯ. ಈ ನಿಟ್ಟಿನಲ್ಲಿ ಬಾಗಲಕೋಟೆಯ ಎಲ್ಲ ಆಶಯಗಳು ಮಣ್ಣುಪಾಲಾಗಿವೆ ಎಂದಿದ್ದಾರೆ.

ದಾಖಲೆಯ ಬಜೆಟ್: ರಕ್ಷಿತಾ



• **ಬಾಗಲಕೋಟೆ:** ರಾಜ್ಯದ ಸಮಗ್ರ ಅಭಿವೃದ್ಧಿಗೆ ದಾಖಲೆಯ 17 ಬಜೆಟ್ ಮಂಡಿಸಿದ ಕೀರ್ತಿಗೆ ಸಿಎಂ ಸಿದ್ದರಾಮಯ್ಯ ಭಾಜನರಾಗಿದ್ದಾರೆ. ವಿತ್ತಿಯ ಸವಾಲುಗಳ ನಡುವೇ ಗ್ಯಾರಂಟಿ ಯೋಜನೆಗಳಿಗೆ 50 ಸಾವಿರ ಕೋಟಿ ರೂ. ಕೃಷಿ, ಶಿಕ್ಷಣ, ಜಲ ಸಂಪನ್ಮೂಲ, ವೈದ್ಯಕೀಯ ಕ್ಷೇತ್ರ ಸೇರಿದಂತೆ ಎಲ್ಲ ಕ್ಷೇತ್ರಕ್ಕೆ ಆದ್ಯತೆ ನೀಡಿದ್ದಾರೆ. ಅಭಿವೃದ್ಧಿಗೆ ಅನುದಾನ ಮೀಸಲಿಡುವ ಮೂಲಕ ಆರ್ಥಿಕ ತಜ್ಞ ಅಂತ ಸಾಬೀತು ಪಡಿಸಿದ್ದಾರೆ ಎಂದು ಕೆಪಿಸಿಸಿ ಸದಸ್ಯೆ ರಕ್ಷಿತಾ ಭರತಕುಮಾರ ಈಟಿ ತಿಳಿಸಿದ್ದಾರೆ. ಜಿಲ್ಲೆಯ ಪ್ರಮುಖ ಯೋಜನೆಯಾದ ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತದ ಭೂ ಸ್ವಾಧೀನಕ್ಕೆ ಆದ್ಯತೆ ನೀಡಿದ್ದಾರೆ. ನೀರಾವರಿಗೆ 40 ಲಕ್ಷ ರೂ. ಹಾಗೂ ಒಣ ಬೇಸಾಯಕ್ಕೆ 30 ಲಕ್ಷ ರೂ. ಪರಿಹಾರ ಧನ ಘೋಷಣೆ ಅನ್ನದಾತರಿಗೆ ನೆಮ್ಮದಿ ನೀಡಿದ್ದಾರೆ. ಬಾಗಲಕೋಟೆ ಸರ್ಕಾರಿ ಮೆಡಿಕಲ್ ಕಾಲೇಜು ಕಾರ್ಯಾರಂಭಕ್ಕೆ ಮಹತ್ವ ಹೆಜ್ಜೆ ಸ್ವಾಗತಾರ್ಹ ಎಂದು ತಿಳಿಸಿದ್ದಾರೆ.

ಜನರ ಮೇಲೆ ಸಾಲದ ಹೊರೆ: ಪೂಜಾರ



• **ಬಾಗಲಕೋಟೆ:** ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿರುವ ರಾಜ್ಯ ಬಜೆಟ್ ಸಂಪೂರ್ಣ ಬುರಡೆ ಬಜೆಟ್ ಆಗಿದೆ. ರಾಜ್ಯವನ್ನು ದಿವಾಳಿಯತ್ತ ಕೊಂಡಯ್ಯಲಾಗಿದೆ. ಸಾಲದ ಸುಳಿಯಲ್ಲಿ ರಾಜ್ಯವನ್ನು ಸಿಲುಕಿಸಿ ಜನರ ಮೇಲೆ ಹೊರೆ ಹಾಕುವ ಕೆಲಸ ಈ ಬಾರಿಯ ಬಜೆಟ್‌ನಲ್ಲಿ ಕಾಣುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ ತಿಳಿಸಿದ್ದಾರೆ. ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತಕ್ಕೆ ಪ್ರತಿ ವರ್ಷ 18 ಕೋಟಿ ರೂ.ನೀಡುವುದಾಗಿ ಘೋಷಣೆ ಮಾಡಿದ್ದರು. ಆದರೆ, ಈ ಯೋಜನೆಗೆ ಬಜೆಟ್‌ನಲ್ಲಿ ಎಳ್ಳನೀರು ಬಿಟ್ಟಂತಾಗಿದೆ.ರಾಜ್ಯವನ್ನು ದಿವಾಳಿಯತ್ತ ಒಯ್ಯಲಾಗಿದೆ. ಸಾಲದ ಸುಳಿಯಲ್ಲಿ ರಾಜ್ಯವನ್ನು ಸಿಲುಕಿಸಲಾಗಿದೆ ಎಂದು ತಿಳಿಸಿದ್ದಾರೆ.

ಕೋಟೆ ನಾಡಿಗೆ ಭರಪೂರ ಕೊಡುಗೆ: ಶೆಟ್ಟರ



• **ಬಾಗಲಕೋಟೆ:** ರಾಜ್ಯದಲ್ಲೇ 17ನೇ ದಾಖಲೆಯ ಬಜೆಟ್ ಮಂಡಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಎಲ್ಲ ವರ್ಗದ ಜನರ ಅಭಿವೃದ್ಧಿ ಗಮನದಲ್ಲಿ ಇಟ್ಟುಕೊಂಡು ಜನತೆಗೆ ಬಂಪರ್ ಕೊಡುಗೆ ನೀಡಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ಹೊಳಬಸು ಶೆಟ್ಟರ ತಿಳಿಸಿದ್ದಾರೆ. ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಯುಕೆಪಿ ಮೂರನೇ ಹಂತದ ವ್ಯಾಪ್ತಿಯಲ್ಲಿ ಬರುವ ರೈತರ ಬಗ್ಗೆ ಕಳಕಳಿ ಹೊಂದಿದ ಸಿಎಂ ಪ್ರತಿ ಎಕರೆ ಒಣಬೇಸಾಯ ಭೂಮಿಗೆ 30ಲಕ್ಷ ರೂ. ಹಾಗೂ ನೀರಾವರಿ ಜಮೀನಿಗೆ 40 ಲಕ್ಷ ರೂ.ಪರಿಹಾರ ನೀಡಲು ಮುಂದಾಗಿ ರೈತಪರ ಕಾಳಜಿ ಮೆರೆದಿದ್ದಾರೆ. ಈಗಾಗಲೇ ಬಾಗಲಕೋಟೆ ನಗರಕ್ಕೆ ಸರ್ಕಾರಿ ಮೆಡಿಕಲ್ ಕಾಲೇಜ್ ಮಂಜೂರು ಮಾಡಿದ್ದು, ಶೀಘ್ರದಲ್ಲೇ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಲಿದ್ದಾರೆ. ಬಾಗಲಕೋಟೆ ನಗರದಲ್ಲೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣವಾಗಿ ಬಡ ಜನತೆಗೆ ಅನುಕೂಲವಾಗಲಿದೆ. ಗುಳೇದಗುಡ್ಡದಲ್ಲಿ ತಾಲೂಕು ಕ್ರೀಡಾಂಗಣ ನಿರ್ಮಿಸಬೇಕೆಂಬ ಬೇಡಿಕೆ ಬಹಳ ದಿನಗಳಿಂದ ಇತ್ತು. ಈ ಬೇಡಿಕೆಯನ್ನು ಈಡೇರಿಸಿ ಪಟ್ಟಣಕ್ಕೆ ತಾಲೂಕು ಕ್ರೀಡಾಂಗಣ ಮಂಜೂರು ಮಾಡಿರುವುದು ಈ ಭಾಗದ ಕ್ರೀಡಾಪಟುಗಳಿಗೆ ಸಂತಸ ತಂದಿದೆ.

ಸಂತ್ರಸ್ತರಿಗೆ ಅನ್ಯಾಯ: ಬಸವರಾಜ ಖೋತ



• **ಬೀಳಗಿ:** ಕೃಷ್ಣಾ ಮೇಲ್ದಂಡೆ ಯೋಜನೆ-3ರಲ್ಲಿ ಮುಳುಗಡೆ ಆಗಲಿರುವ ಭೂಮಿಗೆ ಇಂದಿನ ವಾಸ್ತವ ಮಾರುಕಟ್ಟೆ ದರ ನಿಗದಿ ಮಾಡಿ ನೀರಾವರಿ ಭೂಮಿಗೆ 40 ಲಕ್ಷ ರೂ. ಒಣಬೇಸಾಯ ಭೂಮಿಗೆ 30 ಲಕ್ಷ ರೂ. ಏಕರೂಪದ ದರ ನಿಗದಿ ಮಾಡಿದ್ದರು. ಇದರಿಂದ ಸಂತ್ರಸ್ತರು ಹೆಚ್ಚುವರಿ ಪರಿಹಾರ ತ್ಯಾಗ ಮಾಡಿದ್ದರೂ ಸಹ, ತಾನೇ ನೀಡಿದ ವಚನವನ್ನು ಪಾಲಿಸಲು ಸರ್ಕಾರ ವಿಫಲವಾಗಿದೆ. ನಮ್ಮದು ನುಡಿದಂತೆ ನಡೆಯುವ ಸರ್ಕಾರವೆಂದು ಹೇಳುತ್ತಾರೆ. ಆದರೆ ಶುಕ್ರವಾರ ಸಿಎಂ ಮಂಡಿಸಿದ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆಯಾಗಲಿರುವ ಭೂಮಿ ಸ್ವಾಧೀನ ಮಾಡಿಕೊಳ್ಳಲು ನಯಾಪೈಸೆ ಅನುದಾನ ಮೀಸಲಿಡದೇ ಸಂತ್ರಸ್ತರಿಗೆ ಅನ್ಯಾಯ ಮಾಡಿದ್ದು, ಮೂರು ವರ್ಷದಲ್ಲಿ ಪರಿಹಾರ ನೀಡುತ್ತೇವೆಂದು ಘೋಷಣೆ ಮಾಡಿದ್ದು ಕೇವಲ ಪ್ರಚಾರಕ್ಕಷ್ಟೇ ಸೀಮಿತವಾಗಿದೆ ಎಂದು ಜಿಪಂ ಮಾಜಿ ಸದಸ್ಯ ಬಸವರಾಜ ಖೋತ ತಿಳಿಸಿದ್ದಾರೆ.



ಜಮಖಂಡಿ: ತಾಲೂಕಿನ ಕೊಣ್ಣೂರ ಗ್ರಾಮ ಪಂಚಾಯತಿಯಲ್ಲಿ ಅಭಿವೃದ್ಧಿ ಕೆಲಸ ನೀಡದ ಕಾರಣ ತಗಾದೆ ತೆಗೆದು ಗ್ರಾಮಸ್ಥರೊದಿಗೆ ಸಹಕಾರ ನೀಡಿದ ಕಾಮಗಾರಿಯಲ್ಲಿ ಅವ್ಯವಹಾರ ನಡೆಸಿದ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಸಿದ್ದು ಬಿರಾದಾರ ಅವರನ್ನು ವಜಾಗೊಳಿಸುವಂತೆ ಆಗ್ರಹಿಸಿ ಕೊಣ್ಣೂರ ಗ್ರಾಮದ ಗ್ರಾಮಸ್ಥರು ಗ್ರಾಪಂ ಆವರಣದಲ್ಲಿ ಧರಣಿ ಸತ್ಯಾಗ್ರಹ ನಡೆಸಿದರು. ಗ್ರಾಪಂ ಮಾಜಿ ಅಧ್ಯಕ್ಷ ಮಲ್ಲಪ್ಪ ಮಲಘಾನ, ಮಾಜಿ ಸದಸ್ಯ ರುದ್ರಪ್ಪ ಜಾನಮಟ್ಟಿ ಸೇರಿದಂತೆ ಇತರರು ಇದ್ದರು.

ಪಿಡಿಒ ವಿರುದ್ಧ ಗ್ರಾಪಂ ಎದುರು ಪ್ರತಿಭಟನೆ

• **ಜಮಖಂಡಿ:** ತಾಲೂಕಿನ ಕೊಣ್ಣೂರ ಗ್ರಾಮ ಪಂಚಾಯತಿಯಲ್ಲಿ ಅಭಿವೃದ್ಧಿ ಕೆಲಸ ನೀಡದ ಕಾರಣ ತಗಾದೆ ತೆಗೆದು ಗ್ರಾಮಸ್ಥರೊದಿಗೆ ಸಹಕಾರ ನೀಡಿದ ಕಾಮಗಾರಿಯಲ್ಲಿ ಅವ್ಯವಹಾರ ನಡೆಸಿದ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಸಿದ್ದು ಬಿರಾದಾರ ಅವರನ್ನು ವಜಾಗೊಳಿಸುವಂತೆ ಆಗ್ರಹಿಸಿ ಕೊಣ್ಣೂರ ಗ್ರಾಮದ ಗ್ರಾಮಸ್ಥರು ಗ್ರಾಪಂ ಆವರಣದಲ್ಲಿ ಧರಣಿ ಸತ್ಯಾಗ್ರಹ ಆರಂಭಿಸಿದರು. ಗ್ರಾಪಂ ಪಿಡಿಒ ಸಿದ್ದು ಬಿರಾದಾರ ಅಭಿವೃದ್ಧಿಯಲ್ಲಿ ಅವ್ಯವಹಾರ ನಡೆಸಿದ್ದಾರೆ. ಇದಕ್ಕೆ ಪೂರಕವಾಗಿ ಜಿಪಂ ಸಿಇಒ ಮತ್ತು ತಾಪಂ ಇಒ ಗೆ ಮನವಿ ಸಹ ನೀಡಿದ್ದೇವೆ. ಆದರೆ ಅವರು ತನಿಖೆ ಮಾಡಿದಾಗ ತಪ್ಪುಗಳು ಕಂಡು ಬಂದಿವೆ ಎಂದು ಪ್ರತಿಭಟನಾಕಾರರು ಆರೋಪಿಸಿದ್ದಾರೆ.ತನಿಖೆಯಲ್ಲಿ ತಪ್ಪು ಕಂಡು ಬಂದರೂ ಸಹ ಯಾವುದೇ ಕ್ರಮ ಜರುಗಿಸಿಲ್ಲ. ಈ ಕೂಡಲೇ ಈ ಅಧಿಕಾರಿಯನ್ನು ಕೆಲಸದಿಂದ ವಜಾಗೊಳಿಸಿ. ಇಲ್ಲದಿದ್ದರೆ ಗ್ರಾಮ ಪಂಚಾಯತಿಗೆ ಬೀಗ ಹಾಕಿ ಹೋರಾಟಕ್ಕೆ ನಾಂದಿಯಾಗುತ್ತೇವೆ ಎಂದು ಗ್ರಾಪಂ ಮಾಜಿ ಅಧ್ಯಕ್ಷ ಮಲ್ಲಪ್ಪ ಮಲಘಾನ, ಮಾಜಿ ಸದಸ್ಯ ರುದ್ರಪ್ಪ ಜಾನಮಟ್ಟಿ ಎಚ್ಚರಿಕೆ ನೀಡಿದರು. ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಸಚಿನ್ ಮಾಚಕನೂರು ಸ್ಥಳಕ್ಕೆ ಭೇಟಿ ನೀಡಿ ಈ ವಿಷಯವನ್ನು ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದು. ನಂತರ ಅವರ ಆದೇಶದ ಮೇಲೆ ಮುಂದಿನ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದ್ದಾರೆ. ಶಿವಪ್ಪ ನಿಂಬರಗಿ, ಸುಭಾಷ್ ಮೇತ್ರಿ, ಕಾಮಣ್ಣಾ ಮೇತ್ರಿ, ಪ್ರಕಾಶ ಹಗರಿ, ಮಂಜು ಕಂಬಾರ, ಮಂಜು ನಿಂಬರಗಿ, ನಜೀರ ಪೆಂಡಾರಿ, ಅರ್ಜುನ ತಳವಾರ, ಆನಂದ ಮೇತ್ರಿ, ಸಂಜು ಮೇತ್ರಿ, ಈರಯ್ಯ ತಳವಾರ, ರಮೇಶ ಬಗನ್ನವರ, ಕರೆಪ್ಪ ಶೀರೊಳ ಇನ್ನಿತರರಿದ್ದರು.




ಬಾದಾಮಿ: ಮಾಜಿ ಸಚಿವ ಮುರಗೇಶ ನಿರಾಣಿ ಅವರಿಗೆ ಗುಲ್ಬರ್ಗಾ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ನೀಡಿದ್ದಕ್ಕಾಗಿ ಬಾದಾಮಿ ತಾಲೂಕಿನ ಶರಣಪ್ಪ ಕಲಬಾಶೆಟ್ಟರ, ಪಿ.ಆರ್.ಗೌಡರ, ಯಡ್ರಾಮಿ ಅವರು ಡಾ.ಮುರಗೇಶ ನಿರಾಣಿಯವರಿಗೆ ಅವರ ಮನೆಯಲ್ಲಿ ಅಭಿನಂದಿಸಿ ಸನ್ಮಾನಿಸಿದರು.

ಗಲ್ಲಿಗಲ್ಲಿಗಳಲ್ಲಿ ಬಣ್ಣದಾಟದ ಅಬ್ಬರ | ಕುಣಿದು ಕುಪ್ಪಳಿಸಿದ ಜನತೆ

ಕೋಟೆ ನಾಡಲ್ಲಿ ಸಂಭ್ರಮದ ರಂಗಿನಾಟ

• **ಬಾಗಲಕೋಟೆ:** ಐತಿಹಾಸಿಕ ಬಾಗಲಕೋಟೆ ಹೋಳಿ ಹಬ್ಬವು ಎರಡನೇ ದಿನವಾದ ಶುಕ್ರವಾರ ಸಂಭ್ರಮ ಸಡಗರದಿಂದ ನಡೆಯಿತು. ಹಳೇ ನಗರ, ನವನಗರ, ವಿದ್ಯಾಗಿರಿಯ ಗಲ್ಲಿಗಲ್ಲಿಗಳಲ್ಲಿ ಬೆಳಗ್ಗೆಯಿಂದಲೆ ಬಣ್ಣದಾಟ ಅಬ್ಬರದಿಂದ ಆರಂಭಗೊಂಡಿತು. ಮಕ್ಕಳು, ಮಹಿಳೆಯರು, ವೃದ್ಧರು ಸೇರಿದಂತೆ ಎಲ್ಲರೂ ರಂಗಿನಾಟವಾಡಿ ಸಂಭ್ರಮಿಸಿದರು.

ಎರಡನೇ ದಿನ ವೆಂಕಟಪೇಟ, ಹಳಪೇಟ, ಜೈನ್ ಪೇಟ ಮೂರು ಕಡೆಗಳಲ್ಲಿ ಬಣ್ಣದೋಕುಳಿ ನಡೆಯಿತು. ಚಿಣ್ಣರು, ಯುವಕರು ಹಲಗೆ ಭಾರಿಸುತ್ತಾ ನಗರದ ಪ್ರಮುಖ ಬೀದಿ ಸಂಚರಿಸಿದರು. ಕ್ಷಣ ಕ್ಷಣಕ್ಕೂ ಹೊರ ಹೊಮ್ಮುತ್ತಿದ್ದ ಹಲಗೆ ನಿನಾದಕ್ಕೆ ಗುಂಪು, ಗುಂಪು ಎಲ್ಲರು ಕುಣಿದು ಕುಪ್ಪಳಿಸಿದರು. ನಗರದ ಬಸವೇಶ್ವರ ವೃತ್ತ, ವಲ್ಲಾಭಾಯಿ ಚೌಕ, ಕೊತ್ತಲೇಶ ದೇವಸ್ಥಾನ, ಎಂ.ಜಿ.ರಸ್ತೆ, ಕಾಲೇಜು ರಸ್ತೆ ಸೇರಿದಂತೆ ನಗರದ ಪ್ರಮುಖ ವೃತ್ತ ಮತ್ತು ರಸ್ತೆಗಳಲ್ಲಿ ಜನ ಸಾಗರವೆ ಸೇರಿ ಪರಸ್ಪರ ಗುಲಾಲ ಎರಚಿ ಸಂಭ್ರಮಿಸಿದರು. ಬಗೆಬಗೆಯ ಬಣ್ಣವನ್ನು ಹುಚ್ಚುತ್ತ ಬಣ್ಣದೋಕುಳಿಗೆ ರಂಗೇರುವಂತೆ ಮಾಡಿದರು. ಮಾಧ್ಯಾಹ್ನದ ನಂತರ ನಗರದ ತುಂಬೆಲ್ಲ ಬಣ್ಣದ ಓಕುಳಿ ತೀವ್ರಗೊಂಡಿತು. ಮೂರು ಪೇಟಗಳ ಜನರು ಬಣ್ಣದ ಬಂಡಿಗಳ ಜೊತೆಗೆ ಕೋಟೆ ನಗರಿಯ ಪ್ರಮುಖ ರಸ್ತೆಗಳಲ್ಲಿ ಬಣ್ಣದ ನೀರು ಎರೆಚುತ್ತ ಸಾಗಿದರು. ಬಸವೇಶ್ವರ ವೃತ್ತದಿಂದ ಕಾಲೇಜು ವೃತ್ತದ ವರೆಗೆ ಪರಸ್ಪರ ಎದುರಾದ ವೆಂಕಟಪೇಟ, ಹಳಪೇಟ, ಜೈನ್ ಪೇಟಯ ಬಣ್ಣದ ಬಂಡಿಗಳು ನೋಡುವುದೇ ಕಣ್ಣಿಗೆ ಹಬ್ಬದಂತೆ ಗೋಚರಿಸಿತು. ಬಂಡಿ, ಟ್ರ್ಯಾಕ್ಟರ್‌ಗಳಲ್ಲಿ ಬಣ್ಣದ ನೀರು ತುಂಬಿದ ಬ್ಯಾರೆಲ್ ಇರಿಸಿ ಎದುರು ಬದುರು ನಿಂತು ಹುಯ್ಯುತ್ತ ಬಣ್ಣದ ಹಬ್ಬದ ಮೆರಗು ಹೆಚ್ಚಿಸಿದರು. ಮೂರು ಪೇಟಗಳ ಜನರು ಒಂದು ಕಡೆಗೆ ಬಣ್ಣದಲ್ಲಿ ಸಮಾಗಮವಾಗುವ ದೃಶ್ಯವನ್ನು ನೋಡಲು ಸಾವಿರಾರು ಜನರು ರಸ್ತೆಯ ಇಕ್ಕೆಲಗಳಲ್ಲಿ ನಿಂತಿದ್ದರು.



ಹಲಗೆ ನಾದಕ್ಕೆ ಮನಸೋತ ಜನ

ಬಸವೇಶ್ವರ ವೃತ್ತದಲ್ಲಿ ಹಮ್ಮಿಕೊಂಡಿದ್ದ ರೇನ್ ಡ್ಯಾನ್ಸ (ಕೃತಕ ಮಳೆ) ಕೋಟೆ ನಗರಿ ರಂಗೀನಾಟಕ್ಕೆ ಕಳೆ ತಂದಿತು. ತುಂತುರು ಹನಿಗಳ ನಡುವೆ ಯುವಕರು ಕುಣಿದು ಕುಪ್ಪಳಿಸಿದರು. ಇದರೊಂದಿಗೆ ಡಿಜೆ ಸಾಂಗ್ ಸಾಥ ನೀಡಿದ್ದು ಆಕರ್ಷಿಸಿತು. ಚಪ್ಪಾಳಿ, ಶಿಳ್ಳೆಗಳ ಸುರಿಮಳೆಯಾಯಿತು. ಅಲ್ಲದೆ ತುರಾಯಿ ಹಲಗೆಯ ನಿನಾದ ಹೋಳಿ ಹಬ್ಬ ಮೆರಗು ಹೆಚ್ಚಿಸಿತು. ಡಿಜೆ ಸೌಂಡ್ ಮತ್ತು ಹಲಗೆ ನಿನಾದಕ್ಕೆ ಕೋಟೆ ನಗರಿ ಜನ ಮನಸೋತರು.

ಇಂದು ಕೊನೆ ದಿನ

ಬಾಗಲಕೋಟೆಯಲ್ಲಿ ಮೊದಲ ದಿನ ಕಿಲ್ಲಾ ಹಾಗೂ 2ನೇ ದಿನ ಹಳೆಪೇಟ, ಜೈನ್‌ಪೇಟ, ವೆಂಕಟಪೇಟ ಬಣ್ಣದಾಟ ಮುಕ್ತಾಯವಾಗಿದ್ದು, ಮಾ.7ರಂದು ಮೂರನೇ ದಿನ ಹೊಸಪೇಟದಿಂದ ಬಣ್ಣದಾಟ ನಡೆಯಲಿದೆ. ಹಳೇ ಬಾಗಲಕೋಟೆ, ವಿದ್ಯಾಗಿರಿ, ನವನಗರ ಬಣ್ಣದಲ್ಲಿ ತುಂಬಿ ತುಳುಕುತ್ತವೆ.

ರನ್ನ ವೈಭವದಿಂದ ಸಾಹಿತ್ಯ ಪಸರಿಸಲಿ: ಕಂಬಾರ

• **ರನ್ನ ಬೆಳಗಲಿ:** ಮಹಾಕವಿ ರನ್ನ ನಮ್ಮ ಬೆಳಗಲಿಯಲ್ಲಿ ಜನ್ಮತಾಳಿದ್ದು ನಮ್ಮೆಲ್ಲರ ಪುಣ್ಯ. ಇಂತಹ ಪುಣ್ಯ ಭೂಮಿಯಲ್ಲಿ ಜನಿಸಿದ ನಾವೆಲ್ಲರೂ ಪುಣ್ಯವಂತರು. ಕವಿರತ್ನತ್ರಯರಲ್ಲಿ ಒಬ್ಬರಾದ ಚಕ್ರವರ್ತಿ ರನ್ನನ ಇತಿಹಾಸ ಉಳಿಸಿ ಬೆಳೆಸಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಬೆಳಗಲಿ ವಿದ್ಯಾವರ್ಧಕ ಸಂಘದ ಶಿಕ್ಷಕರಾದ ಎ.ಎಂ.ಕಂಬಾರ ಹೇಳಿದರು.

ಪಟ್ಟಣದಲ್ಲಿ ನಡೆದ ಶಾಲಾ ಹಂತದ ಒಂದು ದಿನದ ರನ್ನ ವೈಭವ-2026 ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಚಕ್ರವರ್ತಿ ರನ್ನನ ಸಾಹಿತ್ಯವು ಕನ್ನಡ ಭಾಷೆಯ ಸೊಗಡಿನ ಪಾಂಡಿತ್ಯವನ್ನು ತನ್ನ ಶ್ರೇಷ್ಠ ಗ್ರಂಥಗಳ ಮೂಲಕ ಎತ್ತಿ ತೋರಿಸುತ್ತದೆ. ರನ್ನನ ಗದಾಯುದ್ದ(ಸಾಹಸ ಭೀಮ ವಿಜಯ) ಅಜಿತ ಪುರಾಣ, ರನ್ನ ಕಂದ, ಪರಶುರಾಮ ಚರಿತ, ಹೀಗೆ ಮುಂತಾದವುಗಳು ರನ್ನನ ಇತಿಹಾಸ ಸಾಕ್ಷಿಕರಿಸುತ್ತವೆ ಎಂದರು.

ರನ್ನನ ಕಾವ್ಯಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವುದು, ಉಳಿಸುವುದು ನಮ್ಮ ಕರ್ತವ್ಯ. ರನ್ನ ವೈಭವದ ಮೂಲಕ ಹಳೆಗನ್ನಡ ಮತ್ತು ಕನ್ನಡ ಸಾಹಿತ್ಯ ಪಸರಿಸುವ ಕೆಲಸವಾಗಬೇಕು. ಮಹಾಕವಿ ರನ್ನನ ತತ್ವ ಚಿಂತನೆಗಳು, ಸಾಹಿತಿಕ ಚಟುವಟಿಕೆಗಳು ರಾಜ್ಯದ ಪ್ರತಿ ಶಾಲೆಗಳಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಗಬೇಕು. ರನ್ನ ವೈಭವ ಇದ್ದಾಗ ಮಾತ್ರ ಕಾಳಜಿ ಬೇಡ, ನಿತ್ಯ ರನ್ನನ ಉಕ್ತಿಗಳನ್ನು ಮಕ್ಕಳಿಂದ ಹೇಳಿಸಬೇಕು. ಸರ್ಕಾರ ಹಮ್ಮಿಕೊಂಡಾಗ ಮಾತ್ರ ರನ್ನ ವೈಭವ ಮಾಡುತ್ತೇವೆ. ಎಲ್ಲರೂ ಒಂದುಗೂಡಿ ನಾವೆಲ್ಲರೂ ರನ್ನ ವೈಭವ ವಿಜೃಂಭಣೆಯಿಂದ ಮಾಡಬೇಕು ಎಂದರು.

ಮುಧೋಳದಲ್ಲಿ ಒಂದು ದಿನ, ರನ್ನ ಬೆಳಗಲಿಯಲ್ಲಿ ಎರಡು ದಿನ ರನ್ನ ವೈಭವ ಕಾರ್ಯಕ್ರಮ ಜರಗಬೇಕು. ನಮ್ಮೂರಲ್ಲಿರುವ ಕಲಾವಿದರಿಗೆ ಮೊದಲು ಆದ್ಯತೆ ಸಿಗಬೇಕು. ರನ್ನನ ಗದಾಯುದ್ದ ಹಳ್ಳಿಯಿಂದ ದಿಲ್ಲಿಯವರೆಗೆ ಎಂಬ ನಾಟಕವನ್ನು ಜಿಲ್ಲೆಯಾದ್ಯಂತ ಸರ್ಕಾರ ಇದನ್ನು ಪ್ರತಿಷ್ಠಾಪಿಸಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿದರು. ಚಿತ್ರಕಲಾ ಶಿಕ್ಷಕ ಬಾಲಕೃಷ್ಣ ಚೋಪಡೆ ಮಾತನಾಡಿದರು. ಎಸ್.ಬಿ.ರೆಡ್ಡೆರಟ್ಟಿ, ಎಂ.ಬಿ.ಸಾಬೋಜಿ, ಎಚ್.ಜಿ.ಕುಂಬಾರ, ಎಂ.ಕೆ.ಕುಲಗೋಡ, ಎಂ.ಎಸ್.ಗಾನಣೆಗೇರ, ವಿ.ಕೆ.ಬಕರೆ, ಎ.ಜಿ.ಮೂಡಲಗಿ, ರಾಘವೇಂದ್ರ ನಾಯಕ ಶಿಕ್ಷಕ ಕೆ.ಎ.ಧಡೂತಿ ಉಪಸ್ಥಿತರಿದ್ದರು.





ಸಿದ್ದರಾಮಯ್ಯ ನೇತೃತ್ವದ ಈ ಬಾರಿ ಬಜೆಟ್ ಮೂಲಕ ರಾಜ್ಯಕ್ಕೆ ಖಾಲಿ ಚೊಂಬು ಕೊಟ್ಟಿದೆ. ನೇಕಾರರಿಗೆ ಹಿಂದಿನ ಸರ್ಕಾರದ ಯೋಜನೆಗಳನ್ನೇ ಮುನ್ನಡೆಸಿ ಶೂನ್ಯ ರೂಪಾಯಿಯೊಂದಿಗೆ ನೇಕಾರ ಸಮುದಾಯ ನಿರ್ಲಕ್ಷ್ಯಕ್ಕೆ ವಿರೋಧವಿದೆಯೆಂದರು. ಒಟ್ಟಾರೆ ಇದೊಂದು ಬೋಗಸ್ ಬಜೆಟ್ ಆಗಿದ್ದು, ರಾಜ್ಯದ ಖಜಾನೆ ಲೂಟಿ ಹೊಡೆಯುತ್ತಿದ್ದಾರೆ.

■ **ಸಿದ್ದು ಸವದಿ,** ಶಾಸಕ



ರಾಜ್ಯ ಸರ್ಕಾರದ ಬಜೆಟ್ ಜನವಿರೋಧಿಯಾಗಿದೆ. ಮೂಲಸೌಕರ್ಯ, ಗ್ರಾಮೀಣ ಅಭಿವೃದ್ಧಿಗೆ ಶೂನ್ಯ ಅಲ್ಪಸಂಖ್ಯಾತ ಪರ ಯೋಜನೆ ರೂಪಿಸಿದ್ದಾರೆ. ಉತ್ತರ ಕರ್ನಾಟಕ ನಿರ್ಲಕ್ಷ್ಯ ಮಾಡಲಾಗಿದೆ. ಸ್ಪಷ್ಟ ಯೋಜನೆಗಳಿಲ್ಲದ ನಿರಾಶಾದಾಯಕ ಬಜೆಟ್ ಇದಾಗಿದೆ. ದೂರದೃಷ್ಟಿ ಇಲ್ಲದ ಬಜೆಟ್ ಆಗಿದೆ.

■ **ಶಾಂತಗೌಡ ಪಾಟೀಲ,** ಜಿಲ್ಲಾಧ್ಯಕ್ಷ ಬಿಜೆಪಿ



ರಾಜ್ಯ ಸರ್ಕಾರ ಮಂಡಿಸಿರುವ ಬಜೆಟ್ ನಿರಾಶದಾಯಕ ಬಜೆಟ್ ಆಗಿದ್ದು, ಬಜೆಟ್ ಸಾಲ ಮಾಡಿ ತುಪ್ಪ ತಿನ್ನು ಎನ್ನುವ ಮಾತಿನಂತಿದೆ. ಇದು ರಾಜ್ಯವನ್ನು ಅಭಿವೃದ್ಧಿಗೆ ಕೊಂಡೊಯ್ಯುವ ಬಜೆಟ್ ಅಲ್ಲ. ಮುಖ್ಯವಾಗಿ ಈ ಬಜೆಟ್‌ನಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಕಾಮಗಾರಿಗೆ 18,000 ಕೋಟಿ ರೂ. ನೀಡುತ್ತೇವೆ ಎನ್ನುವ ಭರವಸೆ ಹುಸಿಯಾಗಿದೆ.

■ **ಮೋಹನ್ ಎಸ್.ಜಾಧವ್,** ಸಹಕಾರಿ ಧುರೀಣಮ, ಬಿಜೆಪಿ ಮುಖಂಡ



ಸಿಎಂ ಸಿದ್ದರಾಮಯ್ಯನವರು 4.48 ಲಕ್ಷ ಕೋಟಿ ರೂ. ಬೃಹತ್ ಗಾತ್ರದ 17ನೇ ಬಜೆಟ್ ನೀಡಿ ದಾಖಲೆ ನಿರ್ಮಿಸಿದ್ದಾರೆ. ರಾಜ್ಯದಲ್ಲಿ ಗ್ಯಾರಂಟಿ ಹೊರೆ ಇದ್ದರೂ ಸಹ ಪಜಾ, ಪಪಂ ಮತ್ತು ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿ, ನೀರಾವರಿಗೆ ಮಹತ್ತರ ರೂಪ ಕೊಟ್ಟಿದ್ದಾರೆ. ಯುಕೆಪಿ ಮೂರನೇ ಹಂತದ ಯೋಜನೆಗೆ ಮುಂಬರುವ ದಿನಗಳಲ್ಲಿ ಅನುದಾನ ಭರವಸೆ ನೀಡಿದ್ದಾರೆ. ನಿರುದ್ಯೋಗ ಯುವಕರಿಗೆ ಉದ್ಯೋ ಭರವಸೆಗಾಗಿ ಖಾಲಿಯಿರುವ ಹುದ್ದೆಗಳ ಭರ್ತಿಗಳಿಗೆ ಅನುಮೋದನೆ ನೀಡಿದ್ದಾರೆ. 16 ವಯೋಮಾನದ ಮಕ್ಕಳಿಗೆ ಸಾಮಾಜಿಕ ಜಾತಲಾಣ ನಿರ್ಬಂಧ ಉತ್ತಮವಾಗಿದೆ. ಇದರಿಂದ ಮಕ್ಕಳ ಶ್ರೋಯೋಭಿವೃದ್ಧಿಗೆ ಪೂರಕ.

■ **ಆನಂದ ನ್ಯಾಮಗೌಡ,** ಮಾಜಿ ಶಾಸಕ



ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ ಬಜೆಟ್ ಶೂನ್ಯ. ಒಂದು ಸಮುದಾಯ ಗುರಿಯಾಗಿಸಿಕೊಂಡು ಮಂಡಿಸಿದ ಬಜೆಟ್ ಇದಾಗಿದೆ. ಇದು ಬಜೆಟ್ ಅಲ್ಲ ಬದಲಾಗಿ ಹಳೆ ಹಾಡನ್ನು ಹೊಸ ಕ್ಯಾಸೆಟ್‌ನಲ್ಲಿ ಹಾಡಿ ಜನರನ್ನು ಮರಳು ಮಾಡುವ ಪ್ರಯತ್ನ ಇದಾಗಿದೆ. ಇದು ಕೇವಲ ಮತಬ್ಯಾಂಕ್ ರಾಜಕಾರಣಕ್ಕಾಗಿ ಮಾಡುತ್ತಿರುವ ನಾಟಕ.

■ **ರಾಜು ಚಿಕನಾಳ,** ಭಾಜಪ ಜಿಲ್ಲಾ ಕಾರ್ಯದರ್ಶಿ



ರಾಜ್ಯದ ಆಯ-ವ್ಯಯ ಪತ್ರವು ರೈತರ ಪರವಾಗಿದೆ. ಸರ್ವ ಜನಾಂಗದ ಶಾಂತಿಯ ತೋಟವಾಗಿ ಮುಖ್ಯಮಂತ್ರಿಗಳು ತಮ್ಮ ಸರ್ವಕಾಲಿಕ ಬಜೆಟ್ ಮಂಡಿಸಿ ದಾಖಲೆ ನಿರ್ಮಿಸಿದ್ದಾರೆ. ಯುಕೆಪಿ ಮೂರನೇ ಹಂತ ಯೋಜನೆಗೆ ಮುಂಬರುವ ದಿನಗಳಲ್ಲಿ ಅಗತ್ಯಗನುಗುಣವಾಗಿ ಅನುದಾನ ನೀಡುವ ಘೋಷಣೆ ಮಾಡಿದ್ದು ಸಂತಸ ತಂದಿದೆ.

■ **ಬಸವರಾಜ ಸಿಂಧೂರ,** ಕಾಂಗ್ರೆಸ್ ಮುಖಂಡ



ರಾಜ್ಯವನ್ನು ಸಾಲದ ಸಿಲುಕಿಸುವಂತಹ ಬಜೆಟ್ ಇದು. ಈ ಸಾಲದ ಬಜೆಟ್ ರಾಜ್ಯದ ಮುಂದಿನ ಭವಿಷ್ಯಕ್ಕೆ ಒಳ್ಳೆಯದಲ್ಲ. ಸಿದ್ದರಾಮಯ್ಯನವರು 17ನೇ ಬಜೆಟ್ ಮಂಡಿಸಿದ್ದು ಒಂದು ಸಾಧನೆಯಾದರೆ ಇನ್ನೊಂದು ಬಜೆಟ್ ಗಾತ್ರದ ಎರಡುವರೆ ಪಟ್ಟು ಸಾಲ ಮಾಡಿರುವುದು ಸಾಧನೆ. ಗುಳೇದಗುಡ್ಡ ನಗರದಲ್ಲಿ ತಾಲೂಕು ಕ್ರೀಡಾಂಗಣ ನಿರ್ಮಾಣ ಮಾಡುವುದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅನುದಾನ ನೀಡಿದ್ದು ಸ್ವಾಗತಾರ್ಹ.

■ **ರಾಜಶೇಖರ ಶೀಲವಂತ,** ಮಾಜಿ ಶಾಸಕ



ದಾಖಲೆಯ 17ನೇ ಬಜೆಟ್ ಮಂಡಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ ಬಜೆಟ್‌ನಿಂದ ಬಾದಾಮಿ ಮತಕ್ಷೇತ್ರಕ್ಕೆ ಒಳ್ಳೆಯದಾಗಿದೆ. ಗುಳೇದಗುಡ್ಡ ತಾಲೂಕಿನ ಹಂಸನೂರು ಹಳ್ಳಕ್ಕೆ ಚೆಕ್ ಡ್ಯಾಮ ನಿರ್ಮಾಣ, ಗಂಜಿಕೆರೆ ಸುಧಾರಣೆ ಕಾಮಗಾರಿ, ಮಲಪ್ರಭ ಎಡದಂಡೆ ಕಾಲುವೆಯ ಅಧುನಿಕರಣ ಹಾಗೂ ಗುಳೇದಗುಡ್ಡ ಪಟ್ಟಣದಲ್ಲಿ ತಾಲೂಕು ಕ್ರೀಡಾಂಗಣ ನಿರ್ಮಾಣಕ್ಕೆ ಬಜೆಟ್‌ನಲ್ಲಿ ಅನುದಾನ ನೀಡಿದ್ದಾರೆ. ಮಲಪ್ರಭ ಎಡದಂಡೆ ಕಾಲುವೆಯ ಅಧುನಿಕರಣಕ್ಕೆ ಮೊದಲ ಹಂತದ 125 ಕೋಟಿ ರೂ.ಗಳನ್ನು ಬಜೆಟ್‌ನಲ್ಲಿ ನೀಡಲಾಗಿದೆ.

■ **ಭೀಮಸೇನ ಚಿಮ್ಮನಕಟ್ಟಿ,** ಶಾಸಕ



ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆ ಮಾಡಿದ್ದರಿಂದ ಸತತವಾಗಿ ಮೂರನೇ ಬಾರಿ ವಿತ್ತೀಯ ಕೊರತೆಯುಂಟಾಗಿ ರಾಜ್ಯದ ಜನತೆ ಸಾಲದ ಶೂಲಕ್ಕೆ ಏರಿಸಿದ್ದಾರೆ. ಕೇವಲ ತುಷ್ಟೀಕರಣ ರಾಜಕೀಯದಿಂದ ರಾಜ್ಯವು ಅಭಿವೃದ್ಧಿ ಕಾಣುತ್ತಿಲ್ಲ. ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಉಲ್ಬಣವಾಗಿ ಯುವಕರು ಬೀದಿಗಿಳಿದು ಪ್ರತಿಭಟನೆ ಕಡೆಗಣಿಸಲಾಗುತ್ತಿದೆ. ಉದ್ಯೋಗ ಸೃಷ್ಟಿಗೆ ಬಜೆಟ್‌ನಲ್ಲಿ ಪ್ರಸ್ತಾಪವಿಲ್ಲ. ಸರ್ಕಾರಿ ಆಸ್ಪತ್ರೆಗಳಿಗೆ ಔಷಧಿಯ ಕೊರತೆಯತ್ತ ಗಮನ ಹರಿಸಿಲ್ಲ.

■ **ಜಗದೀಶ ಗುಡಗುಂಟಿ,** ಶಾಸಕ



ಬಜೆಟ್‌ನಲ್ಲಿ ತಾಲೂಕು ಕ್ರೀಡಾಂಗಣವನ್ನು ಗುಳೇದಗುಡ್ಡಕ್ಕೆ ಮಂಜೂರು ಮಾಡಿ ಘೋಷಿಸಿದ್ದು ಸ್ವಾಗತಾರ್ಹ. ಕಳೆದ ವರ್ಷ ಬಜೆಟ್‌ಲ್ಲಿ ಮಂಜೂರಾದ ಪ್ರಜಾಸೌಧ ನಿರ್ಮಾಣಕ್ಕೆ ಇಲ್ಲಿಯವರೆಗೆ ಕ್ರಮ ಜರುಗಿಸಿರುವುದಿಲ್ಲ. ಕಾರಣ ಇವೆರಡಕ್ಕೂ ಸೂಕ್ತವಾದ ಸ್ಥಳ ಪರಿಶೀಲಿಸಿ ಕೂಡಲೇ ಕಾರ್ಯಪ್ರವೃತ್ತರಾಗಬೇಕು

■ **ಅಶೋಕ ಹೆಗಡಿ,** ಪ್ರಧಾನ ಕಾರ್ಯದರ್ಶಿ, ತಾಲೂಕು ಹೋರಾಟ ಸಮಿತಿ



ಸಿಎಂ ಸಿದ್ದರಾಮಯ್ಯನವರು ಮಂಡಿಸಿದ ಬಜೆಟ್ ಉತ್ತರ ಕರ್ನಾಟಕದ ಜನತೆಗೆ ತಾರತಮ್ಯವಾಗಿದೆ. ಕೃಷ್ಣಾ ಮೇಲ್ದಂಡೆ ಮೂರನೇ ಹಂತದ ಯೋಜನೆಗೆ ಭೂ ಸ್ವಾಧೀನಕ್ಕೆ ಒಂದು ರೂ. ಸಹ ನೀಡಿಲ್ಲ. ಉತ್ತರ ಕರ್ನಾಟಕ ಹಿಂದುಳಿದ ತಾಲೂಕುಗಳ ಅಭಿವೃದ್ಧಿಗೆ ಅಗತ್ಯ ಅನುದಾನ ಮೀಸಲಿಟ್ಟಿಲ್ಲ. ಇದರಿಂದ ಪ್ರಾದೇಶಿಕ ಅಸಮತೋಲನ ಎತ್ತಿ ತೋರಿಸಿದ್ದಾರೆ.

■ **ವಿಠ್ಠಲ ಕುಮ್ಮರಮಟ್ಟಿ,** ಕೃಷ್ಣಾ ಮೇಲ್ದಂಡೆ ಯೋಜನೆಯ ಹೋರಾಟಗಾರರು

ಕೃಷ್ಣಾ ಮೇಲ್ದಂಡೆ ಪೂರ್ಣಗೊಳಿಸಲು ದಿಟ್ಟ ಹೆಜ್ಜೆ



• **ಬಾಗಲಕೋಟೆ:** 16 ವರ್ಷದ ಒಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ಬಳಕೆಗೆ ನಿರ್ಬಂಧ ವಿಧಿಸುವ ಮೂಲಕ ಸದೃಡ ಸಮಾಜ ಆಶಯಕ್ಕೆ ನಾಂದಿಹಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಖ್ಯವಾಗಿ ಉತ್ತರ ಕರ್ನಾಟಕ ಭಾಗದ ಬಹು ದೊಡ್ಡ ಯೋಜನೆಯಾದ ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತಕ್ಕೆ ಆದ್ಯತೆ ನೀಡಿದ್ದಾರೆ. ಭೂ ಸ್ವಾಧೀನಗೊಳಿಸಲು ಖುಷ್ಕಿ ಜಮೀನಿಗೆ 30 ಲಕ್ಷ ರೂ. ಹಾಗೂ ನೀರಾವರಿ ಜಮೀನಿಗೆ 40 ಲಕ್ಷ ರೂ. ಪರಿಹಾರ ಧನ ನೀಡಲು ಬಜೆಟ್ ನಲ್ಲಿ ಪ್ರಸ್ತಾಪ ಮಾಡಿದ್ದು, ಐತಿಹಾಸಿಕ ನಿರ್ಧಾರ. ಅಲ್ಲದೆ 2013 ರಲ್ಲಿ ತಾವೇ ಸಿಎಂ ಇದ್ದಾಗ ಬಜೆಟ್ ನಲ್ಲಿ ಘೋಷಿಸಲಾಗಿದ್ದ ಬಾಗಲಕೋಟೆ ಸರ್ಕಾರಿ ಮೆಡಿಕಲ್ ಕಾಲೇಜು ಕಾರ್ಯಾರಂಭಕ್ಕೆ ಬದ್ದತೆ ತೋರಿದ್ದಾರೆ. ನಾಲ್ಕು ನೂರು ಕೋಟಿ ರೂ. ಇದಕ್ಕೆ ಮೀಸಲಿಟ್ಟಿರುವುದು ಬಾಗಲಕೋಟೆ ಜಿಲ್ಲೆಗೆ ನೀಡಿರುವ ಮಹತ್ವದ ಕೊಡುಗೆಯಾಗಿದೆ ಎಂದು ಚರಂತಿಮಠ ವಸ್ತ್ರದ ಫೌಂಡೇಶನ್ ಅಧ್ಯಕ್ಷ ಮಲ್ಲಿಕಾರ್ಜುನ ಚರಂತಿಮಠ ತಿಳಿಸಿದ್ದಾರೆ.



ಮುಖ್ಯಮಂತ್ರಿ ಸಿದ್ದ ರಾಮಯ್ಯನವರು ನೀಡಿದ ಬಜೆಟ್ ನೀರಸವಾಗಿದೆ. ಯುಕೆಪಿಗೆ ಬೆಳಗಾವಿ ಅಧೀವೇಶನದಲ್ಲಿ ನೀಡಿದ ಭರವಸೆಗೆ ಯಾವುದೇ ಅನುದಾನ ಘೋಷಣೆ ಮಾಡದೆ ಈ ಭಗದ ರೈತರಿಗೆ ಮೋಸ ಮಾಡಿದ್ದಾರೆ. ಯುಕೆಪಿಯ 734 ಟಿಎಂಸಿ ನೀರು ನಮ್ಮ ಹಕ್ಕಾಗಿದೆ. ಅದನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳಬೇಕು. ಕೃಷ್ಣಾ ಯೋಜನೆಗೆ ಸಂಬಂಧಿಸಿದ ಎಲ್ಲ ಜನಪ್ರತಿನಿಧಿಗಳು ಸರ್ಕಾರದ ಮೇಲೆ ಒತ್ತಡ ಹೇರಬೇಕು. ಸಮಯ ಬಂದಾಗ ರಾಜೀನಾಮೆಗೂ ಸಹ ಮುಂದಗಬೇಕು.

■ **ಶ್ರೀಕಾಂತ ಕುಲಕರ್ಣಿ,** ಮಾಜಿ ಶಾಸಕ



ಬಿಪಿಎಲ್ ಪಡಿತರ ಚೀಟಿ ಫಲಾನುಭವಿಗಳಿಗೆ ಇಂದಿರಾ ಕಿಟ್ ವಿತರಣೆ ಮತ್ತು ಗ್ಯಾರಂಟಿ ಯೋಜನೆಗೆ ಅಗತ್ಯ ಅನುದಾನ ಮೀಸಲಿಡುವ ಮೂಲಕ ರಾಜ್ಯದ ಜನರ ಆರ್ಥಿಕ ಮಟ್ಟ ಸುಧಾರಿಸಲು ಅನುಕೂಲತೆ ಕಲ್ಪಿಸಿದ್ದು, ಇದರಿಂದ ತಲೆ ಆದಾಯ ಹೆಚ್ಚಲಿದೆ. ಆರೋಗ್ಯ ಕ್ಷೇತ್ರದ ಸುಧಾರಣೆಗೆ ಕ್ರಮ ಕೈಗೊಂಡಿದ್ದು, ಹೆಚ್ಚುತ್ತಿರುವ ಮೊಬೈಲ್ ಬಳಕೆಯಿಂದ ಮಕ್ಕಳ ಮೇಲೆ ಬೀರುತ್ತಿರುವ ಅಡ್ಡ ಪರಿಣಾಮಗಳನ್ನು ತಡೆಗಟ್ಟುವ ಉದ್ದೇಶದಿಂದ 16 ವರ್ಷದೊಳಗಿನ ಮಕಳಿಗೆ ಸಾಮಾಜಿಕ ಜಾಲಣತಾಣದ ಬಳಕೆ ನಿಷೇಧಿಸುವ ಘೋಷಣೆ ಮಾಡಿದ್ದು ಸ್ವಾಗತಾರ್ಹವಾಗಿದೆ.

■ **ಅಣವೀರಯ್ಯ ಪ್ಯಾಟೀಮಠ,** ಬೀಳಗಿ ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ



ಆರ್ಥಿಕ ಸವಾಲಿನ ಪರಿಸ್ಥಿತಿಯಲ್ಲೂ ಪಂಚ ಗ್ಯಾರಂಟಿ ಯೋಜನೆಗಳಿಗೆ ಬಜೆಟ್‌ನಲ್ಲಿ ಹಣ ಮೀಸಲು ಇಟ್ಟಿರುವುದು, ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಮುಳುಗಡೆಯಾಗುವ ಜಮೀನುಗಳಿಗೆ ಒಪ್ಪಂದದ ಐ ತೀರ್ಪು ಮುಖಾಂತರ ಜಮೀನು ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಸಕ್ತ ವರ್ಷದಲ್ಲಿ ಪ್ರಾರಂಭಿಸುವುದು ಸೇರಿದಂತೆ ಕರ್ನಾಟಕದ ಅಭಿವೃದ್ಧಿಗಾಗಿ ಎಲ್ಲ ಕ್ಷೇತ್ರಗಳಿಗೂ ಹಣ ಮೀಸಲಿಟ್ಟಿರುವುದು ಸರ್ವರಿಗೂ ಸಮಪಾಲು ಸಮಬಾಳು ಈ ಬಾರಿಯ ಬಜೆಟ್ ಆಗಿದೆ.

■ **ಅನೀಲಕುಮಾರ ದಡ್ಡಿ,** ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷ

ನಿರಾಶಾದಾಯಕ ಬಜೆಟ್: ನಿರಾಣಿ



• **ಬೀಳಗಿ:** ಮುಖ್ಯಮಂತ್ರಿಗಳು ಮಂಡಿಸಿರುವ ಬಜೆಟ್ ನಿರಾಶಾದಾಯಕವಾಗಿದೆ, ರಾಜ್ಯವನ್ನು ಮತ್ತಷ್ಟು ಸಾಲದ ಸುಳಿಯಲ್ಲಿ ಸಿಲುಕಿಸಿದೆ. ಸಾಲ ಮಾಡಿಯಾದರೂ ತುಪ್ಪ ತಿನ್ನು ಎನ್ನುವ ನಾನ್ನುಡಿಯಂತೆ ರಾಜ್ಯ ಸರಕಾರವು ಲಕ್ಷಾಂತರ ಕೋಟಿ ರೂ. ಸಾಲಮಾಡಿ ಸರಕಾರವನ್ನು ನಡೆಸುವ ಪರಿಸ್ಥಿತಿ ನಿರ್ಮಾಣ ಮಾಡಿದೆ ಎಂದು ವಿಧಾನ ಪರಿಷತ್ ಸದಸ್ಯ ಎಚ್. ಆರ್.ನಿರಾಣಿ ಹೇಳಿದರು.

ಅವಳಿ ಜಿಲ್ಲೆಯ ಜನಪ್ರತಿನಿಧಿಗಳ ಮತ್ತು ಸಂತ್ರಸ್ತರ ಹಾಗೂ ಹಿರಿಯ ನಾಯಕರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಕೃಷ್ಣ ಮೇಲ್ದಂಡೆ ಯೋಜನೆಯ 3ನೇ ಹಂತದಲ್ಲಿ ಮುಳುಗಡೆಯಾಗುವ ಪ್ರತಿ ಎಕರೆ ನೀರಾವರಿ ಜಮೀನಿಗೆ 40 ಲಕ್ಷ ರೂ., ಒಣ ಬೇಸಾಯ ಜಮೀನಿಗೆ 30 ಲಕ್ಷ ರೂ. ಪರಿಹಾರ ನೀಡುವುದಾಗಿ ಘೋಷಿಸಿ ಆರು ತಿಂಗಳು ಕಳೆದರು ಸರ್ಕಾರ ಯಾವುದೇ ಪರಿಹಾರ ವಿತರಣೆ ಮಾಡಿರುವುದಿಲ್ಲ. ಈ ಬಜೆಟ್ಟಿನಲ್ಲಿ ಈ ಯೋಜನೆಗೆ 18 ಸಾವಿರ ಕೋಟಿ ವಿಶೇಷ ಅನುದಾನ ಕೋಡುವುದಾಗಿ ಹೇಳಿದ್ದರು. ಆದರೇ ಇವತ್ತಿನ ಬಜೆಟ್ ನಲ್ಲಿ ಯುಕೆಪಿಗೆ ಪ್ರತ್ಯೇಕವಾದ ಅನುದಾನ ಮೀಸಲಿಟ್ಟಿಲ್ಲ.ರಾಜ್ಯದ ನೀರಾವರಿ ಇಲಾಖೆಗೆ ಸುಮಾರು ಒಟ್ಟು 22436 ಕೋಟಿ ಹಣ ಮೀಸಲಿಟ್ಟು, ರಾಜ್ಯದ ವ್ಯಾಪ್ತಿಗೆ ಒಳಪಡುವ 75 ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು 8 ಸಾವಿರದಾ 45 ಕೋಟಿ ರೂ. ಅನುದಾನ ಖರ್ಚು ಮಾಡುವುದಾಗಿ ತಿಳಿಸಿದ್ದು ಸ್ವಾಗತಾರ್ಹ. ಇದು ನೀರಾವರಿಗೆ ಆದ್ಯತೆ ಕೊಟ್ಟಂತಾಗಿದೆ. ಆದರೇ ಈ ಅನುದಾನದಲ್ಲಿ ಭಾರಿ ನೀರಾವರಿ ಮತ್ತು ಸಣ್ಣ ನೀರಾವರಿ ಇಲಾಖೆಗೆ ಹಂಚಿಕೆ ಮಾಡಿ ಯು.ಕೆ.ಪಿ ಯೋಜನೆಗೆ ಎಷ್ಟು ಹಣ ಕೊಡುತ್ತಾರೆಂಬುದು ಸಂತ್ರಸ್ಥರಿಗೆ ಯಕ್ಷಪ್ರಶ್ನೆಯಾಗಿ ಉಳಿದಿದೆ?

ಬಜೆಟ್ ಅನುಮೋದನೆ ಪಡೆಯುವ ಸಂದರ್ಭದಲ್ಲಿ ತಾವು ಹೇಳಿದ ಹಾಗೆ ಪ್ರಮುಖ ನೀರಾವರಿ ಯು.ಕೆ.ಪಿ. ಯೋಜನೆಗೆ 18 ಸಾವಿರ ಕೋಟಿ ರೂ.ವಿಶೇಷ ಅನುದಾನ ಮೀಸಲಿಡಬೇಕೆಂದು ಪತ್ರಿಕಾ ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

2026-2027 ರಾಜ್ಯ ಬಜೆಟ್ ನಾವು ಕಂಡಂತೆ



ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಪೂರಕ ಬಜೆಟ್‌ನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿ ದಾಖಲೆ ಸೃಷ್ಟಿಸಿದ್ದಾರೆ. ನೂತನ 10 ಹೊಸ ಯೋಜನೆ ಜಾರಿಗೆ ತಂದಿದ್ದಾರೆ. ನೀರಾವರಿ ಸೇರಿದಂತೆ ಗ್ರಾಮಿಣ ಭಾಗಕ್ಕೂ ಹೆಚ್ಚಿನ ಒತ್ತು ನೀಡಿದ್ದಾರೆ. ರಾಜ್ಯದ ಸರ್ವ ಜನಾಂಗದ ಒಳಿತಿಗಾಗಿ ಶ್ರಮಿಸಿದ್ದಾರೆ.

■ **ಯಶವಂತರಾಯಗೌಡ ಪಾಟೀಲ,** ಇಂಡಿ ಶಾಸಕ




ದಾಖಲೆಯ 17ನೇ ಬಜೆಟ್ ಮಂಡಿಸಿ ಇಡೀ ದೇಶಕ್ಕೆ ಮಾದರಿಯಾಗಿರುವ ಗ್ಯಾರಂಟಿ ಯೋಜನೆಗಳ ಜೊತೆಗೆ ವಿವಿಧ ಇಲಾಖೆಗಳಿಗೂ ಭರಪೂರ ಅನುದಾನ ನೀಡುವ ಮೂಲಕ ಸರ್ವರ ಸಿದ್ದರಾಮಯ್ಯ ಎನಿಸಿಕೊಂಡಿದ್ದಾರೆ. ವಿಜಯಪುರ ಜಿಲ್ಲೆಗೆ ಸಾಕಷ್ಟು ಯೋಜನೆಗಳನ್ನು ನೀಡುವುದರ ಮೂಲಕ ಜನಮಾನಸದಲ್ಲಿ ಉಳಿದಿದ್ದಾರೆ. ಶಿಕ್ಷಣ, ಕೃಷಿ, ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಿದ್ದು, ಗಮನಾರ್ಹ ಬೆಳವಣಿಗೆಯಾಗಲಿದೆ.

■ **ಆನಂದಗೌಡ ದೊಡ್ಡಮನಿ,** ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ



ರಾಜ್ಯದ ಸಮಗ್ರ ಅಭಿವೃದ್ಧಿ ದೃಷ್ಟಿಯಲ್ಲಿಟ್ಟುಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿರುವ ಬಜೆಟ್. ರೈತರಿಗೆ, ಮಹಿಳೆಯರಿಗೆ, ಯುವಕರಿಗೆ, ರಸ್ತೆ ಹಾಗೂ ನೀರಾವರಿ ಸೇರಿದಂತೆ ಗ್ಯಾರೆಂಟಿ ಯೋಜನೆಗಳಿಗೆ ಸಾಕಷ್ಟು ಅನುದಾನ ನೀಡಿದ್ದಾರೆ.ರಾಜ್ಯದ ಅಭಿವೃದ್ಧಿಗೆ ಈ ಬಜೆಟ್ ಭರವಸೆದಾಯಕವಾಗಿದೆ.

■ **ಡಾ.ಪ್ರಭುಗೌಡ ಲಿಂಗದಳ್ಳಿ ಚಬನೂರ,** ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ



ವಿಜಯಪುರ ಜಿಲ್ಲೆಯ ಪಾಲಿಗೆ ಇದು ಸಂಪೂರ್ಣ ಸಪ್ಪೆ ಬಜೆಟ್. ಸರ್ಕಾರಿ ವೈದ್ಯಕೀಯ ಕಾಲೇಜ್‌ನಲ್ಲಿ ಸಮಗ್ರ ಸೌಲಭ್ಯಗಳು ಈಗಾಗಲೇ ಇವೆ. ಪ್ರಸ್ತಾವನೆ ಸಿದ್ಧಪಡಿಸಲು ಕಾಲಹರಣ ಮಾಡುವ ಔಚಿತ್ಯವೇನಿತ್ತು? ಸದ್ಯ ಡಿಪಿಆರ್ ಎಂದು ಹೇಳಿ ಎಷ್ಟು ವರ್ಷ ಮುಂದುವರೆಸುತ್ತಾರೋ? ಒಂದರ್ಥದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜ್ ಇನ್ನೂ ಮರೀಚಿಕೆಯಾಗಿಯೇ ಉಳಿಯುವಂತೆ ಮಾಡಿರುವ ಈ ಬಜೆಟ್ ಮಾಡಿದೆ.

■ **ಅಪ್ಪಾಸಾಹೇಬ ಪಟ್ಟಣಶೆಟ್ಟಿ,** ಮಾಜಿ ಸಚಿವ



ಕೇವಲ ಒಂದು ಸಮುದಾಯದ ತುಷ್ಟೀಕರಣ ನೀತಿಯೇ ಈ ಬಾರಿಯೂ ಮುಂದುವರೆದಿದೆ, ಯೋಜನೆಗಳ ಅನುಷ್ಠಾನದ ಬಗ್ಗೆ ಯಾವ ಸ್ಪಷ್ಟತೆ ಇಲ್ಲ, ಕೇವಲ ಘೋಷಣೆಯಾಗಿದ್ದು, ಒಂದು ಸಮುದಾಯಕ್ಕೆ ಆದ್ಯತೆ, ಇನ್ನೊಂದು ಸಮುದಾಯಕ್ಕೆ ನಿರ್ಲಕ್ಷ್ಯ ನೀತಿ ಈಗಲೂ ಮುಂದುವರೆದಿದೆ.

■ **ಗುರುಲಿಂಗಪ್ಪ ಅಂಗಡಿ,** ಬಿಜೆಪಿ ಜಿಲ್ಲಾಧ್ಯಕ್ಷ



ಶೈಕ್ಷಣಿಕ ವಲಯವನ್ನು ಸಂಪೂರ್ಣ ನಿರ್ಲಕ್ಷಿಸಲಾಗಿದೆ. ಖಾಲಿ ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ಸ್ಪಷ್ಟವಾದ ನಿಲುವು ಇಲ್ಲ, ಯಾವ ಮಹೋನ್ನತ ಯೋಜನೆಗಳು ಇಲ್ಲ, ಶೈಕ್ಷಣಿಕ ವಲಯಕ್ಕಂತೂ ತೀವ್ರ ನಿರಾಶೆಯನ್ನು ಈ ಬಜೆಟ್ ಮೂಡಿಸಿದೆ. ಪಾಲಿಕೆಗಳಿಗೆ ವಿಶೇಷಾನುದಾನ ಸೇರಿದಂತೆ ಅನೇಕ ಬೇಡಿಕೆಗಳಿಗೆ ಕಿಂಚಿತ್ತೂ ಮುಖ್ಯಮಂತ್ರಿಗಳು ಸ್ಪಂದಿಸಿಲ್ಲ, ವಿಜಯಪುರ ಪಾಲಿಗಂತೂ ಸಂಪೂರ್ಣ ನಿರಾಶೆಯನ್ನು ಮೂಡಿಸಿದ ಬಜೆಟ್ ಇದಾಗಿದೆ.

■ **ಅರುಣ ಶಹಾಪೂರ.** ಮಾಜಿ ಸದಸ್ಯ, ವಿಧಾನ ಪರಿಷತ್



ಯಾವ ವರ್ಗದ ಹಿತರಕ್ಷಣೆಯನ್ನೂ ಈ ಬಜೆಟ್ ಕಾಯ್ದುಕೊಂಡಿಲ್ಲ, ಹಿಂದುಳಿದ ವರ್ಗಕ್ಕೆ ದೊಡ್ಡ ಅನ್ಯಾಯ ಮಾಡಲಾಗಿದೆ, ಜನರನ್ನು ಆರ್ಥಿಕವಾಗಿ ಸಬಲರನ್ನಾಗಿಸುವ, ಸ್ವಾವಲಂಬಿಯಾಗಿಸುವ ಯಾವ ಅಂಶಗಳು ಬಜೆಟ್‌ನಲ್ಲಿ ಇಲ್ಲವೇ ಇಲ್ಲ, ಇದು ಜನಪರ ಬಜೆಟ್ ಅಲ್ಲ.

■ **ವಿವೇಕಾನಂದ ಡಬ್ಬಿ,** ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯ ಉಪಾಧ್ಯಕ್ಷ



ಮುದ್ದೇಬಿಹಾಳ: ನಗರದ ಮಹಾಂತೇಶ ನಗರ ಪ್ರದೇಶದಲ್ಲಿ ಎರಡನೇ ದಿನದ ಹೋಳಿ ಆಚರಣೆಯಲ್ಲಿ ಮಕ್ಕಳು ಹಲಗೆ ಬಡೆಯುತ್ತಾ, ಬಣ್ಣ ಎರಚುತ್ತ ಉತ್ಸಾಹದಿಂದ ಭಾಗವಹಿಸಿದ್ದರು.

ಒಳ ಮೀಸಲಾತಿಗೆ ಸೂಕ್ತ ನಿರ್ಧಾರವಿಲ್ಲ

◆ **ವಿಜಯಪುರ:** ಒಳ ಮೀಸಲಾತಿ ವಿಷಯವಾಗಿ ಯಾವ ಸೂಕ್ತ ನಿರ್ಧಾರವನ್ನು ಪ್ರಸಕ್ತ ಬಜೆಟ್ ವೇಳೆಯಲ್ಲಿ ಕೈಗೊಳ್ಳದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ದಲಿತ ವರ್ಗಕ್ಕೆ ದೊಡ್ಡ ದ್ರೋಹ ಮಾಡಿದ್ದಾರೆ. ಇದು ಬಜೆಟ್ ಆಗಿರದೇ ಕೇವಲ ಘೋಷಣಾ ಪತ್ರವಾಗಿದೆ ಎಂದು ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಉಮೇಶ ಕಾರಜೋಳ



ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿ ಅವರು, ಒಳ ಮೀಸಲಾತಿ ಜಾರಿಯ ಬಗ್ಗೆ ಯಾವ ನಿರ್ಧಾರವನ್ನು ಪ್ರಕಟಿಸದ ಮುಖ್ಯಮಂತ್ರಿಗಳು ದಲಿತ ವರ್ಗಕ್ಕೆ ಅನ್ಯಾಯ ಮಾಡಿದ್ದಾರೆ, ಹೀಗಾಗಿ ಅಹಿಂದ ನಾಯಕ ಎಂದು ಕರೆಯಿಸಿಕೊಳ್ಳುವ ಯಾವ ನೈತಿಕತೆ ಅವರು ಉಳಿಸಿಕೊಂಡಿಲ್ಲ. ಇನ್ನೂ ಬಜೆಟ್ ವಿಶ್ಲೇಷಣೆ ಎನ್ನುವುದಕ್ಕಿಂತ ಬಜೆಟ್ ಎನ್ನದೇ ಇದೊಂದು ಘೋಷಣೆ ಎನ್ನಬಹುದಾಗಿದೆ. ಯಾವ ಯೋಜನೆಗೆ ಅನುಷ್ಠಾನಕ್ಕೆ ಸಂಬಂಧಿಸಿದ ಮಹತ್ವದ ನಿರ್ಧಾರಗಳಿಲ್ಲ, ಕೇವಲ ರೈಲು ಬಿಟ್ಟಂತೆ ಘೋಷಣೆಗಳನ್ನು ಘೋಷಣೆ ಮಾಡುತ್ತ ಹೋಗಿದ್ದಾರೆ, ವಿಜಯಪುರ ಜಿಲ್ಲೆಯ ಸರ್ಕಾರಿ ವೈದ್ಯಕೀಯ ಕಾಲೇಜ್ ವಿಷಯವಾಗಿ ದೊಡ್ಡ ಹೋರಾಟ ನಡೆಯಿತು, ಜನತೆ ಸಹ ನಿರೀಕ್ಷೆ ಇಟ್ಟುಕೊಂಡಿದ್ದರೂ, ಎಲ್ಲ ಸೌಲಭ್ಯಗಳಿದ್ದ ಸರ್ಕಾರಿ ವೈದ್ಯಕೀಯ ಕಾಲೇಜ್‌ಗೆ ಕೇವಲ ಪ್ರಸ್ತಾವನೆ ಸಿದ್ಧಪಡಿಸುವ ಘೋಷಣೆ ಅದು ಕಾಟಾಚಾರಕ್ಕೆ ಎಂಬಂತೆ ಘೋಷಣೆ ಮಾಡಲಾಗಿದೆ. ಇದೊಂದು ನಿರಾಶಾದಾಯಕ ಬಜೆಟ್ ಎನ್ನುವುದರಲ್ಲಿ ಎರಡು ಮಾತಿಲ್ಲ ಎಂದು ತಿಳಿಸಿದ್ದಾರೆ.



ಬಸವನಬಾಗೇವಾಡಿ: ಅಥಣಿ ತಾಲೂಕಿನ ಕೆಂಪವಾಡ ಗ್ರಾಮದ ಶಂಕರ ವಾಘಮೋಡೆ ಹಾಗೂ ರಾಹುಲ್ ಬಂಡಗರ ಅವರು ಸ್ವ-ಗ್ರಾಮದಿಂದ ಸು 550ಕಿ.ಮೀ.ಗಳ ವರೆಗೆ ಮರಗಾಲಿನಿಂದ ಪಾದಯಾತ್ರೆ ತೆರಳಿದರು. ಮಾರ್ಗಮಧ್ಯೆ ಬಸವ ಜನ್ಮಸ್ಥಳ ಬಸವನಬಾಗೇವಾಡಿ ಪಟ್ಟಣದ ಬಸವೇಶ್ವರ(ಮೂಲನಂದೀಶ್ವರ)ನ ದರ್ಶನ ಪಡೆದು ಮುಂದೆ ಸಾಗಿದರು.

ಪಿಪಿಪಿ ವೈದ್ಯಕೀಯ ಕಾಲೇಜ್ ಕೈ ಬಿಟ್ಟಿದ್ದೇ ಹೆಚ್ಚು, ಬಿಡಿಗಾಸು ನೀಡಿಲ್ಲ

ನಿರೀಕ್ಷಿಸಿದ್ದು ಬೆಟ್ಟದಷ್ಟು, ದಕ್ಕಿದ್ದು ಸಾಸಿವೆ ಕಾಳಿನಷ್ಟು

▶ ಪರಶುರಾಮ ಶಿವಶರಣ

◆ **ವಿಜಯಪುರ:** ಬಿಸಿಲೂರಿಗೆ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಬೆಟ್ಟದಷ್ಟು ನಿರೀಕ್ಷಿಸಲಾಗಿದ್ದರೂ ಸಾಸಿವೆ ಕಾಳಿನಷ್ಟು ಘೋಷಣೆ ಮಾಡಿದ್ದು, ಜಿಲ್ಲೆಯ ಜನರಿಗೆ ನಿರಾಸೆ ಮೂಡಿಸುವಂತಾಗಿದೆ.


ನಗರದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜ್ ಸ್ಥಾಪಿಸುವಂತೆ ನೂರಾರು ದಿನ ಹೋರಾಟ ನಡೆಸಿ, ಹೋರಾಟಗಾರರು ಜೈಲು ಸೇರಿದಕ್ಕೆ ಸರ್ಕಾರ ಪಿಪಿಪಿ ಮಾದರಿ ಸರ್ಕಾರಿ ವೈದ್ಯಕೀಯ ಕಾಲೇಜ್ ಕೈ ಬಿಟ್ಟಿರುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಹಿಂದೆ ಎರಡು ಭಾರಿ ಘೋಷಣೆ ಮಾಡಿದ್ದಾರೆ. ಪ್ರಸಕ್ತ ಬಜೆಟ್‌ನಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜ್ ನಿರ್ಮಾಣಕ್ಕೆ ಡಿಪಿಆರ್ ತಯಾರಿಸುವ ನಿರ್ಧಾರ ಕುರಿತು ಪ್ರಸ್ತಾಪಿಸಲಾಗಿದೆಯೇ ಹೊರತು, ಬಿಡಿಗಾಸು ಕೂಡ ಘೋಷಣೆ ಮಾಡಿಲ್ಲ, ಪ್ರಸಕ್ತ ವರ್ಷ ವೈದ್ಯಕೀಯ ಕಾಲೇಜು ಪ್ರಾರಂಭಗೊಳ್ಳುತ್ತದೆ ಎಂದು ಕನಸ್ಸು ಕಂಡಿದ್ದ ಜಿಲ್ಲೆಯ ಜನರು, ಹೋರಾಟಗಾರರು ಅಲ್ಪ ತೃಪ್ತಿ ಪಡುವಂತಾಗಿದೆ.

ಚಡಚಣ ಏತ ನೀರಾವರಿ ಯೋಜನೆಗೆ ಅನುಮೋದನೆ, ಬಬಲೇಶ್ವರ ತಾಲೂಕಿನ ಹಲವು ಹಳ್ಳಗಳಿಗೆ ಸರಣಿ ಚೆಕ್ ಡ್ಯಾಂ ನಿರ್ಮಾಣ, ಮುದ್ದೇಬಿಹಾಳ ತಾಲೂಕಿನ ಎರಡು ಹಳ್ಳಗಳಿಗೆ ಬಿಸಿಬಿ ನಿರ್ಮಾಣ, ಪೀರಾಪೂರ- ಬೂದಿಹಾಳ ಏತ ನೀರಾವರಿ ವಿಸ್ತರಣಾ ಯೋಜನೆ ಪ್ರಸಕ್ತ ಆರ್ಥಿಕ ವರ್ಷದಲ್ಲಿಯೇ ಪೂರ್ಣಗೊಳಿಸುವ ಬಗ್ಗೆ ತಿಳಿಸಲಾಗಿದೆ.

ಝಳಕಿ-ಇಂಡಿ-ಅಫ್ಜಲಪುರ (ಚಡಚಣ-ಗಾಣಗಾಪೂರ) 115 ಕಿ.ಮೀ. ರಸ್ತೆ ಅಭಿವೃದ್ಧಿ, ದಿಂಡವಾರದ ರಾಜ್ಯ ಹೆದ್ದಾರಿ ಸಂಖ್ಯೆ 41, ನಾಲತವಾಡ- ಸೋಮನಾಳ- ಹುಳಗಬಾಳ ಸಂಪರ್ಕ ಕಲ್ಪಿಸುವ 95 ಕಿಮೀ ರಸ್ತೆ ಅಭಿವೃದ್ಧಿ ಜೊತೆಗೆ ಮುದ್ದೇಬಿಹಾಳ ಗ್ರಾಮಾಂತರ ಪೊಲೀಸ್ ಠಾಣೆ ಮಂಜೂರಾತಿ ಘೋಷಣೆ ಮಾಡಲಾಗಿದೆ.

ಆದರೆ, ಬಹು ನಿರೀಕ್ಷಿತ ಕೃಷ್ಣಾ ಕೊಳ್ಳದ ಯೋಜನೆಗೆ ಅನುದಾನ ನೀಡುವ ಬಗ್ಗೆ ಚಕಾರ್ ಎತ್ತಿಲ್ಲ. ಈ ಹಿಂದೆ ತಿಳಿಸಿದಂತೆ ಭೂ-ಸ್ವಾಧೀನಕ್ಕೊಳಪಟ್ಟ ಜಮೀನುಗಳಿಗೆ ನೀಡುವ ದರ ಕುರಿತು ಪುನರ್ ಘೋಷಣೆ ಮಾಡಲಾಗಿದ್ದು, ಈ ಭಾಗದ ರೈತ ವಲಯಕ್ಕೆ ನಿರಾಸೆ ಮೂಡುವಂತಾಗಿದೆ.

ಇನ್ನು ನಗರದ ವಾಹನದಟ್ಟಣೆ ನಿವಾರಿಸುವ ನಿಟ್ಟಿನಲ್ಲಿ ಮಾಸ್ಟರ್ ಪ್ಲಾನ್ ಜಾರಿ, ಪ್ರವಾಸೋದ್ಯ ಅಭಿವೃದ್ಧಿ ಸೇರಿದಂತೆ ರಾಜ್ಯ ಸರ್ಕಾರ ತಾನೇ ಈ ಹಿಂದೆ ಘೋಷಣೆ ಮಾಡಿದ ಫುಡ್ ಪಾರ್ಕ್, ಕೋಲ್ಡ್ ಸ್ಟೋರೇಜ್ ಸ್ಥಾಪನೆ ಸೇರಿದಂತೆ ಹಲವು ಯೋಜನೆಗಳನ್ನು ಜಾರಿಗೊಳಿಸಲು ಮರೆತ್ತಂತಾಗಿದೆ ಎಂದು ಜಿಲ್ಲೆಯ ಜನರು ದೂರುವಂತಾಗಿದೆ.



ಕೃಷ್ಣಾ ಕೊಳ್ಳದ ಯೋಜನೆಗೆ ಅನುದಾನ ಘೋಷಣೆ ಮಾಡಿಲ್ಲ, ರೈತ ವರ್ಗಕ್ಕೆ ವಿಶೇಷ ಯೋಜನೆ ನೀಡಿಲ್ಲ, ಕೇವಲ ರೈತರನ್ನು ಸಾಲಿದ ಸುಳಿಯಲ್ಲಿ ಸಿಲುಕಿಸುತ್ತಿದ್ದಾರೆ. ಮುಖ್ಯಮಂತ್ರಿಗಳು ಮಂಡಿಸಿದ ರಾಜ್ಯ ಬಜೆಟ್ ನಿರಾಶಾದಾಯಕವಾಗಿದೆ.

■ **ಮಲ್ಲಿಕಾರ್ಜುನ ಕೆಂಗನಾಳ,** ರಾಜ್ಯಾಧ್ಯಕ್ಷ, ರೈತ ಭಾರತ ಪಕ್ಷ

ಕೈಗಾರಿಕಾ ವಸಾಹಾತು ಅಭಿವೃದ್ಧಿ ಘೋಷಣೆ

ತಿಕೋಟಾ ತಾಲೂಕಿನ ಬಾಬಾನಗರದಲ್ಲಿ 0.67 -0.80 ಟಿಎಂಸಿ ಸಾಮರ್ಥ್ಯದ ಜಲಾಶಯ ನಿರ್ಮಾಣಕ್ಕೆ ಅನುಮೋದನೆ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಭೇಟಿ ನೀಡಿದ ಸ್ಥಳಗಳ ಪೈಕಿ ವಿಜಯಪುರದಲ್ಲಿ ಅವರ ಹೆಸರಿನಲ್ಲಿ ಸಿಬಿಎಸ್‌ಇ ಕ್ರೈಸ್ತ್ ವಸತಿ ಶಾಲೆಗಳ ಪ್ರಾರಂಭ, ಇಲ್ಲಿನ ಸೈನಿಕ ಶಾಲೆ ಹಾಸ್ಟೆಲ್ ಕಟ್ಟಡಗಳ ಹಂತ ಹಂತವಾಗಿ ಪುನರ್ ನಿರ್ಮಾಕ್ಕೆ 10 ಕೋಟಿ ರೂ. ಅನುದಾನ, ಜಿಲ್ಲೆಯ ಚಡಚಣದಲ್ಲಿ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ಸ್ಥಾಪನೆ, ವಿಮಾ ಚಿಕಿತ್ಸಾಲಯ ಉನ್ನತೀಕರಣ, 2026- 27ನೇ ಸಾಲಿನಲ್ಲಿ ಜಿಲ್ಲೆಯ ಮುದ್ದೇಬಿಹಾಳದಲ್ಲಿ ಕೈಗಾರಿಕಾ ವಸಾಹಾತು ಅಭಿವೃದ್ಧಿಪಡಿಸುವ ಕುರಿತು ಘೋಷಣೆ ಮಾಡಲಾಗಿದೆ.

ಹಳೇ ಮೀಸಲಾತಿಯಡಿ ನೇಮಕ ಸ್ವಾಗತಾರ್ಹ

◆ **ವಿಜಯಪುರ:** ಸರ್ಕಾರ ಹಳೇ ಮೀಸಲಾತಿಯಡಿ 54 ಸಾವಿರಕ್ಕೂ ಅಧಿಕ ಸರ್ಕಾರಿ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಉದ್ದೇಶಿಸಿರುವುದು ದಲಿತ, ಅಲೆಮಾರಿ-ಅರೆ ಅಲೆಮಾರಿ ಸಮುದಾಯದ ಪರವಾಗಿ ಸ್ವಾಗತಿಸುತ್ತೇನೆ ಎಂದು ಕಾಂಗ್ರೆಸ್ ಮುಖಂಡ ಡಾ.ಬಾಬುರಾಜೇಂದ್ರ ನಾಯಿಕ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರು ಸಮಾಜದಲ್ಲಿ ಸಮಾನತೆಯ ಬದಲಾವಣೆ ತರುವ ಉದ್ದೇಶದಿಂದ ಮೀಸಲಾತಿಯನ್ನು ಸಂವಿಧಾನದಲ್ಲಿ ಅಳವಡಿಸಿದ್ದರು. ಸಮಾಜದಲ್ಲಿ ತುಳಿತಕ್ಕೊಳಗಾದ, ದಲಿತ ಸೇರಿದಂತೆ ಹಿಂದುಳಿದ, ಮಹಿಳೆ ಹಾಗೂ ವಿಶೇಷಚೇತನರಿಗೂ ಸಮಾನ ಅವಕಾಶ ಲಭಿಸುವ ನಿಟ್ಟಿನಲ್ಲಿ ಜಾರಿಗೊಳಿಸಲಾಗಿದೆ. ಕಾಲಾನಂತರ ಸಂವಿಧಾನ ಬದ್ಧ ಮೀಸಲಾತಿಗೆ ಹಲವು ಹೋರಾಟಗಳು, ಬೇಡಿಕೆಗಳು ನಡೆದಿವೆ. ಆದರೆ ಈಗಿರುವ ಮೀಸಲಾತಿ ಅತ್ಯಂತ ನ್ಯಾಯಯುತವಾಗಿದೆ ಎಂದರು.

ಒಂದು ವೇಳೆ ಯಾವುದಾದರೂ ಸಮುದಾಯಗಳಿಗೆ ಮೀಸಲಾತಿ ಅವಶ್ಯ ಎಂದರೆ ವೈಜ್ಞಾನಿಕವಾಗಿ ಅಧ್ಯಯನ ನಡೆಸಲಿ, ನಮ್ಮ ಸಹೋದರ ಸಮುದಾಯಗಳಿಗೆ ನ್ಯಾಯ ಒದಗಿಸುವ ಕೆಲಸ ಮಾಡಲಿ, ನಾವು ಸಣ್ಣ- ಸಣ್ಣ ಸಮುದಾಯಗಳನ್ನು ಒಟ್ಟಿಗೆ ತೆಗೆದುಕೊಂಡು ಹೋಗಲು ಸಿದ್ಧ ಎಂದರು.

ಒಳ ಮೀಸಲಾತಿ ಎನ್ನುವುದು ಜೇನು ಗೂಡಿಗೆ ಕೈ ಹಾಕಿದಂತೆ. ಸಿದ್ದರಾಮಯ್ಯ ಸರ್ಕಾರ ನಾಗಮೋಹನ್ ದಾಸ್ ಆಯೋಗದ ವರದಿ ಹಾಗೂ ಸುಪ್ರೀಂ ಕೋರ್ಟ್ ಮಾರ್ಗದರ್ಶನದಲ್ಲಿ ಸಮಾಜಿಕ ನ್ಯಾಯದ ಪರವಾಗಿ ಕೆಲಸ ಮಾಡುತ್ತಿದ್ದಾರೆ. ಪ್ರಸ್ತುತ ಸಿದ್ದರಾಮಯ್ಯ ಸರ್ಕಾರ 54 ಸಾವಿರ ಹುದ್ದೆಗಳನ್ನು ಭರ್ತಿಗೆ ಹಳೇ ಮೀಸಲಾತಿಯಡಿ ನೇಮಕಾತಿ ಮಾಡಿಕೊಳ್ಳುತ್ತಿರುವುದು ಸಂತಸದ ಸಂಗತಿ ಎಂದರು.

ಉದ್ಯೋಗದ ಆಸೆ ಇಟ್ಟುಕೊಂಡು ಕಾಯುತ್ತಿರುವ ಲಕ್ಷಾಂತರ ವಿದ್ಯಾರ್ಥಿಗಳಿಗೆ ಈ ನೇಮಕಾತಿ ಅನುಕೂಲ ಮಾಡಿಕೊಡುತ್ತಿದೆ. ಭವಿಷ್ಯದಲ್ಲಿ ಇದೇ ಮೀಸಲಾತಿ ಮುಂದುವರೆಸಬೇಕು. ಈ ಮೀಸಲಾತಿ ಎಲ್ಲರಿಗೂ ಸಾಮಾಜಿಕ ನ್ಯಾಯ ಕೊಡುವ ನಿಜವಾದ ಮೀಸಲಾತಿಯಾಗಿದೆ. ಒಳ ಮೀಸಲಾತಿಯಿಂದ ತಮ್ಮ ತಮ್ಮ ಸಮುದಾಯಗಳಲ್ಲಿ ಅನ್ಯಾಯವಾಗುವ ಆತಂಕ ದಲಿತ ಸಮುದಾಯಗಳಿಗೆ ಕಾಡುತ್ತಿತ್ತು. ಮುಂದೆ ಯಾವುದೇ ಮೀಸಲಾತಿ ನೀಡುವುದಿದ್ದರೆ ವೈಜ್ಞಾನಿಕ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಿ ನ್ಯಾಯಯುತ ಮೀಸಲಾತಿ ಒದಗಿಸಬೇಕು ಎಂದರು.

ಮುಖಂಡರಾದ ಡಾ.ಬಸವರಾಜ ಚವ್ಹಾಣ, ರವಿ ಲಮಾಣಿ, ಶಾಂತು ರಾಠೋಡ, ಮೋತಿ ರಾಮು ರಾಠೋಡ, ರಾಕೇಶ ರಜಪೂತ, ಬಾಬು ಚವ್ಹಾಣ, ಸಂತೋಷ ನಾಯಕ, ಸುರೇಶ ಬಿಜಾಪುರ ಇದ್ದರು.



ಬಾಬಾನಗರದಲ್ಲಿ ಅಣೆಕಟ್ಟು ನಿರ್ಮಾಣ: ರೈತರ ಸಂತಸ

◆ **ವಿಜಯಪುರ:** ಜಿಲ್ಲೆಯ ತಿಕೋಟಾ ತಾಲೂಕಿನಲ್ಲಿ ತುಬಚಿ-ಬಬಲೇಶ್ವರ ಏತನೀರಾವರಿ ಯೋಜನೆಯಡಿ ನೀರನ್ನು ಸಂಗ್ರಹಿಸಲು ಬಾಬಾ ನಗರದಲ್ಲಿ ಅಣೆಕಟ್ಟು ಕಟ್ಟಲು ಇಂದಿನ ಬಜೆಟ್‌ನಲ್ಲಿ ಸೇರ್ಪಡೆಯಾಗಿರುವುದು ಜಿಲ್ಲೆಯ ಅತಿ ಎತ್ತರದ ಪ್ರದೇಶದ ರೈತರಿಗೆ ರಾಜ್ಯ ಸರ್ಕಾರ ಬಜೆಟ್‌ನಲ್ಲಿ ವಿಶೇಷ ಕೊಡುಗೆ ನೀಡಿದೆ ಎಂದು ತಿಕೋಟಾ ತಾಲೂಕಿನ ರೈತರು ಸಂತಸ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಜಂಟಿ ಪ್ರಕಟಣೆ ನೀಡಿದ ಅವರು, ಜಮಖಂಡಿ ತಾಲೂಕಿನ ಕವಟಗಿ ಗ್ರಾಮದ ಹತ್ತಿರ ನಿರ್ಮಿಸಿರುವ ಜಾಕವೆಲ್‌ನಿಂದ ಕೃಷ್ಣಾ ನದಿಯ ನೀರೆತ್ತಿ ತುಬಚಿ-ಬಬಲೇಶ್ವರ ಏತನೀರಾವರಿ ಯೋಜನೆಯ ಮೂಲಕ ತಿಕೋಟಾ ಹಾಗೂ ಸಾವಳಗಿ ಭಾಗದ ಜಮೀನುಗಳಿಗೆ ನೀರಾವರಿ ಸೌಕರ್ಯ ಕಲ್ಪಿಸಲಾಗುತ್ತಿದ್ದೆ. ಬೇಸಿಗೆಯಲ್ಲಿ ಕೃಷ್ಣಾನದಿ ನೀರಿನ ಮಟ್ಟ ಕುಸಿಯುತ್ತದೆ.

6 ಟಿಎಂಸಿ ನೀರು ಬಳಕೆಯ 3000 ಕೋಟಿ ಮೊತ್ತದ ತುಬಚಿ-ಬಬಲೇಶ್ವರ ಯೋಜನೆ ಬೇಸಿಗೆಯಲ್ಲಿಯೂ ಉಪಯೋಗವಾಗುವಂತೆ ನಮ್ಮ ಶಾಸಕರು, ಕೈಗಾರಿಕಾ ಸಚಿವರು ಆಗಿರುವ ಎಂ.ಬಿ.ಪಾಟೀಲರವರು ನೀರಾವರಿ ತಜ್ಞ ಡಾ.ವಿ.ಪಿ.ಹುಗ್ಗಿ ಅವರಿಗೆ ಮಳೆಗಾಲದಲ್ಲಿ ವ್ಯರ್ಥವಾಗಿ ಹರಿದು ಹೋಗುವ ನೀರನ್ನು ಹಿಡಿದಿಟ್ಟು, ಬೇಸಿಗೆಯಲ್ಲಿ ಅವಶ್ಯಕತೆ ಇದ್ದಾಗ ಬಳಸುವಂತೆ ಯೋಜನೆಯನ್ನು ರೂಪಿಸಲು ತಿಳಿಸಿದ್ದರು.

ಬಜೆಟ್‌ನಲ್ಲಿ ಘೋಷಣೆ ಮಾಡುತ್ತಿದ್ದಂತೆಯೆ ಸ್ಥಳೀಯ ಗ್ರಾಮಸ್ಥರು ಪಟಾಕಿ ಸಿಡಿಸಿ, ಸಂಭ್ರಮಿಸಿ, ತಮ್ಮ ಗ್ರಾಮದ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಸಿ, ಸಿಎಂ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಹಾಗೂ ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ ಮತ್ತು ಯೋಜನೆಯ ರೂವಾರಿ ಸಚಿವ ಎಂ.ಬಿ.ಪಾಟೀಲ ಅವರಿಗೆ ಕೃತಜ್ಞತೆಗಳನ್ನು ಮುಖಂಡರಾದ ಸೋಮನಾಥ ಬಾಗಲಕೋಟ, ಸಿದ್ದು ಗೌಡನವರ, ಮಧು ಸಾಹುಕಾರ ಜಾಧವ, ಎ.ಎಂ. ಪಾಟೀಲ ಬಿಜ್ಜರಗಿ, ಮಲ್ಲಿಕಾರ್ಜುನ ಲೋಣಿ, ಎಂ.ಎಸ್. ರುದ್ರಗೌಡರ, ಮಧುಕರ ಜಾಧವ, ಜಕ್ಕಪ್ಪ ಎಡವೆ, ಎಸ್.ಎಸ್.ಗುದಿಗೆನ್ನವರ, ಗುರು ಮಾಳಿ, ದಾನಪ್ಪ ಚೌಧರಿ, ಡಾ.ಗಜಾನನ ಮೈಶ್ಯಾಳಿ, ವಿಜುಗೌಡ ಪಾಟೀಲ, ಜಗದೀಶಗೌಡ ಪಾಟೀಲ, ಬಸಯ್ಯ ವಿಭೂತಿ, ರಾಮು ದೇಸಾಯಿ ಮತ್ತಿತರರು ತಿಳಿಸಿದ್ದಾರೆ.

ನೀರು ಹರಿಸಲು ಅನುಕೂಲ

ಬಾಬಾನಗರದ ಹತ್ತಿರ 530 ಎಕರೆ ಸರ್ಕಾರಿ ಭೂಮಿ ಇದ್ದು, ಅಲ್ಲಿ ನೈಸರ್ಗಿಕವಾಗಿ ಎರಡೂ ಬದಿಯಲ್ಲಿ ಗುಡ್ಡವಿದೆ. ಆ ಗುಡ್ಡಕ್ಕೆ 602 ಕೋಟಿ ರೂ. ವೆಚ್ಚದಲ್ಲಿ 0.67 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯದ ಆಣೆಕಟ್ಟು ನಿರ್ಮಾಣ ಮಾಡಿ, ಮಳೆಗಾಲದಲ್ಲಿ ಕೃಷ್ಣಾ ನದಿಯಿಂದ ನೀರನ್ನು ತುಂಬಿಸುವುದು. ಬೇಸಿಗೆಯಲ್ಲಿ ಅವಶ್ಯಕತೆಗೆ ತಕ್ಕಂತೆ ಕೆನಾಲ್ ಮೂಲಕ ನೀರು ಹರಿಸುವುದು. ಇದರಿಂದ ತಿಕೋಟಾ ತಾಲೂಕಿನ ಕೆರೆಗಳನ್ನು ಬೇಸಿಗೆಯಲ್ಲಿ ತುಂಬಿಸುವುದು ಹಾಗೂ ಕಾಲುವೆ ಜಾಲದ ಮೂಲಕ ಕೆನಾಲ್ ಮತ್ತು ಹಳ್ಳಗಳಿಗೆ ನೀರು ಹರಿಸಲು ಅನುಕೂಲವಾಗಲಿದೆ.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಆರೋಗ್ಯ ಇಲಾಖೆ ನೌಕರರಿಂದ ಮನವಿ

◆ **ಮುದ್ದೇಬಿಹಾಳ:** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ, ನೌಕರರ ವಿವಿಧ ಬೇಡಿಕೆಗಳನ್ನು ಸರ್ಕಾರ ತಕ್ಷಣ ಈಡೇರಿಸದಿದ್ದರೆ ಮಾ.11ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಮುಂದಾಗುವುದಾಗಿ ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ ಹಾಗೂ ಕರ್ನಾಟಕ ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖಾ ನೌಕರರ ಕೇಂದ್ರ ಸಂಘ ಹಾಗೂ ತಾಲೂಕಿನ ಸಿಬ್ಬಂದಿ ಶಾಸಕರು ಹಾಗೂ ಕೆಎಸ್‌ಡಿಎಲ್ ಅಧ್ಯಕ್ಷ ಸಿ.ಎಸ್.ನಾಡಗೌಡ ಅವರಿಗೆ ಅವರ ನಿವಾಸದಲ್ಲಿ ಮನವಿ ಸಲ್ಲಿಸಿದರು.



ಮನವಿ ಸ್ವೀಕರಿಸಿ ಮಾತನಾಡಿದ ಶಾಸಕರು, ಆರೋಗ್ಯ ಇಲಾಖೆಯ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಬೇಡಿಕೆಗಳು ಈಗಾಗಲೇ ನನ್ನ ಗಮನಕ್ಕೆ ಬಂದಿದೆ. ಆರೋಗ್ಯ ಸಚಿವರಾದ ದಿನೇಶ ಗುಂಡೂರಾವ ಅವರೊಂದಿಗೆ ಮಾತನಾಡಿದ್ದೇನೆ. ಇನ್ನೊಮ್ಮೆ ನಿಮ್ಮ ಬೇಡಿಕೆಗಳು ಹಾಗೂ ಸಮಸ್ಯೆಗಳ ಕುರಿತು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಬೇಡಿಕೆ ಪರಿಶೀಲನೆ ಮಾಡಿ ಶೀಘ್ರದಲ್ಲಿ ಪರಿಹಾರ ಕಂಡುಕೊಳ್ಳುವ ಭರವಸೆ ಇದೆ ಎಂದು ಹೇಳಿದರು.

ತಹಶೀಲ್ದಾರ್ ಕೀರ್ತಿ ಚಾಲಕ, ಇಲಾಖೆಯ ತಾಲೂಕು ಆರೋಗ್ಯ ಅಧಿಕಾರಿ ಡಾ. ಸತೀಶ್ ತಿವಾರಿ, ತಾಲೂಕು ಸಾರ್ವಜನಿಕ ಆಸ್ಪತ್ರೆ ಮುಖ್ಯ ಆಡಳಿತ ವೈದ್ಯಾಧಿಕಾರಿ ಡಾ.ಪರಶುರಾಮ ವಡ್ಡರ ಅವರಿಗೂ ಮನವಿ ಸಲ್ಲಿಸಲಾಯಿತು.

ವೈದ್ಯಾಕಾರಿಗಳಾದ ಡಾ. ಅನಿಲಕುಮಾರ್ ಶೇಗುನಶಿ, ಡಾ.ರಂಗನಾಥ, ಡಾ.ಬಿ.ಎಸ್. ಚೌದ್ರಿ, ಡಾ.ಅಬ್ದುಲಮಜೀದ್ ಬಾಗವಾನ, ಡಾ.ರಿಫತ್ತಕೌಸರ್ ಇನಾಮದಾರ, ಡಾ.ಬಸವರಾಜ ಅಲಗೂರ, ಡಾ.ಸಂಗಮೇಶ ದಶವಂತ, ಡಾ.ತಹಸೀನ್ ಶಿವಣಗಿ, ಡಾ.ಸಂದೀಪ ಬಿರಾದಾರ ಹಾಗೂ ಆಲ್ ಕೆಡರ್ ಸಂಘದ ಜಿಲ್ಲಾ ಪ್ರದಾನ ಕಾರ್ಯದರ್ಶಿ ಆನಂದಗೌಡ ಎನ್.ಬಿರಾದಾರ, ಎಂ.ಎಸ್. ಗೌಡರ, ವಿ.ವಿ.ಪವಾಡಶೆಟ್ಟಿ, ಮಲ್ಲು ತುರುಡಗಿ, ಶಶಿಧರ ಒತಗೇರಿ, ನೌಕರರ ಸಂಘದ ಪದಾಧಿಕಾರಿಗಳು, ನಿರ್ದೇಶಕರು ಹಾಗೂ ತಾಲೂಕಿನ ಎಲ್ಲ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಇದ್ದರು.

ಬಡವರ ಕಲ್ಯಾಣಕ್ಕೆ ಮಹತ್ವ: ಮನಗೂಳಿ

◆ **ಸಿಂದಗಿ:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಮಂಡಿಸಿದ 2026-27ನೇ ಸಾಲಿನ ಬಜೆಟ್ ಸಂಪೂರ್ಣ ಬಡವರ, ರೈತರ ಮತ್ತು ರಾಜ್ಯದ ಅಭಿವೃದ್ಧಿ ಪರವಾದ ಬಜೆಟ್ ಆಗಿದೆ. ಸಾಮಾಜಿಕ ನ್ಯಾಯ ಬಡವರ ಕಲ್ಯಾಣಕ್ಕೆ ಹೆಚ್ಚು ಮಹತ್ವ ಈ ಬಾರಿ ಮೂಡಿಬಂದಿದೆ. ಎಲ್ಲಾ ವರ್ಗದ ಜನರಿಗೆ ಅನುಕೂಲವಾಗುವ ರಾಜ್ಯದ ಮೂಲಭೂತ ಸೌಕರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ವಿರೋಧ ಪಕ್ಷದವರು ಎಷ್ಟೇ ಟೀಕಿಸಿದರು ರಾಜ್ಯದ ಜನತೆ ಈ ಬಾರಿಯ ಬಜೆಟಿಗೆ ಶಾಸಕ ಅಶೋಕ ಮನಗೂಳಿ ಸೈ ಎಂದಿದ್ದಾರೆ.



ಆದರಲ್ಲಿ ಸಿಂದಗಿ ಮತಕ್ಷೇತ್ರಕ್ಕೆ ಮೊದಲ ಬಾರಿಗೆ ಕಾರ್ಮಿಕ ಮಕ್ಕಳಿಗಾಗಿ 6ನೇ ತರಗತಿಯಿಂದ 12ನೇ ತರಗತಿಯ ವರೆಗೆ ಶ್ರಮಿಕ ವಸತಿ ಶಾಲೆ, ಪ್ರಗತಿ ಪಥ ಯೋಜನೆಯಡಿಯಲ್ಲಿ ಸಿಂದಗಿ ಮತಕ್ಷೇತ್ರದ 30ಕೀಮಿ ಗ್ರಾಮೀಣ ರಸ್ತೆಗಳ ಸುಧಾರಣೆಗೆ ಬಜೆಟ್‌ನಲ್ಲಿ ಅನುದಾನ ಮಂಜೂರಾಗಿದೆ. ಮತಕ್ಷೇತ್ರದ ಕೆಂಗನಾಳ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣಕ್ಕೆ ಅನುದಾನ ಮಂಜೂರಾಗಿದೆ, ಲೋಕೋಪಯೋಗಿ ಇಲಾಖೆಯ ಕೇಶಿಪ್ ಯೋಜನೆಯಡಿ ಚಡಚಣ -ಇಂಡಿ- ಆಲಮೇಲ- ಗಾಣಗಾಪೂರ ಪಟ್ಟಣಕ್ಕೆ ಸೇರುವ ಸುಮಾರು 115 ಕೀಮಿ ಸೂಪರ್ ಪಾಸ್ಟ್ ರಸ್ತೆಯ ಅಭಿವೃದ್ಧಿಗೆ ಟೆಂಡರ್ ಕರೆಯಲು ಅನು ಮೋದನೆ ದೊರೆತಿದೆ. ಸಿಂದಗಿ ಮತಕ್ಷೇತ್ರಕ್ಕೆ ಈ ಬಾರಿಯ ಬಜೆಟ್‌ನಲ್ಲಿ ವ್ಯಾಪಕ ಕೊಡುಗೆ ಸಿಕ್ಕಂತಾಗಿದೆ.



ರೈತರಿಗೆ ನ್ಯಾಯ ಒದಗಿಸುವ ಕೆಲಸವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾಡಿಲ್ಲ, ಅಭಿವೃದ್ಧಿ ಕೆಲಸಗಳನ್ನು ಘೋಷಣೆ ಮಾಡದೆ ನಿರಾಶದಾಯಕ ಬಜೆಟ್ ಇದಾಗಿದೆ. ಈ ಬಾರಿ ಅತಿವೃಷ್ಟಿ ಮತ್ತು ಪ್ರವಾಹದ ಕಾರಣಕ್ಕಾಗಿ ಸಾವಿರಾರು ಎಕರೆ ಭೂಮಿಯಲ್ಲಿ ಬೆಳೆದ ಬೆಳೆ ಹಾನಿಯಾಗಿದೆ ಪರಿಹಾರ ಹಾಗೂ ವಿಮೆ ಸರಿಯಾಗಿ ರೈತರಿಗೆ ಮುಟ್ಟಿಲ್ಲ. ಬಹುವರ್ಷದ ಬೂದಿಹಾಳ-ಪಿರಾಪೂರ ಏತ ನೀರಾವರಿ ಯೋಜನೆ ಪೂರ್ಣಗೊಳಿಸಲು ಈ ಬಾರಿ ಬಜೆಟ್‌ನಲ್ಲಿ ತಿಳಿಸಲಾಗಿದೆ. ಅಭಿವೃದ್ಧಿ ಕೆಲಸಗಳ ಘೋಷಣೆ ಮಾಡದೆ ಕೇಂದ್ರ ಸರ್ಕಾರದ ಮೇಲೆ ಗುಬೆ ಕೂರಿಸುವ ಕೆಲಸ ಮಾಡುತ್ತಿದ್ದಾರೆ.

■ **ರಾಜುಗ್ವಡ ಪಾಟಟೀಲ(ಕುದರಿಸಾಲವಾಡಗಿ)** ಶಾಸಕರು



ಈ ಬಾರಿ ಬಜೆಟ್ ಸರ್ವರ ಅಭಿವೃದ್ಧಿ ಒಳಗೊಂಡಿದೆ. ವಿಜಯಪುರದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜಿಗೆ ವಿಸ್ತೃತ ಯೋಜನಾ ವರದಿ ತಯಾರಿಸಲು ಒಪ್ಪಿಗೆ ನೀಡಿದೆ. ವಿಜಯಪುರದ ಸೈನಿಕ ಶಾಲೆಗೆ ಅನುದಾನ, ಚಡಚಣದಲ್ಲಿ ಸರ್ಕಾರಿ ಕಾಲೇಜು ಸ್ಥಾಪನೆ, ಶೈಕ್ಷಣಿಕವಾಗಿ ಹಿಂದುಳಿದ ಪರಿಶಿಷ್ಟ, ಅಲೆಮಾರಿ, ಅರೆ-ಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗಾಗಿ ವಸತಿ ಶಾಲೆ, ಇಎಸ್‌ಐ ಆಸ್ಪತ್ರೆ, ಮುದ್ದೇಬಿಹಾಳದಲ್ಲಿ ಕೈಗಾರಿಕಾ ಅಭಿವೃದ್ಧಿ, ಚಡಚಣ ಏತ ನೀರಾವರಿ ಯೋಜನೆ, ಬಬಲೇಶ್ವರ ತಾಲೂಕಿನಲ್ಲಿ ಸರಣಿ ಚೆಕ್ ಡ್ಯಾಂ ಹೀಗೆ ಈ ಬಾರಿಯ ಬಜೆಟ್ ವಿಜಯಪುರ ಜಿಲ್ಲೆಯ ಆಶಾದಾಯಕವಾಗಿದೆ.

■ **ಡಾ.ಬಾಬುರಾಜೇಂದ್ರ ನಾಯಿಕ,** ಕಾಂಗ್ರೆಸ್ ಮುಖಂಡ



ಒಂದು ವರ್ಗಕ್ಕೆ ಓಲೈಕೆಯ ಬಜೆಟ್ ಆಗಿದೆ. ವೃದ್ಧಾಶ್ರಮಗಳನ್ನು ಸಹ ಧರ್ಮಾಧಾರಿತವಾಗಿ ಆರಂಭಿಸುವ ನಿರ್ಧಾರ ಸರಿಯಾದ ಕ್ರಮವಲ್ಲ. ಎಲ್ಲ ಧರ್ಮಗಳಿಗೂ ಸಮಾನವಾಗಿ ಕಾಣಬೇಕಾಗಿರುವುದು ಸರ್ಕಾರದ ಧರ್ಮ. ಆದರೆ ಕೆಲವೇ ಸಮುದಾಯಗಳಿಗೆ ಸೀಮಿತವಾಗಿ ವೃದ್ಧಾಶ್ರಮ ಸ್ಥಾಪನೆಯಂತಹ ಯೋಜನೆಯನ್ನು ಪ್ರಕಟಿಸಿದೆ. ಜಿಲ್ಲೆಯ ಪಾಲಿಗೆ ಕೃಷ್ಣಾ ಮೇಲ್ದಂಡೆ ಯೋಜನೆಗೆ ಅನುದಾನವನ್ನೇ ಘೋಷಣೆ ಮಾಡಿಲ್ಲ, ಕೃಷ್ಣಾ ಯೋಜನೆಗಳಿಗೆ ಆದ್ಯತೆ ನಿಡುವುದಾಗಿ ಪಾದಯಾತ್ರೆಯನ್ನೇ ಮಾಡಿದ ಮುಖ್ಯಮಂತ್ರಿಗಳು ಕೃಷ್ಣೆಯನ್ನು ಮರೆತಿದ್ದಾರೆ.

■ **ಪರಶುರಾಮಸಿಂಗ್ ರಜಪೂತ,** ಬಿಜೆಪಿ ಮುಖಂಡ



ಬಜೆಟ್ ಎಲ್ಲ ಸಮುದಾಯಗಳಿಗೆ ಹಾಗೂ ವಿಶೇಷವಾಗಿ ರೈತರಿಗೆ ಉತ್ತಮವಾಗಿದೆ. ರೈತ ಮಾಲ್ ಪ್ರಾರಂಭಿಸಿ ರೈತರಿಗೆ ಕೈಗೆಟುಕುವ ದರದಲ್ಲಿ ಕೀಟನಾಶಕಗಳನ್ನು ಹಾಗೂ ಕೃಷಿ ಸಾಮಗ್ರಿಗಳ ಪೂರೈಕೆ ಮಾಡುವ ನಿಟ್ಟಿನಲ್ಲಿ ಮುತುವರ್ಜಿ ವಹಿಸಲಾಗಿದೆ. ವಿಶೇಷವಾಗಿ ವಿದ್ಯಾರ್ಥಿಗಳಿಗೆ ಮೊಬೈಲ್ ನಿಷೇಧ, ಶಿಕ್ಷಣ ಕ್ಷೇತ್ರಕ್ಕೆ 47,224 ಕೋಟಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ 34,929 ಕೋಟಿ ಹಣ ಮೀಸಲಿರಿಸಲಾಗಿದೆ.

■ **ಮಲ್ಲಿಕಾರ್ಜುನ ಲೋಣಿ,** ಕಾಂಗ್ರೆಸ್ ಜಿಲ್ಲಾಧ್ಯಕ್ಷ



2026ರ ಬಜೆಟ್ ಬಸವ ನಾಡಿನ ನಿರೀಕ್ಷೆಗಳಿಗೆ ಸರ್ಕಾರ ತಣ್ಣೀರೆರಚಿದಂತ್ತಾಗಿದೆ. ವಿಶ್ವಗುರು ಬಸವಣ್ಣನವರ ಜನ್ಮಭೂಮಿ ಬಸವನಬಾಗೇವಾಡಿ ಕೇವಲ ಒಂದು ತಾಲೂಕು ಕೇಂದ್ರವಲ್ಲ, ಅದು ಕೋಟ್ಯಂತರ ಬಸವ ಭಕ್ತರ ಶ್ರದ್ಧಾಕೇಂದ್ರ. ಈ ಬಾರಿಯ ರಾಜ್ಯ ಬಜೆಟ್ ಮೇಲೆ ಬಸವ ನಾಡಿನ ಜನರು ಬೆಟ್ಟದಷ್ಟು ನಿರೀಕ್ಷೆ ಇಟ್ಟುಕೊಂಡಿದ್ದರು. ಆದರೆ ಬಜೆಟ್ ಘೋಷಣೆಯಾದ ನಂತರ ಬಸವ ಭಕ್ತರಿಗೆ ತೀವ್ರ ನಿರಾಸೆಯಾಗಿದೆ.

■ **ಶಂಕರಗೌಡ ಬಿರಾದಾರ,** ಸಂಸ್ಥಾಪಕ, ಅಧ್ಯಕ್ಷ ರಾಷ್ಟ್ರೀಯ ಬಸವಸೈನ್ಯ, ಬಸವನಬಾಗೇವಾಡಿ



ಈ ಬಾರಿ ಬಡವರ ಪಾಲಿನ ಬಜೆಟ್ ಆಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ 17ನೇ ಬಜೆಟ್ ನಲ್ಲಿ ಬಡವರ ದೀನ-ದಲಿತರ, ಅಲ್ಪಸಂಖ್ಯಾತರ, ಹಿಂದುಳಿದ, ಮಹಿಳೆಯರ, ಕಾರ್ಮಿಕರ, ವಿದ್ಯಾರ್ಥಿಗಳಿಗೆ ಹಾಗೂ ರೈತರಿಗೆ ಅನಕೂಲ ಒದಗಿಸುವಂತಹ ಯೋಜನೆ ಜಾರಿಗೊಳಿಸುವ ಮೂಲಕ ಬಡವರ ಪಾಲಿನ ಬಜೆಟ್ ಮಂಡಿಸಿದ್ದಾರೆ.

■ **ಗುರುರಾಜ ಗುಡಿಮನಿ,** ಕೆಆರ್‌ಡಿಎಸ್‌ಎಸ್ ಜಿಲ್ಲಾ ಸಂಚಾಲಕ



ಪ್ರಸಕ್ತ ಸಾಲಿನ ಮುಗಂಡ ಪತ್ರ ಕೃಷ್ಣಾ ಮೇಲ್ದಂಡೆ ಯೋಜನೆ ಅಡಿಯಲ್ಲಿ ಮುಳಗಡೆಯಾಗುವ ಭೂ ಸಂತ್ರಸ್ತರಿಗೆ ದರ ನಿಗದಿ ಮಾಡಿದರೆ ಸಾಲದು ಕೊಟ್ಟ ಮಾತಿನಂತೆ 25 ಸಾವಿರ ಕೋಟಿ ರೂ.ಪ್ರತೇಕ ಅನುದಾನ ಒದಗಿಸಿಲಾಗುವದು ಎನ್ನುವ ಯಾವ ಆಲೋಚನೆ ಮುಗಂಡ ಪತ್ರದಲ್ಲಿ ಇಲ್ಲ. ಆದರಂತೆ ಅತ್ಯಂತ ನಿರಾಶಾದಾಯಕ ರಾಜ್ಯದ ಜನರಿಗೆ ಚೋಂಬು ತೋರಿಸಿದಂತಾಗಿದೆ.

■ **ಎಸ್.ಕೆ.ಬೆಳ್ಳುಬ್ಬಿ,** ಮಾಜಿ ಸಚಿವ



ರಾಜ್ಯದ ಜನರಿಗೆ ಉತ್ತಮವಾದ ಮುಗಂಡ ಪತ್ರ ಸಿಎಂ ಅವರು ಮಂಡಿಸಿದ್ದಾರೆ. ಸರ್ವಜನರ ಸಮದೃಷ್ಟಿಯಲ್ಲಿ ಸರ್ವ ವರ್ಗಕ್ಕೂ ಅನುಕೂಲಕರವಾದ ಸ್ತ್ರೀ ಶಕ್ತಿ ಸಬಲೀಕರಣಕ್ಕಾಗಿ ಸವಿತಾ ಸಮಾಜದ ಉನ್ನತಿಗಾಗಿ ಬಡವರ ಕಲ್ಯಾಣಕ್ಕಾಗಿ ಹಲವಾರು ಯೋಜನೆಗಳ ಘೋಷಣೆ ಜನರಿಗೆ ಉಪಯುಕ್ತವಾಗುತ್ತದೆ.

■ **ಕಮಲಾಭಾಯಿ ಯ.ಮಾಕಾಳಿ,** ಕೆಪಿಸಿಸಿ ಸದಸ್ಯೆ

ಬಜೆಟ್‌ನಲ್ಲಿ ವಿಜಯಪುರ ನಿರ್ಲಕ್ಷ್ಯ: ಕೇಶವ್

◆ **ವಿಜಯಪುರ:** ಪ್ರಸಕ್ತ ರಾಜ್ಯ ಬಜೆಟ್‌ನಲ್ಲಿ ವಿಜಯಪುರ ಮಹಾನಗರವನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡಲಾಗಿದ್ದು, ಬಹುನಿರೀಕ್ಷಿತ ವಿಮಾನ ನಿಲ್ದಾಣ ಪ್ರಾರಂಭ ಯಾವಾಗ ಎನ್ನುವ ಕುರಿತು ಖಚಿತತೆ ಕೂಡ ಇಲ್ಲದಂತಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಕೇಶವ್ ಪ್ರಸಾದ್ ಎಸ್.ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ವಿಶೇಷವಾಗಿ ಕೃಷ್ಣಾ ಮೇಲ್ದಂಡೆ ಯೋಜನೆಗಳಿಗೆ ನಿರ್ದಿಷ್ಟವಾದ ಅನುದಾನವನ್ನು ಒದಗಿಸಿಲ್ಲ. ಕಳೆದ ಬಜೆಟ್‌ನಲ್ಲಿ ಘೋಷಿಸಲಾದ ಫುಡ್‌ಪಾರ್ಕ್, ದ್ರಾಕ್ಷಿ ಬೆಳೆಗಾರರ ಕೋಲ್ಡ್ ಸ್ಟೋರೇಜ್ ಪ್ರಗತಿಯಾಗಿಲ್ಲ, ಈ ಬಜೆಟ್‌ನಲ್ಲಿ ಯಾವುದೇ ರೀತಿ ಪ್ರಸ್ತಾಪಿಸಿಲ್ಲ. ಉತ್ತರ ಕರ್ನಾಟಕ ಭಾಗದ ಕ್ರೀಡೆಯ ಪ್ರೋತ್ಸಾಹಕ್ಕೆ ವಿಜಯಪುರ ನಗರದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಬಹುಉಪಯೋಗಿ ಕ್ರೀಡಾಂಗಣವನ್ನು ನಿರ್ಮಿಸಲಾಗುವುದೆಂದು ಆಶಿಸಲಾಗಿತ್ತು, ಅದರ ಬಗ್ಗೆ ಈ ಬಜೆಟ್‌ನಲ್ಲಿ ಚಕಾರವಿಲ್ಲ, ಲಿಂಗೈಕ್ಯ ಸಿದ್ದೇಶ್ವರ ಶ್ರೀಗಳ ಅಧ್ಯಯನ ಕೇಂದ್ರ ಸ್ಥಾಪಿಸುವ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ, ಸರ್ಕಾರಿ ವ ದ್ಯಕೀಯ ಕಾಲೇಜು ಪ್ರಾರಂಭಕ್ಕೆ ವರ್ಷದಲ್ಲಿ ತರಗತಿ ಪ್ರಾರಂಭಿಸಲಾಗುವುದೆಂದು ಆಶಿಸಲಾಗಿತ್ತು. ಅದು ಕೇವಲ ಡಿಪಿಆರ್ ಬಗ್ಗೆ ಪ್ರಸ್ತಾಪಿಸಲಾಗಿದೆ. ಅಲ್ಲದೆ ಮಹಾನಗರವು ಪ್ರವಾಸಿ ತಾಣಗಳಿಗೆ ಹೆಸರುವಾಸಿಯಾಗಿದ್ದು, ಪ್ರವಾಸೋದ್ಯಮ ಅಭಿವೃದ್ಧಿಗೆ ವಿಶೇಷ ಅನುದಾನದ ಬಗ್ಗೆ ಪ್ರಸ್ತಾಪವಿಲ್ಲದೆ ನಿರಾಸೆಯಾಗಿದೆ. ಜಿಲ್ಲೆಯಲ್ಲಿ ಉತ್ಕೃಷ್ಟ ಮಟ್ಟದ ದ್ರಾಕ್ಷಿ ಹಾಗೂ ಹತ್ತಿ ಬೆಳೆಯಲಾಗುತ್ತಿದ್ದು, ವೈನ್ ಪಾರ್ಕ್ ಹಾಗೂ ಜವಳಿ ಪಾರ್ಕ್ ಸ್ಥಾಪನೆಯ ಬಗ್ಗೆ ಇದ್ದ ಕನಸುಗಳು ಬತ್ತಿಹೋಗಿವೆ. ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯಕ್ಕೆ ಅನುದಾನ ನೀಡಿ ಮಹಿಳಾ ಶಿಕ್ಷಣಕ್ಕೆ ಪೂರಕ ವಾತಾವರಣ ಸೃಷ್ಟಿಸಿಲ್ಲ. ಲಿಂಬೆ ಮುಂತಾದ ತೋಟಗಾರಿಕಾ ಬೆಳೆಗಳಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಸಂಬಂಧಿಸಿದ ವಿಚಾರಗಳಿಗೆ ವಿಶೇಷ ಮಾರುಕಟ್ಟೆ ಸ್ಥಾಪನೆಯ ಬಗ್ಗೆ ಪ್ರಸ್ತಾಪವಿಲ್ಲ ಎಂದು ತಿಳಿಸಿದ್ದಾರೆ.





ಕೊಪ್ಪಳಕ್ಕೆ ವಿಶೇಷವಾಗಿ ಕ್ಯಾನ್ಸರ್ ಆಸ್ಪತ್ರೆಯನ್ನು ಘೋಷಣೆ ಮಾಡುವಂತೆ ಮನವಿ ಮಾಡಿದ್ದೇವು



ನಮ್ಮ ಮನವಿಗೆ ಸ್ಪಂದಿಸಿರುವ ಮುಖ್ಯಮಂತ್ರಿಗಳು ಇಂದಿನ ಬಜೆಟ್‌ನಲ್ಲಿ ಘೋಷಣೆ ಮಾಡಿರುವುದು ಸಂತಸ ತಂದಿದೆ. ಈ ಬಜೆಟ್‌ನಲ್ಲಿ ಎಲ್ಲ ವರ್ಗದ ಬದುಕಿಗೆ ಬಲ ತುಂಬಲು ಅನೇಕ ಜನಪರ ಕಾರ್ಯಕ್ರಮಗಳನ್ನು ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದಾರೆ. ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವ ಕರ್ನಾಟಕಕ್ಕೆ ಈ ಬಜೆಟ್ ಹೊಸ ಚೈತನ್ಯ ನೀಡಲಿದೆ.

■ ಕೆ.ರಾಘವೇಂದ್ರ, ಹಿಟ್ನಾಳ, ಶಾಸಕ

ಈ ಬಜೆಟ್ ಸಾಲದ ಬಜೆಟ್ ಆಗಿದೆ. ಕಳೆದ ಬಜೆಟ್‌ನಲ್ಲಿರುವುದನ್ನು ಮುಂದುವರಿಸಿಕೊಂಡು



ಹೋಗಿದ್ದಾರೆ. ತಾಲೂಕಿಗೆ ಒಂದು ಕೆಇಬಿ ಸಬ್ ಸ್ಟೇಷನ್ ಕೊಟ್ಟಿದ್ದಾರೆ. ಅದು ಇನ್ನೂ ಯಾವ ಊರಿಗೆ ಅಂತ ಗೊತ್ತಿಲ್ಲ. ಕೆರೆ ತುಂಬಿಸುವ ಯೋಜನೆಯಲ್ಲಿ ಹನಮಸಾಗರ ಇದೆ. ಅದು ಇನ್ನೂ ಖಚಿತ ಪಡಿಸಿಕೊಳ್ಳಬೇಕಿದೆ. ಸಾಲದ ಬಜೆಟ್ ಆಗಿದೆ. ಈ ಸಲ ಬಜೆಟ್‌ನಲ್ಲಿ ಚೊಂಬು ಕೊಟ್ಟಿದ್ದಾರೆ.

■ ದೊಡ್ಡನಗೌಡ ಪಾಟೀಲ, ಶಾಸಕ, ಕುಷ್ಟಗಿ

ಸಿಎಂ ಸಿದ್ದರಾಮಯ್ಯ ಅವರು ಮಂಡಿಸಿರುವ ಬಜೆಟ್ ನಿರಾಶಾದಾಯಕವಾಗಿದೆ. ಗಂಗಾವತಿ ವಿಧಾನಸಭಾ



ಕ್ಷೇತ್ರಕ್ಕೆ ಏನೂ ಅನುದಾನ ನೀಡಿಲ್ಲ. ಕ್ಷೇತ್ರದ ಅಭಿವೃದ್ಧಿ, ಅಂಜನಾದ್ರಿ, ನೀರಾವರಿ ಯೋಜನೆ, ಮೂಲಸೌಕರ್ಯ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಮಹತ್ವದ ಘೋಷಣೆ ಮಾಡಿಲ್ಲ. ಕಾಂಗ್ರೆಸ್ ಶಾಸಕರ ಕ್ಷೇತ್ರದಕ್ಕೆ ಬೆಣ್ಣೆ, ಬಿಜೆಪಿ ಶಾಸಕರ ಕ್ಷೇತ್ರಕ್ಕೆ ಸುಣ್ಣ ಹಚ್ಚುವ ಕೆಲಸ ಮಾಡಿದ್ದಾರೆ.

■ ಪರಣ್ಣ ಮುನವಳ್ಳಿ, ಮಾಜಿ ಶಾಸಕ

ಬಜೆಟ್‌ನಲ್ಲಿ ನಮ್ಮ ಕ್ಷೇತ್ರವನ್ನು ಸಂಪೂರ್ಣವಾಗಿ ನಿರ್ಲಕ್ಷಿಸುವ ಮೂಲಕ ಸತತವಾಗಿ ಮೂರನೇ



ವರ್ಷವೂ ಕೊಪ್ಪಳಕ್ಕೆ ಸಿದ್ದರಾಮಯ್ಯನವರ ಸರಕಾರ ಚೊಂಬು ಕೊಟ್ಟಿದೆ. ಶುದ್ಧ ಕುಡಿಯುವ ನೀರು ಪೂರೈಕೆ, ಕೆರೆಗಳ ಆಧುನಿಕರಣ, ಆಣೆಕಟ್ಟು ಮತ್ತು ಪಿಕ್ ಅಪ್ ಹಾಗೂ ಚೆಕ್ ಡ್ಯಾಮ್ ನಿರ್ಮಾಣ ಕಾಮಗಾರಿಗಳಿಗೆ ಯಲಬುರ್ಗಾ ಕ್ಷೇತ್ರಕ್ಕೆ ಅನುದಾನದ ಹೊಳೆ ಹರಿದಿದೆ. ಇದರಲ್ಲಿ ಕೊಪ್ಪಳಕ್ಕೆ ಬಿಡಿಗಾಸೂ ಇಲ್ಲ. ಹೋದ ವರ್ಷ ಆದ ಅನ್ಯಾಯ ಈ ವರ್ಷವೂ ಮುಂದುವರೆದಿದೆ. ಇದಕ್ಕೆ ಶಾಸಕರ ನಿರ್ಲಕ್ಷವೇ ಕಾರಣ.

■ ಸಿ.ವಿ.ಚಂದ್ರಶೇಖರ್, ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 17ನೇ ಬಾರಿ ಬಜೆಟ್ ಮಂಡಿಸುವ ಮೂಲಕ ಹೊಸ ದಾಖಲೆ ಮಾಡಿಕೊಂಡಿದ್ದೆ ಸಾಧನೆ ವಿನಃ, ಜನ



ಕಲ್ಯಾಣದಂತ ಯೋಜನೆಗಳನ್ನು ಸರಿಯಾಗಿ ಘೋಷಿಸಿಲ್ಲ. ಕೊಪ್ಪಳ ಜಿಲ್ಲೆಗೆ ಹೇಳಿಕೊಳ್ಳುವಂತೆ ಯೋಜನೆ ಘೋಷಿಸದಿರುವುದು ದುರಂತದ ಸಂಗತಿಯಾಗಿದೆ. ರಾಜ್ಯದ ಜನರಿಗೆ ಉತ್ತಮ ಕೊಡುಗೆ ನೀಡುತ್ತಾರೆ ಎಂಬ ನಿರೀಕ್ಷೆಗಳಿದ್ದವು. ಆದರೆ, ಇಂತಹ ಹಲವು ನಿರೀಕ್ಷೆಗಳು ಆಯವ್ಯದಲ್ಲಿ ಈಡೇರಿಲ್ಲ. ಬದಲಾಗಿ ಜನಸಾಮಾನ್ಯರ ಮೇಲೆ ಸಾಲದ ಹೊರೆಯ ಪ್ರಮಾಣ ಹೆಚ್ಚಿಸಿದ್ದೆ ಸಿದ್ದರಾಮಯ್ಯನವರ ಬಜೆಟ್ ಸಾಧನಯಾಗಿದೆ.

■ ಡಾ.ಬಸವರಾಜ ಕ್ಯಾವಟರ್, ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ

ರಾಜ್ಯ ಸರ್ಕಾರ ಮಂಡಿಸಿದ ಬಜೆಟ್ ಜನಸಾಮಾನ್ಯರ ನಿರೀಕ್ಷೆಗಳನ್ನು ಪೂರೈಸಲು ಸಂಪೂರ್ಣವಾಗಿ ವಿಫಲವಾಗಿದೆ. ರಾಜ್ಯದ



ಅಭಿವೃದ್ಧಿ, ಉದ್ಯೋಗ ಸೃಷ್ಟಿ ಹಾಗೂ ರೈತರ ಸಮಸ್ಯೆಗಳಿಗೆ ಸ್ಪಷ್ಟ ಪರಿಹಾರ ನೀಡುವ ಯಾವುದೇ ಪರಿಣಾಮಕಾರಿ ಯೋಜನೆಗಳು ಈ ಬಜೆಟ್‌ನಲ್ಲಿ ಕಾಣಿಸುತ್ತಿಲ್ಲ. ವಿದ್ಯಾರ್ಥಿಗಳಲ್ಲಿಯೂ ಕೂಡ ಧರ್ಮ ಆದರದ ಮೇಲೆ ಸೌಲಭ್ಯಗಳನ್ನು ಘೋಷಿಸಿರುವುದು ಖಂಡನಿಯ. ಕೊಪ್ಪಳದ ಕಾರ್ಖಾನೆಗಳ ಕುರಿತು ಆಗು ತ್ತಿರುವ ಅನಾಹುತಗಳಿಗೆ ಯಾವುದೇ ಸ್ಪಷ್ಟನೆ ನೀಡಿಲ್ಲ.

■ ನವೀನಕುಮಾರ ಗುಳಗಣ್ಣವರ, ಬಿಜೆಪಿ ಜಿಲ್ಲಾಧ್ಯಕ್ಷ

ಸಿಎಂ ಸಿದ್ದರಾಮಯ್ಯ ಅವರು ಮಂಡಿಸಿರುವ 2026-27ನೇ ಸಾಲಿನ ರಾಜ್ಯ ಬಜೆಟ್ ನಲ್ಲಿ



ಅಭಿವೃದ್ಧಿಗೆ ಆದ್ಯತೆ ನೀಡಿಲ್ಲ.ಈ ಬಾರಿಯ ಬಜೆಟ್‌ನಲ್ಲಿ 1.32 ಲಕ್ಷ ಕೋಟಿ ರೂ. ಸಾಲ ಮಾಡಿ ರಾಜ್ಯದ ಜನತೆಯ ಮೇಲೆ ಸಾಲದ ಹೊರೆ ಹೇರಿದೆ ಹೊರತು ರಾಜ್ಯದ ಅಭಿವೃದ್ಧಿಗೆ ಯಾವುದೇ ಕೊಡುಗೆ ನೀಡಿಲ್ಲ.

■ ಬಸವರಾಜ ಮತ್ತಿಮಡು. ಶಾಸಕ, ರಾಜ್ಯ ಕಾರ್ಯದರ್ಶಿ ಬಿಜೆಪಿ

ಸರ್ಕಾರದ 2026- 27ನೇ ಸಾಲಿನ ಬಜೆಟ್ ಏಳು ಕೋಟಿ ಕನ್ನಡಿಗರ ಮೇಲೆ ಸಾಲದ ಹೊರೆ



ಹೊರಿಸಿದ ಜನ ವಿರೋಧಿ ಬಜೆಟ್. ಸಿಎಂ ಅವರ ಹೆಮ್ಮೆ 17ನೇ ಬಜೆಟ್ ಘೋಷಣೆಯಲ್ಲಿ ಜನಪರವಾದ ಯೋಜನೆಗಳಿಲ್ಲದೆ ಮುಂದಿನ ದಿನಗಳಲ್ಲಿ ಜನಸಾಮಾನ್ಯರ ಮೇಲೆ ತೆರಿಗೆ ಭಾರವನ್ನು ಹೊರಿಸಿದ ಸಾಲದ ಹೊರೆಯ ಬಜೆಟ್ ಇದಾಗಿದೆ.

■ ಡಾ.ಉಮೇಶ್ ಜಾಧವ್, ಮಾಜಿ ಸಂಸದ, ಕಲಬುರಗಿ



ಯಲಬುರ್ಗಾ: ತಾಲೂಕಿನ ದಮ್ಮೂರು ಗ್ರಾಮದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಅಗಸ್ತ್ಯ ಫೌಂಡೇಶನ್ ಸಹಯೋಗದಲ್ಲಿ ಶುಕ್ರವಾರ ಆಯೋಜಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನ ಮತ್ತು ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮವನ್ನು ಸ್ಥಳೀಯ ಸರ್ಕಾರಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ಎಫ್.ಎಂ.ಕಳ್ಳಿ ಉದ್ಘಾಟಿಸಿದರು.

ಶಾಸಕ ದೊಡ್ಡನಗೌಡ ಪಾಟೀಲಗೆ ಸನ್ಮಾನ

ಕುಷ್ಟಗಿ: ತಾಲೂಕಿನ ಕೊರಡಕೇರಿ ಗ್ರಾಮದಲ್ಲಿ ಶಾಸಕ ದೊಡ್ಡನಗೌಡ ಪಾಟೀಲ ಅವರನ್ನು ಗೃಹ ಕಚೇರಿಯಲ್ಲಿ ಗುರುವಾರ ಬೆಳಿಗ್ಗೆ ಜಿಲ್ಲಾ ಕಸಾಪ ಹಾಗೂ ತಾಲೂಕು ಕಸಾಪ ಪದಾಧಿಕಾರಿಗಳು ಭೇಟಿ ನೀಡಿ ಮುದೇನೂರುನಲ್ಲಿ ನಡೆಯುವ 14ನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷ, ಶಾಸಕ ಹಾಗೂ ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ್ ಅವರನ್ನು ಸನ್ಮಾನಿಸಿ ಗೌರವಿಸಿ ಸಮ್ಮೇಳನ ಕುರಿತು ಚರ್ಚೆ ನಡೆಸಿದರು.

ಶಾಸಕ ದೊಡ್ಡನಗೌಡ ಪಾಟೀಲ್ ಅವರು ಸಂತೋಷದಿಂದ ಒಪ್ಪಿಕೊಂಡು ಕುಷ್ಟಗಿ ತಾಲೂಕಿನಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜನೆ ಮಾಡಿರುವುದು ಸಂತಸದ ಸಂಗತಿ ಎಂದರು.

ಏಪ್ರಿಲ್ ತಿಂಗಳ ಮೊದಲ ವಾರದಲ್ಲಿ ಸಮ್ಮೇಳನ ಆಯೋಜನೆ ಮಾಡಬೇಕು ಹಾಗೂ ಇಂದಿನಿಂದಲೆ ಸಮ್ಮೇಳನದ ಎಲ್ಲಾ ಕಾರ್ಯಗಳಿಗೆ ಮುಂದಾಗಬೇಕು. ಈ ಸಮ್ಮೇಳನ ಯಶಸ್ವಿಗೆ ಸಹಾಯ ಸಹಕಾರ ನೀಡುವುದಾಗಿ ತಿಳಿಸಿದರು. ಜಿಲ್ಲಾ ಕಸಾಪ ಅಧ್ಯಕ್ಷ ಶರಣೆಗೌಡ ಪೊಲೀಸ್ ಪಾಟೀಲ, ಜಿಲ್ಲಾ ಕೋಶಾಧ್ಯಕ್ಷ ರಮೇಶ ಕುಲಕರ್ಣಿ, ಕುಷ್ಟಗಿ ತಾಲೂಕು ಕಸಾಪ ಅಧ್ಯಕ್ಷ ಲೆಂಕಪ್ಪ ವಾಲಿಕಾರ, ಗೌರವ ಕಾರ್ಯದರ್ಶಿ ಶರಣಪ್ಪ ಲೈಊನದ, ಮಾಜಿ ಕಸಾಪ ಅಧ್ಯಕ್ಷರಾದ, ಹನಮೇಶ ಗುಮಗೇರಿ, ರವೀಂದ್ರ ಬಾಕಳೆ, ಚಂದಪ್ಪ ಹಕ್ಕಿ, ಜಿಲ್ಲಾ ಕಸಾಪ ಪ್ರತಿನಿಧಿ ಎಸ್ ಜಿ ಕಡೆಮನಿ, ಪರಶಿವಮೂರ್ತಿ ದೋಟಿಹಾಳ, ನಾಗರಾಜ ಬಡಿಗೇರ, ರಾಜಕುಮಾರ ನಾಯಕ, ಶ್ರೀನಿವಾಸ ಕಂಟ್ಲಿ ಸೇರಿದಂತೆ ಅನೇಕರು ಇದ್ದರು.



ಕುಷ್ಟಗಿ: ತಾಲೂಕಿನ ಕೊರಡಕೇರಿ ಗ್ರಾಮದಲ್ಲಿ ಶಾಸಕ ದೊಡ್ಡನಗೌಡ ಪಾಟೀಲ ಅವರನ್ನು ಗೃಹ ಕಚೇರಿಯಲ್ಲಿ ಗುರುವಾರ ಬೆಳಿಗ್ಗೆ ಜಿಲ್ಲಾ ಕಸಾಪ ಹಾಗೂ ತಾಲೂಕು ಕಸಾಪ ಪದಾಧಿಕಾರಿಗಳು ಭೇಟಿ ನೀಡಿ ಮುದೇನೂರುನಲ್ಲಿ ನಡೆಯುವ 14ನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷ, ಶಾಸಕ ಹಾಗೂ ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ್ ಅವರನ್ನು ಸನ್ಮಾನಿಸಿ ಗೌರವಿಸಿ ಸಮ್ಮೇಳನ ಕುರಿತು ಚರ್ಚೆ ನಡೆಸಿದರು.


ಬಜೆಟ್ ಮೇಲಿನ ನಿರೀಕ್ಷೆ ಹುಸಿ | ಕಾಂಗ್ರೆಸ್ ಶಾಸಕರಿಗೆ ಸಿಹಿ, ಬಿಜೆಪಿ ಶಾಸಕರಿಗೆ ಕಹಿ

ನೀರಾವರಿ ಯೋಜನೆಗಿಲ್ಲ ಅನುದಾನ!

▸ ಮಂಜುನಾಥ ಗಂಗಾವತಿ

ಕೊಪ್ಪಳ: ರಾಜ್ಯ ಬಜೆಟ್ ಮೇಲೆ ಇಟ್ಟಿದ್ದ ನಿರೀಕ್ಷೆಯು ಜಿಲ್ಲೆ ಮಟ್ಟಿಗೆ ಹುಸಿಯಾಗಿದೆ. ಕ್ಯಾನ್ಸರ್ ಆಸ್ಪತ್ರೆ ಬಿಟ್ಟರೆ ನಿರೀಕ್ಷೆಯಂತೆ ಹೊಸ ಘೋಷಣೆಗಳು ಆಗಿಲ್ಲ, ಇನ್ನು ಮೂರು ಕಾಂಗ್ರೆಸ್ ಕ್ಷೇತ್ರಗಳಿಗೆ ಸಿಹಿ ಹಾಗೂ ಎರಡು ಬಿಜೆಪಿ ಕ್ಷೇತ್ರಗಳಿಗೆ ಕಹಿಯಾಗಿದೆ.

ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಹಾಗೂ ಸಿಎಂ ಮಾನಸ ಪುತ್ರ ಕೆ.ರಾಘವೇಂದ್ರ ಹಿಟ್ನಾಳ್ ಕ್ಷೇತ್ರಕ್ಕೆ ಕೆಲ ಘೋಷಣೆ ಆಗಿವೆ. ಉಳಿದ ಕ್ಷೇತ್ರಗಳಿಗೆ ಯಾವುದೇ ಘೋಷಣೆಯಾಗಿಲ್ಲ, ಇನ್ನು ನವಲಿ ಸಮಾನಾಂತರ ಜಲಾಶಯ ಯೋಜನೆ, ಸಿಂಗಾಟಾಲೂರು ಸೇರಿ ಹಲವು ಯೋಜನೆಗಳಿಗೆ ಅನುದಾನವೇ ಮೀಸಲಿಡಲಾಗಿಲ್ಲ. ತುಂಗಭದ್ರಾ ಅಣೆಕಟ್ಟಿನ ಶಿಥಿಲಗೊಂಡಿರುವ 33 ಗೇಟ್ ಗಳನ್ನು ಬದಲಾಯಿಸಿ ಹೊಸ ಗೇಟ್ ಗಳನ್ನು ಅಳವಡಿಸಲಾಗುವುದು. ಜಲಾಶಯದಲ್ಲಿ ಹೂಳಿನ ಶೇಖರಣೆಯಿಂದ ನೀರಿನ, ಸಂಗ್ರಹಣಾ ಸಾಮರ್ಥ್ಯದ ಕೊರತೆಯನ್ನು ನೀಗಿಸಲು ಕೊಪ್ಪಳ ಜಿಲ್ಲೆಯ ನವಲಿ ಬಳಿ ಸಮತೋಲನ ಜಲಾಶಯ ನಿರ್ಮಾಣ ಸೇರಿದಂತೆ ಇತರೆ ಪರ್ಯಾಯ ಮಾರ್ಗೋಪಾಯಗಳ ಕುರಿತು ಈಗಾಗಲೇ ಚಿಂತಿಸಲಾಗಿದೆ. ಇವುಗಳಲ್ಲಿ ಸಮಯೋಚಿತ ಪರ್ಯಾಯ ಮಾರ್ಗದ ಕುರಿತು ನೆರೆಯ ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳೊಂದಿಗೆ ಸಮಾಲೋಚಿಸಿ ತುಂಗಭದ್ರಾ ಮಂಡಳಿಯ ಸಹಮತಿಯೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲು ತೀವ್ರ ತರವಾಗಿ ಪ್ರಯತ್ನಿಸಲಾಗುವುದು ಎಂದಿದ್ದಾರೆ ಹೊರತು ಯೋಜನೆಗೆ ಅನುದಾನ ಮೀಸಲಿಟ್ಟಿಲ್ಲ.



ಕ್ಯಾನ್ಸರ್ ಆಸ್ಪತ್ರೆ ಘೋಷಣೆ

ಕೊಪ್ಪಳ ಜಿಲ್ಲೆಯಲ್ಲಿ ತೃತೀಯ ಹಂತದ ಕ್ಯಾನ್ಸರ್ ಆರೈಕೆ ಒದಗಿಸಲು ಕ್ಯಾನ್ಸರ್ ಆಸ್ಪತ್ರೆಯನ್ನು ಮುನಿರಾಬಾದ್-ಟಿ.ಬಿ.ಡ್ಯಾಂನಲ್ಲಿ ಸ್ಥಾಪಿಸಲಾಗುವುದು. ಜಿಲ್ಲೆಯಲ್ಲಿರುವ ಕಾರ್ಮಿಕ ರಾಜ್ಯ ವಿಮಾ ಚಿಕಿತ್ಸಾಲಯಗಳನ್ನು ಉನ್ನತೀಕರಿಸಲಾಗುವುದು. ಕೊಪಳದ ಜಿಟಿಟಿಸಿ - ಎಂಎಸ್ ಡಿಸಿಯಲ್ಲಿ M/s Aequs Toy Cluster Industryಯ ಕಾರ್ಯತಂತ್ರದ ಸಹಯೋಗದೊಂದಿಗೆ precision Tool Engineering ನಲ್ಲಿ ತಂತ್ರಜ್ಞಾನ ಕೇಂದ್ರವನ್ನು ಕೆಕೆಆರ್ ಡಿಬಿಯ 10 ಕೋಟಿ ಅನುದಾನದೊಂದಿಗೆ ಒಟ್ಟಾರೆ 20 ಕೋಟಿ ವೆಚ್ಚದಲ್ಲಿ ಸ್ಥಾಪನೆ ಮಾಡಲಾಗುವುದು ಎಂದಿದ್ದಾರೆ.

ಅಂಜನಾದ್ರಿ ಬೆಟ್ಟವನ್ನು ವಿಶ್ವ ಪ್ರಸಿದ್ಧ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಲು 100 ಕೋಟಿ ವೆಚ್ಚದ ಯೋಜನೆ ರೂಪಿಸಲಾಗುವುದು.

■ ಸಿದ್ದರಾಮಯ್ಯ, ಮುಖ್ಯಮಂತ್ರಿ

ಕೊಪ್ಪಳ ಜಿಲ್ಲೆಯ ಯಲಬುರ್ಗಾ , ಕುಕನೂರು ತಾಲ್ಲೂಕಿನಲ್ಲಿ ಅಂತರ್ಜಲ ಹೆಚ್ಚಿಸಲು ಕೆರೆಗಳ ಆಧುನೀಕರಣ, ಅಣೆಕಟ್ಟು ಮತ್ತು ಪಿಕ್-ಅಪ್ ಹಾಗೂ ಚೆಕ್ ಡ್ಯಾಂ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು. ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿರುವ 75 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, 23 ಪಾಲಿಟೆಕ್ನಿಕ್ ಹಾಗೂ ಐದು ಇಂಜಿನಿಯರಿಂಗ್ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು. ಕೊಪ್ಪಳ ಜಿಲ್ಲೆಯ ಬೇವೂರು ಗ್ರಾಮಗಳಲ್ಲಿ ವಸತಿಯುಕ್ತ ಪ್ರಥಮ ದರ್ಜೆ ಕಾಲೇಜುಗಳನ್ನು ತಲಾ 18 ಕೋಟಿ ರೂ.ವೆಚ್ಚದಲ್ಲಿ ಸ್ಥಾಪಿಸಲಾಗುವುದು ಎಂದು ಸಿಎಂ ಬಜೆಟ್ ನಲ್ಲಿ ಪ್ರಸ್ತಾಪಿಸಿದ್ದಾರೆ.

ಯಲಬುರ್ಗಾ ಮತ್ತು ಕುಕನೂರು ತಾಲೂಕಿನ ಬನ್ನಿಕೊಪ್ಪ ಹಾಗೂ 23 ಗ್ರಾಮಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವ ಯೋಜನೆಯನ್ನು 125 ಕೋಟಿ ರೂ.ಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುವುದು. ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಅರಿವು ಮೂಡಿಸುವ ಉದ್ದೇಶದಿಂದ ರಾಜ್ಯದ ಜಿಲ್ಲೆಯಲ್ಲಿ ನಾಲ್ಕು ಕೋಟಿ ವೆಚ್ಚದಲ್ಲಿ ತಾರಾಲಯ ನಿರ್ಮಾಣ, ಕುಕನೂರಿನಲ್ಲಿ ಎರಡು ಕೋಟಿ ವೆಚ್ಚದಲ್ಲಿ ತಾಲ್ಲೂಕು ಕ್ರೀಡಾಂಗಣ ನಿರ್ಮಾಣ ಬಗ್ಗೆ ಸಿಎಂ ಸಿದ್ದರಾಮಯ್ಯ ಪ್ರಸ್ತಾಪಿಸಿದ್ದಾರೆ.

ರಾಯಚೂರು ಜಿಲ್ಲೆಯ ಜನತೆಗೆ ನಿರಾಸೆ

▸ ವಾಗೀಶ ವೀ.ಪಾಟೀಲ

ರಾಯಚೂರು: ಸಿಂಧನೂರನ್ನು ನೂತನ ಜಿಲ್ಲಾ ಕೇಂದ್ರವನ್ನಾಗಿ ಘೋಷಣೆ, ಈಗಾಗಲೇ ಘೋಷಣೆ ಆಗಿರುವ ಮಸ್ಕಿ, ಶಿರವಾರ, ಮಾನ್ವಿ, ಲಿಂಗಸುಗೂರು ತಾಲೂಕು ಕೇಂದ್ರಗಳಲ್ಲಿ ಮಿನಿ ವಿಧಾನಸೌಧ ಕಟ್ಟಡಗಳೂ ಸೇರಿದಂತೆ ಆಡಳಿತ ಸುಗಮಕ್ಕೆ ಬೇಕಾದ ಮೂಲ ಸೌಲಭ್ಯಗಳನ್ನು ಒದಗಿಸುವುದಕ್ಕೆ ಪ್ರಸಕ್ತ ಆಯವ್ಯಯದಲ್ಲಿ ಅನುದಾನ ನೀಡುತ್ತಾರೆ ಎನ್ನುವ ನಂಬಿಕೆ ಹುಸಿಯಾದಂತಾಗಿದೆ.

ಜಿಲ್ಲಾ ಕೇಂದ್ರ ರಾಯಚೂರಿನಿಂದ ಸಿಂಧನೂರು, ದೇವದುರ್ಗ ತಾಲೂಕಾ ಕೇಂದ್ರಗಳಿಗೆ ತೆರಳ ಬೇಕೆಂದರೆ ಕನಿಷ್ಟವೆಂದರೂನೂರುಕಿಮೀ.ದಾರಿಯನ್ನು ಕ್ರಮಿಸಬೇಕಾಗುತ್ತದೆ. ಹೀಗಾಗಿ ಪ್ರಸಕ್ತ ಆಯವ್ಯಯದಲ್ಲಿ ಸಿಂಧನೂರು ತಾಲೂಕು ಕೇಂದ್ರವನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡುತ್ತಾರೆ ಎನ್ನುವುದು ಹುಸಿಯಾಗಿದೆ. ಇಲ್ಲಿನ ಜನತೆಯ ಹೋರಾಟಕ್ಕೆ ಬೆಲೆ ಇಲ್ಲದಂತಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ ಹದಿನೇಳನೇ ಆಯವ್ಯಯದಲ್ಲಿ ಜಿಲ್ಲೆಗೆ ಅನೇಕ ಯೋಜನೆಗಳನ್ನು ನಿರೀಕ್ಷಿಸಲಾಗಿತ್ತು. ಆದರೆ, ಹೇಳಿಕೊಳ್ಳುವಂತಹ ಯೋಜನೆಗಳನ್ನು ನೀಡದೇ ಪ್ರಭಾವಿ ಜನಪ್ರತಿನಿಧಿಗಳ ಮಾತಿಗೆ ಮನ್ನಣೆ ನೀಡಿದಂತೆ ಕಂಡುಬರುತ್ತಿದೆ.

ಇಂದಿನ ಆಯವ್ಯಯದಲ್ಲಿ ಕೆಕೆಆರ್ ಡಿಬಿ ಮ್ಯಾಕ್ರೋ ಅನುದಾನದ ಜಿಲ್ಲೆಯ ಮಸ್ಕಿಯಲ್ಲಿ ಪ್ರಥಮ ದರ್ಜೆ ಕಾಲೇಜು ಸ್ಥಾಪಿನೆ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ವತಿಯಿಂದ ಜಿಲ್ಲೆಯ ಸಿಂಧನೂರು ತಾಲೂಕಿನಲ್ಲಿನ ಅಂಬಾಮಠದಲ್ಲಿ ವಸತಿಯುಕ್ತ ಪ್ರಥಮ ದರ್ಜೆ ಕಾಲೇಜು ಸ್ಥಾಪನೆಗೆ 18 ಕೋಟಿ, ರಾಯಚೂರಿನ ಟ್ರಾಮಾ ಕೇಂದ್ರಕ್ಕೆ 10 ಕೋಟಿ ರೂ., ರಾಯಚೂರಿನ ಇಎಸ್ಐ ಚಿಕಿತ್ಸಾಲಯ ಉನ್ನತೀಕರಿಸುವ ಬಗ್ಗೆ ಆಶ್ವಾಸನೆ ಕೊಟ್ಟಿದ್ದಾರೆ, ಹೊಸದಾಗಿ ಮೇಲ್ದರ್ಜೆಗೆ ಏರಿಸಲಾದ ಮಹಾನಗರ ಪಾಲಿಕೆಗೆ ಮಹಾತ್ಮ ಗಾಂಧಿ ನಗರ ವಿಕಾಸ್ ಯೋಜನೆ 2.0 ಅಡಿ 2026-27 ನೇ ಸಾಲಿನಲ್ಲಿ ಎರಡು ನೂರು ಕೋಟಿ ನೀಡುವುದಾಗಿ ಘೋಷಿಸಿದ್ದಾರೆ.

ರಾಯಚೂರಿನ ಐಐಐಟಿ ಯಲ್ಲಿ ಶ್ರೇಷ್ಠತಾ ಕೇಂದ್ರವನ್ನು ಐದು ಕೋಟಿ ವೆಚ್ಚದಲ್ಲಿ ಸ್ಥಾಪಿಸಲಾಗುವುದು ಎಂದಿದ್ದಾರೆ. ರಾಯಚೂರು ಜಿಲ್ಲಾ ಕೇಂದ್ರ ಕಾರ್ಯಗೃಹಗಳ ನಿರ್ಮಾಣ ಕಾರ್ಯವನ್ನು ಪ್ರಸಕ್ತ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗುವುದು ಎಂದಿದ್ದಾರೆ.

ಜಲಸಂಪನ್ಮೂಲ ಇಲಾಖೆಯಿಂದ ರಾಯಚೂರು ತಾಲೂಕಿನಲ್ಲಿ 18 ಕೆರೆ ತುಂಬಿಸುವ ಮತ್ತು ದೇವದುರ್ಗ ತಾಲೂಕಿನಲ್ಲಿ 14 ಕೆರೆ ತುಂಬಿಸುವುದು. ಮಸ್ಕಿ ತಾಲೂಕಿನ ಪಾಮನಕಲ್ಲೂರು ಮತ್ತು ಇತರೆ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕೊಡುವ ಯೋಜನೆ ಬಗ್ಗೆ ಪ್ರಸ್ತಾಪಿಸಿದ್ದಾರೆ. ಸಿಂಧನೂರು ತಾಲೂಕಿನ ಸಾಲಗುಂದ ಏತ ನೀರಾವರಿ ಯೋಜನೆಗೆ ಅನುದಾನ ನೀಡುವುದಾಗಿ ತಿಳಿಸಿದ್ದಾರೆ.

ಪ್ರಸಕ್ತ ಬಜೆಟ್‌ನಲ್ಲಿ ಜಿಲ್ಲೆಗೆ ಹೆಚ್ಚಿನ ಅನುದಾನ ತರುವಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲೆಯಲ್ಲಿನ ಹಲವು ನಿಗಮಮಂಡಳಿ ಅಧ್ಯಕ್ಷರು ಸೇರಿದಂತೆ ಯಾವ ಜನಪ್ರತಿನಿಧಿಗಳು ಯಶಸ್ವಿಯಾದಂತೆ ಕಂಡುಬಂದಿಲ್ಲ.



ಈ ಭಾರಿಯ ರಾಜ್ಯದಲ್ಲಿ ನಡೆದ 17ನೇ ಬಜೆಟ್ ಸಾಲವನ್ನು ಹೆಚ್ಚಿಸುವಂತ ಬಜೆಟ್ಟಾಗಿದೆ. ಸುಮಾರು 8 ಲಕ್ಷಕ್ಕಿಂತಲೂ ಅಧಿಕಾವಾದ ಸಾಲದೊಂದಿಗೆ ಬಜೆಟ್ ಆಗುತ್ತಿದೆ ಅದಕ್ಕೆ ಇದು ಕರ್ನಾಟಕದ ಅಭಿವೃದ್ಧಿ ಬಜೆಟ್ ಅಲ್ಲಾ ಸಾಲದ ಹೊರೆಹೊರುವ ಬಜೆಟ್ಟಾಗಿದೆ.

■ ಅರವಿಂದಗೌಡ ಪೊಲೀಸ್‌ಪಾಟೀಲ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ, ಕುಕನೂರ

ಪ್ರಸ್ತುತ ಬಜೆಟ್ ಹಿಂದೂಗಳಿಗೆ ಅನ್ಯಾಯ ಮಾಡಿದೆ. ಕೇವಲ ಅಲ್ಪಸಂಖ್ಯಾತರಿಗೆ



ಸಂಪೂರ್ಣ ಒತ್ತು ನೀಡಿ ಬಜೆಟ್ ನೀಡಿದ್ದಾರೆ. ಬಡ ಹಿಂದುಗಳಿಗೆ ಸಿದ್ದರಾಮಯ್ಯನವರ ಕೊಡುಗೆ ಈ ಬಿಜೆಟ್ನಿಂದಾ ಶೂನ್ಯವಾಗಿದೆ ಇದು ಬದಲಾಗಬೇಕು ಮತ್ತು ಬಡ ಹಿಂದೂಗಳ ಬಗ್ಗೆ ಕಾಳಜಿವಹಿಸಬೇಕು ಸಾಲವನ್ನು ಕಟ್ಟುವವರು ಬಡ ಹಿಂದುಗಳಾದರೆ ಅದರ ಲಾಭ ಪಡೆಯುವವರು ಅಲ್ಪಸಂಖ್ಯಾತರಾಗಿದ್ದಾರೆ ಬಜೆಟ್ ಮಂಡನೆ ಸಂಪೂರ್ಣ ವಿಫಲವಾಗಿದೆ.

■ ಬಸವಲಿಂಗಪ್ಪ ಭೂತೆ, ಬಿಜೆಪಿ ಹಿರಿಯ ಮುಖಂಡ

ರಾಜ್ಯದ ಬಜೆಟ್ ಜನ ಮೆಚ್ಚುಗೆಯ ಬಜೆಟ್ ಆಗಿದೆ ಅದರಲ್ಲಿ ಕುಕನೂರು ಮತ್ತು



ಯಲಬುರ್ಗಾ ತಾಲೂಕಿನ ಬನ್ನಿಕೊಪ್ಪ ಸೇರಿದಂತೆ 23 ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಲು ರೂ. 125 ಕೋಟಿ ವೆಚ್ಚದಲ್ಲಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಯಲಬುರ್ಗಾ ಮತ್ತು ಕುಕನೂರು ತಾಲೂಕುಗಳಲ್ಲಿ ಹಾಗೂ ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ಜಿಡಗಾ ಪ್ರದೇಶದಲ್ಲಿ ಕೆರೆಗಳ ಆಧುನೀಕರಣ, ಬ್ಯಾರೇಜ್ ನಿರ್ಮಾಣ, ಪಿಕ್-ಅಪ್ ವಿಯರ್ ಮತ್ತು ಚೆಕ್ ಡ್ಯಾಂಗಳ ನಿರ್ಮಾಣ ಸೇರಿದಂತೆ ವಿವಿಧ ಕಾಮಗಾರಿಗಳನ್ನು ರೂ.25 ಕೋಟಿ ವೆಚ್ಚದಲ್ಲಿ ಕೈಗೊಳ್ಳಲಾಗುತ್ತದೆ.

■ ರಾಘವೇಂದ್ರ ಕಾತರಕಿ, ಯುವ ಮುಖಂಡ



ರಾಜ್ಯ ಬಜೆಟ್‌ನಲ್ಲಿ ಯಾವುದೇ ಪೂರ್ಣವಾಗಿ ಯೋಜನೆಗಳ ಬಗ್ಗೆ ಅರ್ಥವಾಗುತ್ತಿಲ್ಲ, ಒಂದು ರೀತಿಯ ಅಪೂರ್ಣ ಮುಂಗಡ ಪತ್ರದಂತೆ ಗೋಚರವಾಗುತ್ತಿದೆ. ರೈತರ ಬಗ್ಗೆ ಅದರಲ್ಲೂ ವಿಶೇಷವಾಗಿ ಸಹಕಾರ ಕ್ಷೇತ್ರದ ಬಗ್ಗೆ ಕಡೆಗಣಿಸಲಾಗಿದೆ.

■ ಮಲ್ಲನಗೌಡ ಪಾಟೀಲ್ ಹತ್ತಿಕುಣಿ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ

ಒಳ ಮೀಸಲಾತಿ ಐಕ್ಯ ಹೋರಾಟ ಸಮಿತಿಯಿಂದ ಮನವಿ

ಮಾನ್ವಿ: ಪಟ್ಟಣದ ಬಸವ ವೃತ್ತದಲ್ಲಿ ಒಳ ಮೀಸಲಾತಿ ಐಕ್ಯ ಹೋರಾಟ ಸಮಿತಿ ಮಾನ್ವಿ ವತಿಯಿಂದ ಮುಖ್ಯಮಂತ್ರಿಗಳಿಗೆ ಗ್ರೇಡ್-2 ತಹಶೀಲ್ದಾರ್ ಅಬ್ದುಲ್ ವಾಹಿದ್ ರವರ ಮೂಲಕ ಮನವಿ ಸಲ್ಲಿಸಿ ಹಿರಿಯ ದಲಿತಪರ ಮುಖಂಡರಾದ ಎ.ಬಾಲಸ್ವಾಮಿ ಕೋಡ್ಲಿ ಮನವಿ ಸಲ್ಲಿಸಿದರು.

ಬಳಿಕ ಮಾತನಾಡಿ, ರಾಜ್ಯದಲ್ಲಿ ಶೇ18 ರಷ್ಟಿರುವ ದಲಿತರ ಹಕ್ಕುಗಳ ಸಂರಕ್ಷಣೆಗಾಗಿ ಸರ್ಕಾರವೇ ನೇಮಕಮಾಡಿರುವ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್ ರವರು ರಾಜ್ಯದಲ್ಲಿನ ಪರಿಶೀಷ್ಟ ಜಾತಿಗಳ ಮೀಸಲಾತಿಯನ್ನು ಶೇ17ಕ್ಕೆ ಹೆಚ್ಚಿಸಲು ಶೀಫಾರಸ್ಸು ಮಾಡಿರುತ್ತಾರೆ ರಾಜ್ಯ ಸರ್ಕಾರ ಮಂಡಿಸಿದ ಒಳಮಿಸಲಾತಿ ವಿದೇಯಕಕ್ಕೆ ರಾಜ್ಯಪಾಲರ ಸಹಿ ಪಡೆದು ಅನುಮೋದನೆ ಗೊಂಡಿದ್ದರು ಕೂಡ ರಾಜ್ಯ ಸರ್ಕಾರವು ಒಳಮೀಸಲಾತಿಯನ್ನು ಹೊರತು ಪಡಿಸಿ ರಾಜ್ಯದಲ್ಲಿ 56,432 ಹುದ್ದೆಗಳನ್ನು ಭರ್ತಿಮಾಡುವ ಕುರಿತು 16ನೇ ಸಚಿವ ಸಂಪುಟದಲ್ಲಿ ತಿರ್ಮಾನ ಮಾಡಿರುವುದರಿಂದ ಮಾದಿಗ ಸಮುದಾಯಕ್ಕೆ ತೀವ್ರವಾದ ಅನ್ಯಾಯವಾಗಲಿದೆ ಆದ್ದರಿಂದ ರಾಜ್ಯ .ಸರ್ಕಾರ ನೇಮಕಾತಿಗಾಗಿ ಹೋರಾಡಿಸಿರುವ ಆದೇಶವನ್ನು ಕೂಡಲೇ ಹಿಂಪಡೆಯಬೇಕು ಹಾಗೂ ನೇಮಕಾತಿಯಲ್ಲಿ ಒಳಮೀಸಲಾತಿಯನ್ನು ಕಡ್ಡಾಯಗೊಳಿಸಬೇಕು ಎಂದು ಒತ್ತಾಯಿಸಿದರು. ಶಿವರಾಜನಾಯಕ, ಪ್ರಭುರಾಜ್ ಕೋಡ್ಲಿ, ಹುಸೇನಪ್ಪ ಜಗ್ಲಿ, ಚಂದ್ರಶೇಖರ ಕುರ್ಡಿ, ಪಿ.ಜಯಪ್ರಕಾಶ, ಮೂಕಪ್ಪ ಕಟ್ಟಿಮನಿ, ಆಶೋಕ ತಡಕಲ್, ಅಬ್ರಾಹಂ ಹೊನ್ನಟಗಿ, ಮಲ್ಲೇಶ ಜಗ್ಲಿ, ಪಿ.ಆನಿಲ್ ಕುಮಾರ, ಸುಂದರ ಕಪಗಲ್, ಶಾಂತಪ್ಪ ಕಪಗಲ್, ಪಿ.ಪರಮೇಶ, ತಾಯಪ್ಪ ಬಿ.ಹೊಸೂರ್, ಜೆ.ಎಚ್.ದೇವರಾಜ್, ಯಲ್ಲಪ್ಪೊ ಹಿರೇಬಾದರದಿನ್ನಿ, ಬಸವರಾಜ ನಕ್ಕುಂದಿ, ಪಿ.ರವಿಕುಮಾರ, ರಮೇಶ, ಹನುಮಂತಕೋಟೆ, ನವೀನ್ ಕುರ್ಡಿ, ರವಿ ನೀರಮಾನ್ವಿ, ಪರಸೂರಾಮ ಬಾಗಲವಾಡ, ಶರಣು ಮುದ್ದಂಗುಡಿ, ಪ್ರಶಾಂತ ಜಾಗೀರಪನ್ನೂರು, ಸೇರಿದಂತೆ ತಾಲೂಕಿನ ಸುತ್ತಮುತ್ತಲಿನ ಗ್ರಾಮಗಳ ಸಾವಿರಾರು ಸಮುದಾಯದವರು ಭಾಗವಹಿಸಿದರು.



ವಿದ್ಯಾರ್ಥಿಗಳು ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಲಿ

ಯಲಬುರ್ಗಾ: ನೊಬೆಲ್ ಪ್ರಶಸ್ತಿ ವಿಜೇತ ವಿಜ್ಞಾನಿ ಸಿ.ವಿ.ರಾಮನ್ ಅವರ ಸಾಧನೆಯನ್ನು ಎಂದೂ ಮರೆಯಲೂ ಸಾಧ್ಯವಿಲ್ಲ ಪ್ರಸ್ತುತ ಜಗತ್ತಿಗೆ ವಿಜ್ಞಾನ ಎಷ್ಟು ಮುಖ್ಯ ಎಂಬುದರ ಮಹತ್ವದ ಕುರಿತು ಸಂಶೋಧನೆಗಳ ಮೂಲಕ ವಿದ್ಯಾರ್ಥಿಗಳು ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದು ಸ್ಥಳೀಯ ಸರ್ಕಾರಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ಎಫ್.ಎಂ.ಕಳ್ಳಿ ಹೇಳಿದರು.

ತಾಲೂಕಿನ ದಮ್ಮೂರು ಗ್ರಾಮದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಅಗಸ್ತ್ಯ ಫೌಂಡೇಶನ್ ಸಹಯೋಗದಲ್ಲಿ ಶುಕ್ರವಾರ ಆಯೋಜಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನ ಮತ್ತು ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ವಿಜ್ಞಾನ ಶಿಕ್ಷಕರು ಈ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸಿದ್ದು ವಿದ್ಯಾರ್ಥಿಗಳು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು ಮತ್ತು ವಿಜ್ಞಾನದ ಹೊಸ ವಿಚಾರಗಳನ್ನು ತಿಳಿದುಕೊಳ್ಳಬೇಕು ಎಂದರು.

ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಭೀಮಣ್ಣ ಕಮ್ಮಾರ್ ಸಭೆ ಅಧ್ಯಕ್ಷತೆ ವಹಿಸಿದ್ದರು,ಪ್ರಾಥಮಿಕ ಶಾಲೆಯ ಗುರುಗಳಾದ ಕನಕಪ್ಪ ಕಂಬಳಿ ಪ್ರಾಸ್ತಾವಿಕವಾಗಿ ಪ್ರತಿಯೊಬ್ಬ ವಿದ್ಯಾರ್ಥಿಗಳು ವಿಜ್ಞಾನದ ಬಗ್ಗೆ ಹೆಚ್ಚು ತಿಳಿದುಕೊಳ್ಳುವತ್ತ ಗಮನಹರಿಸಬೇಕು ಎಂದು ಹೇಳಿದರು.ಶಾಲೆಯ ಗಣಿತ ಶಿಕ್ಷಕರಾದ ಅಬ್ದುಲ್ ಮಾತನಾಡಿ ಮಕ್ಕಳು ಪ್ರಶ್ನಿಸುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು ಎಂದರು. ಅಗಸ್ತ್ಯ ಫೌಂಡೇಶನ್ ಮುಖ್ಯಸ್ಥ ಚಂದ್ರೇಗೌಡ ಮಾತನಾಡಿದರು. ಶಿಕ್ಷಕರಾದ ಪೆಡಪ್ಪ ಹಳ್ಳಿ, ಶಂಕ್ರಪ್ಪ ವನಹಳ್ಳಿ, ವಿರುಪಾಕ್ಷಪ್ಪ ಶಿವಾರಡ್ಡಿ, ಲಕ್ಷ್ಮಣ್ ಚಲವಾದಿ, ಹನುಮೇಶ, ರಮೇಶ್ ದೊಡ್ಮನಿ, ಅಬ್ದುಲ್ ಗಫರ್, ಮುತ್ತಣ್ಣ ಕಮ್ಮಾರ್, ಮಂಜುಳಾ ಪಾಟೀಲ್, ಮೈಲಾರಪ್ಪ, ಮಂಜುಳಾ, ನಬಿಸಾಬ್, ಗಣೇಶ್ ನಿಡಗುಂದಿ, ಹನಮಪ್ಪ ರಾವಣಕಿ,ಬುಡ್ನೇಸಾಬ ಕುಷ್ಟಗಿ, ಶರಣಪ್ಪ ಭಜಂತ್ರಿ ಹಾಗೂ ಎಸ್‌ಡಿಎಂಸಿ ಸರ್ವ ಸದಸ್ಯರು ಮತ್ತು ಗ್ರಾಮದ ಗುರು-ಹಿರಿಯರು ಮತ್ತಿತರರು ಇದ್ದರು.

ರಾಜ್ಯದಲ್ಲಿರುವ ರೈತರು, ಬಡವರು, ಕಾರ್ಮಿಕರು, ಸಾಮಾನ್ಯ ಜನತೆ ಸೇರಿದಂತೆ ಎಲ್ಲರ, ಎಲ್ಲಾ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿಗೆ ಆದ್ಯತೆ ನೀಡಿದ್ದಾರೆ. ಅದರಲ್ಲೂ ಕಲಬರಗಿ ಸೇರಿದಂತೆ ಕಲ್ಯಾಣ ನಾಡಿಗೆ ಬಜೆಟ್ ತುಂಬಾ ಕೊಡುಗೆ ನೀಡಿದೆ. ಹೀಗಾಗಿ ಈ ಬಜೆಟ್ ಐತಿಹಾಸಿಕವಾಗಿದೆ, ಜನಪರ, ಜೀವಪರ, ಬಡವಪರ ಬಜೆಟ್.

■ ಅಲ್ಲಂಪ್ರಭು ಪಾಟೀಲ್, ಕಲಬುರಗಿ ದಕ್ಷಿಣ ಶಾಸಕ

ಕಲಬುರಗಿಗೆ ಹಜ್ ಭವನದ ಅವಶ್ಯಕತೆಯಿರಲಿಲ್ಲ. ಸಿದ್ದರಾಮಯ್ಯನವರ ಈ ಬಜೆಟ್ ಅಲ್ಪಸಂಖ್ಯಾತ ಮುಸ್ಲಿಮ ಸಮುದಾಯಕ್ಕೆ ಬೆಣ್ಣೆಯಾಗಿದೆ. ರಾಜ್ಯದಲ್ಲಿ ಅನೇಕ ಕನ್ನಡ ಶಾಲೆಗಳು ಶಿಥಿಲಾವಸ್ಥೆಯಲ್ಲಿದ್ದು ಅವುಗಳ ಜೀರ್ಣೋದ್ಧಾರಕ್ಕೆ ಗಮನ ಹರಿಸದೆ ಉರ್ದು ಶಾಲೆಗಳಿಗೆ 400 ಕೋಟಿ ಅನುದಾನ ಹಾಗು ಮುಸ್ಲಿಂ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪಟಾಪ್ ಕೊಟ್ಟು ಹಿಂದು ವಿದ್ಯಾರ್ಥಿಗಳನ್ನ ನಿರ್ಲಕ್ಷಿಸಲಾಗಿದೆ.ಇದೊಂದು ಮುಸ್ಲಿಮ್ ತುಷ್ಟೀಕರಣ ಹಾಗೂ ರೈತ ವಿರೋಧಿ ಬಜೆಟ್

■ ಸಿದ್ದಲಿಂಗ ಸ್ವಾಮಿಜಿ, ಶಿವಸೇನಾ ರಾಜ್ಯಧ್ಯಕ್ಷ

ರಾಜ್ಯ ಸರ್ಕಾರ ಮಂಡಿಸಿದ 2026/27ರ ಬಜೆಟ್ ಯಾವುದೇ ದೂರ ದೃಷ್ಠಿ ಇಲ್ಲದ ಕಳಪೆ ಬಜೆಟ್ ಆಗಿದೆ ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕ ಸಚಿವಾಲಯ ನಿರೀಕ್ಷಿಸಲಾಗಿತ್ತು. ದಲಿತ, ಹಿಂದುಳಿದ ವರ್ಗಗಳಿಗೆ ಈ ಸರ್ಕಾರದಿಂದ ಅನ್ಯಾಯವಾಗಿದೆ. ಇದೊಂದು ಅತ್ಯಂತ ಕಳಪೆ ಬಜೆಟ್.

■ ಅಶೋಕ್ ಬಗಲಿ, ಜಿಲ್ಲಾಧ್ಯಕ್ಷ, ಬಿಜೆಪಿ

ರಾಜ್ಯ ಬಜೆಟ್ ದಿಕ್ಕು ದೆಸೆ ಇಲ್ಲದ ಪ್ರಗತಿ ಶೂನ್ಯ ಬಜೆಟ್ ಆಗಿದ್ದು ಸಾಲದ ಶೂಲಕ್ಕೆ ರಾಜ್ಯವನ್ನು ತೆಗೆದುಕೊಂಡು ಹೋಗುವ ಬಜೆಟ್ ಇದಾಗಿದೆ. ರಾಜ್ಯದ ಹಣಕಾಸಿನ ಮೇಲೆ ದೂರಗಾಮಿ ಬಹಳ ದೊಡ್ಡ ಪರಿಣಾಮ ಬೀರಲಿದೆ.ಅಭಿವೃದ್ಧಿ ಶೂನ್ಯ ಪ್ರಗತಿ ರಹಿತವಾದ ಅತಿ ಹೆಚ್ಚು ಸಾಲ ಮಾಡಿರುವ ಬಜೆಟ್.

■ ಬಾಲರಾಜ್ ಗುತ್ತೇದಾರ್, ಜೆಡಿಎಸ್ ಜಿಲ್ಲಾಧ್ಯಕ್ಷ

ರಾಜ್ಯದ ಸಿಎಂ ಸಿದ್ದರಾಮಯ್ಯನವರು ತಮ್ಮ 17ನೇ ರಾಜ್ಯದ ಬಹುದೊಡ್ಡ



ಬಜೆಟ್‌ನಲ್ಲಿ ರಾಜ್ಯದ ಎಲ್ಲ ವರ್ಗದ ಜನರ ಹಸಿವು, ಬಡತನ, ಉದ್ಯೋಗ ಸೇರಿದಂತೆ ಎಲ್ಲವನ್ನು ಸರಿದೂಗಿಸುವ ಅತ್ಯಂತ ಸಮೃದ್ಧ ಮಹತ್ವಾಂಕ್ಷಿ ಬಜೆಟ್ ಇದಾಗಿದೆ. ತಾಲೂಕಿನ ಬನ್ನಿಕೊಪ್ಪ ಸೇರಿದಂತೆ 23 ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಲು ರೂ.125 ಕೋಟಿ ವೆಚ್ಚದಲ್ಲಿ ಯೋಜನೆಯನ್ನು ಕೈತ್ತಿಕೊಳ್ಳಲಾಗಿದೆ. ಯಲಬುರ್ಗಾ ಮತ್ತು ಕುಕನೂರು ತಾಲೂಕುಗಳಲ್ಲಿ ಹಾಗೂ ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ಜಿಡಗಾ ಪ್ರದೇಶದಲ್ಲಿ ಕೆರೆಗಳ ಆಧುನೀಕರಣ, ಬ್ಯಾರೇಜ್ ನಿರ್ಮಾಣ, ಪಿಕ್-ಅಪ್ ವಿಯರ್ ಮತ್ತು ಚೆಕ್ ಡ್ಯಾಂಗಳ ನಿರ್ಮಾಣ ಸೇರಿದಂತೆ ವಿವಿಧ ಕಾಮಗಾರಿಗಳನ್ನು ರೂ. 25 ಕೋಟಿ ವೆಚ್ಚದಲ್ಲಿ ಕೈಗೊಳ್ಳಲಾಗುವುದು.

■ ಬಸವರಾಜ ರಾಯರಡ್ಡಿ, ಸಿಎಂ ಆರ್ಥಿಕ ಸಲಹೆಗಾರ, ಶಾಸಕ

ಸಮಾಧಾನಕರ ಬಜೆಟ್ ಇದಾಗಿದೆ. ಬಡವರ,



ಮಧ್ಯಮ ವರ್ಗದವರ ಬಜೆಟ್ ಆಗಿದೆ. 56 ಸಾವಿರ ಹುದ್ದೆ ಭರ್ತಿಗೆ ಅನುಮೋದನೆ ನೀಡಿರುವುದು ಯುವಕರ ಹುದ್ದೆಗೆ ದೊರಕುತ್ತದೆ. ಜಿಲ್ಲೆಗೆ ಒಂದು ಕ್ಯಾನ್ಸರ್ ಆಸ್ಪತ್ರೆ ಹಾಗೂ ಪದವಿ ವಸತಿ ಕಾಲೇಜು ಮತ್ತು ರಾಜ್ಯದಲ್ಲಿ 50 ಬಿಸಿಎಂ ವಸತಿ ನಿಲಯ 25 ಎಸ್ಸಿ ಮತ್ತು ಎಎಸ್ಟಿ ವಸತಿ ನಿಲಯಗಳನ್ನು ನೀಡಿರುವುದು ಶೈಕ್ಷಣಿಕ ಬೆಳವಣಿಗೆಗೆ ಪೂರಕವಾಗಿದೆ.

■ ಅಮರೇಗೌಡ ಪಾಟೀಲ, ಬಯ್ಯಾಪುರು ಮಾಜಿ ಸಚಿವ ಕುಷ್ಟಗಿ

ಈ ಬಜೆಟ್ ಕೇವಲ ಅಧಿಕಾರ ಉಳಿಸಿಕೊಳ್ಳಲು



ಮಂಡಿಸಿದ ಬಜೆಟ್ ಆಗಿದ್ದು ಯಾವ ಹೊಸ. ಯೋಜನೆ ಪ್ರಸ್ತಾಪ ಇಲ್ಲ ಉತ್ತರ ಕರ್ನಾಟಕ ಸಂಪೂರ್ಣ ನಿರ್ಲಕ್ಷ್ಯ ಮಾಡಿ ಪ್ರತ್ಯೇಕ ಉತ್ತರ ಕರ್ನಾಟಕ ರಾಜ್ಯದ ಕೂಗು ಜೋರು ಆಗಿ ಕೇಳುವಂತೆ ಮಾಡಿ ಮಂಡಿಸಿದ ಆಯವ್ಯಯ ಇದು ಆಗಿದೆ.

■ ಮಹಾಂತೇಶ ಬಾದಾಮಿ, ಬಿಜೆಪಿ ತಾಲೂಕು ಅಧ್ಯಕ್ಷರು ಕುಷ್ಟಗಿ

ರಾಜ್ಯ ಬಜೆಟ್‌ನಲ್ಲಿ ಉತ್ತರ ಕರ್ನಾಟಕಕ್ಕೆ ಯಾವ ಹೊಸ



ಯೋಜನೆಗಳಿಲ್ಲದೆ ಉಪ್ಪು, ಕಾರ, ಹುಳಿಯಿಲ್ಲದ ಸಾಲದ ಬಜೆಟ್ ಆಗಿದೆ. ಕೃಷ್ಣ ಬಿ ಸ್ಕೀಮ್ ಕೊಪ್ಪಳ ಏತ ನೀರಾವರಿ ಯೋಜನೆ ಕೇವಲ ಘೋಷಣೆಗಳಾಗಿ ಉಳಿದಿವೆ ವಿನಃ ನೀರಾವರಿ ಯೋಜನೆಗೆ ನೈಯಾ ಪೈಸಾ ಅನುದಾನ ನೀಡಿಲ್ಲ. ಇದು ಕಾಂಗ್ರೆಸ್ ಪಕ್ಷದ ಕೊನೆಯ ಮುಳುಗಿ ಹೋಗುವ ಬಜೆಟ್ ಎಂದೆ ಹೇಳಬಹುದು

■ ಹಾಲಪ್ಪ ಆಚಾರ್, ಮಾಜಿ ಸಚಿವ, ಯಲಬುರ್ಗಾ

ಕ್ಷೇತ್ರದ ರೈತರಿಗೆ ನೀರಾವರಿಯ ಕನಸು ನುಚ್ಚುನೂರು



ಮಾಡಿದ ಬಜೆಟ್. ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಯರೇಭಾಗದ ರೈತರಿಗೆ ಜಿಂಕೆ ಹಾವಳಿಯಿಂದ ಮುಕ್ತಿ ನೀಡಲು ಜಿಂಕೆವನ ಸ್ಥಾಪನೆ ಹಾಗೂ ಜಿಂಕೆ ಹಾವಳಿಯಿಂದ ಬಾದಿತ ಪ್ರದೇಶದ ರೈತರಿಗೆ ಸೂಕ್ತ ಪರಿಹಾರ ನೀಡುವಲ್ಲಿ ಸಂಪೂರ್ಣ ವಿಫಲದ ಬಜೆಟ್ ಇದಾಗಿದ್ದು, ಯುವಕರಿಗೆ ಉದ್ಯೋಗ ನೀಡುವ ಯೋಜನೆಗಳನ್ನು ತರುವ ಮನಸ್ಸು ಕ್ಷೇತ್ರದ ಶಾಸಕರಿಗಿಲ್ಲ.

■ ಮಲ್ಲನಗೌಡ ಕೋನನಗೌಡ್ರ, ಜಿಲ್ಲಾ ಜೆಡಿಎಸ್ ವಕ್ತಾರ

2026-2027 ರಾಜ್ಯ ಬಜೆಟ್ ನಾವು ಕಂಡಂತೆ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಜೆಟ್‌ನಲ್ಲಿ ಮಂತ್ರಕ್ಕಿಂತ ಉಗಳು ಜಾಸ್ತಿಯಾಗಿದೆ. ಜಾತಿಗಳ ಒಲೈಕೆ ಮಾಡುವ ಬಜೆಟ್‌ನಂತೆ ಕಾಣುತ್ತೆ. ರಾಜ್ಯವನ್ನು ಸಂಪೂರ್ಣ ಸಾಲಮಯವನ್ನಾಗಿ ಮಾಡಿದ್ದು ಕರ್ನಾಟಕ ಸಾಲದಲ್ಲಿ 1.32 ಲಕ್ಷ ದಾಟಿದ್ದು, ಮದ್ಯಪಾನ ಪ್ರಿಯರಿಗೆ ಶಾಕ್ ನೀಡಿದೆ. ರೈತರನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದ್ದು, ದುಡಿಯುವ ಕೈಗಳಿಗೆ ಕೆಲಸವಿಲ್ಲ,ಯುವ ಪೀಳಿಗೆಗೆ, ಜನಪರ ಯೋಜನೆಗಳು ಇಲ್ಲದ ರಾಜ್ಯ ಸರ್ಕಾರದ ಮಾರಕ ಬಜೆಟ್ ಆಗಿದೆ.

■ ಮಂಜುನಾಥ ಹಿರೇಮಠ, ಬಿಜೆಪಿ ನಗರ-ಘಟಕ ಅಧ್ಯಕ್ಷ, ಹಗರಿಬೊಮ್ಮನಹಳ್ಳಿ



ಬಜೆಟ್‌ನಲ್ಲಿ ಎಲ್ಲಾ ವರ್ಗದ ಜನರಿಗೆ ಸಾಮಾಜಿಕ ನ್ಯಾಯ ಒದಗಿಸಲಾಗಿದೆ. ಶಿಕ್ಷಣಕ್ಕೆ ಮತ್ತು ಎಐ ತಂತ್ರಜ್ಞಾನಕ್ಕೆ ಒತ್ತು ನೀಡಲಾಗಿದ್ದು, ರೈತರಿಗೂ ಉಪಯುಕ್ತವಾಗುವ ನಿಟ್ಟಿನಲ್ಲಿ ಎಐ ತಂತ್ರಜ್ಞಾನ ವಿಸ್ತರಿಸಿದ್ದಾರೆ. ಕೃಷಿ ಹೊಂಡ ನಿರ್ಮಾಣಕ್ಕೆ ಮಾರುಕಟ್ಟೆ ನವೀಕರಣ ಅನುದಾನ ಒದಗಿಸಿದ್ದಾರೆ. 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ಬಳಕೆ ನಿಷೇಧಿಸಿದ್ದಾರೆ. ಮಹಿಳೆಯರಿಗೆ ಗ್ಯಾರಂಟಿ ಜೊತೆಗೆ ವರ್ಷಕ್ಕೆ ಎರಡು ಸೀರೆ ನೀಡುವ ಜನ ಸಾಮಾನ್ಯರಿಗೆ ಹೊರೆ ಆಗದ ಅಭಿವೃದ್ಧಿಗೆ ಪೂರಕವಾದ ಬಜೆಟ್ ಇದಾಗಿದೆ.

■ ಎಂ. ಮರಿರಾಮಣ್ಣ, ಪುರಸಭೆ ಅಧ್ಯಕ್ಷ, ಹಗರಿಬೊಮ್ಮನಹಳ್ಳಿ



ಕರ್ನಾಟಕ ರಾಜ್ಯ ಬಜೆಟ್‌ನಲ್ಲಿ ವಿದ್ಯಾರ್ಥಿ ಸಂಘಟನೆಗಳ ಚುನಾವಣೆ, ರೋಹಿತ್ ವೇಮೂಲಾ ಅವರ ಕಾಯ್ದೆ ಜಾರಿ ಮಾಡಿರುವುದು ಎಸ್ ಎಫ್‌ಐ ವಿಜಯನಗರ ಜಿಲ್ಲಾ ಸಮಿತಿ ಸ್ವಾಗತಿಸುತ್ತದೆ. 800 ಕೆಪಿಎಸ್ ಶಾಲೆಗಳನ್ನು ಉನ್ನತಿಕರಿಸುವ ಹೆಸರಿನಲ್ಲಿ ಮ್ಯಾಗ್ನೆಟ್ ಶಾಲೆಗಳನ್ನಾಗಿ ಪರಿವರ್ತಿಸುವುದನ್ನು ಖಂಡಿಸುತ್ತದೆ. 16 ವರ್ಷದ ಕೆಳಗಿನ ವಿದ್ಯಾರ್ಥಿಗಳಿಗೆ ಸಾಮಾಜಿಕ ಜಾಲತಾಣದ ನಿರ್ಬಂಧ ಏರಿರುವುದು ಸರ್ಕಾರ ದ್ವಂದ್ವ ನೀತಿಯನ್ನು ಅನುಸರಿಸುತ್ತಿರುವುದನ್ನು ಎಸ್ ಎಫ್‌ಐ ಜಿಲ್ಲಾ ಸಮಿತಿ ಪ್ರಶ್ನಿಸುತ್ತದೆ. ಹಾಗೂ ಸರ್ಕಾರವೇ ಸಮಾಜಕ್ಕೆ ಮಾರಕವಾಗ ಅಪ್ಲಿಕೇಶನ್‌ಗಳನ್ನು ನಿರ್ಬಂಧಿಸಬೇಕು.

■ ಜಯಸೂರ್ಯ ಹಗರಿಬೊಮ್ಮನಹಳ್ಳಿ, ಜಿಲ್ಲಾ ಅಧ್ಯಕ್ಷ, ಎಸ್‌ಎಫ್‌ಐ ವಿಜಯನಗರ ಜಿಲ್ಲೆ



ಗ್ಯಾರಂಟಿಗಳ ಯೋಜನೆಗಳನ್ನುಅನುಷ್ಠಾನಗೊಳಿಸುವ ಹೊಣೆಯಿಂದಾಗಿ ರಾಜ್ಯ ಸರ್ಕಾರ ತನ್ನ ಇತಿಮಿತಿಯಲ್ಲಿಯೇ ಬಜೆಟ್ ಮಂಡಿಸಿದೆ. ಚುನಾವಣೆಗೂ ನೀಡಿದ ಭರವಸೆಗಳಲ್ಲಿ ಯಾವುದನ್ನೂ ಕಡಿಮೆ ಮಾಡಿಲ್ಲ. ಜಿಲ್ಲೆಯೆ ಪ್ರತ್ಯೇಕ ಯೋಜನೆಗಳಿಲ್ಲ ಎಂಬುದನ್ನು ಹೊರತು ಪಡಿಸಿದರೆ, ರಾಜ್ಯ ವಲಯಕ್ಕೆ ಅನ್ವಯಿಸುವ ಎಲ್ಲ ಯೋಜನೆಗಳಲ್ಲಿ ನಮಗೂ ಲಾಭವಾಗುತ್ತದೆ. ಜೊತೆಗೆ ಎಲ್ಲ ವರ್ಗದ ಜನರ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ಬಜೆಟ್ ಇದಾಗಿದೆ.

■ ಎಚ್.ಆರ್.ಗವಿಯಪ್ಪ, ಶಾಸಕ, ವಿಜಯನಗರ ಕ್ಷೇತ್ರ



ಶಿಕ್ಷಣ, ಆರೋಗ್ಯ ಇಲಾಖೆ, ಪೊಲೀಸ್ ಇಲಾಖೆ ಖಾಲಿ ಹುದ್ದೆಗಳ ಭರ್ತಿ ಮಾಡುವುದಾಗಿ ಘೋಷಣೆ ಮಾಡಿ ಸರ್ಕಾರಿ ನೌಕರಿಯ ನಿರೀಕ್ಷೆಯಲ್ಲಿದ್ದವರಿಗೆ ಹೊಸ ಭರವಸೆ ಮೂಡಿಸಿದ್ದಾರೆ. ಅಲ್ಪಸಂಖ್ಯಾತರ ಮಕ್ಕಳಿಗೆಗಾಗಿ ಸಂತ ಶಿಶುನಾಳ ಶರೀಫ್ ವಸತಿ ಶಾಲೆಗಳನ್ನು ಆರಂಭಿಸುವುದು, ಸರ್ಕಾರಿ ಶಾಲೆ, ಸರ್ಕಾರಿ ಕಾಲೇಜಿನಲ್ಲಿ 12 ನೇ ತರಗತಿ ಪೂರ್ಣಗೊಳಿಸಿ ಉನ್ನತ ವ್ಯಾಸಾಂಗ ಮಾಡುತ್ತಿರುವವರಿಗೆ 30 ಸಾವಿರ ರೂ. ಶಿಷ್ಯ ವೇತನ ನೀಡುವುದು, 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ಬಳಕೆಗೆ ಕಡಿವಾಣ ಹಾಕಿರುವುದು ಅಭಿನಂದನೀಯ.

■ ಎಚ್.ಎನ್.ಎಫ್.ಇಮಾಮ್ ನಿಯಾಜಿ, ಹುಡಾ ಅಧ್ಯಕ್ಷ



ಗಾದಿಗನೂರು: 2026-27ನೇ ಸಾಲಿನ ಅಂಗನವಾಡಿ ಕೇಂದ್ರಕ್ಕೆ ಸಂಬಂಧಿಸಿದ ಮನೆಗಳ ಸಮೀಕ್ಷೆಯನ್ನು ಗಾದಿಗನೂರು ವಲಯ ಅಂಗನವಾಡಿ ಕಾರ್ಯಕರ್ತೆಯರು ಮನೆ ಮನೆಗೆ ಭೇಟಿ ನೀಡಿ ಸಮೀಕ್ಷೆಯನ್ನು ಸಂಗ್ರಹಿಸಿದರು.

ಪುನೀತ್ ಪುತ್ಥಳಿ ನಿರ್ಮಾಣಕ್ಕೆ ಮನವಿ

• **ಕುರುಗೋಡು:** ಸಮೀಪದ ಎಮ್ಮಿಗನೂರು ಗ್ರಾಮದ ವಿವಿಧ ಸಂಘಟನೆಗಳು ಅಧ್ಯಕ್ಷರು ಹಾಗೂ ವಿವಿಧ ಸಂಘಟನೆಯ ನೇತೃತ್ವದ ವತಿಯಿಂದ ಕರ್ನಾಟಕ ರತ್ನ ಪುನೀತ್ ರಾಜಕುಮಾರ್ ಅವರ ಪುತ್ತಳಿ ನಿರ್ಮಾಣಕ್ಕೆ ಸ್ಥಳಾವಕಾಶ ಮಾಡಿಕೊಡುವಂತೆ ಗ್ರಾಮ ಪಂಚಾಯತಿ ಹಿರಿಕರ ವಸೂಲಿಗಾರ ಸಾಯಿಬಣ್ಣ ಮತ್ತು ಗಾಲಿಂಗಪ್ಪ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಯುವ ಮುಖಂಡ ಪರುಶುರಾಂ ಮಾತನಾಡಿ, 132 ರಾಜ್ಯ ರಸ್ತೆಯ ಪ್ರಸ್ತುತ ರಸ್ತೆ ಅಗಲೀಕರಣ ನಡೆಯುತ್ತಿದ್ದು ಕಾರ್ಯ ಮುಗಿದ ನಂತರ ದೊಡ್ಡ ಮಸೀದಿಯಿಂದ ಹಳೇ ಬಸ್ ನಿಲ್ದಾಣದವರೆಗೆ ಇರುವ 100 ಮೀಟರ್ ಅಂತರದಲ್ಲಿ ಪುನೀತ್ ರಾಜಕುಮಾರ್‌ರವರ ಪುತಳಿ ನಿರ್ಮಾಣಕ್ಕೆ ಸ್ಥಳಾವಕಾಶ ಮಾಡಿಕೊಡುವ ಮೂಲಕ ಬಹಳ ದಿನಗಳ ಅಭಿಮಾನಿಗಳ ಬೇಡಿಕೆಯನ್ನು ಈಡೇರಿಸಬೇಕೆಂದು ಮನವಿ ಮಾಡಿದರು.

ಕೆ.ತಿಪ್ಪಯ್ಯ ರಾಜಣ್ಣ, ಪಂಪಾಪತಿ, ವೆಂಕಟೇಶ್ ಎಚ್. ರಮೇಶ್ ಮೆಕ್ಯಾನಿಕ್, ಪರಶುರಾಮ್, ಗಾದಿ ಅಪ್ಪುಹನುಮೇಶ್, ರಾಘು ಮೌಲ, ರಾಜ, ನಾರಾಯಣ, ಗಾದಿದೆಪ್ಪ, ಜಡೇಪ್ಪ, ಎಚ್ ರಾಮಾಂಜನಿ, ಜಡೇಶ್, ನಾಗರಾಜ್ ವರುಣ ರಮೇಶ ಮೌಲಸಾಬ್ ಸೇರಿದಂತೆ ವಿವಿಧ ಸಂಘಟನೆಯ ಪದಾಧಿಕಾರಿಗಳು ಇದ್ದರು.



ಕುರುಗೋಡು: ಸಮೀಪದ ಎಮ್ಮಿಗನೂರು ಗ್ರಾಮದ ವಿವಿಧ ಸಂಘಟನೆಗಳು ಅಧ್ಯಕ್ಷರು ಹಾಗೂ ವಿವಿಧ ಸಂಘಟನೆಯ ನೇತೃತ್ವದಲ್ಲಿ ಪುನೀತ್ ರಾಜಕುಮಾರ್ ಪುತ್ತಳಿ ನಿರ್ಮಾಣಕ್ಕೆ ಸ್ಥಳಾವಕಾಶ ಮಾಡಿಕೊಡುವಂತೆ ಗ್ರಾಪಂ ಹಿರಿಕರ ವಸೂಲಿಗಾರ ಸಾಯಿಬಣ್ಣ, ಗಾಲಿಂಗಪ್ಪ ಅವರಿಗೆ ಮನವಿ ಸಲ್ಲಿಸಲಾಯಿತು.

ಬಜೆಟ್‌ನಲ್ಲಿ ಗಿರಿಜಿಲ್ಲೆಯ ಜನತೆಗೆ ನಿರಾಸೆ

▸ ಲಕ್ಷ್ಮೀಕಾಂತ್ ಕುಲಕರ್ಣಿ

• **ಯಾದಗಿರಿ:** ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಮಂಡಿಸಿದ ತಮ್ಮ ಐತಿಹಾಸಿಕ 17ನೇ ಬಜೆಟ್‌ನಲ್ಲಿ ಗಿರಿಜಿಲ್ಲೆ ಜನತೆ ನಿರೀಕ್ಷೆಗೆ ತಕ್ಕಂತೆ ಕೊಡುಗೆ ನೀಡಿಲ್ಲವಾದರೂ ತೀವ್ರ ನಿರಾಸೆಯಾಗದಂತೆ ಕೆಲ ಮಹತ್ವದ ಯೋಜನೆ ಘೋಷಣೆ ಮಾಡಿದ್ದು, ಕೊಂಚ ಸಮಾಧಾನ ಪಡುವಂತಾಗಿದೆ.

ಯಾದಗಿರಿ ಜಿಲ್ಲೆಯಾಗಿ 17 ವರ್ಷ ಕಳೆದರೂ ಜಿಲ್ಲೆಯನ್ನು ಅಭಿವೃದ್ಧಿಯ ಪಥದಲ್ಲಿ ಮುನ್ನಡೆಸಲು ಬೇಕಾದ ಜಿಲ್ಲಾ ಮಟ್ಟದ ಹಲವು ಇಲಾಖೆಗಳಲ್ಲಿ ಅಧಿಕಾರಿಗಳ ಹುದ್ದೆಗಳು ಖಾಲಿ ಇದ್ದು, ಈ ಬಗ್ಗೆ ಬಜೆಟ್‌ನಲ್ಲಿ ಯಾವುದೇ ಪ್ರಸ್ತಾಪವಾಗಿಲ್ಲ. ಜಿಲ್ಲೆಯ ಕಡೇಚೂರು, ಬಾಡಿಯಾಳ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಸರ್ಕಾರ ಚಕಾರವೆತ್ತಿಲ್ಲ.

ಇನ್ನೂ ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆ ಎಂದು ಹಣೆಪಟ್ಟಿ ಕಟ್ಟಿಕೊಂಡ ಗಿರಿಜಿಲ್ಲೆಯ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಶೇ.68 ರಷ್ಟು ಶಿಕ್ಷಕರ ಹುದ್ದೆಗಳು ಖಾಲಿ ಉಳಿದು ದಶಕಗಳೇ ಕಳೆದರೂ ಸರ್ಕಾರ ಭರ್ತಿ ಮಾಡಲು ಮುಂದಾಗುತ್ತಿಲ್ಲ. ಈ ಬಜೆಟ್‌ನಲ್ಲಿ ಮುಖ್ಯಮಂತ್ರಿಗಳು ಪ್ರಸ್ತಾಪಿಸದೆ ಇರುವುದು ಜನರಲ್ಲಿ ನಿರಾಸೆ ಮೂಡಿಸಿದೆ.

ಬಜೆಟ್‌ನಲ್ಲಿ ಗಿರಿಜಿಲ್ಲೆಗೆ ಸಿಕ್ಕ ಗಿಫ್ಟ್

- 100 ಕೋಟಿ ರೂ.ವೆಚ್ಚದಲ್ಲಿ ಯಾದಗಿರಿಯಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ
- ಕಕ್ಕೇರಾದಲ್ಲಿ ಪ್ರಥಮ ದರ್ಜೆ ಕಾಲೇಜು ಸ್ಥಾಪನೆಗೆ ಅಸ್ತು.
- ಹತ್ತಿಕುಣಿ ಜಲಾಶಯ ಕಾಲುವೆ ದುರಸ್ತಿ ಹಾಗೂ ನವೀಕರಣಕ್ಕೆ ಕೇಂದ್ರ ಸರ್ಕಾರ 68 ಕೋಟಿ ರೂ.ಅನುದಾನ ಬಿಡುಗಡೆಗೊಳಿಸಿದ್ದು, ಪ್ರಸಕ್ತ ಆಯವ್ಯಯದಲ್ಲಿ ಅನುಮೋದನೆ ನೀಡಿರುವುದು.

ಇದೊಂದು ಸಪ್ಪೆ ಬಜೆಟ್ ಆಗಿದೆ. ಮುಂದಿನ ತಾಪಂ, ಜಿಪಂ ಚುನಾವಣೆ ಗಮನದಲ್ಲಿರಿಸಿಕೊಂಡು ಸಿದ್ಧತೆ ಮಾಡಿದ ಮುಂಗಡ ಪತ್ರವಾಗಿದೆ. ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸುವಲ್ಲಿ ಸರ್ಕಾರ ಹೈರಾಣಾಗುತ್ತಿದೆ.

■ ಮಹೇಶರಡ್ಡಿ ಮುದ್ನಾಳ್, ರಾಜ್ಯ ಬಿಜೆಪಿ ಕಾರ್ಯಕಾರಿ ಸದಸ್ಯ

ಇದು ಅಭಿವೃದ್ಧಿ ಪರ ಬಜೆಟ್ ಆಗಿದೆ. ಯಾದಗಿರಿಗೆ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಘೋಷಣೆಯಾಗಿದ್ದು, ಮುಂದಿನ ದಿನಗಳಲ್ಲಿ ಗಿರಿ ಜಿಲ್ಲೆ ಅಭಿವೃದ್ಧಿಗೆ ಪೂರಕವಾಗಲಿದೆ.

■ ಚನ್ನಾರಡ್ಡಿ ಪಾಟೀಲ್ ತುನ್ನೂರ, ಯಾದಗಿರಿ ಶಾಸಕ

ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ ಅವರೇ ಸಣ್ಣ ಕೈಗಾರಿಕೆ ಇಲಾಖೆ ಸಚಿವರಿದ್ದು, ಜಿಲ್ಲೆಯಲ್ಲಿ ಸಣ್ಣ ಮತ್ತು ಗುಡಿ ಕೈಗಾರಿಕೆಗಳ ಸ್ಥಾಪನೆಗೆ ಮುತುವರ್ಜಿ ವಹಿಸಬೇಕಿತ್ತು. ಉಳಿದಂತೆ ಪ್ರವಾಸೋದ್ಯಮ ಹಾಗೂ ಕೃಷ್ಣ ಎಡದಂಡೆ ಕಾಲುವೆ ದುರಸ್ಥಿ ಸೇರಿದಂತೆ ಮಹತ್ವದ ಯೋಜನೆಗಳ ಬಗ್ಗೆ ಮುಂಗಡ ಪತ್ರದಲ್ಲಿ ಘೋಷಣೆ ಮಾಡದಿರುವುದು ವರ್ತಮಾನದ ದುರಂತ.



ಸಿದ್ದರಾಮಯ್ಯನವರು ಮಂಡಿಸಿರುವ ಬಜೆಟ್ ಕೇವಲ ಅಂಕಿಅಂಶಗಳ ಬಣ್ಣದ ಲೋಕವಾಗಿದೆಯೇ ಹೊರತು, ಯಾದಗಿರಿ ಜಿಲ್ಲೆಯ ಪಾಲಿಗೆ ಇದೊಂದು ಕರಾಳ ಬಜೆಟ್. ಗ್ಯಾರಂಟಿ ಯೋಜನೆಗಳಿಗಾಗಿ ಅಭಿವೃದ್ಧಿ ವೆಚ್ಚದಲ್ಲಿ ಶೇ.20ಕ್ಕೂ ಹೆಚ್ಚು ಕಡಿತ ಮಾಡಿರುವುದು ಆಘಾತಕಾರಿಯಾಗಿದ್ದು, ರಾಜ್ಯದ ಒಟ್ಟು ಸಾಲದ ಮೊತ್ತ 7 ಲಕ್ಷ ಕೋಟಿ ದಾಟುತ್ತಿದ್ದರೂ ಸರ್ಕಾರ ಸಾಲ ಮಾಡಿಯೇ ಆಡಳಿತ ನಡೆಸಲು ಮುಂದಾಗಿರುವುದು ಆರ್ಥಿಕ ಶಿಸ್ತಿನ ಕೊರತೆಯನ್ನು ತೋರಿಸುತ್ತದೆ. ಒಟ್ಟಾರೆಯಾಗಿ ಇದು ಅಭಿವೃದ್ಧಿ ಶೂನ್ಯ ಮತ್ತು ಕಲ್ಯಾಣ ಕರ್ನಾಟಕದ ಜನರಿಗೆ 'ಖಾಲಿ ಚಂಬು' ನೀಡಿದ ಸರ್ಕಾರ.

■ ರಾಚನಗೌಡ ಮುದ್ನಾಳ, ಬಿಜೆಪಿಯ ಹಿರಿಯ ಮುಖಂಡ , ಯಾದಗಿರಿ

ಸಿಎಂ ಸಿದ್ದರಾಮಯ್ಯ ಅವರು 17ನೇ ಬಾರಿ ದಾಖಲೆ ಬಜೆಟ್ ಮಂಡಿಸಿದ್ದು, ಕೃಷಿ, ಆರೋಗ್ಯ, ಶಿಕ್ಷಣ, ತೋಟಗಾರಿಕೆ, ಮೀನುಗಾರಿಕೆ, ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಿ ಇತಿಹಾಸದ ಬಜೆಟ್ ಮಂಡಿಸಿದ್ದಾರೆ.

■ ಬಿ.ನಾಗೇಂದ್ರ, ಗ್ರಾಮೀಣ ಶಾಸಕ ಬಳ್ಳಾರಿ.

ಬಜೆಟ್‌ನಲ್ಲಿ ವಿಜಯನಗರ ಕಡೆಗಣನೆ

▸ ವೀರೇಂದ್ರ, ನಾಗಲದಿನ್ನಿ

• **ವಿಜಯನಗರ:** 2026-27ನೇ ಸಾಲಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿರುವ ಮುಂಗಡ ಪತ್ರ ನೂತನ ವಿಜಯನಗರ ಜಿಲ್ಲೆಯ ನಿರಾಶಾದಾಯಕವಾಗಿದೆ. ಜಿಲ್ಲೆಗೆ ಮಹತ್ವಾಕಾಂಕ್ಷಿ ಯೋಜನೆಗಳನ್ನು ಘೋಷಿಸದ ಸರ್ಕಾರದ ವಿರುದ್ಧ ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾಗುತ್ತಿದೆ.



ನೂತನ ಜಿಲ್ಲೆಯಾಗಿ ಉದಯಿಸಿ ನಾಲ್ಕು ವರ್ಷಗಳು ಕಳೆಯುತ್ತಿದೆ. ಜಿಲ್ಲಾಡಳಿತ ಭವನ, ಮೂಲ ಸೌಕರ್ಯಗಳ ಅಭಿವೃದ್ಧಿ, ವೈದ್ಯಕೀಯ ಸೌಲಭ್ಯದಲ್ಲಿ ಗುಣಾತ್ಮಕ ಬದಲಾವಣೆಗೆ ಅಗತ್ಯವಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಸರ್ಕಾರಿ ವೈದ್ಯಕೀಯ ಕಾಲೇಜು, ಸಕ್ಕರೆ ಕಾರ್ಖಾನೆ ಘೋಷಣೆಗಳು ಈ ಬಾರಿಯ ಬಜೆಟ್‌ನಲ್ಲಿ ಸಿಎಂ ಸಿದ್ದರಾಮಯ್ಯ ಪ್ರಸ್ತಾಪಿಸುವ ಮೂಲಕ ಜಿಲ್ಲೆಯ ಜನರ ಮಹಾತ್ವಾಕಾಂಕ್ಷೆಗಳನ್ನು ಈಡೇರಿಸುವ ಬಗ್ಗೆ ಸಾಕಷ್ಟು ನಿರೀಕ್ಷೆ ಹೊಂದಿದ್ದರು. ಆದರೆ, ಜಿಲ್ಲೆಯ ಪ್ರಮುಖ ಬೇಡಿಗಳು ಮೂಲೆ ಸೇರಿವೆ.

ನೂತನ ಜಿಲ್ಲೆಗೆ ಸಿಕ್ಕಿದ್ದೇನು?: ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಕೆಎಂಇಆರ್‌ಸಿ ಅನುದಾನದಲ್ಲಿ ವಿಜಯನಗರ ಜಿಲ್ಲೆಯಲ್ಲಿರುವ ಕ್ರೀಡಾಂಗಣವನ್ನು ಮೇಲ್ದರ್ಜೆಗೇರಿಸಲಾಗುವುದು. ಪ್ರವಾಸ ಮಾರ್ಗದರ್ಶಕರಿಗೆ ಆಯ್ದ ವಿಶ್ವವಿದ್ಯಾಲಯಗಳಲ್ಲಿ ಕೌಶಲ್ಯ ತರಬೇತಿ ನೀಡಲು ಡಿಪ್ಲೋಮಾ ಕೋರ್ಸ್ ಆರಂಭಿಸುವುದಾಗಿ ತಿಳಿಸಿದ್ದು, ಪರೋಕ್ಷವಾಗಿ ಹಂಪಿ ಭಾಗದ ಗೈಡ್‌ಗಳಿಗೆ ಮತ್ತು ಕನ್ನಡ ವಿವಿಗೆ ಅನುಕೂಲವಾಗಲಿದೆ ಎನ್ನಲಾಗಿದೆ. ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಯ ಮುನಿರಾಬಾದ್-ಟಿ.ಬಿ.ಡ್ಯಾಂನಲ್ಲಿ ತೃತೀಯ ಹಂತದ ಕ್ಯಾನ್ಸರ್ ಆರೈಕೆ ಒದಗಿಸಲು ಕ್ಯಾನ್ಸರ್ ಆಸ್ಪತ್ರೆಯನ್ನು ಸ್ಥಾಪಿಸಲಿದೆ.

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ವ್ಯಾಪ್ತಿಯ ವಿಜಯನಗರ ಜಿಲ್ಲೆ, ಕೂಡ್ಲಿಗಿ ತಾಲ್ಲೂಕಿನ ಚಿಕ್ಕಜೋಗಿಹಳ್ಳಿಯಲ್ಲಿ ಚೆಕ್ ಡ್ಯಾಂ ಕಂ ಬ್ರಿಡ್ಜ್ ನಿರ್ಮಾಣ. ಕೆಎಂಇಆರ್‌ಸಿ ಅಡಿ ವಿಜಯನಗರ ಸೇರಿದಂತೆ ಗಣಿಬಾಧಿತ ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳಲ್ಲಿ ಸಮಗ್ರ ಆರೋಗ್ಯ ಸೇವೆಗಳ ವಿಸ್ತರಣೆ. ಮಾಜಿ ದೇವದಾಸಿಯರ ಹಾಗೂ ಲಿಂಗತ್ವ ಅಲ್ಪಸಂಖ್ಯಾತರ ಸ್ಥಿತಿಗತಿ ಅರಿಯಲು, ಪುನರ್ವಸತಿ ಕಲ್ಪಿಸಲು ಮತ್ತು ಸರ್ಕಾರದ ಸೌಲಭ್ಯಗಳನ್ನು ನಿಖರ ಮಾಹಿತಿಗಾಗಿ ಸಮೀಕ್ಷೆ ನಡೆಸುವುದು, ಮಾಜಿ ದೇವದಾಸಿಯರ ಮಕ್ಕಳಿಗೆ ಉನ್ನತ ಶಿಕ್ಷಣದ ಅವಕಾಶಗಳನ್ನು ವಿಸ್ತರಿಸುವುದರ ಜೊತೆಗೆ ಹೆಣ್ಣುಮಕ್ಕಳಿಗೆ ಸ್ವಯಂ ಉದ್ಯೋಗ ಹಾಗೂ ವೈಯಕ್ತಿಕ ಆದಾಯೋತ್ಪನ್ನ ಚಟುವಟಿಕೆಗಳನ್ನು ಕೈಗೊಳ್ಳಲು ಅಗತ್ಯ ಆರ್ಥಿಕ ಸಹಾಯ ನೀಡುವ ಕಾರ್ಯಕ್ರಮ ಜಾರಿಗೆ 5 ಕೋಟಿ ರೂ.ಗಳನ್ನು ಮೀಸಲಿಟ್ಟಿದೆ.

ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಸಮಗ್ರ ಆಘಾತ ಆರೈಕೆ (ಟ್ರಾಮಾ ಸೆಂಟರ್) ಸೇವೆಗಳನ್ನು ಒದಗಿಸಲು ತುರ್ತು ಚಿಕಿತ್ಸಾ ವಿಭಾಗ, ಶಸ್ತ್ರಚಿಕಿತ್ಸಾ ಕೊಠಡಿ ಮತ್ತು ಐಸಿಯುಗಳಿಗೆ ವೈದ್ಯಕೀಯ ಉಪಕರಣಗಳು ಮತ್ತು ಸಾಧನಗಳನ್ನು ಹಂತ ಹಂತವಾಗಿ ಪೂರೈಸುವ ಮೂಲಕ ಮೇಲ್ದರ್ಜೆಗೇರಿಸಲಾಗುವುದು.ಪ್ರಸಕ್ತಸಾಲಿನಲ್ಲಿ 45 ಕೋಟಿ ರೂ. ಅನುದಾನವನ್ನು ಒದಗಿಸಿದೆ. ಅದರಂತೆ ರಾಜ್ಯ ವಲಯಕ್ಕೆ ಅನ್ವಯಿಸಿ ಜಾರಿಗೊಳಿಸಿರುವ ಆರೋಗ್ಯ, ಶಿಕ್ಷಣ, ಸಮಾಜ ಕಲ್ಯಾಣ ಮತಿತರೆ ಇಲಾಖೆಗಳ ಜನಕಲ್ಯಾಣ ಯೋಜನೆಗಳಿಗೆ ವಿಜಯನಗರ ಜಿಲ್ಲೆಯ ಜನರು ತೃಪ್ತಿಪಟ್ಟುಕೊಳ್ಳುವಂತಾಗಿದೆ.

ದುರ್ಬಲ, ನಿರಾಶಾದಾಯಕ ಬಜೆಟ್

• **ಹೂವಿನಹಡಗಲಿ:** ಸಿದ್ದರಾಮಯ್ಯ ಸರ್ಕಾರವು ಜನರಿಗೆ ಕೇವಲ ಉಚಿತ ಗ್ಯಾರಂಟಿ ಯೋಜನೆಗಳನ್ನು ನೀಡಿ, ರಾಜ್ಯದ ಜನರ ಮೇಲೆ ಸಾಲದ ಭಾರವನ್ನು ಹಾಕುವ ಕೆಲಸ ಮಾಡುತ್ತಿದೆ. ರಾಜ್ಯದ ಅಭಿವೃದ್ಧಿಗೆ ಅಗತ್ಯವಾದ ಉದ್ಯೋಗ ಸೃಷ್ಟಿ, ಕೈಗಾರಿಕೆಗಳ ಸ್ಥಾಪನೆ, ಯುವಕರಿಗೆ ಉದ್ಯೋಗಾವಕಾಶ, ಹೆಣ್ಣುಮಕ್ಕಳಿಗೆ ಮತ್ತು ಸಾಮಾನ್ಯ ಜನರಿಗೆ ಉತ್ತಮ ಶಿಕ್ಷಣ ಹಾಗೂ ಉದ್ಯೋಗ ನೀಡುವಂತಹ ಯೋಜನೆಗಳನ್ನು ಜಾರಿಗೆ ತರಬೇಕು.



ಯಾವಾಗ ಜನರಿಗೆ ಉದ್ಯೋಗ ಸಿಗುತ್ತದೆ, ಆಗ ರಾಜ್ಯದ ಆರ್ಥಿಕ ಸ್ಥಿತಿ ಸುಧಾರಿಸಿ, ಪ್ರತಿ ವ್ಯಕ್ತಿಯ ಆದಾಯವೂ ಹೆಚ್ಚಾಗುತ್ತದೆ. ಆದ್ದರಿಂದ ಸಿದ್ದರಾಮಯ್ಯ ಸರ್ಕಾರವು ಕೇವಲ ಹೋಲಿಕೆ ರಾಜಕೀಯ ಬಿಟ್ಟು ಅಭಿವೃದ್ಧಿಪರ, ಜನಪರ ಆಡಳಿತ ನೀಡಬೇಕು. ಜನರನ್ನು ಮೆಚ್ಚಿಸುವ ಉಚಿತ ಯೋಜನೆಗಳಿಗಿಂತ, ರಾಜ್ಯದ ದೀರ್ಘಕಾಲಿಕ ಅಭಿವೃದ್ಧಿಗೆ ಸಹಾಯ ಮಾಡುವ ಯೋಜನೆಗಳನ್ನು ಜಾರಿಗೆ ತರಬೇಕು.

ಒಟ್ಟಾರೆ ನೋಡಿದರೆ, 2026ರ ಬಜೆಟ್ ಒಂದು ಹೋಲಿಕೆ ರಾಜಕೀಯದ ಬಜೆಟ್ ಆಗಿದೆ. ಇದು ರಾಜ್ಯವನ್ನು ಹಾಗೂ ರಾಜ್ಯದ ಜನರನ್ನು ಸಾಲದ ಸುಳಿಯಲ್ಲಿ ಸಿಲುಕಿಸುವಂತಹ ಬಜೆಟ್ ಆಗಿದೆ. ಆದ್ದರಿಂದ 2026ರ ಬಜೆಟ್ ಅನ್ನು ಅತ್ಯಂತ ದುರ್ಬಲ ಹಾಗೂ ನಿರಾಶಾದಾಯಕ ಬಜೆಟ್ ಎಂದು ವಿಜಯನಗರ ಜಿಲ್ಲಾ ಬಿಜೆಪಿ ಮುಖಂಡ ಎಂ.ಬಿ. ಬಸವರಾಜ ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ ಬಜೆಟ್‌ನಲ್ಲಿ ಕ್ಷೇತ್ರದ 17 ಕೆರೆ ನೀರು ತುಂಬಿಸುವ ನೀರಾವರಿ ಯೋಜನೆಗಳಿಗೆ ಅನುದಾನ ನೀಡಿಲ್ಲ, ರಾಜ್ಯದ ರೈತರ ಸಾಲ ಮನ್ನಾ ಮಾಡಿಲ್ಲ, ಬಡ್ಡಿ ಮನ್ನಾ ಮಾಡಿಲ್ಲ ಸಬ್ಸಿಡಿ ಇಲ್ಲದ ರೈತರ ಬಗ್ಗೆ ಕಳಕಳಿ ಕಾಳಜಿ ಇಲ್ಲದ ರೈತ ವಿರೋಧಿ ಬಜೆಟ್‌ನಿಂದ ಅಭಿವೃದ್ಧಿ ಶೂನ್ಯವಾಗಿದೆ. ಬಡವರಿಗೆ ಕೂಲಿ ಕಾರ್ಮಿಕರಿಗೆ ಜನ ಸಾಮಾನ್ಯರಿಗೆ ರೈತರಿಗೆ ಉಪಯುಕ್ತವಲ್ಲದ ನಿರಾಶಾದಾಯಕ ಬಜೆಟ್ ಇದಾಗಿದೆ.

■ ಕೆ.ನೇಮಿರಾಜ್ ನಾಯ್ಕ್, ಜೆಡಿಎಸ್ ಶಾಸಕ, ಹಗರಿಬೊಮ್ಮನಹಳ್ಳಿ

ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ದಾಖಲೆಯ 17ನೇ ಬಜೆಟ್ ಮಂಡಿಸಿ ಇತಿಹಾಸ ಸೃಷ್ಟಿಸಿದ್ದಾರೆ. ಮುಂಗಾರು ಮುನ್ನವೇ ಲಕ್ಷಾಂತರ ರೈತರ ಜೀವನಾಡಿ ತುಂಗಭದ್ರಾ ಜಲಾಶಯದ 33 ಗೇಟ್‌ಗಳನ್ನು ಬದಲಾಯಿಸಲು ಅಗತ್ಯ ಕ್ರಮ ಕೈಗೊಂಡಿದ್ದಾರೆ. ನಮ್ಮ ರಾಜ್ಯ ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದ ಸರ್ಕಾರ.

■ ನಾರಾ ಭರತ್ ರೆಡ್ಡಿ, ನಗರ ಶಾಸಕ ಬಳ್ಳಾರಿ.

ಸಿಎಂ ಸಿದ್ದರಾಮಯ್ಯ ಮಂಡಿಸಿದ ಬಜೆಟ್‌ನಲ್ಲಿ ಏನೂ ಇಲ್ಲ, ಖಾಲಿ ಚಂಬು, ರಾಜ್ಯ ಕಾಂಗ್ರೆಸ್ ಸರ್ಕಾರ ರಾಜ್ಯದ ಜನರಿಗೆ ಖಾಲಿ ಚಂಬು ನೀಡಿದೆ. ರಾಜ್ಯದ ಖಜಾನೆ ಖಾಲಿಯಾಗಿದ್ದು, ಬಜೆಟ್‌ನಲ್ಲಿ ಘೋಷಣೆ ಹೆಸರಿಗೆ ಮಾತ್ರ ಸೀಮಿತ.

■ ಗಾಲಿ ಸೋಮಶೇಖರ್ ರೆಡ್ಡಿ, ಮಾಜಿ ಶಾಸಕ, ಬಳ್ಳಾರಿ.

ಸಿಎಂ ಸಿದ್ದರಾಮಯ್ಯ ಮಂಡಿಸಿದ ಬಜೆಟ್‌ನಲ್ಲಿ ರೈತರಿಗೆ, ಕೃಷಿ, ತೋಟಗಾರಿಕೆ, ಮೀನುಗಾರಿಕೆ ವಲಯಕ್ಕೆ ಯಾವುದೇ ಕೊಡುಗೆಗಳನ್ನು ನೀಡಿಲ್ಲ. 16 ವರ್ಷದ ಒಳಗಿನ ಮಕ್ಕಳಿಗೆ, ಸಾಮಾಜಿಕ ಜಾಲ ತಾಣ ಬ್ಯಾನ್ ಮಾಡಿರುವುದು ಸ್ವಾಗತಾರ್ಹ.

■ ಡಾ. ದರೂರು ಪುರುಷೋತ್ತಮ ಗೌಡ, ಸಂಸ್ಥಾಪಕ ಅಧ್ಯಕ್ಷ, ತುಂಗಭದ್ರಾ ರೈತ ಸಂಘ ಬಳ್ಳಾರಿ.

ಸಿಎಂ ಸಿದ್ದರಾಮಯ್ಯ 17ನೇ ಬಾರಿ ಮಾದರಿ ಮಂಡಿಸಿ ಇತಿಹಾಸ ಸೃಷ್ಟಿಸಿದ್ದಾರೆ. ಎಲ್ಲ ವಲಯಕ್ಕೂ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದೆ. ಮಕ್ಕಳ ಹಿತದೃಷ್ಟಿಯಿಂದ 16 ವರ್ಷದ ಒಳಗಿನ ಮಕ್ಕಳಿಗೆ ಸಾಮಾಜಿಕ ಜಾಲ ತಾಣ ಬ್ಯಾನ್ ಮಾಡಿದ್ದಾರೆ. ಇದು ಒಳ್ಳೆಯ ಕೆಲಸ. ಸರ್ಕಾರಿ ಆಸ್ಪತ್ರೆಗಳಲ್ಲಿ ಇನ್ಮುಂದೆ ಇಸ್ಕಾನ್ ದಾಸೋಹ ಹಾಗೂ ರೋಗಿಗಳಿಗೆ ಪೌಷ್ಟಿಕ ಆಹಾರ ವಿತರಣೆಗೆ ನಮ್ಮ ಸರ್ಕಾರ ಆದ್ಯತೆ ನೀಡಿದೆ.

■ ಅಲ್ಲಂ ಪ್ರಶಾಂತ್, ಡಿಸಿಸಿ ಅಧ್ಯಕ್ಷರು ಬಳ್ಳಾರಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರಿನ ಪ್ರಸ್ತುತ ಸ್ಥಿತಿಗತಿಗಳನ್ನು ಅರ್ಥಮಾಡಿಕೊಂಡು ಭವಿಷ್ಯದ ದೃಷ್ಟಿಯಿಂದಾಗಿ 'ಬಿಯೊಂಡ್ ಬೆಂಗಳೂರು' ಚಿಂತನೆ ಮಾಡಿರುವುದು ಸ್ವಾಗತಾರ್ಹ. ಈ ಅಡಿಯಲ್ಲಿ ಟೈರ್ 2 ಮತ್ತು ಟೈರ್ 3 ಹಂತದ ನಗರ- ಪಟ್ಟಣಗಳಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ, ಕೈಗಾರಿಕಾ ಪ್ರದೇಶಗಳ ನಿರ್ಮಾಣಕ್ಕೆ ಆದ್ಯತೆ ನೀಡಿರುವುದು ಆಶಾದಾಯಕ. ಬಳ್ಳಾರಿ ಜಿಲ್ಲೆಗೆ ಯಾವುದೇ ವಿಶೇಷಗಳು ಇಲ್ಲದಿರುವುದು ಬೇಸರ ಮೂಡಿಸಿದೆ.

■ ಕೆ.ಸಿ. ಸುರೇಶಬಾಬು, ಗೌರವ ಕಾರ್ಯದರ್ಶಿ, ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ, ಬಳ್ಳಾರಿ.

'ನಿರೀಕ್ಷೆಗಳೆಲ್ಲವೂ ಹುಸಿ, ಬಜೆಟ್ ಬೇಸರ ತಂದಿದೆ. ಬಳ್ಳಾರಿ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ವಿಮಾನ ನಿಲ್ದಾಣ, ಜೀನ್ಸ್ ಪಾರ್ಕ್, ಒಣ ಮೆಣಸಿನಕಾಯಿ ಮಾರುಕಟ್ಟೆ, ತುಂಗಭದ್ರಾ ಜಲಾಶಯಕ್ಕೆ ನವಲಿ ಬಳಿ ಸಮಾನಾಂತರ ಜಲಾಶಯ ನಿರ್ಮಾಣ, ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ಮೂಲಭೂತ ಸೌಲಭ್ಯಗಳಿಗಾಗಿ ವಿಶೇಷ ಯೋಜೆಗಳನ್ನು ಘೋಷಿಸಿ, ಅನುದಾನ ನೀಡುವ ನಿರೀಕ್ಷೆಗಳಿದ್ದವು. ಎಲ್ಲವೂ ಹುಸಿ.

■ ಅವ್ವಾರು ಮಂಜುನಾಥ್, ಅಧ್ಯಕ್ಷ, ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ, ಬಳ್ಳಾರಿ.



ಸಿದ್ದರಾಮಯ್ಯ ಅವರ 17ನೇ ಬಾರಿಗೆ ಬಜೆಟ್ ಮಂಡಿಸಿದ್ದಾರೆ ಎಂಬ ದಾಖಲೆಗಾಗಿ ಈ ಬಾರಿ ಮುಂಡಗ ಪತ್ರವನ್ನು ಮಂಡಿಸಿದಂತಿದೆ. ಅದರಲ್ಲಿ ರಾಜ್ಯದ ಅಭಿವೃದ್ಧಿಯ ದಿಕ್ಸೂಚಿಯಿಲ್ಲ. ನೂತನ ವಿಜಯನಗರ ಜಿಲ್ಲೆಗೂ ವಿಶೇಷ ಯೋಜನೆ, ಪ್ಯಾಕೇಜ್ ಘೋಷಿಸಿಲ್ಲ. ಸರ್ಕಾರ ನೇಮಕಾತಿಯಲ್ಲಿ ಪರಿಶಿಷ್ಟ ಅನುಕೂಲಕ್ಕಾಗಿ ಬಿಜೆಪಿ ರೂಪಿಸಿದ್ದ ಮೀಸಲಾತಿಯನ್ನು ಬಿಟ್ಟು, ಹಿಂದಿನ ಪದ್ಧತಿಯನ್ನು ಅಳವಡಿಸಿಕೊಂಡಿದ್ದರಿಂದ ಪರಿಶಿಷ್ಟ ಜಾತಿ, ಪಂಗಡದ ಜನರಿಗೆ ಅ ನ್ಯಾಯವಾಗುತ್ತದೆ. ರಾಜ್ಯದ ಅಭಿವೃದ್ಧಿಯ ಭರವಸೆಯನ್ನು ಕಳೆದುಕೊಂಡಿರುವ ಬಜೆಟ್.

■ ಎಸ್.ಸಂಜೀವರೆಡ್ಡಿ, ಬಿಜೆಪಿ ಜಿಲ್ಲಾಧ್ಯಕ್ಷ



ಸಿದ್ದರಾಮಯ್ಯ ಮಂಡಿಸಿದ ಬಜೆಟ್ ಬಗ್ಗೆ ಸಾಕಷ್ಟು ನಿರೀಕ್ಷೆ ಇತ್ತು. ಆದರೆ, ಇದು ಅಭಿವೃದ್ಧಿಯ ಮುನ್ನೋಟವಿಲ್ಲದ, ಹೊಸ ಯೋಜನೆಗಳೂ ಇಲ್ಲದ ಈ ಬಜೆಟ್ ನಿರಾಶದಾಯಕವಾಗಿದೆ. ಸಿಂಗಟಾಲೂರು ಯೋಜನೆ ನಿರ್ವಹಣೆ, ಕೆರೆ ತುಂಬಿಸುವ ಯೋಜನೆಯ ಪರಿಣಾಮಕಾರಿ ಅನುಷ್ಠಾನ, ರಸ್ತೆಗಳ ಅಭಿವೃದ್ಧಿಗಾಗಿ ನಮ್ಮ ಕ್ಷೇತ್ರಕ್ಕೆ ವಿಶೇಷ ಅನುದಾನ ಕೋರಿ ಮೂರು ವರ್ಷಗಳಿಂದ ಪ್ರಸ್ತಾವ ಸಲ್ಲಿಸುತ್ತಿದ್ದರೂ ಸರ್ಕಾರ ಪರಿಗಣಿಸದಿರುವುದು ನೋವಿನ ಸಂಗತಿ.

■ ಎಲ್.ಕೃಷ್ಣನಾಯ್ಕ, ಶಾಸಕ, ಹೂವಿನಹಡಗಲಿ ಕ್ಷೇತ್ರ

ಒಳ ಮೀಸಲಾತಿ ಹೋರಾಟಕ್ಕಾಗಿ ತಮಟೆ ಚಳವಳಿ

• **ಸಿರುಗುಪ್ಪ:** ನಗರದ ಎಪಿಎಂಸಿ ಆವರಣದಿಂದ ಶಾಸಕರ ಮನೆವರೆಗೆ ತಾಲೂಕು ಮಾದಿಗ ಒಳ ಮೀಸಲಾತಿ ಹೋರಾಟ ಸಮಿತಿಯಿಂದ ಒಳ ಮೀಸಲಾತಿ ಅನ್ವಯಿಸದೆ 56 ಸಾವಿರ ಉದ್ಯೋಗಗಳ ನೇಮಕಾತಿ ಮಾಡಲು ಕರ್ನಾಟಕ ಸರ್ಕಾರ ಹೊರಟಿದೆ. ಇದು ಮಾದಿಗ ಸಂಬಂಧಿತ ಸಮುದಾಯಗಳ ಪಾಲಿನ ಮರಣ ಶಾಸನವನ್ನು ಕೂಡಲೇ ಸರ್ಕಾರ ತನ್ನ ನಿರ್ಧಾರ ಬದಲಿಸಬೇಕೆಂದು ಒತ್ತಾಯಿಸಿ ತಮಟೆ ಚಳುವಳಿ ಹಾಗೂ ಧರಣಿ ನಡೆಸಲಾಯಿತು.

ಪರಿಶಿಷ್ಟ ಜಾತಿಯ ಸಂಪೂರ್ಣ ಒಳಮೀಸಲಾತಿ ಜಾರಿ ಮಾಡುವಂತೆ ಹಾಗೂ 56432 ಹುದ್ದೆಗಳ ಭರ್ತಿಯಲ್ಲಿ ಒಳಮೀಸಲಾತಿ ಅಡಿಯಲ್ಲಿ ಶೇ.17ರಷ್ಟು ಮೀಸಲಾತಿ ನಿಗಧಿ ಅಡಿಯಲ್ಲಿ ಭರ್ತಿ ಮಾಡುವಂತೆ ಅಧಿವೇಶನದಲ್ಲಿ ಶಾಸಕರು ಮಾದಿಗ ಸಮಾಜದ ಪರವಾಗಿ ಧ್ವನಿ ಎತ್ತಬೇಕು ಎಂದು ಒತ್ತಾಯಿಸಿದರು.

ದಲಿತ ಸಂಘರ್ಷ ಸಮಿತಿ ಡಿಜಿ ಸಾಗರ ಬಣದ ಜಿಲ್ಲಾ ಸಂಚಾಲಕ ಎಚ್.ಬಿ ಗಂಗಪ್ಪ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಮಾದಿಗರ ಬಹು ವರ್ಷಗಳ ಬೇಡಿಕೆಯಾದ ಒಳ ಮೀಸಲಾತಿಯನ್ನು ಶಾಸನ ಬದ್ಧವಾಗಿ ಜಾರಿಗೊಳಿಸಿದೆ ಎಂದರು.



ಒಳಮೀಸಲಾತಿ ಜಾರಿಯಲ್ಲಿರುವಾಗ ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿ ನೀಡದೆ ಉದ್ಯೋಗ ತುಂಬಲು ಮುಂದಾಗಿರುವುದು ಶೋಷಿತ ಮಾದಿಗ ಸಮುದಾಯಕ್ಕೆ ಭರಿಸಲಾಗದ ಅನ್ಯಾಯ. ಸರ್ಕಾರವೇ ಒಪ್ಪಿ ಒಳ ಮೀಸಲಾತಿಯನ್ನು ಜಾರಿಗೆ ತಂದಿರುವಾಗ ಪರಿಶಿಷ್ಟ ಜಾತಿಗೆ ನಿಗದಿಪಡಿಸರುವಶೇ.15ರ ಮೀಸಲಾತಿಯಲ್ಲಿ ಮಾದಿಗರಿಗೆ ಶೇ.6 ಉಳಿದವರಿಗೆ ನಿಮ್ಮ ಇಚ್ಛೆಯಂತೆ ಹಂಚಿಕೆ ಮಾಡಬೇಕು. ಈ ದಿನ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಒಳಮೀಸಲಾತಿ ಜಾರಿ ಮಾಡಬೇಕೆಂದು ಮುಖ್ಯಮಂತ್ರಿಗಳಿಗೆ ಹೇಳಬೇಕು. ನಮ್ಮ ಬೇಡಿಕೆಯನ್ನು ಬೆಂಬಲಿಸಬೇಕು ಎಂದರು.

ಮುಖಂಡರಾದ ರಾಮಪ್ಪ, ಮುನಿಸ್ವಾಮಿ, ಮೇಕೇಲಿ ವೀರೇಶ, ಚಿದಾನಂದ ರಾಯುಡು, ಮಾರೇಶ, ದರಗಪ್ಪ, ನಂದೀಶ, ಎಚ್.ಕೆ ಬಸವರಾಜ, ಭಂಡಾರಿ, ಬಿ.ಟಿ ಆನಂದ, ಶಿವಕುಮಾರ್, ನಾಗಲಿಂಗಪ್ಪ, ಎಚ್.ಕೆ ಸುರೇಶ, ಎಚ್.ಪಿ ಶಿವರಾಜ್.ಕೊಡ್ಡೆ ಧರ್ಮರಾಜ, ಭ್ರಮ್ಮ, ಹನುಮಂತಪ್ಪ, ದುರುಗಪ್ಪ, ಮುದೇನೂರು ವೀರೇಶ, ಬಿ.ಹನು ಮೇಶ, ಯುವಕರು, ವಿವಿಧ ಸಂಘಗಳ ಮುಖಂಡರು ಇದ್ದರು.

ಸಿಎಂ ಸಿದ್ದರಾಮಯ್ಯ 17 ಬಾರಿ ಬಜೆಟ್ ಮಂಡಿಸುವ ಮೂಲಕ ರಾಜ್ಯದಲ್ಲಿ ಇತಿಹಾಸ ಸೃಷ್ಟಿಸಿದ್ದಾರೆ. ಹರಪನಹಳ್ಳಿ ಪಟ್ಟಣದಲ್ಲಿ ಒಳಚರಂಡಿ ಯೋಜನೆಗೆ ಅನುದಾನ ಒದಗಿಸಿದ್ದು, ದಶಕಗಳ ಬೇಡಿಕೆ ಈಡೇರುವಂತಾಗಿದೆ. ಜೊತೆಗೆ ಬಜೆಟ್‌ನಲ್ಲಿ ವಿದ್ಯಾರ್ಥಿಗಳಿಗೆ 'ವಿದ್ಯಾರ್ಥಿ ಇಂದಿರಾ ಕ್ಯಾಂಟಿನ್ ಇಲ್ಲ, ಗ್ರಾಪಂಗಳಿಗೆ ಮಹಾತ್ಮಗಾಂಧಿ ಹೆಸರು, ಕೃಷಿಕ್ಷೇತ್ರಕ್ಕೆ ಬಂಪರ್ ಕೊಡುಗೆ ಘೋಷಿಸಿದ್ದಾರೆ. ಅಂಗನವಾಡಿ ಕಾರ್ಯಕರ್ತೆಯರಿಗೆ ಹೆಚ್ಚುವರಿ ಸಮವಸ್ತ್ರ, ಆರೋಗ್ಯ ಮತ್ತು ಶಿಕ್ಷಣ ಇಲಾಖೆಗೆ ಒತ್ತು ನೀಡಲಾಗಿದೆ.



■ ಎಂ.ಪಿ.ಲತಾ ಮಲ್ಲಿಕಾರ್ಜುನ್, ಹರಪನಹಳ್ಳಿ ಶಾಸಕಿ

ಸಿಎಂ ಸಿದ್ದರಾಮಯ್ಯ ಮಂಡಿಸಿರುವ ಮುಂಗಡ ಪತ್ರ, ರಾಜ್ಯದ ಅಭಿವೃದ್ಧಿಗೆ ಪೂರಕವಾಗಿದೆ. ಕಲ್ಯಾಣ ಕರ್ನಾಟಕ, ಉತ್ತರ ಕರ್ನಾಟಕ, ಕರಾವಳಿ ಕರ್ನಾಟಕದ ಅಭಿವೃದ್ಧಿಯಲ್ಲಿ ಸಮತೋಲನ ಕಾಪಾಡಿದ್ದಾರೆ. ಜಿಲ್ಲೆಗೆ ಮೆಡಿಕಲ್ ಕಾಲೇಜು ಘೋಷಣೆಯಾಗಿಲ್ಲ. ಇನ್ನುಳಿದಂತೆ ಕೂಡ್ಲಿಗಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅನೇಕ ಬೇಡಿಕೆಗಳನ್ನು ಕೆಎಂಇಆರ್‌ಸಿ ಅಡಿ ಕೈಗೊಳ್ಳಲು ಅವಕಾಶ ಕಲ್ಪಿಸಿದ್ದಾರೆ. ಈಗಾಗಲೇ ಜಿಲ್ಲಾ ಆಸ್ಪತ್ರೆ ಸಿದ್ಧವಾಗಿದ್ದು, ಮಾರ್ಚ್ ಅಂತ್ಯದೊಳಗೆ ಲೋಕಾರ್ಪಣೆಯಾಗಲಿದೆ.



■ ಡಾ.ಎನ್.ಟಿ.ಶ್ರೀನಿವಾಸ್, ಕೂಡ್ಲಿಗಿ ಶಾಸಕ

ನಮ್ಮದು ನೂತನ ಜಿಲ್ಲೆಯಾಗಿದ್ದರಿಂದ ಈ ಬಾರಿ ಬಜೆಟ್ ಬಗ್ಗೆ ಜನ ಸಾಮಾನ್ಯರು ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದರು. ಮುಖ್ಯವಾಗಿ ಮೆಡಿಕಲ್ ಕಾಲೇಜು, ಕೂಡ್ಲಿಗಿ, ಕೊಟ್ಟೂರು, ಹಗರಿಬೊಮ್ಮನಹಳ್ಳಿ ತಾಲೂಕಿನ ಕೆರೆ ತುಂಬಿಸುವ ಯೋಜನೆಗಳು ಬಗ್ಗೆ ಹೆಚ್ಚು ನಿರೀಕ್ಷೆ ಇತ್ತು. ಜಿಲ್ಲೆಯಲ್ಲಿ ಹೊಸ ಕೈಗಾರಿಕೆಗಳು ಇದೊಂದು ನಿರಾಶಾದಾಯಕ ಬಜೆಟ್.

■ ಚನ್ನಬಸವನಗೌಡ ಪಾಟೀಲ, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ

ನಿರಾಸೆ ಮೂಡಿಸಿದ ಬಜೆಟ್: ಶಾಸಕ

• **ಬೀದರ್:** ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿರುವ ರಾಜ್ಯ ಬಜೆಟ್ ಜನಸಾಮಾನ್ಯರ ನಿರೀಕ್ಷೆಗಳನ್ನು ಈಡೇರಿಸದ ಖಾಲಿ ಚೊಂಬಿನಂತಿದೆ ಎಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕ ಪ್ರಭು ಬಿ.ಚವ್ಹಾಣ ಟೀಕಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ ಅವರು, ರಾಜ್ಯದ ರೈತರು, ಯುವಕರು ಹಾಗೂ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಸ್ಪಷ್ಟವಾದ ಯೋಜನೆಗಳನ್ನು ಬಜೆಟ್‌ನಲ್ಲಿ ಘೋಷಿಸಿಲ್ಲ, ರಾಜ್ಯ ಸರ್ಕಾರದ ಖಜಾನೆ ಖಾಲಿಯಾಗಿ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಹೆಣಗಾಡುತ್ತಿರುವಂತೆ ಕಾಣುತ್ತಿದೆ ಎಂದಿದ್ದಾರೆ. ಕಳೆದ ಮೂರು ವರ್ಷಗಳಿಂದ ಅತೀವೃಷ್ಠಿಯಿಂದ ತೀವ್ರ ಬಾಧಿಸಿರುವ ಕಲ್ಯಾಣ ಕರ್ನಾಟಕ ಭಾಗದ ಎಲ್ಲ ರಸ್ತೆ, ಸೇತುವೆ, ಕೆರೆ-ಕಟ್ಟೆಗಳು ಒಡೆದು ವಿಪರೀತ ನಷ್ಟ ಸಂಭವಿಸಿದೆ. ಬೆಳೆನಷ್ಟವಾಗಿ ರೈತರು ಕಂಗಾಲಾಗಿದ್ದಾರೆ. ಸರ್ಕಾರ ಅಭಿವೃದ್ಧಿಯನ್ನು ಕೇವಲ ಭಾಷಣಗಳಿಗೆ ಸೀಮಿತಗೊಳಿಸಿದಂತೆ ತೋರುತ್ತಿದೆ. ಬೀದರ ಜಿಲ್ಲೆಯಲ್ಲಿ ಪ್ರವಾಸೋದ್ಯಮ, ನೀರಾವರಿ, ಕೈಗಾರಿಕಾ ಕ್ಷೇತ್ರಗಳಿಗೆ ವಿಶೇಷ ಅನುದಾನ ಘೋಷಿಸದೇ ಜನರ ನಿರೀಕ್ಷೆಗಳನ್ನು ಕಡೆಗಣಿಸಲಾಗಿದೆ ಎಂದು ಆರೋಪಿಸಿದ್ದಾರೆ. ರಾಜ್ಯದಲ್ಲಿ ನೀರಾವರಿ, ಗ್ರಾಮೀಣ ರಸ್ತೆ, ಕುಡಿಯುವ ನೀರು ಹಾಗೂ ಉದ್ಯೋಗ ಸೃಷ್ಟಿಗೆ ಸಂಬಂಧಿಸಿದಂತೆ ಜನರು ಹೆಚ್ಚಿನ ನಿರೀಕ್ಷೆ ಇಟ್ಟುಕೊಂಡಿದ್ದರು. ಆದರೆ ಈ ಬಜೆಟ್‌ನಲ್ಲಿ ಹೊಸದಾಗಿ ಯಾವುದೇ ಮಹತ್ವದ ಯೋಜನೆಗಳಿಲ್ಲದೆ ಕೇವಲ ಘೋಷಣೆಗಳ ಮಟ್ಟಕ್ಕೆ ಮಾತ್ರ ಸೀಮಿತವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಗೋವುಗಳು ಸೇರಿದಂತೆ ಜಾನುವಾರುಗಳ ಹಿತದೃಷ್ಟಿಯಿಂದ ಹಿಂದೆ ಬಿಜೆಪಿ ನೇತೃತ್ವದ ಸರ್ಕಾರ ಜಾರಿಗೆ ತಂದಿರುವ ಎಂದು ಕಿಡಿ ಕಾರಿದ್ದಾರೆ.